
ಸಮಗ್ರ ದಾಸ ಸಾಹಿತ್ಯ

ಸಂಪುಟ : ೨೯ - ಭಾಗ ೧



ಅನಂತಾದ್ರೀಶರ ಕೃತಿಗಳು
ಹಾಗೂ
ಹೆನ್ನೆರಂಗದಾಸರ ಕೀರ್ತನೆಗಳು

ಸಮಗ್ರ ದಾಸ ಸಾಹಿತ್ಯ
ಸಂಪುಟ : ೨೯ – ಭಾಗ ೧

ಅನಂತಾದ್ರೀಶರ ಕೃತಿಗಳು ಹಾಗೂ ಹೆನ್ನೆರಂಗದಾಸರ ಕೀರ್ತನೆಗಳು

ಸಂಪಾದಕರು
ಡಾ. ಬಸವರಾಜ ಸಬರದ
ಡಾ. ಜಯಲಕ್ಷ್ಮೀ ಮಂಗಳಮೂರ್ತಿ

ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಬೆಂಗಳೂರು

SAMAGRA DASA SAHITYA VOLUME - 29 Part 1:
Ananthadrishara Krithigalu Hagu Henneranga Dasara Keerthanegalu. Edited by Dr.Basavaraj Sabarad and Dr. Jayalakshmi Mangala Murthy. Published by Sri.Y. K. Muddukrishna, Director, Directorate of Kannada and Culture, Kannada Bhavana, J.C. Road, Bangalore - 560 002.

ಪುಟಗಳು : 40 + ೪೯೮

ಪ್ರಥಮ ಮುದ್ರಣ : ೨೦೦೩
ಪ್ರತಿ : ೧೨೫೦

ಬಿಡಿ ಪ್ರತಿ ಬೆಲೆ : ರೂ. ೬೦=೦೦
ಸಮಗ್ರ ಸಂಪುಟಗಳ ಬೆಲೆ : ರೂ. ೨೪೦೦=೦೦

ಮುದ್ರಣ ನಿರ್ವಹಣೆ :
ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
೩೬, ಕನ್ನಿಂಗ್‌ಹ್ಯಾಮ್ ರಸ್ತೆ
ಬೆಂಗಳೂರು - ೫೬೦ ೦೫೨.

ಮುದ್ರಕರು :
ಮೆ. ಡಾಟ್ಸ್
೧೨೪, ಸುಲ್ತಾನ್‌ಪೇಟೆ
ಬೆಂಗಳೂರು - ೫೬೦ ೦೫೩.

ಸಮಗ್ರ ದಾಸಸಾಹಿತ್ಯ ಪ್ರಕಟಣ ಯೋಜನೆ

ಸಂಪಾದಕ ಮಂಡಳಿ

ಕಾರ್ಯನಿರ್ವಾಹಕ ಸಂಪಾದಕರು

ಡಾ. ಶ್ರೀನಿವಾಸ ಹಾವನೂರ
ಡಾ. ಟಿ. ಎನ್. ನಾಗರತ್ನ
ಪ್ರೊ. ವಸಂತ ಕುಷ್ಟಗಿ

ಸದಸ್ಯರು

ಡಾ. ಎಂ. ಎಂ. ಕಲಬುರ್ಗಿ
ಪ್ರೊ. ಎಂ. ರಾಜಗೋಪಾಲಾಚಾರ್ಯ (ಫೆಬ್ರವರಿ '೯೮ ರವರೆಗೆ)
ಡಾ. ಕೃಷ್ಣ ಕೊಲ್ಹಾರಕುಲಕರ್ಣಿ
ಡಾ. ಮಂದಾಕಿನಿ
ಪ್ರೊ. ಸುಧಾಕರ
ಡಾ. ಬಸವರಾಜ ಸಬರದ

ಸದಸ್ಯ ಕಾರ್ಯದರ್ಶಿ

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಮುನ್ನುಡಿ

ಹರಿದಾಸ ಸಾಹಿತ್ಯ ಕನ್ನಡ ಸಂಸ್ಕೃತಿ ಪರಂಪರೆಯ ಮಹತ್ವಪೂರ್ಣ ಭಾಗವಾಗಿದೆ. ದೇಶೀಯತೆ ಹಾಗೂ ಗೇಯತೆಗಳೆರಡನ್ನೂ ಮೇಳವಿಸಿಕೊಂಡು, ಕನ್ನಡ ಸಾಹಿತ್ಯವಾಹಿನಿಗೆ ಇದು ಹೊಸತನವನ್ನು ನೀಡಿದೆ. ಮನುಜಮತ, ಸಾಹಿತ್ಯಪಥ ಹಾಗೂ ಭಕ್ತಿಸಿದ್ಧಾಂತದ ತ್ರಿವೇಣಿಯಾಗಿರುವ ಈ ಪ್ರಜಾಸಾಹಿತ್ಯವನ್ನು ಪ್ರಜೆಗಳಿಗೆ ಮುಟ್ಟಿಸುವುದು ಪ್ರಜಾಸತ್ತಾತ್ಮಕ ಸರಕಾರದ ಆದ್ಯ ಕರ್ತವ್ಯವಾಗಿದೆ.

ಕನ್ನಡ ಭಾಷಿಕಶಕ್ತಿಯ ವಿವಿಧ ಆಯಾಮಗಳನ್ನು ಸೆಳೆದು ತೋರಿರುವ, ಸಾಹಿತ್ಯ-ಸಂಗೀತಗಳ ಸಾಮರಸ್ಯವನ್ನು ಮೆರೆದಿರುವ ಈ ಸಾಹಿತ್ಯ ಕನ್ನಡ ಸಾಹಿತ್ಯಕ್ಕೆ ಜಾಗತಿಕ ಮಹತ್ವವನ್ನು ತಂದುಕೊಟ್ಟಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಮಾನವಾನುಕಂಪ, ಸಮಾಜಸುಧಾರಣೆ, ಲೋಕದ ಡೊಂಕುಗಳನ್ನು ನಗೆ ವಿಡಂಬನೆಗಳ ಮೂಲಕ ತಿದ್ದುವ ಕೌಶಲ ದಾಸಸಾಹಿತ್ಯದ ಪ್ರಮುಖ ಲಕ್ಷಣವಾಗಿದೆ.

ಆಧ್ಯಾತ್ಮಿಕ ಸಾಧನೆ, ಅನುಭವ – ಅನುಭಾವಗಳು ದಾಸಸಾಹಿತ್ಯದ ಪ್ರಮುಖ ಅಂಶವಾದರೂ, ಸುತ್ತಮುತ್ತಲಿರುವ ಜೀವನದ ಕಡೆಗೆ, ಮಾನವ ಸ್ವಭಾವದ ಕಡೆಗೆ ಕಣ್ಣು ಹರಿಸಿದ ಹರಿದಾಸರು ಸಾತ್ತ್ವಿಕ ಜೀವನ ನಿರ್ವಹಣೆಗೆ, ಮಾನವನ ಮೇಲ್ಮೆಗೆ, ನೈತಿಕ ಆಚರಣೆಗೆ ಒತ್ತು ನೀಡಿದವರು.

ಹರಿದಾಸ ಸಾಹಿತ್ಯ ಅಪಾರವಾದುದು ಹಾಗೂ ವೈವಿಧ್ಯವಾದುದು. ಈ ವಿಪುಲ ಸಾಹಿತ್ಯರಾಶಿಯನ್ನು ಒಂದೆಡೆ ಕ್ರೋಡೀಕರಿಸಿ, ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯವನ್ನು ಕನ್ನಡ ಜನತೆಗೆ ನೀಡುತ್ತಿದೆ.

ಈ ಯೋಜನೆಗೆ ದುಡಿದ ಸಂಪಾದಕ ಮಂಡಳಿಯ ಶ್ರದ್ಧೆ ಹಾಗೂ ಮಾರ್ಗದರ್ಶನವನ್ನು, ವಿವಿಧ ಸಂಪುಟಗಳ ಸಂಪಾದಕರಾಗಿ ನಾಡಿನ ಅನೇಕ ವಿದ್ವಾಂಸರು ತೋರಿರುವ ಆಸಕ್ತಿ ಹಾಗೂ ನೆರವನ್ನು ಮತ್ತು ಈ ಸಂಪುಟದ ಸಂಪಾದಕರ ಶ್ರಮವನ್ನು ಸ್ಮರಿಸುತ್ತ ಕನ್ನಡ ಜನತೆಯ ಕೈಗೆ ಈ ಮೌಲಿಕ ಪ್ರಕಟಣೆಗಳನ್ನು ಸಂತೋಷದಿಂದ ಅರ್ಪಿಸುತ್ತೇನೆ.

ಎಸ್. ಎಂ. ಕೃಷ್ಣ
ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಎರಡು ಮಾತು

ಕನ್ನಡ ಸಾಹಿತ್ಯದ ತವನಿಧಿಗಳಲ್ಲಿ ದಾಸಸಾಹಿತ್ಯವೂ ಒಂದು. ಕರ್ನಾಟಕದ ಸಾಹಿತ್ಯ, ಸಂಗೀತ, ಸಂಸ್ಕೃತಿಗಳನ್ನು ಪ್ರಭಾವಪೂರ್ಣವಾಗಿ ಸಮೃದ್ಧಿಗೊಳಿಸಿದವರು ಹರಿದಾಸರು. ಬದುಕಿನಲ್ಲಿ ನಿಷ್ಠೆ, ಸಾಹಿತ್ಯದಲ್ಲಿ ಬದುಕಿನ ತತ್ತ್ವಗಳನ್ನು ಅಡಗಿಸಿ ಜನಸಾಮಾನ್ಯರನ್ನು ಉನ್ನತ ಜೀವನದತ್ತ ಉದ್ದೀಪಿಸುವ ಮಹಾಕಾಯಕದಲ್ಲಿ ತೊಡಗಿದವರು ಹರಿದಾಸರು. ಕನ್ನಡ ಸಾಹಿತ್ಯಕ್ಕೆ ಅಪೂರ್ವ ಕೊಡುಗೆಯಾಗಿರುವ ಹರಿದಾಸ ಸಾಹಿತ್ಯ ಸಮಾಜದ ಮೌಢ್ಯವನ್ನು ಬಯಲಿಗೆಳೆದು, ಜಾತಿ, ಮತ, ಪಂಥಗಳನ್ನು ಮೀರಿ ನಿಂತ ಮಾನವೀಯ ಮೌಲ್ಯಗಳನ್ನು ಸಾಹಿತ್ಯದ ಮೂಲಕ ಅಭಿವ್ಯಕ್ತಿಸಿತು.

ಹರಿದಾಸ ಸಾಹಿತ್ಯಕ್ಕೆ ಪ್ರೇರಣೆ ಭಕ್ತಿಯಾದರೂ, ಕರ್ನಾಟಕ ಸಂಗೀತಕ್ಕೆ ಸಮೃದ್ಧಿಯನ್ನು ನೀಡಿದವರು ಹರಿದಾಸರು. ಗ್ರಾಮ್ಯ ಮತ್ತು ದೇಶ್ಯ ಶಬ್ದಗಳಿಗೆ ಸಾಹಿತ್ಯದ ಮುದ್ರೆಯನ್ನು ಒತ್ತಿ, ಭಾಷೆಗೊಂದು ಪರಿಪಕ್ವತೆಯನ್ನೂ ತಂದುಕೊಟ್ಟರು. ಇಂಥ ಸಾಹಿತ್ಯ ಸಂಪತ್ತನ್ನು ರಕ್ಷಿಸುವುದು ಮತ್ತು ಪ್ರಸಾರ ಮಾಡುವುದು ನಮ್ಮ ಕರ್ತವ್ಯ. ಈ ದೃಷ್ಟಿಯಿಂದ ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯ ಪ್ರಕಟಣ ಯೋಜನೆಗೆ ಸಮಿತಿಯೊಂದನ್ನು ರಚಿಸಿದ್ದು, ಇದರಲ್ಲಿ ನಾಡಿನ ಅನೇಕ ವಿದ್ವಾಂಸರು ಸಂಪುಟ ಸಂಪಾದಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಸಂಪುಟಗಳು ಹೊರಬರಲು ಕಾರಣರಾದ ಸಂಪಾದಕ ಮಂಡಳಿಯ ಸದಸ್ಯರಿಗೆ ಹಾಗೂ ಈ ಸಂಪುಟದ ಸಂಪಾದಕರಿಗೆ ನನ್ನ ಕೃತಜ್ಞತೆಗಳು.

ದಾಸರು ತಮ್ಮ ಸಾಹಿತ್ಯದಲ್ಲಿ ಸಾರ್ವಕಾಲಿಕ ಮೌಲ್ಯಗಳನ್ನು ಉಳಿಸಿ ಹೋಗಿದ್ದಾರೆ. ನಮ್ಮ ಸಾಮಾಜಿಕ ಜೀವನವನ್ನು ರೂಪಿಸುವಲ್ಲಿ ಈ ಕೀರ್ತನೆಗಳು ಮೌಲಿಕವಾದುವು. ಕನ್ನಡ ಜನತೆ ಈ ಕೃತಿಯ ಪ್ರಯೋಜನವನ್ನು ಪಡೆದರೆ ಪಟ್ಟ ಶ್ರಮ ಸಾರ್ಥಕವಾಗುತ್ತದೆ.

ರಾಣಿ ಸತೀಶ್

ಕನ್ನಡ ಮತ್ತು ಸಂಸ್ಕೃತಿ ಸಚಿವರು

ಯೋಜನೆಯನ್ನು ಕುರಿತು

ಕನ್ನಡ ಸಾಹಿತ್ಯ ಚರಿತ್ರೆಯ ಸಿರಿವಂತಿಕೆಯಲ್ಲಿ ಕೀರ್ತನ ಸಾಹಿತ್ಯದ ಕೊಡುಗೆ ವಿಪುಲವಾದುದು; ವೈಶಿಷ್ಟ್ಯಪೂರ್ಣವಾದುದು. ಈ ಸಮಗ್ರ ಸಾಹಿತ್ಯದ ಸಂಗ್ರಹ ಮತ್ತು ಪ್ರಕಾಶನದ ಕಾರ್ಯ ಪೂರ್ಣವಾಗಿ ಆಗಿರಲಿಲ್ಲ. ಇದನ್ನು ಮನಗಂಡ ಸರ್ಕಾರ ಸಮಗ್ರ ದಾಸ ಸಾಹಿತ್ಯ ಪ್ರಕಟಣೆಯ ಕಾರ್ಯವನ್ನು ಕೈಗೆತ್ತಿಕೊಂಡಿತು.

ಸುಮಾರು ಒಂದು ನೂರ ಮೂವತ್ತೊಂಬತ್ತು ಜನ ದಾಸರ ಸುಮಾರು ಹದಿನಾರು ಸಾವಿರ ಕೀರ್ತನೆಗಳ ಬೃಹತ್ ಸಾಹಿತ್ಯ ಸಾಮಗ್ರಿ ದೊರಕಿತು. ಹೀಗೆ ಸಾಂಪ್ರದಾಯಿಕ ರೀತಿಯಲ್ಲಿ ಸಂಗ್ರಹಿಸಿ, ಸಂಪಾದಿಸಿದ ಕೀರ್ತನ ಸಾಹಿತ್ಯವನ್ನು ಸಂಪುಟಗಳಲ್ಲಿ ಮುದ್ರಿಸುವುದು ಕಷ್ಟವೇನಾಗಿರಲಿಲ್ಲ. ಆದರೆ, ಅದನ್ನು ಮಾಹಿತಿ ತಂತ್ರಜ್ಞಾನದ ಇವತ್ತಿನ ಸಂದರ್ಭದಲ್ಲಿ ಬಹು ಉಪಯೋಗಿ ನೆಲೆಯಲ್ಲಿ ಬಹುಮಾಧ್ಯಮದಲ್ಲಿ ಹೊರತರಬೇಕೆಂಬ ಕನಸು ರೋಮಾಂಚಕಾರಿ ಅನುಭವವೇ ಸರಿ. ಇದನ್ನು ಕೃತಿ ರೂಪಕ್ಕಿಳಿಸುವ ಹಾದಿಯಲ್ಲಿ ಎದುರಾದ ತಾಂತ್ರಿಕ ಸವಾಲು ಬಹು ಕ್ಲಿಷ್ಟಕರವಾಗಿಯೇ ಕಂಡಿತು.

ದಿಟ, ಈ ಸಮಗ್ರ ಸಾಹಿತ್ಯವನ್ನು ಕೇವಲ ಮುದ್ರಣದಲ್ಲಷ್ಟೇ ಅಲ್ಲ, ಆಯ್ದ ಕೀರ್ತನೆಗಳನ್ನು ಗಾಯನಕ್ಕೆ ಅಳವಡಿಸಿ, ಸಿ.ಡಿ. ಮತ್ತು ಅಂತರ್ಜಾಲದಲ್ಲಿ ಹೊರತರ ಬೇಕೆಂದಾಗ ಬಳಕೆದಾರರ ಅವಶ್ಯಕತೆಯನ್ನು ಆಧರಿಸಿ ತಯಾರಿಸುವ ಅಗತ್ಯ ಇತ್ತು. ಆದರೆ ಇವುಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಸರ್ಚ್ ಎಂಜಿನ್ (ಹುಡುಕುವಿಕೆ) ಇಲ್ಲದಿರುವುದು ಒಂದು ತಾಂತ್ರಿಕ ಸಮಸ್ಯೆಯೇ ಆಯಿತು.

ಈ ರೀತಿಯ ಪ್ರಯತ್ನ ಕನ್ನಡ ಭಾಷೆಯಲ್ಲಿ ಹಿಂದೆಂದೂ ಆಗದಿದ್ದುದರಿಂದ ತಂತ್ರಾಂಶವನ್ನು ಹೊಸದಾಗಿಯೇ ಅಭಿವೃದ್ಧಿ ಪಡಿಸಬೇಕಾದ ಸವಾಲನ್ನು ಕೈಗೆತ್ತಿ ಕೊಳ್ಳಲಾಯಿತು. ಇದಕ್ಕಾಗಿ ಕನ್ನಡ ಗಣಕ ಪರಿಷತ್ತು, ರಾಷ್ಟ್ರೀಯ ಮಾಹಿತಿ ಕೇಂದ್ರ (ಎನ್‌ಐಸಿ), ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆ, ಮಹಾಭಾರತ ಸಂಶೋಧನಾ ಪ್ರತಿಷ್ಠಾನ ಮುಂತಾದ ಹಲವಾರು ತಂತ್ರಾಂಶ ಸಂಸ್ಥೆಗಳೊಂದಿಗೆ ನಿರಂತರ ಸಮಾಲೋಚನೆ, ಚಿಂತನೆಗಳನ್ನು ನಡೆಸಲಾಯಿತು.

ಹೀಗೆ ಸಾಹಿತ್ಯ ಸಂಗ್ರಹ, ಸಂಪಾದನೆ, ಸಂಗೀತ ಸಂಯೋಜನೆ, ಧ್ವನಿಮುದ್ರಣ, ಬಹುಮಾಧ್ಯಮಕ್ಕೆ ಅಳವಡಿಸುವ ತಾಂತ್ರಿಕ ಕುಶಲತೆಯ ನಿರಂತರ ಕಾರ್ಯಾನುಷ್ಠಾನಕ್ಕೆ ಸಂಪಾದಕ ಮಂಡಳಿ ಸದಸ್ಯರು, ಸಂಪುಟ ಸಂಪಾದಕರು, ಇಲಾಖಾ ಅಧಿಕಾರಿಗಳು, ತಂತ್ರಜ್ಞರು, ಕೋರ್ ಸಮಿತಿ ಸದಸ್ಯರು, ಸಂಗೀತ ನಿರ್ದೇಶಕರು, ಗಾಯಕರು – ಈ ಎಲ್ಲರ ಪರಿಶ್ರಮ ಅಗಾಧವಾಗಿ ದೊರಕಿದೆ. ಈ ಶ್ರಮದ ಫಲವಾಗಿ ಬಹುಮಾಧ್ಯಮದಲ್ಲಿ ಸಮಗ್ರ ದಾಸ ಸಾಹಿತ್ಯ ಯೋಜನೆಯ ಬೃಹತ್ ಕಾರ್ಯ ಸಾಕಾರಗೊಂಡಿದೆ.

ಈ ವಿಪುಲ ಸಾಹಿತ್ಯವನ್ನು ಕನ್ನಡ ಅಕ್ಷರಜ್ಞಾನಿಗಳು ಪುಸ್ತಕ ರೂಪದಲ್ಲಿಯೂ ಬಹುಗಾತ್ರದ ಸಾಹಿತ್ಯವನ್ನು ಕೈ ಅಳತೆಯ ಸಿ.ಡಿ. ರೂಪದಲ್ಲಿಯೂ ಈಗ ಪಡೆಯಬಹುದಾಗಿದೆ. ಅಲ್ಲದೆ, ಅಂತರ್ಜಾಲದ ಮೂಲಕ ವಿಶ್ವದ ಯಾವುದೇ ಮೂಲೆಯಲ್ಲಿರುವ ಆಸಕ್ತ ಜನತೆ ಕುಳಿತಲ್ಲಿಯೇ ಆರಾಮವಾಗಿ ವೀಕ್ಷಿಸುವ, ಕೇಳುವ ಹಾಗೂ ಕನ್ನಡ ಅಕ್ಷರ ಜ್ಞಾನವಿರದ ಭಾಷಿಕರು ಸಹಿತ ಸಂಗೀತವನ್ನು ಕೇಳಿ ಆಸ್ವಾದಿಸುವ ಅವಕಾಶವನ್ನು ಏಕಕಾಲದಲ್ಲಿ ಕಲ್ಪಿಸಲಾಗಿದೆ. ಪ್ರಕಾಶನದ ಇತಿಹಾಸದಲ್ಲಿಯೇ ದಾಖಲನೀಯವಾದ ಈ ಕಾರ್ಯ ಮುಂದೆ ಸರ್ಕಾರಿ ಸಂಸ್ಥೆಗಳಿಗಾಗಲಿ, ಖಾಸಗಿ ಸಂಸ್ಥೆಗಳಿಗಾಗಲಿ ಮಾದರಿಯಾಗಬಹುದೆಂದು ನಂಬಲಾಗಿದೆ.

ನಮ್ಮ ಸಂಸ್ಕೃತಿಯನ್ನು ಬಿತ್ತರಿಸಲು ನಾಲ್ಕು ಗೋಡೆಗಳೊಳಗಿನ ರಂಗ ಮಂದಿರಗಳು, ವೇದಿಕೆಗಳು ಅಗತ್ಯವಿದೆ ದಿಟ. ಆದರೆ ಭವಿತವ್ಯದಲ್ಲಿ ವಿಶ್ವದ ಜನರನ್ನು ತಲಪಲು ಮತ್ತು ಮುಖ್ಯವಾಗಿ ಯುವಜನಾಂಗಕ್ಕೆ ನಮ್ಮ ಸಾಂಸ್ಕೃತಿಕ ಕ್ಷಿತಿಜದ ವಿಸ್ತಾರವನ್ನು ಪರಿಚಯಿಸಲು ಸೂಕ್ಷ್ಮ ಸಂವೇದನಾಶೀಲವಾದ ಸಾಹಿತ್ಯವನ್ನು ಬಹುಮಾಧ್ಯಮದಲ್ಲಿ ಅಳವಡಿಸುವುದು ಅತ್ಯಾವಶ್ಯಕ. ಈ ನಿಟ್ಟಿನಲ್ಲಿ ಇದೊಂದು ವಿನೂತನ ಪ್ರಯೋಗ: ಈ ಪ್ರಯೋಗದ ಫಲ ಎಲ್ಲರಿಗೂ ಲಭ್ಯವಾಗಲೆಂಬುದು ನಮ್ಮ ಆಶಯ.

ಸಿ. ಎಸ್. ಕೇದಾರ್
ಸರ್ಕಾರದ ಕಾರ್ಯದರ್ಶಿ

ಪ್ರಕಾಶಕರ ಮಾತು

ಕರ್ನಾಟಕದ ಧಾರ್ಮಿಕ, ಸಾಂಸ್ಕೃತಿಕ ಇತಿಹಾಸದಲ್ಲಿ ಹರಿದಾಸರ ಸ್ಥಾನ ವಿಶಿಷ್ಟವಾದದ್ದು. ಸಾವಿರಾರು ವರ್ಷಗಳಿಂದ ಭಾರತದಲ್ಲಿ ಅವಿರತವಾಗಿ ಹರಿದುಬಂದ ಜೀವನಮೌಲ್ಯಗಳನ್ನು ಜನಸಾಮಾನ್ಯರ ಆಡುಭಾಷೆಯಲ್ಲಿ ಮುಟ್ಟಿಸಿ, ಲೌಕಿಕ ವಿಡಂಬನೆಯ ಮೂಲಕ ಅವರ ಮಾನಸಿಕ ವಿಕಾಸವನ್ನು ಯಶಸ್ವಿಯಾಗಿ ಸಾಧಿಸಿದವರು ಹರಿದಾಸರು. ಪಾಂಡಿತ್ಯ, ಲೋಕಾನುಭವಗಳ ಹಿನ್ನೆಲೆಯಿಂದಾಗಿ, ಆಡುಭಾಷೆಯ ಸೊಗಡಿನಿಂದಾಗಿ ಇವರು ಹಾಡಿದ್ದೆಲ್ಲ ಸಾಹಿತ್ಯವಾಯಿತು, ಕಾವ್ಯವಾಯಿತು, ಕೇಳುಗರನ್ನು ಸೆರೆಹಿಡಿಯಿತು. ಗೇಯಗುಣವುಳ್ಳ, ನೃತ್ಯಕ್ಕೆ ಅಳವಡುವ, ಛಂದೋಬದ್ಧವಾದ, ಜನತೆಯ ಮಧ್ಯದಲ್ಲಿಂಯೇ ಸಂದರ್ಭಾನುಸಾರ ಹುಟ್ಟಿದ ಹರಿದಾಸಸಾಹಿತ್ಯ ವೈಶಿಷ್ಟ್ಯಪೂರ್ಣವೆನಿಸಿತು. ಕನ್ನಡ ವಾಙ್ಮಯದಲ್ಲಿ ದಾಸಸಾಹಿತ್ಯ ಒಂದು ವಿಶೇಷ ಸ್ಥಾನ ಪಡೆಯಿತು. ಹೀಗೆ ಸಾಹಿತ್ಯ, ಸಂಗೀತ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ದಾಸಸಾಹಿತ್ಯದ ಕೊಡುಗೆ ಗಣನೀಯವಾದುದು.

ಸುಮಾರು ನೂರಮಾವತ್ತೊಂಬತ್ತು ಜನ ದಾಸರು ಆಗಿಹೋಗಿದ್ದು, ಅವರ ಕೀರ್ತನೆಗಳ ಸಂಖ್ಯೆ ಸುಮಾರು ಹದಿನಾರು ಸಾವಿರಕ್ಕೂ ಅಧಿಕ. ಈವರೆಗೆ ಕೆಲವು ದಾಸರ ಕೀರ್ತನೆಗಳು ಬಿಡಿ ಬಿಡಿಯಾಗಿ ಪ್ರಕಟವಾಗಿವೆಯಾದರೂ, ಇನ್ನೂ ಅನೇಕ ದಾಸವರೇಣ್ಯರ ಕೀರ್ತನೆಗಳು ಹಸ್ತಪ್ರತಿ ರೂಪದಲ್ಲಿಯೇ ಉಳಿದುಕೊಂಡಿವೆ. ಅವುಗಳನ್ನು ಸಂಗ್ರಹಿಸಿ, ಸಂಪಾದಿಸಿ, ಪ್ರಕಟಿಸಿ, ಸಮಗ್ರ ದಾಸಸಾಹಿತ್ಯವು ಕನ್ನಡಿಗರಿಗೆ ಒಂದೆಡೆ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ಸಮಗ್ರ ದಾಸಸಾಹಿತ್ಯ ಪ್ರಕಟಣೆಯ ಬೃಹತ್ ಯೋಜನೆಯನ್ನು ಹಾಕಿಕೊಂಡಿದೆ. ಈ ಉದ್ದೇಶಕ್ಕಾಗಿ ಕಾರ್ಯನಿರ್ವಾಹಕ ಸಂಪಾದಕರಾದ ಡಾ. ಶ್ರೀನಿವಾಸ ಹಾವನೂರ, ಡಾ. ಟಿ.ಎನ್. ನಾಗರತ್ನ, ಪ್ರೊ. ವಸಂತ ಕುಷ್ಟಗಿ, ಸದಸ್ಯರಾದ ಡಾ. ಎಂ.ಎಂ. ಕಲಬುರ್ಗಿ, ಡಾ. ಬಸವರಾಜ ಸಬರದ, ಪ್ರೊ. ಸುಧಾಕರ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ಡಾ. ಮಂದಾಕಿನಿ (ಈಗ ದಿವಂಗತರು) ಹಾಗೂ ಪ್ರೊ. ಎಂ. ರಾಜಗೋಪಾಲಾಚಾರ್ಯ (ಈಗ ದಿವಂಗತರು) ಅವರನ್ನೊಳಗೊಂಡಂತೆ ಸಂಪಾದಕ ಸಮಿತಿಯನ್ನು ರಚಿಸಲಾಯಿತು. ಇಲಾಖಾ ನಿರ್ದೇಶಕರು ಸಮಿತಿಯ ಸದಸ್ಯ-ಕಾರ್ಯದರ್ಶಿಗಳಾಗಿರುತ್ತಾರೆ. ಇದರಲ್ಲಿ ನಾಡಿನ ಅನೇಕ ವಿದ್ವಾಂಸರ ನೆರವನ್ನು ಬಳಸಿಕೊಳ್ಳಲಾಗುತ್ತಿದೆ.

ಈ ಯೋಜನೆಯನ್ವಯ 'ಸಮಗ್ರ'ವಾಗಿ ದಾಸರ ಕೀರ್ತನೆಗಳನ್ನು ಸಂಗ್ರಹಿಸಿ ಪ್ರಕಟಿಸುವುದಿದ್ದರೂ, ಕೆಲವು ಹರಿದಾಸರ ರಚನೆಗಳು ಬಿಟ್ಟು ಹೋಗಿರುವ ಸಾಧ್ಯತೆ ಇರುತ್ತದೆ. ಅಂಥ ಹರಿದಾಸರ ಕೀರ್ತನೆಗಳು ದೊರೆತಲ್ಲಿ ಮುಂದೆ ಪರಿಷ್ಕರಣ ಸಂದರ್ಭದಲ್ಲಿ ಪ್ರಕಟಿಸಲು ಕ್ರಮಕೈಗೊಳ್ಳಲಾಗುವುದು.

ಸಮಗ್ರ ದಾಸಸಾಹಿತ್ಯ ಯೋಜನೆಯಡಿ ಪ್ರಕಟವಾಗುತ್ತಿರುವ ಆಯಾ ಸಂಪುಟಗಳ ಸಂಪಾದಕರಿಗೆ ಹಾಗೂ ಈ ಕಾರ್ಯದಲ್ಲಿ ನಮ್ಮೊಡನೆ ಸಹಕರಿಸಿದ ಸಂಪಾದಕ ಮಂಡಳಿಯವರಿಗೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಹಿಂದಿನ ನಿರ್ದೇಶಕರಾದ ಶ್ರೀ ಕೆ. ಸಿ. ರಾಮಮೂರ್ತಿ, ಶ್ರೀ ಸಿ. ಸೋಮಶೇಖರ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ ಅವರಿಗೆ, ಸಹಾಯಕ ನಿರ್ದೇಶಕರಾದ ಶ್ರೀಮತಿ ವೈ. ಎಸ್. ವಿಜಯಲಕ್ಷ್ಮಿ ಹಾಗೂ ಡಾ. ಮಂಜುಳ ಅವರಿಗೆ ಕೃತಜ್ಞತೆಗಳು.

ಹರಿದಾಸರ ಕೀರ್ತನೆಗಳನ್ನು ಆಯ್ದು ಸಂಗೀತಕ್ಕೆ ಆಯ್ಕೆ ಮಾಡಲು ನೆರವಾದ ಶ್ರೀ ವಿನಾಯಕ ತೊರವಿ, ಶ್ರೀ ಮೈಸೂರು ವಿ. ಸುಬ್ರಹ್ಮಣ್ಯ, ಶ್ರೀ ಆರ್. ಕೆ. ಪದ್ಮನಾಭ, ಶ್ರೀ ಬಾನಂದೂರು ಕೆಂಪಯ್ಯ ಹಾಗು ಶ್ರೀಮತಿ ಮಾಲತಿ ಶರ್ಮರವರಿಗೆ, ಮತ್ತು ಈ ಯೋಜನೆಯಲ್ಲಿ ಪಾಲ್ಗೊಂಡ ಎಲ್ಲ ಸಂಗೀತ ನಿರ್ದೇಶಕರಿಗೆ ಹಾಗೂ ಗಾಯಕರಿಗೆ ಕೃತಜ್ಞತೆಗಳು.

ಸಂಪುಟಗಳನ್ನು ಮುದ್ರಣಕ್ಕೆ ಅನುಗೊಳಿಸುವ ಕಾರ್ಯ ನಿರ್ವಹಿಸಿದ ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಅನಂತ ಪದ್ಮನಾಭರಾವ್ ಮತ್ತು ಪ್ರೊ. ನಾ. ಗೀತಾಚಾರ್ಯ ಇವರಿಗೂ ಸಹ ಕೃತಜ್ಞತೆಗಳು.

ಈ ಸಮಗ್ರ ದಾಸಸಾಹಿತ್ಯ ಸಂಪುಟಗಳ ಮುದ್ರಣ ಕಾರ್ಯವನ್ನು ನಿರ್ವಹಿಸಿದ ಎಂ.ಎಸ್.ಐ.ಎಲ್. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಅಶೋಕ್ ವಿ. ಡೇವಿಡ್ ಹಾಗೂ ವಿಶೇಷಾಧಿಕಾರಿಗಳಾದ ಶ್ರೀ ಎಂ. ರವಿಶಂಕರ್ ಅವರಿಗೆ ನನ್ನ ಕೃತಜ್ಞತೆಗಳು. ಸಮಗ್ರ ದಾಸಸಾಹಿತ್ಯವನ್ನು ಪ್ರಕಟಿಸುವುದು ಹರಿದಾಸರಿಗೂ ಕನ್ನಡ ಜನತೆಗೂ ನಾವು ಸಲ್ಲಿಸಬೇಕಾದ ಸೇವೆಯೆಂದು ಭಾವಿಸಿದ್ದೇನೆ. ಪಂಡಿತ–ಪಾಮರರನ್ನು ಏಕಕಾಲಕ್ಕೆ ಆಕರ್ಷಿಸಬಲ್ಲ ವಿಶಿಷ್ಟ ಸಾಮರ್ಥ್ಯ ದಾಸಸಾಹಿತ್ಯದ್ದು ಎಂದರೆ ತಪ್ಪಾಗಲಾರದು. ಕನ್ನಡ ಜನತೆಯು ಈ ಪ್ರಕಟಣೆಯ ಸದುಪಯೋಗ ಪಡೆದುಕೊಂಡೀತು ಎಂದು ಆಶಿಸಿದ್ದೇನೆ.

ವೈ. ಕೆ. ಮುದ್ದುಕೃಷ್ಣ

ನಿರ್ದೇಶಕರು

ಸಂಪಾದಕ ಮಂಡಳಿಯ ನುಡಿ

ಕನ್ನಡ ಸಾಹಿತ್ಯದ ತವನಿಧಿಗಳಲ್ಲಿ ದಾಸಸಾಹಿತ್ಯವೂ ಒಂದು. ಕನ್ನಡಜನಕ್ಕೆ ಪಂಪನಂತಹ ಪ್ರೌಢಕವಿಗಳು ಗೊತ್ತಿರಲಿ ಬಿಡಲಿ, ದಾಸರ ಹಾಡುಗಳು ಗೊತ್ತಿಲ್ಲದವರು ಮಾತ್ರ ಅಪರೂಪ. ಜನರ ಮೇಲೆ ನಿರಂತರ ಪ್ರಭಾವವನ್ನು ಬೀರುವ ಜನಸಮ್ಮುಖತೆ ದಾಸಸಾಹಿತ್ಯದ ಪ್ರಮುಖ ಲಕ್ಷಣಗಳಲ್ಲಿ ಒಂದು. ಇಂತಹ ದಾಸರ ಹಾಡುಗಳು ಜ್ಞಾನಸಂಪದ ಹಾಗೂ ಭಕ್ತಿಸಂಪದಗಳ ಸಾರ್ವತ್ರಿಕ ಹಬ್ಬುಗೆಗೆ ಸಾಧನವಾಗಿ ಪರಿಣಮಿಸಿವೆ.

ಕನ್ನಡ ನಾಡಿನಾದ್ಯಂತ ಎಲ್ಲ ಸ್ತರಗಳಲ್ಲಿ ವರ್ಗ-ವರ್ಣಗಳ ಭೇದವಿಲ್ಲದೆ, ಜನರ ಬಾಯಲ್ಲಿ ಉಳಿದುಕೊಂಡು ಬಂದ ಈ ಸಾಹಿತ್ಯವನ್ನು ಮೊಟ್ಟಮೊದಲಿಗೆ ಪ್ರಕಟಿಸಿದ ಶ್ರೇಯಸ್ಸು ಬಾಸೆಲ್ ಮಿಶನ್ನಿನ ರೆ. ಹರ್ಮನ್ ಮೊಗ್ಲಿಂಗ್‌ರಿಗೆ ಸೇರುತ್ತದೆ. ಇವರು ತಮ್ಮ ಇಲ್ಲಿಯ ವಾಸ್ತವ್ಯದಲ್ಲಿ (೧೮೩೬ರಿಂದ) ನಾಲ್ಕುನೂರಕ್ಕೂ ಮೀರಿದ ದಾಸರಪದಗಳನ್ನು ಸಂಗ್ರಹಿಸಿದ್ದರು. ಅವುಗಳಲ್ಲಿಯ ಒಂದು ನೂರು ಪದಗಳ ಸಂಗ್ರಹವನ್ನು 'ದಾಸರ ಪದಗಳು' ಎಂಬ ಹೆಸರಿನಿಂದ ಕ್ರಿ. ಶ. ೧೮೫೦ರಲ್ಲಿ, ಮತ್ತೆ ಕ್ರಿ.ಶ. ೧೮೫೨ರಲ್ಲಿ ೧೭೪ ಪದಗಳುಳ್ಳ ಸಂಕಲನವನ್ನು ಮಂಗಳೂರಿನಲ್ಲಿ ಕಲ್ಲಚ್ಚಿನಲ್ಲಿ ಛಾಪಿಸಿ ಪ್ರಕಟಿಸಿದರು. ಈ ವಿಷಯವನ್ನು ೧೮೭೩ರಲ್ಲಿ ಪ್ರಕಟವಾದ ಇಂಡಿಯನ್ ಎಂಟಿಕ್ವೆರಿಯ 'On the Karnataka Vaishnava Dasas' - ಎಂಬ ತಮ್ಮ ಲೇಖನದಲ್ಲಿ ರೆ. ಕಿಟೆಲ್ಲರು ಕಾಣಿಸಿದ್ದಾರೆ. ಇದರಿಂದ ಕಿಟೆಲ್‌ರಂಥವರು ಕೂಡ ದಾಸರ ಪದಗಳ ಮಹತ್ವವನ್ನು ಮತ್ತು ಜನಪ್ರಿಯತೆಯನ್ನು ಗುರುತಿಸಿದ್ದರು ಎಂಬುದು ಗೊತ್ತಾಗುತ್ತದೆ. ಪ್ರಾಸಂಗಿಕವಾಗಿ ಇದುವೆ ದಾಸಸಾಹಿತ್ಯದ ಕುರಿತಾದ ಮೊದಲ ಲೇಖನವೂ ಆಗಿದೆ.

ಆ ನಂತರದ ದಿನಗಳಲ್ಲಿ ಈ ಕ್ಷೇತ್ರದಲ್ಲಿ ಹಲವಾರು ಜನರು ಕೆಲಸವನ್ನು ಮುಂದುವರಿಸಿದರು. ರೆ. ಮೊಗ್ಲಿಂಗರ 'ದಾಸರ ಪದಗಳು' ಇದರ ದ್ವಿತೀಯ ಆವೃತ್ತಿಯನ್ನು ೧೮೭೧ರಲ್ಲಿ ಜಾನ್ ಗ್ಯಾರೆಟರ ಸೂಚನೆಯ ಮೇರೆಗೆ ಹೊಳಕಲ್ಲು ನರಸಿಂಹಯ್ಯನವರು ಬೆಂಗಳೂರಿನಿಂದ ಪ್ರಕಟಿಸಿದರು. ೧೮೭೩ರಲ್ಲಿ ಹಿಂದೂ ಭಾಷಾ ಸಂಜೀವಿನೀ ಮುದ್ರಣ ಶಾಲೆಯಲ್ಲಿ 'ಹರಿಭಜನೆ, ಕೀರ್ತನೆ' ಎಂಬ ಸಂಗ್ರಹ ಪ್ರಕಟವಾಯಿತು. ೧೯೦ನೆಯ ದಶಕದಲ್ಲಿ ಬೆಳಗಾವಿಯ ಆಬಾಜಿ ರಾಮಚಂದ್ರ ಸಾವಂತ ಇವರು ದೇವನಾಗರಿ ಲಿಪಿಯಲ್ಲಿ "ದಾಸರ ಪದಗಳ ಸಂಗ್ರಹವು" ಎಂಬುದಾಗಿ ಎರಡು ಭಾಗಗಳಲ್ಲಿ ಪ್ರಕಟಿಸಿದರು. ಆ ದಶಕದಲ್ಲಿಯೇ ಮಡಕಶಿರಾದ ಬಾಲಕೃಷ್ಣರಾಯರು ೧೯೪ರಲ್ಲಿ 'ಪುರಂದರ ದಾಸರು ಮೊದಲಾದ ಅಪರೋಕ್ಷ ಜ್ಞಾನಿಗಳ ಪದಗಳು' ಎಂಬ ಪುಸ್ತಕವನ್ನು ತೆಲುಗು ಲಿಪಿಯಲ್ಲಿ ಮುದ್ರಿಸಿದ್ದು ಗಮನಾರ್ಹವಾಗಿದೆ. ಮತ್ತೆ ೧೯೦೮ರಲ್ಲಿ ಅವರೇ ಇನ್ನೊಂದು ಸಂಕಲನವನ್ನೂ ಪ್ರಕಟಿಸಿದ್ದಾರೆ.

ಹೀಗೆ ೧೮೫೦ರಷ್ಟು ಹಿಂದೆಯೇ ಪ್ರಾರಂಭವಾದ ದಾಸರ ಪದಗಳ ಸಂಗ್ರಹ ಹಾಗೂ ಪ್ರಕಟಣೆಯ ಕಾರ್ಯಕ್ಕೆ ಒಂದು ವ್ಯವಸ್ಥಿತ ರೂಪವನ್ನು ಕೊಟ್ಟು, ನಾಡಿನಾದ್ಯಂತ ಹರಿದು ಹಂಚಿಹೋದ, ಜನರ ಬಾಯಲ್ಲಿ ಉಳಿದುಕೊಂಡು ಬಂದ ವಿವಿಧ ದಾಸರ ಪದಗಳನ್ನು ಸಂಗ್ರಹಿಸಿ ಪ್ರಕಟಿಸಲು ಪ್ರಾರಂಭಿಸಿದವರು ಉಡುಪಿಯ ಪಾವಂಜೆ ಗುರುರಾಯರು. ಅವರು ೧೯೧೪ರಲ್ಲಿ ಪ್ರಕಟಿಸಿದ ಮೊದಲ ಸಂಕಲನದ ಹೆಸರು 'ಉದಯರಾಗವು' ಎಂಬುದು. ಅನಂತರದ ದಿನಗಳಲ್ಲಿ ಪುರಂದರದಾಸರ ಕೀರ್ತನೆಗಳನ್ನು ಐದು ಸಂಪುಟಗಳಲ್ಲಿ ಮತ್ತು ಉಳಿದ ದಾಸರ ಕೃತಿಗಳನ್ನು ಬಿಡಿಬಿಡಿಯಾಗಿ ಪ್ರಕಟಿಸಿದರು. ಹೀಗೆ ನಾಡಿನ ದಕ್ಷಿಣದ ಅಂಚಿನ ಉಡುಪಿಯಲ್ಲಿ ಪ್ರಾರಂಭವಾದ ಕೆಲಸವನ್ನು ಉತ್ತರದ ಅಂಚಿನ ಲಿಂಗಸುಗೂರಿನಲ್ಲಿ ಗೊರಾಬಾಳ ಹಣಮಂತರಾಯರು 'ವರದೇಂದ್ರ ಸಾಹಿತ್ಯ ಮಾಲೆ'ಯನ್ನು ಪ್ರಾರಂಭಿಸಿ ತಮ್ಮ ಇಡೀ ಜೀವನವನ್ನೇ ಹರಿದಾಸ ಸಾಹಿತ್ಯದ ಸಂಗ್ರಹ ಮತ್ತು ಪ್ರಕಟಣೆಗೆ ಮೀಸಲಾಗಿರಿಸಿದರು. ಇತ್ತ ಮೈಸೂರು ಭಾಗದಲ್ಲಿ ಸುಪ್ರಸಿದ್ಧ ದಾಸರ ಹಾಡುಗಳನ್ನು ತಕ್ಕಮಟ್ಟಿಗೆ ಶಾಸ್ತ್ರಶುದ್ಧವಾಗಿ ಪ್ರಕಟಿಸಲು

ಸುಬೋಧ ರಾಮರಾಯರು ಮುಂದಾದರು. ಇದೇ ಬಗೆಯ ಕೆಲಸವನ್ನು ಧಾರವಾಡ ಪ್ರದೇಶದಲ್ಲಿ ನಾರಾಯಣರಾವ ಕಲಮದಾನಿ, ಹುಚ್ಚರಾವ ಬೆಂಗೇರಿ ಹಾಗೂ ಬೆಟಗೇರಿ ಕೃಷ್ಣಶರ್ಮರು ಮಾಡಿದರು. ಇದರೊಂದಿಗೆ, ಭಜನೆಯ ದೃಷ್ಟಿಯಿಂದ ಅನುಕೂಲವಾಗುವಂತೆ ನಾಡಿನ ವಿವಿಧ ಭಾಗಗಳಲ್ಲಿ ದಾಸಸಾಹಿತ್ಯಾಸಕ್ತರು ತಮತಮಗೆ ಬೇಕಾದ ಪದಗಳ ಸಂಗ್ರಹವನ್ನು ಪ್ರಕಟಿಸತೊಡಗಿದರು. ಇದರಿಂದಾಗಿ ನಾಡಿನ ಬಹುತೇಕ ಭಾಗಗಳಲ್ಲಿ ಬೇರೆ ಬೇರೆ ದಾಸರು ಇದ್ದುದು ಮತ್ತು ಅವರು ಹಾಡುಗಳನ್ನು ಬರೆದಿದ್ದಾರೆ ಎಂಬುದು ಗಮನಕ್ಕೆ ಬಂದಿತು. ಅದು 'ದಾಸ-ಪೀಳಿಗೆ'ಯನ್ನು ಗುರುತಿಸಲು ಸಹಾಯವಾಯಿತು.

ಶ್ರೀಪಾದರಾಜರಿಂದ ಪ್ರಾರಂಭವಾದ ಕೀರ್ತನೆಗಳ ರಚನೆಯ ಸಂಪ್ರದಾಯದಲ್ಲಿ ಈ ಐದುನೂರು ವರ್ಷಗಳಲ್ಲಿ ಸುಮಾರು ಮುನ್ನೂರು ಜನ ಹರಿದಾಸರು ಹುಟ್ಟಿ ಮೂವತ್ತು ಸಾವಿರಕ್ಕೂ ಮಿಕ್ಕ ಕೀರ್ತನೆಗಳನ್ನು ರಚಿಸಿದ್ದಾರೆಂದರೆ ಅವುಗಳ ಮಹತ್ವ ಗೊತ್ತಾಗದೇ ಇರದು.

ಇಡಿಯಾಗಿ-ಬಿಡಿಬಿಡಿಯಾಗಿ ವ್ಯಕ್ತಿಗಳಿಂದ, ಸಂಘ ಸಂಸ್ಥೆಗಳಿಂದ ದಾಸರ ಪದಗಳು ಪ್ರಕಟವಾಗುತ್ತ ಬರುತ್ತಿರುವಾಗಲೇ ಪುರಂದರ ಕನಕದಾಸರ ಚತುಃಶತಮಾನೋತ್ಸವ ಸಂದರ್ಭಗಳಲ್ಲಿ ಅವರ ಸಮಗ್ರ ಕೃತಿಗಳು ಸರ್ಕಾರದಿಂದ ಹಾಗೂ ವಿವಿಧ ಸಂಘ ಸಂಸ್ಥೆಗಳಿಂದ ಪ್ರಕಟವಾದವು. ಆದರೆ ಸಮಗ್ರ ದಾಸಸಾಹಿತ್ಯದ ಪ್ರಕಟಣೆ ಈವರೆಗೆ ಆಗಲೇ ಇಲ್ಲವೆಂದು ಹೇಳಬಹುದು. ಇಂಥದೊಂದು ಪ್ರಯತ್ನವನ್ನು ಮೂರು ದಶಕಗಳ ಹಿಂದೆ ಮೈಸೂರು ವಿಶ್ವವಿದ್ಯಾನಿಲಯವು ಕೈಗೊಂಡಿತು. ವೈಜ್ಞಾನಿಕ ರೀತಿಯಲ್ಲಿ ಶಾಸ್ತ್ರಶುದ್ಧವಾಗಿ ದಾಸಸಾಹಿತ್ಯವನ್ನು ಪ್ರಕಟಿಸುವುದರ ಅಡಿಗಲ್ಲನ್ನು ಹಾಕಿದ ಶ್ರೇಯಸ್ಸು ಆ ಮಾಲೆಯ ಸಂಪಾದಕರಾಗಿದ್ದ ಡಾ. ಜಿ. ವರದರಾಜರಾವ್ ಅವರಿಗೆ ಸಲ್ಲಬೇಕು. ಇದುವರೆಗೆ ಕೆಲವು ಸಂಪುಟಗಳು ಮಾತ್ರ ಬಂದಿವೆ. ಆದರೆ ಹಸ್ತಪ್ರತಿಗಳಲ್ಲಿ ವಿಪುಲ ದಾಸಸಾಹಿತ್ಯವನ್ನು ಸಂಗ್ರಹಿಸಲಾಗಿದೆ. ಅದೇ ರೀತಿಯಲ್ಲಿ ಲಿಂಗಸುಗೂರಿನಲ್ಲಿ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಹಾಗೂ ತಿರುಪತಿಯ ದಾಸಸಾಹಿತ್ಯ ಪ್ರೊಜೆಕ್ಟದಲ್ಲಿ ಕೂಡ ವಿಪುಲ ಹಸ್ತಪ್ರತಿಗಳ ಸಂಗ್ರಹವಿದೆ. ಇವರೆಲ್ಲರ ಸಹಕಾರದಿಂದ ಈಗ ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯವನ್ನು ಒಂದೆಡೆ ಸಂಗ್ರಹಿಸಿ ಪ್ರಕಟಿಸುವ ಸಾಹಸದ ಕಾರ್ಯವನ್ನು ಮಾಡುತ್ತಿದೆ.

ಸಂಪುಟ ಯೋಜನೆ

ದಾಸಸಾಹಿತ್ಯದ ಪರಿಷ್ಕರಣ ಕಾರ್ಯ ತುಂಬ ಜಟಿಲವಾದುದೆಂಬುದು ಸಂಪಾದಕ ಮಂಡಳಿಯ ಪ್ರಥಮ ಸಭೆಯಲ್ಲಿಯೇ ಅನುಭವಕ್ಕೆ ಬಂದಿತು. ಕಳೆದ ಐದು ಶತಮಾನಗಳಿಂದ ನಿರಂತರ ಹರಿದುಬಂದ ದಾಸಸಾಹಿತ್ಯ ರಚನೆಯಲ್ಲಿಯ ದಾಸರ ಹಾಗೂ ದಾಸರ ಪದಗಳ ಸಂಖ್ಯಾಬಾಹುಳ್ಯವನ್ನು ಗಮನಿಸಿ ಅದಕ್ಕೊಂದು ಕಾಲಮಿತಿಯನ್ನು ಹಾಕಿಕೊಳ್ಳುವುದು ಅನಿವಾರ್ಯವಾಯಿತು. ಹಾಗೆ ದಾಸಸಾಹಿತ್ಯದ ಪ್ರಾರಂಭ ಕಾಲದಿಂದ ೧೯ನೆಯ ಶತಮಾನದ ಅಂತ್ಯದವರೆಗೆ ರಚಿತಗೊಂಡ ವೈದಿಕ ಪರಂಪರೆಯ ದಾಸರ ಪದಗಳನ್ನು ಸಂಗ್ರಹಿಸುವುದೆಂದೂ, ಅದರಲ್ಲಿ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಪರಂಪರೆಯ ಲಭ್ಯವಿದ್ದ ಹಾಡುಗಳನ್ನು ಸೇರಿಸಿಕೊಂಡು ೩೫ ಸಂಪುಟಗಳಲ್ಲಿ ಪ್ರಕಟಿಸುವುದೆಂದೂ ನಿರ್ಧರಿಸಲಾಯಿತು.

ಈ ೩೫ ಸಂಪುಟಗಳನ್ನು* ಸಂಪಾದಕ ಮಂಡಳಿಯ ಸದಸ್ಯರಲ್ಲದೆ ನಾಡಿನ ಹಲವಾರು ವಿದ್ವಾಂಸರನ್ನು ಸಂಪಾದಿಸಿಕೊಡಲು ಕೇಳಿಕೊಳ್ಳಲಾಯಿತು.

ಇಂಥದೊಂದು ಬೃಹತ್ ಕಾರ್ಯವನ್ನು ಕೈಗೊಂಡಾಗ ಕೆಲವು ಮಾರ್ಗದರ್ಶಿ ಸೂತ್ರಗಳನ್ನು ಅನುಸರಿಸುವುದು ಅನಿವಾರ್ಯವಾಗುತ್ತದೆ. ಅನ್ಯ ಮತ-ಪಂಥಗಳ ಟೀಕೆಗಳು ಬಂದಿದ್ದರೆ ಅಂಥ ಹಾಡುಗಳನ್ನು ಕೈಬಿಡಬೇಕು. ಒಂದೇ ಹಾಡು ಇಬ್ಬರು ದಾಸರ ಅಂಕಿತದಲ್ಲಿ ಪ್ರಚಲಿತದಲ್ಲಿದ್ದರೆ, ಎರಡೂ ಕಡೆಗೆ ಅವುಗಳನ್ನು ಕೊಟ್ಟು, ಕೆಳಗೆ 'ಈ ಕೀರ್ತನೆ . . . . ದಾಸರ ಅಂಕಿತದಲ್ಲೂ ಇದೆ' ಎಂದೂ ಸೂಚಿಸಬೇಕು. ದ್ವೈತ ಸಂಪ್ರದಾಯದ ಕೀರ್ತನೆಗಳನ್ನು ಪ್ರಕಟಿಸುವಾಗ ದೇವ-ಗುರು ತಾರತಮ್ಯವನ್ನು ಪಾಲಿಸಬೇಕು ; ಉಳಿದೆಡೆ ಗಣೇಶ ಪ್ರಾರ್ಥನೆ, ಭಗವಂತನ ನಾಮಸಂಕೀರ್ತನೆ, ಆತ್ಮನಿವೇದನೆ, ಲೋಕನೀತಿ, ತಾತ್ವಿಕ, ಕಥನಾತ್ಮಕ, ಸಂಪ್ರದಾಯ ಹಾಗೂ ವಿಶೇಷ ಹಾಡುಗಳೆಂದು ಮುಂತಾಗಿ ವಿಂಗಡಿಸಿಕೊಡಬೇಕು-ಎಂಬುದಾಗಿ ನಿರ್ಧರಿಸಲಾಯಿತು.

---

*ಇವುಗಳಲ್ಲಿ ಕೆಲವುಗಳಿಗೆ ಎರಡು ಮೂರು ಭಾಗಗಳಿವೆ.

ಪ್ರತಿಯೊಂದು ಸಂಪುಟದ ಪ್ರಾರಂಭದಲ್ಲಿ ಹಾಡುಗಳ ಪರಿವಿಡಿಯನ್ನು ಕೊಟ್ಟು ಪ್ರಸ್ತಾವನೆಯಲ್ಲಿ ಆಯಾ ದಾಸರ ಸಂಕ್ಷಿಪ್ತ ಜೀವನ ಚರಿತ್ರೆ, ಕೃತಿಗಳ ಸಮೀಕ್ಷೆ, ಶೈಲಿ ಇತ್ಯಾದಿಗಳನ್ನು ವಿವರಿಸಿ, ಗ್ರಂಥಸಂಪಾದನೆಯ ಆಕರಗಳನ್ನೂ ಕೊಡಲು ಪ್ರಯತ್ನಿಸಲಾಗಿದೆ. ಕೊನೆಯಲ್ಲಿ ಬರುವ ಅನುಬಂಧಗಳಲ್ಲಿ ಕಠಿಣ ಶಬ್ದಗಳ ಅರ್ಥ, ಟಿಪ್ಪಣಿ ಮತ್ತು ವಿಶಿಷ್ಟ ಅಂಕಿತನಾಮಗಳ ಸೂಚಿ ಹಾಗೂ ಹಾಡುಗಳ ಅಕಾರಾದಿಯನ್ನು ಕೊಡಲಾಗಿದೆ.

ಈ ಸಂಪುಟಗಳು ಜನಪ್ರಿಯ ಆವೃತ್ತಿಗಳಾಗಿರುವುದರಿಂದ ಲಭ್ಯವಿರುವ ಪಾಠಾಂತರಗಳಲ್ಲಿ ಯೋಗ್ಯವಾದುದನ್ನು ಸ್ವೀಕರಿಸಿದೆ. ಅನ್ಯ ಪಾಠಗಳನ್ನು ಅಡಿಯಲ್ಲಿ ನಮೂದಿಸಿಲ್ಲ. ಆದರೂ ಇವು ವಿದ್ವಜ್ಜನಪ್ರಿಯ ಆವೃತ್ತಿಗಳೂ ಆಗಬೇಕೆಂಬ ರೀತಿಯಲ್ಲಿ ಈ ಸಂಪುಟಗಳನ್ನು ರೂಪಿಸಲು ಪ್ರಯತ್ನಿಸಿದ್ದೇವೆ.

ಕೃತಜ್ಞತೆಗಳು

ಕಳೆದ ನೂರೈವತ್ತು ವರ್ಷಗಳಿಂದ ಪಾಶ್ಚಾತ್ಯ ಮಿಶನರಿಗಳಿಂದ ಹಿಡಿದು ಈ ಮೊದಲು ಉಲ್ಲೇಖಿಸಿದ ನಾಡಿನ ಅನೇಕ ವಿದ್ವಜ್ಜನರು, ಸಂಘ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ದಾಸಸಾಹಿತ್ಯ ಕುರಿತು ನಿರಂತರ ದುಡಿದು ವಿಪುಲ ಸಾಮಗ್ರಿಯನ್ನು ಪ್ರಕಟಿಸಿದ್ದಾರೆ. ಈ ಎಲ್ಲ ವ್ಯಕ್ತಿಗಳಿಗೂ, ಸಂಘ ಸಂಸ್ಥೆಗಳಿಗೂ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು ಸಲ್ಲುತ್ತವೆ.

ಈ ಯೋಜನೆ ಅಸ್ತಿತ್ವಕ್ಕೆ ಬಂದುದೂ ಒಂದು ವಿಶಿಷ್ಟ ಸಂದರ್ಭದಲ್ಲಿ ಎಂಬುದನ್ನು ಇಲ್ಲಿ ನಮೂದಿಸಬೇಕು. ಕರ್ನಾಟಕ ಸರ್ಕಾರವು ನಾಡಿನ ಖ್ಯಾತ ಸಂಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರ ಪ್ರಧಾನ ಸಂಪಾದಕತ್ವದಲ್ಲಿ ಸಮಗ್ರ ವಚನಸಾಹಿತ್ಯವನ್ನು ಪ್ರಕಟಿಸಿತಷ್ಟೇ. ಅವರೇ 'ದಾಸಸಾಹಿತ್ಯ' ಯೋಜನೆಯನ್ನು ರೂಪಿಸಿ ಶ್ರೀ ಪೇಜಾವರ ಮಠಾಧೀಶರಾದ ಶ್ರೀ ವಿಶ್ವೇಶತೀರ್ಥರ ಮೂಲಕ ಈ ಯೋಜನೆಯತ್ತ ಸರ್ಕಾರದ ಗಮನ ಸೆಳೆದರು. ಇದನ್ನು ಅರಿತ ಅಂದಿನ ಮುಖ್ಯಮಂತ್ರಿಗಳೂ, ಅನಂತರ ಭಾರತದ ಪ್ರಧಾನಮಂತ್ರಿಗಳೂ ಆಗಿದ್ದ ಸನ್ಮಾನ್ಯ ಶ್ರೀ ಹೆಚ್. ಡಿ. ದೇವೇಗೌಡರು ಮುಧೋಳದಲ್ಲಿ (೧೯೯೫) ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ, "ಸರ್ಕಾರವು ಸಮಗ್ರ

ದಾಸಸಾಹಿತ್ಯವನ್ನು ಪ್ರಕಟಿಸಲು ಒಪ್ಪಿಕೊಂಡಿದೆ" ಎಂದು ಘೋಷಿಸಿದರು. ಅದರಂತೆ, ಸರ್ಕಾರವು ಒಂಬತ್ತು ಜನರ ಸಂಪಾದಕ ಮಂಡಳಿಯನ್ನು ರಚಿಸಿತು. ಅದರಲ್ಲಿ ಡಾ. ಶ್ರೀನಿವಾಸ ಹಾವನೂರ, ಡಾ. ಟಿ.ಎನ್. ನಾಗರತ್ನ ಮತ್ತು ಪ್ರೊ. ವಸಂತ ಕುಷ್ಟಗಿ ಅವರನ್ನು ಸಮಿತಿಯ ಕಾರ್ಯನಿರ್ವಾಹಕ ಸಂಪಾದಕರೆಂದು ನಿಯಮಿಸಿತು. ಜೊತೆಗೆ ಈ ಮೊದಲು ಇಂಥ ಕಾರ್ಯವನ್ನು ಯಶಸ್ವಿಯಾಗಿ ಮಾಡಿದ ಅನುಭವಿ ಡಾ. ಎಂ. ಎಂ. ಕಲಬುರ್ಗಿ, ದಾಸಸಾಹಿತ್ಯದಲ್ಲಿ ನುರಿತ ವಿದ್ವಾಂಸರುಗಳಾದ ಪ್ರೊ. ಎಂ. ರಾಜಗೋಪಾಲಾಚಾರ್ಯ, ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಡಾ. ಮಂದಾಕಿನಿ, ಪ್ರೊ. ಸುಧಾಕರ ಮತ್ತು ಡಾ. ಬಸವರಾಜ ಸಬರದ ಅವರನ್ನು ಸಂಪಾದಕ ಮಂಡಳಿಯ ಸದಸ್ಯರನ್ನಾಗಿ ನಿಯಮಿಸಿತು. ಅವರುಗಳ ನಿರಂತರ ಪರಿಶ್ರಮದ ಫಲವೇ ಈ ಸಮಗ್ರ ದಾಸಸಾಹಿತ್ಯದ ಪ್ರಕಟಣಾ ಕಾರ್ಯ. ಈ ಪ್ರಕಟಣಾ ಕಾರ್ಯದಲ್ಲಿ ಅವರುಗಳೊಂದಿಗೆ ೩೫ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಸರ್ವಶ್ರೀ ಡಾ. ಅರಳುಮಲ್ಲಿಗೆ ಪಾರ್ಥಸಾರಥಿ, ಡಾ. ಡಿ. ಆರ್. ಪಾಂಡುರಂಗ, ಡಾ. ಅನಂತಪದ್ಮನಾಭರಾವ್, ಪ್ರೊ. ಬಿ. ಆರ್. ಕುಲಕರ್ಣಿ, ಡಾ. ಕೆ.ಜಿ. ವೆಂಕಟೇಶ್, ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಕೆ. ಗೋಕುಲನಾಥ, ಡಾ. ಕೆ. ಎಂ. ಕೃಷ್ಣರಾವ್, ಶ್ರೀ ಹಣಮಂತ ತಾಸಗಾಂವಕರ್, ಪ್ರೊ. ನಾ. ಗೀತಾಚಾರ್ಯ, ಡಾ. ಸ್ವಾಮಿರಾವ್ ಕುಲಕರ್ಣಿ, ಶ್ರೀ ಹನುಮನಗೌಡ, ಶ್ರೀ ಎ. ಎನ್. ಅನಂತಸ್ವಾಮಿರಾವ್, ಡಾ. ನಾರಾಯಣಾಚಾರ್ಯ ಧೂಳಖೇಡ, ಶ್ರೀ ಶಾಶ್ವತಸ್ವಾಮಿ ಮುಕ್ಕುಂದಿಮಠ, ಶ್ರೀ ಕೆ. ಎಸ್. ವೆಂಕಟೇಶ್ ಮತ್ತು ಶ್ರೀ ಎಚ್. ಎಸ್. ಶ್ರೀನಿವಾಸಮೂರ್ತಿ ಅವರುಗಳು ಹಾಗೂ ಶ್ರೀಮತಿಯರಾದ ನಳಿನಿ ವೆಂಕಟೇಶ್, ಮೀನಾರಾವ್, ಲೀಲಾವತಿ ಎಸ್. ರಾವ್, ಡಾ. ಜಯಲಕ್ಷ್ಮಿ ಮಂಗಳಮೂರ್ತಿ, ಡಾ. ಅಕ್ಕಮಹಾದೇವಿ, ಶೀಲಾ ದಾಸ್, ಡಾ. ರಮಾ ಕಲ್ಲೂರಕರ, ಡಾ. ಸೀತಾ ಗುಡೂರ ಕುಲಕರ್ಣಿ, ಹೆಚ್. ಎಸ್. ಪದ್ಮಾ ಮೂರ್ತಿ, ಮತ್ತು ರುಕ್ಮಿಣಿ ಗಿರಿಮಾಜಿ ಅವರುಗಳು ತುಂಬ ಶ್ರಮವಹಿಸಿ ಸಂಪುಟಗಳನ್ನು ಸಿದ್ಧಪಡಿಸಿಕೊಟ್ಟಿದ್ದಾರೆ. ಅವರುಗಳಿಗೆ ಸಂಪಾದಕ ಮಂಡಳಿಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಈ ಮಧ್ಯೆ ಸಂಪಾದಕ ಸಮಿತಿಯ ಸದಸ್ಯರಲ್ಲೊಬ್ಬರಾದ ಪ್ರೊ. ಎಂ. ರಾಜಗೋಪಾಲಾಚಾರ್ಯರು ಮತ್ತು ಡಾ. ಮಂದಾಕಿನಿ ಹಾಗೂ ಸಂಪುಟ ಸಂಪಾದಕರಲ್ಲಿ ಒಬ್ಬರಾದ ಶ್ರೀ ಎಚ್. ಎಸ್. ಶ್ರೀನಿವಾಸಮೂರ್ತಿ, ಡಾ. ಕೆ.ಎಂ. ಕೃಷ್ಣರಾವ್, ಶ್ರೀಮತಿ ಪದ್ಮಾ ಮೂರ್ತಿ ಹಾಗೂ ಶ್ರೀ ಹನುಮನಗೌಡ ಮಾನ್ವಿ ಅವರು ನಮ್ಮನ್ನು ಅಗಲಿದ್ದು ದುಃಖದ ವಿಷಯವಾಗಿದೆ.

ಆಯಾ ಕಾಲದಲ್ಲಿ ಈ ಯೋಜನೆಗೆ ಸಹಕರಿಸಿದ ಹಾಗೂ ಈ ಯೋಜನೆಯ ಪರಿಕಲ್ಪನೆ ಯಶಸ್ವಿಯಾಗಿ ಕಾರ್ಯಾನುಷ್ಠಾನಕ್ಕೆ ಬರುವ ದಿಸೆಯಲ್ಲಿ ಸಹಕರಿಸಿದ ಈ ಹಿಂದಿನ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ವಿಶೇಷವಾಗಿ ಇಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಎಸ್. ಎಂ. ಕೃಷ್ಣ ಅವರಿಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆ ಶ್ರೀಮತಿ ರಾಣಿ ಸತೀಶ್ ಅವರಿಗೆ, ಇಲಾಖೆಯ ಹಿಂದಿನ ಕಾರ್ಯದರ್ಶಿಗಳಾದ ಶ್ರೀ ಚಂದ್ರಹಾಸ ಗುಪ್ತ ಮತ್ತು ಈಗಿನ ಕಾರ್ಯದರ್ಶಿಗಳಾದ ಶ್ರೀ ಸಿ. ಎಸ್. ಕೇದಾರ್ ಅವರಿಗೆ ನಮ್ಮ ನಮನಗಳು ಸಲ್ಲುತ್ತವೆ. ಈ ಕಾರ್ಯದಲ್ಲಿ ಈ ಯೋಜನೆಗೆ ನೆರವಾದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಹಿಂದಿನ ನಿರ್ದೇಶಕರುಗಳು ಹಾಗೂ ಈಗಿನ ನಿರ್ದೇಶಕರಾದ ಶ್ರೀ ವೈ. ಕೆ. ಮುದ್ದುಕೃಷ್ಣ, ಜಂಟಿ ನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ, ಸಹಾಯಕ ನಿರ್ದೇಶಕರಾದ ಶ್ರೀಮತಿ ವೈ.ಎಸ್. ವಿಜಯಲಕ್ಷ್ಮಿ ಮತ್ತು ಡಾ. ಮಂಜುಳಾ ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ. ಈ ಕಾರ್ಯದಲ್ಲಿ ನೆರವಾದ ಎಂ. ಎಸ್. ಐ. ಎಲ್. ಸಂಸ್ಥೆಯ ಅಧಿಕಾರಿ ಹಾಗೂ ಸಿಬ್ಬಂದಿವರ್ಗಕ್ಕೆ, ವಿಶೇಷವಾಗಿ ಶ್ರೀ ಎಂ. ರವಿಶಂಕರ್, ವಿಶೇಷಾಧಿಕಾರಿ, ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ.

ಇದು ಒಂದು ದೊಡ್ಡ ಯೋಜನೆ. ಇದರ ಸಂಪಾದನೆಯ ಸಮಸ್ಯೆಗಳು ದೊಡ್ಡವು. ಪಾಠಾಂತರ, ರೂಪಾಂತರ, ಪ್ರಕ್ಷಿಪ್ತತೆ ಇತ್ಯಾದಿಗಳ ಗೊಂದಲಕ್ಕೆ ಗುರಿಯಾಗುತ್ತ ಬಂದ ವ್ಯಾಪಕ ಪ್ರಮಾಣದ ಈ ದಾಸಸಾಹಿತ್ಯವನ್ನು ಒಂದೆಡೆ ಸಂಗ್ರಹಿಸುವುದು, ಪುನರುಕ್ತಿಗಳನ್ನು ಗುರುತಿಸುವುದು, ಅಂಕಿತ ಪಲ್ಲಟಗಳನ್ನು ಸರಿಪಡಿಸುವುದು, ಪ್ರಕ್ಷಿಪ್ತಗಳನ್ನು ದೂರೀಕರಿಸುವುದು, ಕೊನೆಯದಾಗಿ ಕೀರ್ತನೆಗಳನ್ನು ಶುದ್ಧೀಕರಿಸುವುದು ಎಂಥವರನ್ನೂ ಧೈರ್ಯಗೆಡಿಸುವ ಕೆಲಸ. ಹೀಗಿದ್ದೂ ದಾಸಸಾಹಿತ್ಯದ ಮೇಲಿನ ಗೌರವ ಪ್ರೀತಿಗಳು ನಮ್ಮಿಂದ ಈ ಕೆಲಸ ಮಾಡಿಸಿವೆ. ನಮ್ಮ ಶಕ್ತಿಗೆ ಮೀರಿ ಉಳಿದಿರಬಹುದಾದ ದೋಷಗಳನ್ನು ಮನ್ನಿಸಬೇಕೆಂದು ಕೋರುತ್ತೇವೆ. ಈ ಮೂವತ್ತೈದು ಸಂಪುಟಗಳನ್ನು ಸಹೃದಯ ಲೋಕಕ್ಕೆ ಅರ್ಪಿಸುತ್ತಿದ್ದೇವೆ. ಸಮಗ್ರ ದಾಸಸಾಹಿತ್ಯವು ಸುಲಭ ಬೆಲೆಯಲ್ಲಿ ಕನ್ನಡಿಗರ ಮನೆ–ಮನಗಳಲ್ಲಿ ಬೆಳಗಲೆಂದು ಹಾರೈಸುತ್ತೇವೆ.

ಸಂಪಾದಕ ಮಂಡಳಿ

ಪರಿವಿಡಿ

ಪ್ರಸ್ತಾವನೆ

ಪೀಠಿಕೆ

ಸಮಗ್ರ ದಾಸವಾಙ್ಮಯವು ವೈವಿಧ್ಯಮಯವಾಗಿ ಬೆಳೆದು ನಿಂತಿದೆ. ಪ್ರಾರಂಭದ ಘಟ್ಟದಲ್ಲಿ ಶ್ರೀಪಾದರಾಯರಿಂದ ಹಿಡಿದು ಇಂದಿನ ಆಧುನಿಕ ಸಂದರ್ಭದ ಕಾರ್ಪರ ನರಹರಿದಾಸರವರೆಗೆ ಇದರ ಬೆಳವಣಿಗೆಯನ್ನು ಗಮನಿಸಬಹುದಾಗಿದೆ. ಹೀಗಾಗಿ ಅಧ್ಯಯನದ ದೃಷ್ಟಿಯಿಂದ ಸಮಗ್ರ ದಾಸ ವಾಙ್ಮಯುವನ್ನು ಎರಡು ರೀತಿಯು ಶಿಸ್ತನ್ನಳವಡಿಸಿಕೊಂಡು ಗಮನಿಸಬೇಕೆನಿಸುತ್ತದೆ.

ಶ್ರೀಪಾದರಾಜರಿಂದ ವಿಜಯದಾಸರವರೆಗೆ ರಚನೆಗೊಂಡ ದಾಸ ವಾಙ್ಮಯವು ಶಿಷ್ಟ ಪರಂಪರೆಯಿಂದ ಬೆಳೆದು ಮಾಧ್ವ ಸಿದ್ಧಾಂತವನ್ನು ಅನುಸರಿಸಿ ರಚನೆಯಾಗಿದೆ. ಸಂಸ್ಕೃತ ಸಾಹಿತ್ಯದ ಶಾಸ್ತ್ರಗ್ರಂಥಗಳ ಅಧ್ಯಯನದ ಹಿನ್ನೆಲೆಯಲ್ಲಿ ಕನ್ನಡದಲ್ಲಿ ರಚನೆಗೊಂಡದ್ದಾಗಿದೆ. ಎರಡನೇ ಹಂತದಲ್ಲಿ ಬೆಳೆದು ಬಂದ ದಾಸ ವಾಙ್ಮಯವು ಜನಪದರಿಂದ ರಚನೆಯಾದುದಾಗಿದೆ. ಮಾಧ್ವಮತದ ಸಿದ್ಧಾಂತ ಹಾಗೂ ಮೊದಲನೇ ಘಟ್ಟದ ದಾಸವರೇಣ್ಯರ ಪ್ರಭಾವ ಸಹಜವಾಗಿಯೇ ಈ ಜನಪದ ಮೂಲದಿಂದ ಬಂದ ಹರಿದಾಸರ ಮೇಲೆ ಪ್ರಭಾವವನ್ನುಂಟು ಮಾಡಿದೆ. ಎರಡನೇ ಹಂತದಲ್ಲಿ ಬೆಳೆದು ನಿಂತಿರುವ ಈ ಜನಪದ ಹರಿದಾಸರು ಮೂಲ ಸಿದ್ಧಾಂತಕ್ಕನುಗುಣವಾಗಿಯೇ ಕೀರ್ತನೆಗಳನ್ನು ರಚಿಸಿದರು ಕೂಡಾ ಈ ಕೀರ್ತನೆಗಳಲ್ಲಿ ಜನಪದ ಸಂಸ್ಕೃತಿಯ

ಅನೇಕ ಸಂರಚನೆಗಳು ಕೂಡಿಕೊಂಡಿವೆ. ಹೀಗಾಗಿ ಈ ಎರಡನೇ ಹಂತದ ಹರಿದಾಸರ ಕೀರ್ತನೆಗಳನ್ನು ಜಾನಪದದ ನೆಲೆಯಿಂದ ನೋಡುವುದು ಕೂಡ ಇಂದಿನ ಅಗತ್ಯವಾಗಿದೆ.

ಈ ಸಂಪುಟದಲ್ಲಿ ಅಂತಹ ಜನಪದ ಪರಂಪರೆಯಿಂದ ಬಂದಂತಹ ನಾಲ್ಕು ಜನ ಹರಿದಾಸರ ಸಂಕೀರ್ತನೆಗಳನ್ನು ಸಂಪಾದಿಸಿಕೊಡಲಾಗಿದೆ. ೧೮-೧೯ನೇ ಶತಮಾನದಲ್ಲಿದ್ದ ಹರಿದಾಸರ ರಚನೆಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ. ಅಧ್ಯಾತ್ಮವೆಂಬುದು ಕೇವಲ ಯತಿಗಳ ಹಾಗೂ ಪಂಡಿತರ ಸೊತ್ತಾಗಿರುವಂಥ ಸಂದರ್ಭದಲ್ಲಿ ಸಾಮಾನ್ಯ ಜನವರ್ಗದಿಂದ ಬಂದ ಈ ಹರಿದಾಸರು ಸಂಸಾರದಲ್ಲಿದ್ದುಕೊಂಡೇ ಮಹತ್ತರವಾದುದನ್ನು ಸಾಧಿಸಿದರು. ತಮ್ಮ ದಿನನಿತ್ಯದ ದುಡಿಮೆಯ ಪ್ರತೀಕಗಳ ಮೂಲಕವೇ ಅಧ್ಯಾತ್ಮದ ಅನನ್ಯತೆಯನ್ನು ಕಟ್ಟಿ ನಿಲ್ಲಿಸಿದರು. ಸಂಸಾರದ ಜಂಜಾಟದಲ್ಲಿದ್ದುಕೊಂಡೇ ಭಕ್ತಿಯ ಮಹತ್ವವನ್ನು ಸಾರಿ ಹೇಳಿದರು. ಹೀಗಾಗಿ ಇವರಿಗೆ ಸಂಸಾರವೆಂಬುದು ಆಧ್ಯಾತ್ಮ ಸಾಧನೆಗೆ ತೊಡಕಾಗಿ ಕಾಣಲಿಲ್ಲ. ಈ ಸಾಮಾನ್ಯ ವರ್ಗದಿಂದ ಬಂದ ಹರಿದಾಸರ ವಿಶಿಷ್ಟತೆಯೇನೆಂದರೆ ಇವರು ಕೇವಲ ಕೀರ್ತನಗೆಳನ್ನು ಮಾತ್ರ ರಚಿಸಲಿಲ್ಲ. ಕೀರ್ತನೆ, ಕಥನ ಕವನಗಳೊಂದಿಗೆ, ಲಾವಣಿ, ಗೀಗೀ ಪದ, ಬಯಲಾಟದಂತಹ ಜನಪದ ಪ್ರಕಾರಗಳಲ್ಲಿಯೂ ಕಾವ್ಯ ರಚಿಸಿದರು.

ಈ ಸಂಪುಟದಲ್ಲಿ ಬರುವ ನಾಲ್ಕು ಜನ ಹರಿದಾಸರಲ್ಲಿ ಇಬ್ಬರು ಹರಿದಾಸರು ಸುಶಿಕ್ಷಿತ ಮನೆತನದಿಂದ ಬಂದರೆ ಇನ್ನಿಬ್ಬರು ಹರಿದಾಸರು ಸಾಮಾನ್ಯ ವರ್ಗದಿಂದ ಬಂದವರಾಗಿದ್ದಾರೆ. ಇವರು ಹುಟ್ಟಿ ಬಂದ ಪರಿಸರದಲ್ಲಿ ವ್ಯತ್ಯಾಸವಿದ್ದರೂ ಹರಿದಾಸ ಮತದ ತತ್ತ್ವಗಳ ಪಾಲನೆಯಲ್ಲಿ ಒಮ್ಮತವಿರುವುದನ್ನು ಕಾಣಬಹುದಾಗಿದೆ.

ಕನ್ನಡ ಸಾಹಿತ್ಯದಲ್ಲಿ ಸಾಮಾನ್ಯವಾಗಿ ಹದಿನೆಂಟು ಮತ್ತು ಹತ್ತೊಂಬತ್ತನೇ ಶತಮಾನವನ್ನು ಅಷ್ಟೊಂದು ಗಂಭೀರವಾಗಿ ಪರಿಗಣಿಸಿರುವುದಿಲ್ಲ. ಆದರೆ ಕುತೂಹಲದ ಸಂಗತಿಯೆಂದರೆ ಈ ಎರಡು ಶತಮಾನಗಳ ಅವಧಿಯಲ್ಲಿ

ಅಸಂಖ್ಯಾತ ತತ್ತ್ವಪದಕಾರರು, ಕೀರ್ತನಕಾರರು ಹುಟ್ಟಿಬೆಳೆದಿರುವುದು ಗಮನಾರ್ಹ ಸಂಗತಿಯೆನಿಸುತ್ತದೆ. ಹದಿನೈದು ಹದಿನಾರನೇ ಶತಮಾನದಲ್ಲಿದ್ದ ಶಿಷ್ಟ ಪರಂಪರೆ ಈ ಸಮುದಾಯದ ಮೇಲೆ ಪ್ರಭಾವ ಬೀರಿದ್ದರೂ ಸಾಮಾನ್ಯವರ್ಗದಿಂದ ಬಂದ ಈ ಹರಿದಾಸರು ರಚಿಸಿದ ರಚನೆಗಳು ಭಾಷೆ, ವಸ್ತು, ಅಭಿವ್ಯಕ್ತಿ ನೆಲೆಯಲ್ಲಿ ವಿಶಿಷ್ಟವಾಗಿಯೇ ನಿಲ್ಲುತ್ತವೆ.

ಈ ಸಂಪುಟದ ೧ನೇ ಭಾಗದಲ್ಲಿ ಬೆಳಗಾಂವ ಜಿಲ್ಲೆಯ ಗೋಕಾಕದ ಅನಂತಾದ್ರೀಶರ ಕಥನ ಕವನಗಳು, ಗುಲ್ಬರ್ಗ ಜಿಲ್ಲೆಯ ಮುದನೂರಿನ ಹೆನ್ನೆರಂಗದಾಸರ ಕೀರ್ತನೆಗಳು; ಹಾಗೂ ೨ನೇ ಭಾಗದಲ್ಲಿ ರಾಯಚೂರು ಜಿಲ್ಲೆಯ ಅಸ್ಕಿಹಾಳ ಗೋವಿಂದದಾಸರ ರಚನೆಗಳು ಮತ್ತು ರಾಯಚೂರು ಜಿಲ್ಲೆಯ ಕೊಪ್ಪರ ಗ್ರಾಮದ ಕಾರ್ಪರ ನರಹರಿದಾಸರ ಕೀರ್ತನೆಗಳು ಸೇರಿಕೊಂಡಿವೆ.

ಗೋಕಾವಿ ಅನಂತಾದ್ರೀಶರು

ಗೋಕಾವಿ ಅನಂತಾದ್ರೀಶರ ಹೆಸರು ಭೀಮಾಚಾರ್ಯರೆಂದು ಕೆಲವು ಗ್ರಂಥಗಳಲ್ಲಿ ಉಲ್ಲೇಖವಾಗಿದೆ (ಜಯಸಿಂಹರು ರಚಿಸಿದ ಶ್ರೀವಿಷ್ಣುತೀರ್ಥರ ಕೃತಿ) ಆದರೆ ನಾವು ಕ್ಷೇತ್ರಕಾರ್ಯ ಕೈಕೊಂಡು ಅವರ ವಂಶಸ್ಥರನ್ನು ಸಂದರ್ಶಿಸಿದಾಗ ಅವರ ಹೆಸರು ಅನಂತಾಚಾರ್ಯರೆಂದು ತಿಳಿದು ಬಂದಿತು. ಗಲಗಲಿ ಪಂಢರಿನಾಥಾಚಾರ್ಯರು ರಚಿಸಿರುವ "ಮಾಧ್ವವಾಙ್ಮಯ ತಪಸ್ವಿಗಳು" ಗ್ರಂಥದಲ್ಲಿಯೂ ಕೂಡಾ ಇವರ ಹೆಸರನ್ನು ಅನಂತಾಚಾರ್ಯರೆಂದೇ ನಮೂದಿಸಲಾಗಿದೆ.

ಅನಂತಾದ್ರೀಶರ ಕಾಲದ ಬಗೆಗೆ ಬೇರೆ ಬೇರೆ ವಿದ್ವಾಂಸರ ಅಭಿಪ್ರಾಯ-ಗಳನ್ನು ಗಮನಿಸಬಹುದಾಗಿದೆ. ಗಲಗಲಿ ಪಂಢರಿನಾಥಾಚಾರ್ಯರು ಇವರ ಕಾಲವನ್ನು ಕ್ರಿ.ಶ.೧೮೦೦ ರಿಂದ ೧೮೮೦ ಎಂದು ಗುರುತಿಸಿದ್ದಾರೆ. ಆದರೆ ಅನಂತಾಚಾರ್ಯರು ತಮ್ಮ ಗುರುಗಳಾದ ಶ್ರೀ ವಿಷ್ಣುತೀರ್ಥರನ್ನು ಕುರಿತು ಅನೇಕ ಕೃತಿಗಳನ್ನು ರಚಿಸಿದ್ದಾರೆ. ಶ್ರೀ ವಿಷ್ಣುತೀರ್ಥರ ಕಾಲವು ಕ್ರಿ.ಶ. ೧೭೫೬ ರಿಂದ ೧೮೦೬ರವರೆಗೆ ಇದ್ದದು ತಿಳಿದುಬರುತ್ತದೆ. ಹೀಗಿರುವಾಗ ಗಲಗಲಿಯವರು ಹೇಳುವಂತೆ ಅನಂತಾದ್ರೀಶರ ಕಾಲ ೧೮೦೦-೧೮೮೦ ಎಂಬುದು ಸೂಕ್ತವಾದುದಲ್ಲ. ಅನಂತಾದ್ರೀಶರ ಕಾಲವನ್ನು ಸದ್ಯಕ್ಕೆ ಕ್ರಿ.ಶ. ೭೭೬-೧೮೪೦

ವರೆಗೆ ಎಂದಿಟ್ಟುಕೊಳ್ಳಬಹುದಾಗಿದೆ. ಸಂಗೀತ ವಿದ್ವಾಂಸರಾಗಿದ್ದ ದಾಸರು ಜನಪದ ಪಾರಿಜಾತ ಆಟದಲ್ಲಿ ನೈಪುಣ್ಯತೆ ಗಳಿಸಿದ್ದರೆಂದು ತಿಳಿದುಬರುತ್ತದೆ. ಹೀಗಾಗಿ ಇವರ ರಚನೆಗಳ ಮೇಲೆಯೂ ಜನಪದ ಗಾಢ ಪ್ರಭಾವವನ್ನು ಕಾಣಬಹುದಾಗಿದೆ. ಅನಂತಾದ್ರೀಶರು ಚಿತ್ರಕಲೆಯಲ್ಲಿಯೂ ನಿಷ್ಣಾತರಾಗಿದ್ದರೆಂದು ಹೇಳಲಾಗುತ್ತದೆ. ಶ್ರೀ ಉದಯ ಕಡಕೋಳರು ದಾಸರ ವಂಶಸ್ಥರು. ಇವರು ಬೆಂಗಳೂರಿನಲ್ಲಿ ವಾಸವಾಗಿದ್ದಾರೆ. ಇವರ ಬಳಿ ದಾಸರು "ಶ್ರೀವೆಂಕಟೇಶ ಪಾರಿಜಾತ"ದ ಕಥನವನ್ನು ಚಿತ್ರಕಲೆಯಲ್ಲಿ ಬಿಡಿಸಿದ ಗ್ರಂಥವಿದೆ. ದಾಸರು ತಮ್ಮ ಜೀವಿತದ ಕೊನೆಯ ದಿನಗಳನ್ನು ಬೆಳಗಾಂವ ಜಿಲ್ಲೆಯ, ರಾಮದುರ್ಗ ತಾಲೂಕಿನ ಕಡಕೋಳು ಗ್ರಾಮದಲ್ಲಿ ಕಳೆದರೆಂದು ತಿಳಿದು ಬರುತ್ತದೆ.

ಅನಂತಾದ್ರೀಶರು ಏಳು ಸುದೀರ್ಘ ಕಥನಕಾವ್ಯಗಳನ್ನು, ನೂರಾರು ಕೀರ್ತನೆಗಳನ್ನು ರಚಿಸಿದ್ದಾರೆಂದು ಹೇಳಲಾಗುತ್ತದೆ. ಆದರೆ ನಮಗೆ ದೊರೆತ ಆಧಾರದ ಮೇಲೆ ಇವರು ಏಳು ಕಥನ ಕಾವ್ಯಗಳನ್ನು, ಏಳು ಕೀರ್ತನೆಗಳನ್ನು ರಚಿಸಿರುವುದು ಸ್ಪಷ್ಟವಾಗುತ್ತದೆ.

ಹೆನ್ನೆರಂಗದಾಸರು

ಶ್ರೀ ಹೆನ್ನೆರಂಗದಾಸರ ಜನ್ಮಸ್ಥಳ ಹಾಗೂ ಅವರ ಜೀವನ ವಿವರಗಳಿಗೆ ಸಂಬಂಧಿಸಿದಂತೆ ಅಧಿಕೃತವಾದ ಮಾಹಿತಿ ದೊರಕುವುದಿಲ್ಲ. 'ಹೆನ್ನೆರಂಗವಿಠಲ' ಎಂಬ ಅಂಕಿತನಾಮದಲ್ಲಿ ಅವರು ಕೀರ್ತನೆಗಳನ್ನು ರಚಿಸಿದ್ದಾರೆ. ಅಂಕಿತದಲ್ಲಿ ಹೊನ್ನರಂಗ, ಹೆನ್ನರಂಗ, ಹೊನ್ನವಿಠಲ ರೂಪಗಳೂ ಕಂಡುಬರುತ್ತದೆ. ಮದ್ರಾಸ್ ಪ್ರಾಂತದ ಅನಂತಪುರ ಜಿಲ್ಲೆಯ ಗುತ್ತಿ ತಾಲೂಕಿನಲ್ಲಿ ಪೆನ್ನ ಅಹೋಬಲವೆಂಬ ಕ್ಷೇತ್ರವಿದೆ. ಅಲ್ಲಿಯ ನರಸಿಂಹ ದೇವರು ಸುಪ್ರಸಿದ್ಧವಾಗಿದೆ. ಈ ಕ್ಷೇತ್ರದ ಹತ್ತಿರವೇ ಪಿನಾಕಿನಿ ನದಿ ಹರಿಯುತ್ತದೆ. ಮೈಸೂರು ಪ್ರಾಂತದ ನಂದಿದುರ್ಗದಲ್ಲಿ ಹುಟ್ಟಿದ ಈ ನದಿಗೆ "ಪೆನ್ನೆರುಪೆನ್ನ" ಎಂದು ಆ ಪ್ರದೇಶದ ಜನ ಕರೆಯುತ್ತಾರೆ. ಹೀಗಾಗಿ ನರಸಿಂಹ ದೇವರ ಭಕ್ತರಾದ ಹೆನ್ನೆರಂಗದಾಸರು "ಹೆನ್ನೆರಂಗವಿಠಲ" ಎಂಬ ಮುದ್ರಿಕೆಯಿಂದ ತಮ್ಮ ಕೀರ್ತನೆಗಳನ್ನು ರಚಿಸಿದ್ದಾರೆ. ಹೀಗಾಗಿ ಇವರು ಮದ್ರಾಸ್ ಪ್ರಾಂತದ ಅನಂತಪುರ ಜಿಲ್ಲೆಯಲ್ಲಿಯೇ ಜನಿಸಿರಬೇಕೆಂದು ಊಹಿಸಬಹುದಾಗಿದೆ. ಕನಕಗಿರಿಯ ರಾಜಗೋಪಾಲಾಚಾರ್ಯರು ಕ್ರಿ.ಶ.

೧೯೩೯ರಲ್ಲಿ ಪ್ರಕಟಿಸಿರುವ "ಹೆನ್ನೆರಂಗ ವಿಠಲರ ಕೀರ್ತನೆಗಳು" ಪುಸ್ತಕದಲ್ಲಿ ಇದೇ ಅಭಿಪ್ರಾಯವನ್ನು ತಾಳಿದ್ದಾರೆ. ಮುಂದೆ ಹೆನ್ನೆರಂಗದಾಸರು ಗುಲಬರ್ಗಾ ಜಿಲ್ಲೆಯ ಸುರಪುರ ತಾಲೂಕಿನ ಮುದನೂರು ಗ್ರಾಮದಲ್ಲಿ ಬಂದು ನೆಲೆಸಿರಬಹುದಾಗಿದೆ. ಏಳು ತೀರ್ಥಗಳ (ರಾಮತೀರ್ಥ, ಹಾಲುತೀರ್ಥ, ಸಂಗಮತೀರ್ಥ, ಪಾಂಡುತೀರ್ಥ, ಮರುಳತೀರ್ಥ, ಸಕ್ಕರೆತೀರ್ಥ) ಸಂಗಮ ಕ್ಷೇತ್ರವೆಂದು ಮುದನೂರು ಗ್ರಾಮ ಪ್ರಸಿದ್ಧವಾಗಿದೆ. ಅಲ್ಲದೆ ಇಲ್ಲಿ ಏಕಶಿಲೆಯಲ್ಲಿ ಸ್ವಯಂಭೂ ರುಕ್ಮಿಣಿ ಪಾಂಡುರಂಗದೇವರು, ವೇಣುಗೋಪಾಲದೇವರು ಮತ್ತು ನರಸಿಂಹದೇವರು ಆವಿರ್ಭವಿಸಿದ ತ್ರಿಮೂರ್ತಿ ಇದೆ. ಈ ಕ್ಷೇತ್ರಕ್ಕೆ ಹೆನ್ನೆರಂಗದಾಸರು ಭಕ್ತಿಯಿಂದ ನಡೆದುಕೊಳ್ಳುತ್ತಿದ್ದರೆಂದು ತಿಳಿದುಬರುತ್ತದೆ.

ಹೆನ್ನೆರಂಗದಾಸರ ಕಾಲನಿರ್ಣಯವೂ ಸಂದಿಗ್ಧವಾಗಿದೆ. ಕನಕಗಿರಿಯ ರಾಜಗೋಪಾಲಾಚಾರ್ಯರ ಪ್ರಕಾರ ಹೆನ್ನೆರಂಗವಿಠಲರು ಸುರಪುರದ ವಾಸುದೇವ ನಾಯಕರಂಥ ದೊರೆತನದಲ್ಲಿ ಬಾಳಿದರೆಂದು ತಿಳಿದು ಬರುತ್ತದೆ. ಆದ್ದರಿಂದ ಸುರಪುರದ ವಾಸುದೇವ ನಾಯಕರ ಕಾಲವನ್ನು ಗಮನದಲ್ಲಿಟ್ಟುಕೊಂಡರೆ ಹೆನ್ನೆರಂಗದಾಸರು ಕ್ರಿ.ಶ. ೧೮೦೦–೧೮೬೦ರ ಸುಮಾರಿಗೆ ಬಾಳಿರಬಹುದೆಂದು ತಿಳಿದುಬರುತ್ತದೆ.

ಶ್ರೀ ಅಸ್ಕಿಹಾಳ ಗೋವಿಂದದಾಸರು

ಶ್ರೀ ಗೋವಿಂದದಾಸರ ಜನ್ಮಸ್ಥಳ ರಾಯಚೂರು ಜಿಲ್ಲೆಯ ಅಸ್ಕಿಹಾಳ ಗ್ರಾಮ. ಕ್ರಿ.ಶ. ೧೮೯೧ರಲ್ಲಿ ದಾಸರ ಜನನವೆಂದು ತಿಳಿದು ಬರುತ್ತದೆ. ತಂದೆ ಶ್ರೀ ಗಿರಿದಾಸರು. ಚಿಕ್ಕವಯಸ್ಸಿನಲ್ಲಿಯೇ ತಂದೆ–ತಾಯಿಯರನ್ನು ಕಳೆದುಕೊಂಡರು. ದಾಸರ ಬಾಲ್ಯವೆಲ್ಲ ಬಡತನದಲ್ಲಿಯೇ ಕಳೆಯಿತು. ದಾಸರು ತುಳಸಮ್ಮ ಎನ್ನುವವರೊಡನೆ ವಿವಾಹವಾಗಿದ್ದು, ಹುಟ್ಟಿದ ಒಂದು ಗಂಡುಮಗುವೂ ಅಸುನೀಗಿದಾಗ ದಾಸರು ಸಹಜವಾಗಿ ಆಧ್ಯಾತ್ಮದತ್ತ ಒಲಿದರು.

ಗೋವಿಂದದಾಸರದು ಅತ್ಯಂತ ಜನಪ್ರಿಯ ವ್ಯಕ್ತಿತ್ವವಾಗಿದೆ. ಜನಸಾಮಾನ್ಯ–ರೊಡನೆ ಒಂದಾಗಿ ಬಾಳಿದ ದಾಸರು, ಆಧ್ಯಾತ್ಮದ ಸಾಧನೆಯ ಪಥಕ್ಕೆ

ಜನಮನವನ್ನು ಅಣಿಗೊಳಿಸಿದರು. ಜನರ ಕಷ್ಟಕಾರ್ಪಣ್ಯಗಳಿಗೆ ಸ್ಪಂದಿಸುತ್ತ, ಸಾಮಾಜಿಕ ತಿಳಿವನ್ನು ನೀಡುತ್ತ, ಸತ್ಸಂಗ, ನಿರಂತರ ಚರ್ಚೆ, ಭಜನೆ ಮುಂತಾದ ಸಾಮೂಹಿಕ, ಧಾರ್ಮಿಕ ಚಟುವಟಿಕೆಗಳಲ್ಲಿ ಸಮಾಜದ ಎಲ್ಲ ವರ್ಗದವರನ್ನೂ ತೊಡಗಿಸಿದರು. ದಾಸರು ಅಸ್ಗಿಹಾಳಿನ ಗೌಡರ ಸಂಗಪ್ಪನಿಗೆ ನೀಡಿದ ರತ್ನಗರ್ಭ ಸಾಲಿಗ್ರಾಮವನ್ನು ಇಂದಿಗೂ ನೋಡಬಹುದಾಗಿದೆ. ಇವರೆಲ್ಲರೂ ಪ್ರತಿನಿತ್ಯ ಸೇರುವ ಸ್ಥಳವನ್ನು "ರಘುವೀರಮಂದಿರ"ವೆಂದು ದಾಸರು ಕರೆದಿದ್ದಾರೆ. ಸಂಪ್ರದಾಯದ, ಮಧ್ವಸಿದ್ಧಾಂತಗಳ ಚೌಕಟ್ಟಿನಲ್ಲಿದ್ದೇ ತಮ್ಮ ಉದಾತ್ತವಾದ ಕ್ರಾಂತಿಕಾರಕ ನಿಲುವನ್ನು ತಳೆದ ದಾಸರು ಇತರ ಮತದ ಶಿಷ್ಯರಿಗೂ ದೀಕ್ಷೆಯನ್ನು ನೀಡಿದ್ದಾರೆ. ಈ ಕಾರ್ಯಕ್ಕಾಗಿ ತಮ್ಮ ಮಠದ ಗುರುಗಳಿಂದ ಬಹಿಷ್ಕಾರವನ್ನೂ ಎದುರಿಸಿದರು. ದಾಸರ ಸಾಮಾಜಿಕ ಕಳಕಳಿಯನ್ನು ಅರಿತ ಗುರುಗಳು ತಾವೇ ಕರೆಯಿಸಿ ಸಂತೈಸಿದ ವಿಷಯ ತಿಳಿದುಬರುತ್ತದೆ. ದಾಸರು ತಮ್ಮ ಶಿಷ್ಯರೊಡನೆ ಭಜನೆ ಮಾಡುವಾಗ ಮಧ್ಯದಲ್ಲಿ ಕರ್ಪೂರದ ಆರತಿಯನ್ನು ಉರಿಸುತ್ತಿದ್ದು, ಇಂದಿಗೂ ಇವರ ಶಿಷ್ಯರು ಇದೇ ಭಜನಾಕ್ರಮವನ್ನು ಅನುಸರಿಸುತ್ತಿದ್ದಾರೆ. ಅವರ ಈ ಸಾಮಾಜಿಕ ಕಾರ್ಯಕ್ಷೇತ್ರದಂತೆ ಸಾಹಿತ್ಯಕ ಕ್ಷೇತ್ರವೂ ಹೊಸತನದಿಂದ ಕೂಡಿದುದಾಗಿದೆ. ಇಲ್ಲಿಯವರೆಗೆ ಕೀರ್ತನೆ, ಸುಳಾದಿ, ಉಗಾಭೋಗ ಮುಂತಾದ ಪ್ರಕಾರಗಳಲ್ಲಿ ಕಂಡುಬರುತ್ತಿದ್ದ ಹರಿದಾಸಸಾಹಿತ್ಯ ದಾಸರ ಉದಾತ್ತ ಮನೋಭೂಮಿಕೆಯಿಂದಾಗಿ ಲಾವಣಿ, ಗೀಗಿ, ಬಯಲಾಟದಂತಹ ಜನಪದ ಮಾಧ್ಯಮಗಳಲ್ಲೂ ಪ್ರವಹಿಸಿತು. ಗೋವಿಂದದಾಸರು ಈ ಎಲ್ಲ ಮಾಧ್ಯಮಗಳಲ್ಲೂ ಸಾಹಿತ್ಯರಚನೆಗೈದಿದ್ದಾರೆ. ಅವರು ರಚಿಸಿದ 'ಕಲಿಯುಗ ಲಾವಣಿ' ಪತನಗೊಂಡ ಸಾಮಾಜಿಕ ಮೌಲ್ಯಗಳನ್ನು ಚಿತ್ರಿಸುತ್ತದೆ. "ಕನಕಾಂಗಿ ಕಲ್ಯಾಣ" ಬಯಲಾಟವು ಇಂದಿಗೂ ಪ್ರದರ್ಶನವನ್ನು ಕಾಣುತ್ತಿದ್ದು ಮಾನವಪ್ರೇಮ, ಬಂಧುತ್ವ, ಅಂತಃಕರಣ, ಮುಂತಾದ ಮಾನವೀಯ ಮೌಲ್ಯಗಳನ್ನು ಸಾರುತ್ತದೆ. ದಾಸರು ರಚಿಸಿದ ಕೀರ್ತನೆಗಳಲ್ಲಿ ಕೇವಲ ಮೂವತ್ತು ಮಾತ್ರ ಉಪಲಬ್ಧವಾಗಿವೆ. ರಾಯಚೂರಿನಲ್ಲಿ ದಾಸರ ಸಂಬಂಧಿಗಳು ವಾಸವಾಗಿದ್ದು ಅವರ ಮನೆಯಲ್ಲಿ ದಾಸರು ಉಪಯೋಗಿಸುತ್ತಿದ್ದ ಹಾರ್ಮೋನಿಯಮ್, ತಂಬೂರಿ, ವೀಣೆ, ತಾಳ, ಚಿಟಿಕೆ

ಮುಂತಾದ ಸಂಗೀತ ಉಪಕರಣಗಳಿವೆ. ದಾಸರು ಕೇವಲ ಮೂವತ್ತನೆಯ ವರ್ಷದಲ್ಲಿಯೇ (ಕ್ರಿ.ಶ. ೧೯೧೯ ರಲ್ಲಿಯೇ) ಕಣ್ಮರೆಯಾದರು.

ಶ್ರೀ ಕಾರ್ಪರ ನರಹರಿದಾಸರು

ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನಿಂದ ಒಂಬತ್ತು ಮೈಲಿಗಳ ಅಂತರದಲ್ಲಿ ಕೊಪ್ಪರ ಗ್ರಾಮವಿದೆ. ಇಲ್ಲಿ ಕೃಷ್ಣಾನದಿ ಹರಿಯುತ್ತಿದ್ದು ಕಾರ್ಪರ ಕ್ಷೇತ್ರವೆಂದೇ ಪ್ರಸಿದ್ಧಿ ಪಡೆದಿದೆ. ಹಿಂದೆ "ಕಾರ್ಪರ" ಹೆಸರಿನ ಋಷಿಯು ಈ ಸ್ಥಳದಲ್ಲಿ ತಪಗೈದುದರಿಂದ ಕಾರ್ಪರ ಕ್ಷೇತ್ರವೆಂದು ಹೆಸರಾಗಿದೆ. ಕೃಷ್ಣಾನದಿಯ ದಡದಲ್ಲಿ ಅಶ್ವತ್ಥವೃಕ್ಷವಿದ್ದು, ಈ ವೃಕ್ಷದಲ್ಲಿ ಶ್ರೀ ಲಕ್ಷ್ಮೀನರಸಿಂಹದೇವರ ಷೋಡಶಬಾಹು ಸಾಲಿಗ್ರಾಮ ಉದ್ಭವವಾಗಿದೆ.

ಈ ಕ್ಷೇತ್ರವು ಹರಿದಾಸ ಸಾಹಿತ್ಯದ ಇತಿಹಾಸದಲ್ಲಿಯೂ ತನ್ನ ವೈಶಿಷ್ಟ್ಯತೆಯನ್ನು ಮೆರೆದಿದೆ. ದಾಸಕೂಟದ ಪ್ರಥಮ ಹಂತದ ಸಂಘಟಕರಲ್ಲೊಬ್ಬರಾದ ಶ್ರೀಪಾದರಾಜ ಯತಿಗಳು ತಮ್ಮ ಗುರುಗಳೊಡನೆ ಈ ಕಾರ್ಪರಕ್ಷೇತ್ರಕ್ಕೆ ಆಗಮಿಸಿದ್ದ ವಿಷಯ ತಿಳಿದುಬರುತ್ತದೆ. ಇದೇ ಸಂದರ್ಭದಲ್ಲಿ ಉತ್ತರಾದಿ ಮಠದ ರಘುನಾಥ ತೀರ್ಥರು ಈ ಕ್ಷೇತ್ರಕ್ಕೆ ಆಗಮಿಸಿದರು. ಶ್ರೀಲಕ್ಷ್ಮೀನರಸಿಂಹದೇವರ ಸನ್ನಿಧಿಯಲ್ಲಿ ಪರಸ್ಪರ ಯತಿವರ್ಯರು ಸೇರಿದ ಸಂದರ್ಭದಲ್ಲಿ ಬಾಲಯತಿ ಶ್ರೀಲಕ್ಷ್ಮೀನಾರಾಯ-ಣಮುನಿ (ಶ್ರೀ ಶ್ರೀಪಾದರಾಜರು)ಗಳ ಅಸ್ಖಲಿತ ವಾಗ್ವೈಖರಿಯನ್ನು, ಪಾಂಡಿತ್ಯವನ್ನು, ಸುಧಾಗ್ರಂಥಾದಿ ತತ್ವಜ್ಞಾನವನ್ನು ಮೆಚ್ಚಿದ ರಘುನಾಥತೀರ್ಥರು ಹರ್ಷಿಸಿದರು. ಶ್ರೀಲಕ್ಷ್ಮೀನಾರಾಯಣಮುನಿ ರಘುನಾಥತೀರ್ಥರನ್ನು ಕುರಿತು ತಾವು ಶ್ರೀಶ್ರೀಗಳವರು, ನಾನು ಚಿಕ್ಕವನು ಎಂದಾಗ ರಘುನಾಥತೀರ್ಥರು "ನಾವು ಶ್ರೀಗಳವರಾದರೆ ನೀನು ಶ್ರೀಪಾದರಾಜ" ಎಂದು ಬಿರುದಿತ್ತು ಅಭಿನಂದಿಸಿದರು. ಅಂದಿನಿಂದ ಶ್ರೀ ಶ್ರೀಪಾದರಾಜರೆಂದೇ ಅಭಿಧೇಯ ಪಡೆದು ಭಾರತದಾದ್ಯಂತ ಹರಿದಾಸ ಭಕ್ತಿಪಂಥವನ್ನೂ, ಧಾರ್ಮಿಕ ಸಾಹಿತ್ಯವನ್ನೂ ಬೆಳೆಸಿದವರು ಶ್ರೀಪಾದರಾಜರು. ಸಂಸ್ಕೃತ ವಾಙ್ಮಯದಲ್ಲಿ ಪ್ರಕಾಂಡ ಪಾಂಡಿತ್ಯ ಪಡೆದಿದ್ದರೂ, ಕೀರ್ತನೆ, ಉಗಾಭೋಗ, ಸುಳಾದಿ ಮುಂತಾದ ಗೇಯ ಸಾಹಿತ್ಯ ಪ್ರಕಾರವನ್ನು ಕನ್ನಡದಲ್ಲಿ

ರಚಿಸಿ ಅವುಗಳನ್ನು ಪೂಜಾಸಂದರ್ಭದಲ್ಲಿ, ನರ್ತನರೂಪದಿಂದ ಹೇಳಿಸುವ ಪದ್ಧತಿಯನ್ನು ಜಾರಿಗೆ ತಂದರು. ವೈಷ್ಣವದೀಕ್ಷೆ, ದ್ವೈತತತ್ವಪ್ರಸಾರ, ಭಕ್ತಿಪಂಥದ ಚಾಲಕರಾದ ಶ್ರೀ ಶ್ರೀಪಾದರಾಜರು ಕಾರ್ಪರ ಕ್ಷೇತ್ರದ ಲಕ್ಷ್ಮೀನರಸಿಂಹ ದೇವನನ್ನು ದರ್ಶಿಸಿ ಆರಾಧಿಸಿದ್ದರು.

ಈ ಕಾರ್ಪರ ಕ್ಷೇತ್ರದ ಲಕ್ಷ್ಮೀನರಸಿಂಹ ದೇವನ ಅರ್ಚಕ ಮನೆತನದಲ್ಲಿ ಜನಿಸಿದವರು ಶ್ರೀ ನರಹರಿದಾಸರು. ಇವರ ಹೆಸರು ಶ್ರೀ ಗಿರಿಯಾಚಾರ್ಯರು. ತಂದೆ ಶ್ರೀ ಭೀಮಸೇನಾಚಾರ್ಯರು, ತಾಯಿ ನರಸಮ್ಮ. ಮಂತ್ರಾಲಯದ ಶ್ರೀರಾಘವೇಂದ್ರಸ್ವಾಮಿಗಳ ಅಂತರಂಗ ಭಕ್ತರಾದ ಶ್ರೀ ಯಳಮೇಲ ವಿಠಲಾಚಾರ್ಯರು ಸದ್ಭಕ್ತರು, ವಿದ್ವಾಂಸರೆಂದು ಪ್ರಸಿದ್ಧಿ ಪಡೆದಿದ್ದರು. ಶ್ರೀ ಗಿರಿಯಾಚಾರ್ಯರ ಪ್ರಾರಂಭಿಕ ವಿದ್ಯಾಭ್ಯಾಸವು ಶ್ರೀ ವಿಠಲಾಚಾರ್ಯರ ಹತ್ತಿರ ಜರುಗಿತು. ವ್ಯಾಕರಣ, ಸಾಹಿತ್ಯ, ವೇದಾಂತ ಮುಂತಾದ ಸಂಸ್ಕೃತ-ವಾಙ್ಮಯದಲ್ಲಿ ಪ್ರಾವೀಣ್ಯವನ್ನು ಪಡೆದರು. ಇದರೊಡನೆ ವ್ಯಾಸ ದಾಸ ಸಾಹಿತ್ಯಾಧ್ಯಯನ, ಅರ್ಚಕ ವೃತ್ತಿ, ಭಾಗವತ ಪ್ರವಚನದಂತಹ ಭಕ್ತಿಯ ಪರಿಸರದಲ್ಲಿಯೇ, ದಾಸರು ಬಾಳಿದರು. ಭಕ್ತಕವಿಗಳಾದ ದಾಸರು "ತಮ್ಮ ಆರಾಧ್ಯದೇವನಾದ ಶ್ರೀಲಕ್ಷ್ಮೀನರಸಿಂಹ ದೇವರ ಹೆಸರಿನಲ್ಲಿ "ಕಾರ್ಪರ ನರಹರಿ" ಎನ್ನುವ ಅಂಕಿತವನ್ನು ಹೊಂದಿದರು. ದಾಸರು ಸುಮಾರು ೧೨೦ ಕೀರ್ತನಗಳನ್ನು ರಚಿಸಿದ್ದಾರೆ. ಬಯಲಾಟದಂತಹ ಜಾನಪದ ಮಾಧ್ಯಮದಲ್ಲಿಯೂ ಒಲವುಳ್ಳ ದಾಸರು ಬಯಲಾಟಗಳಿಗೆ ಪದಗಳನ್ನು ರಚಿಸಿಕೊಟ್ಟಿದ್ದಾರೆ. ಇವರ ಕೀರ್ತನಗಳು ಕರ್ನಾಟಕದಾದ್ಯಂತ ಪ್ರಚಲಿತವಿವೆ.

ಶ್ರೀ ನರಹರಿ ದಾಸರಿಂದ ಅಂಕಿತೋಪದೇಶ ಪಡೆದ ಶಿಷ್ಯರು ಇಂದು "ದಾಸ" ಪಥದಲ್ಲಿ ಮುನ್ನಡೆದು ಭಕ್ತಿ ಸಾಹಿತ್ಯವನ್ನು ರಚಿಸಿದ್ದಾರೆ. ಶ್ರೀ ರಂಗನಾಥದಾಸರು, ಶ್ರೀವೆಂಕಟೇಶದಾಸರು, ಶ್ರೀ ಲಕುಮೀಶದಾಸರು, "ಶ್ರೀಲಕುಮಿಪ್ರಿಯ"ರು (ಶ್ರೀಮತಿ ಲಕ್ಷ್ಮೀಬಾಯಿ) ದಾಸರನ್ನು ಕುರಿತು ಸ್ತುತಿಪದಗಳನ್ನು ರಚಿಸಿದ್ದಾರೆ.

ಪರಮ ವೇದಾಂತಿಗಳು, ಸದ್ವೈಷ್ಣವದೀಕ್ಷಿತರು, ಸತ್ತತ್ತ್ವ ಪ್ರಸಾರಕರು, ಭಾಗವತ ಧರ್ಮಿಗಳುಯೆನಿಸಿದ ಶ್ರೀನರಹರಿದಾಸರು ಪ್ರಾತಃಸ್ಮರಣೀಯರೆನಿಸಿದ್ದಾರೆ. ಅರ್ಚನ, ಕೀರ್ತನ, ಪ್ರವಚನ, ಮಾಧ್ಯಮಗಳಿಂದ ಭಕ್ತಿಕ್ಷೇತ್ರಕ್ಕೆ ಅಪಾರ ಸೇವೆ ಸಲ್ಲಿಸಿದ ದಾಸರು ಕ್ರಿ.ಶ. ೧೮೯೬ ರಿಂದ ೧೯೭೯ರವರೆಗೆ ಬಾಳಿದರು. ದಾಸರ ಪತ್ನಿ ಗ.ಭಾ.ಸುಭದ್ರಮ್ಮನವರು ಕೊಪ್ಪರ ಗ್ರಾಮದಲ್ಲಿ ವಾಸಿಸುತ್ತಿದ್ದಾರೆ. ದಾಸರು ಇಬ್ಬರು ಪುತ್ರರನ್ನು ಪಡೆದಿದ್ದು, ಹಿರಿಯರಾದ ಶ್ರೀ ಅನಂತಾಚಾರ್ಯರು ಪಂಡಿತರೆನಿಸಿದರು (ದಿವಂಗತರಾಗಿದ್ದಾರೆ). ಇನ್ನೋರ್ವ ಪುತ್ರರಾದ ಶ್ರೀ ಕೆ.ಜಯಾಚಾರ್ಯರು (ನಿವೃತ್ತ ನಿರ್ದೇಶಕರು, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು) ದಕ್ಷ ಆಡಳಿತಗಾರರೆಂದು ಪ್ರಸಿದ್ಧಿ ಪಡೆದವರು. ತಮ್ಮ ನಿವೃತ್ತ ಜೀವನವನ್ನು ಆಧ್ಯಾತ್ಮಿಕ ಸಾಧನೆಯೊಡನೆ, ಈ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಯಲ್ಲಿ ತೊಡಗಿಸಿದ್ದಾರೆ.

ಸಂಗ್ರಹ–ಸಂಸ್ಕರಣ–ಸಂಪಾದನೆ

ಈ ಸಂಪುಟದಲ್ಲಿ ಬರುವ ನಾಲ್ಕು ಜನ ಹರಿದಾಸರ ಕೀರ್ತನೆಗಳ ಸಂಗ್ರಹಕ್ಕೆ ಸಂಬಂಧಿಸಿದಂತೆ ಅನೇಕ ಆಕರಗಳನ್ನು ಬಳಸಿಕೊಳ್ಳಲಾಗಿದೆ. ಇಲ್ಲಿಯ ಕೀರ್ತನೆಗಳನ್ನು ಮುಖ್ಯವಾಗಿ ಎರಡು ರೀತಿಯ ಆಕರಗಳನ್ನಿಟ್ಟುಕೊಂಡು ಜೋಡಿಸಲಾಗಿದೆ. ಇಲ್ಲಿಯ ಕೆಲವು ದಾಸರ ಕೀರ್ತನಗಳು ಈಗಾಗಲೆ ಪ್ರಕಟವಾಗಿವೆ. ಇನ್ನು ಕೆಲವು ದಾಸರ ಕೀರ್ತನಗಳು, ಈ ಸಂಪುಟದ ಮೂಲಕ ಮೊದಲಬಾರಿಗೆ ಪ್ರಕಟಗೊಳ್ಳುತ್ತಲಿವೆ. ಇವುಗಳಿಗೆ ಸಂಬಂಧಿಸಿದ ವಿವರಗಳನ್ನು ಗಮನಿಸಬಹುದಾಗಿದೆ.

ಶ್ರೀ ಗೋಕಾವಿ ಅನಂತಾದ್ರೀಶರ ರಚನೆಗಳ ಸಂಗ್ರಹಕ್ಕೆ ಸಂಬಂಧಿಸಿದಂತೆ ಈಗಾಗಲೇ ಪ್ರಕಟವಾಗಿರುವ ಮೂರು ಪಠ್ಯಗಳನ್ನು ಆಕರವಾಗಿಟ್ಟುಕೊಳ್ಳಲಾಗಿದೆ. ಅನಂತಾದ್ರೀಶದಾಸರು ವೆಂಕಟೇಶ ಪಾರಿಜಾತ, ಶಿವಪಾರಿಜಾತ, ಧ್ರುವಚರಿತ್ರೆ ಹಾಗೂ ಪ್ರಹ್ಲಾದ ಚರಿತ್ರೆ ಮುಂತಾದ ಕಥನಕಾವ್ಯಗಳನ್ನು, ಕೆಲವು ಕೀರ್ತನೆಗಳನ್ನು

ರಚಿಸಿದ್ದಾರೆ. ಇವುಗಳಲ್ಲಿ ವೆಂಕಟೇಶ ಪಾರಿಜಾತ ಕಥನಕಾವ್ಯವನ್ನು ಗದಗಿನ (ಹೊಂಬಾಳಿ ಬಂಧುಗಳು) ಪ್ರಕಾಶನದವರು ಕ್ರಿ.ಶ. ೧೯೬೦ ರಲ್ಲಿ ಪ್ರಕಟಿಸಿದ್ದಾರೆ. "ಶ್ರೀ ಕೃಷ್ಣಚರಿತ್ರೆ"ಯನ್ನು ೧೯೩೫ ರಲ್ಲಿ ದಿ॥ ಬಿಂದಾಚಾರ್ಯಜಯತೀರ್ಥಾಚಾರ್ಯ ಗೋಕಾಕ ಇವರು ಪ್ರಕಟಿಸಿದ್ದರು. "ಪ್ರಹ್ಲಾದ ಚರಿತ್ರೆ" ಕಥನಕಾವ್ಯವು ಇದೇ ಪ್ರಕಾಶನದಿಂದ ಕ್ರಿ.ಶ. ೧೯೮೦ರಲ್ಲಿ ಪ್ರಕಟವಾಗಿದೆ. ಇವೆರಡೂ ಪ್ರಕಟಿತ ಕೃತಿಗಳಲ್ಲಿರುವ ಹಾಡುಗಳನ್ನು ಸಂಗ್ರಹಿಸಿ ಇಲ್ಲಿ ಕೊಡಲಾಗಿದೆ. ಈ ಪ್ರಕಟಿತ ಹಾಡುಗಳಲ್ಲಿ ಅನೇಕ ಅಶುದ್ಧ ಪಾಠಗಳಿದ್ದು ಅವುಗಳನ್ನು ಪರಿಷ್ಕರಿಸಿ ಶುದ್ಧ ಪಾಠಗಳನ್ನು ಮಾತ್ರ ಇಲ್ಲಿ ಸಂಪಾದಿಸಲಾಗಿದೆ. "ಶಿವಪಾರಿಜಾತ" ಕಥನ ಕಾವ್ಯವು ಜೀರ್ಣಾವಸ್ಥೆಯಲ್ಲಿರುವ ಮುದ್ರಿತ ಕೃತಿಯಾಗಿದ್ದು ಈ ಕೃತಿಯ ಸಂಪಾದಕರ, ಪ್ರಕಾಶಕರ ವಿವರಗಳು ತಿಳಿದುಬಂದಿಲ್ಲ. ನಾವು ಕ್ಷೇತ್ರಕಾರ್ಯ ಮಾಡಿದಾಗ ಧ್ವನಿ ಮುದ್ರಿಸಿಕೊಂಡ ವಕ್ತೃಗಳ ಹಾಡುಗಳನ್ನು ಈ ಜೀರ್ಣಗೊಂಡ ಕೃತಿಯೊಂದಿಗೆ ತುಲನೆ ಮಾಡಿನೋಡಿ ಶುದ್ಧ ಪಾಠಗಳನ್ನು ಸಿದ್ಧಪಡಿಸಿ ಈ ಕಾವ್ಯವನ್ನು ಸಂಪಾದಿಸಿಕೊಡಲಾಗಿದೆ. "ಧ್ರುವಚರಿತ್ರೆ" ಕಥನ ಕಾವ್ಯವು ಇದುವರೆಗೆ ಎಲ್ಲಿಯೂ ಪ್ರಕಟವಾಗಿರುವುದಿಲ್ಲ. ಇದರ ಮೂಲ ಪ್ರತಿಯನ್ನು ನಾವು ಶ್ರೀ ಜಯತೀರ್ಥ ಅಷ್ಟಮುತ್ತೆ, ಗೋಕಾಕ, ಇವರಿಂದ ಪಡೆದುಕೊಂಡಿದ್ದೇವೆ. ಈ ಹಸ್ತಪ್ರತಿ ದೇವನಾಗರಿ ಲಿಪಿಯಲ್ಲಿದೆ. ಈ ಹಸ್ತಪ್ರತಿಯನ್ನು ಪರಿಷ್ಕರಿಸಿ ದೇವನಾಗರಿ ಲಿಪಿಯಿಂದ ಕನ್ನಡ ಲಿಪಿಗೆ ಬದಲಾಯಿಸಿ ಅದರ ಶುದ್ಧ ಪಾಠವನ್ನು ಇಲ್ಲಿಕೊಡಲಾಗಿದೆ. ಶ್ರೀತುಳಜಾಮಹಾತ್ಮೆ ಹಸ್ತಪ್ರತಿಯನ್ನು ಉದಯ ಆಚಾರ ಗೋಕಾಕರಿಂದ ಸಂಗ್ರಹಿಸಲಾಗಿದ್ದು ಪ್ರಥಮ ಬಾರಿ ಪ್ರಕಟಗೊಳ್ಳುತ್ತಲಿದೆ. ಅನಂತಾದ್ರೀಶರು ಅನೇಕ ಕೀರ್ತನೆಗಳನ್ನು ರಚಿಸಿದ್ದಾರೆಂಬುದು ಈಗಾಗಲೇ ಸ್ಪಷ್ಟವಾಗಿದೆ. ನಾವು ಕೈಕೊಂಡ ಕ್ಷೇತ್ರಕಾರ್ಯದಲ್ಲಿ ಇವರ ಕೀರ್ತನೆಗಳು ಅಧಿಕ ಸಂಖ್ಯೆಯಲ್ಲಿ ನಮಗೆ ದೊರೆಯಲಿಲ್ಲ. ಈಗ ಸದ್ಯಕ್ಕೆ ಏಳು ಕೀರ್ತನೆಗಳನ್ನು ಇದರೊಂದಿಗೆ ಸಂಗ್ರಹಿಸಿಕೊಟ್ಟಿದ್ದೇವೆ. ಈ ಕೀರ್ತನೆಗಳನ್ನು ಶ್ರೀಮತಿ ಲಲಿತಾಬಾಯಿ ಕೊಪ್ಪರ, ಶ್ರೀಮತಿ ಗೋದಾವರಿ ಕಲ್ಲೂರಕರ್, ಡಾ. ಶೈಲಜಾ ಕೊಪ್ಪರ್, ಶ್ರೀಮತಿ ಶಾಲಿನಿ ಕೊಪ್ಪರ್ ವಕ್ತೃಗಳಿಂದ ಪಡೆದುಕೊಳ್ಳಲಾಗಿದೆ. ಹಾಗೆ ಪಡೆದುಕೊಂಡ ಕೀರ್ತನೆಗಳನ್ನು ಪರಿಷ್ಕರಿಸಿ ತೆಗೆದುಕೊಳ್ಳಲಾಗಿದೆ.

ಹೆನ್ನೆರಂಗವಿಠಲರು ಅನೇಕ ಕೀರ್ತನೆಗಳನ್ನು ರಚಿಸಿದ್ದಾರೆ. ಕ್ರಿ.ಶ. ೧೯೩೯ರಲ್ಲಿ ಕನಕಗಿರಿಯ ರಾಜಗೋಪಾಲಾಚಾರ್ಯರು ಹೆನ್ನೆರಂಗವಿಠಲರ ೬೩ ಕೀರ್ತನೆಗಳನ್ನು ಪ್ರಕಟಿಸಿದ್ದಾರೆ. ಹೀಗೆ ಹೆನ್ನೆರಂಗವಿಠಲರ ಕೀರ್ತನೆಗಳಿಗೆ ಸಂಬಂಧಿಸಿದಂತೆ ಇದುವರೆಗೆ ಇದೊಂದೇ ಕೃತಿ ಪ್ರಕಟವಾಗಿದೆ. ಇದು ಕೂಡಾ ಅಪೂರ್ಣವಾಗಿದೆ. ಗುಲಬರ್ಗಾ ಜಿಲ್ಲೆಯ ಸುರಪುರದಲ್ಲಿ ವಾಸಿಸುತ್ತಿರುವ ಶ್ರೀಹರಿರಾವ್ ಆದವಾನಿಯವರು ಆಸಕ್ತಿಯಿಂದ ಕೆಲವು ದಾಸರ ಹಸ್ತಪ್ರತಿಗಳನ್ನು ಸಂಗ್ರಹಿಸಿದ್ದಾರೆ. ಅವರ ಸಂಗ್ರಹದಿಂದ ಹೆನ್ನೆರಂಗವಿಠಲರ ರಚನೆಗಳನ್ನು ಆಯ್ದುಕೊಂಡು, ಪರಿಷ್ಕರಿಸಿ ಇಲ್ಲಿ ಕೊಡಲಾಗಿದೆ. ಪರಿವಿಡಿಯಲ್ಲಿ ಎರಡುನೂರು ಕೀರ್ತನೆಗಳ ಪ್ರಸ್ತಾಪವಿದ್ದರೂ ಅದರಲ್ಲಿ ಕೆಲಕೀರ್ತನೆಗಳು ಅಳಿಸಿ ಹೋಗಿವೆ. ಹೀಗಾಗಿ ಒಂದು ನೂರಾ ಎಂಬತ್ತೈದು ಕೀರ್ತನೆಗಳನ್ನು ಮಾತ್ರ ನಮಗೆ ಸಂಪಾದಿಸಿಕೊಡಲು ಸಾಧ್ಯವಾಗಿದೆ. ಶ್ರೀ ಶ್ರೀಹರಿರಾವರ್ ಆದವಾನಿಯವರಿಂದ ನಮಗೆ ದೊರೆತಿರುವ ಈ ಹಸ್ತಪ್ರತಿ ತೆಲುಗು ಲಿಪಿಯಲ್ಲಿದೆ. ಇದನ್ನು ಕನ್ನಡ ಲಿಪಿಗೆ ಅಳವಡಿಸಿ, ಪಾಠಾಂತರಗಳನ್ನು ಪರಿಷ್ಕರಿಸಿ ಭಾವಾರ್ಥವನ್ನು ಜೋಡಿಸಿ ಸಂಪಾದಿಸಿ ಕೊಡಲಾಗಿದೆ. ಹೆನ್ನೆರಂಗವಿಠಲರು ಶತಕಗಳನ್ನು ಹಾಗೂ ಸೀಸಪದ್ಯಗಳನ್ನು ರಚಿಸಿರುವುದು ತಿಳಿದು ಬರುತ್ತದೆ. ಕನಕಗಿರಿಯ ರಾಜಗೋಪಾಲಾಚಾರ್ಯರು ಸಂಪಾದಿಸಿ ಪ್ರಕಟಿಸಿರುವ ಕೃತಿಯಲ್ಲಿ ಶತಕ ಹಾಗೂ ಸೀಸಪದ್ಯಗಳನ್ನು ನೋಡಬಹುದಾಗಿದೆ. ಈ ಸಂಪುಟವು ಕೀರ್ತನೆಗಳ ಪ್ರಕಟಣೆಗೆ ಮಾತ್ರ ಸೀಮಿತವಾಗಿರುವುದರಿಂದ ನಾವಿಲ್ಲಿ ಅವರ ಕೀರ್ತನಗಳನ್ನು ಮಾತ್ರ ಸಂಪಾದಿಸಿ ಕೊಟ್ಟಿದ್ದೇವೆ.

ಅಸ್ಕಿಹಾಳ ಗೋವಿಂದದಾಸರು ಕೀರ್ತನೆಗಳನ್ನು ರಚಿಸಿರುವುದಲ್ಲದೆ ಬಯಲಾಟ, ಗೀಗೀಪದ, ಲಾವಣಿಗಳನ್ನು ಕೂಡಾ ರಚಿಸಿದ್ದಾರೆ. ಮೂವತ್ತು ಕೀರ್ತನಗಳನ್ನೊಳಗೊಂಡ ಕೃತಿಯೊಂದು ೧೯೭೮ರಲ್ಲಿ ರಾಯಚೂರಿನ "ಶ್ರೀಕೋಟೆ ಗುರುರಾಜ ಭಜನಾಮಂಡಳಿ"ಯವರಿಂದ ಪ್ರಕಟಗೊಂಡಿದೆ. ಗೋವಿಂದದಾಸರ ಮನೆತನದವರು ಈಗ ರಾಯಚೂರಿನಲ್ಲಿ ವಾಸಿಸುತ್ತಿದ್ದಾರೆ. ಅವರನ್ನು ಭೇಟಿಯಾಗಿ ನಾವು ಅವರಿಂದ ಗೋವಿಂದದಾಸರ ಕೀರ್ತನೆಗಳ ಹಸ್ತ ಪ್ರತಿಯುನ್ನು ಪಡೆದುಕೊಂಡಿದ್ದೇವೆ. ಈ ಹಸ್ತಪ್ರತಿ ಹಾಗೂ ಈಗಾಗಲೇ ಪ್ರಕಟವಾಗಿರುವ

ಕೀರ್ತನೆಗಳ ಸಂಕಲನ ಇವೆರಡನ್ನೂ ಇಲ್ಲಿ ಆಕರವಾಗಿಟ್ಟುಕೊಳ್ಳಲಾಗಿದೆ. ಎರಡೂ ಆಕರಗಳ ಮೂಲಕ ಪರಿಷ್ಕರಣೆಯನ್ನು ಮಾಡಿ ಅಂತಿಮವಾಗಿ ಮೂವತ್ತು ಕೀರ್ತನೆಗಳನ್ನು ಇಲ್ಲಿ ಸಂಪಾದಿಸಿಕೊಡಲಾಗಿದೆ.

ಕಾರ್ಪರ ನರಹರಿದಾಸರು ಅನೇಕ ಕೀರ್ತನೆಗಳನ್ನು, ಬಯಲಾಟದ ಹಾಡುಗಳನ್ನು ರಚಿಸಿದ್ದಾರೆ. ರಾಯಚೂರಿನ ಕೋಟೆ ಭಜನಾ ಮಂಡಳಿಯವರು ಈಗಾಗಲೇ ಇವರ ಒಂದನೂರಾ ಹದಿನಾಲ್ಕು ಕೀರ್ತನೆಗಳನ್ನು ೧೯೮೪ರಲ್ಲಿ ಪ್ರಕಟಿಸಿದ್ದಾರೆ. ಕಾರ್ಪರ ನರಹರಿದಾಸರ ಮಕ್ಕಳಾದ ಶ್ರೀ.ಕೆ ಜಯಾಚಾರ್ಯ ಹಾಗೂ ದಾಸರ ಅಳಿಯಂದಿರಾದ ಶ್ರೀ ಕೆ.ಎನ್.ಆಚಾರ್ಯ ಇವರು ಸಂಗ್ರಹಿಸಿದ ಹಸ್ತ ಪ್ರತಿಗಳನ್ನು ಇಲ್ಲಿ ಆಧಾರವಾಗಿಟ್ಟುಕೊಳ್ಳಲಾಗಿದೆ. ಇವೆರಡೂ ಆಕರಗಳಿಂದ ಶುದ್ಧ ಪಾಠವನ್ನು ಗುರುತಿಸಿ ಇತ್ತೀಚೆಗೆ ದೊರೆತ ಅವರ ಆರು ಕೀರ್ತನೆಗಳನ್ನು ಇದಕ್ಕೆ ಜೋಡಿಸಿ ಕಾರ್ಪರ ನರಹರಿದಾಸರ ಒಟ್ಟು ನೂರಾಇಪ್ಪತ್ತು ಕೀರ್ತನಗಳನ್ನು ಇಲ್ಲಿ ಕಟ್ಟಿಕೊಡಲಾಗಿದೆ.

ಈ ಸಂಪುಟದಲ್ಲಿ ಬರುವ ನಾಲ್ಕುಜನ ಹರಿದಾಸರ ರಚನೆಗಳನ್ನು ಇತರ ದಾಸರ ರಚನೆಗಳೊಂದಿಗೆ, ಹೋಲಿಸಿ ನೋಡಿದಾಗ ಕೆಲವು ವಿಶಿಷ್ಟ ಸಂಗತಿ ಬೆಳಕಿಗೆ ಬರುತ್ತವೆ. ದಾಸ ಸಾಹಿತ್ಯದ ಮೊದಲಿನ ಘಟ್ಟಗಳಿಗೆ ಭಿನ್ನವಾಗಿ ನಿಲ್ಲುವ ಈ ದಾಸರ ಸಾಹಿತ್ಯ ರಚನೆಗಳಲ್ಲಿ ಜಾನಪದ ಪ್ರಭಾವವನ್ನು ಕಾಣಬಹುದಾಗಿದೆ. ದ್ವೈತಸಿದ್ಧಾಂತವು ಜನಪದ ರೂಪಗಳ ಮುಖಾಂತರ ಇಲ್ಲಿ ಕಾಣಿಸಿಕೊಂಡಿದೆ. ಶಿಷ್ಟ ಪರಂಪರೆಯ ಪುರಾಣ, ಶತಕ, ಕೀರ್ತನೆಗಳಿರುವಂತೆ ಜನಪದ ಪರಂಪರೆಯ ಪಾರಿಜಾತ, ಲಾವಣಿ, ಬಯಲಾಟದಂತಹ ಜನಪದ ರೂಪಗಳೂ ಈ ಹರಿದಾಸರಲ್ಲಿ ಬಳಕೆಯಾಗಿವೆ.

೧೮-೧೯ನೇ ಶತಮಾನ ಕನ್ನಡ ಸಾಹಿತ್ಯದ ಶಿಷ್ಟ ಪರಂಪರೆಯಲ್ಲಿ ಅಂತಹ ಮಹತ್ವದ ಕಾಲವಾಗಿರದಿದ್ದರೂ ತತ್ವಪದ ಸಾಹಿತ್ಯ, ಕೀರ್ತನ ಸಾಹಿತ್ಯದಂತಹ ಕ್ಷೇತ್ರಗಳಲ್ಲಿ ಬಹಳ ಮಹತ್ವದ ಬೆಳವಣಿಗೆಯನ್ನು ಈ ಸಂದರ್ಭದಲ್ಲಿ ಕಾಣಬಹುದಾಗಿದೆ. ದೇಶದಾದ್ಯಂತ ಪಾಶ್ಚಾತ್ಯರ ರೋಮ್ಯಾಂಟಿಕ್ ಪ್ರಭಾವ

ತೀವ್ರಗೊಳ್ಳುತ್ತಿರುವ ಸಂದರ್ಭದಲ್ಲಿ ಈ ಪ್ರದೇಶದ ಕವಿಗಳು, ಕೀರ್ತನಕಾರರು ದೇಶೀಯ ರೂಪಕಗಳೊಂದಿಗೆ ಬದುಕಿನ ಹುಡುಕಾಟವನ್ನು ಪ್ರಾರಂಭಿಸಿದ್ದು ತುಂಬ ಗಮನಾರ್ಹವಾದ ಸಂಗತಿಯಾಗಿದೆ.

ದಕ್ಷಿಣ ಕರ್ನಾಟಕ ಹಾಗೂ ಮುಂಬಯಿ ಕರ್ನಾಟಕದ ಕಡೆ ಪಾಶ್ಚಾತ್ಯ ಸಾಹಿತ್ಯ ತುಂಬ ಪ್ರಭಾವಬೀರಿದ ಸಂದರ್ಭದಲ್ಲಿ ಈ ಹೈದ್ರಾಬಾದ ಕರ್ನಾಟಕದ ಪ್ರದೇಶದಲ್ಲಿ ಕೀರ್ತನಕಾರರು, ತತ್ವಪದಕಾರರು ತಮ್ಮ ದೇಶೀಯರೂಪಗಳ ಮೂಲಕವೇ ಹೊಸ ಚಿಂತನೆಯನ್ನು ಪ್ರಾರಂಭಿಸಿದ್ದು ಹಾಗೂ ಇವರ ರಚನೆಗಳು ಜನಸಮುದಾಯದ ನಾಲಿಗೆಯ ಮೇಲೆ ನರ್ತಿಸಿದ್ದು ಇವತ್ತಿನ ಸಂದರ್ಭದಲ್ಲಿ ಹೆಚ್ಚು ಪ್ರಸ್ತುತವೆನಿಸುತ್ತದೆ.

ಭಕ್ತಿ ಅಧ್ಯಾತ್ಮದಂತಹ ವಿಷಯಗಳು ಇಲ್ಲಿಯ ಜನ ಸಮುದಾಯದಲ್ಲಿ ಸಹಿಷ್ಣುತೆ, ಭಾವೈಕ್ಯತೆಯನ್ನು ಮೂಡಿಸಿದ್ದು ಮಹತ್ವದ ಸಂಗತಿಯಾಗಿದೆ. ದಾಸ ಸಾಹಿತ್ಯದ ಪರಂಪರೆಯಲ್ಲಿ ಅನೇಕ ಕೀರ್ತನಕಾರರು ಬೇರೆ ಬೇರೆ ಜಾತಿ–ಮತಗಳಿಂದ ಹುಟ್ಟಿಬಂದಿರುವುದು ಗಮನಿಸುವ ವಿಷಯವಾಗಿದೆ. ದಾಸ ಸಾಹಿತ್ಯದ ಮೊದಲನೇ ಘಟ್ಟದಲ್ಲಿ ಕುರುಬ ಜನಾಂಗದಿಂದ ಕನಕದಾಸ ಮಹತ್ವದ ಕೀರ್ತನಕಾರನಾದರೆ ೧೯ನೆ ಶತಮಾನದಲ್ಲಿ ಹೈದ್ರಾಬಾದ ಕರ್ನಾಟಕ ಪ್ರದೇಶದ ಪಿಂಜಾರ ಜನಾಂಗದಿಂದ ಬಂದ ರಾಮದಾಸನು ದ್ವೈತಮತದ ವಿಶಾಲತೆಗೆ ಸಾಕ್ಷಿಯಾಗಿದ್ದಾನೆ. ವೈಷ್ಣವ ಮನೆತನದಲ್ಲಿ ಜನಿಸಿದ ಅನಂತಾದ್ರೀಶರು ಶಿವಪಾರಿಜಾತದಂತಹ ಕಥನಕಾವ್ಯವನ್ನು ರಚಿಸಿರುವುದು ಮಹತ್ವದ ಸಂಗತಿಯಾಗುತ್ತದೆ. ಜನಪದ ಮೌಲ್ಯಗಳಿಂದ ಬಂದ ಇಂತಹ ಕೀರ್ತನಕಾರರು ತಮ್ಮ ಕೀರ್ತನೆಗಳ ಮೂಲಕ ಜನಸಮುದಾಯಕ್ಕೆ ಹತ್ತಿರವಾಗಿದ್ದಾರೆ. ಹರಿ–ಹರ ಎಂಬ ಭೇದವನ್ನು ಬಿಟ್ಟು ಜಾತಿ–ಮತಗಳ ಹಂಗನ್ನು ತೊರೆದು ಮಾನವೀಯತೆಗೆ ಪ್ರಾಮುಖ್ಯ ನೀಡಿದ್ದು, ಆಧ್ಯಾತ್ಮದ ಎತ್ತರವನ್ನೇರಿದ್ದು ಗುರುತಿಸುವಂಥ ವಿಷಯವಾಗಿದೆ.

ಈ ಸಂಪುಟದ ಹರಿದಾಸರು ವಸ್ತು, ಅಭಿವ್ಯಕ್ತಿ, ಭಾಷೆ ಆಶಯ ಇವುಗಳಲ್ಲಿ ತಮ್ಮದೇ ಆದ ವಿಶಿಷ್ಟತೆಯನ್ನು ಮೆರೆದಿದ್ದಾರೆ. ಅನಂತಾದ್ರೀಶರು ರಚಿಸಿರುವ

ನಾಲ್ಕು ಸುದೀರ್ಘ ಕಥನಕಾವ್ಯಗಳಲ್ಲಿ ಪುರಾಣದ ಮೂಲಕ ಭಕ್ತಿ ಪರಂಪರೆಯನ್ನು ಪರಿಣಾಮಕಾರಿಯಾಗಿ ತಿಳಿಸಿದ್ದಾರೆ. ೧೮-೧೯ನೇ ಶತಮಾನದ ಸಂದರ್ಭದಲ್ಲಿ ಮೂಡಿ ಬಂದ ಈ ಕಲ್ಯಾಣ ಹಾಗೂ ಪರಿಣಯಕ್ಕೆ ಸಂಬಂಧಪಟ್ಟ ಕಥಾವಸ್ತು ಹೆಚ್ಚು ಕುತೂಹಲವನ್ನುಂಟು ಮಾಡುತ್ತದೆ. ವೆಂಕಟೇಶ, ಶಿವ, ಧ್ರುವ, ಪ್ರಹ್ಲಾದ, ಮೊದಲಾದ ಮಹಿಮರನ್ನು ಈ ಕವಿ ಸಾಮಾನ್ಯ ಜನತೆಯಲ್ಲಿರುವ ಭಕ್ತಿಯ ಅನಂತತೆಯಲ್ಲಿ ಕಂಡುಕೊಳ್ಳುತ್ತಾರೆ. ಹೀಗಾಗಿ ಈ ಶಿವ ವೆಂಕಟೇಶರು ನಮ್ಮ ಸುತ್ತ ಮುತ್ತಲಿನ ಮಹತ್ವದ ಸಾಧಕರಂತೆ ಕಾಣಿಸುತ್ತಾರೆ. ಹೀಗೆ ಪುರಾಣವನ್ನು ವಾಸ್ತವದ ಮೂಲಕ ಕಟ್ಟಿಕೊಡುವ ಅನಂತಾದ್ರೀಶರ ಕಥನಕವನಗಳು ದಾಸ ಸಾಹಿತ್ಯ ಪರಂಪರೆಯಲ್ಲಿಯೇ ವಿಶಿಷ್ಟ ರಚನೆಗಳಾಗಿ ಕಾಣಿಸಿಕೊಳ್ಳುತ್ತವೆ. ಇಂತಹುದೇ ಪರಂಪರೆಯನ್ನು ಮುಂದುವರೆಸಿದ ಕಾರ್ಪರ ನರಹರಿದಾಸರು ಸಮಗ್ರ ಭಾಗವತ ಪುರಾಣವನ್ನು ಕೇವಲ ೧೮ ನುಡಿಗಳಲ್ಲಿ ಕಟ್ಟಿಕೊಟ್ಟಿರುವುದು ಅವರ ಕಥನಕಲೆಗೆ ಸಾಕ್ಷಿಯಂತಿದೆ. ಹೆನ್ನೆರಂಗದಾಸರ ಹಾಗೂ ಅಸ್ಕಿಹಾಳ ಗೋವಿಂದದಾಸರ ಕೀರ್ತನೆಗಳಲ್ಲಿ ಈ ಪ್ರದೇಶದ ಭಾಷೆ ಮೈಕೊಡವಿ ನಿಂತಿದೆ. ಅನೇಕ ಲಾವಣಿ, ಬಯಲಾಟಗಳನ್ನು ಬರೆದಿರುವ ಗೋವಿಂದ ದಾಸರು ಜನಪದ ನುಡಿಗಟ್ಟಿನ ಮೂಲಕ ಕೀರ್ತನ ಪರಂಪರೆಯುನ್ನು ಬೆಳೆಸಿರುವುದು ಕುತೂಹಲಕಾರಿಯಾದ ಸಂಗತಿಯಾಗಿದೆ.

ಈ ಸಂಪುಟದ ಹರಿದಾಸರ ರಚನೆಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಅಧ್ಯಯನ ನಡೆದಿರುವದಿಲ್ಲ. ಇವರ ರಚನೆಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿದಾಗ ಇನ್ನೂ ಹೊಸ ಸಂಗತಿಗಳು ಬೆಳಕಿಗೆ ಬರುವ ಸಾಧ್ಯತೆ ಇದೆ. ನಡೆ ನುಡಿ ಒಂದಾಗಿ ಸರಳ ಜೀವನ ನಡೆಸಿ ತಮ್ಮ ಅನುಭಾವದ ಅಂತಃಸತ್ವವನ್ನು ಧಾರೆಯೆರೆದು ಕೊಟ್ಟಿರುವ ಇಲ್ಲಿಯ ದಾಸರು ಅಧ್ಯಯನ ಯೋಗ್ಯರಾಗಿದ್ದಾರೆ. ಜ್ಞಾನ, ಭಕ್ತಿ ಸಾಧನೆಗೆ ಇಂತಹ ದಾಸರ ರಚನೆಗಳು ಸ್ಫೂರ್ತಿದಾಯಕವಾಗಿವೆ.

ಕೃತಜ್ಞತೆಗಳು

ಈ ಸಂಪುಟದ ಹರಿದಾಸರ ಕೀರ್ತನೆಗಳನ್ನು ಸಂಪಾದಿಸಿಕೊಡಲು ನಮಗೆ ತಿಳಿಸಿದ ಕಾರ್ಯನಿರ್ವಾಹಕ ಸಂಪಾದಕರಾದ ಡಾ. ಶ್ರೀನಿವಾಸ ಹಾವನೂರ ಅವರಿಗೆ ಇಂತಹ ಮಹತ್ವದ ಯೋಜನೆಯನ್ನು ಕೈಗೊಂಡು ಈ ಯೋಜನೆಯಲ್ಲಿ ಭಾಗವಹಿಸುವ ಅವಕಾಶವನ್ನಿತ್ತ ಕನ್ನಡ ಸಂಸ್ಕೃತಿ ಇಲಾಖೆಯ ನಿರ್ದೇಶಕರಿಗೆ ಅನಂತ ಕೃತಜ್ಞತೆಗಳು ಸಲ್ಲುತ್ತವೆ. ಸಮಗ್ರ ದಾಸವಾಙ್ಮಯ ಯೋಜನೆಯ ಸಮಿತಿಯ ಎಲ್ಲ ಸದಸ್ಯರುಗಳಿಗೂ ನಾವು ಋಣಿಯಾಗಿದ್ದೇವೆ.

ಈ ಸಂಪುಟದ ಹರಿದಾಸರ ರಚನೆಗಳನ್ನು ಸಂಗ್ರಹಿಸುವ ಕಾರ್ಯದಲ್ಲಿ ಅನೇಕರು ಸಹಾಯ ಸಹಕಾರ ನೀಡಿದ್ದಾರೆ. ಅವರಲ್ಲಿ ಪ್ರಮುಖವಾಗಿ ಸುರಪುರದ ಶ್ರೀಹರಿ ಕುಲಕರ್ಣಿ, ಗೋಕಾಕದ ಶ್ರೀಜಯತೀರ್ಥ ಅಷ್ಟಮಿತ್ರೆ. ರಾಯಚೂರಿನ ಭೀಮದಾಸ, ಕೊಪ್ಪರದ ಶ್ರೀ ಕೆ. ಜಯಾಚಾರ್ಯ ಇವರ ಸಹಾಯ ಸಹಕಾರವನ್ನು ಕೃತಜ್ಞತೆಯಿಂದ ಸ್ಮರಿಸುತ್ತೇವೆ.

ಶ್ರೀ ಹೆನ್ನೆರಂಗದಾಸರ ಎರಡುನೂರು ಕೀರ್ತನೆಗಳು ಪ್ರಪ್ರಥಮವಾಗಿ ಈ ಸಂಪುಟದ ಮೂಲಕ ಬೆಳಕು ಕಾಣುತ್ತಿರುವುದು ನಮಗೆ ಹೆಮ್ಮೆಯ ಸಂಗತಿಯಾಗಿದೆ. ಅದರಂತೆ ಅನಂತಾದ್ರೀಶರ "ಧ್ರುವಚರಿತ್ರೆ" ಕಥನಕಾವ್ಯವು ಇದೇ ಮೊದಲಬಾರಿಗೆ ಈ ಸಂಪುಟದ ಮೂಲಕ ಪ್ರಕಟವಾಗುತ್ತಿದೆ. ನಾವು ಎಷ್ಟೇಶ್ರಮವಹಿಸಿದ್ದರೂ ಈ ದಾಸರ ಚರಿತ್ರೆಯನ್ನು ಇಡಿಯಾಗಿ ಕಟ್ಟಿಕೊಡಲಿಕ್ಕೆ ಆಗಲಿಲ್ಲ. ಪಾಠ ಪರಿಷ್ಕರಣೆಯಲ್ಲಿ ಕೆಲವು ದೋಷಗಳು ಉಳಿದುಕೊಂಡಿರಬಹುದಾಗಿದೆ. ಓದುಗರು, ವಿಮರ್ಶಕರು ದಯವಿಟ್ಟು ತಮ್ಮ ರಚನಾತ್ಮಕ ಸಲಹೆಗಳನ್ನು ನೀಡಬೇಕೆಂದು ಕೋರುತ್ತೇವೆ. ಈ ಸಂಪುಟವನ್ನು ಸಿದ್ಧಪಡಿಸುವಲ್ಲಿ ಸಹಕರಿಸಿದ ಎಲ್ಲರಿಗೂ ನಮ್ಮ ಅನಂತ ಕೃತಜ್ಞತೆಗಳು.

ಸಂಪಾದಕರು

ಡಾ. ಬಸವರಾಜ ಸಬರದ

ಡಾ. ಜಯಲಕ್ಷ್ಮಿ ಮಂಗಳಮೂರ್ತಿ

ಕೀರ್ತನೆಗಳ ಕ್ರಮಸೂಚಿ

ಅನಂತಾದ್ರೀಶರ ಕೃತಿಗಳು

ಶ್ರೀ ಹರಿಸ್ತುತಿ

೧

ಎಷ್ಟು ಅಟ್ಟಲೆ ಕೊಡುವ ನೋಡಮ್ಮ ಏ
ಗೋಪಿ ನಿನ್ನ ಮಗ ಪ

ಎಷ್ಟು ಅಟ್ಟಲೆ ಕೊಡುವ ನಮಗೆ ದುಷ್ಟತನ
ಯಥೇಷ್ಟ ಮಾಡುವ
ಸ್ಪಷ್ಟನಾ ಇನ್ನೆಷ್ಟು ಹೇಳಿದರಷ್ಟು ಮಾಡುವ
ಈ ಕಳ್ಳ ಕೃಷ್ಣನು ಅ.ಪ

ಅಡಗಿ ಮನೆಯೊಳಡಗಿಕೊಂಡಿರುವ ಅಲ್ಲಿದ್ದ ಭಾಂಡಗಳ್
ಬುಡಮೇಲ್ ಮಾಡಿ ಅಡಕಲೇರಿಸುವಾ
ಅಡಿಗಳನು ಮೆಲ್ ನಿಡುತ ನೆಲವಿಲಿ
ಇಡುವ ಪಾಲ್ ಮೊಸರನೆಲ್ಲ ಸವಿಯುವ
ಗಡನೆ ಗೆಳೆಯರ ನೊಡನೆ ಬಂದು
ಕಡೆವ ಗಡಗಿಯ ನೊಡೆದು ಪೋಗುವಾ ೧

ಸಿಕ್ಕಮನೆ ಮನೆ ಹೊಕ್ಕು ನೋಡುವನೆ ತಾ
ಸಿಕ್ಕದಿರನು ತಕ್ಕ ಕಳ್ಳಿವ ಠಕ್ಕನಾಗಿಹನು
ಅಕ್ಕ ಕೇಳೆ ಅಕ್ಕರದಿ ಕೈಯಿಕ್ಕಿ ಕಡೆದಿಹ
ಚೊಕ್ಕ ಬೆಣ್ಣೆಯ ಚಿಕ್ಕ ಬಾಲರಿಗಿಕ್ಕಿ ತಿನ್ನುವ
ಮಿಕ್ಕ ಬೆಣ್ಣೆಯ ಬೆಕ್ಕಿಗ್ಹಾಕುವ ೨

ಎಂಥವನಿವ ಖಳರಂತೆ ಮಾಡುವನೆ ಬೇ
ಕಂತೆ ಕರುಗಳ ತಂತುಬಿಚ್ಚಿ ನಿಂತುನೋಡುವನೆ
ಅಂಥ ಇಂಥವನಲ್ಲ ನಿನ್ನ ಮಗ ಸಂತ ಜನಮನ
ದಂತರಂಗನು ಕಾಂತೆಯರು ಮನದಂತೆ ಬೈದರೆ
ನಿಂತು ನಗವಾನಂತಾದ್ರೀಶನು ೩

ಶ್ರೀ ಲಕ್ಷ್ಮೀಸ್ತುತಿ

೨

ಬಾರೆ ಭಾಗ್ಯದ ನಿಧಿಯೇ ಕರವೀರ
ನಿವಾಸಿನಿ ಸಿರಿಯೆ ಪ

ಬಾರೆ ಬಾರೆ ಕರವೀರ ನಿವಾಸಿನಿ ಬಾರಿಬಾರಿಗು ಶುಭ
ತೋರು ನಮ್ಮ ಮನಗೆ ಅ.ಪ

ಲೋಕಮಾತೆಯು ನೀನು ನಿನ್ನ ತೋಕನಲ್ಲವೆ ನಾನು
ಆಕಳು ಕರುವಿನ ಸ್ವೀಕರಿಸುವಪರಿ
ನೀ ಕರುಣದಿ ಕಾಲ್ಹಾಕು ನಮ್ಮ ಮನಗೆ ೧

ನಿಗಮ ವೇದ್ಯಳೆ ನಿನ್ನ ನಾ ಪೊಗಳಲಾಪೆನಲ್ಲ
ಮಗನಪ ರಾಧವ ತೆಗೆದೆಣೆಸದಲೆ ಲಗು
ಬಗೆಯಿಂದಲಿ ಪನ್ನಗವೇಣಿ ೨

ಕಡೆಗೆ ನಮ್ಮನೆ ವಾಸ ಒಡೆಯ ಅನಂತಾದ್ರೀಶ
ಒಡೆಯನಿದ್ದಲ್ಲಿಗೆ ಮಡದಿಯು ಬಾಹೊದು
ರೂಢಿಗುಚಿತವಿದು ನಡೆ ನಮ್ಮ ಮನೆಗೆ ೩

ಗುರುಗಳ ಸ್ತುತಿ : ಶ್ರೀ ರಾಘವೇಂದ್ರ ಸ್ವಾಮಿಗಳು

೩

ಎಂದು ಕರುಣದಿಂದ ನೋಡುವಿ ರಾಘ-
ವೇಂದ್ರಗುರುವೆ ಎಂದು ನಮಗಾನಂದನೀಡುವಿ ಪ

ಎಂದು ಕರುಣದಿಂದ ನೋಡುವಿ
ನೊಂದು ತಾಪದಿಂದ ಬಹಳ
ಬೆಂದು ನಿನ್ನ ಕಂದನೆಂತೆಂದು ಪಾದಕೆ
ಹೊಂದಿದವನ ಅ.ಪ

ದೀನನಾನು ಧೇನಿಸುವೆನೊ ಅನುದಿನ ಕಾಮ
ಧೇನು ನೀನು ದಾನಶೂರನೊ
ದಾನದಲ್ಲಿ ನೀದಾನ ಕಾರಣ ದಾನಿ ನಿನ್ನಂದ
ಹೀನನಾದಾ ದಾನದಿಂದ ಇನ್ನೇನು ಫಲವು
ದಾನಮಾಡೊ ದೀನರೊಡಿಯ ೧

ಅಲ್ಪ ನಾನು ಜಲ್ಪಕೆಣಿಸುವೆ ಅ-
ನಲ್ಪ ನೀನು ಕಲ್ಪವೃಕ್ಷಕಲ್ಪನಲ್ಲವೆ
ಅಲ್ಪರಿಗೆ ಅನಲ್ಪ ಫಲ ಅಕಲ್ಪಿತವಾಗಿ ಕಲ್ಪಿಸುವರೆ
ಅಲ್ಪರಿವರನಲ್ಪರೆಂದು
ಸ್ವಲ್ಪಮನೋ ವಿಕಲ್ಪವಿಲ್ಲದೆ ೨

ಗುಣಿಯು ನೀಣು ಅಣಿಯು ಇಲ್ಲದ ದು
ರ್ಗುಣಿಯು ನಾನು ಹಣಿಯೋ ನೀನು
ಮಣಿಯೊ ಪಾಪದ
ಧಣಿಯು ಚಿನ್ನದ ಖಣಿಯೇ ಚಿಂತಾ
ಮಣಿಯೆ ನಿನಗೆ ಎಣಿಯು ಇಲ್ಲ
ಗುಣಿ 'ಅನಂತ' ಫಣಿಯ ತೋರಿಸು ದಣಿಯಲಾರೆ ೩

೪

ಭೋಯತಿ ವರದೇಂದ್ರಾ ಶ್ರೀಗುರುರಾಯ ರಾಘವೇಂದ್ರಾ ಪ

ಕಾಯನಿನ್ನ ಶುಭಕಾಯ ಭಜಿಸುವ ಕಾಯೊ
ತವಕ ಚಂದ್ರಾ ಅ.ಪ

ನೇಮವು ಎನಗೆಲ್ಲಿ ಇರುವದು
ಕಾಮಿಯಾದವನಲ್ಲಿ
ಭೂಮಹಾಮಹಿಮನ ಪಾಮರನೊ ನಿನ್ನ
ನಾಮ ಒಂದೆ ಬಲ್ಲೆ ೧

ಕಂಡ ಕಂಡ ಕಡೆಗೆ ತಿರುಗುತ
ಬೆಂಡಾದೆನು ಕೊನೆಗೆ
ಕಂಡ ಕಂಡವರನು ಬಲು ಕೊಂಡಾಡುತ ದಣ
ಕೊಂಡೆ ಕಟ್ಟಕಡೆಗೆ ೨

ಮಂತ್ರವು ನಾನರಿಯೆ ಶ್ರೀಮನ್
ಮಂತ್ರಾಲಯ ಧೊರಿಯೆ
ಅಂತರಂಗದಲಿ ನಿಂತು ಪ್ರೇರಿಸುವ
ನಂತಾದ್ರೀಶಧೊರಿಯೆ ೩

ಶ್ರೀ ವಿಷ್ಣುತೀರ್ಥರು

೫

ಅಡವಿ ಆಚಾರ್ಯರ ಅಡಿಯ ಪೊಂದಿದ ಜನರು
ಅಡಿಗಡಿಗೆ ಬಹುಪುಣ್ಯ ಪಡೆದು ಕೊಂಬುವರು ಪ

ಪೊಡವಿಯಲಿ ಸಂಸಾರ ಮಡುವಿನಲಿ ಮುಣಿಮುಣಿಗಿ
ಬಡವರಂತತಿ ಬಾಯ ಬಿಡುವರಲ್ಲವರು ಅ.ಪ

ಪಂಚರತ್ನವ ಪಠಿಸಿ ಪಂಚಮೂರ್ತಿಗಳನ್ನು
ಮುಂಚೆ ತಿಳಿವರು ಈ ಪ್ರಪಂಚದಲ್ಲಿ
ಹಂಚಿಕೆಯಲಿ ಮತ್ತೆ ಪಂಚಭೇದವ ತಿಳಿದು
ಪಂಚ ಮಹಾ ಪಾಪಗಳ ಮುಂಚೆ ಕಳೆಯುವರು ೧

ಭಂಗ ಬಿಡಿಸುವ ಸುಧೆಯ ಮಂಗಳಾರ್ಥವ ತಿಳಿದು
ಅಂಗದಲಿ ಸುರಿವರು ಕಂಗಳೊದಕವ
ಮಂಗಳಾಂಗನ ಅಂತರಂಗದಿ(ದಲಿ) ಸ್ಮರಿಸುತ್ತ
ಮುಂಗೈಯ್ಯ ಮುದ್ರೆಗಳ ಧರಿಸುವರಿವರು ೨

ವಾಸುದೇವನ ದಾಸ ದಾಸರಾದೆವೆಂಬೊ
ಆಶೆಯಲಿ ಅವನ ಸಹವಾಸ ಬಯಸುವರು
ಶ್ರೀಸುಧಾರ್ಥಾನಂತಾದ್ರೀಶನಲ್ಲೇ ಭಕುತಿ
ಯೇಸು ಕಾಲಕು ಬಿಡದೆ ಬ್ಯಾಸರದೆ ಬೇಡುವರು ೩

೬

ಚಾರು ಶ್ರೀ ಕುಶನದಿ ತೀರದಲ್ಲಿರುತಿಹನ್ಯಾರೆ ಪೇಳಮ್ಮಯ್ಯ
ಸಾರಯತೀಶ್ವರ ಧೀರ ಸುಗುಣಗಂಭೀರ
ವಿಷ್ಣುತೀರ್ಥಾರ್ಯಕಾಣಮ್ಮಾ ಪ

ವೃಂದಾರಕ ವರವೃಂದದೊಳಗೆ ನವ
ಇವನಾರೆ ಪೇಳಮ್ಮಯ್ಯ
ವೃಂದಾವನದಲಿ ಬಂದಿರುವರು ಮತ್ತಲ್ಲಿ ನೋಡಮ್ಮಯ್ಯಾ

ಮುಂದೆ ಮುದ್ರೆ ಬಹು ಛಂದದ ನಾಮವು
ಗಂಧಾಕ್ಷತ ನೋಡಮ್ಮಯ್ಯ
ಸಾರಯತೀಶ್ವರ ಧೀರ ಸುಗುಣ ಗಂಭೀರ
ವಿಷ್ಣು ತೀರ್ಥಾರ್ಯ ಕಾಣಮ್ಮಾ ೧

ನೀರೇ ನಾಲ್ಕು ವರ ಮೂರುತಿಗಳ್
ಬೆನ್ಹಿಂದೆ ನೋಡಮ್ಮಯ್ಯ
ನಾರಾಯಣ ತನ್ನ ನಾರಿಯ ಸಹಿತಾ
ಇಹನೂ ನೋಡಮ್ಮಯ್ಯ
ನಾರಿಮಣಿಯೇ ಶ್ರೀನಾರಸಿಂಹನೂ ಚಾರುಚಕ್ರ
ತೀರದಲ್ಲಿಹನಮ್ಮಾ
ಸಾರಯತೀಶ್ವರ ಧೀರ ಸುಗುಣಗಂಭೀರ ವಿಷ್ಣು
ತೀರ್ಥಾರ್ಯ ಕಾಣಮ್ಮಾ ೨

ಲೇಸು ಆದ ಕೂರ್ಮಾಸನವಿರುವುದು ಕೆಳಗೇ
ನೋಡಮ್ಮಯ್ಯಾ
ಭಾಸುರ ಜಯಮುನಿ ಶೇಷನಾಗಿರುತಿಹ ಮ್ಯಾಲೇ
ನೋಡಮ್ಮಯ್ಯ
ಈಶಾನಂತಾದ್ರೀಶನಿರತ ಮೋದೇಶ್ವರಾಖ್ಯ
ಪುರವಾಸಾ ಕಾಣಮ್ಮ
ಸಾರಯತೀಶ್ವರ ಧೀರ ಸುಗುಣ ಗಂಭೀರ
ವಿಷ್ಣು ತೀರ್ಥಾರ್ಯ ಕಾಣಮ್ಮ ೩

೭

ವರದ ವಿಷ್ಣು ತೀರ್ಥಾನೀ ಕೊಡು ಕರುಣದಿ
ಪುರುಷಾರ್ಥ ಪ

ವರದ ಅಭೀಷ್ಟೆಯ ಕರದು ಎನಗೆ ನೀ
ವರದನೆಂಬೊ ನಿನ್ನ ಬಿರುದನ ರಕ್ಷಿಸು ಅ.ಪ

ಅಜನ ಜನಕನಲ್ಲಿ ಇರುವಿಯೊ ವಿಜನ ದೇಶದಲ್ಲೀ
ಸುಜನರು ಇದ್ದಲ್ಲಿ ಬರುವೆಯೊ ಭಜನೆಮಾಡುವಲ್ಲೀ
ಸುಜನರ ತಾಪಕೆ ವ್ಯಜನನು ನೀನೂ
ಸುಜನಕಲ್ಪತರು ಕುಜನಕುಠಾರಾ ೧

ನಂದನಂದನನೂ ಅವನಿನ್ನ ಬಂಧನದೊಳಗಿಹನೂ
ಅಂಧನಾಗಿ ನಾನೂ ಸಂಸೃತಿ ಬಂಧನದೊಳಗಿನ್ನೂ
ನೊಂದೆನು ಬೆಂದೆನು ಬಂದೆನು ನಿನ್ನಲಿ
ಕಂದನ ಲಾಲಿಸು ಒಂದಿನ ಬಿಡದೆ ೨

ಮರೆತೆನು ನಾನಿನ್ನಾ ಅವಗುಣ ಮರೆತು ಪಾಲಿಸು ಮುನ್ನಾ
ಪರತರಗುರು ನಿನ್ನಾ ಹೊರತು ಗತಿ ಗುರುತತಿಲ್ಲ ಮುನ್ನಾ
ಅರಿತು ಅನಂತಾದ್ರಿ ನಿರತನ ತೋರಿಸು
ತ್ವರತ ಮೋದ ಪುರನಿರತ ಸದ್ಗುರುವೆ ೩

ಕಥನಕಾವ್ಯಗಳು

೮

ಶ್ರೀ ವೆಂಕಟೇಶ ಪಾರಿಜಾತ
ಅಧ್ಯಾಯ ಒಂದು

ಶ್ರೀಪತಿರ್ಭೃಗುಣಾ ಸರ್ವಲೋಕೋತ್ಕೃಷ್ಟ ಇತೀ ಪಿತ:
ಗೋಕ್ಷೀರ ಸಿಕ್ತ ಸರ್ವಾಂಗೋ ವಲ್ಮೀಕಸ್ಥ: ಶುಭಂ ದಿಶೇತ ।

ಶ್ರೀಸಹಿತ ಶ್ರೀವೆಂಕಟೇಶಗೆ ಸಾಸಿನಾರತಿ ಮಾಡಿ ಬೇಡುವೆ
ಭಾಷೆ ಭಾಷೆಗೆ ಎನಗೆ ಬುದ್ಧಿವಿಕಾಸ ಕೊಡುಯಂದು
ಆಶು ಕೊಲ್ಹಾಪುರದ ದೇವಿಗೆ ಬೇಸರದೆ
ಕರಮುಗಿದು ಬೇಡುವೆ
ದಾಶರಥಿ ನಿಜದಾಸ ಕಲ್ಲೊಳ್ಳೀಶಗೊಂದಿಸುವೆ ೧

ಶ್ರೀ ಜಯಾರ್ಯರ ಮೊದಲುಮಾಡಿ ರಾಜಗುರು
ಸಂತತಿಗೆ ನತಿಸುವೆ
ಐಜಿ ವೆಂಕಟರಾಮವರ್ಯರ ಪೂಜೆಯಲ್ಲಿರುವೆ
ಶ್ರೀ ಜಯಾರ್ಯ ಮುನೀಂದ್ರ ಸೇವೆಗೆ ಈ
ಜಗತಿಯಲಿ ಜನಿಸಿ ಅವರಾ
ಪೂಜಿತಾಖ್ಯವು ವಹಿಸಿದವರನು ಪೂಜಿಸುವೆ ಬಿಡದೆ ೨

ನಿತ್ಯದಲಿ ಕೃಷ್ಣಾರ್ಪರೆಂಬುವ ಉತ್ತಮರ ಪದ
ಪೊಂದಿ ಆ ಗುರು
ಪುತ್ರರಾಗಿರುವ ವಿಷ್ಣುತೀರ್ಥರನು ನಮಿಪೆ ಮತ್ತೆ
ಸ್ತೋತ್ತಮರಾಗಿ ಇರುವ ಗುರುಗಳಿಗೊಂದಿಸುತ ಸ
ರ್ವೋತ್ತಮಾನಂತಾದ್ರಿ ರಮಣನ ಮಹಿಮೆ ಪೇಳುವೆನು ೩

ವಚನ

ಪೂರ್ವದಲಿ ಭೃಗುಮುನಿಗೆ ಸರ್ವಮುನಿಗಳು
ಬುದ್ಧಿ ಪೂರ್ವಕ್ಹಿಂ
ಗ್ಹೇಳಿದರು ಗರ್ವಾದಿ ರಹಿತ ಸತ್ಸರ್ವಗುಣ
ಸಂಪೂರ್ಣ ಸರ್ವ
ದೇವೋತ್ತಮನು ಇರುವನ್ಯಾರೆಂದು ತಿಳಿ ಸರ್ವಲೋಕದಲಿ
ಸರ್ವರಿಗೆ ಹಿತಕರ ಮೃದು ಪೂರ್ವ ವಚನವ
ಕೇಳಿ ಪೂರ್ವದಲ್ಲಿ
ಪೋದ ಪೂರ್ವಿಕನ ಮನೆಯಲ್ಲಿ ಗರ್ವ ಅವನಲ್ಲಿ ಕಂಡು
ಗರ್ಕನೆ ತಾ ತಿರುಗಿ ಪಾರ್ವತೀಶನು ಎಲ್ಲಿ
ಇರುವ ನಡೆದನಲ್ಲಿ ೧

ಕೂಡಿ ಪಾರ್ವತಿಯಿಂದ ಕ್ರೀಡೆಯಿಂದಿರುವವನ
ನೋಡಿದನು ಆಗಲ್ಲಿ
ಪ್ರೌಢೆ ಪಾರ್ವತಿಯು ಮಾತಾಡಿದಳು ನಾಚುತಲಿ ಬೇಡಬಿಡು
ಪ್ರಾಣೇಶ ನೋಡು ಭೃಗು ಮುನಿಬಂದ ಬೇಡಿಕೊಂಬುವೆನೊ
ಗಾಢನೆ ಕಣ್ಕೆಂಪು ಮಾಡಿ ಮುನಿಯಿದ್ದಲ್ಲಿ ಓಡಿಬಂದನು
ಆಗನೋಡಿ ಭೃಗು ಶಾಪ ಈಡಾಡಿದನು ನಿನ್ನ
ಪೂಜೆಯ ಬೇಡ ಈ ಲೋಕದಲಿ ನೋಡಿ ಲಿಂಗವ
ಪೂಜೆ ಮಾಡಲಿ ಜನರು ೨

ಕೊಟ್ಟು ಈ ಪರಿ ಶಾಪ ಮೆಟ್ಟಿದನು ವೈಕುಂಠ
ಥಟ್ಟನೆ ಮತ್ತಲ್ಲಿ ದಿಟ್ಟ ದೇವನ ಕಂಡ ಪಟ್ಟದರಸಿಯಕೂಡಿ
ಧಿಟ್ಟಾಗಿ ಮಲಗಿರಲು ಸಿಟ್ಟಿಲೊದ್ದನು ಒಳ್ಳೆ ಪೆಟ್ಟು ಅವನೆದಿಗೆ
ಪೆಟ್ಟು ತಾಗಲು ಥಟ್ಟನೆ ಹರಿ ಎದ್ದು ಬಿಟ್ಟು ಮಂಚವನು
ಮುಟ್ಟಿ ಮುನಿ ಪಾದವನು ತುಷ್ಟನಾಗಿ ೩

ಧ್ವನಿ

ಯಾಕೆನ್ನ ಮೇಲಿಷ್ಟು ಭೃಗುಮುನಿ ಯಾಕೆನ್ನ
ಮೇಲಿಷ್ಟು ಸಿಟ್ಟು
ನಾಕೊಡುವೆನು ನಿನಗೀಕಾಲಕೆ ನೀ ಬೇಕಾದದ್ದು
ಬೇಡುಯಥೇಷ್ಟ
ಸದ್ದು ಇಲ್ಲದೆ ನಾ ಇದ್ದ ಮನೆಗೆ ಬಂದು ಒದ್ದ
ಕಾರಣ ಪೇಳಿಷ್ಟು
ಸಿದ್ಧನಾಗಿ ನೀನು ಬಂದದ್ದು ನಾ ಅರಿಯೆನು ಬುದ್ಧಿ
ತಪ್ಪಿತು ಕ್ಷಮಿಸಿಷ್ಟು ೧

ಚಂದಾಗಿ ಕಾಠಿಣ್ಯದಿಂದಿದ್ದ ಎನ್ನೆದೆನೊಂದಿಲ್ಲ
ಎಳ್ಳುಕಾಳಷ್ಟು
ಇಂದು ಈ ಕೋಮಲ ಸುಂದರ ಪಾದವು
ನೊಂದು ಕೊಂಡಿದ್ದಾವು ಎಷ್ಟೋ ೨

ಧರೆಯೊಳಗೆ ದ್ವಿಜರಿಗೆ ಸರಿಯಾರು ಇಲ್ಲೆಂದು
ಬರುವುದು ಭಯ ಬಹಳಷ್ಟು ವರದಾನಂತಾ
ದ್ರೀಶನ ಪರಮ ಭಕ್ತರಿಗೆ ಬರಬಾರದೆಂದಿಗೂ ಸಿಟ್ಟು ೩

ವಚನ

ಇಂದಿರಾಪತಿಯು ಹೀಗೆಂದು ಮುನಿಪಾದಂಗಳ ಚಂದದಿಂದಲಿ
ಒತ್ತಿತ್ವರದಿಂದ ಉಷ್ಣೋದಕವನು ತಂದು ತೊಳೆಯುತ
ಭಕ್ತಿಯಿಂದ ಶಿರದಲ್ಲಿ ವಹಿಸಿ ಇಂದು ಪಾವಿತನಾದೆನೆಂದು
ಹರುಷದಲ್ಲಿ ಮುಂದೆ ಭೃಗುಮುನಿಯು ಮುಕುಂದನ
ಕೊಂಡಾಡಿ ಬಂದ ಹರುಷದಲಿ ಅಲ್ಲಿಂದ ಭೂಲೋಕದಲ್ಲಿ ಇಂದಿರೇಶನೆ
ಸರ್ವರಿಂದಧಿಕ ಸತ್ಯತಿಳಿರೆಂದ ಮುನಿಗಳೆಲ್ಲ
ಮುಂದೆ ವೈಕುಂಠದಲಿ ಇಂದಿರಾದೇವಿ ಗೋವಿಂದನಾಟವ
ಕಂಡಂದಳೀ ಪರಿಯು ೧

ರಾಗ : ಮೋಹನ ಕಲ್ಯಾಣಿ ಆದಿತಾಳ

ಹರಿಯೆ ಪೋಗುವೆ ನಾನು ಮುನ್ನಿರುತಿರು ಒಬ್ಬನೇ ನೀನು
ತಿರುಕನಾಗಿ ಇರುತಿರುವ ಭೂಸುರನು ಭರದೊಳೊದ್ದ
ನಿನ್ಹಿರಿಯತನವೇನು ಪ

ನಿನ್ನ ಶ್ರೀವತ್ಸವಿದು ಬಹು ಮಾನ್ಯವು ಎಂದೆನಿಸುವುದು
ಎನ್ನ ಆಲಿಂಗನವನ್ನು ಕೊಂಬುವುದು ಇನ್ನು ಈ ಸ್ಥಳವು
ಮಾನ್ಯ ವಾಗಿಹುದು ೧

ಬಡವ ಬ್ರಾಹ್ಮಣರಿಂದ ನೀ ಕಡೆಗೆ
ಕೂಡಿರು ಚಂದಾ ಮಡದಿಯ ಹಂಬಲ ಬಿಡುದೂರದಿಂದ
ತಡಮಾಡದೆ ನಾ ನಡದೆ ಗೋವಿಂದಾ ೨

ಇನ್ನೆನ್ನ ಗೊಡವ್ಯಾಕೊ ಬಿಡು ನಿನ್ನ ಸಂಗತಿ ಸಾಕು ೩

ಎನ್ನ ವೈರಿಗಳ ಮನ್ನಿಸುವ್ಯಾಕೋ ನನ್ನಿಚ್ಛೆಯಲಿ ನಾ
ಇನ್ನಿರಬೇಕೊ ೪

ಹಿಂದಕೆ ಕುಂಭೋದ್ಭವನು ಎನ್ನ ತಂದೆಯ ನುಂಗಿದ ತಾನು
ಮುಂದೆ ಮೂತ್ರಭರದಿಂದ ಬಿಟ್ಟಿಹನು
ಅಂದಿಗೆ ಎನಗಾನಂದವು ಏನು ೫

ಮತ್ತೆನ್ನ ಸೊಸೆಗವರು ಬಹು ಭಕ್ತಿಯಲಿ ಪೂಜಿಸುವರು
ನಿತ್ಯ ನಾಲಿಗೆಯಲಿ ಪೊತ್ತುಕೊಂಡಿಹರು
ವೈರಿಯವರ್ಹೊರತು ಇನ್ನಾರು ೬

ಹುಡುಗ ಬುದ್ಧಿಯು ಎಂದು ನಾ ಕಡೆಗೆ ಬಲ್ಲೆನು ನಿಂದು
ಮಡುವ ಧುಮುಕಿ ಕಲ್ಪಡೆಯ ಪೊತ್ತಿಹುದು
ಪಿಡಿದು ಭೂಮಿಯ ಕಂಭ ಒಡೆದು ಬಂದಿಹುದು ೭

ಬಡವ ಬ್ರಾಹ್ಮಣನಾದಿ ಚಪಗೊಡಲಿಯ ಕೈಯಲಿ ಪಿಡಿದಿ
ಮಡದಿಯ ಕಳಕೊಂಡು ತುಡುಗ ನೀನಾದಿ
ಹಿಡಿದು ಬತ್ತಲೆ ಖೊಟ್ಟಿ ಕಡವನೇರಿದಿ ೮

ಎಷ್ಟು ಪೇಳಲೆ ನಿನಗೆ ನೀನೆಷ್ಟು ಮಾಡಿದಿ ಹೀಗೆ
ಅಷ್ಟು ಮನಸಿನೊಳಗಿಟ್ಟುನೂ ಆಗ ಕಟ್ಟಕಡಿಗೆ ಬಲು
ಸಿಟ್ಟು ಬಂತೆನಗೆ ೯

ಎಲ್ಲರಿಗುತ್ತಮ ನೀನು ಎಂದಿಲ್ಲಿದ್ದೆ ಮೋಹಿಸಿನಾನು
ಒಲ್ಲೆ ಇನ್ನು ಕರವೀರದೊಳಿರುವೇನು
ಬಲ್ಲಿದನಂತಾದ್ರಿಯೊಳಿರು ನೀನೆ ೧೦

ರಾಗ : ಸಾರಂಗ ಆದಿತಾಳ

ಸಿರಿದೇವಿಯು ಹರಿಕೂಡೀ ಪರಿ ಕಲಹ ಮಾಡಿ ತ್ವರಿತದಿಂದ
ನಡೆದಳು ಕರವೀರಪುರಕೆ ಪ

ಪರಮಾತ್ಮನು ತಾ ಮುಂದೀಪರಿ ಚಿಂತಿಸುತಿಹನು ಸಿರಿಯಿಲ್ಲದ
ವೈಕುಂಠ ಸರಿಬಾರದು ಎನಗೆ ೧

ಏನು ಮಾಡಲಿ ಲಕ್ಷ್ಮೀಹೀನನಾದೆನು ನಾನು
ದೀನನಾದೆನು ಹಾ
ನನ್ನೊಳು ನಾನೆ ನೊಂದು ಪ್ರಾಣದರಸಿಯ
ನಾನು ಕಾಣುವೆನೆಂದು
ಪ್ರಾಣ ನಿಲ್ಲದು ಪಟ್ಟದ ರಾಣಿಯ ಬಿಟ್ಟು ೨

ಇನ್ಯಾಂಗೆ ಇರಲಿ ಇನ್ನಾಕೆಯ ಹೊರತು ಕಣ್ಣಿಗೆ
ವೈಕುಂಠಾರಣ್ಯ ತೋರುವುದು ಇನ್ನೆಲ್ಲೋಗಲಿ ಎಂದು

ಚನ್ನಾಗಿ ತಿಳಿದು ಮುನ್ನ ಧರೆಯಲಿ
ಬಂದ ತನ್ನಿಂದ ತಾನು ೩

ಶ್ರೀ ವೈಕುಂಠಕಿಂತ ಶ್ರೀ ವೆಂಕಟಗಿರಿಯು ಅಧಿಕವೆಂದು
ಭಾವಿಸೀ ಪರಿಯು ಆವತ್ತಿಗೆ ಬೇಗಲ್ಲೇ ತಾ ವಾಸಕೆ ನಡೆದ
ದೇವ ತಿಂತ್ರಿಣೆಯೆಂಬೋ ಆ ವೃಕ್ಷವಕಂಡ ೪

ಅಲ್ಲೊಂದು ಇರುವದು ಬಲ್ಲಿದ ಹುತ್ತು ಅಲ್ಲಿ ತಾ
ಅಡಗಿದ ಮೆಲ್ಲನೆ ಪೋಗಿ
ಅಲ್ಲ್ಯಾದೇಶದಲೊಬ್ಬ ಜೋಳಾಖ್ಯನು ಎಲ್ಲರಿಂದಲಿ
ತನ್ನ ಪುರದಲ್ಲೆ ಇರುವಾ ೫

ಅವನ ಮನೆಯಲಿ ಬಂದ ಭುವನಾಧಿಕ ಬ್ರಹ್ಮ
ಶಿವನ ಕರುವಿನ ಮಾಡಿ
ತಾನಾಕಳಾಗಿ ಅವನ ತಾಯಿಯು ಲಕ್ಷ್ಮೀ ಅವನ ಮಾರಿದಳು
ಅವಳು ಬೇಡಿದ್ದು ಕೊಟ್ಟು ಅವನೀಶ ಕೊಂಡ ೬

ಕರೆಸಿಕೊಂಡಷ್ಟು ಹಾಲು ಕರೆವುದು ನಿತ್ಯ
ವರಸಾಧು ಗುಣದಿಂದ
ಇರುತಿಹುದು ಮತ್ತೆ ಎರಡು ಸಾವಿರ ಗೋವುಗಳ
ಸರಸಾಗಿ ಕೂಡಿ
ಚರಿಸಿ ಬರುವುದು ವೇಂಕಟಗಿರಿಗ್ಹೋಗಿ ನಿತ್ಯ ೭

ಮುಂದಾಧೇನುವು ಧ್ಯಾನಕ್ಕೆ ತಂದು ನಾ ಇಲ್ಲಿ
ಬಂದ ಕಾರಣವೇನು
ಎಂದು ಸ್ಮರಿಸುತಲಿ ಇಂದಿರೇಶಗೆ ಭಕ್ತಿಯಿಂದ ಕ್ಷೀರವನು
ಚಂದಾಗಿ ಕರೆವುದು ಬಂದು ಹುತ್ತಿನಲಿ ೮

ಹಿಂಡಾಕಳುಗಳ ಕೂಡಿಕೊಂಡು ಬರುವುದು
ಹಿಂಡದು ತನ್ನ ಕರುವಿನ
ಕೊಂಡು ಒಂದು ದಿಸವು ಕಂಡು ಈ ಪರಿ
ರಾಜನ ಹೆಂಡತಿಯ
ಆಗ ಚಂಡ ಕೋಪದಿ ಗೋಪನ ಕಂಡಂದಳು ಹೀಗೆ ೯

ವಚನ

ಏನು ಎಲೇ ಗೋಪಾಲನೆ ಧೇನುವಿನ ಹಾಲು
ನೀ ಏನು ಮಾಡುವಿನಿತ್ಯ
ನೀನೇ ಕೊಂಬುವಿಯೋ ಅಥವಾ ತಾನೆ
ಕುಡಿವುದೋ ವತ್ಸ ಏನುಮಾಡು
ವುದು ಬೇಗನೇ ಪೇಳೀಗ ನಾನು ಒಳ್ಳೆವಳಲ್ಲ
ಪ್ರಾಣಕೊಂಬುವೇನು
ಧೇನುಪನು ಈ ಮಾತು ಮೌನದಿಂದಲಿ ಕೇಳಿ
ತಾನು ಗಾಭರಿಗೊಂಡು
ಏನು ಬಂತಿದು ಎನಗೆ ಏನು ಮಾಡಲಿ ಎಂದು
ಧ್ಯಾನಿಸುತ ಆ ರಾಜ
ಮಾನಿನಿಗೆ ನುಡಿದ ಬಹು ದೀನನಾಗಿ ೧

ರಾಗ:ದಂತಿ ಆದಿತಾಳ

ಅರಿಯೆ ನಾನಮ್ಮಾ ನಿಮ್ಮರಮನೆ ಸುದ್ದಿಯನು
ಅರಿಯೆ ತುರುಗಳ
ಕಾಯ್ಕೊಂಡು ಬರುವೆ ನಾ ಇದಹೊರ್ತು ಪ

ಕರೆಸಿಕೊಂಬುವರ್ಯಾರೋ ಕರುವನು
ಕಟ್ಟುವರ್ಯಾರೊ ಅರಿಯೆ
ಬರಿದೆ ನೀ ಎನ್ನ ಮೇಲೆ ಹರಿಹಾಯುವದ್ಯಾಕೆ ಅರಿಯೆ ೧

ಕರುವು ತಾನುಂಬೋದೋ ಪರರ
ಪಾಲಾಗುವುದೊ ಅರಿಯೆ
ಸರಸಾಗಿ ತಿಳಿನೀನು ನೆರೆಯೊರೆಯವರನಾ ಅರಿಯೆ ೨

ಕಳ್ಳತನವು ಮಾಡಿ ಸುಳ್ಳು ಮಾತಾಡೋದು ಅರಿಯೆ
ಬಲ್ಲಿದನಂತಾದ್ರಿವಲ್ಲಭ ತಾಬಲ್ಲ ಅರಿಯೇ ನಾನಮ್ಮಾ ೩

ವಚನ

ಪಟ್ಟದರಸಿಯು ಗೋಪನಷ್ಟು ಮಾತನು
ಕೇಳಿ ಸಿಟ್ಟು ಸಹಿಸದೆ
ಕ್ರೂರ ದೃಷ್ಟಿಯಿಂದಲಿನೋಡಿ ಇಷ್ಟು
ಮಾತಿವಗ್ಯಾಕೆ ಕುಟ್ಟಿರೆನ್ನುತ
ಒಳ್ಳೆ ಗಟ್ಟಿ ಚಬುಕಿಲಿ ಬಹಳ ಪೆಟ್ಟು ಹೊಡಿಸಿದಳು
ಪೆಟ್ಟಿಗಂಜುತ ಗೋಪ ಥಟ್ಟನೆ ಮರುದಿನ ಕಟ್ಟಿದಾಕಳ
ಕಣ್ಣಿಬಿಟ್ಟು ಬೆನ್ಹತ್ತಿದನು ಬಿಟ್ಟಂಥ ಆಕಳವು
ನೆಟ್ಟನೆಗಿರಿಗ್ಹೋಗೆ
ಬಿಟ್ಟು ತಾ ಹುತ್ತಿನಲಿ ಅಷ್ಟು ಹಾಲನ್ನೂ ೧

ಸಿಟ್ಟಿಲದನು ನೋಡಿ ದುಷ್ಟಗೋಪಾಲ ತಾ ಮುಟ್ಟಿ
ಕೊಡಲಿಯ ಎತ್ತಿ
ಕುಟ್ಟುವ ಸಮಯದಲಿ ಥಟ್ಟನೆ ಹರಿಯು
ಆ ಪೆಟ್ಟು ತನ್ನಲ್ಲಿ
ಕೊಂಡ ದೃಷ್ಟಿಂದ ತನ್ನವರ ಕಷ್ಟನೋಡದಲೆ ಸೃಷ್ಟಿಕರ್ತನ
ಶಿರದಿ ತಟ್ಟಿ ಪುಟಿತು ರಕ್ತ ನೆಟ್ಟನೆ ಏಳುಗೇಣು
ಪರಿಮಿತಿಯಾಗಿ
ಎಷ್ಟೊಂದು ಭೀತಿಕರ ಶ್ರೇಷ್ಠ ಶಬ್ದವಾಗುವುದು
ಅಷ್ಟುನೋಡುತ
ಪ್ರಾಣಬಿಟ್ಟ ಗೋಪಾಲ ೨

ಮುಂದಕಾಕಳು ಗಿರಿಯಿಂದ ಧರೆಗಿಳಿವುತಲೆ
ಬಂದು ರಾಜನಸಭೆಯ
ಮುಂದೆ ಹೊರಳಾಡುವುದು ಮುಂದೆ ನೃಪಕಂಡು
ಹೀಗೆಂದು ಈ
ಪರಿಯು ಹೊಂದುಗೊಡಿಸಿರಿ
ಗೋವೃಂದದೊಳಗಿದನು ಅಂದ
ನುಡಿಕೇಳಿ ಅಲ್ಲಿಂದ ಪರಿಚಾರಿಕನು
ಮುಂದಕಾಕಳ ನಡಿಸಿ ಹಿಂದೆ
ತಾ ಹೋಗುತಲೆ ಅಂದಿಗಲ್ಲಾದದ್ದು ಚಂದದಲಿ
ನೋಡಿ ಭಯದಿಂದ
ಅರಸಗೆ ಓಡಿಬಂದು ಪೇಳಿದನು ೩

ಅರಸ ಕೇಳುತ ಬೇಗತರಿಸಿ ನರಯಾನವನು
ವಿರಸದಿಂದಲಿ ಕುಳಿತು
ಕರೆಸಿ ಸೈನ್ಯವನೆಲ್ಲ ಚರಿಸುತಲೆ ಆ ರಕ್ತಸುರಿಸುವ ಸ್ಥಳನೋಡಿ
ಸ್ಮರಿಸಿ ತಿಳಿಯದೆ ದಣಿದು ಒರೆಸಿದನು ಬೆವರು ಅರುಸುಬಂದದ್ದು
ನೋಡಿ ಸರಸಿಜೋದ್ಭವಪಿತನು ಸರಸರನೆ ಹೊರಗ್ಹೊಂಟ
ವರಸರ್ಪ ಬಂದಂತೆ ಶಿರಸಿನಲಿ ಅಂಗೈಯನಿರಸಿ ಘಾಯವ
ನೊತ್ತಿ ಸುರಿಸುತಲೆ ಕಣ್ಣೀರು ಒರೆಸುತಲೆ ನುಡಿದಾ ೪

ಧ್ವನಿ

ಕೇಳು ನಿ ಎಲೋ ಪಾಪಿ ಚೋಳರಾಜನೆ ಇದೇನು
ಹೇಳ ಕೇಳದೆ ಇಂಥ
ವೇಳೆಯು ಬಂತೆನಗೆ ಪ

ಮಂದಮತಿಯೇ ನೀ ಮದಾಂಧನಾಗಿರುವಿಯೋ ಇದುಬಡವರ
ಸುದ್ದಿಬಂದು ಬಲ್ಲೇನೊ ತಂದೆತಾಯಿಗಳಿಲ್ಲಾ ಬಂಧುಬಳಗವಿಲ್ಲ
ಇಂದು ಎನಗಾರಿಲ್ಲವೆಂದು ಮಿಡುಕುವೇನೊ ೧

ಎಡತೊಡೆಯಲಿ ಒಪ್ಪುವ ಎನ್ನ ಮಡದಿಯು ಎನ್ನನ್ನು ಬಿಟ್ಟು
ಸಿಡಿದು ಸಿಟ್ಟಿಲಿ ದೂರ ನಡೆದಳು ನಾ ಇಲ್ಲೆ
ಗಿಡದಾಶ್ರಯದಲ್ಲಿರುತಿರಲು
ಬಿಡದೆ ನಿನ್ನ ಗೋಪಾಲ ಕೊಡಲಿಯ ಪಿಡಿದು
ಎನ್ನ ತಲೆ ಒಡೆದನ್ನಯ್ಯಯ್ಯಾ ೨

ಲೇಪಿಸಿ ಮೈಯಾಲಿ ರಕ್ತವು ವ್ಯಾಪಿಸಿತಾನಂತ್ರದಿ
ಈ ಪರಿ ದುಃಖಿತ
ನಾನು ನಿರೂಪಿಸಲಿನ್ನೆಷ್ಟು ತಾಪಸರೊಡೆಯನು
ನಾ ಸಂತಾಪಿಸುತಲೆ
ನಿನ್ನೋಳು ಕೋಪಿಸಿ ದುಃಖವ ಸಹಿಸದೆ
ಶಪಿಸುವೆನು ಬಿಡದೆ ೩

ವಚನ

ಹಾ ಚೋಳಾಧಿಪನೆ ಕಲಿ ಚರಿಸುವ ಪರ್ಯಂತ
ನೀ ಚರಿಸುತಿರು
ಹೋಗು ಪಿಶಾಚನು ಆಗಿನ್ನು ಈ ಚಂಡಾಗಿಹ
ಶಾಪವ ತಾ ಮಿಡುಕುತ
ಕೇಳಿ ಆ ಚೋಳಾಧಿಪ ಬಿದ್ದನು ಮೂರ್ಛಿತನಾಗಲ್ಲೆ ೧

ಎರಡುಗಳಿಗೆಯ ಮೇಲೆ ಸ್ಮರಣೆಯಿಂದಲಿ ಎದ್ದು ತರತರನೆ
ನಡುಗುತ ಈ ಪರಿ ಮಾತಾಡಿದನು ಹರಿಯೆ ನೀ ಎನಗ್ಯಾಕೆ
ಈ ಪರಿ ಶಾಪವ ಕೊಡುವಿ ಅರಿತು ಎನ್ನಪರಾಧವು
ಇರುವುದು ಏನ್ಹೇಳೊ ೨

ಈ ಪರಿಮಾತನು ಕೇಳಿ ಆ ಪರಮಾತ್ಮನು
ಆಗ ಪಾಪಿಗಳನು
ಮೋಹಿಸುತಲೆ ಈ ಪರಿ ತಾನುಡಿದ ನಾಪಾಪಿ ನಾಭಾಳ
ಮುಂಗೋಪಿ ನಾ ನಿನಗೀಗ ಶಾಪಿಸಿ ತಿಳಿಯದೆ
ಪಶ್ಚಾತ್ತಾಪವ ಪಡುವೆನು ೩

ನೆತ್ತಿಯ ಘಾಯಕೆ ನಾಮೈಮರೆದು
ಪರವಶನಾಗಿ ವ್ಯರ್ಥ
ಶಾಪವ ಕೊಟ್ಟೆನೀ ಹೊತ್ತು ಅಯ್ಯಯ್ಯೋ ಸತ್ಯ
ಸಂಕಲ್ಪಕ್ಕೆ ಮತ್ತುಪಾಯವಿಲ್ಲ
ಮಿಥ್ಯವಾಗದು ಶಾಪ ಸತ್ಯವು ತಿಳಿನೀನು ೪

ಆಕಾಶರಸನು ಕನ್ಯಾ ತಾ ಕೊಡುವನು
ಮುಂದೆನಗೆ ಶ್ರೀಕರ ಪದ್ಮಾ
ವತಿಯೆಂದಾಕೆಯ ನಾಮವಿದು ಆಕಾಲಕ್ಕೆ ತಿಳಿಮತ್ತೆ ನಾನಾರತ್ನ
ಗಳುಳ್ಳ ಶ್ರೀ ಕಿರೀಟವು ಕೊಡುವ ತೂಕವು ಬಹಳವಂತೆ ೫

ಎಂದಿಗೆ ಶುಕ್ರವಾರ ಬಂದಿಹುದನಾ ಬಿಡದೆ
ಅಂದಿಗೆ ಆ ಕಿರೀಟವು
ಚಂದದಿ ಧರಿಸುವೆನು ನೊಂದುತಲಿ ಆಗ
ಕಣ್ಣಿಂದ ತುಳುಕಾಲುನೀರು
ಅಂದಾರುಗಳಿಗೆ ಆನಂದವಾಗಲಿ ನಿನಗೆ ೬

ಹೀಗೆಂದಾತನ ಕಳುಹಿ ಆಗಾನಂತಾದ್ರೀಶ ಹೀಗೆಂದು ತನ್ನ
ಮನದಲಿ ಚಿಂತಿಸದೆ ಈ ಗಾಯವು ಮುಂದಿನ್ನು
ಹ್ಯಾಗೆ ಮಾಯುವದೆಂದು
ಆಗಲ್ಲೆ ಸ್ಮರಸಿದನು ಬೇಗ ಭೃಹಸ್ಪತಿಯ ೭

ವಚನ

ಬಂದನಾ ದೇವಗುರು ಇಂದ್ರಲೋಕವ ಬಿಟ್ಟು
ಅಂದಿಗಾಕ್ಷಣ ಹರಿಗೆ
ಅಂದನೀಪರಿತಾನು ಇಂದಿರೇಶನೆ ಇಂದೆನ್ನ ಕರೆದ್ಯಾಕೆ
ಮುಂದೆ ಕಾರ್ಯಗಳೇನು ಚಂದದಲಿ
ಪೇಳೋ ಅಂದ ಮಾತನು
ಕೇಳಿ ಹಿಂದಾದ ವೃತ್ತಾಂತ ಚಂದದಲಿ ತಿಳಿಸಿ
ಹೀಗೆಂದು ನುಡಿದನು ೧

ಮತ್ತೆ ಒಂದೊಂದು ಹೀಗೆ ನೂರೊಂದು
ಮಾತುಗಳ್ಯಾಕೆ ಮುಂದೆ
ತಲೆಗೌಷಧವು ಇಂದು ಪೇಳೆನಗೆ
ಉತ್ತಮವಾಗಿರಬೇಕು ನೆತ್ತಿ
ಗ್ಹಿತಕರವಾಗಿ ಮತ್ತ ಸುಲಭಿರಬೇಕು ಸತ್ಯ ನೀ
ಪೇಳು ದುಡ್ಡೆತ್ತಿ
ಕೊಡುವಂಥಾದ್ದು ಮತ್ತ ಪೇಳಲುಬೇಡ ವಿತ್ತ
ಎನ್ನಲ್ಲಿ ಇಲ್ಲ ಅತ್ಯಂತ
ರಿಕ್ತ ಉತ್ತರಕೆ ಹೀಗೆ ಪ್ರತ್ಯುತ್ತರವ ನುಡಿದ ಗುರು
ಉತ್ತಮನೆ ನೀ
ಬಹಳ ರಿಕ್ತನಾದರೆ ಕೇಳು ಅತ್ತಿಯ
ಹಾಲೊಳಗೆ ಮತ್ತ ಎಕ್ಕೆಯ
ಫಲದ ಹತ್ತಿಯನು ಕೂಡಿಸುತ ಒತ್ತಿ
ಗಾಯದಲ್ಲಿಟ್ಟು ಸುತ್ತು
ಮೇಲ್ವಸ್ತ್ರವನು ನಿತ್ಯ ಈ ಪರಿ ಮಾಡುತ
ಮತ್ತೇನು ಬೇಡಾ ೨

ಇಂಥ ಔಷಧಿಗೆ ಇದರಂತೆ ಪೇಳುವೆ
ಪಥ್ಯ ಶಾಂತಸಾಮೆಯ
ಅನ್ನ ಜೇನುತುಪ್ಪ ಸ್ವೀಕರಿಸುತ ಇಂಥಗಾಯಕೆ ನೀನುಚಿಂತೆ
ಮಾಡಲು ಬೇಡ ಶಾಂತವಾಗುವದಯ್ಯ ಶಾಂತ ಮೂರುತಿಯೆ
ಇಂಥಮಾತಿಗೆ ಹರಿಯು ಸಂತೋಷ ತಾಪಟ್ಟು ಅತ್ಯಂತ ತಲೆ
ದೂಗಿ ಎನ್ನಂತರಂಗಕೆ ಒಪ್ಪುವಂಥಾದ್ದು ಪೇಳಿದಿಯಂತ
ಸ್ತುತಿಸ್ಯವನ ಅದರಂತೆ ಮಾಡುತಲೆ ತಾನಿಂತ ಗಿರಿಯಲಿ ೩

ಹುತ್ತವೆ ಕೌಸಲ್ಯೆ ತಿಂತ್ರಿಣಿಯು ದಶರಥನು ಮತ್ತೆ ಶೇಷಾದ್ರಿ
ಸೌಮಿತ್ರಿಯಂದೆನಿಸುವನು ಸುತ್ತ ವೇಂಕಟಗಿರಿಯು
ಉತ್ತಮಾಯೋಧ್ಯ

ಸರ್ವೋತ್ತಮನು ತಾ ರಾಮಮೂರ್ತಿ ಆಗಿರುವಾ
ಹುತ್ತವೆ ದೇವಕಿಯು
ತಿಂತ್ರೀಣಿ ವಸುದೇವ ಮತ್ತೆ ಶೇಷಾದ್ರಿ
ಬಲಭದ್ರರೆಂಬೆನಿಸುವನು
ಸುತ್ತ ವೇಂಕಟಗಿರಿಯು ಉತ್ತಮಾ ಮಧುರೆ
ಸರ್ವೋತ್ತಮನು
ತಾ ಕೃಷ್ಣಮೂರ್ತಿ ಆಗಿರುವಾ ೪

ಸ್ವಾಮಿ ಪುಷ್ಕರಣಿಯೇ ನಾಮದಿಂದಲಿಯಮುನೆ ಆ ಮಹಾ
ಯಾದವ ಸ್ತೋಮವೆ ಮೃಗವೃಂದ ಕಾಮಚರಧೇನುಗಳು
ನೇಮದಲಿ ಗೋಪಿಯರು ತಾ ಮಹಾಗೋಪಾಲನಾಮದಿಂದಿ
ರುವಾ ಆಮುಕ್ತ ಬ್ರಹ್ಮಸ್ತೋಮ ಮೃಗ
ಪಕ್ಷಿಗಣ ಆವಾನರ ಸ್ತೋಮ
ಸನಕಾದಿಗಳು ಪ್ರೇಮಕರ ಗಿರಿ ರಾಜ ಭೂಮಿಯಲಿ
ವೈಕುಂಠ ಶ್ರೀ ಮಹಾಲಕ್ಷ್ಮೀಶ ತಾ ಮುಕ್ತಿಗೊಡೆಯಾ ೫

ಇಂದಿರೇಶನು ಹೀಗೆ ಒಂದೊಂದು ವರರೂಪದಿಂದ ಬ್ರಹ್ಮಾದಿ
ಸುರವೃಂದವನು ಕೂಡಿ ಆನಂದದಿಂದಾಡುವನು
ಮುಂದೆ ಪರಿಮಿತಿ
ಇಲ್ಲವೆಂದು ಆತನ ಸ್ತುತಿಗೆತಂದು ನಮೊ ಎಂಬೆ ಚಂದಾದ
ವೈಕುಂಠ ಮಂದಿರವ ಬಿಟ್ಟು ಸುರವಂದಿತಾನಂತಾದ್ರಿ ಮಂದಿರವ
ಮಾಡಿ ಬಹು ಮಂದಿಯನು ಸಲಹುವಾನಂದ ಮೂರುತಿಯ
ದಯದಿಂದ ಮುಗಿಯಿತು ಇಲ್ಲಿಗೊಂದು ಅಧ್ಯಾಯ ೬

ಅಧ್ಯಾಯ ಎರಡು

ಸ್ವಾತ್ಮಾನಾಪಿ ವರಾಹೇಣ ದತ್ತಾವಾಸ ಸ್ಥಳೋಚ್ಯುತಃ
ಮಾಯಾವೀ ಬಕುಲಾಲಾಭ ತುಷ್ಟೋ ವ್ಯಾದ್ವೇಂಕಟೇಶ್ವರ

ಒಂದು ದಿನ ವೇಂಕಟಪತಿಯು ತ್ವರದಿಂದ
ಅರುಣೋದಯದಲೆದ್ದನು
ಮುಂದಕೌಷಧವನು ತರಬೇಕೆಂದು ತೆರಳಿದನು
ಅಂದಿಗಲ್ಲೆ ಭೂ
ವರಾಹನು ಬಂದು ಗರ್ಜನೆ ಮಾಡುತೆದುರಿಗೆ ಮುಂದಕಲ್ಲೆ
ಅಡಗಿದನು ಭಯದಿಂದ ವೇಂಕಟನು ೧

ಚಂದದಲಿ ಅಡಗಿರುವ ದೇವನ ಬಂದು
ಪಿಡಿದನು ಭೂವರಾಹನು
ಮಂದ ಜನರನೆ ಮೋಹಿಸುತ ಹೀಗೆಂದ ವೇಂಕಟಗೆ
ಇಂದು ನೀನ್ಯಾರೆಲೊ
ನರಾಧಮ ಬಂದ ಕಾರಣವೇನು ಇಲ್ಲಿಗೆ ಮುಂದೆ
ಪೋಗುವಿಯೆಲ್ಲಿ
ನೀ ಎನ್ನ ಮುಂದೆ ನುಡಿಬೇಗ ೨

ಮಾತು ಕೇಳುತ ವೀ ಪರಿಯ ಬಹುಸೋತು
ಮಾತಾಡಿದನು ವೇಂಕಟನು
ಮಾತು ಮಾತಿಗೆ ಉಸಿರು ಗರೆವುತ
ಆತುರನ ಪರಿಯ ಕೂತುಪೇಳಿದನಾಗ
ತನ್ನ ಪುರಾತನ ಕಥೆಯಲ್ಲ ಆತಗೆ ಈ ತಲೆಯ ಔಷಧಕೆ
ಬಂದೆನುನೀ ತಿಳಿಯೋ ಎಂದ ೩

ಅಪ್ಪಿಕೊಂಡೀ ಮಾತಿಗವನಾ ಮುಪ್ಪಿನವ
ತಾ ಕ್ರೋಢರೂಪಿಯು ತಪ್ಪದಲೇ
ಕಣ್ಣೀರು ಸುರಿಸುತಲಿಪ್ಪ ದುಃಖದಲಿ
ಅಪ್ಪಿಕೊಂಡಿಹ ಭೂವರಾಹನು
ಅಪ್ಪವೇಂಕಟರಾಯರಿಬ್ಬರು ಒಪ್ಪಿತೋರಿದಾಗ
ಹಾಲಿಗೆ ಹೆಪ್ಪು ಕೊಟ್ಟಂತೆ ೪

ತಮ್ಮೊಳಗೆ ತಾವಿಬ್ಬರೂ ತಂತಮ್ಮ ಸುಖ
ದುಃಖಗಳ ಪೇಳುತ ಸುಮ್ಮನಾಗದೆ
ಮತ್ತೆ ನುಡಿದರು ರಮ್ಯವಚನಗಳ ನಮ್ಮ
ನಿಮ್ಮಾ ಭೆಟ್ಟಿ ಇದು ಸಂಭ್ರಮವು
ಆಯಿತು ಇಬ್ಬರಿಗೆ ಬಹು ಸಮ್ಮತಾನಂತಾದ್ರಿಯೆಂಬುವ
ರಮ್ಯಗಿರಿಯಲ್ಲಿ ೫

ರಾಗ: ಶಂಕರಾಭರಣ ಆದಿತಾಳ

ಮುಂದಾ ವೇಂಕಟೇಶ ತಾ ಹೀಗೆಂದು
ಮಾತಾಡಿದನುನಂದೊಂದು
ಮಾತಿರುವುದು ಕೇಳೊ ಶ್ರೀ ಧರಣಿಕಾಂತಾ
ಇಂದು ನಮ್ಮಿಬ್ಬರೊಳಗೆ
ಒಂದು ಮಾತು ಉಳಿಯಲಿಲ್ಲಾ ನಿಂದೊಂದು ಮಾತೇನು
ಪೇಳೊ ಶ್ರೀ ಲಕ್ಷ್ಮೀಕಾಂತಾ ೧

ಕಲಿಯುಗ ಪೋಗುವ ತನಕ ಚಲಿಸದೆ ನಿನ್ನಲ್ಲೆ
ಇರವೆ ಸ್ಥಳ ಒಂದಿಷ್ಟು
ಕೊಡು ನೀ ಎನಗೆ ಶ್ರೀಧರಣಿಕಾಂತಾ ಸ್ಥಳ
ಸುದ್ದಿ ಒಂದು ಬಿಟ್ಟು
ಉಳಿದ ಮಾತನಾಡೋ ನೀನು ತಿಳಿದಿಹುದು
ನಿನ್ನ ಬುದ್ಧಿ ಶ್ರೀ ಲಕ್ಷ್ಮೀಕಾಂತಾ ೨

ಎನ್ನ ಬುದ್ಧಿ ತೆಗೆಯದಿರು ಅನ್ಯರಿಗೆ ಹೇಳದಿರು
ನಿನ್ನವನಾಗಿರುವೆ
ಕೇಳೊ ಶ್ರೀ ಧರಣಿಕಾಂತಾ ನನ್ನವನಾದರೆ
ಒಳ್ಳಿತು ನಿನ್ನಿಂದ ಫಲ
ವೇನೊ ಎನಗೆ ಹೊನ್ನು ಎಷ್ಟು ಕೊಡುವಿ
ಪೇಳೊ ಶ್ರೀ ಲಕ್ಷ್ಮೀಕಾಂತಾ ೩

ಕೊಡುವೆ ನಾನಿನಗೇನು ಇನ್ನು ಬಡವಾನಾ
ಮಡದಿಯ ಕಳೆದು
ಅಡವಿ ಪಾಲಾಗಿದ್ದು ಅರಿಯೆಯಾ
ಶ್ರೀಧರಣಿಕಾಂತಾ ಬಡವ
ನೀನಾದರೆ ಬಡವರಲ್ಲ ನಿನ್ನ ಭಕ್ತರು ಮುಡುಪು ತಂದ
ಮೇಲೆ ಕೊಡು ನೀ ಲಕ್ಷ್ಮೀಕಾಂತಾ ೪

ಅಂದು ಒಂದು ಬಿಟ್ಟುಹೇಳೋಮುಂದೆ
ಪದುಮಾವತಿಯ
ಕೂಡಿಕೊಂಡು ಮದುವೆ ಸಾಲ ಮುಟ್ಟಿಸುವೆನೊ
ಶ್ರೀಧರಣಿಕಾಂತಾ
ಮದುವೆ ಸಾಲವನ್ನು ಕೊಟ್ಟು ಮುದದಿಂದ
ಋಣಮುಕ್ತನಾಗಿ
ಅದರಮೇಲೆ ಕೊಟ್ಟೀಯೇನೋ ಶ್ರೀ ಲಕ್ಷ್ಮೀಕಾಂತಾ ೫

ಋಣಮುಕ್ತನಾನಾದಮೇಲೆ ಕ್ಷಣಮಾತ್ರ ಇಲ್ಲಿರುವವನಲ್ಲಾ
ಒಣಮಾತೇನೋ ಸ್ಥಳ ಪೇಳೆನಗೆ ಶ್ರೀ ಧರಣಿಕಾಂತಾ
ಗುಣಗಳುನಿನ್ನಲ್ಲೆ ಇಲ್ಲಹಣವು ಕೊಡಲಾಗುದು ಮತ್ತೆ
ಒಣಸ್ನೇಹಕ್ಕೆ ಸ್ಥಳ ಬಂದೀತೆ ಲಕ್ಷ್ಮೀಕಾಂತಾ ೬

ಮುಂಚಿದ್ದ ಈ ಸ್ಥಳವು ಮುಂಚಿನ್ಹಾಂಗಿರುವದು
ಇಲ್ಲೆ ಚಂಚಲ
ನಾಗ ಬೇಡಾ ಶ್ರೀ ಧರಣಿಕಾಂತಾ ವಂಚಕ ನೀಸರಿಯೋ
ಒಂದಕು ಕೊಡದ ಲೋಭಿ ಒಳ್ಳೆಹಂಚಿಕೆಯನೋ ನೀನು
ಶ್ರೀ ಲಕ್ಷ್ಮೀಕಾಂತಾ ೭

ನಿನ್ನೊಳು ವಂಚನೆಯಿಲ್ಲ ನಿನ್ನ ಹಿರಿಯತನ
ಕಡೆಗೆ ಚನ್ನಾಗಿ
ನಾನಡೆಸುವೆನು ಶ್ರೀ ಧರಣಿಕಾಂತಾ

ಎನ್ನಹಿರಿತನವೇನು ಚನ್ನಾಗಿ ನಡೆಸುವದೇನು ಮುಂದೆ
ಪೇಳೊ ನೀನು ಲಕ್ಷ್ಮೀಕಾಂತಾ ೮

ನಿನ್ನ ದರ್ಶನವು ಮುಂಚೆ ನಿನ್ನಾ ತೀರ್ಥದಲ್ಲೆ ಸ್ನಾನ
ನಿನ್ನ ಅಭಿಷೇಕವು
ಮುಂಚೆ ಶ್ರೀ ಧರಣಿಕಾಂತಾ ನಿನ್ನ ಮಾತು
ಗೆಲಿಸುವಿಯೊ ಧನ್ಯ
ನೀನು ಧರೆಯೊಳಗೆ ನಿನ್ನಂತೆ ಆಗಲಿ ಹೋಗೋ
ಶ್ರೀ ಲಕ್ಷ್ಮೀಕಾಂತಾ ೯

ನೂರುಪಾದ ಅಳದು ಕೊಡು ನೀ ಬ್ಯಾರೆ
ಸ್ವಾಮಿ ಪುಷ್ಕರಣೆಯ
ತೀರದಲಿ ಇರುವೆ ನಾನು ಶ್ರೀ ಧರಣಿಕಾಂತಾ
ಮೂರು ಪಾದದಿಂದ
ಹಿಂದಕೆ ಮೂರು ಲೋಕವನ್ನು ಗೆದ್ದಿ ನೂರು
ಪಾದಕಂತು ಎಷ್ಟೊ ಲಕ್ಷ್ಮೀಕಾಂತಾ ೧೦

ಮತ್ಯಾಕೀಪರಿ ಮಾತಾಡುವಿ ಹೊತ್ತು ಬಹಳಾಯಿತು ಎನಗೆ
ಪಥ್ಯಕ್ಕೆ ತಡವಾಯಿತೇಳೋ ಶ್ರೀಧರಣಿಕಾಂತಾ
ಸತ್ಯ ನೂರುಪಾದ ಸ್ಥಳವ ಕ್ಲಿಪ್ತ ಮಾಡಿಕೊಟ್ಟೆ ನಿನಗೆ
ಸ್ವಸ್ಥದಿಂದ ಇರುಹೋಗೋನೀ ಲಕ್ಷ್ಮೀಕಾಂತಾ ೧೧

ಸ್ವಸ್ಥದಿಂದ ಇರುವೆನ್ಹ್ಯಾಂಗೆ ಪಥ್ಯದಡಿಗೆ ಮಾಡುವಂಥ
ಹೆತ್ತತಾಯಿ ಇಲ್ಲವೋ ಎನಗೆ ಶ್ರೀ ಧರಣಿಕಾಂತಾ
ಹೆತ್ತಾಯಿಯ ಪರಿಯಾಗಿ ನಿನಗೆ ಪಥ್ಯದಡಿಗೆ ಮಾಡುವದಕೆ
ಮತ್ತ ಬಕುಲಾವತಿಯ ಕೊಡುವೆ ಶ್ರೀ ಲಕ್ಷ್ಮೀಕಾಂತಾ ೧೨

ಇಂಥ ಘಾಯ ಮಾಯುವತನಕ ಜೇನ್ತುಪ್ಪಸಾಮೆಯ ಅನ್ನ
ಸಂತತ ಬೇಕಲ್ಲಾ ಎನಗೆ ಶ್ರೀಧರಣಿಕಾಂತಾ
ಚಿಂತಾಮಣಿಗೆ ಸರಿಯಾದಂಥ ನಂ ತಾದ್ರಿಯಲ್ಲಿದ್ದ ಮೇಲೆ
ಚಿಂತೆಯಾಕೆ ಅದನು ಕೊಡುವೆ ಶ್ರೀ ಲಕ್ಷ್ಮೀಕಾಂತಾ ೧೩

ವಚನ

ಧರಣಿಯ ರಮಣ ಈ ಪರಿಯು ಬೇಡಿದ್ದುಕೊಟ್ಟು ತಿರುಗಿದನು
ಸ್ವಸ್ಥಳಕೆ ಸಿರಿದೇವಿಯರಸ ತಾಂ ತೆರಳಿದನು
ಸ್ವಾಮಿ ಪುಷ್ಕರಣೀಯ
ತೀರಕ್ಕೆ ಸರಸದಲಿ ಮುಂದಲ್ಲೆ ಇರುವ ನಿತ್ಯದಲಿ ಪರಮ
ಭಕುತಳು ಆಗಿ ಇರುವ ಬಕುಲಾವತಿಯ ಕರದಿಂದ ಪಥ್ಯ
ಸ್ವೀಕರಿಸುತಲೇ ನಿತ್ಯದಲಿ ಸುರತಾನಂತಾಖ್ಯ ಗಿರಿಯಲ್ಲಿ
ಇರುವವನ ಕರುಣದಲಿ ಮುಗಿಯಿತೆರಡು ಅಧ್ಯಾಯ ೧

ಅಧ್ಯಾಯ ಮೂರು

ಜನ್ಮನಾಕಾಶನಂದಾ ವಸುಧಾನಾಗ್ರಜಾ ನಿಜಾನ್
ಪದ್ಮಾವತೀ ಪದ್ಮಭವಾ ವನಕ್ರೀಡಾರತ್ಯಾವತಾತ್

ವಚನ

ಚಂದದಲಿ ವೇಂಕಟಗೆ ಮುಂದೆ ಪದ್ಮಾವತಿಯ
ಸಂದರ್ಶನಾದದ್ದು
ಸಂಧಾನ ತರಬೇಕು ಎಂದು ಪದ್ಮಾವತಿಯ
ತಂದೆಯ ಕಥೆಸ್ಮೃತಿಗೆ
ತಂದು ಅದು ವಿಸ್ತಾರದಿಂದ ಪೇಳುವೆನು
ಚಂದ್ರ ವಂಶದೊಳ್ಳೊಬ್ಬ ಚಂದಾದ ನೃಪ
ಸುಧರ್ಮನೆಂದು ಇರವನು
ಅವಗೆ ಮುಂದೆ ಇಬ್ಬರು ಸುತರು ಚಂದದಲಿ ಆಕಾಶನೆಂದು
ಹಿರಿಯಗೆ ನಾಮ ಮುಂದೆ ಕಿರಿಯನು
ತೊಂಡಮಾನಸೆನಿಸುವನು ೧

ಆ ಕಾಲಕೊಂದು ದಿನ ಆಕಾಶನೃಪ ಚಿತ್ತ
ವ್ಯಾಕುಲದಿ ಹೀಗೆ
ಚಿಂತಾಕುಲಾಗಿರುತಿರುವ ಲೋಕಗಳು
ಇಲ್ಲೆಂದು ಶೋಕದಲಿ

ಕಣ್ಣೀರು ಹಾಕಿ ಸ್ಮರಿಸಿದ ದೇವಲೋಕ ಗುರುವ
ಆಕ್ಷಣಕೆ ಗುರು ದೇವಲೋಕದಿಂದಲಿ ಬಂದು
ಯಾಕೆ ಸ್ಮರಿಸಿದೆ
ಎನ್ನನೀಕಾಲದಲಿ ಏನುಬೇಕು ಬೇಡಲೋನೀನು ನಾ
ಕೊಡುವೆನೆಂದೆನಲು ಆಕಾಶನೃಪ ತನ್ನ
ಶೋಕವನು ನುಡಿದಾ ೨

ಏನು ಪೇಳಲಿ ಗುರುವೆ ನಾನು ಬಲು
ಪಾಪಿಷ್ಠ ಏನು ಇದ್ದೇನು
ಸಂತಾನ ಮುಂದೆನಗಿಲ್ಲ ಏನು ಪೂರ್ವದಲ್ಲಾಗ
ನಾನು ಮಾಡಿದ
ಪಾಪ ಏನು ತಿಳಿಯದು ಎನಗೆ ನೀನು
ಪೇಳೋ ಹೀನಬುದ್ಧಿ
ಯಲಿ ಪರಮಾನವ ಮಕ್ಕಳ ನಾನು
ಕೊಲಿಸಿದೆನೇನು
ದಾನ ಪಾತ್ರರಿಗೆ ಫಲ ದಾನಮಾಡಿಲ್ಲೇನು
ಏನು ಕಾರಣ
ಸಂತಾನ ಕಣ್ಣಿಲಿ ಕಾಣೆ ನಾನು ಅಯ್ಯಯ್ಯೊ ೩

ಮಕ್ಕಳಿದ್ದರೆ ರಾಜ್ಯ ಮಕ್ಕಳಿದ್ದರೆ ಮನೆಯು
ಮಕ್ಕಳಾಡಿದರೆ
ಬಹಳಕ್ಕರತೆ ಜೀವಕ್ಕೆ ಮಕ್ಕಳಿಲ್ಲದೆ ಮತ್ತೆ ಮಿಕ್ಕರಸ
ಪದವ್ಯಾಕೆ ಮಕ್ಕಳಿದ್ದರೆ ಎಲ್ಲ ಸೌಖ್ಯವೆನಿಸುವದು
ಮಕ್ಕಳಿಂದಲೆ
ಹಬ್ಬ ಹುಣ್ಣಿಮೆಯು ಉಲ್ಲಾಸ ಮಕ್ಕಳಿಂದಲೆ
ಮುಂಜಿ ಮದುವೆಯ

ಕಾರ್ಯ ಮಕ್ಕಳಿಗೆ ಸರಿಯ ಮಾಣಿಕ್ಯ
ಧರೆಯೊಳಗಿಲ್ಲ ಮಕ್ಕಳಿಂದಲೆ
ಇಹವು ಮಕ್ಕಳಿಂದಲೆ ಪರವು ಮಕ್ಕಳಿಲ್ಲೆನ್ನ
ಭಾಗ್ಯಕ್ಕೆ ಅಯ್ಯಯ್ಯ ೪

ಮಕ್ಕಳ ಮೋರೆ ಎವೆ ಇಕ್ಕದಲೆ
ನೋಡಿಲ್ಲ ಮಕ್ಕಳಾಡಿದ
ಮಾತು ನಕ್ಕು ಕೇಳಿಲ್ಲ ನಾ ಮಕ್ಕಳಿಂದಲೆ ಕೂಡಿ ಅಕ್ಕರದಿ
ಉಣಲಿಲ್ಲ ಮಕ್ಕಳನು ಎತ್ತಿ ಮುದ್ದಿಕ್ಕಿದವನಲ್ಲ ಮಕ್ಕಳಿಲ್ಲದ
ಮನುಜ ಲೆಕ್ಕದಾವದರೊಳಗೆ ಬೆಕ್ಕು ಮೊದಲಾದಂಥ
ಮಿಕ್ಕ ಪ್ರಾಣಿಗಳೆಲ್ಲ ಮಕ್ಕಳಾಡಿದ ಬಹಳ ಚಕ್ಕಂದವನು
ನೋಡಿ ಸೌಖ್ಯ ಪಡುತಿಹದಯ್ಯ ಧಿಕ್ಕರಿಸು ಎನ ಜನ್ಮ
ಅದಕ್ಕಿಂತ ವ್ಯರ್ಥ ೫

ಮುನ್ನ ನಮ್ಮೊಳಗಾರು ಉಣ್ಣದಲೆ ಈ ಬದುಕು ಮಣ್ಣು
ಪಾಲಾಗುವದು ಘನ್ನ ಈ ಚಿಂತಿಯಲಿ ಬಣ್ಣಗೆಟ್ಟೆನು
ನಾನು ಕಣ್ಣಿಗಿಲ್ಲವೋ ನಿದ್ರೆ ಸುಣ್ಣದಂದಲಿ
ಕುದ್ದು ಸುಣ್ಣಾದೆನಯ್ಯ
ಇನ್ನೇನು ಗತಿಯೆನಗೆ ಚನ್ನಾಗಿ
ಉಭಯಕುಲ ತಾರಿಸುವಂಥ
ಹೆಣ್ಣುಮೊದಲಾಗಿಲ್ಲ ಪುಣ್ಯಹೀನನು
ನಾನು ಅಣ್ಣತಮ್ಮರ
ಒಳಗೆ ಪುಣ್ಯ ಇಲ್ಲೊಬ್ಬನಲಿ ಪುಣ್ಯಗುರುವೆ ೬

ರಾಗ: ಶಂಕರಾಭರಣ ಆದಿತಾಳ

ಇಂಥ ಮಾತಿಗೆ ಜೀಯ ಹೀಗಂತ ನುಡಿದನು ಚಿಂತೆ
ಮಾಡಬೇಡ ಭೂಕಾಂತ ಎಂದನು ೧

ಪುತ್ರ ಕಾಮೇಷ್ಟಿಮಾಡು ಭಕ್ತಿಯಿಂದಲಿ
ಪುತ್ರನಾಗುವನು ನಿಮಗೆ ಸತ್ಯ ನೀ ತಿಳಿ ೨

ಗುರುವಿನ ಮಾತುಕೇಳಿ ಪರಮ ಹರುಷದಿಂದಲಿ
ಅರಸ ಬ್ರಾಹ್ಮಣರನೆಲ್ಲ ಕರೆಸಿದಾಗಲೇ ೩

ಮುಂದೆ ಯಜ್ಞ ಮಾಡಬೇಕು ಎಂದು ತ್ವರದಲಿ
ಒಂದು ಭೂಮಿ ಶೋಧಿಸಿದನು ಚಂದದಲಿ ೪

ಚಲುವ ನೇಗಿಲ ಜಗ್ಗಿ ಎಳೆವ ಕಾಲಕೆ
ಹೊಳೆವ ಪದ್ಮ ಬಂತು ಅಲ್ಲಿ ಸುಳಿದು ಮೇಲಕೆ ೫

ಇರುವಳೊಬ್ಬಳಲ್ಲಿ ಮತ್ತೆ ಪರಮಸುಂದರಿ
ಅರಸನೋಡಿ ಬೆರಗಿನಿಂತ ಸ್ಮರಿಸಿ ಪರಿಪರಿ ೬

ಕಾಣಿಸಿದಲೆ ಗಗನದಲಿ ವಾಣಿಯಾಯಿತು
ಕಾಣದಿದ್ದರೂ ಈಗ ಸಕಲಪ್ರಾಣಿ ಕೇಳಿತೊ ೭

ಇನ್ನು ಚಿಂತೆ ಮಾಡಬೇಡ ಧನ್ಯ ಅರಸ ನೀ
ನಿನ್ನ ಮಗಳು ಎಂದು ಚೆನ್ನಾಗಿ ತಿಳಿಯೋ ನೀ ೮

ಇಂದಿನಾರಭ್ಯ ಕ್ಲೇಶ ಹಿಂದೆ ಬಿಡುವಿಯೊ
ಮುಂದೆ ಮುಂದಕಿನ್ನು ಆನಂದ ಬಡವಿಯೊ ೯

ಗಗನ ವಾಣಿಯನ್ನು ಕೇಳಿ ಅರಸ ಬಗೆಯಲಿ
ಮಗಳ ನೆತ್ತಿಕೊಂಡನಾಗ ಮುಗಳು ನಗೆಯಲಿ ೧೦

ತಂದೆ ಮಗಳ ಜನ್ಮ ಪದ್ಮದಿಂದ ತಿಳಿದನು
ಮುಂದೆ ಪದ್ಮಾವತಿಯೆಂದು ಕರೆದನು ೧೧

ಮಗಳಕಾಲಗುಣದಿ ಮುಂದೆ ಮಗನು ಆದನು
ಅವನ ಕರೆದ ವಸುಧಾನನೆಂದು ಗಗನರಾಜನು ೧೨

ತಕ್ಕವಾಗಿ ಅರಸಗ್ಹೀಗೆ ಮಕ್ಕಳಾದರು
ಸೌಖ್ಯದಿಂದ ಮುಂದೆ ದಿನದಿನಕ್ಕೆ ಬೆಳೆದರು ೧೩

ಬಂತು ಯೌವನವು ಭೂಕಾಂತ ಪುತ್ರಿಗೆ
ಬಂತು ಆಗ ಮತ್ತೆ ಬಹಳ ಚಿಂತೆ ಅರಸಗೆ ೧೪

ಇಂಥ ಮಗಳಿಗಿನ್ನು ತಕ್ಕಂಥ ಪುರುಷನು
ಪ್ರಾಂತದೊಳಗೆ ಇಲ್ಲದಿವ್ಯ ಕಾಂತಿ ಮಂತನು ೧೫

ಎಂತು ನೋಡಲಿನ್ನು ಹುಡುಕಿ ಶ್ರಾಂತನಾದೆನು
ಚಿಂತೆಯೊಳಗೆ ಬಿದ್ದು ಮುಂದೆ ಪ್ರಾಂತಗಾಣೇನು ೧೬

ಅಂತರಂಗದೊಳಗೆ ಹೀಗಂತ ಅನುದಿನ
ಚಿಂತಿಸಿದನು ಮರೆತು ಅನಂತಾದ್ರೀಶನ ೧೭

ವಚನ

ಒಂದಾನೊಂದು ದಿನ ಮುಂದೆ ಪದ್ಮಾವತಿಯು
ಚಂದಾದ ಕುಸುಮಗಳ
ಇಂದು ಮುಡಿಯಲು ಬೇಕು ಎಂದು ಸಖಿಯರ
ಕೂಡಿ ಮುಂದೆ
ವನಕ್ಹೋಗಬೇಕೆಂದು ಶಿಂಗರಿಸಿದಳು ಚಂದದಿಂದಾ
ಇಂದು ಮುಖಿಯು
ತನ್ನಳತೆಯಂದಿರುವ ಕನ್ನಡಿಯ ಮುಂದಿರಿಸಿ
ನೋಡುತಲೆ ಮುಂದೆ

ರತ್ನದ ಹಣಿಗೆಯಿಂದ್ಹಿಕ್ಕಿ ಬೈತಲೆಯ ಚಂದಾಗಿ
ತೆಗೆದು ತ್ವರದಿಂದ
ಆಭರಣಗಳ ಮುಂದೆ ತರಿಸಿದಳು ೧

ಕೆತ್ತಿಸಿದ ರಾಗುಟಿಯ ಒತ್ತಿ ಮೊದಲ್ಹಾಕಿ ಹತ್ತೊತ್ತಿದಳು
ಅದರ್ಹಿಂದೆ ಸುತ್ತಾದ ಚೌರಿಯನು ಮತ್ತ
ಸಾಲ್ಹಿಡಿದು ಇತ್ತಿತ್ತು
ಕೇತಕಿಗಳನು ಒತ್ತಿ ಹೆಣೆದಳು ಗೊಂಡೆ
ಮತ್ತೆ ತುದಿಗೆ ಅತ್ತಿತ್ತ
ನೋಡದಲೆ ಅರ್ಥಿಯಿಂದ ಮುಖ ತೊಳೆದು
ಮತ್ತ ಮೇಲರಿಸಿನವ
ಅತ್ಯಂತ ತಿಲಕ್ಹಚ್ಚಿ ಚಿತ್ರ ಕುಂಕುಮ ಫಣಿಗೆ
ಚಿತ್ತಗೊಟ್ಟಚ್ಚಿದಳು
ಚಿತ್ತಾರ ಬರೆದಂತೆ ಮತ್ತ ಗಜಗಮನೆ ೨

ಥಳಥಳನೆ ಜಾತಿಯಿಂದ್ಹೊಳೆವ ಮುತ್ತಿನ ಭವ್ಯ ಎಳೆಯ
ಇಮ್ಮಡಿ ಮಾಡಿ ನಳಿನಾಕ್ಷಿ ಬೈತಲಗೆ ಅಳತೆಯಿಂದ್ಹಾಕಿದಳು
ತಳಪಿನಲಿ ಎಡಬಲಕೆ ಎಳೆದು ಕಟ್ಟಿದಳ್ಹಿಂದೆ ಹೆರಳಿಗ್ಹಾಕಿ
ತೊಳೆದ ಮುತ್ತಿನ ಬುಗಡಿ ಪೊಳೆವ ಮೀನ್ಹಾವಲಿಯು
ಝುಳಿ ಝುಳಿತವಾಗಿರುವ ಗಿಳಿಗಂಟಿ ಚಳತುಂಬುಗಳ ನಿಟ್ಟು
ಕರ್ಣದಲಿ ಉಳಿದ ದ್ರಾಕ್ಷಾಲತೆಯ ಎಳೆದು ಬಿಗಿದಳು ಮೇಲೆ
ಸುಳಿಗುರಳಿನಲ್ಲಿ ೩

ಇದ್ದ ಮುತ್ತುಗಳೆಲ್ಲ ಗೆದ್ದು ಬಹು ಮೇಲಾಗಿ
ಇದ್ದ ಮುತ್ತುಗಳ್ಹಚ್ಚಿ
ತಿದ್ದಿ ಮಾಡಿದ ನತ್ತು ಉದ್ರೇಕದಿಂದಿಡಲು ಮುದ್ದು ಸುರಿವುತ
ಮುಂಚೆ ಇದ್ದ ಮುಖ ಮತ್ತೆ ಎದ್ದು ಕಾಣಿಸಿತು ಪ್ರದ್ಯುಮ್ನ

ಚಾಪದಂತೆರಡು ಹುಬ್ಬುಗಳ ಮಧ್ಯೆ ನೊಸಲಿನ ಮೇಲೆ ಶುದ್ಧ
ಕಸ್ತೂರಿಯನ್ನು ತಿದ್ದಿ ತಿಲಕವನಿಟ್ಟು ತಿದ್ದಿದಳು ಕಾಡಿಗೆಯ
ಪದ್ಮಲೋಚನಗಳಿಗೆ ಪದ್ಮಜಾತೆ ೪

ಚಂದ್ರಗಾವಿಯನ್ನುಟ್ಟು ಚಂದಾದ ಕುಪ್ಪಸವ
ಮುಂದೆ ಬಿಗಿ ಬಿಗಿತೊಟ್ಟು
ಮುಂದಲೆಗೆ ಶೋಭಿಸುವ ಚಂದ್ರಸೂರ್ಯರನಿಟ್ಟು ಚೆಂದಾಗಿ
ಬೈತಲೆಗೆ ಚಂದಿರವ ಸುರಿದಳು ಚಂದ್ರಮುಖಿಯು
ಕಂದರ್ಪಬಾಣಗಳ ವೃಂದವನ್ನು ಒಮ್ಮೆಲೆ
ಸಂಧಿಸಿದ ಪರಿ ಗೀರು
ಗಂಧವನು ಕೈಗ್ಹಚ್ಚಿ ಮುಂದೆ ಕೊರಳಿಗೆ ಒರಿಸಿ ಚಂದ್ರಸರ
ಮೊದಲಾದ ಒಂದೊಂದು ಹಾರಗಳ
ಮುಂದೆ ಹಾಕಿದಳು ೫

ಕಟ್ಟಿ ಕೊರಳಿಗೆ ಚಿಂಚಪಟ್ಟಿಸರ ಮುತ್ತು
ಮೇಲಿಟ್ಟು ಚಿಂತಾಕವನು
ಕಟ್ಟಿ ಗೆಜ್ಜೆಯ ಟೀಕೆ, ಕಟ್ಟಾಣಿಯನು ಮತ್ತೆ
ಕಟ್ಟಿ ತಾಯಿತ
ಮುತ್ತು ಇಟ್ಟು ಮೋಹನಮಾಲೆ ಶ್ರೇಷ್ಠ ಪದಕ
ಬಟ್ಟಕುಚಗಳ
ಮೇಲೆ ದಟ್ಟ ಗೋದಿಯ ಸರವು ದಿಟ್ಟ
ಏಕಾವಳಿಯ ಇಟ್ಟು
ಪುತ್ಥಳಿ ಸರವು ಅಷ್ಟು ಸರಗಳನೆಲ್ಲ
ಮೆಟ್ಟಿ ಮೇಲ್ಮೆರೆವಂಥ
ಶ್ರೇಷ್ಠ ಸರಿಗಿಯತರಿಸಿ ಇಟ್ಟಳಾಕೆ ೬

ಒಂಕಿತೋಳಿಗೆ ಹರಡಿ ಕಂಕಣವು ಕೈಗಿಟ್ಟು
ಟೊಂಕದಲಿ ಒಡ್ಯಾಣ

ಬಿಂಕದಲಿ ಬಿಗಿದಿಟ್ಟು ಪಂಕಜಾಕ್ಷಿಯು
ಮುಂದಲಂಕರಿಸಿದಳು
ಪಾದ ಪಂಕಜಗಳಿಗೆ ಅಹಂಕಾರದಿಂದ
ಪೊಂಕದಿಂದಿಟ್ಟು ಅಕಳಂಕ
ರುಳಿ ಕಾಲ್ಗಡಗ, ಪಂಕಜಾವತಿ ತಾನು
ಕೊಂಕವನು ಮಾಡುತಲೆ
ಬಿಂಕದಲೆ ನಡೆದಾಗ ಝೇಂಕರಿಸುವಂಥ ಬಹು
ಕಿಂಕಿಣಿಪೈಜಣ ಇಟ್ಟಳಾಕೆ ೭

ಕಾಲುಬೆರಳಿಗೆ ಮುಂದೆ ಕಾಲುಂಗುರುಗಳು
ಪಿಲ್ಲೆ ಮೇಲಾದ
ಮೆಂಟಕಿಯು ಮೇಲೆ ಮತ್ತಣಿ ಮೆಂಟು
ಬಾಲೆಇಟ್ಟಳು
ಮತ್ತೆ ಸಾಲದಲೆ ಅರಗಿಳಿಯ ಶಾಲು
ಮುಸುಕಿಕ್ಕಿ ಬಹು
ಲೇಸಾದಳಾಕೆ ಕಾಲಕಾಲಕೆ ಮಡಚಿ
ಬಾಲೆಯರು ಕೊಟ್ಟ
ತಾಂಬೂಲವನು ಮೆಲ್ಲುತಲೆ ಸಾಲಗೆಳತೆರ
ಕೂಡಿ ಭಾಳ ಹರುಷದಿ
ಗೆಜ್ಜೆ ಕಾಲಕುಣಿಸುತ ತನ್ನ ಆಲಯ ದಿಂ
ಹೊರಟಳಾಕಾಲದಲ್ಲಿ. ೮

ವಚನ

ಈ ಪರಿ ಪದ್ಮಾವತಿಯು ಬರುತಿರುವಾಗ
ಗಜಗಮನದಿಂದಾ ವನ
ದೇವತೆಯು ಮದನ ಸತಿಯಂತಿಪ್ಪ ತರುಣಿರೂಪವ ತಾಳಿ
ವನಮಧ್ಯದಲ್ಲಿ ತಾಂ ಬೆಸಗೊಂಡಳು ಯಾರಲೆ ಬಾಲೆ ನೀ
ಬಾಲಚಂದ್ರ ಲಲಾಟೆ ಕಾಳಾಹಿ ವೇಣೀ ನೀ ಜಾತೆಯರ ಕೂಡಿ

ಎಲ್ಲಿಗೆ ಪೋಗುವೆ ತಂದೆ ತಾಯ್ಗಳು ಬಂಧು
ಬಳಗವು ಕಾಂತನ್ಯಾರು ಪೇಳೆಂದು ೧

ಧ್ವನಿ

ಕುಸುಮ ಗಂಧಿಯೆ ಎನ್ನ ಹೆಸರು ಪದ್ಮಾವತಿ
ಕೇಳೆ ಕುಸುಮಕ್ಕೆ
ನಾ ಬಂದೆ ತಿಳಿಯೆ ಮಾತಿನರಗಿಳಿಯೆ ೧

ವಸುಧೆಯು ನಮ್ಮ ತಾಯಿ ವಸುಧಾನ ನಮ್ಮ ತಮ್ಮ
ಅಸಮ ತೋಂಡಮಾನನೆಂಬುವನು ನಮ್ಮ ಕಕ್ಕನು ೨

ಆಕಾಶರಾಜನು ನಮ್ಮ ಸಾಕಿದಂಥ ತಂದೆಯು
ನಾ ಖೂನವನು ಪೇಳಿದೆ ಸಾರಿ ಪೇಳಿದೆ ೩

ನಾರಾಯಣಪುರವು ನಮ್ಮ ತೌರುಮನೆಯು ಅದು
ಬೇರೆ ಅತ್ತೆಮನೆ ಯಾವುದು ಮುಂದೆ ತಿಳಿಯದು ೪

ಅಂತರಂಗದೊಳಗೆ ಶಾಂತಾನಂತಾದ್ರೀಶನೆ
ಕಾಂತನಾಗಬೇಕೆಂದು ನಾ ಬೇಡಿ ಕೊಂಬುವೆ ೫

ವಚನ

ಈ ಮಾತು ಲಾಲಿಸಿ ನಿಜಾಂತರಂಗದಿ ಇವಳ
ತತ್ತ್ವವ ತಿಳಿದಪಾರ
ಮೋದದಿ ತುಂಬಿ ತುಳುಕಿ ಆ ರಮಾ
ರೂಪಿಣಿಯಂ ಮನದಲಿ
ನಮಿಸುತ ಕುಸುಮಫಲಗಳಿಂದುಪಚರಿಸಿದಳು ಮತ್ತೆ ತಾನು
ಸಖಿಯರ ಕೂಡಿ ಬೆರೆಸಿ ಚರಿಸುವಳಂತೆ ನಟಿಸಿ ಎಲ್ಲರಿಗೂ
ತಿಳಿಯದ್ಹಾಂಗವರು ಕುಸುಮ ವನದ ಸೊಬಗ ನೋಡುತಿರಲು
ಕಣ್ಮರೆಯಾಗಿ ದೇವಿಯ ವಿಲಾಸವಂ ನೋಡುತ್ತಿದ್ದಳು ೧

ಧ್ವನಿ: ಶಂಕರಾಭರಣ ಆದಿತಾಳ

ಹರಗಣದಿಂದಲೆ ನಗುವುತ ಕೆಲವುತ ಬಗೆ ಬಗೆ
ಗೆಳತೇರಕೂಡಿ
ಬೊಗರಿ ಕುಚದ ಸೆರಗು ತೆಗೆ ತೆಗೆಧಾಕುತ
ಸುಗುಣಿಬಂದಳಾ ವನದಲ್ಲಿ ೧

ಮಂದ ಗಮನೆ ತಾನು ಬಂದು ಕುಳಿತಲ್ಲಿ ಒಂದು
ವೃಕ್ಷದ ಮೂಲದಲ್ಲಿ
ಚಂದ ಚಂದದ ಪುಷ್ಪ ತಂದು ಮಾಲೆಯಮಾಡಿ
ಮುಂದೆ ಕೊಟ್ಟಾರು ಸಖಿಯರು ೨

ಒಂದೊಂದು ಹಾರವು ಚಂದದಿಂದಿಡುತಿರೆ ಬಂದ
ನಾರದನು ಆಗಲ್ಲಿ
ಬಂದು ಮುನಿಯ ಕಂಡು ಅಂದಳು ಈ
ಪರಿ ಬಂದವನ್ಯಾರು ಕೇಳಿರಮ್ಮ ೩

ಮುನ್ನ ಆ ಸಖಿಯರು ಮನ್ನಿಸಿ ಕೇಳಿದರು
ಘನ್ನಪುರುಷ ನೀನ್ಯಾರೊ
ಕಣ್ಣೀಲಿ ನೋಡಲು ಮಾನ್ಯನಾಗಿರುವೆಯೆ
ಚನ್ನಾಗಿ ಪೇಳಯ್ಯ ನೀನು ೪

ಕಮಲಾಕ್ಷಿಯರ ಮುಖಕಮಲದಿಂದ್ಹೊರಟಂಥಾವಿಮಲ
ಮಾತುಗಳನೆ ಕೇಳಿ
ಸುಮಹಿಮಾನಂತಾದ್ರಿರಮಣನ ಪೌತ್ರನು
ಕಮಲಾವತಿಗೆ ಹೀಗೆಂದ ೫

ಧ್ವನಿ: ಕನ್ನಡ ಕಾಂಬೋಧಿ ಆದಿತಾಳ

ನಿಮ್ಮ ಕುಲಗುರು ನಾನು ಕೇಳೆ ಅಮ್ಮಯ್ಯ ನೀನು
ನಮ್ಮನು ಮರೆಯಲು ಬೇಡ ಅಕ್ಕಯ್ಯ ೧

ನಮ್ಮ ಕುಲಗುರು ಆದರೊಳಿತು ಅಪ್ಪಯ್ಯ ಇಲ್ಲಿ
ನಿಮ್ಮ ಆಗಮನವು ಯಾಕೆ ಅಣ್ಣಯ್ಯ ೨

ಕೈಯ ತೋರೆ ಕೈತೋರೆ ಅಮ್ಮಯ್ಯಾ ನಿನ್ನಾ
ಮೈಯ ಲಕ್ಷಣವು ಪೇಳ್ವೆನಕ್ಕಯ್ಯ ೩

ಬಾಯಿ ಮಾತಿನಿಂದ ಪೇಳೊ ಅಪ್ಪಯ್ಯ ಎನ್ನ
ಕೈಯ್ಯಾ ತೋರುವುದು ಯಾಕೆ ಅಣ್ಣಯ್ಯ ೪

ಸಂದೇಹ ಮಾಡಲಿ ಬೇಡವಮ್ಮಯ್ಯ ನಿನ್ನಾ
ತಂದೆಯ ಸರಿ ನಾನು ಕೇಳೆ ಅಕ್ಕಯ್ಯ ೫

ಸತ್ಯ ಪೇಳೋ ಕೈಯ ನೋಡಿ ಅಪ್ಪಯ್ಯ
ಎನ್ನ ಉತ್ತಮ ಲಕ್ಷಣಗಳ ಅಣ್ಣಯ್ಯ ೬

ವರದಾನಂತಾದ್ರೀಶನಾಣೆ ಅಮ್ಮಯ್ಯ ನಾನು
ಸರಸದಿಂದ ಪೇಳುವೆ ಕೇಳಕ್ಕಯ್ಯ ೭

ವಚನ

ತಂಗಿ ನೋಡಮ್ಮ ನಿನ್ನಂಗೈಯಲ್ಲಿ ಪದ್ಮಮಂಗಳ
ಸ್ವಸ್ತಿಕವು ಅಂಗಾಲಿನಲ್ಲಿ
ಉಂಟು ಅಂಗನೆಯ ನಿನ್ನ ಮುಖ
ಹಿಂಗದಲೆ ನಿತ್ಯ ಬೆಳದಿಂಗಳವ ಮಾಡುವದು
ಭಂಗಯಿಲ್ಲದಲೆ

ಮಂಗಳಾಂಗಿಯೆ ನಿನ್ನ ಕಂಗಳವು ಎರಡು
ಪದ್ಮಂಗಳನೆ ಗೆದ್ದಿಹವು
ರಂಗು ಮಾಣಿಕದಂತೆ ರಂಗುದುಟಿ ನಿನ್ಹುಬ್ಬು
ಸಿಂಗಾಡಿವಿಲ್ಲ ತಿಳಿ
ಹ್ಯಾಂಗೆ ಸಂಪಿಗೆ ಮೊಗ್ಗು ಹಾಂಗೆ ನಿನ್ನ ಮೂಗು
ಗಲ್ಲ ಕನ್ನಡಿಯಂತೆ ಹಲ್ಲು ದಾಳಿಂಬದ
ಜೀಜದಂತೆ ಮೃದು ಬಾಲೆ
ನಿನ್ನ ನಾಲಿಗೆಯು ಫುಲ್ಲಾಕ್ಷಿ ನಿನ್ನ ಕೊರಳು
ಎಲ್ಲಗಿಂತಲಿ ಸೂಕ್ಷ್ಮ
ಅಲ್ಲೆ ತಾಂಬೂಲ ರಸವೆಲ್ಲ ತೋರುವುದು ಬಲ್ಲಿದಹಿಯಂತೆ
ದಮ್ಮಿಲ್ಲ ಇರುವುದು ನಿಂದು ಬಿಲ್ವ ಫಲದಂತೆ ಉರದಲ್ಲಿ
ಶೋಭಿಸುವಂಥ ಚೆಲ್ವ ಕುಚಗಳು ಹೊಟ್ಟೆ ತೆಳ್ಳನ ಬಾಳೆಯಲೆ
ಅಲ್ಲೆ ಬಲಸುಳಿನಾಭಿರೋಮ ಪಂಕ್ತಿ ಚಾರು ಮಧ್ಯಸ್ಥಳವು
ಊರು ಬಾಳೆಯ ಕಂಬ ಸಾರವತ್ಸಲ ದೇಶ
ನಾರಿ ನಿನಗಾಗುವನು
ಶ್ರೀ ರಮೇಶನೆ ಪತಿಯು ಸಾರೆ ಹೇಳುವೆನೆಂದು, ನಾರದನು
ಕಂಗಳಿಗೆ ತೋರದ್ಹೋದಾ ಊರ್ವಿಯಲಿ
ಬಹುರಮ್ಯತೋರು
ವನಂತಾಖ್ಯ ಸಾರಗಿರಿ ವೈಕುಂಠ ಸಾರವಿದು
ಎಂದು ಬಹು ಸಾರು
ತಲೆ ವರಗಳನು ಬೀರುತಲೆ ಇರುವವನ
ಪೂರ್ಣ ದಯದಿಂದ

ಅಧ್ಯಾಯ ನಾಲ್ಕು

ಮೃಗಯಾಯೈ ಹಯಾರೂಢಂ ಗಹನೆ ಹಸ್ತಿನಾಹೃತಂ
ಪದ್ಮಾವತೀ ಕಟಾಕ್ಷೇಷು ತಾಡಿತಂ ನೌಮಿ ಶ್ರೀಪತಂ

ವಚನ

ಎಂದು ಪದ್ಮಾವತಿಯು ಬಂದಾಳವನದಲ್ಲಿ
ಅಂದಿಗಾವೇಂಕಟನು
ಮುಂದೆ ಮೃಗಬೇಟೆಯಲಿ ಇಂದು
ಪೋಗಲಿಬೇಕೆಂದು ಸ್ಮರಿಸಿದ
ಕುದುರೆ ಬಂದು ನಿಂತಿತು ಅವನ ಮುಂದೆ
ಆ ಕ್ಷಣದಿ ಚೆಂದಾದ
ಮೈ ಬಣ್ಣದಿಂದ ಇರುವುದು ಸ್ವರ್ಣ ಬಿಂದುಗಳು ಅಲ್ಲಲ್ಲೆ
ಮುಂದೆ ಕಾಲ್ಗಗ್ಗರಿಯು ಮುಂದಲೆಯ
ಮೇಲ್ಗರಿಯಂ ಒಂದೊಂದು
ಒಂದೊಂದು ಹರಳ್ಳಚ್ಚಿ ಕುಂದಣವ ಕೂಡಿಸಿದ
ಚಂದದರಳಲೆಯು
ದೂರದಿಂದ ಹೊಳೆಯುವುದು ೧

ಮುತ್ತಿನ ಹಾರಗಳು ಪುತ್ಥಳಿಯ ಸರಮೇಲೆ
ಮತ್ತೆ ಸರಗಳನೆಲ್ಲ
ಜತ್ತಾಗಿ ಧರಿಸಿಹುದು ಉತ್ತಮಾಶ್ವಕ್ಕೆ ಇನ್ನು
ಮತ್ತೆ ಪರಿಮಿತಿಯಿಲ್ಲ
ಮುತ್ತುಗಳೇ ತೋರುವುವು ಎತ್ತನೋಡಿದರೂ
ಉತ್ತಮಾಶ್ವವ
ನೋಡಿ ಉತ್ತಮೋತ್ತಮ ಹರಿಯು ಸತ್ಯಭೂಷಿತ
ತಾನು ಮತ್ತೆ
ಭೂಷಿತನಾದ ನೆತ್ತಿ ಕೇಶಗಳೆಲ್ಲ ಸುತ್ತಿಕಟ್ಟಿದ
ಮೇಲೆ ಸುತ್ತಿದನು
ಕೌಸ್ತುಭ ಶಕ್ತವಸ್ತ್ರಾ ೨

ಕುಂಕುಮಾದಿಗಳಿಂದ ವೇಂಕಟನು
ಊರ್ಧ್ವಪುಂಡ್ರಾಂಕಿತನು

ಆಗಿ ಅಕಳಂಕಕೇಸರ ಕುಂಕುಮಾಂಕಿತ
ಶ್ರೀಗಂಧ ಪೊಂಕದಲ್ಲಿ
ಮೈಘಚ್ಚಿ ಕಂಕಣವ ಇಟ್ಟಕರ
ಪಂಕಜಗಳಿಗೆ ಟೊಂಕದಲಿ
ಕಾಂಚಿಯನು ಬಿಂಕದಿಂದಲೆ ಬಿಗಿದು ಸಂಖ್ಯದಲಿ
ಏಲೆ ಅಡಿಕೆಸಣ್ಣ
ಸುಣ್ಣ ಜಾಕಾಯಿ ಶಂಖಸಮ ಮೃತ್ತಿಕೆಯು
ಕೊಂಕು ಇಲ್ಲದ ಕನ್ನಡಿ
ಕುಂಕುಮದ ಕರಡಿಗೆಯ ಟೊಂಕದಲಿ
ಕಟ್ಟಿದನು ವಸ್ತ್ರಾದಿಂದ ೩

ಕಂಠಿಮೊದಲಾಗಿರುವ ಕಂಠ ಭೂಷಣವೆಲ್ಲ
ಕಂಠದಲಿ ಇಟ್ಟು
ವೈಕುಂಠಪತಿತಾನು ಹದಿನೆಂಟು ಬಟ್ಟು
ಜರತಾರಿ ಒಂಟಿ
ಚಾದರವನ್ನು ಕಂಠದಲಿ ಚಲ್ಲರಿಪುಕಂಟ–
ಕಾಗಿರುವಂಥ ಒಂಟಿ
ಖಡ್ಗದಲೆ ಹೊರಹೊರಟು ಏರಿದ ಕುದುರೆ
ಬಂಟನಾಗಿ ಅಂಟರಾ
ಕಾಲ್ಕೊಡುತ್ತ ಕಂಠವನು ಮೇಲೆತ್ತಿ ಗಂಟಲವ
ಬಿಗಿದು ನೂರೆಂಟು
ಖ್ಯಾಕರಿಸುತಲಿ ಟಣ್‌ಟಣ್‌ನೆ ಜಿಗಿಯುತ್ತ
ವೈಕುಂಠನಾಥನು ಎಂಬ
ಬಂಟನ ಕುದುರೆ ಹೊರಗ್ಹೊಂಟಿತಾಗ ೪

ವನವನವ ಚರಿಸುತಲೆ ಘನಮಹಿಮೆಯ
ವೇಂಕಟನು ವನದಲ್ಲಿ
ಇರುವ ಬಹು ಮೃಗಂಗಳನ್ಹೊಡಿದ
ಘನವಾದ ಮದ್ದಾನೆಯನು

ಕಂಡು ಅಲ್ಲೊಂದು ಕ್ಷಣವು ನಿಲ್ಲದೆ ಬೆನ್ನನು
ಹತ್ತಿ ನಡೆದ ವನಜ
ನಾಭನ ಭಯದಿ ವನಗಜವು ಸಾರ್ದಯೋಜನವ
ಓಡುತ್ತ ಮುಂದೆ
ದಣಿದು ಬಿದ್ದಿತು ಜನಾರ್ಧನನ
ಸಮ್ಮುಖವಾಗಿ ವಿನಯದಿಂದಲಿ
ಸೊಂಡೆಯನು ಮೇಲೆತ್ತಿ ಗರ್ಜನವ ಮಾಡುತಲೆ ೫

ಘಡ ಘಡನೆ ಗರ್ಜಿಸುವ ಅಡವಿಯಾನೆಯ
ಕಂಡು ಗಡಬಡಿಸಿದರು
ಅಲ್ಲಿ ಕಡು ಚಲ್ವೆಯರು ಎಡವುತಲೆ
ಮುಗ್ಗುತಲೆ ಒಡಗೂಡಿ
ಒಂದಾಗಿ ಗಿಡದ ಮರೆಯಲಿ ಪೋಗಿ
ಅಡಗಿದರು ಬೇಗ ದೃಢಭಕ್ತಿ
ಯಿಂದ ಜಗದೊಡೆಯಗೊಂದಿಸಿ ಗಜವು
ನಡೆದು ಅಲ್ಲಿಂದ
ಘೋರಡವಿಯಲಿ ಪೋಗುತಿರೆ ಬಿಡದೆ
ಹಣಹಣಿಕೆ ನೋಡ್ಯಡಗಿದರು
ಮತ್ತಲ್ಲಿ ಮಡದಿಯರ ನೋಡಿ ಹರಿ
ನಡೆಸಿದನು ಕುದರೆ ೬

ಕುದುರೆಯನು ಕಾಣುತಲೆ ಹೆದರಿ ಚಪ್ಪಾಳಿಕ್ಕಿ
ಒದರಿದಳು ಅಮ್ಮಯ್ಯ
ಚದುರೆ ನೋಡಿವನ್ಯಾರು ಕುದುರೆಯನು
ಏರಿ ನಮ್ಮೆದುರಿಗೆ
ಬರುತಿರುವ ನೆದುರಿಗೆ ತೋರುತಿಹ
ಚದುರನಾಗಿ ಮಧುರ
ನುಡಿದಳು ಆಗ ಚದುರೆ ಪದ್ಮಾವತಿಯು
ಹೆದರೆ ಬೇಡಿರಿ ನೀವು

ಬೆದರಿದೆರಳೆಗಳಂತೆ ಕುದುರೆ ಮೇಲಿನವನ್ಯಾರು
ಚದುರ ವೃತ್ತಾಂತವನು
ಕೆದರಿ ಕೇಳಿರಿ ಅವನ ಇದರಿಗ್ಹೋಗಿ ೭

ಅಂದ ಮಾತನು ಕೇಳಿ ಮಂದಗಮನೆಯರೆಲ್ಲ
ಬಂದು ಪುರುಷನ ನೋಡಿ
ಅಂದರೀಪರೀಗ ಸುಂದರನೆ ನೀನ್ಯಾರು ಇಂದು
ಇಲ್ಲಿಗೆ ನೀನು ಬಂದ
ಕಾರಣವೇನು ಮುಂದೆಲ್ಲಿ ಗಮನ
ತಂದೆತಾಯಿಗಳ್ಯಾರು ಬಂಧು
ಬಾಂಧವರಾರು ಮಂದಿರವು ಎಲ್ಲುಂಟು
ಮಂದಿ ಎಲ್ಲರು ಏನೆಂದು
ಕರೆವರು ನಿನಗೆ ಚಂದಾಗಿ ಕುಲಗೋತ್ರ ಒಂದು ಬಿಡದಲೆ
ನಮ್ಮ ಮುಂದೆ ನೀಪೇಳು ೮

ಇಂದು ಮುಖಿಯರ ಮಾತಿಗಿಂದಿರೇಶನು
ನುಡಿದ ಇಂದು ನಮ್ಮ
ಕಾರ್ಯ ನೃಪನಂದಿನಿಯ ಬದಿಲುಂಟು
ಮುಂದೆ ಕೇಳಿರಿ ನಮ್ಮ
ಚಂದಾದ ವೃತ್ತಾಂತ ಒಂದು ಬಿಡದೆ
ಕ್ರಮದಿಂದ ಹೇಳುವೆನು
ಚಂದ್ರಕುಲ ವಸುದೇವ ತಂದೆ ದೇವಕಿ ತಾಯಿ
ಬಂಧು ತಾ ಬಲರಾಮ
ಬಾಂಧವರು ಪಾಂಡವರು ಇಂದು ಮುಖಿ
ಸುಭದ್ರೆಯೆಂದೆನಿಸುವಳು ತಂಗಿ
ಸುಂದರಾರ್ಜುನ ನಮ್ಮ ಹೊಂದಿರ್ದ ಬೀಗ ೯

ಕೃಷ್ಣವೇಣಿಯರು ನೀವಷ್ಟು ಕೇಳಿರಿ ನಾಮ
ಕೃಷ್ಣ ಪಕ್ಷದಲ್ಲಿ ನಾ

ಪುಟ್ಟಿರ್ದ ಕಾರಣದಿ ಕೃಷ್ಣನೆಂತೆಂದು ಹೆಸರಿಟ್ಟು
ಕರೆವರು ಯೆನಗೆ
ಕೃಷ್ಣವರ್ಣದಿ ಮತ್ತೆ ಕೃಷ್ಣನೆಂಬುವರು ಇಷ್ಟು
ವೃತ್ತಾಂತವನೆ ಶ್ರೇಷ್ಠ ಕರ್ಣಾಭರಣಾಕೊಟ್ಟೆನಿದು
ಕಿವಿಯಲ್ಲಿ ಇಟ್ಟು ಬಹುಸಂತೋಷ
ಪಟ್ಟು ನೃಪನಂದಿನಿಯ ಶ್ರೇಷ್ಠಾದ ವೃತ್ತಾಂತವಷ್ಟು
ಪೇಳಿರಿ ಎನಲು
ಥಟ್ಟನೆ ನುಡಿದಳು ದಿಟ್ಟಪದ್ಮಾವತಿಯು ಸ್ಪಷ್ಟತಾನೆ ೧೦

ಭೋ ಕಿರಾತಾಧಿಪನೆ ನೀಕೇಳು ನಮ್ಮ
ಸುವಿವೇಕದ ವೃತ್ತಾಂತ
ಲೋಕದಲಿ ಮಾನಿತ ನಿಶಾಂಕನ ವಂಶತಿಳಿ
ಶ್ರೀಕರಾತ್ರಿಯ ಗೋತ್ರ
ಆಕಾಶನೃಪ ತಂದೆ ಆಕೆ ನಮ್ಮ ತಾಯಿಯೆಂಬಾಕೆ
ಧರಣೀ ದೇವಿ
ತಾ ಕಕ್ಕನೆನಿಸುವನು ತೊಂಡಮಾನಾ ಏಕಾಕಿ
ವಸುಧಾನ ತಾ ಖೂನ
ದಲಿ ತಮ್ಮ ನಾ ಕಮಲದಿಂದ ಬಂದಾಕೆ
ಪದ್ಮಾವತಿಯು ನೀ ಕೇಳಿ
ನಡೆಯೆನಲು ಶ್ರೀಕಾಂತ ನಗುನಗುತಾ
ಆಕೆಯಮೇಲೆ ಸ್ವಲ್ಪ
ಧುಮುಕಿಸಿ ನೋಡಿದ ಕುದುರೆ ಆಕಾಶನೃಪ
ಪುತ್ರಿ ತಾ ಕೋಪವನು
ಮಾಡಿ ಏಕೆ ನೋಡುವಿರವನ ನೂಕಿ ಹಿಂದಕೆ
ಎಂದಳಾ ಕಾಲದಲಿ
ಹರಿ ವಿವೇಕದಲಿನುಡಿದ ೧೧

ಧ್ವನಿ

ರಾಗ : ಶಂಕರಾಭರಣ ಭಿಲಂದಿತಾಳ

ಇಷ್ಟು ಎನ್ನ ಮೇಲೆ ಏಕೆ ಸಿಟ್ಟು ಮಾಡುವಿ
ಬಟ್ಟ ಕುಚದ ಬಾಲೆ ಬಹಳ ನಿಷ್ಠುರಾಡುವಿ ೧

ಧಿಟ್ಟ ಪುರುಷ ನೀನು ನಡತೆಗೆಟ್ಟು ಇರುವರೆ
ಖೊಟ್ಟಿ ಕುದುರೆಯೇರಿ ಮೈಯ ಮುಟ್ಟ ಬರುವರೆ ೨

ಮೆಚ್ಚಿ ಬಂದೆ ನಿನಗೆ ನಾನು ಹೆಚ್ಚಿನ್ಹೆಂಗಳೆ
ಇಚ್ಛೆ ಪೂರ್ಣಮಾಡು ನೀನು ಮಚ್ಚಕಂಗಳೆ ೩

ಹೆಚ್ಚು ಕಡಿಮೆ ಆಡದೀರು ಹೆಚ್ಚಿನಾತನೆ
ಎಚ್ಚರಿಲ್ಲ ಮೈಯ ಮೇಲೆ ಹುಚ್ಚು ಪುರಷನೆ ೪

ಏನು ಹೆಚ್ಚು ಕಡಿಮೆ ಆಡಿದೇನು ಅನುಚಿತ
ನೀನು ಕನ್ಯಾ ನಾನು ವರನು ಏನು ಅನುಚಿತ ೫

ಮೂಢನೀನು ಇಂಥ ಮಾತು ಆಡೋದುಚಿತವೆ
ಬೇಡ ಅರಸಗ್ಹೇಳಿ ನಿನಗೆ ಬೇಡಿ ಬಿಗಿಸುವೆ ೬

ಮಡದಿ ನಿನ್ನ ಕಡೆಯುಗಣ್ಣು ಕುಡಿಯ ಹುಬ್ಬುಗಳ್
ಕಡಿಯದಂಥ ಬೇಡಿ ಎನಗೆ ಕಡೆಗೆ ಅಲ್ಲವೆ ೭

ಮಂದಮತಿಯೆ ಉಳುಹಿಕೊಳ್ಳು ಇಂದು ಪ್ರಾಣವ
ತಂದೆ ಕಂಡರೀಗ ನಿನ್ನ ಕೊಂದು ಹಾಕುವ ೮

ಜಾಣೆ ನಿನ್ನ ಬಿಡೆನು ಎನ್ನ ಪ್ರಾಣ ಹೋದರೂ
ಪ್ರಾಣದರಸಿ ಎನಿಸು ಪಟ್ಟರಾಣಿಯಾಗಿರು ೯

ತಂದೆ ತಾಯಿ ಬಿಟ್ಟುಮರಣ ಇಂದು ವ್ಯರ್ಥವು
ಹಂದಿನಾಯಿ ಹದ್ದು ಕಾಗೆ ತಿಂದು ಬಿಡುವವು ೧೦

ಎನ್ನ ಫಣಿಯಲ್ಲಿದ್ದ ಲಿಖಿತ ಮುನ್ನ ತಪ್ಪದು
ಚನ್ನವಾಗಿ ನಿನ್ನಕೂಡಿ ಇನ್ನು ಇರುವುದು ೧೧

ಸೊಲ್ಲ ಕೇಳಿ ಸಿಟ್ಟಿನಿಂದ ನಿಲ್ಲೋ ಎಂದಳು
ಎಲ್ಲ ಗೆಳತೆರಿಂದ ಕೂಡಿಕಲ್ಲು ಒಗೆದಳು ೧೨

ಕಲ್ಲು ತಾಗಿ ಕುದುರೆ ಭೂಮಿಯಲ್ಲಿ ಬಿದ್ದಿತು
ಬಲ್ಲಿ ದಾನಂತಾದ್ರೀಶನಲ್ಲಿ ಸ್ಮರಿಸಿತು ೧೩

ವಚನ

ಶ್ರೀಕಾಂತ ತಾ ಮುಂದೆ ಲೌಕಿಕವ ತೋರಿಸುತ
ಆ ಕುದುರೆಯನು
ಬಿಟ್ಟು ನಾಲ್ಕು ಕಡೆ ನೋಡುತಲೆ ವ್ಯಾಕುಲನು
ಆಗುತ ವಿವೇಕದಲಿ
ಹೀಗೆಂದ ಏಕೆ ಈ ಪರಿ ಆಯಿತೀಕಾಲದಲ್ಲೀ ಲೋಕದಲಿ
ತಾಯಿಯೆಂಬಾಕೆ ಪರದೇವತೆಯು ನಾ
ಕಾಲಬೀಳದಲೆ ಆಕಾಲ
ದಲಿ ಹೊರಟೆ ಆ ಕಾರಣದಿಂದೆನಗೆ ಸಂಕಟವು ಸೋಕಿತಿ
ಮಾಡಿದ ಕರ್ಮಫಲ ದೊರೆಯದಿರದು ೧

ಆಕಾಲಕ್ಕೀಗೆಂದು ಕಾಲಹೆಜ್ಜೆಯ ಹಾಕಿ
ಗಿರಿಯೇರುತಲೆ ತಾನು
ಗೃಹ ಕಾರವಾಗಿರುವ ಏಕಾಂತ ಹುತ್ತಿನಲಿ
ಮೂಕತನದಲಿ
ಮುಸುಕು ಹಾಕಿ ಮಲಗಿದ ವೈಕುಂಠಪತಿ
ಶೇಷಾಯಿಯಂತೆ

ಲೋಕದಲಿ ವಿಖ್ಯಾತ ಶ್ರೀಕರಾನಂತಗಿರಿ ಆಕ್ರಮಿಸಿ
ಮುಂದಕೆ ಅನೇಕ
ವಿಧ ಭಕ್ತರಿಗೆ ಬೇಕಾದವರಗಳನು ತಾ
ಕರೆದು ಕೊಡುವವನ
ಶ್ರೀ ಕರುಣದಿ ಆಯಿತು ನಾಲ್ಕು ಅಧ್ಯಾಯ ೨

ಅಧ್ಯಾಯ ಐದು

ಕಾಮಾರ್ತೋ ಬಕುಲಾ ವಾಕ್ಯ ಮೋದಿತೋ
ಲೋಕ ಮೋಹಕ:
ಆಕಾಶನೃಪ ಗೇಹಂ ತಾಂ ಪ್ರೇಷಯನ್
ಪಾತು ಮಾಧವ:

ಧ್ವನಿ

ರಾಗ: ಯರಕಲ ಕಾಂಬೋದಿ ಅಟತಾಳ

ಸೋಕಿತು ಕಾಮನಗಾಳಿ ಆಕಾಶಪುತ್ರಿಗೆ ವೈಕುಂಠೇಶನು
ತಿರುಗಿ ವೇಂಕಟಗಿರಿ ಏರಲು ಪ

ಪದ್ಮನಾಭನ ಸ್ಮರಿಸಿ ಬಿದ್ದಳು ಮೂರ್ಛಿತಳಾಗಿ
ಸದ್ದು ಮಾಡಿದರಲ್ಲಿ ಇದ್ದ ಗೆಳತಿಯರೆಲ್ಲ
ಮುದ್ದು ಮುಖದವಳೆ ನೀ ಎದ್ದು ಮಾತಾಡೆಂದರು
ಪದ್ಮಿನಿಯು ತಾ ಕೇಳಿ ಎದ್ದು ನುಡಿಯದೆ ಇರಲು
ಸಿದ್ಧಮಾಡಿ ಬೇಗೊಬ್ಬ ಬುದ್ಧಿವಂತೆಯ ಕಳುಹಿ
ಗದ್ದಲಮಾಡದೆ ಅಂದಣವನು ತರಿಸಿ
ಪದ್ಮ ಗಂಧಿಯ ಕೊಂಡು ಎದ್ದು ನಡೆದರು ಪುರಕೆ
ಸುದ್ದಿ ಹರಡಿತು ಅಲ್ಲಿ ಗದ್ದಲಾಯಿತು ಬಹಳ ೧

ಬಂದಳಲ್ಲಿಗೆ ತಾಯಿ ಅಂದಳೀಪರಿ ನೋಡಿ
ಇಂದು ಎಲ್ಲಿಗೆ ಚಿಕ್ಕ ಕಂದಮ್ಮ ನೀ ಪೋಗಿದ್ದೆ

ಚಂದದ ನಿನ್ನ ಮುಖ ಇಂದು ಬಾಡಿಹುದೇಕೆ
ಇಂದು ಮೈಯೊಳು ಜ್ವರ ಬಂದಿಹುದೇಕಮ್ಮಯ್ಯ
ಮುಂದೆ ಮಾತಾಡದಿರಲು ತಂದೆ ಕೇಳಿದನಾಗ
ಸುಂದರಿಯಳೆ ದಾರೇನಂದರಮ್ಮಯ್ಯ ನಿನಗೆ
ಅಂದು ಅವರನು ಬಿಡದೆ ಕೊಂದು ಹಾಕುವೆ ಪೇಳು
ಅಂದ ಮಾತಿಗೆ ತಾನು ಒಂದು ಮಾತಾಡಲೊಲ್ಲಳು ೨

ತಿಳಿಯಲೊಲ್ಲದು ಎಂದು ಬಳಲಿ ಆಕಾಶರಾಜ
ಕಳವಳಿಸುತ ಕರೆಕಳಿಸಿ ಬಲ್ಲವರನು
ತಿಳಿಯಬಲ್ಲವರೆಲ್ಲ ತಿಳಿದು ಹೇಳಿರಿ ಎಂದ
ಕೆಲವರೆಂದರು ಪಿತ್ತ ತಲೆಗೆ ಏರಿಹುದೆಂದು
ಕೆಲವರೆಂದರು ಭೂತ ಬಲಿಯ ಚಲ್ಲಿರಿ ಎಂದು
ಕೆಲವರೆಂದರು ಗ್ರಹಗಳ ಬಾಧೆ ಇರುವದು
ಉಳಿದ ಮಂದಿಗೆ ಮತ್ತೆ ತಿಳಿಯಲಾಗದಾಯಿತು
ಚಲುವನಂತಾದ್ರೀಶನ ಚಲುವಿಕೆಯನೆ ಕಂಡು ೩

ವಚನ

ಆಕಾಲದಲಿ ಮುಂದೆ ಆಕಾಶರಾಜನು
ಬಹುಶೋಕವನು ಮಾಡುತಲಿ
ತೋಕನ ಕಳುಹಿ ಸುರಲೋಕ ಗುರುವೆನಿಸುವನ
ತಾ ಕರಿಸಿ ಕೇಳಿದನು
ಮೂಕಳಾದಳು ಪೇಳು ಯಾಕೆನ್ನ ಮಗಳು
ನಾಕೇಶಗುರು ಹೀಗೆ
ತಾ ಕೇಳುತಲಿ ನುಡಿದ ಆಕಾಶನೃಪ ಚಿಂತೆಯಾಕೆ ಬ್ರಾಹ್ಮಣರ
ನೀ ಕರೆಸಿ ಶಿವಗೆ ಅಭಿಷೇಕ ಮಾಡಿಸು ರುದ್ರ
ಏಕಾದಶಾವರ್ತಿ ಏಕಚಿತ್ತದಲಿ ೧

ಏಸೊಂದು ಚಿಂತೆಗಳ ರಾಶಿದೂರಾಗುವದು
ಲೇಸಾಗಿ ತಿಳಿಯೆಂದು
ತಾ ಸ್ವರ್ಗಪುರಕ್ಹೋದ ಆ ಸಮಯದಲಿ
ಉರ್ವೀಶ ಭಕುತಿಯಂ
ಬಿನ್ನೈಸಿ ಕರಕಳಿಸಿದನು ಭೂಸುರರನೆಲ್ಲಾ
ಆಸನಾದಿಗಳಿಂದ
ಲೇಸಾಗಿ ವರವಸ್ತ್ರ ಭೂಷಣಾದಿಗಳಿಂದ
ಭೂಸುರರಿಗೆ ಅರ್ಪಿಸಿ
ಅಶೇಷರಿಗೆ ದಕ್ಷಿಣೆ ವಿಶೇಷವನು ಕೊಟ್ಟು
ಸಂತೋಷವನು
ಪಡಿಸಿ ಕೈಲಾಸಪತಿ ಪೂಜೆ ಚಿತ್ತೈಸಿ
ಮಾಡಿರಿ ಎಂದು ಆಶು
ಕಳುಹಿದನಗಸ್ತೇಶ್ವರನಾಲಯಕೆ ೨

ಧ್ವನಿ

ಶ್ರೀವೇಂಕಟಾದ್ರಿಯೊಳ್ ದೇವತಾ ಮಲಗಿರಲು
ಕೇವಲ ಚಿಂತೆಯಿಂದಲೇ
ಆವತ್ತಿಗಾತನ ಸೇವೆಗೆ ನಡೆದಳು
ದೇವಿಬಕುಲಾವತಿ ತಾನು ೧

ವರ ಷಡ್ರಸದನ್ನ ಪರಿಪರಿ ಸಾಹಿತ್ಯ
ಪರಿವಾಣದಲ್ಲಿಟ್ಟುಕೊಂಡು
ಹರಿಯ ಸಮೀಪಕ್ಕೆ ಹರುಷದಿ ಬಂದಳು ಕರುವು
ಇದ್ದಲ್ಲೆ ಗೋವಿನಂತೆ ೨

ಆಲಯದಿ ಜಗತ್ಪಾಲಯ ಮಲಗಿದ್ದು ಕಂಡು
ಬಾಲೆ ತಾಮಾತಾಡಿದಳು
ಏಳಯ್ಯ ಉಣಲೇಳೋ ಬಾಲಯ್ಯ ವೆಂಕಟ
ಬಹಳ್ಹೊತ್ತು ಆಯಿತು ಇಂದು ೩

ಮತ್ಸ್ಯಮೂರ್ತಿ ಏಳು ಸ್ವಚ್ಛ ಕೂರ್ಮನೆ ಏಳೊ
ಹೆಚ್ಚಿನ ವರಹ
ನೀ ಏಳೊ ವತ್ಸ ಪ್ರಹ್ಲಾದಗೆ ಮೆಚ್ಚಿದಾತನೆ
ಏಳೋ ಅಚ್ಯುತ ವಾಮನ ಏಳೊ ೪

ಶುದ್ಧ ಭಾರ್ಗವ ಏಳೊ ಬಿದ್ದಂಥ ಶಿಲೆಯನು
ಉದ್ಧರಿಸಿದಾತನೆ ಏಳೊ
ಉದ್ಧವ ಸಖ ಏಳೊ ಭೌದ್ಧಾವತಾರ ಏಳೊ
ಮುದ್ದು ಹಯವದನ ಏಳೋ ೫

ಇಷ್ಟು ಮಾತಿಗೆ ತಾ ಒಂದಿಷ್ಟು ಉತ್ತರ
ಕೊಡದೆ ಸೃಷ್ಟಿಕರ್ತನು
ಸುಮ್ಮನಿದ್ದಾ ಥಟ್ಟನೆ ಹರಿವಾಣ ಇಟ್ಟಳು
ಕೆಳಗಲ್ಲೆ ದಿಟ್ಟನಡೆದಳು ಬದಿಯಲಿ ೬

ಅತ್ಯಂತ ಗುಣದವನ ಅಂತ ತಿಳಿಯಬೇಕು
ಎನುತ ಮುಸುಕ
ತೆಗೆದಳು ಚಿಂತೆಯಲಿ ಮಲಗಿರುವ ಅನಂತಾದ್ರೀಶನ
ಕಂಡು ಅಂತಃಕರಣದಿ ನುಡಿದಳು ೭

ಧ್ವನಿ

ರಾಗ: ಕಾಪಿ ಅಟತಾಳ

ಯಾಕೆ ಮಲಗಿದೆ ನೀ ಏಳೋ ಅಣ್ಣಯ್ಯಾ ವೇಂಕಟ
ಯಾಕೆ ಮಲಗಿದೆ ಏಳೋ ಏನು ಚಿಂತೆಯು ಪೇಳೊ
ಲೋಕ ಸಾಕುವ ದಯಾಳೋ ಅಣ್ಣಯ್ಯ ವೇಂಕಟ ಪ

ಬಾಳ ಬಳಲಿದಿಯೊ ಹಸಿದು ಮಾತಾಡದಂಥ ಮೂಲ
ಕಾರಣವೇನಿದು ಹಾಲುಸಕ್ಕರೆ ತುಪ್ಪಾಯಾಲಕ್ಕಿ ಪರಮಾನ್ನ
ಬಾಲಯ್ಯ ನೀನು ಉಣಲೇಳೋ ೧

ತಲೆಯು ನೋಯುವದು ಏನೋ
ವಟದೊಳು ಹೆಬ್ಬುಲಿಯ
ಕಂಡಂಜಿದಿಯೇನೊ ನೆಲೆಯು ತಿಳಿಯದು ನಿನ್ನ ಪ್ರಳಯ
ಕಾಲಕ್ಕೆ ಆಲದೆಳೆಯೊಳು ಮಲಗಿದವನೋ ೨

ಹೊತ್ತು ಬಹಳವಾಯಿತು ಏಳೋ ಎಂದಿಗೂ
ಹಗಲ್ಹೊತ್ತು ಮಲಗಿದ
ದವನಲ್ಲೊ ಹೆತ್ತತಾಯಿ ಆಣೆ ಸತ್ಯವಾಣಿ ನೀಪೇಳೋ
ಚಿತ್ತ ವ್ಯಾಕುಲವು ಯಾಕೆ ೩

ತಂದೆ ತಾಯಿಗಳು ನಿನ್ನ ನೋಡಿದರಷ್ಟು ನೊಂದು
ಕೊಂಬುವರೋಮುನ್ನ
ಕಂದಯ್ಯ ನೀನು ಯಾವ ಸುಂದರಿಯಳ
ಕಂಡು ಇಂದು ಮೋಹಿತನಾಗಿರುವಿ ೪

ವರತೇಜಿಯನೇರಿಕೊಂಡು ವನವನ ತಿರುಗಿ
ಬಾಹುವದುಕಂಡು
ಸ್ಮರನ ತಾಪದಿ ಯಾವ ಪರಮ ಪುಣ್ಯವತಿಯು
ಮರಳು ಮಾಡಿದಳೋ ನಿನ್ನ ೫

ದು:ಖವೇತಕೋ ಹೇಳು ನೀನು ಮಾಡುವೆ ಅದಕ್ಕೆ
ತಕ್ಕ ಉಪಾಯಾ
ನಾನು ಚಿಕ್ಕ ಬಾಲನೆ ನೀನು ನಕ್ಕು ನಲಿದಾಡಿದರೆ
ಅಕ್ಕರವಾಗುವದೆನಗೆ ೬

ನಿನ್ನ ಭಾವವು ಏನಯ್ಯ ಬೇಗನೆ ಎದ್ದು
ಎನ್ನ ಮುಂದೆ ನೀ
ಪೇಳಯ್ಯ ಚೆನ್ನಾಗಿ ನಾ ಮಾಡುವೆ ಮುನ್ನ
ಸಂಶಯ ಬಿಡು ಚನ್ನಿಗನಂತಾದ್ರೀಶನೆ ೭

ವಚನ

ಈ ರೀತಿ ನುಡಿಕೇಳಿ ಶ್ರೀರಮಾರಮಣ
ಕಣ್ಣೀರುವರಸುತಲೆದ್ದು
ಈ ರೀತಿ ಲೌಕಿಕವ ತೋರುತಲೆ ತಾ ನುಡಿದ
ಕೀರವಾಣಿಯೇಕೇಳು
ಆರು ಎನ್ನ ದು:ಖ ಪರಿಹಾರ ಮಾಡುವರು
ಘೋರು ದು:ಖವ ತನಗೆ
ಮೀರಿ ಬಂದರೆ ಮುನ್ನ ಆರು ತನ್ನವರಿಲ್ಲ
ಆರಿಗುಸರಲಿ ನಾನು ಆರಿ
ಗ್ಹೇಳಲಿ ಮತ್ತೆ ನೂರು ಮಾತುಗಳ್ಯಾಕೆ ಸಾರಿ
ಹೇಳುವೆ ನಿನಗೆ ಸಾರಾಂಶ ಮಾತು ೧

ನೀನೆ ತಾಯಿಯು ಎನಗೆ ನೀನೆ ತಂದೆಯು ಮತ್ತೆ
ನೀನೆ ಎನಗ್ಹಿರಿಯಣ್ಣ
ನೀನೆ ಸೋದರಮಾವ ನೀನೆ ಎನಗಕ್ರೂರ
ನೀನೆಗಜರಾಜೇಂದ್ರ
ನೀನೆ ಪ್ರಹ್ಲಾದ ನೀನೆ ಎನಗಜಮಿಳನು ನೀನೆ
ವರಧ್ರುವರಾಯ
ನೀನೆ ಎನಗರ್ಜುನನು ನೀನೆ ದ್ರೌಪದಿದೇವಿ
ನೀನು ಸರ್ವವು
ಎನಗೆ ನಾನು ನಿನ್ನವನು ತಿಳಿ ನೀನೆ ಎನ್ನ
ಅಭಿಮಾನ ರಕ್ಷಕಳು ೨

ನಿನ್ಹೊರತು ಮತ್ತಿನ್ನು ಎನ್ನ ಹಿತವರು
ಎಂಬೋರನ್ಯಾರನು ನಾ
ಕಾಣೆ ನಿನ್ನ ಮುಂದಾಡುವದಕಿನ್ನು ಸಂಶಯವೇಕೆ
ಎನ್ನ ಮನಸ್ಸಿನ

ದು:ಖವನ್ನು ಪೇಳುವೆ ಕೇಳು ಚೆನ್ನಾಗಿ ಘನವಾಗಿರೊ
ಅರಣ್ಯದೊಳು
ನಾ ಒಂದು ಹೆಣ್ಣುಕಂಡೆನೆ ತಾಯಿ ಮುನ್ನವಳ
ರೂಪ ಲಾವಣ್ಯ
ಪೇಳುವೆ ಲಿಂಬೆಹಣ್ಣಿನಂದದಲಿ ಮೈಯ ಬಣ್ಣ ಇರುವುದು
ಮುಖವು ಹುಣ್ಣಿಮೆಯ ಚಂದ್ರ ೩

ಸಣ್ಣ ಬಳಕುವ ನಡುವ ಸಣ್ಣಕುಚ ಕುಡಿಹುಬ್ಬು
ಕಣ್ಣಮೂಗಿಲೆ
ಚಲುವ ಬಣ್ಣಿಸಲೆ ಎಷ್ಟು ಹಿಂದಿನ್ನು ಸಾವಿರ
ಸಂಖ್ಯೆ ಜನ್ಮದಲಿ ಮಾಡಿದ್ದು
ಪುಣ್ಯ ಇದ್ದರೆ ಅಂಥ ಹೆಣ್ಣು ದೊರಕುವದು
ಅನ್ಯಾಯದಲಿ ಎನ್ನ
ಕಲ್ಲು ಕಲ್ಲಿಲೆ ಒಗೆದಳೆನ್ನ ಕುದುರೆಯು
ಪ್ರಾಣವನು ಬಿಟ್ಟಿತು
ಅಲ್ಲಿ ಪುಣ್ಯದ ತಾಯಿ ನಿನ್ನ ಪುಣ್ಯದಿಂದಲೆ
ಉಳಿದೆ ಮುನ್ನವಳ
ಹೊರತು ಮನ ಉಣ್ಣಲೊಲ್ಲದು ನಿದ್ರೆ ಕಣ್ಣಿಗಿನ್ನೆಲ್ಲಿ ೪

ನಾನು ಹಿಂದಕೆ ಸುತಗೆ ಜಾಣ ಸೃಷ್ಟಿಯ ಮಾಡು
ನೀನು ಎಂದದು
ತಪ್ಪು ಅವನು ಈ ಕಾಲದಲೆ ನಾನು
ಮೋಹಿಸುವಂಥ ಜಾಣೆಯನು
ಪುಟ್ಟಿಸಿದ ನಾನು ಅಪಕೃತಿ ಅವಗೇನು
ಮಾಡಿದ್ದೆ ಏನು ಮಾಡಲಿ
ಇನ್ನು ಏನುಪಾಯವು ಎನ್ನ ಮಾನವನ್ನು
ಕಳೆದಂಥ ಮಾನಿನಿಯ
ತರುವದಕೆ ನೀನೆ ಸರಿ ಹೆಬ್ಬುಲಿಯು ನೀನೆ ತಾರವೆ
ಇರಲುನಾನು ಬದುಕುವನಲ್ಲ ಖೂನ ಪೇಳುವೆನು ೫

ಮೀನಾಕ್ಷಿ ತಿಳಿ ಜೀವದಾನ ಮಾಡಲು ದೇವ
ಯಾನ ಬರುವದು ಹೆಚ್ಚು
ಏನು ಪೇಳಲಿ ಹಿರಿಯ ತಾಯ್ತನ ನಿನ್ನಲ್ಲಿ
ಉಂಟು ಕ್ಷೋಣಿಯಲಿ
ಕೀರ್ತಿಪಡಿ ನೀನು ಇದು ಒಂದು ಕಲ್ಯಾಣವನ್ನು
ಕಟ್ಟಿ, ದಾನದೊಳು
ಶ್ರೇಷ್ಠ ಗಜದಾನ, ಸಾವಿರ ಅಶ್ವದಾನ,
ಸಾಹಸ್ರದಾನ ಪಾತ್ರರಿಗೆ
ಗೋದಾನ ಸಾವಿರಕೋಟಿ ಮಾನದಲಿ ಇಷ್ಟಕ್ಕೆ ಸಮಾನ
ತಿಳಿ ಒಂದು ಕಲ್ಯಾಣ ಕಟ್ಟಿದರೆ ೬

ಧ್ವನಿ

ರಾಗ: ಸಾರಂಗ ಭಿಲಂದಿತಾಳ

ದೇವೇಶನು ನುಡಿದಂಥ ಆ ವಾಕ್ಯಕ್ಕೆ
ಬಕುಲಾದೇವಿ ತಾ ನುಡಿದಳು
ಆ ಕಾಲಕ್ಕೆ ಹೀಗೆ ದೇವಾಧೀಶನೆ ನಿನ್ನ ಕೇವಲ ಮರುಳು
ಈವತ್ತಿಗೆ ಮಾಡಿದಳು ಯಾವಕೆ ಅವಳು ೧

ಯಾವಲ್ಲಿರುವಳಾಕೆ ಯಾವಾತನ ಮಗಳು
ಪೂರ್ವಜನ್ಮದಲಾಕೆ ಯಾವಕೆ
ಪೇಳು ಯಾವ ಕಾರಣದಿಂದ ಈ ಊರ್ವಿಯೊಳು ಭಾವಿಸಿ
ಬಂದಿಹಳು ಆ ವಾರ್ತೆ ಪೇಳೊ ೨

ಅಂತಃಕರಣವ ಮಾಡುವಂಥ ಜನನಿಯಳ
ಇಂಥ ಮಾತನು ಲಕ್ಷ್ಮಿಕಾಂತಾ
ತಾ ಕೇಳಿ ಅಂತರಂಗದಲಿರುವ ವೃತ್ತಾಂತಗಳೆಲ್ಲ
ಚಿಂತಿಸಿ ನುಡಿದಾ
'ಶ್ರೀಮದನಂತಾದ್ರೀಶ' ೩

ವಚನ

ಪೂರ್ವದಲಿ ಶ್ರೀರಾಮ ದೇವಸೀತೆಯ ಕೂಡಿ
ತಾ ವನದರಲಿರುತಿರಲು
ರಾವಣನು ಇಬ್ಬರಿಗೆ ತಾ ವಿಯೋಗವ ಮಾಡಿ
ದೇವಿಯನು ಅಪಹರಿಸಿ
ತಾ ಒಯ್ಯ ಬೇಕೆಂಬೋ ಭಾವದಲಿ ಬಂದಾ ಆ ವೇಳೆಯಲಿ
ರಾಮದೇವ ಪತ್ನಿಯು ತನ್ನ ರೂಪ ನಿರ್ಮಿಸಿ
ಅಗ್ನಿದೇವ ಪತ್ನಿಯಲ್ಲಿದ್ದ
ಶ್ರೀ ವೇದವತಿಯನ್ನು ದೇವೇಂದ್ರನ ಸಹಿತ ಆವಾಹನ ಮಾಡಿ
ತಾ ವಾಸಮಾಡಿದಳು ಕೈಲಾಸದಲ್ಲಿ ೧

ಮಂದಮತಿ ರಾವಣನು ಸುಂದರಾಕೃತಿ ವೈದ
ಮುಂದೆ ರಾಮನು
ಅವನ ಕೊಂದು ಆ ಸೀತೆಯನು ತಂದು
ಅಪವಾದ ಭಯದಿಂದ
ತಾನಗ್ನಿಯಲಿ ಚಂದದಿ ಪ್ರವೇಶ ತ್ವರದಿಂದ
ಮಾಡಿಸಿದ ಬಂದರಿಬ್ಬರು
ಅಗ್ನಿಯಿಂದ ಸೀತೆಯರಾಗ ಚಂದಾಗಿ ನೋಡಿ
ನಿಜ ಸುಂದರಿಗೆ
ತಾ ನುಡಿದ ಇಂದು ನಿನ್ನಂಥಾಕೆ ಬಂದವಳು ಇವಳ್ಯಾರು
ಎಂದಮಾತಿಗೆ ಸೀತೆ ಅಂದಳ್ಹೀಗೆ ೨

ಲೋಕನಾಥನೆ ಕೇಳು ಈಕೆ ತಿಳಿ ವೇದವತಿ ಈಕೆ
ಹಿಂದಕೆ ಅಶೋಕ
ವನದಲಿ ಬಹಳ ಶೋಕ ಬಟ್ಟಂಥಾಕೆ
ಈಕೆಯ ಸ್ವೀಕರಿಸು
ಈ ಕಾಲಕೆ ಎನಮೇಲೆ ನೀ ಕರುಣದಿಂದ
ಕಾಕುಸ್ಥನೀ ಮಾತು

ಕೇಳಿ ಮೌನದಲಿ ಹೇ ಕಾಂತೆ ನೀ ಕೇಳು
ಏಕಪತ್ನಿಯ ವ್ರತವು
ಈ ಕಾಲಕೆ ಎನ ಮಾತುಂಟು ಈಕೆ
ಕಲಿಯುಗದಲ್ಲಿ ಆಕಾಶ
ನೃಪ ಪುತ್ರಿಯಾಗುವಳು ಮುಂದೆ ೩

ಆ ಕಾಲದಲಿ ನಾನು ವೇಂಕಟೇಶನು ಆಗಿ
ಈಕೆಯನು ವಿಧಿಯಿಂದ
ಸ್ವೀಕರಿಸುವೆಂತೆಂದ ಆಕೆ ಪದ್ಮಾವತಿಯು ನೀ
ಕೇಳು ಎಲೆ ತಾಯೆ
ಆಕೆಯ ಕೂಡಿಸು ವಿವೇಕದಿಂದ ಈ
ಕಾರ್ಯವನು ಮಾಡು
ನೀ ಕಾಲಗಳೆಯದಲೆ ಯಾಕೆ ತಡ ನಿನ್ನ ಮನಕೆ
ಬೇಕಾದ ಕುದುರೆ
ಯಲಿ ನೀ ಕುಳಿತು ನಡೆಯಂದಾ ಆಗ ಬಕುಳವತಿಯು
ತಾ ಕೇಳಿನುಡಿದಳಾ ವೈಕುಂಠ ಪತಿಗೆ ೪

ಧ್ವನಿ

ರಾಗ : ರೇಗುಪ್ತಿ ಅಟತಾಳ

ಇದಕ್ಯಾಕಿಷ್ಟೊಂದು ಚಿಂತೆ ವೇಂಕಟರಾಯಾ ಇದಕ್ಯಾಕೆ ಪ

ಇದಕ್ಯಾಕಿಷ್ಟೊಂದು ನಾ ಪದುಮಾವತಿಯ ತರುವೆ
ಪದುಮನಾಭನೆ ತಿಳಿದಪದರಿಗೆ ಗಂಟೆಂದು ಅ.ಪ

ಮಾತಿಲೆ ಒಲಿಸುವೆನು ಹಾದಿಯ ತೋರೋ
ಹಾತೊರೆಯ ಬೇಡಾ ನೀನು
ಸೋತು ಕಣ್ಣಿಗೆ ನಿದ್ರೆ ಆತುರಾದರೆ ಏನು
ಕೂತು ಮಲಗಬೇಕು ನೀ ತಿಳಿದೇವನೆ ೧

ಬರುವೆನೀ ಕಾರ್ಯ ಮಾಡಿ ಹಸಿವೆಯ
ಭರ ಇದ್ದ ಕ್ಷಣವೇನು
ಎರಡು ಕೈಲುಂಬರೆ ಪರಮ ಪರುಷನೆ ೨

ಧರೆಯೊಳಗೆಲ್ಲಿದ್ದರೇನು ನಿನ್ನವಳಾಕೆ
ಸರಸದಿ ತಿಳಿಯೋನೀನು ಕರಗಿದ ತುಪ್ಪವು
ಹರಿವಾಣವನು ಬಿಟ್ಟು ಹರಿದು ಹೋಗುವದೇನೊ
ವರದನಂತಾದ್ರೀಶ ೩

ವಚನ

ಇಷ್ಟು ಮಾತಿಗೆ ಹರಿಯು ತಟ್ಟನೆ ಮಾಯದಲಿ
ಧಿಟ್ಟಾದ ಕುದುರೆಯ
ಸೃಷ್ಟಿಸಿ ತಾಮಾಡಿಕೊಟ್ಟುನುಡಿದ ನೆಟ್ಟಗೆ
ಮಾರ್ಗವಿದು ಮುಟ್ಟು
ನೀ ನಡಿಯಮ್ಮ ಬೆಟ್ಟವನು ಇಳಿದು
ಬೆಟ್ಟದ ಕೆಳಗಿರುವ
ಶ್ರೇಷ್ಠ ಕಪಿಲೇಶ್ವರನ ದೃಷ್ಟಿಂದ ಕಾಣುತಲೆ
ಥಟ್ಟನೆ ಕೈಮುಗಿದು
ಘಟ್ಟಿ ಮುಟ್ಟಿ ವರ ಬೇಡಮ್ಮ ನೀ ಬೆಟ್ಟದ
ವೇಂಕಟಗೆ ಥಟ್ಟಾನೆ
ಕಲ್ಯಾಣ ಕಟ್ಟಲೆಂದು ೧

ಮುಂದೆ ಶುಕಮುನಿ ಇದ್ದ ಚಂದದಾಶ್ರಮಕ್ಹೋಗಿ
ವಂದಿಸ್ಯಾತನಿಗೆ
ನೀನು ಮುಂದೆ ಕಲ್ಯಾಣ ಬರಲೆಂದು
ಬಯುಸುವಂಥ ಕಂದ
ಗೋವಿಂದ ನಿನ್ನ ಗೊಂದಿಸಿದನೆಂದ್ಹೇಳು
ಚಂದದಿಂದ ಮುಂದೆ

ಪದ್ಮಾಖ್ಯ ಬಹು ಚಂದಾದ ತೀರ್ಥದಲಿ
ಸುಂದರರು ಕೃಷ್ಣರಾಮೆಂದು
ಎನಿಸುವರಲ್ಲಿ ವಂದಿಸ್ಯವರಿಗೆ ಭಕ್ತಿಯಿಂದ
ಪೂಜಿಸು ಕಾರ್ಯ
ಚಂದಾಗಿ ಕೈಗೂಡಲೆಂದು ನೀನು ೨

ಹಾಗೆ ಮುಂದಕೆ ಮತ್ತೆ ಸಾಗಿ ಆಕಾಶಪುರಕ್ಹೋಗಿ
ಪದ್ಮಾವತಿಯ ಬೇಗ
ಘಟನೆಯ ಮಾಡು ಯೋಗಬಲ್ಲವಳಿಗ್ವೆಚ್ಚಾಗಿ
ಪೇಳಲಿ ಏನು
ಹ್ಯಾಗೆ ಕಾರ್ಯಾದೀತೋ ಹಾಗೆ ಮಾಡು
ನಾಗಶಯನ ಮಾತು
ನಾಗವೇಣಿಯು ಕೇಳಿ ನಾಗಗಿರಿ ಇಳಿದು
ಚೆನ್ನಾಗಿ ನಡೆದಳು ಹ್ಯಾಗೆ
ಹೇಳಿದನು ಅದರ್ಹಾಂಗೆ ಮಾಡುತ ಮುಂದೆ ಬೇಗಾಗಸ್ತ್ಯಾ
ಶ್ರಮಕ್ಕೆ ಸಾಗಿದಳು ತಾನು ೩

ಮುಂದಗಸ್ತ್ಯೇಶ್ವರನ ಮೋದದಲಿ ಬಲಗೊಂಡು
ಐದು ಸಂಖ್ಯಾಕ
ನತಿಗೈದು ಕುಳ್ಳಿರಲು ಅಲ್ಲಿ ಶ್ರೀಧರನ
ಕಾರ್ಯದಲಿ ಸಾಧಕಳು
ಆಗಿ ಬೋಧಿಸೀ ಪರಿಯು
ಬಕುಲಾದೇವಿಯನು ಕಳುಹಿ
ಹಾದಿ ತೋರಿಸಿದಂಥ ಶ್ರೀದ ಶ್ರೀಮದನಂತ ಭೂಧರೇಶನ
ಪೂರ್ಣ ದಯದಿ ವಿಘ್ನಗಳೆಲ್ಲ ಕೋದು ಮುಗಿಯಿತು
ಇಲ್ಲಿಗೈದು ಅಧ್ಯಾಯ. ೪

ಅಧ್ಯಾಯ ಆರು

ರಾಗ: ನಾಟಿ ಝಂಪೆತಾಳ

ಅಘಟ್ಯಘಟಿನಾಟ್ವೀ ಪುಲಿಂದಾ ಶ್ರೀಪತೇಸ್ತನುಃ
ನೃಪಜಾಸ್ಮರಪೀಡಾಂ ತಾಂ ಕಥಯಂತೀ ಹರೇದಘಮ್

ಜಯ ಜಯ ಜಯ ಜಯ ಪ್ರದವೇಷ
ಜಯ ನಿತ್ಯ ಸಂತೋಷ
ಜಯತು ಜಯ ಲಕ್ಷ್ಮೀಶಾ ವೆಂಕಟೇಶಾ ೧

ಪದ್ಮಜಾಕೃತಯಾತ್ರೆ ಪ್ರದ್ಮವಿಕಸಿತ ನೇತ್ರಾ
ಪ್ರದ್ಮಾಜಾಸನ ಮುಖ್ಯ ಪದ್ಮನಾಭಾಖ್ಯ ೨

ಗುರ್ವನುಗ್ರಹ ಗಮ್ಯ ಗುರುಗುಣಾರ್ಣವಸೌಮ್ಯ
ಗುರ್ವನಂತಾದ್ರೀಶ ಗುರುಸುಪ್ರಕಾಶ ೩

ವಚನ

ಸಿರಿಸಹಿತ ಶೇಷಾಖ್ಯಗಿರಿಯಲ್ಲಿ ಇರುವಂಥ ಪರಮ
ಪುರುಷನ ಪಾದ
ಸರಸಿಜಂಗಳ ನಿತ್ಯ ಸ್ಮರಿಸಿ ನತಿಸುವೆ ಮತ್ತೆ
ಮರೆಯದಲೆ ಮನದಲ್ಲಿ
ಸ್ಮರಿಸಿ ಗುರುಗಳಿಗೆಲ್ಲ ಕರವ ಮುಗಿವೆ
ವರಬುದ್ಧಿಯಲಿ ಎನ್ನ ಶಿರಮೆಟ್ಟಿ
ಹಾರುತಲೆ ಇರುವಂಥ ಲೋಕದಲಿ ವರಕವೀಶ್ವರುಗಳಿಗೆ
ಕರಮುಗಿದು
ಎನ್ನ ಬುದ್ಧಿ ಹರಿದಷ್ಟು ಪೇಳುವೆನು ವರವೇಂಕಟಾಧೀಶನ
ಕೊರವಂಜಿ ಕಥೆಯ ೧

ಚನ್ನಿಗನು ಘನಮಹಿಮ ಪನ್ನಗಾದ್ರೀಶತಾ
ಮುನ್ನಾಗಿ ನಾರೀಕುಲ
ರತ್ನ ಬಕುಲಾವತಿಗೆ ಚೆನ್ನಾಗಿ ಬೋಧಿಸುತ
ತನ್ನ ಕಾರ್ಯಕೆ ಕಳುಹಿ
ಮುನ್ನ ಆಲೋಚಿಸಿದ ತನ್ನ ಮನದೊಳಗೆ
ಎನ್ನ ಕಾರ್ಯಕೆ ಅನ್ಯ
ರೂಪವ ಧರಿಸಿ ಇನ್ನು ನಾ ಪೋಗುವೇನು
ತನ್ನ ಕಾರ್ಯವು ಮತ್ತೆ
ಅನ್ಯರಿಗೆ ಪೇಳಿದರೆ ತನ್ನಾಗೆ ಮನಗೊಟ್ಟು
ಮಾಡುವರಲ್ಲ ಚನ್ನವಾಗಿ ೨

ಒಬ್ಬ ಮಗ ಮಗನಲ್ಲ ಒಕ್ಕಣ್ಣು ಕಣ್ಣಲ್ಲ
ಉಬ್ಬುಬ್ಬಿ ವನಿತೆಯರು
ಕೊಬ್ಬಿಲಾಡಿದ ಮಾತು ಒಬ್ಬರಲಿ ನಿಜವಲ್ಲವೆಂಬ
ಈ ರೀತಿ ಅವಲಂಬಿ
ಸುತ ಕೊರವಂಜಿ ಎಂಬೋ ರೂಪವಾದ
ಗಂಭೀರಕೊರವಿ ಮುಖ
ವೆಂಬುವದು ಬಾಡಿಹುದು ಗುಂಭ
ಬಾಯ್ವಳಗ್ಹಲ್ಲು ಎಂಬುವದು
ಒಂದಿಲ್ಲ ಲಂಭಕರ್ಣಗಳಿಹವು ಲಂಭಕುಚಗಳು ಮತ್ತ ಲಂಬೋದರಿ
ಯೆನಿಸಿಕೊಂಬುವಳು ತಾನು ೩

ಚೀರವಸ್ತ್ರವನುಟ್ಟು ಛಿದ್ರಕುಪ್ಪಸತೊಟ್ಟು ಘೋರ
ಜಡೆಗಳ ಧರಿಸಿ ಧೀರ
ಕಮಲೋದ್ಭವನ ಆರೊಂದು ತಿಂಗಳದ ಚೀರಶಿಶುವಿನ
ಮಾಡಿ ಸಾರ
ಬ್ರಹ್ಮಾಂಡವೆ ಘೋರ ಬುಟ್ಟಿಯ ಮಾಡಿ
ಚಾರುನವಧಾನ್ಯಗಳ ಪೂರ
ತುಂಬಿದಳು ಚಾರು ಫಣೆಯಲ್ಲಿ ಕಸ್ತೂರಿ
ತಿಲಕವನಿಟ್ಟು ಹಾರ

ಪದಕವ ಧರಿಸಿ ಘೋರಮೂಗುತಿನಿಟ್ಟು
ಗೀರುಕಂಕಣ ಕೈಗೆ ಚಾರು
ಬಿರುದಾವಳಿಯು ತೋರತಲೆ ಕಟ್ಟಿದಳು ನಾರಿ
ತಾ ಐವತ್ತು ಪೂರ
ವಯದವಳಾಗಿ ತೋರುತಿಹಳು ೪

ಜೋಲಗಿವಿಯಲಿ ತಕ್ಕ ವಾಲೆಯನು ಇಟ್ಟು ಮಣಿ
ಮಾಲೆಗಳ ಧರಿಸಿ
ದಳು ಮೂಲದಲಿ ಶಂಖಮಣಿ ಮೇಲೆ
ಗುಲಗುಂಜಿ ಮಣಿ
ಮೇಲಾಗಿ ತುಲಸಿಮಣಿ ಮೇಲಾಗಿ ಶ್ರೀಗಂಧಮಣಿ
ಮೇಲೆ ಕರ್ಪೂರ
ಮಣಿ ಮೆಲ್ಲಗ್ಹಾಕಿದಳೂ ಮೇಲೆ ಸ್ಫಟಿಕದ
ಮಣಿಯು ಮೇಲೆ
ಕಮಲಾಕ್ಷಿಮಣಿ ಜೋಲ ಮಾಲೆಗಳ ಮೇಲೆ
ಸಾಲ್ಹಿಡಿದು ವಿವಿಧಮಣಿ
ಮಾಲೆಗಳ ತಾ ಧರಿಸಿ ಬಾಲೆ ಕಟ್ಟಿದಳ್ ತನ್ನ
ಬಾಲಕನ ಉಡಿಯಲ್ಲಿ
ಕೋಲು ಕೈಯಲಿ ಪಿಡಿದು ನಡೆದಳಾಗ ೫

ರಾಗ: ಶ್ರೀರಾಗ ಆದಿತಾಳ

ಗಿರಿಯಿಂದಲಿ ನಾರಾಯಣ ಪುರಕೆ ಬಂದಳು
ಪುರದ ಬಾಗಿಲುಗಳನ್ನೆಲ್ಲ ತ್ವರದಿ ದಾಟಿದಳು
ತಿರವಿದ ಸೆರಗು ತಿರುಗಿ ಹೊದೆಯುತಲೆ
ತಿರುಗಾಡುತ ಬಂದಳು ತಿರುಕೊಂಬುವರಂತೆ
ಮನೆ ಮನೆ ಬಾಗಿಲನು ಮೆಟ್ಟುತಿಹಳು
ಮನಸಿಗೆ ಬಂದ್ಹಾಂಗೆ ಧ್ವನಿಮಾಡುತಿಹಳು
ಮನಗೊಟ್ಟು ಕೇಳಿರಿ ಎನ್ನ ತಾಯಿಗಳಿರಾ
ಮನದ ಮಾತುಗಳ್ಹೇಳುವೆ ಮನೆಯವ್ವಗಳಿರಾ ೧

ಹಿಂದಾದದ್ದು ಹೇಳೇನು ಇಂದಾದದ್ದು ಮತ್ತೆ
ಚಂದಾಗಿ ಪೇಳೇನು ಮುಂದಾಗುವದೆಲ್ಲಾ
ಹಿಂದಕ್ಕೆ ನಾ ಬಹಳ ಮಂದಿಗ್ಹೇಳಿದೆನು
ಒಂದೂ ಸುಳ್ಳಾಗಿಲ್ಲ ಸಂದೇಹವಿಲ್ಲ ೨

ಸಾಮಭೇದವ ಬಲ್ಲೆ ಸಾಮುದ್ರಿಕಿ ಬಲ್ಲೆ
ಹೈಮಾದಿ ಜ್ವರಕೌಷಧ ನಾ ಮಾಡಲು ಬಲ್ಲೆ
ಕಾಮಿನಿಯರಿಗಾದ ಕಾಮಜ್ವರ ಬಲ್ಲೆ
ಕೌಮಾರಿಗಳಿಗಂತು ನಾ ಮುಂಚೆ ಬಲ್ಲೆ ೪

ಭೂತ ಬಿಡಿಸಲು ಬಲ್ಲೆ ಬೇತಾಳವ ಬಲ್ಲೆ
ಮಾತಾಡದ ಮೂಕರನು ಮಾತಾಡಿಸಬಲ್ಲೆ
ನೀತಿನುಡಿಗಳ ಬಲ್ಲೆ ಜ್ಯೋತಿಷ್ಯವ ಬಲ್ಲೆ
ಕೂತು ಕೇಳಿದರೆಲ್ಲ ಮಾತ್ಹೇಳಲು ಬಲ್ಲೆ ೫

ಹಸನಾಗಿ ಪೇಳುವೆ ಕುಶಲಾದವಾಣಿ
ಹುಸಿಯಲ್ಲವಿದು ಎನ್ನ ಹಸುಗೂಸಿನಾಣೆ
ಅಸು ಹೋದರು ನಾನಲ್ಲ ಹುಸಿಯಾಡುವ ಕೊರವಿ
ವಸುಧೆಯೊಳಗೆ ನಾ ಹೆಸರಾದ ಕೊರವಿ ೬

ನರನಾರಾಯಣಲಿ ಇರುವಂಥ ಕೊರವಿ
ವರನಂತಾದ್ರೀಶನ ನೆರವುಳ್ಳ ಕೊರವಿ
ಕೊರವಿ ಮಾತನು ಕೇಳಿ ಪುರದ ನಾರಿಯರು
ಅರಸನ ರಾಣಿಗೆ ತ್ವರದಿ ಪೇಳಿದರು ೭

ರಾಗ: ಪೂರ್ವಿರಾಗ ಛಿಲಂದಿ ತಾಳ

ಕೊರವಿ ಬಂದಳಮ್ಮ ಇಲ್ಲಿಗೆ ಈ ಕೇರಿಗೆ ಕೊರವಿ
ಬಂದಳಮ್ಮ ಇಲ್ಲೆ
ಖರೆಯ ಮಾತು ಪೇಳುತಿಹಳು ಪುರದ
ಜನರು ನೆರೆದು ಬಹಳ ಆತುರ
ಪಟ್ಟು ಕೇಳುತಿಹರು ಪ

ಹೃದಯ ಭಾವ ಬಲ್ಲವಳು ಮಧುರ
ಮಾತನಾಡುತಿಹಳು ಮುದದಿ ಕೇಳಿ
ದ್ದೇಳುವಳು ಮುದಕಿಯಾಗಿ ತೋರುತಿಹಳು ೧

ಚಿಕ್ಕ ಹೆಣ್ಣು ಮಕ್ಕಳಿಗೆ ತಕ್ಕವರನ ಹೇಳುತಿಹಳು
ಮಕ್ಕಳ ಹೇಳುವಳು
ತನ್ನ ಮಕ್ಕಳಾಣೆ ಕೊಡುತಿಹಳು ೨

ನರನಾರಾಯಣರು ಎಲ್ಲಿ ಇವರೊ ಅಲ್ಲೆ ಇರುವಳಂತೆ
ವರದನಂತಾದ್ರೀಶ ಕೊಟ್ಟ
ವರವುಳ್ಳ ಕೊರವಿಯಂತೆ ೩

ರಾಗ: ಕನ್ನಡ ಕಾಂಬೋದಿ ಅಟತಾಳ

ಕೊರವಿ ಬಂದದ್ದು ಕೇಳಿ ಕರೆಯಿರೆಂದಳು
ಬೇಗ ಅರಸನ ಪಟ್ಟದ
ರಾಣಿ ಪನ್ನಗವೇಣಿ ೧

ಅರಸಿ ಮಾತನು ಕೇಳಿ ಅರಸಂಚೆಗಮನೆಯರು
ತಿರುಗಿ ಬಂದರು
ಮತ್ತಲ್ಲೆ ಕೊರವಿ ಇದ್ದಲ್ಲೆ ೨

ಕೊರವಿ ಬಾರಮ್ಮ ನಿನ್ನ ಕರೆದಳರಸಿಯು
ಎಂದು ಕರೆದರು ಕಯ್ಯ
ಬೀಸುತ ಕಣ್ಣುತಿರುವುತ ೩

ಕುಡಿತೆ ಗಂಗಳೆಯರ ನುಡಿಕೇಳಿ ಕೊರವಂಜಿ
ನುಡಿದಾಳೀಪರಿ ವಾಣಿ
ಮಾತಿನ ಜಾಣೆ ೪

ಯಾಕೆ ಕರೆದಳು ಎಲ್ಲ ಲೋಕನಾಥನ ರಾಣಿ
ಆಕೆ ಸೌಭಾಗ್ಯದ ಒಡವಿ
ಹುಟ್ಟನಾ ಬಡವಿ ೫

ಎನ್ನ ವಸ್ತ್ರವ ನೋಡಿ ಎನ್ನ ಕುಪ್ಪಸ
ನೋಡಿ ಎನ್ನ ಒಡವೆಯ ನೋಡಿರಿ
ಮಾತನಾಡಿರಿ ೬

ಅನ್ನ ಹೀನಳು ನಾನು ಘನ್ನ ರಾಜನರಾಣಿ
ಎನ್ನ ಕರಿದಾಳೆಂಬುವದು
ಅಪಹ್ಯಾಸವಿದು ೭

ಚಿಕ್ಕ ಪ್ರಾಯದವರೆ ಚಕ್ಕಂದವೆ ನಿಮಗಿದು
ನಕ್ಕು ಮಾತಾಡುವಿರಾ ಬಂದು
ಮುದಕಿಯ ಕಂಡು ೮

ಕಂಜಮುಖಿಯರು ಕೊರವಂಜಿ ಮಾತನ್ನು ಕೇಳಿ
ಅಂಜಿ ಮಾತಾಡಿದರಾಗ
ವಿನಯದಿ ಬೇಗ ೯

ಧರ್ಮದೇವಿ ನಿನ್ನ ಮುಂದೆ ಸುಮ್ಮನೆ ಸುಳ್ಳಾಡಲು
ಒಮ್ಮೆಗಾದರುದಕ್ಕೀತೆ
ಆಡೋದು ರೀತೆ ೧೦

ಅಂದಮಾತನು ಕೇಳಿ ಮಂದಹಾಸದಿ ನಕ್ಕು
ಬಂದು ನಡೆದಳು ಮುಂದೆ
ಆನಂದದಿಂದ ೧೧

ಹರಿ ನಾರಯಣಿಯೆಂಬೊ ಕೊರವಿ ನಡದೆಳಲ್ಲಿಗೆ
ಅರಮನೆಗೆ ಬಾಗಿಲೊಳಗೆ
ಅಂಗಳದೊಳಗೆ ೧೨

ಮೇಳಸ್ವರದಿಂದಾನಂತ ಶೈಲೇಶನ ಕೊಂಡಾಡಿ
ಕೋಲುಕೋಲೆಂದು
ಪಾಡುವಳು ಮಾಯಾತೋರುವಳು ೧೩

ರಾಗ: ಶಂಕರಾಭರಣ ಆದಿತಾಳ

ಕೋಲು ಕೋಲೆನ್ನಕೋಲು ಮುತ್ತಿನ ಕೋಲು
ಕೋಲೆನ್ನ ಕೋಲು
ಕೋಲನಾಡುವ ಬನ್ನಿ ಬಾಲ ವೇಂಕಟಕಪತಿ
ಲೀಲೆಕೊಂಡಾಡುತಲಿ ಪ

ಪರಮ ದಯಾಳು ಹರಿ ಭೃಗುಮುನಿ
ಭರದಿಂದೊದೆಯುತಿರೆ ತಿರುಗಿ
ಕಾಲ್ಪಿಡಕೊಂಡು ಪರಿಪರಿಸ್ತುತಿಸಿದಾ ೧

ಪರಮ ಚಂಚಲ ಲಕ್ಷ್ಮೀತಾ ಶ್ರೀಹರಿ ನಡತೆಯ
ನೋಡಿ ಸಹಿಸದೆ
ಕೊಲ್ಲಾಪುರಕೆ ನಡೆದಳು ೨

ಸಿರಿ ಇಲ್ಲದೆ ನಾನೂ ಒಬ್ಬನೆ ಇರಲಾರೆನು ಎಂದು
ಹರಿ ವೈಕುಂಠದಿಂ
ಧರೆಗಿಳಿದನು ೩

ಉತ್ತಮ ವೈಕುಂಠ ಇರಲು ಮತ್ತುರಗಾದ್ರಿಯಲಿ
ಹುತ್ತಮನೆಯ
ಮಾಡಿ ಗುಪ್ತದಲ್ಲಿರುತಿಹ ೪

ನಿತ್ಯ ನಿರ್ವಿಕಾರ ಶ್ರೀಹರಿ ಭಕ್ತರ ಅಭಿಮಾನಿ
ನೆತ್ತಿಯ ಒಡಕೊಂಡು
ಭಕ್ತನ ಸಲುಹಿದೆ ೫

ಭವರೋಗದ ವೈದ್ಯ ತಾಯೆನಿಸುವನು
ಗುರುವಕರೆದ ಅವನಿಂದ
ತಲೆ ಗಾಯವ ಕಳೆದನು ೬

ಭೂಮಿರಮಣ ವರಹದೇವನ ಭೂಮಿಯ
ತಾ ಬೇಡಿ ಸ್ವಾಮಿ
ಪುಷ್ಕರಣೆ ಸೀಮೆ ಸಾಧಿಸಿದ ೭

ನೋಟದಿಂದ ಚಲುವ ತಾ ಬಹು ಮಾಟ
ಕುದುರೆ ಏರಿ ಘಾಟಿನಿಂದ
ಮೃಗ ಬೇಟೆಗೆ ನಡೆದನು ೮

ವನವನವ ಸಂಚರಿಸಿ ಅಲ್ಲೊಬ್ಬೊನಿತೆಯಳನು
ಕಂಡ ಮನಸಿಟ್ಟನು
ಆ ವನಿತೆಯ ಮೇಲೆ ೯

ಆ ವನಿತೆಯ ಕನ್ಯಾ ತಾ ಪದುಮಾವತಿ
ಎನಿಸುವಳು ಹೂವಿಗೆ
ಬಂದಳಾ ವನದಲ್ಲೆ ೧೦

ವಾರಿಗೆ ಗೆಳತಿಯರ ಕೂಡಿವಿಹಾರ ಮಾಡುತಿಹಳು ಸಾರಿ
ತಾನಡೆದನು ಶ್ರೀರಮಣನುತಾ ೧೧

ನಾಡೊಳಗಿನ ರೀತಿ ಎಲ್ಲರು ಆಡುವಂಥ ಮಾತು
ಆಡಿದ ಕಲ್ಲೀಡ್ಯಾಡಿ ದಳಾಗ ೧೨

ಪೆಟ್ಟುತಾಗಿ ಕುದುರೆ ಪ್ರಾಣವ ಬಿಟ್ಟಿತು ಆಗಲ್ಲೇ
ಬಿಟ್ಟು ಕುದುರೆಯ ಬೆಟ್ಟವನೇರಿ ೧೩

ಆ ಮಾನಿನಿ ಅವಗೆ ಮೋಹಿಸಿ ತಾ ಮಾತಾಡದಲೆ
ಕಾಮಜ್ವರದಿಂ ತಾ ಮಲಗಿಹಳು ೧೪

ಪ್ರಾಂತಕನಂತಾದ್ರಿಯಲ್ಲಿಹ ಶಾಂತ ಮೂರುತಿ
ಹೊರ್ತು ಅಂತರಂಗಜ್ವರ
ಶಾಂತವಾಗದು ಕೋಲು ಕೋಲೆನ್ನ ಕೋಲೆ ೧೫

ವಚನ

ಕೊರವಿ ಧ್ವನಿ ಕೇಳುತಲೆ ಅರಸಿನ ಪುತ್ರಿ ತಾ
ಸ್ಮರಣೆಯಿಂದಲೆ ಎದ್ದು
ಪರಮ ಚಂಚಲವಾಗಿ ಹೊರಗೆ ಬಂದಳು
ಅಲ್ಲಿ ಕೊರವಿಯನು ಕಂಡು
ಹೊಸ ಕೊರವಿ ಇವಳ್ಯಾರೆಂದು ಬೆರಗಾದಳಾಗ
ಆ ತಾಯಿ ಮಗಳನು
ಕಂಡು ಹರುಷದಲೆ ಬಿಗಿದಪ್ಪಿ ಕೊರವಿ
ಕಾಲ್ಗುಣದಿಂದ ಹೊರಗೆ
ನಿ ಬಂದೆಮ್ಮ ಸರಸವಾಯಿತು ಎಂದು ಇರಸಿ
ತನ್ನ ತೊಡಿಯಮ್ಯಾಲೆ
ಕೊರವಿಯ ಮುಂದಕ್ಕೆ ಕರೆದಳಾಗ ೧

ಕೊರವಿ ನೀ ಬಾರಮ್ಮ ವರಧರ್ಮದೇವತೆಯೆ
ಸರಿ ಉಂಟು ನಿನ್ನಿಂದ
ಪರಮ ಲಾಭಿವಳಿಗೆ ಜ್ವರತಾಪವಾದದ್ದು
ಸರಿ ಕೇಳಬೇಕೆಂದು
ಕರೆಯ ಕಳುಹಿದೆ ನಿನ್ನ ತ್ವರದಿಂದ ನಾ ಇಲ್ಲೆ
ಪರಮ ಆಸನಮ್ಯಾಲೆ
ಸರಸಾಗಿ ಕೂಡೆ ಜ್ವರತಾಪದಿಂದೀಕೆ
ಹೊರಳಾಡುವದು ಕಂಡು ಮರಗು
ತಲೆ ನಿನ್ನನು ಕಂಡು ತ್ವರದಿಂದ ಒದರಿದೆ
ತೆರೆಯಲಿಲ್ಲವು ಕಣ್ಣು

ಹೊರಡಲಿಲ್ಲವು ಮಾತು ಸ್ಮರಣಿಲ್ಲ ಮೈಮೇಲೆ
ಕೊರವಿ ನಿನ್ನ ಧ್ವನಿ ಕೇಳಿ
ಹೊರಗೆ ಬಂದಳು ಹ್ಯಾಗೆ ಪರಮ
ಆಶ್ಚರ್ಯವಿದು ಸರಸಾಗಿ ಪೇಳೆ ೨

ಮಾನಿತಾಸನದಲಿ ಮಾನಿತಳು ಕೊರವಿ
ಸನ್ಮಾನದಿಂದಲಿ ಕುಳಿತು ತಾನು
ಮಾತಾಡಿದಳು ನೀನುಕೇಳುವುದೆಲ್ಲ ನಾನು
ಹೇಳುವೆ ರಾಜಮಾನಿನೀ
ನೀಯನಗೆ ಏನು ಕೊಡುವಿ ಏನು ನಾ
ಕೊಡಲೆಂದು ನೀನು ಧ್ಯಾನಿಸಬೇಡ
ಖೂನ ಪೇಳುವೆ ನಿನಗೆ ಪೇಳುವೆ ನಿನಗೆ
ಜಾನಕಿಯು ಪೂರ್ವದಲಿ ಆ
ಜಾಣೆ ಕೌಸಲ್ಯೆ ಮಾನದಲಿ ರುಕ್ಮಿಣಿಯು
ದಾನಶೂರಳು ಸತ್ಯಭಾಮಿನಿಯು
ಅವರೆಲ್ಲ ಏನುಕೊಟ್ಟದ್ದು ಕೊಡು ನೀನು ಅದಕ್ಕಿಂತ
ಹೆಚ್ಚೇನು ಕೊಡ ಬೇಡಮ್ಮ ೩

ಬರಿ ಮಾತನು ಕೇಳಿ ತಿರುಗಿ ಇನ್ನೊಮ್ಮೆ ಬಾ
ಕೊರವಿ ಎಂದರೆ ಮತ್ತೆ
ಬರುವವಳು ನಾನಲ್ಲ ಅರಸಿ ಬೇಗನೆ ಮುಂಚೆ
ತರಿಸಿ ಮುಂದಿಡು
ನೀನು ವರ ಸುವರ್ಣದ ಮೂರು
ಮೊರತುಂಬ ಮುತ್ತು
ಗಳ ಕರಮುಗಿದು ಆಮೇಲೆ ಸರಸವಾಗಿ
ಕೇಳೆ ಕೊರವಿ ಮಾತಿಗೆ
ಮತ್ತೆ ತಿರುಗಿ ಮಾತಾಡದಲೆ ಅರಸಿತಾ
ಆಕ್ಷಣಕೆ ತರಿಸಿ ಇಟ್ಟಳು
ಮುಂದೆ ವರಸುವರ್ಣದ ಮೂರು
ಮೊರತುಂಬ ಮುತ್ತುಗಳು

ಅರಸಿಕೊಟಿದ್ದು ನೋಡಿ ಹರುಷದಲಿ
ಹರಿ ಎಂಬ ಕೊರವಿ
ನುಡಿದಳು ನಾಡ ಕೊರವಿಯಂತೆ ೪

ಧನ್ಯಧನ್ಯಳು ಲೋಕಮಾನ್ಯಳರಸಿಯೇ
ನೀನು ನಿನ್ನ ಸೌಭಾಗ್ಯ
ಇನ್ನೊಬ್ಬರಲಿ ಕಾಣೆ ನಿನ್ನ ಪುಣ್ಯವು ಬಹಳ
ಚೆನ್ನಾಗಿ ಸಂಪತ್ತು ಮುನ್ನ
ಸಂತಾನ ಸಂಪನ್ನಳಾಗಿರುವೇ ಇನ್ನು ಮುಂದಕೆ ನಿನಗೆ ಉನ್ನತೈ
ಶ್ವರ್ಯ ತಿಳಿ ನಿನ್ನ ಮನಸಿನ ಮಾತು
ಚನ್ನಾಗಿ ಪೇಳೇನು ಪುಣ್ಯ
ವಂತೆಯೇ ಹೊಟ್ಟೆ ತಣ್ಣಗಾಗಲಿ ಇಂದು ಎನ್ನ
ಕೂಸಿಗೆ ತುತ್ತನ್ನ ನೀಡೆ ೫

ಬೇಡಿದಾಕ್ಷಣಕೆ ತ್ವರೆ ಮಾಡಿ ಹರಿವಾಣದಲಿ ನೀಡಿದಳು
ಕ್ಷೀರಾನ್ನ ನೋಡಿ ಕೊರವಿಯು ತುತ್ತುಮಾಡಿ
ಉಣಿಸಲೂ ಥೂಥೂ
ಮಾಡಿ ಉಗಳಿತು ಕೂಸು ನೋಡಿ
ಮರ್ತ್ಯಾನ್ನವನ್ನು ಬೇಡಲಿಲ್ಲ
ನೋಡಿ ಶಿಶುವಿನ ಸಿಟ್ಟು ಮಾಡಿ ಬಡಿಯುತ ನಿಂದೆ ಮಾಡಿ
ಬೈದಳು ಆಗ ಖೋಡಿ ಎಲೆ ನಿರ್ಭಾಗ್ಯ
ನಾಡೊಳಗೆ ತಿರಿಕೊಂಡು
ಬೇಡಿ ನೀ ಉಂಬುವುದು ರೂಢಿಯಲಿ
ನಿನಗುಚಿತ ಬೇಡವಿದು ೬

ರಾಜಾನ್ನ ಬೇಡಿ ಬಂದಿಲ್ಲ ತಾಡನದಿ ಬಹಳ
ಚೀರಾಡಿ ಅಳುವದು
ಶಿಶುನೋಡಿ ಧರಣಿಯು ತಾನು ಕೂಸಿನ ಬಡಿಯ ಬೇಡೆನಲು
ಕೊರವಿ ಮಾತಾಡಿದದಳು ಹೀಗೆಂದು
ನೋಡಮ್ಮ ಇದು ಎನ್ನ ಕಾಡುತದೆ

ಹಗಲೆಲ್ಲ ಮಾಡಲಿನ್ನೇನು ಖೋಡಿ
ಉಣಲಿಲ್ಲ ದಯಮಾಡಿ ನೀ
ಕೊಟ್ಟನ್ನ ಹಾಡ್ಡರಿಸಿ ನಾ ಉಂಬೆ ಕೇಡೇನು
ಮೊಲೆಹಾಲು ಕುಡಿ
ಯುವುದು ತಾ ಎಂದು ಆಡಿ ಮಾತನ್ನು
ಭಿಡೆಯ ಮಾಡದಲೆ
ಮತ್ತಿಷ್ಟು ಬೇಡಿ ಬೇಕಾದ್ದು ಕೊಂಡಾಡಿ ಸೌಖ್ಯದಲಿ
ತಾ ಉಂಡು ತೇಗಿದಳು ೭

ತೃಪ್ತಳಾದಳು ಕೊರವಿ ನಿತ್ಯ ತೃಪ್ತಳು
ಸ್ವಸ್ಥ ಅತ್ತಕುಳಿತು ಕೂಸಿಗೆ
ತೊಳೆದ ಮುತ್ತು ನೀ ಬಾಯೆಂದು ಅತ್ಯಂತ
ಪ್ರೇಮದಲಿ ಎತ್ತಿ
ಮುತ್ತಾಡಿದಳು ಮತ್ತೆ ತೊಡೆ ಮ್ಯಾಲಿರಿಸಿ
ಹುತ್ತಿನಲಿ ಮಾಡಿದ
ಅತ್ಯಂತ ಉಪಕಾರ ಪೊತ್ತು ತೀರಿಸಿದಳಾ
ಹೊತ್ತು ಮರೆಯದಲೆ
ಮತ್ತೆ ಮುಂದಕೆ ತನು ಚಿತ್ತಕ್ಕೈಯಲಿಪಿಡಿದು
ಎತ್ತಿ ಮ್ಯಾಲಕೆ
ಸರ್ವೋತ್ತಮನೆ ಮೊದಲಾದ ಸತ್ಯ
ದೇವತೆಗಳನೆ ಚಿತ್ತದಲಿ ನೆನೆ
ಯುತಲೆ ಒತ್ತಿ ಒದರಿದಳಾಗ ಭಕ್ತಿ ತೋರಿಸುತಾ ೮

ಶ್ರೀದರಮಣ ಭೋ ಆದಿನಾರಾಯಣ
ಆದಿಯಲಿ ನಾನಿನ್ನ ಆದರದಿ
ನೆನೆವೆ ಬ್ರಹ್ಮಾದಿ ದೇವತೆಗಳಿರಾ ಸಾಧುನುಡಿಗಳ
ಸಾಧಿಸಿ ಹೇಳುವೆ
ನಿಮ್ಮ ಸಾಧು ಕೃಪೆಯಿಂದ ಲೋಕದಲಿ ವಿಖ್ಯಾತ
ಶ್ರೀ ಕಾಶೀ ವಿಶ್ವೇಶ

ಗೋಕರ್ಣ ಪುರನಿಲಯ, ಶ್ರೀಕುಂಭಕೋಣೇಶ,
ಶ್ರೀ ವೇಂಕಟೇಶ,
ಗಂಗೆ ಗೋದಾವರೀ, ತುಂಗಭದ್ರೆಯ
ಮತ್ತೆ ಮಂಗಳಪುರದ
ಸಪ್ತರಂಗಗಳುಳ್ಳ ತೀರ್ಥಂಗಳಿರಾ ನಿಮ್ಮನ ಹಿಂಗದಲೆ
ನಾ ಅಂತರಂಗದಲೆ ನೆನವೆ ೯

ಕಾವೇರಿಯಲ್ಲಿರುವ ಕರುಣಾಬ್ಧಿ ಶೀರಂಗ
ಕಾಶೀಪುರನಿಲಯ
ಕಾಳಭೈರವ ಮಹಾಕಾಳಿ ನಾನಿನ್ನ ಈ
ಕಾಲದಲಿ ನೆನೆವೆ ಭೋ ಕಡು
ವೀರಭದ್ರ ಮೂಕಾಂಬಿಕೆಯೇ ದಯಮಾಡು, ಕಂಚಿಯಲಿ
ಕಾಮಾಕ್ಷಿ, ಮಧುರೆಯಲಿ ಮೀನಾಕ್ಷಿ,
ಕಾಶಿವಿಶಾಲಕ್ಷಿ ಕಾಯಿರೆಲ್ಲರು
ಕೂಡಿ ಕರುಣದಿಂದ ೧೦

ಬಹು ಸತ್ಯವುಳ್ಳಂಥ ಬಹುದೇವತೆಗಳಿರಾ
ಬಲಗೊಂಬೆ ನಾ ನಿಮ್ಮ ಒಲ
ವಿರಲಿ ಎನ್ನ ಮೇಲೆ ಹಲವು ದೇವತೆಗಳಿಗೆ
ಬಹು ಹೆಚ್ಚಿನವಳೀಕೆ
ಚಂಚಲಳಾಗಿ ನೀಪೋಗಿ ಚಲುವೆ
ಕೊಲ್ಲಾಪುರದ ಒಳಗಿದ್ದು ಭಕ್ತರಿಗೆ
ಒಲಿವಂಥ ಮಹಾಮಹಿಮೆ ಒಲಿನೀನು
ಎನ್ನ ಮೇಲೆ ವಡನೆ ಪೇಳು
ವೆ ನಿನ್ನ ಒಲುಮೆಯಿಂದ ಆರಸಿ ನೀ ಕೇಳಮ್ಮ
ಸರಸಾಗಿಪೇಳುವೆನು
ತರಿಸು ತಾಂಬೂಲವನು ಸರಸಾದ ಕಾಯಿಪತ್ರಿ
ಕರ್ಪೂರದಡಿಕೆಗಳು,

ಗಿರಿಗಾಜು ಯಾಲಕ್ಕಿ ವರಮೌಕ್ತಿಕದ ಸುಣ್ಣ
ಮರೆಯ ಬೇಡೆಂದು ೧೧

ಕೊರವಿ ವಚನದ ಕೇಳಿ ಕಿರಿನಗೆಯ ನಗುತಲೆ
ತಿರುತಿರುಗಿ ಬೇಡುವ
ದು ಕೊರವಿಯರ ನಡತೆ ಇದು ಸರಿಯೆಂದು
ಅರಸಿತಾ ಸರಿಯಾಗಿ
ಎಲ್ಲವು ತರಿಸಿ ಮುಂದಿಟ್ಟು ಈ ಪರಿ ನುಡಿದಳಾಗ ೧೨

ರಾಗ: ದೇಶಿ ಅಟತಾಳ

ಸತ್ಯ ಪೇಳಮ್ಮ ನೀ ಉತ್ತಮ ಕೊರವಂಜಿ
ಸತ್ಯ ಪೇಳೆ ಚಿತ್ತಕ್ಕೆ ಬೇಕಾದ್ದು
ಮತ್ತೆ ನಾ ಕೊಡುವೆನು ಸತ್ಯ ಪೇಳೆ ಪ

ತರಸಿಟ್ಟೆ ನಾ ಮೂರು ಮೊರ ತುಂಬಮುತ್ತನು ಸತ್ಯಪೇಳೆ
ಸರಸಾಗಿ ಮನಸಿಗೆ ಹರುಷವಾಗೊ ಹಾಂಗೆ ಸತ್ಯಪೇಳೆ ೧

ಗಂಟಲು ಬಿಗಿದು ನೂರೆಂಟು ಮಾತಾಡದೆ
ಸತ್ಯಪೇಳೆ ಬಂಟತನವ
ಪೇಳಿ ಬಂಟಸಬೇಡಿನ್ನು ಸತ್ಯಪೇಳೆ ೨

ಮಾನವಂತೆಯೆ ಅನುಮಾನ ಮಾಡಲು ಬೇಡ ಸತ್ಯ ಪೇಳೆ
ಅನಂತಾದ್ರೀಶನ ಆಣೆ ನಿನಗುಂಟು ಸತ್ಯ ಪೇಳೆ ೩

ವಚನ

ಮನ್ನಿಸ್ಯರಸಿಯ ಮಾತು ಮುನ್ನ ನುಡಿದಳು
ಕೊರವಿ ಎನ್ನವ್ವ ನೀ ಕೇಳೆ
ನಿನ್ನನ್ನ ನಾ ಉಂಡು ನಿನ್ನೊಳು ವಂಚನೆಯ
ಇನ್ನು ನಾ ಮಾಡಿದರೆ

ಅನ್ನ ಹುಟ್ಟದು ಎನಗೆ ಅನ್ಯಾಯದಿಂದಾ
ಎನ್ನ ಬುಟ್ಟಿಯೊಳಿರುವ
ಧಾನ್ಯದೇವತೆ ಆಣೆ ಎನ್ನ ತಂದೆಯ
ಆಣೆ ಚನ್ನ ಬದರಿಯೊಳಿರುವ
ಎನ್ನ ಒಡೆಯನ ಅಣೆ ಎನ್ನ ಗುರುವಿನ
ಆಣೆ ಎನ್ನಾಣೆ ಆಳಿ ಮತ್ತೆ
ಎನ್ನ ಕೂಸಿನ ಆಣೆ ಮುನ್ನ ನೀ ಬೇಡಿದ್ದು ಇನ್ನು ಆಣೆಯ
ಕೊಡವೆ ಎನ್ನ ವಚನವು ಸತ್ಯ ಚೆನ್ನಾಗಿ ತಿಳಿಯೆ ೧

ಅರಸಿ ನೀ ಕೇಳುವ ದು:ಖ ಈ ಮೂರು
ಮಾತುಗಳು ವರಪುತ್ರಿ
ಗಾಗಿರುವ ಜ್ವರದ ಕಾರಣ ಒಂದು,
ಕೊರವಿಯ ಧ್ವನಿಕೇಳಿ ಹೊರಗೆ
ಬಂದದು ಮತ್ತೆ ಪರಮ ಉತ್ತಮನಾದ
ವರಹ್ಯಾಗೆ ಈಕೆಗೆ ದೊರಕು
ವನು ಎಂದು ಸರಸಿಜಾಕ್ಷಿಯೆ ಕೇಳು
ಜ್ವರದ ಕಾರಣ ನೀನು
ಸರಿಗೆಳತಿಯರ ಕೂಡಿ ಸರಸಾಗಿ ವನದಲ್ಲಿ
ಇರುವ ಕಾಲದಲಿ
ಪರಮ ಪುರುಷನ ಕಂಡು ಮರುಳಾಗಿ
ಮೋಹಿಸುತ ಮರುಗುವಳು
ಮತ್ತುಳಿದ ಜ್ವರವಿಲ್ಲವಿದು ಕಾಮ ಜ್ವರವಮ್ಮ ತಿಳಿಯೆ ೨

ಕೊರವಿಯ ಧ್ವನಿಕೇಳಿ ಹೊರಗೆ ಬಂದುದು ಕೇಳು,
ಮರುಳುಮಾಡಿರುವ
ಆ ಪರಮ ಪುರುಷನ ಮಹಿಮೆ ಸರಸಾಗಿ
ನಾ ಮೇಲುಸ್ವರದಿಂದ ನುಡಿಯುತಲೆ
ಬರುವಾಗ ತಾ ಕೇಳಿ ಹೊರಗೆ ಬಂದಳು ಈಕೆ
ಸ್ಮರಿಸಿ ಅವನ ಪರಮ ಉತ್ತಮನಾದ ವರಹ್ಯಾಗೆ
ಈಕೆಗೆ ದೊರಕುವನು

ಎಂತೆಂಬ ಪರಮ ಈ ಚಿಂತೆಯಲಿ
ಸೊರಗಬೇಡಮ್ಮ ನೀ ವರ
ಅವನೆ ಸತ್ಯ ಕರೆದುಕೊಡು ಈ
ವರ ಪುತ್ರಿಯನ್ನು 3

ಎಲ್ಲಿರುವವನ್ಯಾರು ಬಲ್ಲವರು ಯಾರೆಂದು
ಫುಲ್ಲಾಕ್ಷಿ ನೀನು ಮನದಲ್ಲಿ
ಚಿಂತಿಸಬೇಡ ಬಲ್ಲೆನಾತನ ನಾನು ಬಲ್ಲಿದ
ವೈಕುಂಠದಲ್ಲಿರುವ ಶ್ರೀರಮಾ
ವಲ್ಲಭನು ಕಾಣೆ ಚಲ್ವ ಶೇಷಾದ್ರಿಯಲ್ಲಿರುವ
ಈ ಕಾಲದಲ್ಲಿ ಆತನ
ಕಂಡು ವಲ್ಲಭನು ಇವ ಎನಗೆ ಸಲ್ಲುವನು
ಎಂದು ಮನದಲ್ಲಿ ಬಯಸುತ
ಋೂನದಲಿ ಕುಲಗೋತ್ರಗಳು ಎಲ್ಲ ಕೇಳುತ
ಪ್ರೇಮದಲ್ಲಿ ಕಲಹಮಾಡಿ
ಎಲ್ಲಗೆಳೆತೆರ ಕೂಡಿ ಕಲ್ಲು ಕಲ್ಲಿಲೆ ಒಗೆದು
ಬಲ್ಲಿದಾತನ ಕುದುರೆ
ಅಲ್ಲೆಕೊಂದಳು ಈಕೆ ಎಲ್ಲಾನು ಈ ಮಾತು
ಅಲ್ಲಾದರೀಕೆಯ ನಿಲ್ಲೆ ಕೇಳೆ 4

ಅಂದ ಮಾತನು ಕೇಳಿ ಮುಂದೆ ಪದ್ಮಾತಿಯು
ಮಂದಹಾಸದಿ ನಕ್ಕು
ಮುಂದೆ ತಲೆಬಾಗುತಲಿ ಚಂದಾಗಿ
ಮನಸ್ಸಿಗೆ ತಂದು ಪಾದಾಂಗು
ಷ್ಠದಿಂದ ನೆಲಬರೆದಳಾಗೊಂದು ನುಡಿಯದಲೆ
ಮುಂದೆ ಪದ್ಮಾವತಿ
ಯ ಮುಂದೆ ನಡೆದಳು ಕೊರವಿ
ಸುಂದರಿಯೆ ಜ್ವರತಾಪದಿಂದ

ನಿನ್ನೊಳು ನೀನೆ ನೊಂದು ಕೊಂಬುವಿದಾರ
ಮುಂದೆ ಆಡುವಳಲ್ಲ
ಮುಂದಕ್ಕ ಬಾ ನಿನಗೆ ಮುಂದೆ ಹಿತ
ಪೇಳುವೆನು ಸಂದೇಹಪಟ್ಟು
ಭಯದಿಂದ ಅಂಜುಲು ಬೇಡ ಇಂದುಮುಖಿ
ನಾ ಪ್ರೀತಿಯಿಂದ
ವೇಂಕಟಪತಿಯ ಚಂದ ಪಾದರೇಣು ಇಂದು ಕೊಡುವೆನು
ನಿನಗೆ ಬಂದ ಜ್ವರ ಈ ತ್ವರದಿಂದ ಓಡುವದು ೫

ವಾರಿಜಾಕ್ಷಿಯ ಕೈಯ ತೋರೆ ಪೇಳುವೆ
ನಿನ್ನ ಸಾರ ಮುದ್ರಿಕೆಯ
ಪೂರ್ವದಲಿ ಪೇಳಿದ ನಾರದನು
ವನದಲಿ ನಾರಿ ಸುಳ್ಳಲ್ಲ ತಿಳಿ
ಬೇರೆ ಪೇಳುವೆ ಮತ್ತೆ ಚಾರುಚಿನ್ಹೆ
ತೋರುವುದು ಕೈಯಲ್ಲಿ
ಚಾರು ಚಕ್ರದ ಚಿನ್ಹೆ ಸಾರಮತ್ಸ್ಯದ ರೇಖೆ
ತೋರುವುದು ಧನರೇಖೆ
ಪಾರ್ಶ್ವಕನ್ನದ ರೇಖೆ ತೋರುವದು
ಮಂಗಳಾ ಕಾರವಾಗಿ ಬಹು
ಪ್ರೀತಿಕರವಾದ ಮತ್ತೆ ಚಾರು ದಂಪತಿ
ರೇಖೆ ತೋರುವುದು ನೋಡೆ ೬

ಉತ್ಸವದಿ ಆಯುಷ್ಯ ಹೆಚ್ಚು ಮಾಡುವ ರೇಖೆ
ಸ್ವಚ್ಛದಿಂದಲಿ ನೋಡು
ಹೆಚ್ಚಿನಭರಣ ಮುಚ್ಚಿರುವ ಮೊಲೆ
ಮೂಗು ಅಚ್ಚಬಂಗಾರಕ್ಷರ
ಛಚ್ಚಿ ಕೂಡಿಸಿದಂತೆ ಸ್ವಚ್ಛ ತೋರಿಸುವುದು
ಮಚ್ಚ ಲಕ್ಷಣ ಉಂಟು
ಹೆಚ್ಚು ಪೇಳಲಿಏನು ಹೆಚ್ಚಿ ನೊಳಗೆಲ್ಲಾ
ಹೆಚ್ಚು ಮಂಗಳರೇಖಾ

ನಿಚ್ಛಳಾಗಿರುತಿಹುದು ನಿಶ್ಚಯದಿ ಕೊರಳಲ್ಲಿ
ಅಚ್ಯುತನೆ ತಾ ನಿನಗೆ
ಮೆಚ್ಚಿ ಪತಿಯಾಗುವನು ನಿಶ್ಚಯವು ೭
ಇಷ್ಟು ಮಾತುಗಳ ಹೇಳಿ ದಿಟ್ಟ
ವೇಂಕಟಪತಿಯ ಶ್ರೇಷ್ಠ ಪಾದದ ರೇಣು
ಕೊಟ್ಟು ಪದ್ಮಾವತಿಗೆ ಇಟ್ಟು ಫಣಿಯಲಿ
ತಿಲಕ ಇಷ್ಟಾರ್ಥ ಕರಹಸ್ತ ಇಟ್ಟು
ಶಿರದಲಿ ಅಭಯ ಕೊಟ್ಟು ಅರಸಿಯ
ಮುಂದೆ ಸ್ಪಷ್ಟ ನುಡಿದಳು ಭಿಡೆಯ
ಬಿಟ್ಟು ಕೊರವಿಯ ಪಟ್ಟದರಸಿಯೇ ನೀನು
ಘಟ್ಟಿ ಮನಸುಮಾಡಿ ಬೆಟ್ಟದಾ
ವೇಂಕಟಗ ಕೊಟ್ಟು ಬಿಡು ಈಕೆಗೆ ಬಿಟ್ಟು
ಸಂಶಯ ಸೌಖ್ಯ ಪಟ್ಟಾ ತಿಳಿ
ಕೊಡದೆ ಬಿಟ್ಟರೀಕೆಗೆ ಮರಣ ತಟ್ಟುವದು ಇಂದೆ ೮

ದುಷ್ಟ ಕೊರವಿಯ ಎಂಥ ಕೆಟ್ಟ ನುಡಿದಳು
ಎಂದು ಸಿಟ್ಟು ಮಾಡಲು
ಬೇಡ ಘಟ್ಯಾಗಿ ನಾ ನಿನಗೆ ಸ್ಪಷ್ಟಹಿತ
ಪೇಳುವೆನು ಕಟ್ಟು ಪದರಿಗೆ
ಗಂಟು ಹುಟ್ಟಿಸಿ ಹೇಳುವಳಲ್ಲ ಕಟ್ಟಕಡೆಗಳಿಂದ
ಹುಟ್ಟುವುದು ಎನಗೆ ಶ್ರೇಷ್ಠ ಲಾಭಾ
ದಿಟ್ಟಾದ ಕುದುರೆಯ ಗುರಿಯಿಟ್ಟು ಕೊಂದಳು ಎಂಬ
ಸಿಟ್ಟಿರಲು ಕೊಟ್ಟರಂಗೀಕಾರ ಪಟ್ಯಾನು
ಹ್ಯಾಗೆಂದು ಇಷ್ಟಕ್ಕೆ ನೀ ಸಂದೇ
ಹ ಪಟ್ಟು ನೀ ಬಿಡಬೇಡ ಸಿಟ್ಟಿಲ್ಲೆ ನಿತ್ಯ
ಸಂತುಷ್ಟ ಮಾರುತಿಗೆ ೯

ಇನ್ನೊಂದು ನಾನಿನಗೆ ಮುನ್ನ ಪೇಳುವೆ
ಗುರುತು ಇನ್ನೊಂದು

ಮೇಲುನ್ನತಾಶ್ವವನೇರಿ ಚನ್ನಾಗಿ
ಶೀಲ ಸಂಪನ್ನೆಯೊಬ್ಬಳು
ಬಾಲೆ ಪನ್ನಗಾಚಲದಿಂದ ನಿನ್ನಲ್ಲಿ ಬರುವಳು
ಕನ್ಯಾರ್ಥಿಯಾಗಿ ನಿನ್ನ
ಪತಿ ಗೀ ಮಾತು ಚೆನ್ನಾಗಿ ತಿಳಿಹೇಳು
ನಿನ್ನ ಮೈದುನಗ್ಹೇಳು
ನಿನ್ನ ಪುತ್ರನಿಗೆ ಹೇಳು ನಿನ್ನ ಮಗಳು
ಕರೆದು ಮುನ್ನ ಏಕಾಂತ
ದಲಿ ಇನ್ನೊಮ್ಮೆ ನೀ ಕೇಳು ಚನ್ನವಾಗಿ ೧೦

ಖರಿಯಾದರಿನ್ನೊಮ್ಮೆ ಕರೆದು ಕೊಡು
ಬೇಡಿದ್ದು ಗುರುತಿನಲಿ ನಾನಿತ್ಯ
ಇರುವೆನು ಬದರಿಯಲಿ ಸರಸಾಗಿ ಬೇಸರದೆ ಬ್ರಹ್ಮಾಂಡ
ವೆಲ್ಲ ತಿರುಗಿ ಬಂದೆನು ಇಲ್ಲ ತಿರಕೊಂಬೊ
ಆಶೆಯಲಿ ತಿರುಗು
ವಳು ನಾನಲ್ಲ ಪರಹಿತಾರ್ಥನೆ ಎನಗೆ
ಪರಮ ಕಾರ್ಯ ಪರಿಪರಿಯ
ಜನರಿಗನುಸರಿಸಿ ಹೇಳಿದೆ ಹಿತವ
ಉರಗಮಂತ್ರವ ಬಲ್ಲೆ ಉರಿಯ
ನುಂಗಲು ಬಲ್ಲೆ ಹರಿವ ಹಾವಿನ
ಹೋಗಿ ಹರುಷದಲಿ ಹಿಡಿಬಲ್ಲೆ
ಪರರು ಹಾಕಿದ ವಿಷ ಪರಿಹರಿಸಬಲ್ಲೆ
ನಾ ಪರತತ್ವವನು ಬಲ್ಲೆ
ಮರಣ ಹೊಂದಿದವರನು ತಿರುಗಿ
ಬದುಕಿಸಬಲ್ಲೆ ಹಿರಿಯ
ಹೊತ್ತಿಗೆ ಬಲ್ಲೆ ಸಿರಿಯ ಶಿಂಬಿಯ ಮಾಡಿ
ಶಿರದಲೆ ಬ್ರಹ್ಮಾಂಡ ಧರಿಸಿ
ತನಗಾಧಾರ ಇದರ ಬೈಲೊಳಗೆ ಕುಳಿತಿರುವಂಥಾ
ದಿವ್ಯ ಆ ಪರಮ

ಪುರುಷನ ಬಲ್ಲೆ ಹರವಿ ಬ್ರಹ್ಮಾಂಡದೊಳಗಿರುವ
ಭೂಗೋಲ ವಿಸ್ತಾರ
ವೆಲ್ಲವ ಬಲ್ಲೆ ಸ್ಥಿರವಾಗಿ ಪರಮ ಆದರದೆ
ಕೇಳಿದರೆ ಬೇಸರದೆ
ದೇಶಗಳೆಲ್ಲ ಸರಸಾಗಿ ಪೇಳುವೆನು ಸರಸಿಜಾಕ್ಷಿ ೧೧

ರಾಗ: ಶಂಕರಾಭರಣ ಆದಿತಾಳ

ಕೊರವಿಯ ಮಾತನು ಕೇಳಿ ಹಿರಿಹಿರಿ ಹಿಗ್ಗುತ
ಅರಸಿ ಮಾತಾಡಿದಳಾಗ
ವರಧರ್ಮದೇವಿ ನೀಸರಿಯೇ ನಿನ್ನ ಮಾತಿಗೇ
ಹರುಷವಾಯಿತು ಎನಗಿಂದು ೧

ಧನ್ಯಳಾದೆನು ನಾನು ನಿನ್ನಂಥ ಕೊರವಿಯ
ಇನ್ನು ಬಳಸಿಕಾಣೆ ಇನ್ನು
ನೀ ಪೇಳಿದಂತೆ ಮುನ್ನ ನಾ ಮಾಡುವೆ
ನಿನ್ನ ಮಾತಿನಾ ಹೊರ್ತು ಇಲ್ಲೆ ೨

ಭುವನ ವಿಲಕ್ಷಣದವಳೆ ನಿನ್ನನ್ನು ನೋಡಿ
ಎವೆಯನಿಕ್ಕುವ ಎರಡು
ಕಣ್ಣುಗಳು ನವನವತೋರುವ ಸವಿನಯ ಮತುನು ಕೇಳಿ
ಕಿವಿಯು ಎರಡು ಹಿಗ್ಗಿದವು ೩

ಹೋಗಿ ಬ್ರಹ್ಮಾಂಡವೆಲ್ಲ ಹ್ಯಾಗೆ ತಿರುಗಿ
ಬರುವಿ ಹ್ಯಾಗಿರುವದು
ಬ್ರಹ್ಮಾಂಡ ಯೋಗಿ ಪರಮ ಪುರುಷ ಹ್ಯಾಗೆ ಧರಿಸಿಹನದನು
ಹ್ಯಾಗೆ ಭೂಗೋಲವಿಸ್ತಾರ ೪

ಬೇಸರಿಲ್ಲದೆ ಎಷ್ಟು ದೇಶ ತಿರುಗಿ ಬಂದೆ
ಲೇಸಾಗಿ ಪೇಳೆನ್ನ ಮುಂದೆ

ಶ್ರೀಶ ಶ್ರೀಮದನಂತಾದ್ರೀಶ ಕೊರವಿ
ಮಂದಹಾಸದಲಿ ನುಡಿದಳು ೫

ವಚನ

ಭೂಲೋಕದೊಳಗಿರುವ ಬಾಲೆಯರ
ಒಳಗೆ ಬಹುಮೇಲಾದವಳು
ನೀನು ಕೇಳಮ್ಮ ನಾನಿನಗೆ ಪೇಳುವೆನು
ಹರಷದಲಿ ಕೇಳುವವರು
ಆದರದಿ ಕೇಳಿದರೆ ಮತ್ತಿಷ್ಟು
ಹೇಳುವವರಿಗಾಗುವದು ಉಲ್ಲಾಸ
ಆಲಿಸಿ ಕೇಳಮ್ಮ ಮೂಲಪೇಳುವೆನು ಈ
ಏಳು ಲೋಕಕೆ ಎಲ್ಲ
ಆಲಯಾಗಿರುವ ಸುವಿಶಾಲ ಬ್ರಹ್ಮಾಂಡದ್ಹೊರಗಾ–
ಲಯವು ಒಂದಿಲ್ಲ
ಲೇಸಾಗಿರುವದು ಮೂಲ ಅವ್ಯಾಕೃತಾಕಾಶ ತಾನೆ ೧

ಅತ್ತಿತ್ತ ನಾಲ್ಕು ಕಡೆ ಮತ್ತೆ ಮೇಲಕೆ
ಕೆಳಗೆ ಎತ್ತ ನೋಡಿದರೇನು
ಸುತ್ತಲೆ ಬೈಲುಂಟು ಮತ್ತಲ್ಲೆ ಪರಮ
ಪುರುಷನೆಂಬ ಹರಿ ತಾನು
ಅಂತರಲೆ ಕುಳಿತಿರವ ಅಂತತಿಳಿಗೊಡದೆ
ಶಕ್ತಿನಾಮಕಳಾದ
ಚಿತ್ತದೊಲ್ಲಭೆಯನು ಸುತ್ತಿ ಶಿಂಬಿಯ
ಮಾಡಿ ನೆತ್ತಿಯ ಮೇಲಿಟ್ಟು
ಪೊತ್ತಿಹನು ಬ್ರಹ್ಮಾಂಡ ಸುತ್ತಲಿರುವದು ಅದಕೆ
ಸಪ್ತದರ್ಶ ಆವರಣ ಕ್ಲಪ್ತನಾಗಿ ೨

ಶ್ರೀವಾಸುದೇವ ಪ್ರಥಮಾವರಣ ಹೊರಗೆ
ತಾ ಶ್ರೀ ವಿಷ್ಣು ತಿಳಿ

ದ್ವಿತೀಯ ಆವರಣ ತೃತೀಯ ತಾ
ದೇವಸಂಕರ್ಷಣನು
ಕೇವಲಾಗಿಹ ಚತುರ್ಥಾವರಣ ಪ್ರದ್ಯುಮ್ನ
ದೇವ ಅವರೊಳು
ಪಂಚಮಾವರಣ ಅನಿರುದ್ಧದೇವಿ
ವಿರಜಾನದಿಯು ಅವರ
ಷಷ್ಠ ತಿಳಿ ದೇವಿಶ್ರೀ ಸಹ ಸಪ್ತಮಾವರಣ
ಎನಿಸುವಳು ಮೂಲ
ಪ್ರಕೃತಿ ಭಾವದಲಿ ತಿಳಿ ಮೂರು ಆವರಣ
ಮೂರು ಗುಣ ಆವರಣ
ಅದರೊಳಗೆ ಅದು ಮಹತ್ತತ್ವ ಮತ್ತಾವರಣ ಒಳಗೈದು
ಪಂಚಭೂತಗಳು ೩

ಅದಕ್ಕಿಂತ ಮತ್ತೊಳಗೆ ಉದಕುಂಟು
ಸುತ್ತೆಲ್ಲ ಅದಕೆ ಬಹಿರಾವರ
ಣ ಉದಕಯಂತೆಂಬುದು ಅದರೊಳಗೆ
ಕೂರ್ಮರೂಪದಲಿ ಪೊತ್ತಿಹ
ವಿಷ್ಣು ಮುದದಿ ಬ್ರಹ್ಮಾಂಡವ ಅದುನೂರು
ಕೋಟಿಗಾವುದ ಉಂಟು
ತಿಳಿ ಚಂದ್ರವದನೆ ನೀನು ಅಪರ
ಖರ್ಪರಘಡತತ ರೈವತ್ತುಕೋಟಿ
ಮುಂದದರೊಳಗೆ ವಿಸ್ತಾರ ಐವತ್ತು
ಕೋಟಿ ತಿಳಿ ಅದರೊಳಗೆ ತಳದಲ್ಲಿ
ಉದಕ ಇರುವದು ಮತ್ತು ಇದರ
ಪರಿಮಿತಿ ಕೇಳು ಹದಿನೈದು ಕೋಟಿ
ಗಾವುದು ಉಂಟು ಚಂದಾಗಿ ಅದಕೆ ಹೆಸರುಂಟು
ಗರ್ಭೋದಕವು ಎಂದು ೪

ಕೇಳಮ್ಮ ಅದರೊಳಗೆ ಮೂಲಕೂರ್ಮನು ವಿಷ್ಣು
ಮೇಲೆ ಕೂರ್ಮನು ವಾಯು ಮೇಲೆ
ಶೇಷನು ತಾನು ಸಾಲ್ಪಿಡಿದು

ಸಾವಿರ ವಿಶಾಲ ಹೆಡೆಗಳ ಒಳಗೆ ಮೇಲಾದ
ಒಂದ್ಹೆಡೆಯ ಮೇಲೊಂದು
ಸಾಸಿವೆಕಾಳು ಇಟ್ಟಂತೆ ಭೂಗೋಲ
ಪೊತ್ತಿಹನು ಮೂಲ
ಗರ್ಭೋದಕದಾರಭ್ಯ ಮೇಲೆ ಸೂರ್ಯನ
ತನಕ ಕೇಳು ಆಕಾಶ ಒಂದೇ
ಲಕ್ಷ ಪರಿಮಿತಿಯು ಲೋಲಲೋಚನೆಯೆ ೫

ಸುತ್ತಬ್ರಹ್ಮಾಂಡದೊಳಗತ್ಯಂತ ಮಧ್ಯಕಾದಿವ್ಯ
ಮಂಡಲ ಉಂಟು
ಉತ್ತಮಳೆ ಕೇಳು ಆದಿತ್ಯ ಮಂಡಲ
ಹಿಡಿದು ಮತ್ತೆ ಖರ್ಪರ ತನಕ
ಸುತ್ತೆಲ್ಲ ನಾಲ್ಕುಕಡೆ ಮತ್ತೆ ಮೇಲಕ್ಕೆ
ಕೆಳಗೆ ಕ್ಲಪ್ತಯೋಜನವು
ಇಪ್ಪತ್ತೈದು ಕೋಟಿ ಮೂಲಶೇಷನ ತಲೆಯ
ಮೇಲೆ ಪಾಷಾಣವುಂಟು
ಮೂಲಭೂಮಿಯು ಉಂಟು ಮೇಲುಂಟು
ನರಕಯೆಂಬೋ ಲೋಕ
ಮುಂದ್ಯದರ ಮೇಲೆ ಸಾಲ್ಹಿಡಿದು ಹದಿನಾಲ್ಕು
ಲೋಕಗಳುಂಟು ಲೇಸಾಗಿ
ಎಲ್ಲಕ್ಕೂ ಮೇಲೆ ವೈಕುಂಠ ೬

ಈ ಲೋಕದ ಕೆಳಗೆ ಏಳು ಲೋಕಗಳುಂಟು
ಈ ಲೋಕದಾರಭ್ಯ
ಮೇಲೇಳು ಲೋಕಗಳು ಕೇಳು ಅವುಗಳು
ಹೆಸರು ಭೂಲೋಕ ಮೇಲಕ್ಕೆ
ತಪಲೋಕ ಮೇಲುಂಟು ಸತ್ಯಯೆಂಬೋಲೋಕ
ತಿಳಿಯೇ ಮಾತೆ
ಈ ಲೋಕದ ಕೆಳಗೆ ಲೋಕಗಳು ನೀ
ತಿಳಿಯೆ ಅವು ಅತಳ ವಿತಳ

ಸುತಳವು ಮತ್ತೆ ತಳಾತಳ ಮಹಾತಳ
ರಸಾತಳವು ಮೂಲದಲಿ
ಪಾತಾಳ ಎಂದೆನಿಸಿ ನಾಥ ಶ್ರೀಹರಿಯಂಗ
ಜಾತವಾಗಿಹವಲ್ಲೆ ಆತನೆವಿರಾಟ
ರೂಪಿ ಖ್ಯಾತನಾಗಿರುವ ೭

ಪಾತಾಳವೆಂಬುದು ಆತನ ಅಂಗಾಲು ರಸಾತಲವು
ಎಂಬುದು ಆತನ
ಹಿಂಬಡ ಪಾದ ಆತನ ಹರಡವು ಮಹಾತಳವು
ಮೇಲಕೆ ತಳಾತಳ
ವು ಆತನ ಕಣಕಾಲು ಆತನ ಮೊಣಕಾಲಿಗಾತು
ಸುತಳವಿರುವದು
ಆತನ ತೊಡೆಗಿಹವು ವಿತಳಾತಳದಳಾತನ
ವಕ್ಷಸ್ಥಳವು ಭೂತಳ
ವೆನಿಸುವುದು ಆತನ ನಾಭಿವಿಖ್ಯಾತ ಭುವನ
ಎನಿಸುವುದು ಆತನ
ಹೃದಯ ಪ್ರಖ್ಯಾತ ಸರ್ವಲೋಕವದು ಆತನ
ಕಂಠಸಂಜಾತ ಮಹ
ಎನಿಸುವುದು ಆತನ ವದನ ಸಂಭೂತ ಜನ
ಎನಿಸುವುದು ಆತನ
ಫಣೆಯು ವಿಖ್ಯಾತ ತಪ ಎನಿಸುವುದು
ಆತನ ಶಿರವ ಪ್ರಖ್ಯಾತವದು ಸತ್ಯ ೮

ಸುತ್ತೆಲ್ಲ ತಿರುಗಿ ಈಪೃಥ್ವಿಯಲಿ ನಾ
ಬಂದೆ ಮತ್ತಿದರ
ವಿಸ್ತಾರ ಚಿತ್ತಿಟ್ಟು ಕೇಳು ಐವತ್ತುಕೋಟಿಯು
ಇದಕೆ ಸಪ್ತದ್ವೀಪ
ಗಳುಂಟು ಮತ್ತಲ್ಲೆ ನಡುನಡುವೆ ಸುತ್ತಲೆ
ಸಮುದ್ರಗಳು ಸಪ್ತ

ಪರಿಮಿತಿಯಿಂದ ಕ್ಲೃಪ್ತವಾಗಿಹವು
ಬಿಂಬೋಷ್ಠೆ ಕೇಳೀ ಸಪ್ತ
ವೆಂಬುವ ದ್ವೀಪಗಳು ಜಂಬುದ್ವೀಪವು
ಪ್ಲಕ್ಷವೆಂಬೋ ದ್ವೀಪ
ಶಾಲ್ಮಲೆಂಬುವ ದ್ವೀಪ ಮತ್ತೆ ಇಂಪಾದ
ಕುಶದ್ವೀಪ ಕಂಬುಕಂಠಿಯೆ
ಕ್ರೌಂಚವೆಂಬುವ ದ್ವೀಪ ಶಾಕವೆಂಬೋದ್ವೀಪವ ಪುಷ್ಕರವೆಂಬುವ
ದ್ವೀಪ ತಿಳಿಯೆ ಅಂಬುಜಾಕ್ಷಿ ೯

ಬೋಧಿಸುವೆ ಕೇಳು ನೀ ಸಪ್ತೋದಧಿಗಳ
ಇನ್ನು ಲವಣೋದಧಿ
ಇಕ್ಷು ರಸೋದಧಿಯು, ವಿಸ್ತೃತ
ಸುರೋದಧಿಯು ಮುಂದಕೆ
ಘೃತೋದಧಿಯು, ದಧಿಯ ಮಂಡೋದಧಿಯು,
ಕ್ಷೀರಸಾರೋದಧಿ
ಯು ದಿವ್ಯ ಸ್ವಾದೋದಧಿಯು ತಿಳಿ
ನುಡಿಯ ಸ್ವಾದ ಬಲ್ಲವಳೆ
ಲಕ್ಷಗಾವುದ ಚಂಚಲಾಕ್ಷಿ ಜಂಬೂದ್ವೀಪ
ಪ್ಲಕ್ಷದ್ವೀಪವು ಎರಡು
ಲಕ್ಷ ಗಾವುದ, ನಾಲ್ಕು ಲಕ್ಷ ಶಾಲ್ಮಲ, ಎಂಟು
ಲಕ್ಷಕುಶ, ಹದಿನಾರುಲಕ್ಷ
ಕ್ರೌಂಚವು, ಶಾಕಲಕ್ಷ ಮೂವತ್ತೆರಡು ಲಕ್ಷ,
ಅರವತ್ತು ನಾಲ್ಕು ಪುಷ್ಕರ ದ್ವೀಪ ೧೦

ಇದರಂತೆ ತಿಳಿಯಮ್ಮ ಚದುರೆ ಸಾಗರಸಪ್ತ,
ಅದರ ಸುತ್ತಲೆ
ಸುವರ್ಣದ ಭೂಮಿ ಇರುವದು, ಅದರ
ಸುತ್ತುಂಟು ವಜ್ರದ ಭೂಮಿ,
ಮತ್ತದರ ಸುತ್ತಲೆ ಆವಾವ ಪರಿಯು
ಗಿರಿ ಉಂಟು ಸುದತಿ

ಲೋಕಾಲೋಕವದು ತಿಳಿಯೆ ನೀನು ಅದರ
ಸುತ್ತಲೆ ಇರುವದು
ಅಂಧತಮ ಮತ್ತೆ, ಅದರ ಸುತ್ತಲೆ ಇರುವದು
ಘನೋದಕ ಮತ್ತೆ
ಅದರ ಸುತ್ತಲೆ ಇರುವುದು
ಅನಂತಾಸನವು ಅದರಸುತ್ತಲೆ
ಇರುವದು ಆಂಡಖರ್ಪರವು ಅದು ಬಲ್ಲಿ ನೀನು
ಹೇಳಿದೆ ಮುಂಚೆನಾನು ೧೧

ಹೆತ್ತವ್ವ ನೀ ಕೇಳೆ ಮತ್ತೆ ಸ್ವರ್ಣದ ಭೂಮಿ
ಕ್ಲೃಪ್ತ ಪೇಳುವೆನು ಎಂಭತ್ತು
ನಾಲ್ಕರ ಮೇಲೆ ಮತ್ತರ್ದಲಕ್ಷ ಅದಕ್ಹತ್ತಿ
ಇರುವದು ವಜ್ರ ಯುಕ್ತಭೂಮಿಯು
ಲಕ್ಷಕ್ಲೃಪ್ತ ಒಂದೂವರೆಯು ಸುತ್ತುಲೋಕಾಲೋಕ
ಕ್ಲೃಪ್ತ ತಿಳಿ ನೀನು
ಐವತ್ತು ಸಾವಿರವು ಐವತ್ತು ಲಕ್ಷ
ಸಪ್ತಕೋಟಿಯು ತಮಸು ಕ್ಲೃಪ್ತ
ಲಕ್ಷವು ಕಡಿಮೆ ಹೆತ್ತಿರುವ ದಧಿಯು ಪರಿ
ಸುತ್ತಲೆ ಘನೋದಕವು
ಸಪ್ತ ಕೋಟಿಯ ಮೇಲೆ ಸಪ್ತಕೋಟಿಯು
ಮತ್ತೆ, ಕ್ಲೃಪ್ತ ಅದರೊಳಗೆರಡು ಲಕ್ಷ ಕಡಿಮೆಯು ತಿಳಿಯೆ
ಮತ್ತನಂತಾಸನವು ಕ್ಲೃಪ್ತ ಲಕ್ಷವು ಮೂರು ಸುತ್ತಲೆ
ಒಳಗೆ ಮಧ್ಯವರ್ತಿ ಜಂಬೂದ್ವೀಪ ಮಧ್ಯಭೂಮಿಯ
ಹಿಡಿದು ಮತ್ತೆ ಕರ್ಪರ ತನಕ. ಎತ್ತ ನೋಡಿದರು
ಇಪ್ಪತ್ತೈದು ಕೋಟಿ ೧೨

ಜಂಬಾಲಜಾಕ್ಷಿ ಕೇಳು ಜಂಬೂದ್ವೀಪದ ವಿವರ
ಒಂಬತ್ತು ಖಂಡಗಳು
ಇಂಬಾಗಿ ಒಂದೊಂದೆ ಒಂಬತ್ತು ಸಾವಿರವು
ಎಂಬೋಗಾವುದ ಇಹವು

ಒಂಬತ್ತು ಖಂಡಕೇನೆಂಬ ನಾಮವು ನಿಮಗೆ
ಬಿಂಬಿಸುವೆ ಕೇಳು ಚಂದ್ರ
ಬಿಂಬವದನೆ ವರ ಇಳಾವೃತ ಖಂಡ,
ಪರಕೇತುಮೂಲಖಂಡ,
ಪರಮರಮ್ಯಕ ಖಂಡ, ವರಹಿರಣ್ಮಯ ಖಂಡ,
ಕುರುಖಂಡ, ಭದ್ರಾಶ್ವ
ಸರಸಜಾಗಿಹಖಂಡ, ಹರಿವರ್ಷಖಂಡ, ಕಿಂಪುರುಷೆಂಬೊ
ಖಂಡ ಈ ಭರತಖಂಡ ೧೩

ಗುರುತದಿಂದಲಿ ಎಂಟು ಪರ್ವತಗಳು ಇಹವು,
ಸರಸಾಗಿ ಎಲ್ಲಕ್ಕು
ಎರಡೆರಡು ಸಾವಿರ ಪರಿಮತಿಯು ಅವು ಅಲ್ಲೆ
ಇಹವು ನವಖಂಡಕ್ಕೆ
ಮರ್ಯಾದೆ ತಿಳಿಬಹು ಮರ್ಯಾದೆಯವಳೇ
ಸರಸಾಗಿ ಕೇಳು ಆ
ಗಿರಿಗಳನು ಮಾಲ್ಯವಾನ್ಗಿರಿ, ನೀಲಗಿರಿ,
ಶ್ವೇತಗಿರಿ, ಶೃಂಗಾವಾನ್ಗಿರಿಯು
ಗಿರಿ ಗಂಧಮಾದನವು, ಗಿರಿನಿಷಧವೆಂಬುವುದು, ಗಿರಿಹೇಮಕೂಟ
ವರಗಿರಿ ಹಿಮಾಲಯವು ೧೪

ಮಧ್ಯಮದಲ್ಲಿರುವುದು ಶುದ್ಧ ಚತುರಸ್ರಾಗಿ
ಇದ್ದಳಾವೃತಖಂಡ ಶುದ್ಧ
ಕನಕಾತ್ಮಕಾಗಿದ್ದಂಥ ಮೇರುಗಿರಿ ಉದ್ದಲಕ್ಷವು ಅದರ,
ಮಧ್ಯದಲ್ಲಿರುವದು
ಮದ್ಗುಣಿಕಿ ಹೂವಿನಂತಿದ್ದ ಅದರಾಕಾರ
ಬುದ್ಧಿವಂತೆಯೆ ತಿಳಿಯೆ
ಬುದ್ಧಿಯಿಂದ ಧರೆಯೊಳಗೆ ಉದ್ದನಟ್ಟಿರುವ
ದ್ಹದಿನಾರು ಸಾವಿರವು
ಹೊರಗುದ್ದ ಸಾವಿರವು ಎಂಭತ್ತು ಮೇಲ್ನಾಲ್ಕು
ಇರಹುತಿಹದು ಕೇಳು

ಮೇಲಿರುವ ಅಡ್ಡಗಲವು ಸರಸಾಗಿ
ಮೂವತ್ತೆರಡು ಸಾವಿರ
ತಳಕೆ ಇರುವ ಹದಿನಾರು ಸಾವಿರದ
ಅಡ್ಡಗಲ ಪರಿಮಿತಿಯುಕಾಣೆ ೧೫

ಕ್ಲೃಪ್ತದಲಿ ಖಂಡ ಒಂಬತ್ತು ಸಾವಿರ ಇರಲು,
ಹತ್ತುಸಾವಿರ ಮೇಲೆ
ಮತ್ತಾರು ಸಾವಿರದ ವಿಸ್ತಾರಗಿರಿ ಅಲ್ಲೆ
ಮತ್ತಿರುವದ್ಯಾಂಗೆಂದು ಚಿತ್ತ
ಸಂಶಯಬೇಡ ಸತ್ಯ ಆ ಮೇರುವಿನ,
ಹೊರ್ತಿಳಾವೃತ ಖಂಡ ಸುತ್ತ
ಲಿರುವದು ಒಂಬತ್ತು ಸಾವಿರವೇ ಶುದ್ಧ
ಪಶ್ಚಿಮ ಪೂರ್ವಕಿದ್ದಂಥ
ಲವಣ ಸಮುದ್ರ ಅವಧಿಯು ಆಗಿದ್ದಂಥ
ಕೇತುಮಾಲ್ಭದ್ರಾಶ್ವ ಖಂಡಗಳು
ಮದ್ದಲಿಯ ಪರಿತಗ್ಗು ಇದ್ದ ಕಾರಣದಿಂದ
ಒದ್ದು ಬರುವದು ನೀರು
ಶುದ್ಧ ಲವಣದ ಭೂಮಿ ಒಂಬತ್ತು ಸಾವಿರವೇ ೧೬

ಹರಿಣಾಕ್ಷಿ ದಕ್ಷಿಣಕೆ ಹರಿವರ್ಷ ಖಂಡ,
ಕಿಂಪುರುಷ ಖಂಡವು ಮತ್ತೆ
ಸರಸಾಗಿ ಉತ್ತರಕೆ ಪರಮರಮ್ಯಕ ಖಂಡವು,
ವರಹಿರಣ್ಮಯ ಖಂಡ
ಸರಸಾಗಿ ಅವು ನಾಲ್ಕು ಕೊರೆದ ದಂಡಾಕಾರ
ಪರಿ ಇಹವು ನೋಡೆ
ಅಲ್ಯುತ್ತರಾಬ್ಧಿ ಬದಿಯಲ್ಲಿರುವ ಕುರುಖಂಡ
ಇಲ್ಲೆ ದಕ್ಷಿಣಕಿರುವ
ಬಲ್ಲಿದಬ್ಧಿಯ ತೀರದಲ್ಲಿ ಭಾರತಖಂಡ,
ಫುಲ್ಲಾಕ್ಷಿ ನೀನು ಮನದಲ್ಲಿ
ತಿಳಿ ಸಮ ಎರಡು ಬಿಲ್ಲಿನಾಕಾರ ೧೭

ಗಿರಿಗಂಧ ಮಾದನವು ಇರುತಿಹದು
ಪೂರ್ವಕ್ಕೆ ವರಮಾಲ್ಯವಾನ್
ಗಿರಯು ಇರುತಿಹದು ಪಶ್ಚಿಮಕೆ ಗಿರಿ
ನೀಲಗಿರಿ ಶ್ವೇತಗಿರಿ
ಶೃಂಗವಾನೆಂದು ಇರುತಿಹದು ಉತ್ತರಕೆ ಗಿರಿ
ನಿಷಧವೆಂಬುವದು ಗಿರಿ ಹೇಮಕೂಟ
ವರಗಿರಿ ಹಿಮಾಲಯವೆಂದು ಇರವದು
ದಕ್ಷಿಣಕೆ ಅರಸಿ ನೀ
ಕೇಳಿ ಆ ಎಂಟು ಗಿರಿಯಾಕಾರ ತಿಳಿ
ಗೆರೆಯ ಕೊರೆದಂತೆ ಸುತ್ತ
ಗಿರಿಗಳ ಮಧ್ಯವರ್ತಿಯೆನಿಸುವ ಮೇರು
ಮಧ್ಯಭಾಗವು ಹಿಡಿದು
ಮತ್ತೆ ಸಾಗರ ತನಕ ಎತ್ತ ನೋಡಿದರು
ಐವತ್ತು ಸಾವಿರ ಕ್ಲಪ್ತ
ಸತ್ಯವಂತೆಯೆ ತಿಳಿಯೆ ಸತ್ಯವಾಣಿ ೧೮

ಧಿಟ್ಟಾದ ಆಮೇರು ಬೆಟ್ಟದ ಮೇಲ್ಕೇಳು
ಅಷ್ಟದಿಗ್ಭಾದಲಿ ಅಷ್ಟದಿಕ್ಪಾಲ
ಕರ ಅಷ್ಟಗ್ರಹಗಳು ಉಂಟು ನಟ್ಟ
ನಡುವಿರುತಿಹುದು ಸೃಷ್ಟಿಕರ್ತನ
ಮುನೆಯು ಶ್ರೇಷ್ಠನಾಗಿ ಮೇಲಂತರಿಕ್ಷದಲಿ
ಕಾಲಚಕ್ರವ ಅಲ್ಲೇಕೇಳು
ಸೂರ್ಯನ ರಥದಗಾಲಿ ತಿರುಗುವದಲ್ಲಿ
ಮೂಲದಲಿ ನಾ ಅದರ ಮೂಲ
ಪೇಳುವೆ ಮುಂಚೆ ಮೇಲೆ ವಿಸ್ತಾರವು ಆಮೇಲೆ ಕೇಳೆ ೧೯

ಮೂಲ ಆ ಮೇರುಗಿರಿ ಮೇಲೆ
ಶಿಂಶುಮಾರ ಹರಿ ಮೂದಲಿ ಮುಖ
ಮಾಡಿ ಮೇಲೆ ಪುಚ್ಛವ ಮಾಡಿ
ಲೀಲೆಯಿಂದಿರುವ ಕಾಲಚಕ್ರಕೆ

ಅವನೆ ಮೂಲ ಆಧಾರ ತಿಳಿ ತೈಲಗಾಣದ
ಖಣಿಯ ಮೇಲೆ
ದಿಂಡಿನ ಗತಿಯು ಕಾಲಚಕ್ರವು ತಿಳಿಯೇ
ಕಾಳಾಹಿ ವೇಣಿ ಮೂಲ
ಪುಷ್ಕರ ದೀಪ ಮೇಲೆ ವಲಯಾಕಾರ
ಮಾನಸೋತ್ತರ ಗಿರಿಯು
ಮೂಲ್ಹಿಡಿದು ಉದ್ದೆಷ್ಟು ಮೇಲೆ
ಅಡ್ಡಗಲವು ಕೇಳು ದಶಸಹಸ್ರ
ಮೇಲೆ ಸೂರ್ಯನ ರಥದಗಾಲಿ ತಿರುಗುವದು ೨೦

ಸಪ್ತಾಶ್ವಗಳು ರಥಕ್ಕೆ ಕ್ಲಪ್ತವಾಗಿಹವು
ಆದಿತ್ಯ ರಥವನು ಜೆಗ್ಗಿ
ಅಂತರಲೆ ಹಾರಿ ಅತ್ಯಂತ ಓಡುತ ಮೇರು
ಸುತ್ತಲೆ ಪ್ರದಕ್ಷಿಣೆಯು ನಿತ್ಯ
ಮಾಡುತಲಿಹುವು ಹೊತ್ತುಗಳಿಯದಲೆ
ಮತ್ತೆ ಮುಂಭಾಗಕರವತ್ತು
ಸಾವಿರ ಸಂಖ್ಯ ಕ್ಲಪ್ತಮುನಿಗಳು ಸೂರ್ಯನ
ಅತ್ಯಂತ ಸ್ತುತಿಸುವರು
ಗಾತ್ರದಿಂದಂಗುಷ್ಟಮಾತ್ರ ಪರಿಮಿತಿ ಅವರು ಎಲ್ಲಾರು
ತಿಳಿ ವಾಲಖಿಲ್ಯ ರೆನಿಸುವರು ೨೧

ಮತ್ತಲ್ಲಿ ಗಂಧರ್ವರು ಅತ್ಯಂತಗಾಯನವು
ಒತ್ತಿ ಮಾಡುತಲಿಹರು
ಸಪ್ತಸ್ವರಗಳ ಮೆಟ್ಟಿ ಮತ್ತೆ ಸಂಗೀತ ಸಾಹಿತ್ಯ
ದಿಂದಪ್ಸರರು ನರ್ತನವ
ಮಾಡುವರು ಮತ್ತಗಜಗಮನೆ ಕೇಳು
ಮತ್ತವರು ಎಲ್ಲರು ಕ್ಲಪ್ತ ಹಿಂಬ
ರಿಕೆಯಲಿ ನಿತ್ಯ ನಡುವರು ಮಟ್ಟಿ
ಎತ್ತಿನಂತೆ ಕಾಲಚಕ್ರದಲಿರುವ ಸಾಲು

ಗ್ರಹಗಳು ಮತ್ತೆ ಕೇಳು ನಕ್ಷತ್ರಗಳು ಮೇಲೆ
ಧ್ರುವಪದತನಕ ಸಾಲ್ಗಿಡಿದು
ಪೇಳುವೆನು ಮೂಲ ಭೂಮಿಯ ಓಡಿದು
ಮೇಲೆ ರಾಹುವತನಕ ಕೇಳು
ಯೋಜನವು ತೊಂಬತ್ತು ಸಾವಿರವು ೨೨

ಮೇಲ್ಹತ್ತು ಸಾವಿರದ ಮೇಲ್ಸೂರ್ಯ
ಮಂಡಲವು, ಮೇಲ್ಲಕ್ಷದಲಿ
ಚಂದ್ರ, ಮೇಲ್ಲಕ್ಷ ತಾರೆಗಳು, ಮೇಲೆರಡು
ಲಕ್ಷ ರವಿ, ಮೇಲರೆಡು
ಲಕ್ಷ ಬುಧ, ಮೇಲೆರಡು ಲಕ್ಷ ಕುಜ, ಮೇಲೆರಡು
ಗುರು, ಮೇಲೆರಡು
ಲಕ್ಷ ಶನಿ, ಮೇಲ್ಲಕ್ಷ ಹನ್ನೊಂದು ಕೇಳೆ ಸಪ್ತ
ಋಷಿಗಣವು, ಮೇಲ್ಲಕ್ಷ
ಹದಿಮೂರು ಮೇಲಾದ ಧ್ರುವಪದವು,
ಮೇಲಾತನಿಗಿಂತ ಮೇಲಾದ
ವರು ಇಲ್ಲ ಮೂಲ ಶಿಂಶುಮಾರನ
ಮೇಲಾದ ಪುಚ್ಛದಲಿ ಮೇಲೆ ಕುಳಿತಿರುವ ೨೩

ನಿತ್ಯ ಧ್ರುವಮಂಡಲವ ಸುತ್ತಿ
ತಿರುಗುವರಲ್ಲಿ ಕ್ಲೃಪ್ತ ಕಲ್ಪದನತಕ
ಮತ್ತಲ್ಲೆ ಮೇಲಿಂದ ಇತ್ತರಿದು ಬರುತಿರುವ
ಉತ್ತಮ ಸ್ವರ್ಣದಿಯ
ಉತ್ಪತ್ತಿ ನೀ ಕೇಳೆ ಉತ್ಸಾಹದಿಂದ
ಸತ್ತ್ರಿವಿಕ್ರಮನೆಂಬ ಮೂರ್ತಿ
ಯಾಗಿರುವ ಸರ್ವೋತ್ತಮನ ವಾಮ
ಪಾದೋತ್ತ ಮಂಗುಷ್ಠನಖ;
ಒತ್ತಿ ಮೇಲ್ ಬ್ರಹ್ಮಾಂಡಕತ್ತಿ ಖರ್ಪರ
ಒಡೆದು ಮತ್ತಲ್ಲೆ ಬಾಹ್ಯಜಲ

ಅತ್ತ ಬಂದ್ಹರಿಪಾದಕ್ಹತ್ತಿ ತೊಳೆವುದರಿಂದ
ಉತ್ಪನ್ನಳಾಗಿ ಭಗವತ್ಪದಿ
ಎನಿಸುವಳು ಸತ್ಯನಾಮದಲಿ ೨೪

ಮುಂದೆ ಕೇಳ್ಬಹುಕಾಲದಿಂದ ಧ್ರುವಮಂಡಲಕೆ
ಬಂದು ಆಮೇಲೆ
ಅಲ್ಲಿಂದ ಶಶಿಮಂಡಲ ಚಂದಾಗಿ ತೋಯಿಸಿ
ಅಲ್ಲಿಂದ ಬ್ರಹ್ಮನ
ಮನೆಗೆ ಬಂದು ಬೀಳುತ ಮತ್ತೆ ಮುಂದೆ
ಭಿನ್ನಳು ಆಗಿ, ಒಂದೊಂದು
ನಾಮದಲಿ ಚಂದಾಗಿ ನಾಲ್ಕು ಕಡೆ
ಮುಂದೆ ಲವಣೋದಧಿಯ
ಬಂದು ಕೂಡಿದಳು. ಮಂದಗಮನೆ
ಮೇರುವಿನಿಂದ ಪೂರ್ವಕ್ಕೆ
ನಾಮದಿಂದ ಸೀತಾನದಿಯು ಹಿಂದೆ
ಚಕ್ಷುರ್ನದಿಯ ಎಂದೆನಿಸಿ
ಮತ್ತೆ ಮೇರುವಿನಿಂದುತ್ತರಕೆ ನಾಮದಿಂದ
ಭದ್ರಾನದಿಯು, ಎಂದೆನಿಸಿ
ಮತ್ತೆ ಅದರಿಂದ ದಕ್ಷಿಣಕೆ ಈ ಚಂದಾದ ಖಂಡದಲಿ
ಬಂದಿಹಳು ತಾ ಅಲಕನಂದಾಖ್ಯ ನದಿಯ ೨೫

ಕಂಡಾಕ್ಷಣಕೆ ಪಾಪಖಂಡನವ ಮಾಡುವಾ
ಉದ್ದಂಡ ನದಿಗಳು ಮತ್ತೆ
ಗಂಡು ನದಿಗಳು ಭರತಖಂಡದಿಂದ
ಇರುತಿಹವು ಕಂಡು ಬಂದೆನು
ಕೇಳು ದುಂಡು ದುರಬಿನ ಬಾಲೆ ತಂಡ ತಂಡದಲಿ
ಚಂದ್ರವಂಶಾನದಿಯು
ಚಂದ್ರಭಾಗಾನದಿಯು ಚಂದಾಗಿ ಭೀಮರಥಿ
ಎಂದೆನಿಸುವಾ ನದಿಯು

ಮಂದನಗೆ ಮುಖದವಳೆ ಮಂದಾಕಿನಿ ನದಿಯು
ವಿದ್ಯಾಖ್ಯನದಿಯು ಕಾಳಿಂದಿನದಿಯು ೨೬

ಸಿಂಧುನದ ಶೋಣನದವೆಂದೆರಡು ಗಂಡು
ತಿಳಿ ಮುಂದೆ ನದಿಗಳು
ಬಹಳವೆಂದು ಅವುಗಳನೆಲ್ಲ ಒಂದೆ ಮಾತಿನಲೆ
ನಾನು ಮುಂದಾಗಿ
ಪೇಳಿದೆನು ಮುಂದೆ ಗಿರಿಗಳ ಹೆಸರು ಚಂದಾಗಿ ಕೇಳೆ
ವಿಂಧ್ಯವೆಂಬುವ ಗಿರಿ ಮಹೇಂದ್ರವೆಂಬುವ ಗಿರಿಯು
ಚಂದ್ರನಾಶ್ರಯವಾದ ಚಂದಾದ ಮಲಯಗಿರಿ ಮುಂದೆ
ಮೈನಾಕಗಿರಿ ಚಂದ ಚಂದ ನಾಮದಿಂದಿರುವ ಗಿರಿಗಳನು
ಕುಂದರ ವದನೆಯೆ ಮತ್ತೆ ಮುಂದೆ ಕೇಳೆ ೨೭

ಗೋವರ್ಧನಾಖ್ಯ ಗಿರಿ ರೈವತಕವೆಂಬ ಗಿರಿ,
ಶ್ರೀವೇದಗಿರಿ ಮತ್ತೆ
ಶ್ರೀಶೈಲವೆಂಬ ಗಿರಿ ಕೇವಲಾಧಿಕವಾದ
ಶ್ರೀವೇಂಕಟಾಖ್ಯಗಿರಿ, ದೇವಿ
ಕೇಳಿ ನಿನ್ನಳಿಯ ದೇವ ಅಲ್ಲಿರುವಾ
ಒಪ್ಪಾಗಿ ಭೂಮಿಯಲಿಪ್ಪ
ಗಿರಿಗಳನೆಲ್ಲ ತಪ್ಪದಲೆ ಪೇಳುವೆನು ಕೊಪ್ಪಿನಕಿವಿಯವಳೆ
ಒಪ್ಪಾಗಿ ಕೇಳೆ ೨೮

ಅಂಗದೇಶವು ಮತ್ತೆ ವಂಗದೇಶವು
ವರಕಳಿಂಗವೆಂಬುವ ದೇಶ
ಶೃಂಗಾರವಾಗಿರುವ ಬಂಗಾಲ ದೇಶ ಕಾಲಿಂಗಾಖ್ಯ
ದೇಶ ಕಾಳಿಂಗವೇಣಿಯೆ
ಕೇಳು ಹಾಗೆ ಮುಂದೆ ಕಾಮರೂಪದೇಶ
ಕಾಶ್ಮೀರದೇಶ ವರ ಕಾಂಭೋಜ

ದೇಶ ಶುಭಕೋಸಲವೆಂಬ ದೇಶ ಕೈರಾತಿ ದೇಶ
ವರ ಕೈಕಯ ದೇಶ
ಕೇಳ್ ಕಂಕಣದ ಕೈಯವಳೆ ಕೊಂಕಣ ದೇಶ ೨೯

ಗುರ್ಜರೆಂಬುವ ದೇಶ ಪಾರ್ಸೀಕ ದೇಶ
ಸುವಿದರ್ಭದೇಶವು ಶುಭ
ದಶಾರ್ಣವವೆಂಬುವ ದೇಶ ಸೌರಾಖ್ಯ ದೇಶ
ಸೌವೀರ ದೇಶವು ಮತ್ತೆ
ಶೂರದೇಶವು ಕೇಳ್ ಶೂರ ಪತ್ನಿ ನಾಟಕದ
ದೇಶ ಕರನಾಟಕದ ದೇಶವು
ಕರನಾಟಕದ ದೇಶವು ಮರಾಟಕದ ದೇಶವು
ಪನಾಟಕವೆಂಬುವ ದೇಶ
ನೀಟಾಗಿ ಇರುವ ಸೌರಾಷ್ಟ ದೇಶವು
ಮಹಾರಾಷ್ಟ ದೇಶ ೩೦

ಏಣಲೋಚನೆ ಕೇಳು ಹೂಣನಾಮಕ ದೇಶ
ಖೂನದಲಿ ಕುರುದೇಶ
ಸೇನದೇಶವು ದೇಹಹೀನ ದೇಶವು, ಮಂಜುಗಾನೆ
ಟಂಕದೇಶ ಗೌಡದೇಶ
ಸೈಂಧವವೆನಿಸುವ ದೇಶ ಸಿಂಧುವತಿ
ದೇಶ ಕೇಳೆ, ಮಂದ್ರದೇಶವು
ಪರಪುರಂಧ್ರಿಯೆನಿಸುವ ದೇಶ, ಆಂಧ್ರಾಖ್ಯದೇಶ
ಜಾಲಂಧ್ರಯೆನಿಸುವ
ದೇಶ ಗಾಂಧಾರ ದೇಶ ವರಗಂಧಿ ಕೇಳೆ ೩೧

ಚೋಳಾಖ್ಯದೇಶ ಪಾಂಚಾಲನಮಕ ದೇಶ
ಮಾಲವೆಂಬುವ ದೇಶ
ಸಾಲ್ವಾಖ್ಯದೇಶ ಸುವಿಶಾಲವಾಗಿರುವ
ನೇಪಾಲ ದೇಶವು ಮತ್ತೆ

ಬರ್ಬರ ದೇಶ ಬಾಹ್ಲೀಕ ದೇಶ ಯವನ–
ಯಾವನವೆಂಬುವ ಅವು
ದೇಶಗಳು ಎರಡು, ದ್ರವಿಡ–ದ್ರಾವಿಡ ವೆಂಬ
ಅವು ಎರಡು ದೇಶಗಳು,
ಮಲಯ–ಮಾಗಧ ವೆಂಬ ಮಲಯಗಂಧಿಯೆ
ಎರಡು ತಿಳಿಯಮ್ಮ
ನೀ ಬಹಳ ತಿಳುವಳಿಕೆಯವಳೆ
ಸಿಂಹದ ನಡದವಳೆ ಸಿಂಹಲೆಂಬುವ ೩೨

ದೇಶ ಮಚ್ಛಕಂಗಳೆ ಕೇಳು ಮಚ್ಛ ದೇಶವು
ಭ್ರಮರ ಕುಂತಳೆಯೆ
ನೀ ಕೇಳು ಕುಂತಳೆಂಬುವ ದೇಶ ಪಂಡಿತಳೆ
ನೀ ಕೇಳು ಪಾಂಡ್ಯ
ದೇಶ ಇಷ್ಟು ದೇಶಗಳಿಂದ ಅಷ್ಟು ತೀರ್ಥಗಳಿಂದ ಧಿಟ್ಟಾಗಿ
ಇರುವುದೇ ಶ್ರೇಷ್ಠ ಭಾರತಖಂಡ ಶಿಷ್ಟರೆಂಬುವರಿಲ್ಲೆ ಹುಟ್ಟಿ
ಪುಣ್ಯದ ಬುತ್ತಿ ಕಟ್ಟಿ ವೈಕುಂಠವನು ಮೆಟ್ಟುವರು ಕಾಣೆ ೩೪

ಕಂಡು ಬಂದದ್ದು ಮನಗಂಡು ಪೇಳಿದೆನು
ಬ್ರಹ್ಮಾಂಡದೊಳಗಿರುವ
ಭೂಮಂಡಲದೊಳಗೆ ನವಖಂಡದೊಳಗೀ ಭರತಖಂಡ ಶ್ರೇಷ್ಠ
ಇಲ್ಲಿ ಪುಟ್ಟಿದ ಜನರಿಗಿಲ್ಲಿ ಸಾಧನ ಉಂಟು ಬಲ್ಲವಳೆ ನೀನು
ಕೇಳುತ ಎನ್ನ ಸೊಲ್ಲ ಮರೆಯಲು ಬೇಡ ಪುಲ್ಲಾಕ್ಷಿ ಎನಲು
ಆಗಲ್ಲೆ ನುಡಿದಳು ರಾಜವಲ್ಲಭೆಯು ತಾನು ೩೫

ರಾಗ: ಶಂಕರಾಭರಣ ಆದಿತಾಳ

ಹರುಷವಾಯಿತಮ್ಮ ನಿನ್ನ ಸರಸ ಮಾತುಕೇಳಿ
ಮುನ್ನಮರೆಯಲ್ಯಾಂಗೆ
ನಿನ್ನ ಮಾತು ಧರ್ಮದೇವಿ ಮರೆವುಂಟು
ಅರಸರಿಗೆ ಮರೆತಾರು

ಉಳಿದದ್ದು ಮರೆಯೆ ಮರೆಯ ಬೇಡುರಗಾದ್ರಿಶಯನನ
ಹೆ ಧರಣಿದೇವಿ ೧

ನಿನ್ನ ಮಾತಿನ ಹೊರ್ತು ಇಲ್ಲ ಇನ್ನು ಮೇಲಾತನಿಗೆ
ನಾನು ಎನ್ನ ಈ
ಮಗಳನು ಕೊಡುವೆ ಏಧರ್ಮದೇವಿ ನಿನ್ನ
ಮಾತು ಸತ್ಯವೆಂದು
ಮುನ್ನ ತಿಳಿಯೋದುಹ್ಯಾಗೆ ಎನ್ನಾಣಿ ಕೊಟ್ಟರೆ
ಸತ್ಯ ನೀ ಧರಣಿದೇವಿ ೨

ನಿನ್ನಾಣೆ ಎನ್ನಾಣೆ ಮತ್ತೆ ಎನ್ನ ಮಗಳಾಣೆಯ
ಕೊಡುವೆ ಇನ್ನು ಮೇಲೊಳಿತೆ
ನ್ನು ನೀನು ಏಧರ್ಮದೇವಿ ಮುನ್ನಾತನಿಗೆ
ಕೊಟ್ಟರೊಳಿತು ನಿನ್ನ
ಈ ಮಗಳಿಗೆ ಒಳಿತು ಮುನ್ನ ಎಲ್ಲರಿಗೇ
ಒಳಿತು ಏ ಧರಣಿದೇವಿ ೩

ಸಂದೇಹವ್ಯಾಕಮ್ಮ ಎಲ್ಲ ಮಂದಿ ಮನಸು
ತಿಳಿಯಬಲ್ಲೆ ಚಂದಾಗೆನ್ನ
ಮನಸ್ಸು ಅರಿಯೆಯಾ ಧರ್ಮದೇವಿ ಇಂದು ನಿನ್ನ
ಮಾತಿಗೆ ಆನಂದ
ವಾಯಿತಮ್ಮ ಎನಗೆ ಮುಂದಿನ್ನು ನಾ ಹೋಗಿ
ಬರುವೆ ಏ ಧರಣಿದೇವಿ ೪

ಹೋಗಿ ನೀ ಬಾರಮ್ಮ ನಿನಗೆ ಬಾಗಿ ನಾ
ನಮಿಸುವೆನು ಚನ್ನಾಗಿರಲಿ ನಿನ್ನ
ದಯವ ಏಧರ್ಮದೇವಿ ಆಗೆಲ್ಲಾನು ಕೊಂಡು ತಾ ಬೆನ್ನಿಗೆ ಆ
ಕೂಸಿನಕಟ್ಟಿ ಸಾಗಿದಳನಂತಾದ್ರಿಗೆ ಆಧರ್ಮದೇವಿ ೫

ವಚನ

ಈ ರೀತಿ ಲೌಕಿಕಾಚಾರಗಳ ಮಾಡುತಿಹ
ಚಾರು ವೇಂಕಟಪತಿಯ ಚಾರು
ಕೊರುವಂಜಿ ಕಥೆ ಆರು ಭಕ್ತಿಯಲಿ
ಸಂಪೂರ್ಣ ಕೇಳ್ವರು ಅವರ ಘೋರ
ಸಂಕಟ ಪರಿಹಾರ ತಾ ಮಾಡಿ ಶುಭ
ತೋರಿ ಮುಂದಾಗ್ಯವರ ಕಾರ್ಯ
ಮಾಡುವ ಸಕಲ ಕಾರ್ಯಗಳ ಬಿಟ್ಟು
ಊರ್ವಿಯಲಿ ಬಹುರಮ್ಯ ತೋರು–
ವಾನಂತಾಖ್ಯ ಸುಗಿರಿಯಲ್ಲಿದ್ದು ಆರಿಗಾದರು
ವಳಗೆ ಪ್ರೇರಕನು ಆಗಿ
ವ್ಯಾಪಾರ ಮಾಡಿಸುತಿಹ ಆಪಾರಮಹಿಮನ
ದಯದಿ ಪೂರಮಗಿಯಿತು
ಇಲ್ಲಿಗಾರು ಅಧ್ಯಾಯ ೧

ಅಧ್ಯಾಯ ಏಳು

ಜ್ಞಾಪಿತೋ ಬಕುಲಾವಾಕ್ಯಾಚ್ಚುಕ ಜೀವಾನು ಮೋದಿತಃ
ಭೂಪೇನ ನಿಶ್ಚಿತೋ ಮಾಯಾದ್ವಿಪಹಾ ಯೋವರೋ ಹರಿಃ

ವಚನ

ತಿರುಗಿ ಹೊಗಲು ಕೊರವಿ ತಿರುಗಿ ನೋಡುತಲೆ
ಅರಸಿ ತನ್ನ ತೊಡೆಯಲಿರುವ
ಆ ಮಗಳ ಮುಂಗುರುಳ ತೀಡುತಲೆ ಈ
ಪರಿಯು ಮಾತಾಡಿದಳು ಕೊರವಿ
ಆಡಿದ ಮಾತು ಖರೆಯೇನು ಎನ್ನ
ಮಾತಿನರಗಿಳಿಯೆ ನೀನು ಅರಸಿ ಮಾತಿಗೆ

ಬಾಯ ತೆರೆದು ಮಾತಾಡದಲೆ ಪರಮಗಂಭೀರ
ಳಾಗಿರುವ ಪದ್ಮಾವತಿಯ
ಪರಮ ಮನಸಿನ ಭಾವ ಹೊರಗ್ಹೊರಡಬೇಕೆಂದು
ಕರಪಿಡಿದು ಏಕಾಂತ
ದಲಿ ಕೇಳಿದಾಗ ಪರಮ ಅಂತ:ಕರಣೆ ಪರವಶದಿ ಆಗ ೧

ರಾಗ:ಭೈರವಿ ಅಟತಾಳ

ಆತಗೆ ನಾ ಕೊಡಲ್ಯೋ ನಿನ್ನನು ಮತ್ತೊಬ್ಬಾತಗೆ
ನಾ ಕೊಡಲೋ ಪ

ಪ್ರೀತಿಯ ಮಗಳೆ ನಿನ್ನ ಮಾತಿಗೆ ಹೊರ್ತಿಲ್ಲ ಖ್ಯಾತೀಲೆ
ವೇಂಕಟನಾಥ ನೆಂತೆನಿಪಗೆ ಅ.ಪ

ಅರಸಗೆ ಪೇಳಲ್ಯೋ ನಾ ಬಲ್ಲಂಥ ಹಿರಿಯರ ಕೇಳಲ್ಯೋ
ಕೊರವಿ ಮಾತೇನೆಂದು ಭರವಸೆ ಹಿಡಿದೇ
ಸರಿ ಬಂದವರ ನೋಡಿಕಳಹಲ್ಯೋ ೧

ಏಕೋ ಭಾವದಲ್ಲಿರಲ್ಯೋ ಮತ್ತು ಅನೇಕ
ಮಂದಿಯ ಕೇಳಲ್ಯೋ
ಜೋಕೆಯಲಿ ಬಹುಕಾಲ ಸಾಕಿದ ಗಿಳಿಯನು
ನಾ ಕೊಡಲಾರದೆ ಜರಿಯಲ್ಯೋ ೨

ಚಿತ್ತದ ಚಾಪಲ್ಯವೋ ನೀ ಹೋದದ್ದು
ಮಿತ್ರೇರ ಸಂಗತಿಯೋ
ಉತ್ತಮಾನಂತಾದ್ರೀಸಕ್ತನ ಕಂಡುದು ಸತ್ಯವೋ
ಅದು ಮಿಥ್ಯವೋ ೩

ವಚನ

ಜನನಿ ಮಾತಿಗೆ ಜಗಜ್ಜನನಿ ನುಡಿದಳು
ಕಾಮಜನಕರ ಸ್ಮರಿಸುತಲೆ
ಜನನಿ ನೀ ಕೇಳಮ್ಮ ಮನಸಿನಾ ಭಾವವನು
ಜನರಮುಂದ್ಹೇಳುವದಕನು
ಮಾನ ಮಾಡಿದೆನು ಅನುತಾಪದಿಂದ ತನಗೆ
ಬಂದದು ತಾನೆ ಅನು
ಭೋಗಿಸದೆ ಉಳಿದ ಜನರಗ್ಹೇಳಿದರೇನು ಘನವಾಗಿ
ಅಪಹಾಸ್ಯವನು
ಮಾಡಿ ನಗುವರು ಜನರು ಬಲ್ಲರೆ
ಒಬ್ಬರನೋವು ತನಗೆಂಬುವದು
ಎನಗೆ ಹಿತಕರಳು ನೀನು ನಿನ್ನ ಮುಂದೆ
ಹೇಳುವದಕನುಮಾನವ್ಯಾಕೆ ೧

ರಾಗ:ನೀಲಾಂಬರಿ ಭಿಲಂದಿತಾಳ

ಅವನೇ ಪತಿ ಎನ್ನವ್ವನೇ ನೀ ಕೇಳು
ಅವನ ಸರಿಯಿಲ್ಲವನಿಯೊಳಗ
ಅವನ ಹೊರತೆನ್ನ ಜೀವನ ನಿಲ್ಲದು
ಅವನೇ ಜಗಜ್ಜೀವನನೆ ಪ

ಮಂಜುಗಾನೆಯೆ ಕೊರವಂಜಿಯು ಆಡಿದ
ಮಂಜುಳಮಾತಿಗೆ ರಂಜ
ನವಾಯಿತು ಕಂಚಾಕ್ಷೀ ನೀ ಎನ್ನ ಕಂಜನಾಭನ
ಪಾದ ಕಂಜಕೆ ಅರ್ಪಿಸು
ಅಂಜದಲೆ ಪಂಜರವ ಬಿಟ್ಟೆನ್ನ ಪಂಜರಕ್ಹೋಗಲು
ಅಂಜುವದ್ಯಾಕಮ್ಮ
ಅಂಜನಾದ್ರೀಶಗೆ ಅಂಜಲುಬೇಡ ನಿರಂಜನೆ ಭಯಭಂಜನೆ ೧

ಆಟದ ಗೆಳತಿಯರಾಟಕೆ ಮೆಚ್ಚಿನಾ ನೀಟಾಗಿ
ಹೂವಿನ ತೋಟಕೆ ಪೋಗಲು
ನೋಟದಿ ನೋಡ್ಯವನಾಟವ ಬಲ್ಲೆನು ಮಾಟವು
ಚಿತ್ತಪಲ್ಲಟವಾಗಿ
ಆಟದಿಂದಾನಂತ ಕೋಟಿ ಬ್ರಹ್ಮಾಂಡವ
ನೀಟಾಗಿ ನಿರ್ಮಿಸಿ ಆಟವಮಾಡುವ
ನೀಟಾಗಿ ದಾರವನಾಟವ ಬಲ್ಲರು ಪಾಟಕ ಕಪಟ ನಾಟಕನೆ ೨

ಬಲ್ಲೆನಾತನ ಕಂಠದಲ್ಲಿ ಕೌಸ್ತುಭಮಾಲೆ ಎಲ್ಲಾ
ಭೂಷಣ ಉರದಲ್ಲಿ ಶ್ರೀವತ್ಸವು
ಚಲ್ವಿಕೆ ನೋಡಲು ಎಲ್ಲ ಜ್ಯೋತಿಗಳವನಲ್ಲಿ
ನಿವಾಳಿಸಿ ಚಲ್ಲವುದು ಅಲ್ಲೇನಿಲ್ಲೆಂದು ಮತ್ತೆಲ್ಲಿ
ಹಂಬಲಿಸದೆ ಅಲ್ಯವಗರ್ಪಿಸು ಆಹ್ಲಾದದಿಂದಲ್ಲೇ
ಬಲ್ಲಿದನಾಂತಾದ್ರಿಯಲ್ಲಿರುವ ಎನ್ನೊಲ್ಲಭನೆ ಪ್ರಾಣದೊಲ್ಲಭನೆ ೩

ವಚನ

ಮಗಳ ಮಾತಿಗೆ ತಾಯಿ ಮುಗುಳು ನಗೆನಗುತಲೆ,
ಮಗಳಿಗೆಂದಳು
ಎನ್ನ ಮಗಳೆ ನಿನ್ನ ನುಡಿಕೇಳಿ ಮುಗಿಲುಮುಟ್ಟಿತು ಜೀವ ನಗೆಯಲ್ಲ
ನಾ ನಿನ್ನ ಜಗ
ದೀಶಗರ್ಪಿಸುವೆ ಲಗುಬಗಿಯೆ ಮಾಡಿ
ಗಗನ ರಾಜನ ರಾಣಿ
ಮಂಗಳ ಮುಂದ್ಹೀಗೆ ಮಾತುಗಳಾಡುತಿರಲಾಗಿ
ಸುಗುಣ ಬಕುಲಾ
ವತಿಯು ಅಗಜೇಶನಭಿಷೇಕ ಮುಗಿಸಿ
ಬರುವರ ಕೂಡಿ
ಸೊಗಸದಲಿ ಕುದುರೆಯನು ಜಿಗಿಸುತಲೆ
ಬರುವಳಾ ಅಗಸಿಯೊಳಗೆ ೧

ಭರದಿಂದ ಬೀದಿಯಲಿ ಬರುವ ಬಕುಲಾವತಿಯ
ಹೊರಳಿ ನೋಡಿದ
ಳರಸಿ ಎರಳೆ ನೋಟಗಳಿಂದ
ಬರುವಳಿವಳ್ಯಾರೆಂದು ಕೊರವಿ
ಹೇಳಿದ ಗುರುತು ಸ್ಮರಿಸಿ ತಾ ಇಲ್ಲೆ
ಕರೆಸಿದಳು ಬೇಗ ಸರಸಿ–
ಜಾಕ್ಷಿಯೆ ಬಾರೆ ಸರಸವಾಯಿತು
ಎಂದು ಸುರಿಸಿ ಅಮೃತದ
ವಾಣಿ ಬೆರೆಸಿ ಸ್ನೇಹವ ಮತ್ತೆ ತರಿಸಿ ರತ್ನದಪೀಠ ಇರಿಸಿ
ಕೂಡೆಂದು ಕುಳ್ಳಿರಿಸಿ ಕೇಳಿದಳಾಗ ಹರುಷದಿಂದಾ ೨

ರಾಗ:ಗೌರಿ ಆಟತಾಳ

ಲಲನೆ ನೀ ದಾರಮ್ಮ ಹೆಸರೇನು? ಶೇಷಾ
ಚಲವಾಸಿ ಬಕುಲಾವತಿ ನಾನು ೧

ಎಲ್ಲಿಗ್ಹೋಗುವೆ ಮುಂದೆ ನೀನು? ತಿಳಿ
ಇಲ್ಲಿಗೆ ಬಂದೆ ನೇಮಿಸಿ ನಾನು ೨

ನಿನ್ನ ಮನದ ಕಾರ್ಯಗಳೇನು? ಮುಖ್ಯ
ಕನ್ಯಾರ್ಥಿಯಾಗಿ ಬಂದೆನು ನಾನು ೩

ದಾವಾತ ವರನಾಗಿರುವನು?ದಿವ್ಯ
ದೇವ ನೆಂದೆನಿಸುವ ತಿಳಿ ನೀನು ೪

ಕೃಷ್ಣವೇಣಿಯೆ ಅವನ್ಹೆಸರೇನು? ಶ್ರೀ
ಕೃಷ್ಣನೆಂದೆನಿಸುವ ತಿಳಿ ನೀನು ೫

ತಾಯಿ ತಂದೆಗಳೆಂಬುವರಾರು?ತಿಳಿ
ದೇವಕಿ ವಸುದೇವರು ಅವರು ೬

ಚಂದಾಗಿ ಕುಲದಾವದ್ಹೇಳಮ್ಮ ಶುಭ
ಚಂದ್ರಮನ ಕುಲಕೇಳಮ್ಮ ೭

ಶ್ರೇಷ್ಠವಾಗಿಹ ಗೋತ್ರದಾವದು?ವಾ
ಶಿಷ್ಠ ನಾಮಕವಾಗಿರುತಿಹುದು ೮

ನಕ್ಷತ್ರ ಪೇಳು ಪನ್ನಗವೇಣಿ ಶ್ರವಣ
ನಕ್ಷತ್ರ ತಿಳಿ ರಾಜನ ರಾಣಿ ೯

ವಿದ್ಯೆಯಿಂದ ಹ್ಯಾಂಗಿರುವ? ಬ್ರಹ್ಮ
ವಿದ್ಯೆಯಿಂದಲಿ ಗಮ್ಯ ಎನಿಸುವ ೧೦

ಧನವಂತನೇನಮ್ಮ ಗುಣನಿಧಿಯೇ? ಬಹು
ಧನವಂತರಾಗುವರವನಿಂದೆ ೧೧

ಕಣ್ಣುಮೂಗಿಲೆ ಹ್ಯಾಗಿರುವವ?ಕೋಟಿ
ಮನ್ಮಥ ಲಾವಣ್ಯ ಎನಿಸುವ ೧೨

ಹೆಣ್ಣಿನ ಮನಸೀಗೆ ಬಂದೀತೇ? ಅವನ
ಕಣ್ಣಿಲಿ ಕಂಡರೆ ತಿಳಿದೀತೆ ೧೩

ಅದಾವು ದಿವಸೆಷ್ಟು ಪೇಳಮ್ಮಾ?ಇಪ್ಪ–
ತ್ತೈದರ ಮೇಲಿಲ್ಲ ತಿಳಿಯಮ್ಮ ೧೪

ಚಿಕ್ಕಂದು ಮದುವೆ ಇಲ್ಯಾಕಮ್ಮ?ಅವನ
ತಕ್ಕ ಹೆಂಡತಿ ಇರುತಿಹಳಮ್ಮ ೧೫

ಮುಖ್ಯಳಿರಲು ಮದುವ್ಯಾಕಮ್ಮ?ತಿಳಿ
ಮಕ್ಕಳಿಲ್ಲದ ಕಾರಣವಮ್ಮ ೧೬

ನೇಮದಿಂದಿರುತಿಹ ತಾನೆಲ್ಲಿ ತಿಳಿ
ಶ್ರೀಮದನಂತಾದ್ರಿಯಲಿ ೧೭

ರಾಗ: ಯರಕಾಲ ಕಾಂಬೋದಿ ಭಿಲಂದಿತಾಳ

ಇಂಥಾ ಮಾತನು ಕೇಳಿ ಸಂತೋಷದಿಂದಲ್ಲೇ
ಕಾಂತನ ಮುಂದ್ಹೇಳಿದಳೇ
ಏಕಾತದಲೆ ಅರಸಿ ಕಾಂತ ಇನ್ನು ಮೇಲೆ
ಅಂತರಂಗದೊಳು ಚಿಂತೆ
ಮಾಡಲು ಬೇಡ ಕೇಳು ಸಂತೋಷದ ಸುದ್ದಿ ೧

ನರನಾರಾಯಣರೆಲ್ಲಿ ಇರವರೊ ಅಲ್ಲಿಂದೊಬ್ಬಳು
ಕೊರವಿ ಬಂದಿದ್ದಳು
ನಮ್ಮ ಅರಮನೆ ಒಳಗಾಗಿ ಜ್ವರತಾಪದಿಂದಲ್ಲೆ
ಮರಗುತ ಮಲಗಿದ
ಮಗಳು ಜ್ವರಹೋಗಿ ಎದ್ದಳು ಆ
ಕೊರವಿ ಕಾಲ್ಗುಣದಿ ೨

ನೋಡಿ ಈ ಪರಿ ನುಡಿದಳು ಮಾಡಿ ಶಪಥವ
ಕೊರವಿ ನಾಡ
ಕೊರಿವಯಂತೆ ಆಡುವಳಾಕೆಯು ಆಡುತಾಡುತ
ಸಖಿಯರ ಕೂಡಿ
ವನದಲಿ ಪುತ್ರಿ ನೋಡಿದಳಂತಲೊಬ್ಬ
ಪ್ರೌಢ ಪುರುಷನ ೩

ಪರವಶಳಾಗಿಹಳಂಥಾ ಪುರುಷನ ಕಾಣುತ
ಪ್ರಾಕೃತ ಪುರುಷನಲ್ಲ
ಕೇಳವನೇ ಪುರುಷೋತ್ತಮನಂತೆ
ಜ್ವರಮಗಳಿಗೆ ಬಂತೆಂದು
ಮರಗಿದೆವು ನಾವೆಲ್ಲ ಜ್ವರವಲ್ಲವದು
ಕಾಮಜ್ವರವಂತೆ ಕೇಳು ೪

ಲೇಸಾಗ್ಯಾತನ ಕಥೆ ಚಿತ್ತೈಸಿ ಕೇಳಲು ಜ್ವರವು
ನಾಶಾವಾಯಿತು ಇನ್ನು
ಶೇಷ ಉಳಿದಿಹುದು ಶೇಷಾಚಲದಲ್ಲಿ
ನಿತ್ಯನಿವಾಸಿಯೆನಿಸುವ ಅವಗೆ
ತೋಷದಿ ಕೊಟ್ಟರೆ ಜ್ವರ ನಿಶ್ಯೇಷ ಹೋಗುವದು ೫

ಇನ್ನೊಬ್ಬಳು ಬಂದಿಹಳು ಉನ್ನತ ತೇಜಿಯನೇರಿ
ಎನ್ನ ಮನೆಯಲಿ
ತಾ ಕನ್ಯಾರ್ಥಿಯಾಗಿ ತನ್ನಲ್ಲಿರುತಿಹ ವರನ
ಚೆನ್ನಾಗಿ ಪೇಳುವಳು
ಕಣ್ಣುಮೂಗಿಲೆ ಚಲುವ ಚನ್ನಿಗನಂತವನು
ಚೆನ್ನಿಗವನನ್ಯಾರೆಂದು ೬

ಚೆನ್ನಾಗಿ ಪೇಳಿದರೆ ಚನ್ನಿಗಾನಂತಾದ್ರೀಶನ್ನೇ
ಪೇಳುವಳು
ನಿನ್ನ ಮಗಳಾದರು ಆತನನ್ನೆ ಇಚ್ಛಿಸುವಳು
ಇನ್ಯಾತಕೆ ಸಂಶಯ
ಮಾಡಿನ್ನು ಶುಭಶೀಘ್ರಾ ೭

ವಚನ

ರಂಭೆ ಆಡಿದ ಮಾತಿಗಂಬರಾಖ್ಯನು ರಾಜ
ಸಂಭ್ರಮದಿ ಆನಂದವೆಂಬ
ಬಾಷ್ಪವು ಕಣ್ಣು ತುಂಬಿತುಳುಕುತ ಮೈಯ
ತುಂಬ ರೋಮಗಳುಬ್ಬಿ
ರಂಭೆ ಗಾಡಿದನು ಹೀಗೆಂಬ ಮಾತುಗಳು
ರಂಭೆ ಪೂರ್ವದ ಪುಣ್ಯಾ
ವೆಂಬುದು ಫಲಿಸಿತೆಂಬೆ ನಮ್ಮ ಪೂರ್ವಿಕರು
ಎಂಬುವರು ಮುಕ್ತ

ಅವಲಂಬನವ ಮಾಡಿದರು ಸಂಭ್ರಮವಾಯಿತು
ಬಹಳ ಗಂಭೀರ
ಳಾದ ಮಗಳೆಂಬ ಪದ್ಮಾವತಿಯು
ಅಂಬುಜೋದ್ಭವ ಪಿತನ
ರಂಭೆಯೆನಿಸುತ ಅವನ ನಂಬಿ
ಎಡದೊಡೆಯಲ್ಲಿ ತುಂಬಿ ಕುಳಿತದ್ದು
ಕಣ್ಣುತುಂಬ ನೋಡೇನು ಎಂದು ಅಂಬುಜಾಕ್ಷಿ ೧

ಮಡದಿ ಮಂದೀಪರಿಯು ನುಡಿದು
ಆಕಾಶಪರಿವೃಡನು ಕ್ಲೇಶದ
ಪಾಶ ಕಡುಹರ್ಷ ಖಡ್ಗದಲೆ ಕಡಿದು
ಮಗಳಿದ್ದಲ್ಲೆ ನಡೆದು
ಬಂದೀ ಪರಿಯು ಒಡಲೊಳಗೆ ಇದ್ದದ್ದು
ಒಡೆದು ಆಡಿದನು
ಕುಡಿತೆಗಂಗಳೆ ನಿನ್ನ ನಡತೆ ನೋಡಲು
ಹರುಷ ಹಿಡಿಯಲಾಗದು
ಎನಗೆ ಹಿಡಿ ಅಭಯ ನಾನಿನಗೆ ಕೊಡುವೆ
ನಿನ್ನೊಳು ನೀನೆ ಮಿಡುಕಿ
ಚಿಂತಿಲಿಸೊರಗಿ ಬಡವೆಯಾಗಲು
ಬೇಡ ಎನ್ನಡೆದವ್ವನೆ ನೀನು
ಬಿಡುಮನದ ಕ್ಲೇಶಗಳ ಕಡು ಚಲ್ವ
ಮೂಡಲಗಿರಿ ಒಡೆಯ
ವೇಂಕಟಪತಿಗೆ ಕೊಡುವೆ ನಿನ್ನ ೨

ಪುತ್ರಿಗೀಪರಿ ನುಡಿದು ಪುತ್ರನ ಕಳುಹಿ
ಶುಭ ಪತ್ರವನು ಕೊಟ್ಟು
ಅಗತ್ಯ ಕರೆ ಕಳುಹಿದನು ಅತ್ತ ಆ
ಬೃಹಸ್ಪತಿಯು ವೃತ್ರಾರಿ
ಗುರು ಬಂದು ಪತ್ರಕಂಡಾಕ್ಷಣಕೆ
ಧರಿತ್ರೀಯಲ್ಲೀ ಪೃಥ್ವೀಶ ತಾನು

ಬಂದಂಥ ಗುರುವಿನ ಕಂಡು ಭಕ್ತಯಿಂದ
ನತಿಸಿ ವಿಧಿಯುಕ್ತ ಪೂಜೆ
ಯಮಾಡಿ ಯುಕ್ತ ಮಾತಾಡಿದರು
ಉತ್ತಮನೆ ನೀ ಕೇಳು ಸತ್ಯ
ಪೌರೋಹಿತ್ಯ ಕೃತ್ಯ ನಿನ್ನದು ಕಡೆಗೆ ಮತ್ತೆ ಹಿತಕನು
ಬೇಗನೆ ನಮಗೆ ನಿತ್ಯ ನೀನೆ ೩

ಎಂದು ಎನ್ನ ಮಗಳಿಗೆ ಒಬ್ಬ ಘನ್ನವರ ಬಂದಿಹನು
ಪನ್ನಗಾಚಲದಲ್ಲಿ
ಉನ್ನತೈಶ್ವರ್ಯ ಸಂಪನ್ನ ಇರುವವನಂತೆ
ನಿನ್ನ ಅನುಮತಿಯಿಂದ
ಮುನ್ನ ಮಾಡು ಈ ಮದುವೆ
ಬಿನ್ನಹದ ನುಡಿ ಕೇಳಿ
ಆ ಗುರು ನುಡಿದ ನಿನ್ನ ಮಾತಿಗೆ ರಾಜ ಎನ್ನ
ಮನಸಿಗೆ ಹರುಷ
ಘನ್ನವಾಯಿತು ಸತ್ಯ ಇನ್ನೊಂದು ನಾನಿನಗೆ ಮುನ್ನ
ಪೇಳುವೆ ಕೇಳು ಚನ್ನಾಗಿ ೪

ಶೇಷಗಿರಿಯಲಿ ನಿತ್ಯ ವಾಸಿಯೆನಿಸುವ
ಅವನ ಆ ವಿಸ್ತಾರವೆಲ್ಲ
ಲೇಸಾಗಿ ತಾ ಬಲ್ಲ ವ್ಯಾಸತನಯನು
ಪಂಚಕೋಶದಲಿ ಇಲ್ಲಿರುವ
ವಾಸ ನಮ್ಮದು ದೂರದೇಶದಲಿ ವ್ಯಾಸತನಯನು
ಅವನೇ ಶ್ರೀ ಶುಕಾಚಾರ್ಯ
ತಿಳಿ ಲೇಸಾಗಿ ಅವಗೆ ಬಿನ್ನೈಸಿ ಪತ್ರವ
ಬರೆದು ನೀ ಶೀಘ್ರ ಕರೆ
ಕಳಿಸು ಶೇಷಗಿರಿಯವನ ಸವಿಶೇಷ ವೃತ್ತಾಂತ
ನಿಶ್ಶೇಷ ತಿಳಿಯುವದು ೫

ಪಂಡಿತನ ಮಾತು ಭೂಮಂಡಲೇಶನು
ಕೇಳಿ ತೋಂಡಮಾನಗೆ ನೀ
ಕರೆದುಕೊಂಡು ನೀ ಬಾ ಎಂದ
ಕೊಂಡುರಾಜಾಜ್ಞೆ ತಕ್ಕೊಂಡು
ಶುಭ ಪತ್ರವ ಮನಗಂಡ ರಥದಲಿ
ಕೂತುಕೊಂಡು ಪೋಗುತ
ಮುನಿಯಕಂಡು ಪತ್ರವ ಕೊಟ್ಟು ದಂಡವನ್ನತಿಸಿ ಆ
ತೋಂಡಮಾನನು ನಿಂತುಕೊಂಡ
ವಿನಯದಲಿ ಕೊಂಡು
ಪತ್ರವ ನೋಡಿಕೊಂಡು ಆಕ್ಷಣ ಮುನಿ
ಕಮಂಡಲವ ಒಡೆದು
ಉದ್ದಂಡ ಹರುಷದಲೆದ್ದು ಗಂಡೆರಳೆ
ಚರ್ಮವನು ತುಂಡು
ಮಾಡಿದ ಹರಿದು ದುಂಡು ಮಣಿ
ಮಾಲೆ ಹರಕೊಂಡು ಕುಣಿ
ದಾಡಿದನು ಥಂಡಥಂಡದಲಿ ೬

ಹೀಗೆಂದು ನುಡಿದ ಸರ್ವಾಂಗ
ರೋಮಗಳುಬ್ಬಿ,
ಅಂಗಕೇಳು ಎನ್ನಂಗತರಂಗ
ಕೊಪ್ಪುವುದು ಜನ ಸಂಘದಲಿ
ನಿತ್ಯ ನಿಸ್ಸಂಗ ಮೂರುತಿಯ ಈ
ಮಂಗಲೋತ್ಸವ ಪರಮ
ಮಂಗಳಪ್ರದ ತಿಳಿ ಜಗಂಗಳಿಗೆ ಎಲ್ಲಾ
ಹೀಗೆಂದು ತೀರ್ಥದಲಿ
ಸಾಂಗಸ್ನಾನವ ಮಾಡಿ, ಹಿಂಗದಲೆ ಹರಿಯ
ಧ್ಯಾನಂಗಳನು ತ್ವರ
ಮುಗಿಸಿ ಅಂಗಜನ ಗೆದ್ದ ತನ್ನಂಗರಥವನು
ಬೇಗ ಸಿಂಗರಿಸಿದನು ಭೂಷಣಂಗದಲಿ ೭

ತುಂಗವಾಗಿಹ ಕೋಮಲಾದ ಕುಶಗಳಕೊಂಡು
ಹಿಂಗದಲೆ ಹೆಣೆದು
ಉತ್ತುಂಗ ಮುಕುಟುವ ಮಾಡಿ
ಅಂಗೈಯಲೋತ್ಕೃತ್ತಮಾಂಗದಲಿ
ಇಟ್ಟು, ಮತ್ತಾಂಗ ಶ್ರೀ ತುಳಸಿ ಪದ್ಮಾಂಗಮಣಿ
ಮಾಲೆಗಳ, ಸಂಘ
ಧರಿಸಿದನು ವ್ಯಾಸಂಗಜಾತ ಅಂಗಕ್ಕಾಕಿದನು
ಶುದ್ಧಾಂಗ ಕೃಷ್ಣಾಜಿನದ
ಅಂಗಿಯನು ಕೆಳಗೆ ಪಾದಾಂಗಗಳ ಪರ್ಯಂತ
ಹಿಂಗದಲೆ ಜ್ಞಾನವೆಂಬ
ತುಂಗತೇಜಿಯನೇರಿ ಸಂಗರಹಿತನು ಅವನು ಸಂಗಡ
ನಡೆದ ನೃಪ ಮಂಗಳಾಲಯಕೆ ೮

ಬಂದಶುಕ ಮುನಿ ಎದುರಿಂದ ಕಾಣುತಲೆದ್ದು
ಮುಂದೆ ರಾಜನು ಗುರವ
ಮುಂದೆ ಮಾಡುತ ಬೇಗ ಬಂದು ಎದುರಿಗೆ
ಭಕ್ತಿಯಿಂದ ವಂದನೆ
ಮಾಡಿ ಮಂದಿರಕೆ ಕರೆದು ವಿಧಿಯಿಂದ
ಪೂಜಿಸುತ ಹೀಗೆಂದನಾಗ
ಚಂದಾಗಿ ಸೌಂದರ್ಯದಿಂದಿದ್ದ ಮಗಳನ್ನು
ಮುಂದೆ ವೇಂಕಟಪತಿಗೆ
ಚಂದಾಗಿ ವೇದವಿಧಿಯಿಂದ ಕೊಡಬೇಕು
ಎಂತೆಂದು ಮಾಡಿದನಾನು
ಇಂದು ಎನ್ನ ಮನದಲ್ಲಿ ಮುಂದೆ
ನಿಮ್ಮುಭಯತರ ಮನಸ್ಸಿಗೆ
ಚಂದಾಗಿ ಬಂದರೆ ಕೊಡುವೆ ೯

ಚನ್ನಾಗಿ ನುಡಿಕೇಳಿ ಮುನ್ನ ಶುಕಮುನಿ ನುಡಿದ
ಘನ್ನರಾಜನೆ ಕೇಳು

ಧನ್ಯಧನ್ಯನು ನೀನು ನಿನ್ನ ಕುಲದುದ್ಧಾರ
ಮುನ್ನಾಯಿತೆಂದು ತಿಳಿ ನಿನ್ನ
ಸರಿ ಮತ್ತಧಿಕ ಮುನ್ನೆಲ್ಲಿ ಇಲ್ಲ ಬಹು
ಪುಣ್ಯವಂತನು ನೀನು
ಪನ್ನಗಾದ್ರೀಶ ತಾ ನಿನ್ನಳಿಯನಾದ ಮೇಲಿನ್ನೇನು
ಕಡಿಮೆ ಚನ್ನಾದ ಈ ಕಾರ್ಯ ಎನ್ನ ಮನಸಿಗೆ ಬಂತು
ಮುನ್ನ ಸಂಶಯ ಬೇಡ ಇನ್ನು ಧೇನಿಸಬೇಡ
ಇನ್ನೊಬ್ಬರನು ನೀನು ಮುನ್ನ ಕೇಳಲು ಬೇಡ
ಇನ್ನು ತಡಮಾಡ ಬೇಡಿನ್ನು ಶುಭಶೀಘ್ರಾ ೧೦

ಪ್ರೌಢಮುನಿ ಮಾತುಸವಿ ಮಾಡಿ ಕೇಳುತರಾಜ
ಮಾಡಿ ನಮನವ
ಕೈಯ ಜೋಡಿಸುತ ಮತ್ತೆ ಮಾತಾಡಿದನು
ಹೀಗೆ ದಯಮಾಡಿ
ವಧು–ವರರ್ಗಳಿಗೆ ಕೂಡಿ ಬರಬೇಕು
ನೀವು ನೋಡಿರೆಂದೂ
ಆಡಿದ ನುಡಿ ಕೇಳಿ ಗಾಢನೆ ಬೃಹಸ್ಪತಿಯು
ನೋಡಿ ಬಕುಲಾ
ವತಿಗೆ ಆಡಿದನು ಮಾತು ತ್ವರ ಮಾಡಿ ವರಗೋತ್ರ
ಜನಿ–ರೂಢ–ನಕ್ಷತ್ರ ಬಿಚ್ಚ್ಯಾಡು ಬಾಯಿಲೆ ಎನಲು ನೋಡಿ
ಈ ಪರಿಯು ಮಾತಾಡಿದಳು ಬಕುಲಾ ೧೧

ರಾಗ: ಸೌರಾಷ್ಟ್ರ ಭಿಲಂದಿತಾಳ

ಚಿತ್ತಗೊಟ್ಟು ಕೇಳಿರಿ ಗೋತ್ರನಕ್ಷತ್ರಗಳು ಸತ್ಯ
ಶ್ರವಣೆಂಬೊ ನಕ್ಷತ್ರ ವಶಿಷ್ಠ ಗೋತ್ರ ೧

ಗಗನರಾಜನು ನುಡಿದ ಮಗಳ ಜನ್ಮ ನಕ್ಷತ್ರ ಮೃಗರಾಶಿ
ಎಂಬ ನಕ್ಷತ್ರ ಆತ್ರೇಯ ಗೋತ್ರ ೨

ಬಲ್ಲಿಂಥ ಆ ದೇವಗುರು ಎಲ್ಲ ಕೂಟಗಳನು ಅಲ್ಲಿಕೂಡಿಸಿ
ನೋಡಿದ ಮಾತಾಡಿದ ೩

ನಾಡಿಕೂಟ ಕೂಡಿತು ಪ್ರೌಢರಾಜನೆ ಕೇಳು ಕೂಡಿತು
ಸೂತ್ರಕೂಟವು ಯೋನಿಕೂಟವು ೪

ಕೂಡಿತೆಲ್ಲ ಯೋಗವು ಮಾಡು ನಿಶ್ಚಯತ್ವರ ಮಾಡಿ
ಪತ್ರವ ಕಳಿಸು ಹರಿಗೆ ತಿಳಿಸು ೫

ಗುರುವಿನ ಆ ಮಾತಿಗೆ ಪರಮ ಸಂಭ್ರಮದಿಂದ ಧರಿಸಿದ
ಆನಂದಬಾಷ್ಪ ಆಕಾಶ ಭೂಪ ೬

ಕಾಂತಿಉಳ್ಳ ಮಗಳ ನಾನಂತಾದ್ರೀಶಗೆ ಕೊಡುವೆನೆಂತ ನಿಶ್ಚಯ
ಮಾಡಿದೆನು ಪತ್ರ ಬರೆದೆನು ೭

ವಚನ

ಸಕಲಗುಣಸಂಪನ್ನ ನಿಖಿಲವ್ಯಾಪಕ ಪರಮಾ
ಸುಕಳತ್ರ ಸುಕಮಾರ
ಸಕುಲಮಾನ್ಯನೆ ಅಲೌಕಿಕ ಮೂರ್ತಿ ನೀನು
ಲೌಕಿಕಮಾಡುವೆನು ನಾನು
ಸುಖಕರಾಶೀರ್ವಾದ ಸುಖಪೂರ್ಣನಿನಗೆ
ಸಕಲರೆಲ್ಲರು ನಾವು ಸುಖ
ದಲಿರುವದು ತಿಳಿದು ವಿಖನ ಸಾರ್ಚಿತ
ನಿಮ್ಮ ಸಕಲಸುಕ್ಷೇಮಗಳು
ಲಿಖಿತವಾಗಿಹ ಪತ್ರ ಮುಖದಿಂದ ನೀ ತಿಳಿಸಿ ಸುಖಪಡಿಸುವಿ
ಅನಿಮಿತ್ತ ಸಖ ವೇಂಕಟೇಶಾ ೧

ಮುಂದೆ ಪದ್ಮಾವತಿಯ ಚಂದಾಗಿ ವೇದವಿಧಿಯಿಂದ
ಕೊಡುವೇನು
ನಿನಗೆ ಸಂದೇಹವಿಲ್ಲ ಗೋವಿಂದ ನೀ ಸ್ವೀಕರಿಸು
ಬಂದು ಇಲ್ಲಿಗೆ ನಿನ್ನ
ಬಂಧು ಬಾಂಧವರಿಂದ ಚಂದಾಗಿ ಕೂಡಿ
ಮುಂದ ವೈಶಾಖದಲಿ
ಮುಂದಾಗಿ ಬರುತಿರುವ ಚಂದ ದಶಮಿಯಲಿ
ಬಂದ ಶುಕ್ರವಾರ
ವೆಂದು ತಿಳಿ ಲಗ್ನತಿಥಿ ಮುಂದೆಲ್ಲ ವೃತ್ತಾಂತ
ಚಂದಾಗಿ ನುಡಿವ ಶುಕ ಮುನಿಯು ೨

ಹೀಗೆ ಪತ್ರ ಬರೆದು ಆಗ ಶುಕಮುನಿಯನ್ನು
ಬೇಗಕಳುಹಿಸಿದ ರಾಜಹಾಗೆ
ತಾ ಹರದಾರಿ ಹೋಗಿ ಬೆನ್ನತ್ಯವಗೆ ಹೀಗೆ
ಮಾತಾಡಿದನು ಹೋಗಿ ಈ ಕಾರ್ಯ
ವನು ಬೇಗ ಮಾಡಿರಿ ಬೇಕಾದ್ದು ಕೊಡುವೆ
ಯೋಗಿಗಳು ನಿಮಗೆ ಹೆಚ್ಚಾಗಿ
ಹೇಳಲಿ ಏನು ನಾಗಶಯನು ಇಲ್ಲೆ ಬೇಗ
ತಾ ಬರುವಂಥ ಯೋಗ
ಹ್ಯಾಗಾದೀತು ಹಾಗೆ ಮಾಡಿರಿ ಎನಲು ಆಗತಲೆ
ದೂಗಿ ಚನ್ನಾಗಿ ಶುಕಮುನಿ ನಡೆದ ನಾಗಗಿರಿಗೆ ೩

ರಾಗ:ಶಂಕರಾಭರಣ ಭಿಲಂದಿತಾಳ

ಬಂದ ಮುನಿಯು ಹರಿಯು ಚಿಂತೆಯಿಂದ ಇರುತಿರೆ
ಬಂದವರನು ನೋಡುತಲ್ಲೆ ಮುಂದೆ ನಿಂತಿರೆ ಪ

ಹೋದತಾಯಿ ಬರದೆ ಅತ್ತಲೆ ಪೋದಳೆನುತಿರೆ
ಹೋದಕಾರ್ಯ ಹ್ಯಾಗೋ ಎಂದು ಬಾಧೆ ಪಡುತಿರೆ ೧

ಒಮ್ಮೆ ಹುತ್ತಿನೊಳಗೆ ಪೋಗಿ ಸುಮ್ಮನಿರುತಿರೆ
ರಮ್ಮಿಸದಲೆ ಹೊರಗೆ ಮತ್ತೊಮ್ಮೆ ಬರುತಿರೆ ೨

ವಾರಿನೋಟದಿಂದ ದೃಷ್ಟಿ ದೂರ ಇಡುತಿರೆ
ಶ್ರೀ ಮದನಂತಾದ್ರೀಶ ಘೋರ ಬಡುತಿರೆ ೩

ವಚನ

ಬಂದಂಥ ಮುನಿಯ ದೂರಿಂದ ನೋಡುತ
ಕೈಯ ಮುಂದಲೆಯ
ಮೇಲಿಟ್ಟು ಮುಂದೆದುರು ಹೋಗಿ ಮತ್ತೊಂದು
ಮಾತಾಡದಲೆ ಇಂದಿ
ರೇಶನು ಚಿಂತೆಯಿಂದ ಪರವಶನಾಗಿ
ಅಂದನ್ಹೀಗೆ ಇಂದು ಎನ
ಕಾರ್ಯ ಉಪೇಂದ್ರ ಫಲಿಸಿತೋ ಇಲ್ಲೋ
ಚನ್ನಾಗಿ ಬೇಗ ಎನ್ನ
ಮುಂದೆ ನೀ ಪೇಳು ಎಂತೆಂದ ಮಾತಿಗೆ
ಮುನಿಯು ಮಂದಹಾಸದಿ
ನಕ್ಕು ಇಂದಿರೇಶನೆ ಕೇಳು ಇಂದು ನಿನ್ನ
ಕಾರ್ಯಕ್ಕೆ ಸಂದೇಹವಿಲ್ಲ
ವೆಂತೆಂದು ಪತ್ರವ ತೆಗೆದು ಮುಂದಿಟ್ಟನಾಗ ೧

ಅಚ್ಯುತನು ಆ ಪತ್ರ ಬಿಚ್ಚಿ ಓದಿದ
ತಾನು ಉಚ್ಚಸ್ವರದಲಿ ಸ್ಪಷ್ಟ
ಉಚ್ಚಾರವನು ಮಾಡಿ ಉತ್ಸಾಹದಿಂದವನ
ಸ್ವಚ್ಛಪಾದಕೆ ಹಣಿಯ
ಹಚ್ಚಿ ನತಿಸುವ ಹರುಷ ಹೆಚ್ಚಾಗಿ ಅಪ್ಪಿ
ಶ್ರೀ ವತ್ಸಲಾಂಛನ ನುಡಿದ

ವಾತ್ಸಲ್ಯದಿಂದಾ ಹೆಚ್ಚಿನ ಮುನಿಯೇ ಎನ್ನಿಚ್ಛೆ
ಪೂರೈಸಿದೆಯೊ ಮೆಚ್ಚಿ
ದೆನು ನಾ ನಿನಗೆ ನಿಶ್ಚಯದಿ ಉಪಕಾರ
ಹೆಚ್ಚು ಮಾಡಿದಿ ಇದಕೆ
ಮಚ್ಛಶರೀರಕ್ಕಿಂತ ಹೆಚ್ಚೇನು ಕೊಡಲಿನ್ನ ತುಚ್ಛವೆಲ್ಲಾ ೨

ತಾಪಸನೆ ಎನ್ನ ಈ ರೂಪ ನಿಂದಿಹುದು
ಅಪರೂಪ ಅನ್ಯರಿಗೆಂದು
ಈಪರಿಯ ಮಾತಾಡಿ ತಾ ಪ್ರತವ
ಬರೆದು ಆ ಪತ್ರ ಬೆನ್ನಿಂದೆ
ಆಕಾಶ ಭೂಪತಿಗ್ಹೀಗೆ ರಾಜಸಿರಿಸಂಪನ್ನ ರಾಜ ಪೂಜಿತ
ವಿಯದ್ರಾಜ ನಿನಗೊಂದಿಸುವೆ ರಾಜಿಸುವ ಪತ್ರಮುನಿ ರಾಜ
ತಂದಿತ್ತ ಈ ವ್ಯಾಜದಿಂದ್ವರುಷ ಉತ್ತೇಜಿತವಾಯಿತು ಮಹಾ
ರಾಜ ಎನಗೆ ೩

ಸುದ್ದಿ ತಿಳಿ ಕ್ಷೇಮದಿಂದಿದ್ದೇವೆ ಮುಂದೆ ಬರುತಿದ್ದಂಥ
ವೈಶಾಖ ಶುದ್ಧ ದಶಮಿಯಲಿ ಇದ್ದ ಶುಕ್ರವಾರ ಶುದ್ಧ
ಶುಭ ತಿಥಿಯಲ್ಲಿ ಮುದ್ದು ಮುಖದವಳಾಗಿ ಇದ್ದ
ನಿನ್ನ ಕನ್ನಿಕೆಯ ಶುದ್ಧ ಪಾಣಿಗ್ರಹಣ ಸಿದ್ಧಾಗಿ
ಮಾಡುವೆನು ಬುದ್ಧಿಪೂರ್ವಕ ಸ್ನೇಹ ಬದ್ಧನಾಗಿ ಹೀಗೆ
ಪತ್ರವ ಬರೆದು ಯೋಗೀಶನ ಕಳುಹಿ ನಾಗಶಯನನು
ಕಂಡನಾಗ ಬಕುಲಾವತಿಯ ಬೇಗ ತಾಭಕ್ತಿಯಿಲಿ
ಬಾಗಿ ನಮಿಸುತ ನುಡಿದ ಭಾಗ್ಯ ಒಡವಗೆ ಬಹಳ
ಬಂದಂತೆ ಹಿಗ್ಗಿ ೪

ತಾಯಿ ನೀದಣಿದೆಮ್ಮ ಕಾಯಕ್ಲೇಶದಿ
ಎನ್ನ ಕಾರ್ಯಕ್ಕೆ ನೀ
ಪೋಗಿ ಬಾಯಿಲುಪಚಾರದಲ್ಲು ಪಾಯಗಳು
ನೂರೆಂಟು ಬಾಯಿ-

ಲ್ಹೇಳಲು ಬಹುದು ಆಯಾಸ
ಮಾಡುವುದಕ್ಕೆ ಕೈಲಿ ಎಷ್ಟು
ಕಾರ್ಯಕ್ಲೇಶದಿ ನೀನು ಕಾರ್ಯ ಮಾಡಿದ್ದು ಮುನಿರಾಯಾ
ತಿಳಿಸಿದ ಎನಗೆ ತಾಯಿ ಕೇಳುವೆ ನಿನ್ನ,
ಬಾಯಿಂದ ಎಂತೆನಲು
ಬಾಯಿ ಮಾತಿಲೆ ಅಭಿಪ್ರಾಯ ನುಡಿದಳು
ಅವನ ತಾಯಿ ಬಕುಲಾ ೬

ಧ್ವನಿ: ಸಾಳಮಕ ಅಟತಾಳ

ದೈವನೆ ಕಾರಣವೆಂಬೆ ದೇವಾಧಿ ದೇವನೆ
ನಾನು ಕೇವಲ ಪ್ರಯತ್ನ
ದಿಂದ ಆವ ಕಾರ್ಯವಾದೀತು ಪ

ಅಚ್ಯುತ ಕೇಳಾ ದೈವ ನಿನ್ನಿಚ್ಛಾಧೀನಾಗಿಹುದಯ್ಯಾ
ನಿಚ್ಚ ನಿನ್ನ ಕಾರ್ಯಕ್ಕೆ ನಾ ಹೆಚ್ಚಿನವಳೇನೋ ೧

ಕೇವಲಯತ್ನದಿ ನಾನು ಧಾವಿಸಿ ಪೋಗದೆ ಮುನ್ನ
ದೈವಯೋಗದಿಂದ ಧರ್ಮದೇವಿ ಮಾಡಿದಳು ೨

ಚೆನ್ನಿ'ಗಾನಂತಾದ್ರೀಶ ' ಕೇಳು ಚೆನ್ನಾಗಿ ದೈವವಿಲ್ಲದವನಿಗೆ
ಘನ್ನವಾದ ಯತ್ನದಿಂದ ಮುನ್ನೇನು ಫಲಾ ೩

ವಚನ

ಕೇಳಿ ಬಕುಲಾವತಿಯು ಹೇಳಿದೀ ಮಾತು
ಆ ವೇಳೆ ಗಾಯಿತು
ಹರಿಗೆ ಬಹಳ ಸಂತೋಷ ಈ
ಲೀಲೆಯನು ಆದರದಿ ಕೇಳಿದರೆ

ಶುಭವಾರ್ತೆ ಕೇಳುವರು ಮುಂದಿಹದು
ಬಹಳ ಸಂತೋಷಾ
ಭೂಲೋಕದಲಿ ಮಂಗಳಾಲಯಾನಂ
ತಾಖ್ಯಶೈಲದು ಇದ್ದು ಈ
ಲೀಲೆಯಿಂದಲಿ ಜಗತ್ಪಾಲನವ ಮಾಡುತ ದಯಾಳು ನಿನ್ನ
ದಯದಿಂದ ಹೇಳಿ ಮುಗಿಯಿತು ಇಲ್ಲಿಗೇಳು ಅಧ್ಯಾಯ.
ಶ್ರೀಕಮಲಾಪತಯೇ ನಮಃ

ಎಂಟನೆಯ ಅಧ್ಯಾಯ

ಸ್ವಪ್ರೇಷಿತ ಭುಜಂಗಾರಿ ಸಮಾನೀತಾಮರೋ ಹರಿಃ
ಮಾಯಯಾನೀಯ ಕಮಲಾಂ ಪರಣೇತ್ಯುನ್ಮು ಖೋವತಾತ್

ಧ್ವನಿ: ಯರಕಲಕಾಂಬೋಧಿ ಭಿಲಂದಿತಾಳ

ಮುಂದಾ ವೇಂಕಟಪತಿಯು ಮಂದಿಯನಾ ಮೋಹಿಸುತ
ನೊಂದು ಮನದಲಿ ತಾಯಿಯ ಮುಂದೀ ಪರಿನುಡಿದಾ
ಇಂದು ಮುಖಿ ನಿನ್ನ ಹೊರತು ಬಂಧು ಬಳಗಗಳಿಲ್ಲ
ಇಂದು ಎನಗ್ಯಾರಿಲ್ಲ ಚಂದೇನು ಮದುವೆ ೧

ನಿಬ್ಬಣಕ್ಹೋಗುವವರು ನಾವಿಬ್ಬರು ಇದ್ದೇವಿಲ್ಲೆ
ಇಬ್ಬರನು ಹೊರತು ಮತ್ತೊಬ್ಬರ ನಾಕಾಣೆ
ಕೊಬ್ಬಿಲೆ ಬಳ್ಳಿಯು ಹಂದರಕ್ಹಬ್ಬಿದರೆ ಅದುಚಂದ
ಉಬ್ಬಿಲೆ ಬಳಗವ ಕೂಡಿದ ನಿಬ್ಬಣ್ಣವುಚಂದ ೨

ಅಕ್ಕರದಿಂದಲಿ ಮಂದಿ ಮಕ್ಕಳು ಇದ್ದರೆಚಂದ
ಮಿಕ್ಕದಿರಲು ಮನಸಿಗೆ ತಕ್ಕಲ್ಲವೆಂಬೆ
ಅಕ್ಕರುಳ್ಳರಸಿಗೆ ತಕ್ಕಲ್ಲವಿದು ಎಂದು
ಮಿಕ್ಕೆಲ್ಲ ಜನರು ನಕ್ಕಾರು ನಮಗೆ ೩

ಬಂಧು ಬಳಗಗಳಿಂದ ಚಂದಾಗಿರುವವರಾಜ
ಬಂಧು ಹೀನಗೆ ಕನ್ಯಾ ಮುಂದ್ಯಾಂಗೆ ಕೊಡುವಾ
ಇಂದಿರೇಶನು ಈ ಪರಿ ಅಂದ ಮಾತನು ಕೇಳಿ
ಮಂದಹಾಸದಿ ತಾ ಹೀಗೆಂದಳು ಬಕುಲಾ ೪

ಅಂಬುಜನಾಭನೆ ವಿಶ್ವಕುಟುಂಬಿ ಎನಿಸುವಿ ನೀನು
ತುಂಬಿದ ಜಗದೋಳು ನಿನ್ನ ಬಳಗವೆಂಬುವದು ಕಡಿಮೆಯೆ
ಅಂಬುಜ ಭವಮುಖ ದೇವಕದಂಬಕೆ ಕಡಿ ಮಿಲ್ಲದವನು
ಸಂಭ್ರಮದಿಂದಲೆ ಸ್ಮರಿಸು ಕುಟುಂಬದವನ ನಿಂದಲ್ಲೆ ೫

ಲಕ್ಷ್ಮೀಪತಿ ಈ ಮಾತು ಲಕ್ಷಿಯಿಂದಲೆ ಕೇಳಿ
ಈಕ್ಷಿಸಿ ಮನದಲಿ ಸ್ಮರಿಸಿದ ಪಕ್ಷಿಪ ಫಣಿವರರಾ
ಆಕ್ಷಣದಲಿ ಬಂದವರು ಅಪೇಕ್ಷಿಸುವರು ಆಜ್ಞೆಯನು
ಈಕ್ಷಿಸಿ ಕರುಣದಿ ನುಡಿದನು ಅಕ್ಷಯಗುಣ ಪೂರ್ಣ ೬

ಗರುಡ ನೀ ಪೋಗಯ್ಯ ತ್ವರ ಸತ್ಯಲೋಕದಲಿ
ಉರಗೇಶ ನೀ ಪೋಗು
ವರ ಕೈಲಾಸದಲಿ ಸರಸದಿ ಈ ಪರಿ ಹೇಳಿ
ವರದನಾಂತಾದ್ರೀಶ ಬರೆದನು
ಮುಂದೀಪರಿ ಆ ಪರಮೇಷ್ಠಿಗೆ ಪತ್ರ ೭

ವಚನ

ಜೀವಜನಿಕರ ಚಿರಂಜಿವಿಯೆನಿಸುವ ಬ್ರಹ್ಮದೇವ
ಮಾಡುವೆ ನಿನಗೆ
ಕೇವಲಾರ್ಶಿವಾದ ನಾವು ಕ್ಷೇಮದಲಿದ್ದ
ಭಾವವನು ತಿಳಿಕೊಂಡು ನೀವು
ಕ್ಷೇಮದಲಿದ್ದ ಭಾವ ತಿಳಿಸುವುದು ಈ
ವಸುಧೆಯಲಿ ಎನ್ನ ವೈವಾಹಿ

ಕೋತ್ಸವಕೆ ಯಾವತ್ತು ಸುರರೆಲ್ಲ ಇವತ್ತೆ
ಬಾಹುವದು ದೇವನಿನ್ನನು
ಕೂಡಿ ಬಾಯಮಾತಿಲೆ ಉಳಿದ ಯಾವತ್ತು ವೃತ್ತಾಂತ
ಭಾವ ತಿಳಿಸುವ ಪಕ್ಷಿದೇವ ನಿನಗೆ ೧

ಹರಿಯು ತಾ ಬೇಗೀ ಪರಿಯು ಶುಭಪತ್ರವನು
ಬರೆದು ಕೈಯಲಿರುವವ
ಕೊಟ್ಟು ಗರುಡನ ಕಳುಹಿದನು
ವರಸತ್ಯಲೋಕಕ್ಕೆ ಸರಸಾಗಿ ತಾ
ಮತ್ತೆ ಹರಗೆ ತಾ ಪತ್ರ ಬರೆದು ಹರುಷದಿಂದಾ
ಸರಸದಲಿ ಕೈಲಾಸಗಿರಿ
ಯಲ್ಲಿರುವವ ಎನ್ನ ಪರಮ ಆಶೀರ್ವಾದ
ತ್ವರಮಾಡಿ ನೀ ಎನ್ನವರ
ವಿವಾಹೋತ್ಸವಕೆ ಪರಿವಾರ ಸಹಿತಾಗಿ
ಬರುವದು ಅಗತ್ಯ ಉರಗ
ಭೂಷಣ ನಿನಗೆ ಉರಗೇಶ ಪೇಳುವೆನು
ಉಳಿದ ವೃತ್ತಾಂತ ೨

ಬೆಟ್ಟದೊಡೆಯ ಹೀಗೆ ಥಟ್ಟನೆ ತಾ ಬರೆದು
ಕೊಟ್ಟುಕಳುಹಿಸಿದ ಸರ್ಪ
ಶ್ರೇಷ್ಠನಮುಂದವನು ನೆಟ್ಟನೆ ಕೈಲಾಸ ಬೆಟ್ಟಕ್ಕೆ
ಪೋಗುತಿರೆ ಸೃಷ್ಟಿಕರ್ತನ
ಮನೆಗೆ ಮುಟ್ಟಿದನು ಗರುಡ ಮೆಟ್ಟಿಗೃಹ
ಸೋಪಾನವಷ್ಟು ದಾಟುತಮು
ಂದೆ ಶ್ರೇಷ್ಠರ ಸಭೆಯಲ್ಲಿ ಸೃಷ್ಟಿಕರ್ತನ
ಕಂಡು ತಟ್ಟನೆ ನತಿಸ್ಯವಗೆ
ಸ್ಪಷ್ಟಾಗಿ ವೃತ್ತಾಂತವನು ಪೇಳುತ
ಪತ್ರಕೊಟ್ಟನಾಗ ೩

ಪತ್ರವನು ನೋಡಿ ವಿಧಿ ಅತ್ಯಂತ ಹರ್ಷದಲಿ
ಸತ್ಯಲೋಕಸ್ಥ ಯಾವತ್ತು
ಜನರನು ಕರೆಸಿ ಒತ್ತಿ ಮಾತಾಡಿದನು
ಹೊತ್ತುಗಲೆಯದಲೆ ಯಾವತ್ತೂ
ಬೇಗ್ಹೊರಡಿರೀ ಹೊತ್ತು ನಿಬ್ಬಣನೀವು ಪತ್ರ
ಬಂದಿಹುದು ಎನ್ನೆತ್ತಯ್ಯನ
ಮದುವೆ ಮರ್ತ್ಯಲೋದಲ್ಲಿ ಸತ್ಯಲೋಕೇಶ
ಹೊತ್ತು ಈ ಪರಿ ಆ ನುಡಿಗಳ
ಹೊತ್ತುಗಳೆಯದಲೆ ಬೇಗ್ಹತ್ತಿತಾ ಹಂಸವನು
ಎತ್ತಿ ಹೊರಡಿಸಿ ಭೇರಿ
ಉತ್ತಮವಾಗಿರುವ ನೌಖತ್ತು ಮೊದಲಾದ
ಯಾವತ್ತು ವಾದ್ಯಗಳೆಲ್ಲಾ ಒತ್ತಿ
ನುಡಿದವು ಕೂಡಿ ಕ್ಲಪ್ತ ಇಲ್ಲದಲೆ ೪

ಪುತ್ರ ಪೌತ್ರರು ವರ ಕಲತ್ರ ಮೊದಲಾದವರು
ಮತ್ತವನ ಬಾಂಧವರು
ಹತ್ತಿ ಹೊಂದಿದ ಜನರು ಸುತ್ತೆಲ್ಲ ಬಳಗ
ಬೆನ್ನತ್ತಿ ಬರತಿಹುದು ಅತ್ಯಂತ
ಭೂಷಿತವಾಗಿ ಚಿತ್ತ ಸಂಭ್ರಮದಿ ಮತ್ತವನ
ಎಡಬಲಕೆ ಛತ್ರ ಚಾಮರವನು
ರತ್ನಘಟಿತ ಸ್ವರ್ಣ ಬೆತ್ತಗಳು ಪಿಡಿದರು
ಮತ್ತೆ ಮುಂಭಾಗದಲಿ
ಒತ್ತಿ ಹೊಗಳುವ ಭಟರು ನೃತ್ಯಗಾಯನದವರು
ಸುತ್ತೆಲ್ಲ ಸೈನ್ಯ
ಆ ಸತ್ಯ ಲೋಕವ ಹಿಡಿದು ಮತ್ತುರಗ ಗಿರಿತನಕ
ತ್ಯಸಾರಾಸೇತು ಹತ್ತಿಹುದು ಬಿಡದೆ ೫

ರಾಗ: ಸೌರಾಷ್ಟ ತ್ರಿಪುಟತಾಳ

ಬಾಲ ಬರಲಿಲ್ಲೆಂದು ಹರಿ ಆಕಾಲದಲಿ
ಚಿಂತಿಸುತಲಿರೆ ಕೇಳಿದನು ಆಕಾಶದ
ಹೆಗ್ಗಾಳಿ ಊದುವದು ಭಾಳ ಮಂಗಳವಾದ್ಯ
ನುಡಿದವು ಕೇಳಿ ಮತ್ತದು ಮೇಲೆ
ನೋಡುವ ಕಾಲದಲಿ ಮಗಬಂದು ತಂದೆಯ
ಕಾಲಿಗೆರಗಿದನು ೧

ಅಪ್ಪ ಏಳೆಂದವನ ಎಬ್ಬಿಸಿ ಅಪ್ಪಿಕೊಂಡವನಪ್ಪ
ವೇಂಕಟ ತುಪ್ಪ ಹಾಲು
ಕೂಡಿದಂತಲೆ ಒಪ್ಪಿದರು ಅವರು
ಸರ್ಪಶಯನನು ಮಗಗೆ ಲೌಕಿಕ
ಕೊಪ್ಪುವಂಥ ಮಾತು ಪೇಳಿದ ಅಪ್ಪನೆ ಎನ್ನ
ತಾಯಿಗೊಂದಿಸು ತಪ್ಪದಲೆ ಎಂದು ೨

ತಂದೆ ಮಾತಿಗೆ ಕಂದ ನುಡಿದನು ಎಂದೂ
ಇಲ್ಲದ ನಿನ್ನ ತಾಯಿಯು
ಬಂದಳೀಗೆಲ್ಲಿಂದ ಇಲ್ಲಿಗೆ ಚಂದದಲಿ ಪೇಳೊ
ಕಂದನ ನುಡಿ ಕೇಳಿ
ಹರುಷದಿ ಇಂದಿರೇಶನು ಅಂದನೀಪರಿ
ಹಿಂದಕೀಕೆಯು ತಿಳಿ
ಯಶೋದಾ ಎಂದು ಕರೆಸುವಳು ೩

ಬಾಲಲೀಲೆಯ ನೋಡಿ ಮುಂದಿನ ಲೀಲೆ
ನೋಡದೆ ಮತ್ತೆ ಈ ಕಾಲದಲಿ
ಬಕುಳಾಖ್ಯವೆನೆನಿಸುತಾ ಪಾಲಿಸದಳೆನ್ನಾ
ಭಾಳಸಂತೋಷದಲಿ ಶ್ರೀಹರಿ
ಹೇಳಿದ ಮಾತು ಈ ಪರಿ ಕೇಳಿ
ಅವಳಡಿಗೊಂದಿಸಿದ ಮೊಮ್ಮಗನೂ ೪

ಕಂದನ ವೃತ್ತಾಂತ ಶ್ರೀಹರಿ ಚಂದದಲಿ
ಕೇಳುತಲೆ ಭೃಗುಮುನಿ ಬಂದ
ಮೊದಲಾದದ್ದು ಪೇಳಿದ ಹಿಂದಿನ ಸುದ್ದಿ
ಬಂದನಾಕಾಲದಲಿ ಹರುಷದಿ
ನಂದಿವಾಹನ ದೇವ ಪಾರ್ವತಿಯಿಂದ ಷಣ್ಮುಖನಿಂದ
ತನ್ನವರಿಂದ ಒಡಗೂಡಿ ೫

ಬಂದನರವಾಹನನು ಆ ಮೇಲ್ಬಂದ
ಮೇಷಾರೂಢದೇವನು ಬಂದು
ಮಹಿಷಾರೂಢ ತ್ವರ ದೇವೇಂದ್ರ ತಾ ಬಂದ
ಬಂದ ವರುಣನು ವಾಯು
ಬಂದನು ಚಂದ್ರಸೂರ್ಯರು ಬಂದರಾಗಲೆ ಸುಂದರಾ–
ಶ್ವವನೇರಿ ಮನ್ಮಥ ಬಂದ ರತಿಯಿಂದ ೬

ಶಿಷ್ಠ ಗೌತಮ ಕಶ್ಯಪಾತ್ರಿ ವಶಿಷ್ಠ ವಿಶ್ವಾಮಿತ್ರ
ಮೊದಲಾದಷ್ಟು ಮುನಿಗಳು
ಬಂದರಾಗ ವಿಶಿಷ್ಠ ಉತ್ಸವಕೆ ಶ್ರೇಷ್ಠ
ಗಂಧರ್ವಾಪ್ಸರರು ಮತ್ತಷ್ಟು ನಿಬ್ಬಣ
ಕೂಡಿತಾಗಲೇ ಶ್ರೇಷ್ಠ ಶ್ರೀಮದನಂತನಾಮಕ
ಬೆಟ್ಟದಲಿ ಬಂದು ೭

ವಚನ

ಬಂದವರಿಗಾದರವ ಚಂದದಿ ಮಾಡಿ ಮುಂದಕೆ
ಕರೆದು ಮುಕುಂದ
ತಾಮನದಿ ಹೀಗೆಂದು ಮಾತಾಡಿದನು ಬಂದ
ಕಾರಣ ಎನ್ನ ಬಾಂಧವರು
ನೀವು ಆನಂದ ಇಂದೆನಗೆ ಮುಂದೆ ಆಕಾಶ
ನೃಪ ನಂದನೆಯ ಪಾಣಿ

ವಿಧಿಯಿಂದ ಪಿಡಿಯಲುಬೇಕು ಎಂದು
ಮಾಡಿದೆ ನಾನು ಚಂದಾಗಿ ನಿಮ್ಮನಕೆ
ಬಂದರಿದು ಮಾಡುವೆನು ಎಂದು ಮಾತಿಗೆ
ಎಲ್ಲರಂದರ್ಹೀಗೆ ೧

ಉತ್ತಮವಾಯಿತು ಪರಮ ಉತ್ತಮೋತ್ಸವವಿದು
ಅಗತ್ಯ ನೀ ಮಾಡು
ಸರ್ವೋತ್ತಮನೆ ಸ್ವತ್ವರದಿ ಸತ್ಯವಿದು
ನೋಡುವುದು ಮತ್ತೆ ನಮಗ ಪರೂಪ
ನಿತ್ಯ ಉತ್ಸವ ನಿನಗೆ ನಿತ್ಯ ಮಂಗಳವೇ
ಸತ್ಯದಿಂದಲೀ ಪರಿಯ ಉತ್ತರವ
ಕೇಳಿ ಪ್ರತ್ಯುತ್ತರವ ನುಡಿದ ಹರಿ
ಉತ್ತಮಾಯಿತು ನಿಮ್ಮ ಚಿತ್ತಕೆ ಬಂದ
ಮೇಲ್ಮತ್ತಿನ್ನು ತಡವೇಕೆ ಹೊತ್ತುಗಳೆಯದಲೆ
ಈ ಹೊತ್ತು ನಿರ್ಮಿಸಿರಿನ್ನು
ಉತ್ತಮೋತ್ತಮ ಸಭೆಯ ಕ್ಲಪ್ತದಿಂದಿರಲಿ
ಮೂವತ್ತುಗಾವುದವು ೨

ಶ್ರೀಶನಪ್ಪಣಗೆ ಆಲಸ್ಯವನು ಮಾಡದಲ್ಲೆ
ಆಸಮಯದಲಿ ಅಲ್ಲಿಭಾಸುರ
ವಾಗಿರುವಂಥ ಸಭಾ ನಿರ್ಮಿಸಿದ
ವಿಶ್ವಕರ್ಮನು ತಾನು
ವಿಶ್ವವ್ಯಾಪಕನಲ್ಲಿ ವಿಶ್ವಾಸದಿಂದ ಆ
ಸಮಯದಲಿ ಶ್ರೀನಿವಾಸನಾಡಿದನು
ಅವಗೆ ಈ ಸಮಯದಲಿ ಆಕಾಶಪುರಕ್ಹೋಗಿ
ನೀ ಈ ಸಭೆಯ ಗಿಂತಧಿಕ
ಆ ಸಭಾ ನಿರ್ಮಾಣ ಬೇಸರಿಲ್ಲದೆ ಮಾಡು ಲೇಸಾಗಿ ೩

ಇಂದಿರಾಪತಿಯು ಹೀಗೆಂದು ಪೇಳ್ಯಾವನ
ಮೇಲಿಂದ್ರನ ಕಳುಹಿದನು

ಚಂದಾಗಿ ನೀನು ಅವನಿಂದ ಈ ಕಾರ್ಯ
ತ್ವರದಿಂದ ಮಾಡಿಸು ಎಂದು
ಮುಂದೆ ದೇವೇಂದ್ರ ಹರಿ ಅಂದ್ಹಾಗೆ
ಮಾಡಿದನು ಒಂದೂ ಬಿಡದೆ
ಮುಂದಷ್ಟವರ್ಗ ವಿಧಿಯಿಂದ ಮಾಡಲುಬೇಕು
ಎಂದು ಮಾತಾಡಿ ಗೋವಿಂ
ದ ತಾ ಬಹು ವಿನಯದಿಂದ ತನ್ನ ಕಾರ್ಯಕ್ಕೆ
ಮುಂದೆ ಒಬ್ಬೊಬ್ಬರಿಗೆ
ಒಂದೊಂದು ನೇಮಿಸಿದ ಚಂದಾಗಿ ೪

ಸ್ಪಷ್ಟನುಡಿದನು ಹರಿ ವಸಿಷ್ಠಮುನಿ ನಿನ್ನದು
ವಿಶಿಷ್ಠ ಪೌರೋಹತ್ಯ
ಶ್ರೇಷ್ಠ ಷಣ್ಮುಖ ಕೇಳು ಅಷ್ಟೂರಿಗೆ ಸನ್ಮಾನಕೊಟ್ಟು
ಕರೆಕಳಿಸುವನಿಂದು
ವಿಶಿಷ್ಠ ಕಾರ್ಯವು ನಿಂದು
ಇಷ್ಟರೊಳಗೆ ದಿಟ್ಟ ಮನ್ಮಥ ಕೇಳು ಶಿಷ್ಟರನು
ಕಾಣುತಲೆ ವಿಶಿಷ್ಟ
ಪ್ರತ್ಯುತ್ಥಾನ ಕೊಟ್ಟು ಮೇಲಕ್ಕೆ ಕರೆ
ತುಷ್ಟನಾಗ್ಯವರಿಗೆ ಥಟ್ಟನೆ ಆಸ
ನವನು ಕೊಟ್ಟು ಕೂಡಿಸುವ ನೀನು ಶ್ರೇಷ್ಠ ಶಂಕರನೇ ೫

ಕಿನ್ನರೇಶನೆ ಕೇಳು ಮುನ್ನ ಸತ್ಪಾತ್ರರಿಗೆ ಚನ್ನಾಗಿ
ಕೊಡುವಂಥ ಎನ್ನ
ಧನವಸ್ತ್ರಗಳು ನಿನ್ನ ಸ್ವಾಧೀನ ತಿಳಿ ಇನ್ನು
ಚಂದ್ರಮನೆ ಕೇಳ್ಹನ್ನ ತರ
ದೀವಟಿಗೆ ಚನ್ನಾಗಿ ಪಿಡಿವದಕೆ ಚನ್ನಿಗನು
ನೀನು ಅನ್ನಾದಿ ಪಾಕ
ವಿದು ವಹ್ನಿ ನಿನ್ನ ಕೂಡಿದುದು ಘನ್ನ
ವರುಣನೆ ನೀನು ನೀರು ನಿನ್ನ

ಕೂಡಿಹದು ತಿಳಿ ಮುನ್ನ ವಸುಗಳಿರಾ
ನಿಮ್ಮದು ಕೂಡಿರುವವು ಅನ್ನಾದಿ
ಭಾಂಡಗಳ ಚನ್ನಾಗಿ ತೊಳೆಯುವುದು
ಘನ್ನಗ್ರಹಗಳಿರಾ ನಿಮ್ಮನು ಕೂಡಿಹುದು
ದೊನ್ನೆ ಪತ್ರಾವಳಿಯು ಚನ್ನಾಗಿ ೬

ದುಷ್ಟರಿಗೆ ದಂಡತನವು ಶಿಷ್ಟರಿಗೆ ಸನ್ಮಾನ
ಬಿಟ್ಟು ಬಿಡದಲೆ ಮಾಡು
ಇಷ್ಟು ನಿನ್ನದು ಯಮನೇ ಘಟ್ಟಿ ನೀ ಇದರಲ್ಲೆ
ಇಷ್ಟೆಲ್ಲ ಮಾಡಿಸುವಿ
ಶಿಷ್ಟಯಜಮಾನ ಪರಮೇಷ್ಠಿ ನೀನು
ಇಷ್ಟು ಈ ಪರಿ ಪೇಳಿ ಇಷ್ಟ
ದಾಯಕ ಹರಿಯು ಶಿಷ್ಟ ಕಾರ್ಯವ ಮತ್ತೆ
ಅಷ್ಟೂರಿಗೆ ಪೇಳಿದನು
ಥಟ್ಟನೆ ಮುಂದವರು ಕಟ್ಟಿ ಟೊಂಕವು
ತಮಗೆ ಕೊಟ್ಟು ಕಾರ್ಯವ ಬಿಡದೆ
ದಿಟ್ಟಾಗಿ ಮಾಡುತಿರೆ ಬೆಟ್ಟದೊಡೆಯಗೆ
ನುಡಿದ ಸೃಷ್ಟಿ ಕರ್ತಾ ೭

ರಾಗ: ಕಾಪಿ ಅಟ್ಟತಾಳ

ಮಂಗಳ ಸ್ನಾನವ ಮಾಡೇಳೋ ಜಗ ಮಂಗಲದಾಯಕ
ಹರಿಯೇ ದಯಾಳೋ ಪ

ಸಣ್ಣ ನಾಮವ ಬರೆದಿಟ್ಟು ಬಹು ಬಣ್ಣದ
ಕುಂಕುಮ ಮಧ್ಯದಲ್ಲಿಟ್ಟು
ಸಣ್ಣಿಟ್ಟು ಕಸ್ತೂರಿ ಬೊಟ್ಟು ಮಾಡು ಪುಣ್ಯಾಹ
ವಾಚನವ ಪೀತಾಂಬರುಟ್ಟು ೧

ದೇವರಿಗೊಂದನೆ ಮಾಡು ಕುಲದೇವತೆ ಸ್ಥಾಪನೆ
ಮನೆಯಲಿ ಮಾಡು

ಕೇವಲ ಲೌಕಿಕ ನೋಡಿ ಭೂದೇವರಿಗೊಂದಿಸಿ
ವರಗಳ ಬೇಡು ೨

ನಾನಾದೇಶದಿ ಬಂದ ಜನರು ನಿನ್ನ
ಆನಂದೋತ್ಸವವಿದು ನೋಡೇವೆಂ
ಬುವರು ಸ್ನಾನಮಾಡಿಸುವ ಸೇವಕರು
ಅಚ್ಯುತಾನಂದ್ರೀಶನೆಸಿದ್ಧರಾಗಿಹರು ೩

ರಾಗ: ನೀಲಾಂಬರಿ ಅಟ್ಟತಾಳ

ಲೋಕನಾಯಕ ಸ್ವಾಮಿ ವ್ಯಾಕುಲನಾದನಾಗ ಲೋಕರೀತಿಯ
ತೋರಿದ ಶೋಕ ಮಾಡಿದ ೧

ಸಿರಿಯಿಲ್ಲದೆ ಈ ಸಭೆಯ ಸರಿಬಾರದಯ್ಯ ಬ್ರಹ್ಮಾಸರಸ
ತೋರದು ಕಣ್ಣಿಗೆ ಇರುವೋದು ಹ್ಯಾಗೆ ೨

ಸುರರು ನೀವೆಲ್ಲ ಇಲ್ಲೆ ನೆರೆದು ಕುಳಿತರೇನು ಬರೆ ಮನೆಯಂತೆ
ತೋರುವದು ಹರುಷವಾಗದು ೩

ಥಳಥಳಿಸುವ ತಾರೆಗಳು ಬಹಳಾದರಾಕಾಶಾ ಚಲುವ
ಚಂದ್ರಮ ನಿಲ್ಲದೆ ಶೋಭಿಸುವದೇ ೪

ಅನುದಿನಾನಂತಾದ್ರಿಯೋಳು ನೆನವು
ಮಾಡುವೆನವಳಾ ಮನೆಯು ಎಂಬುವ
ದೊಲ್ಲದು ಮನಸು ನಿಲ್ಲದು ೫

ವಚನ

ಹರಿಯ ಶೋಕವಕೇಳಿ ಹರನುಡಿದ ನೀ
ಪರಿಯ ಹರಿಯೆ ಇದು ಏನು ಈ
ಪರಿ ವಿಡಂಬನದಿಂದ ಬರಿದೆ ಶೋಕವುಯಾಕೆ
ಸಿರಿದೇವಿಯೆಂಬವಳು

ಪರಮ ಚಂಚಲಳಾಕೆ ಇರುವಳಲ್ಲೊಂದು ಕಡೆ
ಸ್ಮರಿಸುವ್ಯಾಕವಳ ನೀ ಸ್ವರಮಣ
ನಲ್ಲೇನೋ ಬರುವಳಿನ್ನೊಬ್ಬಳತಿ ಹರುಷ
ಕೊಡುವಂಥ ನಿನ್ನರಸಿ ಪದ್ಮಾವತಿಯು
ಸರಸಾಗಿ ಕೂಡ್ಯವಳ ಹರುಷದಿಂದಿರು
ಎನಲು ಹರಿಯು ತಾ ಮನದಲ್ಲಿ
ವರಮಹಾಲಕ್ಷ್ಮಿಯಳ ಮರೆಯದಲೆ ಮತ್ತೆ
ಈ ಪರಿ ನುಡಿದನಾಗ ೧

ರಾಗ: ನೀಲಾಂಬರಿ ಅಟ್ಟತಾಳ

ಇರಲಾರೆನಾಕೆಯ ಹೊರತು ಇರಲಾರೆ
ಆಕೆಯ ಹೊರತು ಯಾಕಿನ್ನುಸ್ಸುರತು
ಲೋಕಸುಂದರಿಯಳ ಮರೆತು ಮರೆತು ಪ

ಕಡೆ ಪ್ರಳಯದಲಿ ಕಡು ಹರುಷದಲಿ ಬಿಡದೆ ಇರುವಳೆನ್ನ
ಬದಿಲೆಬದಿಲೆ ೧

ಕರವೀರದಲ್ಲೆ ಇರುವಳಲ್ಲೆ ಬರುವಳಿನ್ಯ್ಯಾಂಗಿಲ್ಲೆ ಇಲ್ಲೆ ೨

ಇಂದಿಗನಂತಾದ್ರಿಯೊಳಗಂಥ ಸುಂದರಿ ಇದ್ದರೆ ಶಾಂತ ಶಾಂತ ೩

ವಚನ

ಹರನ ಮುಂದ್ಹರಿಯು ಈ ಪರಿ ಶೋಕವ
ಮಾಡಿ ತ್ವರದಿಂದ ಸೂರ್ಯನ
ಕರೆದು ಪೇಳಿದನಾಗ ಸಿರಿಯ ಹೊರತಿನ್ನು
ನಾ ಇರಲಾರೆ ಇರಲಾರೆ
ಕರಕೊಂಡು ಬಾ ನೀನು ಕರವೀರಕ್ಹೋಗಿ
ಪರಮ ಚಂಚಲಳಾಕೆ ಬರುವ

ಬಗೆ ಹ್ಯಾಗೆಂದು ಬರಿದೆ ಧ್ಯಾನಿಸಬೇಡ ಪರಮ
ಯುಕ್ತಿಯ ಕೇಳು ತ್ವರದಿ
ಪೋಗುತ ಪಾದಕೆರಗಿ ಎದುರಿಗೆ ನಿಂತು ಸುರಿಸಿ
ಕಣ್ಣೀರನು ಒರೆಸುತಲೆ
ನೀ ತೋರು ಪರಮ ದುಃಖವ ನಿನ್ನ
ತ್ವರದಿ ನೋಡುವಳಾಕೆ ಕರುಣದಿಂದ
ಲಿ ಮುಂದೆ ಕರೆದು ಕೇಳುವಳು ೧

ಏನಯ್ಯ ಸೂರ್ಯ ನಿನಗೇನು ಬಂತಿದು
ದುಃಖ ನೀನು ಇಲ್ಲಿಗೆ ಬಂದಿ
ಏನು ಕಾರಣ ಎನಲು ನೀನು ಮಾತಾಡದಕೆ
ಏನು ಪೇಳಲಿದೇವಿ ನಾನು
ಮುಂದಿನ್ನು ದೀನನಾಗಿ ಶ್ರೀನಿವಾಸನು
ಬಹಳ ಕ್ಷೀಣನಾಗಿರುವ
ಏನೇನು ಉಳಿದಿಲ್ಲ ತಿಳಿನೀನು
ನೋಡಿದರಂತು ಏನಂಬೆಯೋ
ಅವನ ಧ್ಯಾನ ಇನ್ನೊಂದಿಲ್ಲ ತಾ ನಿನ್ನ
ದಾವಾಗ ನೋಡೆನೆಂಬ ೨

ಚೆಂದಾಗಿ ನೀ ಹೀಗೆಂದು ಮಾತಾಡು ತ್ವರದಿಂದ
ಬರುವಳಾಕೆ ಸಂದೇಹ
ವಿಲ್ಲ ತಿಳಿ ಅಂದಮಾತಿಗೆ ಸೂರ್ಯ
ಮುಂದೆ ರಥದಲಿ ಕುಳಿತು
ಬಂದ ಕೊಲ್ಲಾಪುರಕೆ ಚಂದಾಗಿ ಮುಂದೆ ಹರಿ
ಅಂದ್ಹಾಗೆ ಮಾಡಿದನು
ಒಂದು ಬಿಡದೆ ಅಂದ ಕ್ಷಣಕೆ ತ್ವರದಿಂದ
ರಥವನು ಏರಿ ಇಂದಿರಾ
ದೇವಿ ಗೋವಿಂದನಾಲಯದಲಿ ಬಂದಿರುವ
ತನ್ನ ಆಸುಂದರಿಯ

ಸುದ್ದಿ ಕಿವಿಯಿಂದ ಕೇಳುತಲೆದ್ದು ಮುಂದಲ್ಲೆ
ನೋಡಬೇಕೆಂದು ಹರಿ ನಡೆದ ೩

ಚಂದಾಗಿ ಆ ಶತನಾಂದನ್ಹೆಗಲ ಮೇಲೊರು
ಕೈಯಿಟ್ಟು ಮತ್ತೊಂದು ಕೈ
ಹಾಕಿದನು ಚಂದ್ರಶೇಖರನಲ್ಲಿ ಒಂದೊಂದು
ಹೆಜ್ಜೆಯನು ಮುಂದಕೆ
ಸರಸಿಟ್ಟು ಮಂದ ಗತಿಯನು ತೋರಿ
ಮಂದಿಯನು ಮೋಹಿಸುತ ಬಂದ
ನೆದುರಿಗೆ ರೋಗದಿಂದಿರುವಂತೆ ಮುಂದೆದುರಿಗೀ–
ರೀತಿಯಿಂದ ಬರುತಿರುವ
ಗೋವಿಂದನ ಕಂಡು ತ್ವರದಿಂದ ರಥವನು
ಇಳಿದು ಇಂದಿರಾದೇವಿ ತಾ
ಮಂದಹಾಸದಿ ನಗುತ ಬಂದು ಆತನ
ಪಾದಕೊಂದಿಸುತ ಪರಮ ಆನಂದ
ದಿಂದಪ್ಪಿ ಬಹು ಚಂದ ತೋರಿದಳಾಗ ಇಂದ್ರನೀಲದ
ಮಣಿಗೆ ಕುಂದಣಿಟ್ಟಂತೆ ೪

ಪಟ್ಟದರಸಿಯ ಕೂಡಿ ಗಟ್ಟಿ ಆಲಿಂಗನದಿ
ಪುಷ್ಟನಾದನು ತಾನು ವಿಷ್ಟಸಶ್ರವ
ತಾನು ಘಟ್ಯವಳ ಕೈ ಹಿಡಿದು ಥಟ್ಟನೆ
ಕರಕೊಂಡು ಪಟ್ಟದಾಸನದಲ್ಲಿ
ದಿಟ್ಟಾಗಿ ಕುಳಿತ ಸ್ಪಷ್ಟ ನುಡಿದನು ತನ್ನ ಅಷ್ಟು
ವೃತ್ತಾಂತವನು ಬಿಟ್ಟು
ಬಿಡದಲೆ ಆಕೆ ಬಿಟ್ಟು ಹೋದಂಧ್ಧಿಡದು
ಅಷ್ಟು ಕೇಳತಲ್ಯವನ ದಿಟ್ಟಿಸಿ
ನೋಡುತಲೆ ದಿಟ್ಟ ಮಾತಾಡಿದಳು ದಿಟ್ಟತನದಿ ೫

ರಾಗ: ಸಾರಂಗ ಝಂಪೆತಾಳ

ಎಂಥಾ ನಡತೆ ನಿಂದು ನಾ ಪ್ರಾಂತಗಾಣೆನಿಂದು
ಹರಿ ಎಂಥಾ ನಡತೆ ನಿಂದು ಪ

ಎಂಥಾ ನಡತೆ ಕಾಂತಾ ನಿನ್ನಂಥ
ಕಪಟವಂತರಿಲ್ಲ ಅಂತರಂಗದಿ ಚಿಂತಿಸಿದರೆ
ಎಂಥವರಿಗು ಅಂತತಿಳಿಯದು ಅ.ಪ

ಎನ್ನ ಬಿಟ್ಟು ಅನ್ಯಳಲ್ಲಿ ನಿನ್ನ ಚಿತ್ತವನ್ನು ಇಟ್ಟು
ಮುನ್ನ ಲಜ್ಜೆಯನ್ನು ಬಿಟ್ಟು
ಎನ್ನ ಕರೆವುದಿನ್ನು ಯಾಕೆ ೧

ಹರಿಯು ಬಹಳ ಸೊರಗಿ ಇರುವನೆಂಬ
ಪರಿಯ ತಿಳಿಸಿ ಕರೆಯೋಭಾಸ್ಕರನೆ
ಎಂದು ತ್ವರದಿ ಎನ್ನ ಕರೆಯ ಕಳಿಸಿದಿ ೨

ಪಟ್ಟದರಸಿ ಬಿಟ್ಟು ನಿಂತು ಬೆಟ್ಟದಲ್ಲಿ ಸ್ಪಷ್ಟ ನೀನು
ಇಷ್ಟು ಘಟ್ಟಿಮುಟ್ಟಿ ಇರಲು
ಎಷ್ಟು ಸುಳ್ಳು ಹುಟ್ಟಿಸಿದಿಯೊ ೩

ರಾಗ: ಭೈರವಿ ಆದಿತಾಳ

ಪಟ್ಟದರಸಿಯ ಮಾತಿಗಾಗಿ ಗೋವಿಂದ ಸ್ನೇಹಾ
ಇಟ್ಟು ಮಾತಾಡಿದ ಚಂದವಾಗಿ
ಸಿಟ್ಟುಮಾಡಬೇಡ ಪ್ರಾಣಕಾಂತೆ ನಾ ನಿನ್ನ ಕೊರಳ
ಮುಟ್ಟಿ ಹೇಳುವೆನು ಮನದಂತೆ ೧

ಹಿಂದಕ್ಕೆ ಆ ತ್ರೇತಾಯುಗದಲ್ಲೇ ನೀ ಅಂದ
ಮಾತು ಚಂದಾಗಿ ಸ್ಮರಿಸು

ಮನದಲ್ಲೆ ಸುಂದರಿ ಆ ವೇದವತಿ ಇಲ್ಲೆ
ಪದ್ಮಾವತಿಯಾಗಿ ಬಂದಿಹಳು
ಕಲಿಯುಗದೊಳು ೨

ಪ್ರೌಢೆ ಕೇಳು ನಿನ್ನ ಮಾತಿನಿಂದೆ ಅವಳ
ಮದುವೆ ಮಾಡಿಕೊಂಬೆ ನಿನ್ನ ಸಾಕ್ಷಿ
ಮುಂದೆ ರೂಢಿಯಲಿ ಬರುವಳಲ್ಲವೆಂದು ತಿಳಿದು
ಸುಳ್ಳಾಡಿ ಕರೆಕಳಿಸಿದೆನೆಂದು ೩

ಆಡಿದ ಮಾತಿಗೆ ಹರುಷ ಬಟ್ಟು ಲಕುಮಿ
ಮಾತಾಡಿದಳು ಮತ್ಸರವ ಬಿಟ್ಟು
ಮಾಡಿಕೊ ಮದುವೆ ಬೇಗಿನ್ನು ಗೋವಿಂದ ತಡಮಾಡದೆ
ಉದ್ಯೋಗ ಮಾಡು ಮುನ್ನ ೪

ಎನ್ನ ಮಾತು ಸತ್ಯಮಾಡು ಎನ್ನ
ಚನ್ನಲಕುಮಿ ಅವನ ಬಣ್ಣಿಸಿ ಕೈಪಿಡಿದಳು
ಒಂದು ಚನ್ನಾಗಿ ಅನಂತಗಿರಿಯಲ್ಲೆ ಇಬ್ಬರಿಗೆ ಹಾಲು ಹಣ್ಣು
ಕೂಡಿದಂತಾಯಿತು ಅಲ್ಲೆ ೫

ವಚನ

ಎಂಟುಮದ ಬಿಟ್ಟು ಎನ್ನ ಕಂಠದಿಂದ್ಹೊರಟ
ವೈಕುಂಠಪತಿ ಲೀಲೆ ಇದು
ಕುಂಠಿತವಾಗದಲೆ ಉತ್ಕಂಠದಲೆ ಕೇಳಿದರೆ
ಕಂಟಕವು ತೆಗೆದು ಉತ್ಕಂಠ
ದಿಂದಲೇ ಹೊರಟು ಬರವಳು ಲಕುಮಿ
ಗಂಟು ಪದರಲ್ಲೆ ಎಂಟು ಐಶ್ವರ್ಯ
ಗಳು ಉಂಟನಂತಾದ್ರಿಯಲಿ ಹೊಂಟು
ಬಂದಿಲ್ಲೆ ನೂರೆಂಟು ವಿಘ್ನಗಳೆಂಬ

ಕಂಟಕವು ಹರಿಸಿ ಎನ್ನ ಕಂಠದಲಿ
ನಿಂತು ವೈಕುಂಠಪತಿ
ಮುಗಿಸಿದಿಲ್ಲೆಂಟು ಅಧ್ಯಾಯ ೧

ಅಧ್ಯಾಯ ಒಂಬತ್ತು

ಶ್ರೀ ವಾಣೀಭಾರತೀ ಗೌರೀ ಶಚೀಭಿಃಸ್ನಾಪಿತೋಽವತಾತ್।
ಕುಬೇರಾಲ್ಲಬ್ಧ ವಿತ್ತೋರ್ಚನ್ ವಿಪ್ರಾನ್ ಲಕ್ಷ್ಮೀಪ್ರಿಯಂಶರಃ॥

ವಚನ

ಸಿರಿಸಹಿತನಾಗಿರವ ಹರಿಯ ಆಜ್ಞೆಯ ಕೊಂಡು
ಪರಮೇಷ್ಠಿ ಮಾಡಿದನು
ಪರಮಾಷ್ಠ ವರ್ಗಕೆ ತ್ವರದಿ ಮುಂದುದ್ಯೋಗ
ಸರಸ್ವತಿಯು ಮೊದಲಾದ
ಸರಸಿಜಾಕ್ಷಿಯರೆಲ್ಲ ಸರಸಾಗಿ ಬೇಗ
ಶೃಂಗರಿಸಿಕೊಂಡರು ತಾವು
ಗಿರಿಜೆಯಾದಳು ಆಗವರ ಕಳಸಗಿತ್ತಿ ತಾ
ವರನಾಗಿ ಶೋಭಿಸಿದ ವರ
ವೇಂಕಟೇಶ ಹರದೆಯರು ಮುಂದಾಗ
ಹರುಷದಲಿ ನಾಲ್ಕು
ಕಡೆ ವರಸುವರ್ಣದ ಪೂರ್ಣ
ವರಕಲಶಗಳನಿಟ್ಟು ವರ ರತ್ನ
ಪೀಠವನ್ನು ತರಿಸಿ ಮಧ್ಯದಲ್ಲಿಟ್ಟು
ಸುರಗಿಯನು ಸುತ್ತಿ ಶ್ರೀಹರಿಗೆ
ಮಾತಾಡಿದಳು ಸುರಗಿಯಲಿ ಕೂಡೇಳೊ
ಸುರರೊಡೆಯ ಬೇಗಿನ್ನು
ತ್ವರದಿ ಮಜ್ಜನ ಮಾಡು ಹರಿಯೆ ನೀನು ೧

ರಾಗ: ನೀಲಾಂಬರಿ ಆದಿತಾಳ

ಇಂದು ಮುಖಿಯರ ಮಾತು ಇಂದಿರೇಶನು
ಕೇಳೀ ಕಂದಗಂದನು ಶೋಕ
ದಲಿ ನೊಂದು ಮನದಲಿ ೧

ಸರಸಸಂಪಿಗೆ ಎಣ್ಣೆ ಎರೆದು ಪೂಸುವದಕ್ಕೆ
ಹಿರಿಯರೆಂಬವರಾರೆನಗೆ
ಹರುಸವರಾರಿಲ್ಲ ಅಕ್ಕರವಿಲ್ಲಾ ೨

ಅಕ್ಕರದಿಂದ ಪೂಸೆ ಹಿಕ್ಕಿ ಎರೆಯುವದಕ್ಕೆ
ಅಕ್ಕ ತಂಗಿಯರಾರಿಲ್ಲ ಅಕ್ಕರವಿಲ್ಲಾ ೩

ಪಡೆದ ತಾಯಿಯು ಇಲ್ಲ ಒಡಹುಟ್ಟಿದವರಿಲ್ಲ
ಬಿಡದ ಕರ್ಮಕ್ಕೆ
ಮಾಡುವದು ಬಿಡುವದೆ ಇದು ೪

ಚಂದದನಂತಾದ್ರಿಯೊಳು ಚಂದಲ್ಲ ಈ ಉತ್ಸವ
ತಂದೆ ತಾಯಿಗಳಿಲ್ಲದೆ
ನೊಂದು ಬಳಲಿದೆ ೫

ವಚನ

ಇಂದಿರೇಶನ ಮಾತಿಗೆಂದನೀ ಪರಿಬ್ರಹ್ಮ
ಎಂದಿಗಾದರು ನಿನಗೆ ತಂದೆ
ತಾಯಿಗಳಿಲ್ಲ ಮುಂದೆ ಒಡಹುಟ್ಟಿದವರಿಂದೆಲ್ಲಿ
ಬರುವರು ಮಂದಿ
ಯನು ಮೋಹಿಸುವ ಸಂದೇಹ
ಚಂದೇನೊ ನಿನಗೆ ಇದು
ಇಂದಿರಾಕ್ಕೈಯಿಂದ ನಿ ಪೂಸಿಕೊ ಚಂದವಾಗಿ
ಎಂದಿಗಗಲದೆ ನಿನ್ನ

ಹೊಂದಿರುವಳೀಕೆ ಇವಳಿಂದಧಿಕ ಮತ್ತಿಲ್ಲ
ಸಂದೇಹವ್ಯಾಕೆ
ಎಂತೆಂದ ಮಾತಿಗೆ ಹರಿಯು ಮಂದಹಾಸದಿ
ನಗುತ ಮುಂದಿರುವ ತನ್ನ
ಆ ಸುಂದರಿಯ ಮುಖವನು ಚಂದಾಗಿ ಕಡೆ
ನೋಟದಿಂದ ನೋಡಿದನು ೧

ಹರಿಯ ಮನಸಿನ ಭಾವ ಸಿರಿದೇವಿ ತಾ
ತಿಳಿದು ತರಸಿದಳು ತೈಲವನು
ವರ ರುಕ್ಮ ಪಾತ್ರದಲಿ ಹರಿಯು
ಹರುಷದಲೆದ್ದು ತಿಳಿದು ತ್ವರದಿ
ಋಷಿಗಳ ಪಾದಕೆರಗಿ ಆಜ್ಞೆಯನು ಕೊಂಡು
ವರರತ್ನ ಪೀಠದಲ್ಲಿ
ಸರಸಾಗಿ ಕುಳಿತ ಹರದೆಯರ ಒಡಗೂಡಿ
ಹರಿಣಾಕ್ಷಿ ತಾ ಬಂದು
ಹರಿಯ ಕೇಶಗಳನ್ನು ಹರಿವಿಬಹು ಸ್ನೇಹದಲಿ
ಸರಸಾದಸಂಪಿಗೆಯ
ವರ ತೈಲಧಾರೆಯನು ಹರುಷದಿಂದಲೆ ಎರೆದು
ಹರಸಿದಳು ಹೀಗೆ ೨

ಖಂಡವಿರಹಿತ ಅಖಂಡ ಮಹದೈಶ್ವರ್ಯ
ಮಂಡಿತನೆ ಭಕ್ತರಿಗುದ್ದಂಡ
ಆಯುಷ್ಯಕೊಡು ಪುಂಡರೀಕಾಕ್ಷನೆ ಅಖಂಡ
ವರ ಸಂತತಿ ಉದ್ದಂಡ
ಸಂಪತ್ತು ಮನಗಂಡು ನೀ ಕೊಟ್ಟು ಬ್ರಹ್ಮಾಂಡ
ನಾಯಕನೆ ಭೂಮಂಡ
ಲಾಧಿಪನೆ ತಂಡತಂಡದ ಜನರು ಕಂಡು
ಕೂಡಿಕೊಂಡು ನಿನ್ನ ಈ

ಪರಿಯ ಹರಸುತಲೆ ತಾ ಪೂಸಿ ಅರಿಸಿನದಿ
ಲೇಪಿಸಿದಳಾ ಜಗದ್ವಾಪಕನ
ಮೈಯೆಲ್ಲ ರೂಪವತಿಯರ ಕೂಡಿ ಶ್ರೀಪತಿಗೆ
ಎರೆವಳು ತಾಪಿತೋ
ದಕದಿ ಸಂತಾಪ ಹಾರಕಳು ೩

ಮಂದಗಮನೆಯರಿಂದ ತಂದಿತ್ತ ಕಸ್ತೂರಿ
ಗಂಧಪರಿಮಳದಿಂದ ಚಂದಾಗಿ
ಮೈಗೊರಸಿ ಮುಂದಕ್ಕೆ ಎರೆಯು ತಿರೆ
ತಂದಳಾರತಿದೇವಿ ಚಂದದಾರತಿ
ಆಗ ಇಂದಿರಾದೇವಿ ಅವರಿಂದ
ಒಡಗೂಡಿ ಮುಕುಂದನ ಫಣೆಗೆ
ಮುದದಿಂದ ಕುಂಕುಮ ವಿಟ್ಟು ಮುಂದೆ
ಆರತಿ ಬೆಳಗಿ ಮುಂದೆ ಮತ್ತೆರ
ದು ತ್ವರದಿಂದ ಹರಸಿದಳಾಗ ಹಿಂದಿನ್ಹಾಂಗೆ
ಸುಂದರಾಂಗಿಯು ತನ್ನ
ಚಂದಾದ ಮೂಗುತಿಯನು ಮುಂದುಚ್ಚಿ
ಹರಿವಾಣದ್ಧಿಂದಿಟ್ಟು ಎತ್ತಿ
ಗೋವಿಂದನ ಮೇಲ್ಹಿಡಿದು ಚಂದಚಂದದ
ಕಲಶವೃಂದದಿಂದೋ ಕುಳಿಯ
ಚಂದಾಗಿ ಎರೆವಳಾನಂದದಲ್ಲಿ ಸುಂದರಿಯರಿಂದ ಕೂಡಿ ೪

ಚಿತ್ತ ಸಂಭ್ರಮದಿ ಸಾವಿತ್ರಿ ತಂದಿತ್ತವರ ವಸ್ತ್ರದಿಂದಲಿ
ಮೈವರಿಸಿ ಸುತ್ತ
ಜರತಾರಿಯಿಂದತ್ಯಂತ ಶೋಭಿಸುವ
ವಸ್ತ್ರ ಪೀತಾಂಬರವ
ಮತ್ತೆ ಉಪವಸ್ತ್ರವನು ಹಸ್ತದಲ್ಲಿ ಕೊಟ್ಟು
ಬಹುಭಕ್ತಿಯಲಿ ಗಿರಿಜೆ
ತಂದಿತ್ತ ಧೂಪದ ಹೊಗೆಯ ಯುಕ್ತಿಯಿಂದ್ಹಾಕಿದಳು
ಸುತ್ತ ಕೇಶಗಳೆಲ್ಲ

ಮತ್ತೆ ಅವುಗಳನೆಲ್ಲ ಸುತ್ತಿ ಕಟ್ಟಿದಳು ಭಕ್ತವತ್ಸಲ
ತನ್ನ ಪುತ್ರಿ ಭಾಗೀ
ರಥಿಯು ಭಕ್ತಿಯಿಂದ ತಂದಿತ್ತ ರತ್ನದ್ಹಾವಿಗೆ
ಮೆಟ್ಟಿ ಪತ್ನಿಯಳ
ಕೈ ಪಿಡಿದು ಹಸ್ತಲಾಘವದಿಂದ ಹತ್ತು ಹೆಜ್ಜೆಯ ನಡೆದು
ಉತ್ತಮಾಸನದಲ್ಲಿ ಹತ್ತಿಕುಳಿತ ೫

ರಾಗ: ನೀಲಾಂಬರಿ ಆದಿತಾಳ

ಎಲ್ಲರು ಬಂದರು ಬಹು ಉಲ್ಹಾಸದಿಂದಲ್ಲೆ ಅವನ ಚಲ್ವಿಕೆಯ
ನೋಡುತಲೆ ಅಲ್ಲೆ ಕುಳಿತರು ೧

ಕಂದರ್ಪನ ರಾಣಿ ಮತ್ತೆ ಇಂದ್ರನ ರಾಣಿ ಇಬ್ಬರು
ಚಂದದ ಚಾಮರಗಳ ಪಿಡಿದರು ೨

ಭಕ್ತಿಯಿಂದ ಭಾರತಿದೇವಿ ಛತ್ರವ ಪಿಡಿದಳು ಸಾವಿತ್ರಿತಂದು
ಕೊಟ್ಟಳು ವಿಚಿತ್ರದ ಕನ್ನಡಿ ೩

ಕನ್ನಡಿಯ ನೋಡಿಕೊಂಡು ಸಣ್ಣನಾಮವನ್ನು ಹಣೆಗೆ
ಚೆನ್ನಾಗಿ ಹಚ್ಚಿಕೊಂಡ ಚನ್ನಿಗ ತಾನು ೪

ಬದಿಯಲ್ಲಿದ್ದ ಬಕುಲಾವತಿಯು
ಮುದದಿಂದ್ಹೀಗೆಂದಳು ಸೊಸೆಗೆ
ಮುದು ಮಗನಿಗೆ ಕುಂಕುಮ ಹಚ್ಚು ಮದಗಜಗಮನೆ ೫

ಸಿದ್ಧಾಗಿ ಲಕುಮಿ ತಾನು ಎದ್ದು ಪ್ರಾಣಪತಿಯ
ಫಣೆಗೆ ತಿದ್ದಿ ಕುಂಕುಮ
ವನ್ನಿಟ್ಟಳು ಮುದ್ದು ಸುರಿಯುತ ೬

ಮುಂದಲ್ಲೆ ಕುಬೇರಕೊಟ್ಟ ಚಂದದಾಭರಣಗಳಿಟ್ಟು ಸಂಧ್ಯಾನು–
ಷ್ಠಾನವ ವಿಧಿಯಿಂದ ಮಾಡಿದ ೭

ಮನ್ನಿಸಿ ಮುನಿಗಳಿಗೆ ನತಿಸಿ ಪುಣ್ಯದಾ ತಾಯಿಗೆ ನತಿಸಿ
ಪುಣ್ಯಾಹ ವಾಚನಕೆ ಕುಳಿತಾ ಪುಣ್ಯಾತ್ಮನು ತಾನು ೮

ತಡಮಾಡದೆ ಬಂದು ಅವನ ಮಡದಿ ಮಹಾಲಕುಮಿಯು
ಒಡಗೂಡಿ ಕುಳಿತಳಲ್ಲೆ ಸಡಗರದಿಂದ ೯

ಮತ್ತಲ್ಲೆ ವಶಿಷ್ಠ ಮುನಿಯು ಮುತ್ತಿನ ರಾಸಿಗಳಿಂದ ಉತ್ತಮ–
ಗದ್ದಿಗೆಯ ಬರೆದ ಕ್ಲಪ್ತದಿಂದಲಿ ೧೦

ಮಧುಸೂದನ ಕೈಯಿಂದಲ್ಲೆ ಮುದದಿ ಪುಣ್ಯಾಹವಾಚನ
ವಿಧಿಯಿಂದ ಮಾಡಿಸಿದನು ವಿಧಿಸುತ ತಾನು ೧೧

ಆ ಬ್ರಹ್ಮ ಸಮುದಾಯಕ್ಕೆಲ್ಲ ತಾಂಬೂಲ ದಕ್ಷಿಣೆಗಳು
ಸಂಭ್ರಮದಿಂದಲ್ಲೆ ಕೊಟ್ಟ ತಾ ಬ್ರಹ್ಮದೇವ ೧೨

ದೇವತೆಗಳೆಲ್ಲ ಸ್ನೇಹಭಾವದಿಂದ ವಸ್ತ್ರಗಳ
ದೇವಾಧಿದೇವಗೆ ಕೊಟ್ಟರಾ ವೇಳೆಯಲ್ಲಿ ೧೩

ಮುತ್ತಿನ ಆರತಿ ತಂದು ಅರ್ತಿಯಿಂದ ಬೆಳಗಿದರು
ಮುತ್ತಿನ ಅಕ್ಷತೆ ಇಟ್ಟು ಮುತ್ತೈದೆರಲ್ಲೆ ೧೪

ಕಲಭಾಷಣದಿಂದಲ್ಲೆ ಹರಿಗೆ ಕುಲಪುರೋಹಿತ
ನುಡಿದ ಕುಲದೇವಿ ಯಾವಕೆ ನಿನಗೆ ಶ್ರೀನಾಥಪೇಳೋ ೧೫

ಹಲವು ಕಾಲದಲ್ಲಿ ಎನ್ನ ಕುಲಪುರೋಹಿತನಾದ ಮೇಲೆ
ಕುಲದೇವಿ ಯಾವಕೆ ಅರಿಯೆ ಮುನಿನಾಥ ನೀನು ೧೬

ಚಲುವ ಚನ್ನಿಗನೆ ನಿನಗೆ ಕುಲಗೋತ್ರಗಳಿದ್ದರೆ ನಾನು
ಕುಲಪುರೋಹಿತ ನೆನಿಸುವೆನೊ ಶ್ರೀನಾಥನಿನಗೆ ೧೭

ಫಲಕಾಲದಲ್ಲೀಗ ನೀನು ಕುಲಗೋತ್ರ ತೆಗೆಯಲು ಬೇಡ
ಕುಲದೇವಿ ಎನಗೆ ಉಂಟು ಮುನಿನಾಥ ಕೇಳೊ ೧೮

ಯಾವಕೆ ನಿನಗೆ ಕುಲದೇವಿಯೆನಿಸುವಳು ಮುಖ್ಯ
ಯಾವರೂಪ ದಿಂದೆಸೆವಳು ಶ್ರೀನಾಥ ಪೇಳೊ ೧೯

ಶಮಿಯೆಂದು ಕರಿಸುವಳಾಕೆ ಪ್ರಮಿತ
ವೃಕ್ಷರೂಪದಿಂದ ಅಮಿತಾದ
ಫಲಕೊಡುವಳಯ್ಯ ಮುನಿನಾಥ ಕೇಳೊ ೨೦

ಎಲ್ಲರಿಗೆ ಬೇಕಾದಂಥ ಬಲ್ಲಿದ ಶಮಿಯೆಂಬೋ
ವೃಕ್ಷ ಎಲ್ಲಿ ಇರು
ತಿಹುದು ಪೇಳೋ ಶ್ರೀನಾಥ ನೀನು ೨೧

ಇಲ್ಲೆ ಈ ಉತ್ತರ ದಿಕ್ಕಿನಲ್ಲಿ ಕೌಮಾರೆಂಬೋ ತೀರ್ಥದಲ್ಲೆ
ಇರುತಿಹುದು ವೃಕ್ಷ ಮುನಿನಾಥ ಕೇಳೊ ೨೨

ವರದಾನಂತಾದ್ರೀಶತಾ ಈ ಪರಿಯೆಂದು ಪರಿವಾರ
ಸಹಿತ ತ್ವರದಿ ನಡೆದ ಕುಲದೇವಿಯ ಕರೆವುದಕೆ ೨೩

ವಚನ

ಕಮಲನಾಭನು ಬಂದ ಶಮಿಯ ಸನ್ನಿಧಿಯಲ್ಲಿ
ಕ್ರಮದಿಂದ ಪೂಜಿಸುತ
ನಮಿಸಿ ವರ ಬೇಡಿದನು ಶಮಿಯೇ ನೀ
ದಯಮಾಡು ನಮಗೆ ಕುಲ
ದೇವತೆ ಅಮಿತ ವಿಘ್ನವ ಹರಿಸಿ ಪ್ರಮಿತ
ಕಾರ್ಯವನು ಕ್ರಮ

ದಿಂದ ನಿನ್ನ ಪರಾಕ್ರಮವ ಬಲ್ಲೆನುಯ
'ಶಮಿಶಮಮೇ' ಎಂತೆಂಬ
ವಿಮಲೋಕ್ತಿಯಿಂದಾ ಬೇಡುತೀ ಪರಿಸ್ತುತಿ
ಮಾಡಿ ಕುಲದೇವತೆಯಾ
ಕೂಡಿ ನಡೆದನು ತಿರುಗಿ ಪ್ರೌಢವಾದ್ಯಗಳೆಲ್ಲ
ಮಾಡಿ ನುಡಿದವು ಆಗ
ಮಾಡಿ ಬಹು ಶಬ್ದವನು ನೋಡುವರ್ಗ್ಗರುಷ
ಸೂರಾಡುತಲೆ ಬಂದ
ಹರಿ ಕ್ರೋಡರೂಪಿಯ ಬದಿಲೆ
ಗಾಢನೆ ಸ್ನೇಹ ಸಂರೂಢನಾಗಿ ೧

ವರಹ ಮೂರುತಿ ಗಂದವರನಾದ ವೇಂಕಟನು
ವರಹದೇವನೆ ಎನ್ನವರ
ವಿವಾಹೋತ್ಸವಕೆ ತ್ವರಮಾಡಿ ಬರಬೇಕು
ಧರಣಿದೇವಿಯ ಕೂಡಿ
ಸರಸಾಗಿ ಎಲ್ಲರಿಗೆ ಹರಿಯೆ ನೀನು ಹರಿ ಅಂದಮಾತಿಗೆ ಆ
ವರಹದೇವನು ನುಡಿದ ಹರಿ ಎನ್ನ ಸ್ಥಳದಲ್ಲಿ
ಹಿರಿಯಳೆಂತೆಂದು ತಿಳಿ
ಪರಮ ಬಕುಲಾವತಿಯ ಹರುಷದಲೆ ಬಿಡು
ಎನ್ನ ಇರುವೆ ಕೃಷಿ
ಕಾರ್ಯದಲಿ ನಿರತನಾಗಿ ೨

ಎಲ್ಲ ಈ ಪರಿಕೇಳಿ ಫುಲ್ಲನಾಭನು ಅವನ ಒಲಿದಾಜ್ಞೆಯ
ಕೊಂಡು ಉಲ್ಲಾಸಬಟ್ಟು ಮನದಲ್ಲಿ ಕುಲದೇವತೆಯ ಅಲ್ಲಿ
ಸ್ಥಾಪನೆ ಮಾಡಿ ನಿಲ್ಲದಲೆ ಸ್ವಸ್ಥಾನದಲಿ ಬರುತಾ ರಮಾ
ವಲ್ಲಭನು ನುಡಿದನಾಗಲೆ ಈ ಪರಿಯು ಎಲ್ಲರ್‍ಗೊರಡಿರಿ
ಇನ್ನು ಸುಳ್ಳ್ಯಾಕೆ ತಡ ದೂರದಲ್ಲೆ ಇರುತಿಹದು ಬಲ್ಲಿ
ದಾಕಾಶಪುರ ಇಲ್ಲಿದ್ದ ಬಾಲಕರು ಎಲ್ಲ ವೃದ್ಧರು ಮತ್ತೆ
ಮೆಲ್ಲಗ್ಹೋಗಲಿ ಮುಂದೆ ನಿಲ್ಲದಲೆ ಸಾಗಿ ೩

ತನ್ನ ತಂದೆಯ ವಚನವನ್ನು ಕೇಳೀಪರೀ ಮುನ್ನ ನುಡಿ
ದನು ಬ್ರಹ್ಮ ಪುಣ್ಯಪುರುಷನೆ ಕೇಳು ಪುಣ್ಯಾಹ ವಾಚನವ
ಚೆನ್ನಾಗಿ ನೀ ಮಾಡಿ, ಮುನ್ನ ಆಕುಲದೇವಿಯನ್ನು
ಸ್ಥಾಪನೆಮಾಡಿ, ಉಣ್ಣದಲೆ ಪೋಗುವುದುಚಿತವಲ್ಲಾ
ಸಣ್ಣ ಬಾಲರು ಮತ್ತೆ ಹೆಣ್ಣು ಮಕ್ಕಳು ದೇಹಹಣ್ಣಾಗಿ
ಇರುವ ಬಹು ಪುಣ್ಯ ಶೀಲರು ಮತ್ತೆ ನೀನ್ನ ಕುಲ
ಬಾಂಧವರು ಮಾನ್ಯ ಮುನಿಗಳು ಎಲ್ಲ ಉಣ್ಣದಲೆ
ಹಸಿವೆಯಲ್ಲಿ ಬಣ್ಣಗೆಟ್ಟಿಹರು ೪

ತನ್ನ ತನಯನ ವಚನವನ್ನು ಕೇಳೀ ಪರಿಯಮುನ್ನ
ಶ್ರೀಹರಿನುಡಿದ ಎನ್ನ ಪುತ್ರನೆ ಕೇಳು ಎನ್ನ ಕಾರ್ಯಕೆ
ಸುಲಭವನು ಪೇಳುವರಿಲ್ಲ ನನ್ನ ಅನುಸಂಕುಟ
ನಾನು ಬಲ್ಲೆನೆ ಹೊರತು ನಿನ್ನ ಮುಂದಾಡಿದರೆ ಇನ್ನು
ಖರೆ ಕಾಂಬುವುದೆ ಚನ್ನವಾಗಿ ಮುನ್ನ ಈಜನರೆಲ್ಲ
ಅನ್ನ ಖರ್ಚಿಗೆ ಎನ್ನ ಹೊನ್ನು ಎಲ್ಲಿಹುದೇಳು, ಘನ್ನಾದ
ಬಡತನವನ್ನು ಭೋಗಿಸಿ ಬಿಡಿದೆ ಚೆನ್ನಾಗಿ ಬಹುಕಾಲ
ವನ್ನು ಕಳೆದೆನು ಇಲ್ಲೆ ಮುನ್ನ ನಾ ಸ್ವಲ್ಪ ಈಗಿನ್ನ
ಉಚ್ಚಯದಿ ಸಂಪನ್ನಾಗಿರುವೆನು ಎನ್ನ ನೋಡುವಿ
ಹ್ಯಾಗೆ ಕಣ್ಣಿನಿಂದ ೫

ಧ್ವನಿ: ಶಂಕರಾಭರಣ ಆದಿತಾಳ

ಬ್ರಹ್ಮದೇವನು ಪರ ಬ್ರಹ್ಮನ ಮಾತಿಗೆ
ಸುಮ್ಮನಾದನು ತಾ ಮಾತಾಡದಲೆ ೧

ಪಂಕಜ ಸಂಭವ ಶಂಕೆಯಿಂದಿರುತಿರೆ
ಶಂಕರ ನುಡಿದ ನಿಶ್ಯಂಕದಲೆ ೨

ಪೇಳುವೆ ನಾ ಒಂದು ಕೇಳಯ್ಯ ಕೇಶವ
ಬಾಲನ ಮೇಲೆ ಸಿಟ್ಟು ಮಾಡದಲೆ ೩

ಮಂದಿಯೊಳಗೆ ಇದು ಚಂದಲ್ಲ ನಿನ್ನ ಮಾತು
ಸಂದೇಹವ್ಯಾಕೆ ಸಾಲತೆಗೆ ನೀನು ೪

ಮದುವೆಯ ಕೆಲಸಕ್ಕೆ ಮನೆಯ ಕಟ್ಟುವುದಕ್ಕೆ
ಎದೆಗೊಟ್ಟು ಸಾಲವ ತೆಗೆಯುವುದು ೫

ಮೊಮ್ಮಗನ ಮಾತಿಗೆ ಸಂಭ್ರಮ ಬಡುತಲೆ
ಬ್ರಹ್ಮಯ್ಯನು ಏಕಾಂತಕೆ ನಡೆದಾ ೬

ಮಗನಿಂದ ಕೂಡಿ ಆಮಗನ ಮಗನಿಂದ ಕೂಡಿ
ಲಗುಬಗೆ ಕುಬೇರನ್ನ ಕರೆಸಿದನು ೭

ಬಂದ ಕುಬೇರಗೆ ಅಂದನು ಈ ಪರಿ
ಇಂದೆನಗೆ ಕೊಡುಸಾಲ ಧನಪತಿಯೆ ೮

ಸಾಲವೆಂಬುದೆಷ್ಟು ಮೇಲ್ಬಡ್ಡಿಯು ಎಷ್ಟು
ಪೇಳು ಎನಗೆ ನೀನು ಶ್ರೀಪತಿಯೇ ೯

ದೊಡ್ಡಸಾಲವು ನಿಧಿ ಬಡ್ಡಿ ಏಕೋತ್ತರ
ದುಡ್ಡಿಡದೆ ಮುಟ್ಟಿಸುವೆ ಧನಪತಿಯೆ ೧೦

ಕಡು ಭಕ್ತಿಯಿಂದಲ್ಲೆ ನಡೆವ ಭಕ್ತರು ಎನಗೆ
ಮುಡುಪು ಕೊಟ್ಟದ್ದ ಕೊಡುವೆ ಧನಪತಿಯೆ ೧೧

ಬದಲಿ ಬರದು ಕೊಡು ಇದರಂತೆ ಪತ್ರವ
ಚದುರ 'ಅನಂತಾದ್ರಿ' ರಮಣನೆ ೧೨

ವಚನ

ಧನಪತಿಯ ನುಡಿ ಕೇಳಿ ವನುಜನಾಭನು ಪತ್ರವನು
ಬರೆದ ಹೀಗೆಂದು ಎಣಿಸಿ ಇಪ್ಪತ್ತೆಂಟ್ಟು ಗಣಿತ

ಕಲಿಯುಗದಲ್ಲಿ ಋಣವಂತ ವೇಂಕಟನು ಧನವಂತ
ವೈಶ್ರವಣ ದಿನ ದಿನಕೆ ಅಧಿಕಾ
ಅಬ್ದದೊಳಗೆ ವಿಳಂಬಾಬ್ದದಲಿ ವೈಶಾಖ ಶುದ್ಧ ಸಪ್ತಮಿಯಲ್ಲಿ
ಶುದ್ಧ ಶುಭ ಕಾರ್ಯದಲ್ಲಿದ್ದ ವೇಂಕಟಕಪತಿಗೆ ವೃದ್ಧ
ವೈಶ್ರವಣ ಕೊಟ್ಟದ್ದು ಖರೆನಿಧಿ ದ್ರವ್ಯ ವೃದ್ಧಿ ಸಹಿತಾಗಿ
ಕೊಟ್ಟದ್ದು ಕೊಡುವುದು ಇದಕೆ ಪದ್ಮಜಾಸನ ಸಾಕ್ಷಿ ಸಿದ್ಧ
ರುದ್ರದೇವನು ಸಾಕ್ಷಿ ಸಿದ್ಧಾಗಿ ನಮ್ಮೆದುರಿದ್ದಂಥ ಅಶ್ವಥ
ವೃಕ್ಷನು ಸಾಕ್ಷಿ ಸಿದ್ಧ ನಿಶ್ಚಯ ೧

ಧ್ವನಿ

ಪಂಡಿತನು ಹೀಗೆ ಧನ ಮಂಡಿತಗೆ ಬರಕೊಟ್ಟು
ಖಂಡ ಮಾಡಿದ್ದು ಇಸಗೊಂಡು ಪ್ರಸ್ಥಕೆ ಮೂಲ
ತಂಡಲವು ಮೊದಲಾದ ತಂಡ ತಂಡವು ಎಲ್ಲ ಕೊಂಡು
ತರಿಸಿದ ತಾ ಉದ್ದಂಡವಾಗಿ ೧

ಕರಿಸಿ ಬೇಗಗ್ನಿಯನ್ನು ಸುರಿಸಿ ಅವನಲು ಸ್ನೇಹ
ಸುರಸಾದ ಪಾಕವನು ಸರಸಾಗಿ ಮಾಡೆಂದು
ಸರಸಿಜೋದ್ಭವ
ಪಿತನ ಸರಸಾದ ಮಾತಿಗನುಸರಿಸಿ ನುಡಿದನು
ಅಗ್ನಿ ಸರಸಾದ
ಪಾಕಕ್ಕೆ ಸರಸಾದ ಭಾಂಡಗಳು ಸರಸರನೆ ನೀ
ತರಿಸು ಸರಸಿಜಾಕ್ಷಾ ೨

ಅನ್ನಕೆ ಒಂದು ಪರಮಾನ್ನಕೆ ಮತ್ತೊಂದು ಇನ್ನೊಂದು
ಸೂಪಕ್ಕೆ ಮುನ್ನ ಮತ್ತೆಲ್ಲಕ್ಕು ಇನ್ನು ಬೇಕಾಗಿಹುವು
ನಿನ್ನಲ್ಲಿ ಒಂದಿಲ್ಲ ಇನ್ಯಾಗೆ ನಾ ಪಾಕವನು ಮಾಡಲಿ
ಕೇಳು ಚೆನ್ನವಾಗಿ ವಹ್ನಿ ವಚನವ ಕೇಳಿ ಮುನ್ನಶ್ರೀ

ಹರಿ ನುಡಿದ, ಚೆನ್ನಿಗನೆ ನಿಮ್ಮಲ್ಲಲ್ಲೆ ಘನ್ನಕಾರ್ಯವು
ಬರಲು ಅನ್ನಾಗಿ ಭಾಂಡಗಳು ಚೆನ್ನಾಗಿ ಬಹಳುಂಟು
ಎನ್ನ ಕಾರ್ಯಕೆ ನಿಮಗಿನ್ನು ಭಾಂಡಗಳಿಲ್ಲ ಅನ್ಯರಾದವರು
ನೀವಿನ್ನೇನು ಮಾಡೀರಿ ಎನ್ನದೈವಾ ೩

ಇಲ್ಲದ ಭಾಂಡ ಇನ್ನೆಲ್ಲಿ ಬರುವುದು ಕಂಠ ಎಲ್ಲ ಬಿಗಿದು
ಪರರಿಗೆ ಬಾಯತೆಗೆದು ಬೇಡುವದೇಕೆ ಇಲ್ಲಿ ಸ್ವಾಮಿ
ಪುಷ್ಕರಣಿಯಲಿ ನೀ ಮಾಡು ಅನ್ನವನು, ಪಾಪ–
ನಾಶಿನಿಯಲಿ, ಅಕಾಶಗಂಗೆಯಲಿ ಪಾಕಪಾರಮಾನನ್ನ
ತಿಳಿ, ತುಂಬುರತೀರ್ಥ ತುಂಬಿರಲಿ ತುಪ್ಪತಿಳಿ, ಪಂಡಿತನೆ
ಸಾರರಸ ಪಾಂಡು ತೀರ್ಥದಲಿರಲಿ
ಪಾಕ ಭಕ್ಷ್ಯಗಳೆಲ್ಲ ಪೂರೈಸು
ಸುಕುಮಾರ ಧಾರಿಕಾ ತೀರ್ಥದಲಿ ಉಳಿದ ತೀರ್ಥಗಳಲಿ
ಉಳಿದದ್ದು ಮಾಡು ೪

ಬುದ್ಧಿವಂತನು ಅಗ್ನಿ ಬುದ್ಧಿ ಪೂರ್ವಕದಿ ಹೇಳಿದ್ದರೀತಿಯಲಿ
ಸಿದ್ಧಮಾಡಿ ಅಡಿಗೆಯನ್ನುಸಿದ್ಧಾಗಿ ತಾನುಡಿದ ಪದ್ಮನಾಭನೆ ಪಾಕ
ಸಿದ್ಧವಾಯಿತು ಮುಂದೆ ಉದ್ಯೋಗ ಮಾಡ್ಯೇಳಿ
ಉದ್ಧವನ ಸಖನೇ
ಶ್ರೀಲಲಾಮನು ತಾನು ಕೇಳಿ ಈ ಪರಿಯು ಆಕಾಲದಲಿ
ಷಣ್ಮುಖಿಗೆ ಹೇಳಿ ಕರೆಕಳಿಸಿದ ಸುಶೀಲ ಬ್ರಾಹ್ಮಣರನೆಲ್ಲ
ಆಲಸ್ಯ ಬಿಟ್ಟು ತತ್ಕಾಲದಲೆ ಭೋಜನದ ಶಾಲೆಯಲ್ಲಿ
ಬಂದವರು ಸಾಲ್ಹಿಡಿದು ಕುಳಿತರು ವಿಶಾಲಾದ ಪಾಂಡುಸರ
ಮೂಲ್ಹಿಡಿದು ಮುಂದೆ ಶ್ರೀಶೈಲ ಪರ್ಯಂತ ೫

ಧ್ವನಿ: ದೇಶಿ ಅಟತಾಳ

ತಪ್ಪದೆ ತಾ ಶಿವನಪ್ಪಗೆ ನುಡಿದವನಪ್ಪ
ವೇಂಕಟ ರಾಯನು

ತಪ್ಪದೆ ದೇವರಿಗರ್ಪಣವು ಮಾಡು ನೀ
ವಪ್ಪಾಗಿ ನೈವೇದ್ಯವನು ೧

ದೇವನ ಮಾತಿಗೆ ಆ ವೇಳೆಯಲಿ ಬ್ರಹ್ಮದೇವ
ಹೀಗೆಂದನು ತಾನು
ಕೇವಲನಿನ್ನೊರತು ದೇವರೆಂಬುವರಾರು
ದೇವರದೇವ ನೀನು ೨

ಕಂದನ ಮಾತಿಗೆ ಅಂದನು ಶ್ರೀಹರಿ
ಮಂದಹಾಸದಿ ನಗುತ
ಚಂದಾಗಿ ಅರ್ಪಿಸು ಇಂದು ಅಹೋಬಲ-
ನೆಂದೆನಿಸುವ ದೇವಗೆ ೩

ಹರಿಯು ಹೇಳಿದ ರೀತಿ ಮರೆಯದೆ ಮಾಡಿ
ಭೂಸುರರಿಗರ್ಪಿಸಿದ ಬ್ರಹ್ಮ
ತರಿಸಿ ಬೇಗನೆ ವರ ಪತ್ರಾವಳಿಗಳ ಕರೆಸಿ ಆಗ್ರಹಗಳು ೪

ಥಟ್ಟನೆ ಬಂದವರಷ್ಟು ಪಾತ್ರಗಳನು ದಿಟ್ಟಾಗಿ ಹಾಕಿದರು
ಥಟ್ಟನೆ ಬಿಡಿಸಿದರಷ್ಟ ದಿಕ್ಪಾಲಕರಷ್ಟೂರು ಬಡಿಸಿದರು ೫

ಉಪ್ಪು ಮೊದಲು ಮಾಡಿ ತುಪ್ಪವು ಕಡೆಯಾಗಿ
ಒಪ್ಪಾಗಿ ಬಡಿಸಿದರು
ಅಪ್ಪ ವೇಂಕಟರಾಯ ತಪ್ಪದೆ ಬಂದು
ಕೃಷ್ಣಾರ್ಪಣ ಅಂದತಾನು ೬

ಮೇಲ್ಮತ್ತೆ ಭೋಜನ ಕಾಲಕ್ಕೆ ತಾ ಬಂದು
ಹೇಳಿಕೊಂಡನು ಈ ಪರಿ
ಬಹಳ್ಹೊತ್ತು ಆಯಿತು ಬಳಲಿದಿರೆಲ್ಲರು
ಹುಳಿಯನ್ನ ಬಡವನಲ್ಲೆ ೭

ಹರಿಯೆಂದ ಮಾತಿಗೆ ಹರುಷ ಬಟ್ಟು
ಅಲ್ಲಿರುವಂಥ ಭೂಸುರರೂ
ವರಮುನಿಗಳು ಮತ್ತು ಪರಮಹಂಸರು ಎಲ್ಲಾ
ತಿರುಗಿ ಮಾತಾಡಿದರು ೮

ಘನ್ನ ಮಹಿಮ ನಿನ್ನ ಅನ್ನ ಭೋಜನದಿಂದ
ಧನ್ಯರಾದೇವುನಾವೆಲ್ಲ
ಚನ್ನಾಗಿ ವರಮುಕ್ತಿಯನ್ನೇ ತೋರಿಸುವುದು
ಅನ್ನಲ್ಲ ಅಮೃತವಿದು ೯

ಹೀಗೆಂದು ನುಡಿದರು ಚಂದಾಗಿ ಭೋಜನ ಮಾಡಿತೇಗಿ
ಕೈ ತೊಳೆದರೆಲ್ಲಾ
ಆಗಲೆ ತಾಂಬೂಲ ಬೇಗನೆ ಕೊಟ್ಟನು
ಭಾಗೀರಥಿಯ ಪಿತನು ೧೦

ಚನ್ನಾಗಿ ತಾರತಮ್ಯವನು ಬಿಡದೆ
ಬಹುಘನ್ನದಕ್ಷಣೆಗಳನು
ಮುನ್ನ ಎಲ್ಲರಿಗೆ ಮನ್ನಿಸಿ ಕೊಟ್ಟು ಸುವರ್ಣ
ಮುದ್ರಿಕೆಗಳನು ೧೧

ಕೊಂಡು ಆಶೀರ್ವಾದ ಪುಂಡರೀಕಾಕ್ಷ ಉದ್ದಂಡ
ಸಂತೋಷದಿಂದ
ಹೆಂಡತಿ ಸಹ ತನ್ನ ಹಿಂಡು ಬಳಗ ಕೂಡಿಕೊಂಡು
ಭೋಜನ ಮಾಡಿದ ೧೧

ಅಲ್ಲಿಂದ ಆ ರಾತ್ರಿಯಲ್ಲೆ ತಾಮಲಗಿದ
ವಲ್ಲಭೆಯಿಂದ ಕೂಡಿ
ಬಲ್ಲಿದಾನಂತಾದ್ರಿಯಲ್ಲೆ ಸೌಖ್ಯದಿಂದ
ಎಲ್ಲರು ಮಲಗಿದರು ೧೨

ವಚನ

ಭಕ್ತವತ್ಸಲನಲ್ಲಿ ಭಕ್ತಿಪರವಶದಿಂದ ಉತ್ತಮವಾದೀಕಥೆಯು
ಚಿತ್ತವಿಟ್ಟು ಕೇಳುವರಿಗತ್ಯಂತವಾಗಿ ಪುರುಷೋತ್ತಮನ
ದಯವುಂಟು
ಮತ್ತವರ ಕಾರ್ಯಕ್ಕೆ ಸತ್ಯ ಸಹಕಾರಿಗಳು ಸುತ್ತೆಲ್ಲ ಜನರೂ
ಪೃಥ್ವಿಯಲ್ಲಿರುವ ಬಹು ಭಕ್ತರನು ಪಾಲಿಸುವ ಉತ್ತಮನಂತಾದ್ರಿ
ಸಕ್ತನಾಗಿರುವ ಸರ್ವೋತ್ತಮನ ದಯವಿರಲು ಮುತ್ತಿರುವ
ವಿಘ್ನಗಳು ಹತ್ತದಲೆ ಮುಗಿತೊಂಬತ್ತು ಅಧ್ಯಾಯ

ಅಧ್ಯಾಯ ಹತ್ತು

ತಾರ್ಕ್ಷಸ್ಕಂಧ ಸಮಾರೂಢಃ ಶ್ರೀ ಬ್ರಹ್ಮಾದಿಭಿರಾವೃತಃ ।
ಶುಕದತ್ತ ಫಲಾಹಾರಃ ಪಾಯಾತ್ ಪದ್ಮಾವತೀಪ್ರಿಯಃ ॥

ಧ್ವನಿ

ಹೊರಟಿತು ನಿಬ್ಬಣ ಈ ಪರಿ ಶ್ರೀ ಹರಿ ಕೂಡಿ
ಮರುದಿನವೀ ಪರಿ ಪ

ಗರುಡನೇರಿದ ಶ್ರೀನಿವಾಸನು ರಾಜ
ವರ ಹಂಸವನೇರಿದ ಬ್ರಹ್ಮನು
ತ್ವರ ನಂದಿಯೇರಿದ ರುದ್ರನು ಅ
ವರ ನಡುಮಧ್ಯೆ ನಡೆದ ಶ್ರೀಹರಿ ತಾನು ೧

ದೇವಿಯೇರಿದಳಾಗ ರಥದಲಿ ಬಕುಲಾ
ದೇವಿ ಯೇರಿದಳೊಂದು ರಥದಲಿ
ಕೇವಲ ತಮ್ಮ ತಮ್ಮ ರಥದಲಿ ಉಳಿದ
ದೇವಿಯರೇರಿ ಕೊಂಡರು ಅಲ್ಲಿ ೨

ಉತ್ತಮ ಮಂಗಳವಾದ್ಯವು ನೌ
ಬತ್ತು ನಗಾರಿಗಳಾದವು

ಮತ್ತೆ ಉಳಿದ ಎಲ್ಲ ವಾದ್ಯಗಳು ಬಹು
ವತ್ತಿ ಶಬ್ದಮಾಡಿ ನುಡಿದವು ೩

ನಡೆದರು ಋಷಿಗಂಧರ್ವರು ಬಹು
ಸಡಗರದಿಂದಲ್ಲೆ ಅಪ್ಸರರು
ಬಡವ ಬಗ್ಗರು ಉಳಿದ ಮನುಜರು ಬಹು
ಗಡಿಬಿಡಿಯಿಂದಲ್ಲೆ ನಡೆದರು ೪

ಕುಂಟರು ಕುರುಡರು ಕಲ್ಲು
ಕಂಟಕ ಕಾಲಿಲೆ ತುಳಿವವರೂ
ಗಂಟು ತಲಿಯಲಿಟ್ಟುನಡಿಯುವರು ತಪ್ಪ
ಗಂಟಾಗಿ ಒದರುತಲಿಹರು ೫

ಕೆಲವರು ಗಂಡನ ಒದರುವರು ಮತ್ತ
ಕೆಲವರು ಮಕ್ಕಳನೊದರುವರು
ಕೆಲವರು ಎಡವುತಲಿರುವರು ಮತ್ತು
ಕೆಲವರು ಭರದಿಂದ ಬೀಳುವರು ೬

ಕೆಲವರೆಳೆದು ಎಬ್ಬಿಸುವರು ಮತ್ತು
ಕೆಲವರು ನೋಡುತ ನಗುವವರು
ಬಾಲರಳುವ ಧ್ವನಿ ಆಯಿತು ಜಗತ್
ಪಾಲನಸೈನ್ಯ ನಡೆಯಿತು ಮೇಲಾದನಂ
ತಾಂದ್ರೀ ಇಳಿಯಿತು ಭೂಪಾಲಪುರದ್ವಾದಿ ಹಿಡಿಯಿತು ೭

ವಚನ

ಶೈಲವನು ಹಿಡಿದು ಭೂಪಾಲನಪುರತನಕ ಸಾಲ್ಹಿಡಿದು
ನಡೆವಂಥ ಕಾಲದಲಿ ಮತ್ತಲ್ಲಿಡುವದಕ್ಕೆ ಎಳ್ಳು ಕಾಳಷ್ಟು
ಸ್ಥಳವಿಲ್ಲ ಶ್ರೀಲಲಾಮನು ಮಧ್ಯಸಾಲಿನ ಮಧ್ಯಾಹ್ನ ಕಾಲ
ದಲಿ ಶುಕಮುನಿಯ ಆಲಯಕೆ ಬಂದು ಕಾಲಿಗೆರಗಿದನು
ಆಕಾಲಕೆ ಮುನಿ ಬಂದು ಹೇಳಿಕೊಂಡೀ ಪರಿಯು ಶೈಲ

ದೊಡೆಯನೆ ಎನ್ನ ಆಲಯಕೆ ನೀ ಬಂದ ಮೇಲೆ
ಭೋಜನವು
ಈ ಕಾಲದಲಿ ಮಾಡಿ ಆಮೇಲೆ ಪೋಗುವದು
ಎನ್ನ ಮೇಲೆ ಕರುಣೆಯಿಂದಾ ೧

ಹೀಗೆಂದು ನುಡಿದ ಶುಕಯೋಗಿಯ ವಚನವ ಕೇಳಿ
ಬಾಗಿ ತಾ ನಮಿಸುತಲೆ ಆಗ ಶ್ರೀಹರಿ ನುಡಿದ ಯೋಗಿಗಳು
ನೀವು ಸುವಿರಾಗಿಗಳು ಸಂಸಾರ ನೀಗಿದಂಥವರು ಬೇಕಾಗಿ
ನಾ ಸಂಸಾರಿ ಆಗಿ ಇರವೆ ಇಲ್ಲೆ ಉಂಡರೆ ಮಿತಿಯ ಇಲ್ಲದಲೆ
ಜನವು ಬಹಳ ನಮ್ಮಲ್ಲೆ ಅಲ್ಲೆ ಆ ರಾಜ
ಪುರದಲ್ಲೆ ಪೋಗುವುದು ೨

ತಂಡತಂಡದ ಮಾತು ಪಂಡಿತಾಗಿರುವ
ಮುನಿ ಮಂಡಲೇಶನು
ಕೇಳಿಕೊಂಡು ಹೀಗೆಂದು ಬ್ರಹ್ಮಾಂಡ ಪತಿಯೆ ಒಬ್ಬ ಉಂಡರೆ
ಜಗವೆಲ್ಲ ಉಂಡಂತೆ ಆಗುವುದು ಪುಂಡರೀಕಾಕ್ಷಾ ಭಾಳ
ಪರಿಪರಿಯಿಂದಲೆ ಹೇಳಿಕೊಂಡಿಹ ಮಾತು
ಕೇಳುತಲೆ ಮುಂದೆ
ಕಾಲದಲಿ ತ್ವರ ಜಗತ್ಪಾಲನೆನಿಸುವ ತನ್ನ
ಬಾಲಕನ ಮುಖನೊಡಿ
ಬಾಲೆ ನುಡಿದಳು ಬಕುಲ ಮಾಲಿಕೆಯು ತಾನು ೩

ಧ್ವನಿ: ವಸಂತಭೈರವಿ ಆದಿತಾಳ

ಇದು ಏನು ನಡತೆ ತರವೇ।
ತರವೆ ಹರಿಯೆ ಈ ಪರಿಯ ಮಾಡುವದು ಪ

ಸುಖಕರವಾಗಿಹ ಶುಕಮುನಿ ವಚನವು ॥
ಲಕ್ಷಿಸದೆ ಶುಭಕಾರ್ಯಕೆ ಪೋಗುವದೂ ೧

ಬಲ್ಲಿದ ಶಕುನವು ಇಲ್ಲೆನಿನಗೆ ತಿಳಿ।
ಊಟಕೆ ಒಲ್ಲೆನೆಂಬುವದೂ ೨

ಶ್ರೀಶ ಅನಂತಾದ್ರೀಶ ಮಹಾತ್ಮರ॥
ಭಾಷೆಯ ಕೇವಲುದಾಸೀನ ಮಾಳ್ಪುದು ೩

ವಚನ

ಹೆತ್ತಾಯಿ ಪರಿಯಾಗಿ ಹೊತ್ತು ಹೊತ್ತಿಗೆ ತನಗೆ ಅತ್ಯಂತ
ಹಿತ ಮಾಡುತಿರ್ದ ಬಕುಲಾವತಿ ಸತ್ಯವಚನ ಹರಿಯು
ಚಿತ್ತಿಟ್ಟು ಕೇಳುತಲೆ ಉತ್ತಮಾಯಿತು ಅಂದ
ಮತ್ತು ಶುಕಮುನಿಗೆ
ಉತ್ತರವ ಕೇಳಿ ಮುನಿ ಉತ್ತರಣೆಯು ಬೀಜ ಒತ್ತಿಕೈಯಲಿ
ವರಿಸಿ ಮತ್ತದರ ತಂಡುಲದಿ ಉತ್ತಮಾನ್ನವ
ಮಾಡಿ ವೃತ್ತಾದ
ಗುಳ್ಳ ಫಲದುತ್ತಮೋತ್ತಮಶಾಕ ತಿಂತ್ರಿಣಿಯ ರಸಸಹಿತ
ಪಾತ್ರದಲಿ ಬಡಿಸಿ ಸತ್ಪಾತ್ರನಾಗಿರುವ ಸರ್ವೋತ್ತಮಗೆ
ಅರ್ಪಿಸಿದ ಭಕ್ತಿಯಿಂದ ೧

ತೃಪ್ತನಾದನು ನಿತ್ಯತೃಪ್ತ ಹರಿ ತಾ ಉಂಡು ಮತ್ತೆ
ಮುನಿಗಳು ಎದ್ದರತ್ಯಂತ ಕೋಪದಲಿ ಚಿತ್ತಜನ ಪಿತ
ಅವರ ಚಿತ್ತವೃತ್ತಿ ಸತ್ಯದಲಿ ಎಲ್ಲರಿಗೂ ತೃಪ್ತಿಯಾಗಲಿ
ಎಂದು ತಿಳಿದು ಪೂತ್ಕಾರ ಮಾಡಿದನು ತತ್ಕಾಲದಲ್ಲಿ
ಉತ್ತಮಳು ಶ್ರೀರಮಾ ಮತ್ತೆ ಬ್ರಹ್ಮಾದಿಗಳು ಸುತ್ತಸನ
ಕಾದಿಗಳು ಮತ್ತೆ ಶುಕ ಮೊದಲಾದ
ಸತ್ವ ಶೀಲರು ಉಳಿದ
ಸುತ್ತೆಲ್ಲ ಜನರು ಸಂತೃಪ್ತರಾದರು ಹರಿಯ ಘೂತ್ಕಾರದಿಂದ ೨

ನಿದ್ರೆಯನು ಮಾಡಿ ಅಲ್ಲಿದ್ದು ಆ ರಾತ್ರಿಯಲಿ ಎದ್ದು ಮರು
ದಿನಕೆ ಸನ್ನದ್ಧರಾದರು ಎಲ್ಲ ಪದ್ಮನಾಭನ
ಕೂಡಿ ವಾದ್ಯ ವೈಭವ
ದಿಂದ, ಸಿದ್ಧಾಗಿ ಬಂದರು ವಿಯದ್ರಾಜನ ಪುರಕೆ ಶುದ್ಧ
ಸಂಜೆಯಲಿ ಮುದ್ದು ವೇಂಕಟ ಬಂದ ಸುದ್ದಿಯನು ಕೇಳುತ
ವಿಯದ್ರಾಜ ತಾ ಬಹಳ ಉದ್ರೇಕದಿಂದಲೆ ಇದ್ದ ಜನರನು
ಕೂಡಿ ಎದ್ದು ಎದುರಿಗೆ ಬಂದ ವಾದ್ಯ
ವೈಭವದಿಂದ ಸಿದ್ಧನಾಗಿ ೩

ಧ್ವನಿ: ಕಾಂಬೋಧಿ ಆದಿತಾಳ

ಆಕಾಲದಲಿ ಕಂಡನು ಹರಿಯಮುಖ
ಆಕಾಲದಲಿ ಕಂಡನು ಎಲ್ಲರ ಕೂಡ
ಆಕಾಶ ರಾಜನು ತಾನು ೧

ಹರುಷದಿಂದಲಿ ಉಬ್ಬಿದ ಹರಿಯ ಕಂಡು
ಹರುಷದಿಂದಲಿ ಎದರುಗೊಂಡು
ವರಪೂಜೆಯನು ಮಾಡಿದ ೨

ಅಳಿಯಗಾಭರಣವನು ವಸ್ತ್ರವ ಕೊಟ್ಟು
ಅಳಿಯಗಾಭರಣವನು ಉತ್ಸವದಿಂದೆ
ಕಳಿಸಿ ಮನೆಗೆ ಪೋದನು ೩

ಶ್ರೀನಾಥದೇವ ತಾನು ಆ ಕಾಲಕ್ಕೆ
ಶ್ರೀನಾಥದೇವ ತಾನು ಕರೆದುತೊಂಡ
ಮಾನರಾಜಗೆ ನುಡಿದನು ೪

ಹಸಿದು ಬಂದೆವು ನಾವೆಲ್ಲ ಉಣ್ಣದೆ ಬಹಳ
ಹಸಿದು ಬಂದೆವು ನಾವೆಲ್ಲ ಬೇಗನೆ ಪಾಕ
ಹಸನಾಗಿ ಮಾಡಿಸೆಲ್ಲ ೫

ಅಕ್ಕರದಲಿ ರಾಜನು ಆನುಡಿ ಕೇಳಿ
ಅಕ್ಕರದಲಿ ಮಾಡಿಸಿದನು
ರುಕ್ಕೋತದಡಿಗೆಯನು ೬

ಮಂಡಿಗೆ ಗುಳ್ಳೋರಿಗೆ ಶಾವಿಗೆ ಮೊದಲು
ಮಂಡಿಗೆ ಗುಳ್ಳೋರಿಗೆ ಮಾಡಿಸಿ ಎಲ್ಲ
ತೊಂಡಮಾನನು ಚಂದಾಗಿ ೭

ಹರಿಗೆ ಅರ್ಪಣೆ ಮಾಡಿದ ದಿವ್ಯಾನ್ನವನು
ಹರಿಗೆ ಅರ್ಪಣೆ ಮಾಡಿದ ಎಲ್ಲರ ಕೂಡಿ
ಹರಿಯು ಭೋಜನ ಮಾಡಿದ ೮

ಆನಂದದಿಂದಿದ್ದನು ಆ ರಾತ್ರಿಯೊಳ್
ಆನಂದದಿಂದಿದ್ದನು ಮಾಡಿದ ನಿದ್ರೆ
'ಅನಂತಾದ್ರೀಶ' ತಾನು ೯

ವಚನ

ಶ್ರೀನಿವಾಸ ಎದ್ದು ತಾನು ಮರುದಿನದಲಿ ಮಾನಿತ ವಶಿಷ್ಠ
ಮುನಿನೀನು ಕೇಳೆಂದ ಬಹುಮಾನದಲಿ ಈ ಹೊತ್ತು ನಾನು
ಲಕ್ಷ್ಮೀಸಹಿತ ನೀನು ಬ್ರಹ್ಮನು ಮತ್ತೆ ಮಾನಿತಳು ಎನ್ನತಾಯಿ
ತಾನು ಐವರು ಅನ್ನಹೀನರಗಿರುವುದು ಖೂನದಲಿ
ಕನ್ನಿಕೆಯ ದಾನ ಪರ್ಯಂತ ಮಾನಿತನು ಆರಾಜಮಾನಿನಿಯು
ಮತ್ತೆ ವಸು ದಾನರಾಜನು ಅನ್ನರಹಿತರೈವರು ಅವರು
ಖೂನದಲಿ ಕನ್ನಿಕೆಯ ದಾನಪರ್ಯಂತ ೧

ಮೇಲೆ ಉಳಿದವರೆಲ್ಲ ವೇಳೆ ಗುಂಬುವರೆಂದು
ಪೇಳು ಅರಸನಿಗೆಂದು
ಹೇಳಿ ಕಳುಹಿಸಿದನಾಗ ಹೇಳಿದನು ಮುನಿ
ಹರಿಯು ಹೇಳಿದಂತಾ

ಭೂಮಿಪಾಲ ಮಾಡಿದನು ಮುನಿಹೇಳಿದಂತೆ ಮೇಲೆ ಮುನ್ನ
ಸಾಯಾಹ್ನಕಾಲದಲಿ ಚತುರಂಗ ಸಾಲ ಸೈನ್ಯವು ನಡೆಸಿ ಕಾಳಿ,
ಕರ್ಣಿಯ ತೂರ್ಯ, ತಾಳಮದ್ದಲೆ ಮೊದಲು ಭಾಳವಾದ್ಯ
ಗಳಿಂದ ಮೇಲಾದ ಗುರುಮುಂದೆ ಮೇಲೆ ತನ್ನವರಿಂದ
ಕಾಲನಡುತಿಯಲೆ ಹರಿಯ ಆಲಯಕೆ ಬಂದ ೨

ಈ ವ್ಯಾಳ್ಯದಲಿ ಧರಣಿದೇವಿ ತಾ ಲಜ್ಜೆಯಲಿ ದೇವ ಗುರು
ಬ್ರಹಸ್ಪತಿಯ ಕೇವಲಾಜ್ಞಧಿ ದೇವದೇವ ಎನಿಸುವ ಅಳಿಯ
ದೇವಗರ್ಚಿಸಿ ಶುದ್ಧ ಭಾವದಲಿ ಅರ್ಪಿಸುತ
ಶಾವಿಗೆಯ ಪರಮಾನ್ನ
ಕೇವಲಾನಂದ ಸದ್ಭಾವ ಬಡಿಸಿದಳು. ಆ
ವಿಯದ್ರಾಜ ಮುಂದಾ
ವೇಳೆಯಲಿ ಐರಾವತದ ಮೇಲೆ ದೇವನ ಕುಳ್ಳಿರಿಸಿ
ದೇವ ಋಷಿ ಮೊದಲಾದ ಯಾವತ್ತರಿಂದ ನರದೇವ
ಬಂದನು ಮನೆಗೆ ತೀವ್ರದಿಂದ ೩

ಭಾಳ ಉತ್ಸವದಿಂದ ಬಾಗಿಲಿಗೆ ಬರಲು
ಆಕಾಲದಲಿ ತೋಂಡ
ಭೂಪಾಲನ ಸತಿ ಜಗತ್ಪಾಲಕನ ಮೇಲೆ
ನಿವಾಳಿಸುವತ ಚಲ್ಲಿದಳು
ಶೈಲದೊಡೆಯನು ಗಜದ ಮೇಲಿಂದ ಇಳಿದು ಆಮೇಲೆ ತಾ
ಬಂದಾ ಸುವಿಶಾಲ ಮಂಟಪಕೆ ಮೇಲಾದ ಗದ್ದಿಗೆಯ ಮೇಲೆ
ವೇಂಕಟರಮಣನು ಕಾಲಿಟ್ಟು ಕುಳಿತನಾಮೇಲೆ ಬ್ರಹ್ಮಾದಿ
ಗಳು ಗಾಲವ, ವಶಿಷ್ಠಮುನಿ ವಾಲ್ಮೀಕಿ ಭೃಗು ಜಟಾಜಾಲ
ಸಂಪನ್ನ, ಶುಕ, ದಾಲ್ಭ್ಯ ಮೊದಲಾದವರು ಸಾಲ್ಹಿಡಿದು
ಕುಳಿತರಾ ಕಾಲಕ್ಕೆ ಎಲ್ಲಾ ಒದಗಿ ಬೇಗನೆ ವಿಷ್ಣು ಪದರಾಜ ೪

ಆ ವಿಷ್ಣು ಪದಯುಗ್ಮ ಸಂಕಲ್ಪ ವಿಧಿಯಿಂದ
ತೊಳೆದು ಆ ಉದಿಕ

ಶಿರದಲಿ ವಹಿಸಿ ಮುದದಿಂದ ಮಾಡಿದನು,
ಮಧುಸೂದನನ
ಪೂಜೆ ಮಧುಪರ್ಕದಿಂದ ಬುಧಜನರು ಪೇಳಿದಾಜ್ಞೆಯಲಿ
ಗೃಹ ದೇವತಾಸನದಲಿ ಹರಿಯ ಧ್ಯಾನದಲಿ ಇರುತಿರುವ
ಆ ವಧುವಿನ ಕರೆತಂದು ಮದನ ಮೋಹನ ಸನ್ನಿಧಿಗೆ
ಸಮ್ಮುಖವಾಗಿ ಮುದದಿ ಇರಿಸಿದನಾಗ ಬದಿಲಿದ್ದ ಬೃಹಸ್ಪತಿಯ
ಒದಗಿ ವಧು ವರಗಳಿಗೆ ವಿಹಿತದ ಅಂತಃಪಟವ ಮುದದಿ
ಮಧ್ಯದಲ್ಲಿ ಪಿಡಿದು ಒದರಿದನು ಈ ಪರಿಯು ಮದವೆಯ
ಕಾಲಕ್ಕೆ ಮಧುರೋಕ್ತಿಯಿಂದ ೫

ಧ್ವನಿ: ಸೌರಾಷ್ಟ್ರ ಅಟತಾಳ

ಸಾವಧಾನವಾಗಿರಿನ್ನು ಸುಮುಹೂರ್ತ ಕಾಲಕ್ಕೆ
ಸಾವಧಾನ ಧೇ
ವಾಧೀಶನ ಲಗ್ನ ದಿವ್ಯ ವೇಳೆಯಲ್ಲಿ ಸಾವಧಾನ ಪ

ಪದ್ಮನಾಭನೆ ನೀನು ಸಿದ್ಧಾಗಿ ಇರು ಕಂಡ್ಯ ಸಾವಧಾನ
ಪದ್ಮಾವತಿಯೆ ನೀನು ಪದ್ಮನಾಭನ ಸ್ಮರಿಸು ಸಾವಧಾನ ೧

ಫಲಕಾಲದಲಿ ಚಂಚಲರಾಗದಲೆ ನೀವು ಸಾವಧಾನ
ಕುಲದೇವಿ ಸ್ಮರಣೆ ನಿರ್ಮಲವಾಗಿ ಮಾಡಿರಿ ಸಾವಧಾನ ೨

ಶ್ರೇಷ್ಠಾದ ಅತಿ ವಶಿಷ್ಠ ಮುನಿಗಳೆಲ್ಲ ಸಾವಧಾನ
ಸ್ಪಷ್ಟಾಗಿ ಶ್ರೀ ಮಂಗಳಾಷ್ಟಕ ಪಠಿಸಿರಿ ಸಾವಧಾನ ೩

ಮಂಗಳ ಮೂರುತಿ ಮನದಿಂ ಸ್ಮರಿಸಿರಿ ಸಾವಧಾನ
ಗಂಗಾನದಿ ಸಕಲ ತೀರ್ಥಂಗಳ ಸ್ಮರಿಸಿರಿ ಸಾವಧಾನ ೪

ತಕ್ಕ ಅನಂತಾದ್ರಿಯೊಳು ಮುಖ್ಯಾಗಿರುವನಿಗೆ ಸಾವದಾನ ಅಕ್ಕರ
ದಿಂದಲ್ಲೆ ಅಕ್ಕಿಕಾಳ್ಹಾಕಿರಿ ಸಾವಧಾನ ೫

ವಚನ

ನುಡಿಕೇಳೆ ಬೃಹಸ್ಪತಿಯು ನುಡಿದರಾ ದ್ವಿಜರೆಲ್ಲ
ಧೃಢ ಮಂಗಲಾ
ಷ್ಟಕವಾ ನುಡಿನುಡಿಗೆ ಸುಮುಹೂರ್ತ ನುಡಿಗಳನು ನುಡಿ
ವುತಲೆ ತಡವಿಲ್ಲದಲೆ ಪೂರ್ಣ ಘಳಿಗೆ ತುಂಬಲು ಆಗ
ಹಿಡಿ ಮುತ್ತಿನಾಕ್ಷತೆಯ ಹಿಡಿದು ಕರಕಮಲದಲಿ ಬಿಡದೆ
ವಧು ವರಗಳಿಗೆ ಗಢಗಡನೆ ಹಾಕಿದರು ಗಡಬಿಡಿಯ ಮಾಡಿ
ನುಡಿದವಾ ಕಾಲದದಲಿ ಕಡುಸುರರ ಭೇರಿಗಳು ಬಿಡದೆ
ನುಡಿದವು ಮತ್ತೆ ಬಿಡಿ ವಾದ್ಯಗಳು ಎಲ್ಲ ತಡಮಾಡದಲೆ
ಸುರರು ದೃಢವಾಗಿ ಸಂಭ್ರಮ ಬಡುತ ಜಯ ಜಯ ಶಬ್ದ
ನುಡಿದು ಪುಷ್ಪದ ವೃಷ್ಟಿ ಬಿಡದೆ ಮಾಡಿದರು ೧

ಬಲ್ಲಿದಾ ಸುಮುಹೂರ್ತದಲಿ ಪದ್ಮಾವತಿಯ ಚಲ್ವ ಹಸ್ತ
ದಲ್ಲಿದ್ದ ಬೆಲ್ಲ ಜೀರಿಗಿ ಸಹಿತ ಬಲ್ಲಿದಾಕ್ಷತೆಯ ಶ್ರೀ
ವಲ್ಲಭಗೆ ಮಧ್ಯಶಿರದಲಿ ಹಾಕಿಸಿದ ತಡವಿಲ್ಲದೆ
ರಾಜಾ॥ಸರಸಂನೆ ಆಮೇಲೆ ಸರಸಿಜಾಕ್ಷಿಯ ಮಧ್ಯ ಶಿರ
ದಲಿ ಬೇಕಾದ ವರಗಳನು ಕೊಡುವಂಥ ಕರಗಳನು
ಮೇಲೆತ್ತಿ ವರಜೀರ ಗುಡುಯುಕ್ತ ಪರಮಾಕ್ಷತೆಗಳನು
ಹರಿಯು ಹಾಕಿದ ತಾನು ಹರುಷದಿಂದ ೨

ಮತ್ತಾಗ ಗುರು ವಿಯತ್ಪುತ್ರಿಯಳ ಜಲಸಹಿತ ಹಸ್ತಿ
ಯುಗ್ಮವ ಹರಿಯಹಸ್ತದಲ್ಲಿರಿಸಿ ತಾ ಒತ್ತಿ ನುಡಿದೀ
ಪರಿಯು ಅತ್ರಿ ಋಷಿಗೋತ್ರದಲ್ಲಿ ಉತ್ಪನ್ನಳೆನಿಸುತ
ಸುಗಾತ್ರಿಯ ಸುಶರ್ಮಗೆ ಪ್ರಪೌತ್ರಿ ಎಂದೆನಿಸುವಳು
ಉತ್ತಮ ಸುಧರ್ಮನೃಪ ಪೌತ್ರಿ ಎಂದೆನಿಸುವುಳು ಮತ್ತೆ
ಆಕಾಶನೃಪ ಪುತ್ರಿ ಪದ್ಮಾವತಿಯ ಸತ್ಯನಾಮದಲಿ
ಅತ್ಯುತ್ತಮಳು ಕನ್ಯಾಪಾತ್ರ ಭೂಪನೆ ದಯಾ ಮಾತ್ರದಲಿ
ಸ್ವೀಕರಿಸು ಸೂತ್ರ ವಿಧಿಯೆಂಬುತ್ತರಕೆ ನುಡಿದ ಪ್ರತ್ಯುತ್ತರ

ವಶಿಷ್ಠಮುನಿ, ಗೋತ್ರವರ ವಾಶಿಷ್ಠ ಗೋತ್ರದಲಿ ಉತ್ಪನ್ನ
ಉತ್ತಮ ಯಯಾತಿಯ ಪ್ರಪೌತ್ರನೆನಿಸುವ ಶೂರ ಪೌತ್ರ
ನೆನಿಪ ವಸುದೇವ ಪುತ್ರ ವೇಂಕಟ ಪತಿಯು ಸತ್ಯ
ನಾಮದಲಿ ಸರ್ವೋತ್ತಮ ವರನು ೩

ನೀತಿಯಲಿ ಕನ್ನಿಕೆಯ ಈತ ಗಂಗೀಕರಿಸಿ ಪ್ರೀತರಾದೇವು
ಎನಲು ಆಗ ಆಕಾಶನೃಪ ಪ್ರೀತನಾದನು ಕೊಟ್ಟು ಪ್ರೀತಿಯಿಂದ
ಲಿ ರಮಾನಾಥಗಾ ಕಾಲದಲಿ ತಾನು ಕೊಡತಕ್ಕದ್ದು ನಾಥ
ಕೊಟ್ಟನು ಮತ್ತೆ ಪ್ರೀತನಾಗೆಂದು ನೀಟಾಗಿ ದಕ್ಷಿಣೆಯ
ಕೋಟಿ ನಿಷ್ಕವ ಕಪಟ ನಾಟಕಗೆತಾಕೊಟ್ಟ ನೀಟ ಶತ
ಭಾರದ ಕಿರೀಟ ಕೊಟ್ಟನು ಸ್ನೇಹ ಕೂಟದಲಿ ಕೊಟ್ಟ ಬಹು
ಮಾಟ ಭುಜಭೂಷ ಮೈಮಾಟ ಉಳ್ಳವಗ ೪

ಒಂಟೊಂಟಿ ಮುತ್ತುಗಳು ಎಂಟು ನಂಬದ ಪರಿಯ ಉಂಟಾದ
ಜೋಡೆರೆಡು ಒಂಟಿ ಮುತ್ತನು ಕೊಟ್ಟ ಕಂಠದಲಿ ಶೋಭಿಸುವ
ಕಂಠಭೂಷಣಕೊಟ್ಟ ಕಂಠಿಯನು ಕೊಟ್ಟ ವೈಕುಂಠಪತಿಗೆ
ವೇಂಕಟೇಶಗೆ ಕೊಟ್ಟ ಟೊಂಕದುಡದಾರ ವಜ್ರಾಂಕ ಬೆಲೆ
ಯಿಲ್ಲದಕೆ ಕಿಂಕರಾಭಯಹಸ್ತ ಪಂಕಜದ್ವಂದ್ವಕೆ ಅಲಂಕಾರ
ವಾಗಿರುವ ಕಂಕಣವ ಕೊಟ್ಟ ಅಕಳಂಕ ಮೂರುತಿಗೆ ೫

ಕಂತುಪಿತ ತಾನುತನ ಕಾಂತೆಯೆನಿಸುವಳಿಗೆ ಅ
ನಂತ ಸೌಭಾಗ್ಯ ಕೊಡುವಂಥ ಮಂಗಳಸೂತ್ರ
ಕಾಂತ ಕಟ್ಟಿದ ಕೊರಳ ಪ್ರಾಂತದಲಿ ಮಾಂಗಲ್ಯ
ತಂತುನೇತ್ಯಾದಿ ಸನ್ಮಂತ್ರದಿಂದ ಶಿಷ್ಟರೆಂಬುವರಾಗ
ಶ್ರೇಷ್ಠ ವಧು ವರರ್ಗಳಿಗೆ ಕಟ್ಟಿದರು
ಕಂಕಣವ ಬೆಟ್ಟದಾಧಿಪತಾ
ವಶಿಷ್ಠ ನಾಜ್ಞೆಯ ಕೊಂಡು ಪಟ್ಟದರಸಿಯ ಕೂಡ
ಶ್ರೇಷ್ಠ ಲಾಜಾ ಹೋಮ ಥಟ್ಟನೆ ಮಾಡಿ ಸಂತುಷ್ಟನಾದಾ ೬

ಆಮೇಲೇ ಭೋಜನಕೆ ತಾಮಹಾತ್ಮನು ನಡೆದ
ಪ್ರೇಮದಲಿ ವಧುಸಹಿತ ಶ್ರೀ ಮಹಾಲಕ್ಷ್ಮಿ
ಆ ಭೂಮಕೊಪ್ಪುವರೆಲ್ಲ ನೇಮದಲಿ ಕುಳಿತರಾ
ಭೂಮದಲಿ ಸಾಲ್ಹಿಡಿದು ಪ್ರೇಮದಿಂದ
ರೂಪವತಿಯರು ಅಪರೂಪ ಪಕ್ವಾನ್ನಗಳು
ಆ ಪಕ್ವ ಬಹುವಿಧಾಪೂಪ ಶಾಕಾದಿಗಳ
ಸೂಪ ಬಡಿಸಿದರೆಲ್ಲ ಶ್ರೀಪತಿಯು ತಾತುಪ್ಪ
ದಾಪೋಶನವಕೊಂಡ ಆ ಪತ್ನಿ ಕರದಿಂದ
ಆ ಪರಮಪುರುಷನಿಂದ ಪಂಕ್ತಿ ಸಾಗುತಿರೆ
ರೂಪವಂತಿಯರು ಸಲ್ಲಾಪನುಡಿ ನುಡಿದರಾಲಾಪದಿಂದ ೭

ರಾಗ: ಪೂರ್ವಿ ಆದಿತಾಳ

ಊಟಕೆ ಬಂದರು ನೋಡಿರಿ ಬೀಗರು ಇವರೆಲ್ಲಾರು
ಊಟಕೆ ಬಂದರು ನೋಡಿರಿ ಬೀಗರು ಪ

ಊಟಕೆ ಬಂದರು ಬೀಗರು ಆರ್ಭಟದಿ
ಒಡಲೊಳಗ್ಹಾಕುವರು
ನೀಟದಿ ಅರಸರು ಉಂಬುವ ಅನ್ನದ ಊಟದ
ರುಚಿಯನು ಅರಿಯರು ಅ.ಪ

ಎಷ್ಟು ಹಾಕಿದರುಂಬುವರು
ಜಗ ಜಟ್ಟಿ ಅಗ್ನಿ ಮೊದಲಾದವರು
ಹೊಟ್ಟೆಯ ಪರಿಮಿತ ಇಲ್ಲದೆ ಇರುವವರು
ಹೊಟ್ಟೆ ಬಾಕರೆಂದೆನಿಸುವರು ೧

ಒಬ್ಬರು ನಾಲ್ಕು ಮುಖದಿಂದುಂಬುವರು
ಒಬ್ಬರು ಐದು ಮುಖದಿಂದುಂಬುವರು
ಒಬ್ಬರು ಆರು ಮುಖದಿಂದುಂಬುವರು
ಅಬ್ಬರ ನೋಡಿರಿ ಬೀಗರದು ೨

ಇಣಿ ಮೂಗಿನವನು ಒಬ್ಬ
ಇಳಿ ಮೂಗಿನವನು ಒಬ್ಬ
ಇಳೆಯೊಳ ಗಿಂತವರಿಲ್ಲ ಎಲ್ಲಿಂ–
ದಿಳಿದು ಬಂದರು ಇಂದಿವರು ೩

ಕೊಬ್ಬಿಲೆ ಬಂದವ ರೆಲ್ಲಾರು
ಹೆಬ್ಬುಲಿಯಂತಲೆ ಇರುತಿಹರು
ಉಬ್ಬಿಲೆ ಊಟಾ ಉಂಬುವರಿಲ್ಲೆ
ಹಬ್ಬದ ಸೇಡು ತೆಗೆಯುವರು ೪

ಎಂಥಾ ಬೀಗರು ಬಂದವರು
ಹಂತಕ ತನದಲಿರುತಿಹರು
ಅಂತ ಹತ್ತಗುಡದಲೆ ಇರುತಿರುವಾ
ನಂತಾದ್ರೀಶನ ಬಾಂಧವರು ೫

ರಾಗ: ಪೂರ್ವಿ ಆದಿತಾಳ

ಊಟಕೆ ಬಂದವರಲ್ಲಾ ಬೀಗರು ನಾವೆಲ್ಲರು
ಊಟಕೆ ಬಂದವರಲ್ಲಾ ಬೀಗರು ಪ

ಚಾಟಕ ತನದಿ ರಾಜಕುಮಾರಿಯ
ಬೇಟೆಗೆ ಮೆಚ್ಚಿದಾತನ ಮದುವೆ
ನೋಟಕೆ ಬಂದೆವೆಲ್ಲಾ ಹೊರತು ಅ.ಪ

ಸುರವರ ಲೋಕದಲ್ಲಿರುವವರು
ಸರಸದಿ ಅಮೃತ ಸುರಿವವರು
ಹರಿಯ ಭಿಡೆಯಕೆ ನಿರುವಾಯವಿಲ್ಲದೆ
ನರರಾ ಪಂಕ್ತಿಲೆ ಕುಳಿತವರು ೧

ಉಬ್ಬಿಲೆ ನಿತ್ಯದಲಿರುತಿಹರು ಒಬ್ಬರಲ್ಲ ಬಹಳಾದವರು
ಹಬ್ಬನಿತ್ಯ ದಾವಾತಗೆ ಆತನ ಗರ್ಭವಾಸಲ್ಲಿರುತಿಹರು ೨

ಸಂತತ ನಿಷ್ಪೃಹರಾಗಿಹರು ಹರಿಯಂತಲೆ
ಅನುಸರಿಸಿರುವವರು
ಹಂತಕರಲ್ಲಾನಂದತಾದ್ರೀಶನ ಚಿಂತಕರೇ ಸರಿ ಎಲ್ಲಾರೂ ೩

ವಚನ

ನೀಟಾದ ಈ ವಿನೋದಾಟ ನುಡಿಕೇಳಿ ಕಡೆ
ನೋಟ ನೋಡುತ
ರತ್ನ ಪೀಠಸ್ಥ ಆ ಕಪಟ ನಾಟಕನು ತಾನಗುತ ನೀಟಾಗಿ
ಭೂಮದಲಿ ಊಟಮಾಡಿದ ಮೇಲೆ ಉರುಟಣೆಗೆ ನಡೆದಾ
ಬಂದುಕುಳಿತನು ಬಹಳಚಂದದಾಸನದಲ್ಲಿ ಇಂದು
ಮುಖಿಯರು ಕೂಡಿ
ಬಂದರೆಲ್ಲರು ಗೋವಿಂದನುರುಟಣಕೆ ನೋಡಲೆಂದು ಆಕಾಶದಲಿ
ಮುಂದೆ ಪದ್ಮಾವತಿಯು ಇಂದಿರಾದೇವಿ ಕೈಯಿಂದ
ಅರಿಸಿನ ಕುಂಕುಮಕೊಂಡು
ಅಂದಳೀಪರಿ ಆಕೆ ಅಂದ್ವಾಗೆ ತಾನೂ ೧

ಧ್ವನಿ: ಮೋಹನ ಕಲ್ಯಾಣಿ ಆದಿತಾಳ

ಜಯ ಜಯ ವೇಂಕಟರಾಯ ಜಯ ಜಯ ಸುಂದರಕಾಯ
ಜಯ ಜಯ ಲಕ್ಷುಮಿಯ ಪ್ರೀಯಾ ಜಯ
ಜಯ ಮಹರಾಧಿಯ ಪ

ಎನ್ನರಸ ಘನ್ನರಸ ಎನ್ನ ಪ್ರಾಣದ ಅರಸ
ನಿನ್ನ ಮುಖವತನ್ನಿ ಅರಿಸಿನ ಹಚ್ಚುವೆ ನಾನು ೧

ಉಣ್ಣದೆ ಮೆಲ್ಲನೆ ಪೋಗಿ ಕಣ್ಣಿಗೆ ಬೀಳದೆ ಕದ್ದು
ಬೆಣ್ಣೆ ತಿನ್ನುವ ಮುಖಕೆ ಅರಿಶಿನ ಹಚ್ಚುವೆ ನಾನು ೨

ಅಂಜದೆ ಹೇಸಿಗೆಯಾದ ಕಂಜನಾಭನೆ ಶಭರೀ
ಎಂಜಲ ಕೊಳ್ಳುವ ಕೈಗೆ ಅರಿಸಿನ ಹಚ್ಚುವೆ ನಾನು ೩

ವಲ್ಲಭ ನೀ ಎನ್ನ ಕೈಲಿ ಕಲ್ಲಿಲಿ ತಾಡಿತವಾದ
ಬಲ್ಲಿದ ನಿಮ್ಮಯ ಹಣೆಗೆ ಕುಂಕುಮ ಹಚ್ಚುವೆ ನಾನು ೪

ಎದೆಯಮೇಲೊಬ್ಬಳು ಇರಲು ಹದಿನಾರು ಸಾವಿರ
ಸುದತಿರಪ್ಪಿದ ಎದೆಗೆ ಪರಿಮಳ ಹಾಕುವೆ ನಾನು ೫

ಹಗಲೆಲ್ಲ ಗೋಪಿಯರ ಹೆಗಲಮೇಲಿಟ್ಟಿರುವ
ಸುಗುಣ ನಿಮ್ಮಯ ಕೈಗೆ ಗಂಧ ಹಚ್ಚುವೆ ನಾನು ೬

ಇಂಥಾ ಮಾತುಗಳೆಲ್ಲ ಅಂತಃಕರುಣದಿ ನುಡಿದೆ
ಸ್ವಾಂತಕೆ ತರಬೇಡ 'ಅನಂತಾದ್ರೀಶನೆ' ೭

ವಚನ

ಅಂದು ಈ ಪರಿಯು ಗೋವಿಂದಗರಿಸಿನ ಹಚ್ಚಿ ಮುಂದೆ
ಕುಂಕುಮ ಫಣಿಗೆ ಚಂದಾಗಿ ಹಚ್ಚಿದಳು
ಗಂಧ ಪರಿಮಳ ಮಾಲೆಯಿಂದಲಂಕರಿಸುತಲೆ ವಂದನೆಯ
ಮಾಡಿದಳು ಒಂದೆ ಮನಸಿನಲಿ ಆಗ ಇಂದೀವರಾಕ್ಷಿ
ಹೀಗೆಂದು ಆಡಿದ ಮಾತು, ತಂದು ಮನಸಿಗೆ ಆಗ ಇಂದಿರಾ
ರಮಣ ತಾ ಇಂದಿರಾದೇವಿ ಕೈಯಿಂದ ಅರಿಸಿನಕೊಂಡು
ಮಂದಹಾಸದಿ ನಗುತ ಅಂದನೀಪರಿಯು ೧

ರಾಗ: ಮೋಹನ ಕಲ್ಯಾಣಿ ಆದಿತಾಳ

ಜಯ ಜಯ ಕಂಜೋದ್ಭೂತೆ
ಜಯ ಜಯ ಮಂಜುಳ ಗೀತೇ

ಜಯ ಜಯ ಕಂಜಜ ಮಾತೇ
ಜಯಜಯ ಪ್ರಖ್ಯಾತೆ ಪ

ಎನ್ನರಿಸಿ, ಘನ್ನರಸಿ
ಎನ್ನ ಪ್ರಾಣದ ಅರಸಿ
ನಿನ್ನ ಮುಖವನು ತಾರೆ
ಅರಿಸಿನ ಹಚ್ಚುವೆ ನಾನು ೧

ಮಡದಿ ನೀ ಒಂದಿಷ್ಟು
ಭಿಡೆಯು ಇಲ್ಲದೆ ಎನಗೆ
ನುಡಿದಿರುವ ಮುಖವನು ತಾ
ಅರಸಿನ ಹಚ್ಚುವೆನು ೨

ಕೊರವಿ ಕೈಯಲ್ಲಿ ಎನ್ನ
ಪರಮ ಪಾದದ ರೇಣೂ
ಕೆರೆದು ಹಚ್ಚಿದ ಹಣೆಗೆ
ಕುಂಕುವ ಹಚ್ಚುವೆ ನಾನು ೩

ನಾರಿನಾಚಿಕೆ ಬಿಟ್ಟು
ನಾರದ ನಾಮಕ ಮುನಿಗೆ
ತೋರಿದ ಕೈಯತಾರೆ
ನಾ ಗಂಧ ಹಚ್ಚುವೆನು ೪

ಕದನ ಮಾಡುತ ಎನ್ನ
ಕುದುರೆಯ ಕೊಂದಿರುವಂಥಾ
ಎದೆಗಾರತಿ ನಿನ್ನೆದೆ ತಾ
ಪರಿಮಳ ಹಾಕುವೆ ನಾನು ೫

ಚೆನ್ನಿಗ ರಾಜ ಕುಮಾರೀ
ನಿನ್ನ ಮಾತಿಗೆ ನಾನು

ಮನ್ನಿಸಿ ಉತ್ತರ ಕೊಟ್ಟೆ
ಎನ್ನೊಳು ಕೋಪವು ಇಲ್ಲಾ ೬

ಕಾಂತೆ ನೀ ಭಕ್ತಿಯಲಿ
ಎಂಥಾ ಮಾತಾಡಿದರೂ
ಸಂತೋಷವೆ 'ಅನಂತಾದ್ರೀಶಗೆ'
ಸಂತತದಲ್ಲೆ ೭

ವಚನ

ಆಡಿ ಈ ಪರಿ ಮಾತು ಮಾಡಿದನು ಉರುಟನೆಯ
ನೋಡುವರಿಗ್ಗರುಷ ಸೂರಾಡುತಲೆ ಕಡೆನೋಟ
ನೋಡುತಲಿ ಸತಿಯಿಂದ
ಕೂಡಿ ಶೋಭಿಸಿದನಾಗ ರೂಢಿಯಲಿ ದೃಷ್ಟಾಂತ ಕೂಡದ್ದಾಗೆ
ಕ್ರೀಡಾದಿ ಗುಣದಿಂದ ಪ್ರೌಢಹರಿ ಈ ರೀತಿ
ಮಾಡಿ ಪದ್ಮಾವತಿಯ
ಕೂಡಿ ಕುಳಿತಿರುವದನು ನೋಡಿನಾರಿಯರಾಗ ಕೂಡಿ ಲಕ್ಷ್ಮಿಯ
ಮುಂದೆ ಮಾಡುತಲೆ ಆರತಿಯ ಮಾಡಿದರು ಹರಿಯ
ಕೊಂಡಾಡಿ ಪಾಡುತಲೆ ೧

ರಾಗ: ಸಾವೇರಿ ಆದಿತಾಳ

ಮಂಗಳಂ ಜಯಮಂಗಳಂ
ವರ ವೈಕುಂಠದಿ ಬಂದವಗೆ
ವರಗಿರಿಯಲಿ ಸಂಚರಿಸುವವಗೆ
ವರಹದೇವನ ಅನುಸರಿಸಿ ಸ್ವಾಮಿಪು
ಷ್ಕರಣಿ ತೀರದಲ್ಲಿರುವವಗೆ ೧

ಸರಸದಿ ಬೇಟೆಗೆ ಹೊರಟವಗೆ
ಸರಸಿಜಾಕ್ಷಿಯಳ ಕಂಡವಗೆ

ಮರುಳಾಟದಿ ತಾ ಪರವಶನಾಗುತ
ಕೊರವಿ ವೇಷ ಧರಿಸಿರುವವಗೆ ೨

ಗಗನ ರಾಜಪುರಕ್ಹೋದವಗೆ
ಬಗೆಬಗೆ ನುಡಿಗಳ ನುಡಿದವಗೆ
ಅಗವಾಸಿಗೆ ನಿನ್ನ ಮಗಳಕೊಡು ಎಂದು
ಗಗನರಾಜನ ಸತಿಗ್ಹೇಳಿದ್ವಗೆ ೩

ತನ್ನ ಕಾರ್ಯ ತಾ ಮಾಡಿದ್ವಗೆ
ಇನ್ನೊಬ್ಬರ ಹೆಸರ್ಹೇಳಿದ್ವಗೆ
ಮುನ್ನ ಮದುವೆ ನಿಶ್ಚಯವಾಗಿರಲು
ತನ್ನ ಬಳಗ ಕರೆಸಿರುವವಗೆ ೪

ಎತ್ತಿ ನಿಬ್ಬಣ ಹೊರಟವಗೆ
ನಿತ್ಯ ತೃಪ್ತ ನಾಗಿರುವವಗೆ
ಉತ್ತರಣೆಯು ವಾಗರನುಂಡು
ತೃಪ್ತನಾಗಿ ತೇಗಿರುವವಗೆ ೫

ಒದಗಿ ಮೂಹೂರ್ತಕೆ ಬಂದವಗೆ
ಸದಯ ಹೃದಯನಾಗಿರುವವಗೆ
ಮುದದಿಂದಲಿ ಶ್ರೀಪದುಮಾವತಿಯಳ
ಮದುವೆ ಮಾಡಿಕೊಂಡ ಮದುಮಗಗೆ ೬

ಕಾಂತೆಯಿಂದ ಸಹಿತಾದವಗೆ
ಸಂತೋಷದಿ ಕುಳಿತಿರುವವಗೆ
ಸಂತತ ಶ್ರೀ ಮದಾನಂತಾದ್ರೀಶಗೆ
ಶಾಂತ ಮೂರುತಿ ಸರ್ವೋತ್ತಮಗೆ ೭

ವಚನ

ಹೀಗೆಂದು ಆರತಿಯ ಬಾಗಿ ಬಳಕುತಮಾಡಿ
ಸಾಗಿದರು ನಾರಿಯರು
ಹೀಗೆ ಪರಮೋತ್ಸವದಿ ಹಿಂಗದಲೆ ನಾಲ್ಕುದಿನ ಸಾಂಗಮಾಡಿದ
ರಾಗ ನಾಗವಲಿ ಮಾಡಿ ಮುಂದಾಗಮೋಕ್ತದಿ ಮಗಳನಾಗ
ಒಪ್ಪಿಸಿದ ಚಂದಾಗಿ ಶ್ರೀಹರಿಗೆ ಆಗ ತಾ ಕೃತಕೃತ್ಯನಾಗಿ ಆ
ರಾಜ ಚತುರಂಗ ಸೈನ್ಯವ ಕೊಟ್ಟು ಪೋಗಿ ದೂರದಲೆ ತಾನಾಗಿ
ಕಳಿಸಿದ ಮುಂದೆ ನಾಗವೇಣಿಯ ಕೂಡಿ
ನಾಗಶಯನನು ನಡೆದ ನಾಗಗಿರಿಗೆ ೧

ಬೆಟ್ಟದೊಡೆಯನ ಈ ವಿಶಿಷ್ಟ ಕಥೆಯನು ಬಹಳ
ನಿಷ್ಠೆಯಿಂದಲಿ ಕೇಳಿದರೆ ಎಷ್ಟು ಪೇಳಲಿ ಫಲವ ಕಷ್ಟ
ದೂರಾಗುವದು ಕಟ್ಟುವುದು ಕಲ್ಯಾಣ ದುಷ್ಟಗ್ರಹಗಳ ಬಾಧೆ
ಬಿಟ್ಟು ಓಡುವುದು ಕಷ್ಟದಲಿ ಪುತ್ರಕಾಮೇಷ್ಠಿ ಮಾಡಿದ
ಫಲವು ಇಷ್ಟಿರಿಂದಲೆ ಕೊಡುವ ಇಷ್ಟದಾಯಕ ಹರಿಯು
ಕೊಟ್ಟು ಸಲಹುವ ಮತ್ತೆ ತುಷ್ಟನಾಗುತ ಕರೆದಭೀಷ್ಟ ಕೊಡುವನು
ಎಲ್ಲಕೊಟ್ಟು ಬಿಡುವನು ಮುಕ್ತಿ ಕಟ್ಟ ಕಡೆಗೆ ೨

ವಿಸ್ತರಿಸಿ ನಾ ಇನ್ನು ಎತ್ತ ವರ್ಣಿಸಲೆ ಪುರುಷೋತ್ತ–
ಮನ ಮಹಿಮೆ
ತನ್ನ ಚಿತ್ತದೊಲ್ಲಬೇಗಂತ ಹತ್ತ ಗೊಡದಲೆ ಇರುವ ಎತ್ತ
ಬೇಕಾದತ್ತ ಮತ್ತನಂತಾದ್ರಿಯಲಿ ನಿತ್ಯದಲ್ಲಿರುವಾ ಮತ್ತೆ
ಬಿಡದಲೆ ಎನ್ನ ಚಿತ್ತದಲೆ ನಿಂತು ಯಾವತ್ತು ಕಾರ್ಯಗಳನ್ನು
ನಿತ್ಯ ಮಾಡಿಸುವ ಸರ್ವೋತ್ತುಮನು ತಾ ಎನ್ನ ಭಕ್ತಿಯಲಿ
ಮೆಚ್ಚಿ ಬೆನ್ನತ್ತಿ ಮಾಡಿಸಿದ ಈ ಹತ್ತು ಅಧ್ಯಾಯ ೩

ಶ್ರೀ ಕೃಷ್ಣ ಚರಿತ್ರೆ

ಅಧ್ಯಾಯ ಒಂದು

ರಾಗ: ಸೌರಾಷ್ಟ್ರ **ತಾಳ: ತ್ರಿವಿಡೆ ಸ್ವರ ಋಷಭ**

ಶ್ರೀ ರಮಣ ಚರಣಾರವಿಂದವ ಆರಡಿ ಪರಿಯಾಗಿ ಸೇವಿಸಿ
ಶ್ರೀ ರಮಾ ಬ್ರಹ್ಮಾದಿ ಗುರುಪದ ಸೇರಿ ಸೇವಿಸುವೆ। ನಾರಿಮಣಿ
ಶಿರಿದೇವಿ ಅಪಾರ ಮಹಿಮೆಯ ತಿಳಿವುದಕೆ ಪೂರ
ಮನಗಂಡಿಲ್ಲ ಮತ್ತಿನ್ನಾರು ಬಲ್ಲವರು ೧

ಆರಗೊಡವಿನ್ನೇನು ಮತ್ತಿನ್ನಾರು ದೂರಿದರೇನುಸರ್ವವು
ಪೂರಮಾಡುವ ನಮ್ಮ ಗುರುಗಳ ಪೂರದಯವಿರಲು।
ಚಾರುತರ ಶ್ರೀ ಕೃಷ್ಣಲೀಲೆಯ ತೋರಿ ರಚಿಸುವೆನೆಂದು
ಮನದಲಿ
ಘೋರತರ ಅಭಿಲಾಷೆ ಯೋಗ್ಯತೆ ಮೀರಿ ಇರುವುದು ೨

ಮನಸಿನಲಿ ಮಾತ್ಸರ್ಯವಿಲ್ಲದೆ ಘನಕವೀಶ್ವರಗಳಿಗೆವಂದಿಸಿ
ಘನತರಾನಂತಾದ್ರಿರಮಣನ ಮನಸಿನೊಳಗಿಟ್ಟು
ಅನುಸರಿಸಿ ಭಾಗವತವನು ಬಹುವಿನುತ ದಶಮ ಸ್ಕಂದದರ್ಥವ
ಕನ್ನಡಿ ತೋರಿಸಿದಂತೆ ಸ್ಪಷ್ಟದಿ ಕನ್ನಡಿಲ್ಪೇಳುವೆನು ೩

ಪದ್ಯ

ಪೂರ್ವದಲಿ ಭೂದೇವಿ ಕ್ರೂರದೈತ್ಯರ ಬಹಳ ಭಾರ ಸೈರಿಸದಲೆ
ಕಣ್ಣೀರು ಸುರಿಸುತ ತನಗೆ ಮೀರಿ ಬರುತಿರುವ
ಆಘೋರದುಃಖವನು
ತೋರಿ ಮೊರೆ ಹೊಕ್ಕಳು ವಾರಿಜೋದ್ಭವಗೆ।
ಕಾರುಣ್ಯದಿಂದಲಿ ಪರಿವಾರ ಸಹಿತ್ಯಾಗವನು
ಕ್ಷೀರಾಬ್ಧಿಯಲಿ ಪೋಗಿ ।

ಶ್ರೀ ರಮೇಶನ ಸ್ತುತಿಸುತಿರುವ ಕಾಲದಲಿ।
ಅಶರೀರ ವಾಣಿಯ ಕೇಳಿ ಸಾರ ಹರಿಹೃದ್ಭಾವ
ಸಾರಿ ಹೇಳಿದನು ವೃಂದಾರ ಕರುಗಳಿಗೆ ೧

ಪದ, ರಾಗ: ಯರಕಲಕಾಂಬೋದಿ ಅಟತಾಳ ಸ್ವರಧೈವತ

ಕೇಳಿರೋ ಭೋ ದೇವತೆಗಳಿರಾ ಹೇಳುವೆ ಹರಿಭಾವವ
ಹೇಳಿರೋ ನಿಮ್ಮವರಿಗೆಲ್ಲಾ ಭಾಳ ಸಂತೋಷದಿಂದಲೇ ಪ

ಇಷ್ಟುದಿವಸ ಭೂದೇವಿ ಕಷ್ಟವ ಬಟ್ಟಳು ಬಹಳ ಸ್ಪಷ್ಟವಾಗಿ
ಆಕೆಯಾ ಕಷ್ಟವು ದೂರಾಗುವುದಿನ್ನು ॥ ವಿಷ್ಣುನಾಜ್ಞೆಯಲಿ
ನೀವು ವೃಷ್ಣಿ ಕುಲದಲ್ಹುಟ್ಟಿರೋ॥ ವಿಷ್ಣುತಾ ದೇವಕಿಯಲ್ಲಿ
ಕೃಷ್ಣನಾಗಿ ಹುಟ್ಟುವಾ ೧

ಪದ

ಈ ವಚನವ ಕೇಳಿ ದೇವತಿಗಳಾಗ ಹರಿಸೇವೆ ಆಗಲಿಯೆಂಬೋ
ಭಾವದಲಿ ಜನಿಸಿದರು। ಈ ವಸುಧಿಯೊಳಗವರು
ಭಾವಕನು ಕಶ್ಯಪ ವಿಭಾವಸುವನ ಪೋಲ್ವ ವಸು
ದೇವನಾದನು ಅದಿತಿದೇವಿ ತಾ ಜನಿಸಿದಳು ದೇವಕಿಯು ಆಗಿ।
ದೇವ ಪೂಜಕನು ವಸುದೇವ ತಾ ಪ್ರೀತಿಯಲಿ
ದೇವಕಿಯ ಮದುವೆಯಾದ ದೇವಕನ ಮಗಳಾದ
ದೇವಕಿಗೆ ಕೊಟ್ಟ ಸದ್ಭಾವದಲಿ ಬೇಕಾದ್ದು ದೇವಕಿಯಲಿ
ವಸುದೇವ ರಥವೇರಿದನು ಆವಾಗ ಕಂಸ ತಾ ತೀವ್ರ
ಸಾರಥಿಯಾಗಿ ಕೇವಲ ಸ್ನೇಹದಲಿ ತೀವ್ರ ರಥವನು
ನಡಿಸಲಾವತ್ತಿಗಾಯಿತಲ್ಲೆ ವಿಯದ್ವಾಣಿ

ಪದ, ರಾಗ(ದೇಸಿ) ಅಟತಾಳ, ಸ್ವರಷಡ್ಜ

ಕೇಳು ಕಂಸನೆ ನಿನಗೇಳುವೆ ನಾ ಬಂದು। ಕೇಳು ಕಂಸಾ॥
ಬಹಳ ದಿವಸ ಬಾಳಿ ಇರುವವನಲ್ಲ ಕೇಳು ಕಂಸ ಪ

ಮಂಗಳಾಂಗಿಯು ಈಕೆ ತಂಗಿ ಎಂದೆನಬೇಡ ಕೇಳು ಕಂಸಾ।
ತಂಗಿಯ ಮಗನೇ ನಿನ್ನಂಗಕ್ಕೆ ವೈರಿಯು ಕೇಳು ಕಂಸಾ॥ ೧

ಭಂಡ ನಾನೆಂದು ಉತ್ಕಂಠಿದಿಂದರ ಬೇಡ ಕೇಳು ಕಂಸಾ।
ಎಂಟನೆಯವ ನಿನ್ನ ಘಂಟಸಿ ಕೊಲ್ಲುವನು ಕೇಳು ಕಂಸಾ॥ ೨

ಸಿದ್ಧ ವೈರಿ ದಾವಾತಿದ್ದಾನೆಂದೆನ ಬೇಡ ಕೇಳು ಕಂಸಾ।
ಶುದ್ಧ ಅನಂತಾದ್ರೀಶ ಅವತಿಳಿ ಕೇಳು ಕಂಸಾ॥ ೩

ಪದ್ಯ

ನುಡಿದಿರುವ ಆ ಸತ್ಯವಾಣಿಯ ಕೇಳಿ ಮೃತ್ಯುಗಂಜಿಕೀನ್ನ
ಹೊತ್ತುಗಳೆಯದಲೆ ಆ ಹೊತ್ತು ಕೊಲಬೇಕೆಂದು ಸತ್ವರದಿ
ಕೇಶದಲಿ ಒತ್ತಿ ಹಿಡಿದು ಕತ್ತಿ ಹಿರಿದೆತ್ತಿದನು ಕಂಸಾ।
ಎತ್ತಿದಂಥಾ ಕೈ ವತ್ತಿಡಿದು ವಸುದೇವ ಸತ್ವರದಿ ಅವನ
ಆ ವೃತ್ತಿಯನು ತಿಳಯುತಲೆ ಅತ್ಯಂತವಾಗಿ ತನ್ನ ಚಿತ್ತದಲಿ
ಮಿಡುಕಿ ಮದಮತ್ತ ಕಂಸಗೆ ನುಡಿದ ಒತ್ತಿ ಈ ಪರಿಯಾ ॥ ೧

ಪದ, ರಾಗ: ಆನಂದಭೈರವಿ ಆದಿತಾಳ

ಬೇಡ ಬೇಡೆಲೊ ಕಂಸಾ ಈ ಬುದ್ಧಿಯು ಬೇಡ
ಬೇಡಲೊ ನೋಡಿ
ಈಕೆಯಲಿ ಮಾಡು ಮಮತೆಯನು ಮಾಡಬೇಡ ಹಿಂಸಾ॥ ಪ

ಈಕೆ ನಿನ್ನತಂಗಿ । ತಿಳಿ ನನ್ನಾಕೆಯು ಅರ್ಧಾಂಗಿ
ಯಾಕೆಕೊಲ್ಲುವಿಯೋ
ನೀ ಕರುಣಿಸು ಸಣ್ಣಾಕಿ ನಿರ್ಮಲಾಂಗಿ॥ ೧

ಕೊಂದರೆ ಎನಗೆ ಕೇಡು । ಮತ್ತದರಿಂದ ನಿನಗೆ ಕೇಡು
ಕೂಂದವರಿಗೆ ಕೊತಿ ಮುಂದೆ ಉಂಟು ತ್ವರದಿಂದ
ತಿಳಿದು ನೋಡು॥ ೨

ಏಸು ದಿವಸ ನೀನು ಬದುಕುವಿ ನಾಶವಿಲ್ಲವೇನು।
ಮೋಸವಾಗದಿರು ಶ್ರೀಶ ಅನಂತಾದ್ರೀ ಕೋಪಿಸುವನು ೩

ಆರ್ಯಾ

ಬಹಳ ರೀತಿಯಲಿ ಹೇಳಿಕೊಂಡರೂ ಕೇಳಲಿಲ್ಲ ಕಂಸನು
ಆಗ ಬಹಳ ದುಃಖವನು ತಾಳದೆ ಮತ್ತೆ ಹೇಳಿಕೊಂಡನು
ಶೌರಿಯು ಹೀಗೆ ॥ ೧

ಪದ, ರಾಗ: ಅನಂದ ಭೈರವಿ ತಾಳ: ಆದಿ

ಬಿಡು ಬಿಡು ಈಕಿನ್ನ ಬ್ಯಾಗ ಕಡಿಯದೆ ನೀನು ಹಿಡಿಹಿಡಿ
ಬೇಡಿದ್ದು ಕೊಡುವೆನು ನಾನು। ಪ

ಜೀವ ಹತ್ಯವೇ ಮುಂಚೆ ಕೇವಲ ನಿಂದ್ಯದು ಸ್ತ್ರೀ ವಧಕಂತು
ಇನ್ನು ದಾವುದು ಸರಿಯದು ॥ ೧

ಹುಟ್ಟುದರೀಕೆಯ ಹೊಟ್ಟೆ । ಮಕ್ಕಳು ಘಟ್ಟಿ ಮನಸು ಮಾಡಿ
ಕೊಟ್ಟುಬಿಡುವೆನು ಕೇಳು ॥ ೨

ಬಲ್ಲವ ನೀ ಕೇಳು ಸುಳ್ಳ ಅಲ್ಲ ಈ ವಾಣಿ
ಬಲ್ಲಿದಾನಂತಾದ್ರಿವಲ್ಲಭನ ಆಣಿ॥ ೩

ಪದ, ರಾಗ: ಯರಕಲಕಾಂಬೋಧಿ

ಶೌರಿಯ ವಚನವ ಕೇಳಿ ವೈರಿಯ ಕಂಸನು ಆಗ ಮೋರೆಯ
ತೆಗ್ಗಿಬಿಟ್ಟನು ನಾರಿಯ ಕೊಲ್ಲುವದು । ವೈರಿಯ ಭಯ ಕಳೆವುತ
ನಿರ್ವೈಯು ಆಗಿರುವಂಥ ಶೌರಿಯು ನಡೆದನು ಮನೆಯಲ
ನಾರಿಯ ಕರಕೊಂಡು ॥ ೧

ಮುಂದಾ ದೇವಕಿಯಲಿ ಕಂದನು ಆದಾಕ್ಷಣಕೆ ತಂದೊಪ್ಪಿಸಿದನು
ಕಂಸಗೆ ನೊಂದ ವಸುದೇವ। ಮುಂದಾ ಕಂಸನ ನೋಡಿ।
ಮನನ ಹಾಸ್ಯದಿ ಮತ್ತ ಕಂದನ ತಿರಿಗಿ ಒಪ್ಪಿಸಿ ಆಗಂದನು
ಈ ಪರಿಯು ॥ ೨

ಶಿಷ್ಟನೆ ನೀಕೇಳೈ ಬಂದಿಷ್ಟಿಲ್ಲಿವನಿಂದೆನಗೆ। ಸ್ಪಷ್ಟದಿ ನಿನಗ್ಹೇಳುವೆ
ಎನಗಷ್ಟಮನೇ ವೈರಿ। ದುಷ್ಟನ ಮಾತಿಗೆ ಶೌರಿಯು ತುಷ್ಟನು
ಆಗ ನಡೆದನು ಶ್ರೇಷ್ಠಾನಂತಾದ್ರೀಶನ ಚೇಷ್ಟೆಯು
ಇದು ಎಂದು ॥ ೩

ಪದ, ರಾಗ: ಕನ್ನಡ ಕಾಂಬೋದಿ ತಾಳ:ಬಿಲಂದಿ

ಮುಂದ ಶೌರಿಯು ತನ್ನ ಮಂದಿರಕ್ಕೆ ಪೋಗಲು ಬಂದ ನಾರದನು
ಆಗಲ್ಲೆ ಕಂಸ ಇದ್ದಲ್ಲೆ ॥ ೧

ದೇವಕಾರ್ಯದಲ್ಲೇವೆ ಕೇವಲೋದ್ಯೋಗಿ ಸ್ನೇಹಭಾವ ಅವನಲ್ಲೆ
ಮಾಡಿದಾ । ಮಾತನಾಡಿದಾ॥ ೨

ಅಸಮ ಕಂಸನೆ ಕೇಳು ವಸುಧಿಯೊಳೀ ಕಾಲಕ್ಕೆ ಹೂಸ
ಸುದ್ದಿಯಂಬೋದ್ಹುಟ್ಟಿತು । ಕೆಲಸ ಕೆಟ್ಟಿತು॥ ೩

ದಾವ ಮೊತೇನ್ಹೇಳಲಿ ದೇವದೇವ ಶ್ರೀಹರಿ ದೇವಕಿಯಲ್ಲಿ ಪುಟ್ಟುವಾ।
ನಿನ್ನ ಕೊಲ್ಲುವಾ॥ ೪

ಅಸುರರಾದವರುಗಳಾ ಅಸುಗಳನ್ನೆ ಹೀರುವಾ ವಸುಧಿ
ಭಾರವನಿಳಿಸುವಾ ಕೀರ್ತಿ ಬೆಳಿಸುಮವಾ॥ ೫

ನಂದಗೋಪಾದಿಗಳೆಲ್ಲ ನಂದ ಬಾಂದವರು ಮತ್ತು ಮುಂದ
ವಸುದೇವಾದಿಗಳು । ದೇವತಿಗಳು॥ ೬

ಇನ್ನಕೇಳು ಇವರ ಹೊರ್ತು ಅನ್ನರಾದವರು ಎಲ್ಲಾನಿನ್ನ
ಅನುಸರಿಸೆ ಇರುವುವರು । ಅಸುರರೇ ಅವರು॥ ೭

ಮೂಲದಲ್ಲೇ ಮುಂಚೆ ನೀ ಕಾಲನೇಮಿಯೆನಿಸಿ ಈ
ಕಾಲಕ್ಕೆ ಕಂಸನಾಗಿರುವಿ । ಮೈಮರ್ತು ಇರುವಿ ॥ ೮

ನಿನ್ನ ಪೂರ್ವ ವೈರಿಯು ಚನ್ನಿಗಾನಂತಾದ್ರೀಶಾ ನಿನ್ನ
ಕೊಲ್ಲುವನೆಂಬುದದು ।ನಿನಗೆ ತಿಳಿಯದು ॥ ೯

ಪದ್ಯ

ಧಿಟ್ಟ ನಾರದನು ಮುನಿಮುಟ್ಟಿ ಬಂದ್ಹೀಂಗನಲು
ಥಟ್ಟನೆ ಕಂಸ ಭಯಬಟ್ಟು ಅವರಿಬ್ಬರಿಗೆ ಫಟ್ಟ ಬೇಡಿಯ ಬಿಗಿದು
ಹುಟ್ಟುಟ್ಟಿದವರನ್ನ ಬಿಟ್ಟು ಬಿಡುದಲೆ ಕೊಂದ ಹುಟ್ಟಿದಾಕ್ಷಣಕೆ॥
ಹುಟ್ಟುಗ್ರ ಸೇನನಲಿ ಹುಟ್ಟಿದಾರಭ್ಯ ಬಹು ದಿಟ್ಟಾದ ಸ್ನೇಹವನು
ಬಿಟ್ಟ ಆ ಕಂಸ ಕಂಗೆಟ್ಟು ಬಹುಕಾಸೋಸಿ ಬಟ್ಟವನ ಬಂದಿಯ
ಲ್ಲಿಟ್ಟುತಾನೆ ಆದ ಪಟ್ಟಕಾಧಿಪತಿಯು॥ ೧

ಪದ: ರಾಗ: ಶಂಕರಾಭರಣ ಸ್ವರ: ಷಡ್ಜ, ತಾಳ: ಆದಿ

ಕೇಡಿಗೆ ಕಂಸನು ತನ್ನ ಪ್ರೌಢ ಭೃತ್ಯರಿಂದ ಕೂಡಿ ಕಾಡಿ
ಯೂದವರನ್ನು ಬಹುಪೀಡಾ ಬಡಿಸೀದಾ ॥ ೧

ದುಷ್ಟನ ಕೈಯೊಳು ಸಿಕ್ಕು ಶಷ್ಟ ಬಡಲಾರೆವು ಎಂದು
ಅಷ್ಟೂರು ನಿಲ್ಲದೆ ದೇಶಭ್ರಷ್ಟರಾಸರು॥ ೨

ಅನುಬಂಧಿಗಳೆಂಬುವರು ಅನುರಾಗದಿಂದಲ್ಲೆ।
ಅವನ ಅನುಸರಿಸಿಕೊಂಡಿರುತಿಹರು ಅನುದಿನದಲ್ಲಿ॥ ೩

ಕ್ರೂರಾಗಿ ಇರುವೊನು ಕಂಸಾ ನಾರಿ ದೇವಕ್ಕಿ ದೇವಿಯು
ಆರು ಮಹಾಕಾಳಿಯ ಹರೊ ಆಜ್ಞೆಯಿಂದ ಕೀಳುತು
ರೋಹಿಣಿ ಗರ್ಭದೊಳಿಟ್ಟಳು॥ ೪

ದೇವಕಿದೇವಿಯು ವಸುದೇವಾದಿಗಳೆಲ್ಲ ಗರ್ಭ
ಸ್ರಾವವಾಯಿತೆಂದೊದರಿದರು ಆ ವ್ಯಾಳ್ಯದಲ್ಲಿ॥ ೫

ಎಂಟನೆ ಗರ್ಭಾಗಿ ಶ್ರೀ ವೈಕುಂಠೇಶ । ನಿಂತಾನು ಸಾಧು
ಕಂಟಕರನ್ನು ಕೊಲ್ಲುವೆ ನೆಂದುತ್ಕಂಠದಿಂದಲಿ ॥ ೬

ಶಂಜಾಕ್ಷಿ ದೇವಕಿ ದೇವಿ ಶಂಜನಾಭನುದರವೆಂಬೋ
ಪಂಜರದೊಳಿರಲು ತೇಜಃ ಪುಂಜಳಾದಳು ೭

ಇಂಥಾಕೆಯ ಕಂಡು ಕಂಸಾನಂತಾದ್ರೀಶ ಗರ್ಭದಲ್ಲಿ
ನಿಂತಾನೆಂದು ತಿಳದೀಪರಿ ಚಿಂತಿ ಮಾಡಿದಾ॥ ೮

ಪದ: ರಾಗ: ಶಂಕರಾಭರಣ

ಏನು ಮಾಡಲಿ । ನಾ ಇನ್ನೇನು ಮಾಡಲಿ । ಏನು ಮಾಡಲೇನು
ಬಿಡಲೀದೇನು ಬಂತು ಹಾನಿ ಬಹಳ ದೀನನಾದೆ ನಾನು
ವಿಷ್ಣು ತಾನೆ ಬಂದಿನ್ನೇನು ಗತಿ ಇನ್ನೇನು॥ ಪ

ಕ್ರೂರ ಬದ್ಧಿ ತೋರಿ ಈ ನಾರಿಯಾ ಸಂಹಾರ ಮಾಡಿ ।.
ವೀರರೊಳಗೆ ಸೇರಿ ಎನ್ನ ಮಾರಿ ಹ್ಯಾಂಗ ತೋರಲಿನ್ನೇನು ॥ ೧

ತಂಗಿ ವಧ ಜಗಂಗಳೊಳಗೆ ಅಮಂಗಳಿದು ಸು
ಮಂಗಳಲ್ಲ ಹಿಂಗಿಸರ್ವಸಂಗಿ ಅಂತರಂಗದೊಳಗೆ
ಭಂಗ ಬಡುವೆ ೨

ಶುದ್ಧಗರ್ಭಿಣಿ ಇದ್ದವಳನ ಗುದ್ದಿ ಕೊಂದರಪಮರಣ
ಸಿದ್ಧ ಅನಂತಾದ್ರಿರಮಣ ಗುದ್ದಿ ಕೊಲ್ಲುವ ಬುದ್ದಿ ತಿಳಿಯದೇನು॥ ೩

ಪದ್ಯ

ಖಿಡು ಪಾಪಿ ಕಂಸ ಗಡಬಡಿಸೆ ಈ ಪರಿ ಮುಂದ
ಹಡದರೀಕೆಯ ಮಗನ ಹೊಡೆದು ಹಾಕುವೆನೆಂತೆಂದ ದೃಢ
ನಿಶ್ಚಯವ ಮಾಡಿ ಕಡಲ ಶಯನನ ನಾಕುಡಿಗೆ ನೋಡುತ ಅವನ
ಬಿಡದೆ ಸ್ಮರಿಸಿದನು॥ ನಡುವಾಗ ಕಾಲಿಟ್ಟು ನಡುವಾಗ ತಾನು
ಉಂಬುಡುವಾಗ ಮತ್ತ ನೀರ್ಕುಡುವಾಗ ಶ್ವಾಸವನು ಬಿಡುವಾಗ
ವಿಷಯಸುಖ ಬಡುವಾಗ ಸರ್ವತ್ರ ಖಿಡು ಜಗನ್ಮಯ ಹರಿಯ
ಬಿಡದೆ ನೋಡಿದನು॥ ೧

ಆರ್ಯಾ

ದೇವಕಿಯಲಿ ದೇವೇಶನು ತಾ ಕೇವಲ ಸನ್ನಿಹಿತ
ವಾಗಿರಲು। ದೇವ ಸಹಿತ ಬಂದಾ ವಿಧಿ ವಂದಿಸನೆ ಈ ವಿಧ ಸ್ತುತಿ
ಮಾಡಿದ ಮೊದಲು॥ ೧

ಪದ, ರಾಗ: ಪೂರ್ವಿ ತಾಳ: ತಿವಿಡೆ ಸ್ವರ: ಪಂಚಮ

ನಿನ್ನ ಹೊರ್ದಿನ್ನಾರಿಲ್ಲವೋ । ಭೋ ಘನ್ನ ಮೋಹನ್ನಾ । ನಿನ್ನ
ಹೊರ್ತಿನ್ನಾರೆನ್ನೊಡಿಯನೆ ॥ ಪ

ಮಚ್ಚ ಸುಕೆಚ್ಛಪ ಸ್ವಚ್ಛಧರೋತ್ಸವ ವತ್ಸಗೆ ಮೆಚ್ಚದ
ವತ್ಸ ನೃಪೋಚ್ಚನದೋತ್ಸಕ ಚಿತ್ಸುಖ ಮತ್ಸಲ ಮತ್ಸಪ ಹುಚ್ಚ
ಹಯೋತ್ಸವ ಅಚ್ಚ ಶ್ರೀವತ್ಸಾ॥ ೧

ಪಂಡಿತ ದುಂಡ ಭೂಮಂಡಲ ಮಂಡಿಸಿ ಕಂಡ ಪ್ರಚಂಡರ
ಕೊಂದಸು ಹೀರುವಿ ಪುಂಡರ ಗಂಡ ಉದಂಡ ಬ್ರಹ್ಮಾಂಡದ
ಭಾಂಡವ ಮಂಡಿಯೊಳ್ ಕೊಂಡಿಟ್ಟಕೊಂಡಿ ೨

ಅಂತಕರಂತಕ ತಂತ್ರರ ತಂತ್ರಸ್ವತಂತ್ರ ಅನಂತಾನಂತ
ವೇದಾಂತ ವಿಬಿಂತಕ ಚಿಂತನ ಸಂತತ ಸಂತರೊಳ್
ನಿಂತಿರುವಂಥ ಅನಂತಾದ್ರಿಕಾಂತಾ ॥ ೩

ಆರ್ಯಾ

ಈ ಪರಿ ಸ್ತುತಿಸುತ ಆ ಪರಮೇಷ್ಠಿಯು ಆ
ಪರಮಾತ್ಮಗೆ ನತಿಸಿದನು ॥ ಶ್ರೀ ಪತಿ ಜನನಿಗೆ ಈ
ಪರಿ ಆಡಿದ ತಾಪತ್ರಯ ಹರ ನುಡಿಗಳನು ॥ ೧

ಪದ, ರಾಗ : ದೇಶಿ ಅಟತಾಳ

ಕೇಳು ದೇವಕಿ ನಿನಗ್ಹೇಳುವೆ ಕಿವಿಗೊಟ್ಟು ಕೇಳೆ ಅಮ್ಮಯ್ಯಾ।
ಭಾಳ ಚಿಂತಿಯೊಳು ಬೀಳದೆ ಚಿತ್ತಿಟ್ಟು । ಕೇಳೆ ಅಮ್ಮಯ್ಯಾ। ಪ

ಮಂದಗಮನೆ ನಿನ್ನ ಮುಂದೆ ಪೇಳುವದಕೆ ಬಂದೆನಮ್ಮಯ್ಯಾ।
ಮುಂದ ಆಗುವಂಥ ಛಂದಾದ ಸುದ್ದಿಯ ತಂದೆನಮ್ಮಯ್ಯಾ॥ ೧

ಘಟ್ಯಾಗಿ ತಿಳಿನಿನ್ನ ಹೊಟ್ಟಿಲೆ ಕೃಷ್ಣನು ಹುಟ್ಯಾನಮ್ಮಯ್ಯ।
ಬಿಟ್ಟುಬಿಡದೆ ಬಹು ದಿಟ್ಟಾಗಿ ಸಂಭ್ರಮ ಕೊಟ್ಟಾನಮ್ಮಯ್ಯಾ॥ ೨

ಇಳಿಯ ಒಳಗೆ ಬಹು ಖಳನಾದ ಕಂಸನಿಂದುಳಿದಾನಮ್ಮಯ್ಯಾ।
ನಳಿನಾಕ್ಷ ಬಳರನು ಅಳಿದು ಗೋಕುಲದೊಳು
ಬೆಳೆದಾನಮ್ಮಯ್ಯಾ ೩

ಕುಂದರದನೆ ನಿನ್ನ ಕಂದನು ಅಲ್ಲಿಗೆ ಬಂದಾನಮ್ಮಯ್ಯ।
ಸಂದೇಹವಿಲ್ಲದೆ ಮುಂದ ಆ ಕಂಸನ್ನ ಕೊಂದಾನಮ್ಮಯ್ಯ ೪

ಗದ್ದಲ ಮಾಡುತಲಿದ್ದವೈರಿಗಳನು ಗೆದ್ದಾನಮ್ಮಯ್ಯಾ।
ಮುದ್ದು ಮುಬದ ಅನಂತಾದ್ರೀಶ ನಿನ್ನಲ್ಲೆ ಇದ್ದಾನಮ್ಮಯ್ಯಾ॥ ೫

ಆರ್ಯಾ

ಕಮಲಾಸನ ಆ ಕಮಲಮುಖಿಗೆ ಶ್ರೀ ಕಮಲನಾಭ
ಹುಟ್ಟುವನೆಂದು ॥ ನಮಿಸುತ ನಡೆದನು ವಿಮಲವಾದ
ಹೃತ್ಕಮಲದಲ್ಲಿ ಆತನ ತಂದು॥ ೧

ಪದ

ಗೂಢ ಹರಿ ಅವತಾರ ಮಾಡುವಾ ಕಾಲದಲಿ ಪ್ರೌಢ
ಗ್ರಹ ತಾರಿಗಳು ಕೂಡಿ ಸುಸ್ಥಾನ ಸಂರೂಢವಾದ ವಾದವು
ಸುರರು ಮಾಡಿದರು ಸ್ತುತಿಯ ಕೊಂಡಾಡಿದರು
ಸುರಗಾಯಕರು ಮಾಡಿದರು ಗಾಯನವ ಪಾಡಿದರು
ಅಪ್ಸರರು ಕುಣಿದಾಡಿದರು ಎಲ್ಲರು ಕೂಡಿ ಪುಷ್ಪದ ವೃಷ್ಟಿ
ಮಾಡಿದರು ಬಿಡದೆ॥ ನೋಡಿ ಸುಮುಹೂರ್ತ ದಯಮಾಡಿ
ದೇವಕಿಯಲಿ ಗಾಢನೆ ಅವತಾರ ಮಾಡಿದನು ಶ್ರೀ ಕೃಷ್ಣ
ಷೋಡಶ ಕಲೋಚ್ಚಯದಿ ಪ್ರೌಢವಾದ ಚಂದ್ರಮನು
ಮಾಡಲದ ದಿಕ್ಕಿನಲಿ ಮುಡಿದಂತೆ॥ ೧

ವಂದಿಸುತಲಿ ದೇವಕಿಯ ಕಂದನವತಾರವಿದು ಛಂದಾಗಿ
ಕೇಳಿದರೆ ಕಂದರಿಲ್ಲದೆ ಬಹಳ ಕಂದಿದವರಿಗೆ
ದಿವ್ಯ ಕಂದರಾಗುವರು ಆ ಕಂದನಂಥವರು ಮುಕುಂದನ
ದಯೆದಿ॥ ಮುಂದೆ ಹೆಜ್ಜೆಜ್ಜೆಗಾನಂದ ವಾಗುವದಿದಕೆ
ಸಂದೇಹವಿಲ್ಲ ಸುರವಂತಿದಾನಂತಾದ್ರಿ ಮಂದಿರದ
ಒಳಗಿರುವ ಇಂದಿರೇಶನು ತಾನೆ ಬಂದು ಮುಗಿಸಿದ
ಇಲ್ಲಿಗೊಂದು ಅಧ್ಯಾಯಾ॥ ೨

॥ ಮೊದಲನೆಯ ಅಧ್ಯಾಯ ಸಂಪೂರ್ಣವು
ನಂದಗೋಪಲಕಾಂದಾಯ ನಮಃ॥

ಅಧ್ಯಾಯ ಎರಡು

ಪದ: ರಾಗ: ಯರಕಲಕಾಂಬೋದಿ ತಾಳ: ಬಿಲಂದಿ, ಸ್ವರ ಷಡ್ಜ

ದೇವಕಿಯಲಿ ಅವತರಿಸಿದ ದೇವಾಧೀಶನ ಕಂಡು ಆ ವಸುದೇವನು
ಸ್ತುತಿಸಿದ ಕೇವಲ ಭಕುತಿಯಲಿ । ಲಾವಣ್ಯಾಂಬುಧಿಯನಿಸುವ
ದೇವನ ದೃಷ್ಟಿಲೆ ನೋಡಿ ದೇವಕಿ ನುಡಿದಳು ಕಂಸನ ಕೇವಲ
ಭಯದಿಂದ ॥ ೧

ಲೋಕಾಧೀಶನೆ ನಿನ್ನ ಅಲೌಕಿಕ ರೂಪಾವು ಕಂಡು ಆ
ಕಂಸನ ಭಯದಲ್ಲಿ ನಾ ವ್ಯಾಕುಲಳಾಗಿರುವೆ। ಸಾಕೀಕಾಲಕ
ಈ ಅಪ್ರಾಕೃತರೂಪವು ವನಲು ಶ್ರೀಕಾಂತನು ಆಕ್ಷಣದಲಿ
ಪ್ರಾಕೃತ ಶಿಶುವಾದಾ॥ ೨

ಆ ಕಾಲದಲ್ಯಾದುರ್ಗಾ ತಾ ಕಾಲವ ಕಳಿಯದಲೆ ಗೋಕುಲದಲ್ಲಿ
ಹುಟ್ಟಿದಳು ಗೋಪನ ಪತ್ನಿಯಲಿ । ಆ ಕಾಲಕೆ ಸ್ತ್ರೀ
ಪುರುಷೆಂದಾಕಿಯು ತಿಳಿಯದೆ ನಿದ್ರಿಲಯಲ್ಯಾಕ್ರಾಂತಾದಳು
ಹುಟ್ಟಿರುವಾಕಿಯ ಮಹಿಮೆ ಇದು॥ ೩

ಪಟ್ಟಣದಲಿ ಸರ್ವರು ಭಯಬಿಟ್ಟು ನಡರಾತ್ರಿಯೋಳ್
ತಟ್ಟಲು ಬಹುನಿದ್ರಿ ಸ್ಮೃತಿಗೆಟ್ಟು ಮಲಗಿರಲು ।
ಹುಟ್ಟಿದ ಬಾಲಕನ ನಾ ಬಚ್ಚಿಟ್ಟು ಬರುವೆನೆಂದ
ಥಟ್ಟನೆ ನಡದನು ಕೃಷ್ಣನ ಘಡ್ಡ್ಯಡದು ಶೌರಿ॥ ೪

ಕಾಲೊಳಗಿನ ಬೇಡಿಯು ತತ್ಕಾಲಕ ಕಡದಿತು
ಬಾಗಿಲಕೀಲಿಗಳೆಲ್ಲಾ ಸಾಲ್ಬಿಡದಿಂದ್ಗರಂತೆ।
ಬೈಲಾದವು ಬಾಗಿಲಗಳಾ ಕಾಲದಿ ಹೀಂಗಾದದ್ದು
ಬಾಲಕ ಹರಿ ಬದಿಲಿದ್ದ ಮ್ಯಾಲೇನಾಶ್ಚರ್ಯ ೫

ವಾಸದ ವೃಷ್ಟಿಯ ಮಾಡಲು ಶೇಷನು ಬೆನ್ನಿಲೆ ಬಂದು
ಲೇಸಾಗಿ ಮರಿ ಮಾಡದ ಸಾಸಿರ ಹೆಡಿಯಿಂದ
ಸೂಸಿ ಬಾಹುವ ಯಮುನಿ ವಾಸುದೇವನ ಕಂಡು
ಘಾಸಿಯು ಮಾಡದೆ ಕೂಟ್ಟಳು ಅಸಮಯಕೆ ಹಾದಿ ೬

ಗೋಕುಲಕ್ಹೋಗುತ ಶೌರಿಯು ಶ್ರೀ ಕೃಷ್ಣನ ಅಲ್ಲಿಟ್ಟು
ಆ ಕನ್ನಿಕೆಯ ತಂದು ತನ್ನಕಿಯ ಬದಿಲಿಟ್ಟಾ।
ಆ ಕಾಲಕ ಆ ಬೇಡಿಯ ತಾಕಾಲಗಳಲ್ಲಿತಟ್ಟು॥
ಶ್ರೀ ಕಾಂತನ ಸ್ಮರಿಸುತಲೆ ಏಕಾಂತದಲ್ಲಿರುವಾ॥ ೭

ಬಾಗಿಲುಗಳು ಎಲ್ಲಾ ಮತ್ಥಾಂಗೆ ಕೀಲಿಗಳ್ಯಲ್ಲಾ
ಬ್ಯಾಗನೆ ಆದವು ಮುಂಚಿನ್ಹಾಂಗೆ ತಿಳಿಗೂಡದೆ।
ಆಗಾ ಕೂಸಿನ ಧ್ವನಿ ಛಂದಾಗಿ ಕಿವಿಯಲಿ ಬೀಳಲು
ಬಾಗಿಲಕಾಯುವ ಭೃತ್ಯರು ಬ್ಯಾಗನೆದ್ದರು ಭಯದಿ॥ ೮

ಗಡಿಬಿಡಿಯಿಂದಲ್ಯವರು ಯಡವುತ ಮುಗ್ಗುತ ತ್ಯೋಡುತ
ನಡೆದರು ನಿಂದಿರದಲೆ ಬಹುಸಡಗರದರಮನಿಗೆ।
ಒಡಿಯಾನಂತಾದ್ರೀಶನ ಖಡುದ್ವೇಷ ಆಸವಗೆ
ನುಡಿದರು ದೇವಕಿದೇವಿಯು ಹಡಿದಾಳೆಂತೆಂದು॥ ೯

ಪದ್ಯ

ನುಡಿಯ ಕೇಳೀಪರಿಯ ಖಡುಪಾಪಿ ಕಂಸ
ಗಡವಡಿಸಿ ಕೊಂಡೆದ್ದು ಭಯ ಬಡುವತಲೆ ಶ್ವಾಸವನು
ಬಿಡುವುತಲೆ ಭರದಿಂದ ಎಡವುತಲೆ ಮುಗ್ಗುತಲೆ ನಡದನಾ
ದೇವಕಿಗೆ ಕುಡು ಕೂಸು ಎಂತ್ಯಂದು ನುಡಿಕೇಳಿ ಮನದಲ್ಲಿ
ಮಿಡುಕುತಲೆ ದೇವಕಿಯು ದೃಢವಾಗಿ ಕೈಯೊಳಗೆ ಹಿಡಿದು
ಆಕೂಸಿನಾ ಕುಡದೆ ಕಂಸನ ಮುಂದೆ ನುಡಿದಳೀ ಪರಿಯು॥ ೧

ಪದ: ರಾಗ: ನೀಲಾಂಬರಿ ತಾಳ: ತ್ರಿವಿಡಿ

ಕುಡಲಾರೆ ಕೂಸಿನ್ನನಾ ನಿನಗೆ ॥ ಅಣ್ಣ ಕುಡಲಾರೆ
ಉಡಿ ಒಡ್ಡಿ ಬೇಡುವೆ ಕಡಿ ಹುಟ್ಟ ಹೆಣ್ಣದು॥ ಪ

ಸೂಸಿಯು ನಿನಗೆ ಈಕಿ ತಿಳಿ ನೀನು । ಮತ್ತು
ಹಸಗೂಸು ಎಂಬುವದರಿಯೇನು । ಇಂಥಾ
ಶಿಶುವಿನಳಿದಾರೆ ಪಾಪ ಬರದೇನು।
ವಸುಧಿ ಒಳಗೆ ಬಹು ಹೆಸರಾದವನೋ ನೀನು॥ ೧

ಹಿರಿಯಣ್ಣನಲ್ಲೇನೊ ನೀ ಎನಗೆ । ಸ್ವಲ್ಪ
ಕರುಣಾವಿಲ್ಲವೋ ಎನ್ನೊಳು ನಿನಗೆ॥

ಮಕ್ಕಳಿರಧಾಂಗ ಮಾಡಿದಿ ಮನಿಯೊಳಗೆ
ಗುರುತಕ್ಕಿದು ಒಂದು ನೋಡಿ ಮರೆತೆನ್ಹಿಂದಿನ ದುಃಖ॥ ೨

ನಾ ಏನು ನಿನಗೆ ಮಾಡಿದೆ ಪೇಳು । ಬಹು
ಬಾಯಿತಗುವೆ ಕೋಪವು ತಾಳು। ಇಂಥಾ
ಆಯಾಸ ಬಿಟ್ಟು ಬಹುದಿನ ಬಾಳು।
ಧ್ಯೇಯಾನಂತಾದ್ರೀಶನ ಮಾಯಾ ಮೋಹತಳಿಗಿ॥ ೩

ಪದ್ಯ

ಅಪ್ಪ ಕುಡಲಾರೆಂದು ತಪ್ಪದಲೆ ಆ ಕೂಸಿನಪ್ಪಿಕೊಂಡಳುವಾಗ
ದರ್ಪಲೆ ಎಳಕೊಂಡು ಥಪ್ಪನೆ
ಕಲ್ಲ ಮ್ಯಾಲಪ್ಪಳಿಸಲಾಕೂಸು ತಪ್ಪನ್ಹಾರಿತು ಮ್ಯಾಲೆ
ತಪ್ಪಿಸ್ಯವನಾ। ಸ್ಪಷ್ಟ ತೋರಿದಳಲ್ಲೆ ಅಷ್ಟಬಾಹುಗಳಿಂದ
ಅಷ್ಟು ಚಿನ್ಹಿಗಳಂದ ಉಟ್ಟ ಪೀತಾಂಬರದಿ ತೊಟ್ಟ
ಕಂಚುಕದಿಂದ ದಿಟ್ಹಾಗಿ ಇರುವುವಳು ದುಷ್ಟ ಕಂಸಗ
ಹೀಂಗೆ ಸ್ಪಷ್ಟಪೇಳಿದಳು।

ಪದ ರಾಗ: ತೋಡಿ ತಾಳ ಬಿಲಂದಿ

ಮಂದ ಮತಿಯೇ ಕಂದರನ್ನ ಕೂಂದರೇನು ಫಲವೂ।
ಹಿಂದೆ ಬಹಳ ಕಂದರನ್ನು ಕೂಂದಿಯಲ್ಲೊ । ನೀನು
ಇಂದು ಎನ್ನ ಕೂಂದ ವ್ಯಾಲ ಮುಂದೆ ಬರುವದೇನು। ೧

ನಿನ್ನ ವೈರಿ ಅನ್ಯರಲ್ಲಿ ಇನ್ನ ಬೆಳೆವುತಿಹನೊ।
ಮುನ್ನ ಬಂದು ತನ್ನ ಬಲದಿ ನಿನ್ನ ಕೊಲ್ಲುವೊನು ೨

ಅಂತಕನ್ನ ನಿಂತು ಕೊಲ್ಲುವ ಭ್ರಾಂತಿ ಬಿಡೆಲೊ ನೀನು।
ಅನಂತಾನಂತಾದ್ರೀಶನಂತು ತಿಳುವದೇನೇ॥ ೩

ಪದ್ಯ

ಆ ಮಹಾ ಪಾಪಿ ಗ್ಯಾಡೀ ಮಾತು ದೇವಿ ತಾ
ಭೂಮಿಯಲಿ ಬಂದು ಬಹುಗ್ರಾಮದಲೆ ನಿಂತು ಬಹುನಾವು
ಉಳ್ಳವಳಾಗಿ ಕಾಮಿತಾರ್ಥಗಳನ್ನೂ ಪ್ರೇಮದಲಿ ಕುಡುತಿಹಳು
ನೇಮದಿಂದಾ॥ ಆ ಮಾಯಿ ವಚನವನು ಪಾಮರನು ತಾ
ಕೇಳಿ ರೋಮಾಂಚಗಳು ಉಬ್ಬಿ ನಾ ಮಾಡಿದಲ್ಲೆಂದು ನೇಮದಲಿ
ಇಬ್ಬರಿಗೆ ನೇಮಿಸಿದ ಬೇಡಿಯನು ತಾ ಮೋಚನವು ಮಾಡಿ
ಪ್ರೇಮದಿ ನುಡದಾ॥ ೧

ಪದ: ರಾಗ : ಸಾರಂಗ ಅದಿತಾಳ ಸ್ವರ ಮಧ್ಯಮ

ಎಲೆ ತಂಗಿಯೆ ಎಲೊ ಶಾಲಕ ಬಲು ಪಾಪಿಯು ನಾನು।
ಬಲು ಮಂದಿ ಮಕ್ಕಳನ ಛಲದಿಂದ ಕೊಂದೆ।
ತಿಳಿಯದೆ ನಾ ಇಂಥ ಕೆಲಸಕ್ಕೆ ತೊಡಕಿ
ಕುಲಗೇಡಿಯ ಪರಿ ಪಾಪದ
ಫಲ ಭೋಗಿಯು ಆದೆ॥ ೧

ಅಶರೀರದ ವಾಣಿಯು ಹುಸಿ ಅಯಿತು ಇಂದು
ವಸುಧಿಯೋಳಿರುವಾ ಮಾನುಷರಾ ಪಾಡೇನು॥
ಅಶರೀರ ವಾಣಿಗೆ ವಶನಾಗಿ ನಾನು । ಶಶಿಮುಖಿ ನಾನಿಮ್ಮ
ಶಿಶುಗಳ ಕೂಂದೆ॥ ೨

ಅಮಿತಾ ಅಪರಾಧಾಯಿತು ಕ್ಷಮಾ ಮಾಡಿರಿ ನೀವು॥
ವಿಮಲ ಮನಸಿನಿಂದ ನಮಿಸಿದೆ ನಿಮಗೆ॥
ಕಮಲೋದ್ಭವ ಬರದಂಥಾ ಕ್ರಮ ತಪ್ಪದು ಎಂದು
ಶ್ರಮಯಾತಕ ಸುಖದುಃಖವ ಸಮಮಾಡಿರಿ ನೀವು॥ ೩

ತಿಳಗೇಡಿಯು ಆ ಕಂಸ ತಿಳಿಹೇಳಿಪರಿಯು ಸ್ಥಳಬಿಟ್ಟು
ತಾ ತನ್ನ ಸ್ಥಳಕ್ಹೋದನು ಬ್ಯಾಗೆ\ ಬ್ಯಳಗಾಗಲು ಎಲ್ಲಾರಿಗೆ
ತಿಳಿಸೀದನು ಆಗೆ ಹೊಳುವಾ ದೇವಿಯ ಮಾತುಗಳನೆಲ್ಲ
ಬಿಡದೆ ॥ ೪

ಖಳರಂದರು ನಾವಿನ್ನ ಇಳಿಯೊಳ್ಪುಟ್ಟರುವಾ।
ಉಳದಾ ಬಾಲಕೃಷ್ಣಕರನ್ನ ಕೊಲ್ಲು ವುದ ಸತ್ಯಾ।
ತಿಳದೀಪರಿ ಅವರನ್ನ ಕಳಸೀದ ಕಂಸಾ
ಚಲುವಾನಂತಾದ್ರೀಶನ ಕೊಲ್ಲವೊದು ಎಂದು॥ ೫

ಪದ್ಯ

ಮುಂದ ಗೋಕುಲದಲ್ಲಿ ನಂದಗೋಪನು
ತನ್ನ ಕಂದನಾ ಮುಖವನ್ನು ಛಂದದಲಿ ನೋಡಿ
ಆನಂದ ಹಿಡಿಸದೆ ತಾನು ಬಂದ ಬಂದವರಿಗ್ಯಾನಂದ
ಬಡಸಿದ ಮನಕ ಬಂದದ್ದು ಕೊಟ್ಟು। ನಂದನಂದನನ
ವದನೇಂದು ದರ್ಶನಕಾಗಿ ಬಂಧು ಬಾಂಧವರೆಲ್ಲ
ಬಂದು ಒದಗಿದರಲ್ಲೆ ದುಂದುಬಿಯು ಮೊದಲಾದ
ಛಂದಾದ ವಾದ್ಯಗಳು ಒಂದಾಗಿ ನುಡದವಾನಂದದಿಂದಾ।
ಗೀತ ಬಲ್ಲವರು ಸಂಗೀತವನು ಮಾಡಿದರು ಪ್ರೀತಿಯಲಿ
ಪಾಡಿದರು ಶ್ರೋತ್ರಸುಖರಾಗಿ ಮಾಡಿದರು ಪ್ರೀತಿಯಲಿ
ಪಾಡಿದರು ಶ್ರೋತ್ರಸುಖರಾಗಿ ತಾತನವ ತನ್ನಲ್ಲೆ
ಜಾತನಾಥಂಥವಗೆ ಜಾತಕರ್ಮವು ಮಾಡಿ ಪ್ರೀತನಾದಾ।
ಪ್ರೀತಗೋಕುಲದಲ್ಲಿ ನೂತನೈಶ್ವರ್ಯಗಳು ಜಾತವಾದವು
ಸರ್ವಜಾತಿಗಳಿಗ್ಯಾದರೂ ಯಾತಕ್ಕೂ ಕಡಿಮಿಲ್ಲ ಸೋತಂಥ
ದಾರಿದ್ರ್ಯ ಯಾತಕಿರುವದು ರಮಾನಾಥ ಇರಲು॥ ೧

ಸ್ಥಿರ ಮನಸಿನಿಂದಲ್ಲೆ ಸ್ಥಿರವಾಗಿ ಕುಳಿತು ಈ ಚರಿತವನು
ಕೇಳಿದವರ ಪರಿಪರಿಯ ಅಭಿಲಾಷ ಪರಿಪೂರ್ಣವಾಗುವದು
ಚರಿಸದಲೆ ಅವರಲ್ಲಿ ಸ್ಥಿರಳಾಗಿ ಇರುವವಳು ವರಮಹಾಲಕ್ಷ್ಮೀ।
ಧರಿಯೊಳಗ ಇರುವಂಥ ವರಕವೀಶ್ವರರಂತೆ ಸ್ಥಿರವಲ್ಲ
ಎನ ಬುದ್ಧಿ ವರ ಅನಂತಾದ್ರೀಶ ಪರಮಬಾಲಕನಾಗಿ ಇರುವ
ಗೋಕುಲದಲ್ಲಿ ತ್ವರ ಅವನೇ ಮುಗಿಸಿದಿಲ್ಯರಡು ಅಧ್ಯಾಯಾ॥ ೨
"ಶ್ರೀ ಕೃಷ್ಣಾರ್ಪಣ ಮಸ್ತು"
ಎರಡನೆಯ ಅಧ್ಯಾಯವು ಸಂಪೂರ್ಣವು"

ಅಧ್ಯಾಯ ಮೂರು

ಪೂತನಾ ಅಸುಹಾರಿಣಿ ನಮಃ

ಪದ್ಯ

ಪೊಡವಿಯಲಿ ಎಲ್ಲರಿಗೆ ಒಡಿಯನಾಗಿರುವಂಥ
ಖಡು ಪಾಪಿ ಕಂಸಗೆ ಬಿಡದೆ ಪ್ರತಿವರ್ಷಕ್ಕೆ ಕೊಡತಕ್ಕ
ಕಪ್ಪವನು ಕುಡಬೇಕು ಎಂತ್ಯೆಂದು ನಡದು ತಾ
ಮಥುರೆಯಲಿ ಖಡುನಂದಗೋಪಾ। ಒಡಿಯನಪ್ಪಣಿಯಿಂದ
ಗಡಬಡಿಸೆ ಪೂತನಿಯು ಹುಡುಗರನ್ನು ಹುಡುಕುತಲೆ
ಸಡಗರದ ವೇಷದಲಿ ಬಡನಡವು ಬಳಕುತಲೇ ಬಡಿವಾರ
ತೋರುತಲೆ ನಡದು ಬಂದುಳು ಹಾದಿ ಹಿಡಿದು ಗೋಕುಳಕೆ॥ ೧

ಧಡಿಯ ದಿವ್ಯಾಂಬರವು ಶಡಗರದಿ ಉಟ್ಟಿಹಳು
ಕಿಡಿಯಂಥ ಕುಪ್ಪುಸವು ದೃಢ ಬಿಗಿದು ತೊಟ್ಟಿಹಳು।
ಬಿಡದೆ ಸರ್ವಾಭರಣ ಜಡದಿಹಳು ತಾ ಮಿಂಚು
ಹೊಡದಂತೆ ತೋರುವಳು ಉಡುರಾಜ ಮುಖಿಯು।
ಎಡಬಲಕ ನೋಡುವಳು ಕಡಿನೋಟದಿಂದಲೆ
ಎಡಬಾರಿ ದುರಬಿನಲಿ ದೃಢವಾಗಿ ಮಲ್ಲಿಗಿಯು
ಮುಡಿದಿಹಳು ಉರದಲ್ಲಿ ದೃಢವಾದ ಕುಚವೆರಡು
ನಡವುದಾ ಕಾಲಕ್ಕೆ ನಡಗುತಿಹವು ೨

ಬಿಂಬೋಷ್ಟಿ ಮಾಯ ಅವಲಂಬಿಸುತ ಗೋಕುಲದ
ತುಂಬ ಬೆಳಕವು ಮಾಡಿ ಜಂಭದಲಿ ಬರುತಿಹಳು
ಗಂಭೀರಳಾಗಿ ತನಗುಂಭ ತಿಳಿಗುಡದೆ ಕುಚ
ಕುಂಭಗಳವಳಗ ವಿಷ ತುಂಬಿಟ್ಟು ಕೊಂಡು
ಅಂಬುಜಾಕ್ಷಿಯ ಕಂಡು ಸಂಭ್ರಮದಿ ಗೋಕುಲದ
ರಂಬಿಯರು ತಿಳಿಯದೆ ಅಂಬುವರು ರಾಜನರಂಭಿಯೊ
ಸ್ವರ್ಣದ ಗೊಂಬಿಯೊ ಸ್ವರ್ಗದಾ ರಂಭಿಯೋ ಮತ್ತು
ಜಗದಂಬಿಯೊ ಎಂದೂ ೩

ಮುಂದ ಆ ಪೂತನಿಯು ನಂದಗೋಪನ ಮನಿಗೆ
ಬಂದು ದೇವೇಚ್ಛೆಯಲಿ ನಂದನಂದನನ ಕಣ್ಣಿಂದ ನೋಡಿದಳಾಗ
ಛಂದದ್ವಾಸಿಕೆಯಲಿ ಛಂದಾದ ಲೌಕೀಕದ ಕಂದನಂತೆ।
ಮುಂದವನ ತೊಡಿಯ ಮ್ಯಾಲೆ ಛಂದಾಗಿ ಧರಿಸಿದಳು
ಕಂದರ್ಪನೈಯನೆ ಕಂದನಾಗಿರುವನೆಂತ್ಯೆಂದು ತಿಳಿಯದೆ ನಿದ್ರಿ
ಯಿಂದಿರುವ ಸರ್ಪ ಕರದಿಂದ್ಹಿಡಪರಿ ರಜ್ಜು ಎಂದುಬ್ಯಾಗೆ ೪

ಶ್ರೀನಿವಾಸನ ಜನನಿ ಮೌನ ಹಿಡಿದಳು ಕಪಟತನ ತಿಳಿಯದೆ
ಬುದ್ಧಿಹೀನ ಪೂತನಿಯು ಸ್ತನಪಾನ ಮಾಡಿಸಿದಳಾ
ದಾನವಾರಿಗೆ ಅವನು ಪ್ರಾಣಸಹಿತಾಗಿ ವಿಷಪಾನ ಮಾಡಿದನು।
ದ್ರೂಣನಾಗಿರುವವನ ಪಾಣಿಯಲಿ ಸಿಕ್ಕು ಗತಿಗಾಣದಲೆ
ಉತ್ಕೃಷ್ಟ ವಾಣಿಯಿಂದಲೆ ಒದರಿ ಭ್ರೂಣಹನನಕ ಬಹಳ ಜಾಣೆ
ಎಂತ್ಯೆನಿಸುವಳು ಪ್ರಾಣ್ಹೋಗಿಬಿದ್ದಳಾ ಪ್ರಾಣಿ ಪೂತನಿಯು.

ಪದ: ರಾಗ : ಶಂಕರಾಭರಣ ಅಟತಾಳ, ಸ್ವರಷಡ್ಜ

ಬಿದ್ದಾಳು ಪ್ರಾಣ ಹೋಗಿ ಪೂತನಿ ಜನ್ಮಗೆದ್ದಾಳು ಬಾಲಕ ಘಾತಿನಿ।
ಸುದ್ದಿ ಹರಡಿತು ಗೋಕುಲದಲ್ಲೆ। ನೋಡು ಉದ್ರೋಗವಾಯಿತು
ಜನರಲ್ಲೆ ಎದ್ದೆದ್ದು ಹೋದರಾ ಸ್ಥಳದಲ್ಲಿ
ಬಂತುದೆವಾಯಿತು ಮತ್ತಲ್ಲೆ॥ ೧

ಗಿರಿಯಂತೆ ಆ ದೇಹ ಇರುವೋದು ಆರು ಹರದಾರಿ
ಪರಿಯಂತೆ ಬಿದ್ದಿಹದು। ಕರಚರಣಗಳ್ಹರವಿ ಇರವದು ಅಲ್ಲಿ
ಇರವೂ ವೃಕ್ಷಗಳೆಲ್ಲಾ ಮುರದಿಹದು॥ ೨

ಕೊಡಗಳಂಥ ಕುಚಗಳು। ತೆಗ್ಗುತೊಡಿ ದಂಥ
ಎರಡು ಕಣ್ಣುಗಳು।

ನಾಡಜನರ ಕಾಲು ಕೈಗಳು। ಸೇತು ಮಾಡಿ
ದಾಡುವರಲ್ಲೆ ನದಿಗಳು॥ ೩

ಭಾಳು ಬಾಯತೆರೆದಿರುವದು । ಹೊಟ್ಟೆ ತಾಳ
ಭಾವಿಯಪರಿ ತೋರುವುದು
ಭಾಳು ಭಯಂಕರವಾಗಿರುವ್ಹೋದು। ಸಾಕು
ಹೇಳುವದಿನ್ನು ಉಳದಿಹುದು
ದಾನವಾರಿಯಕೊಂಡು ಕರದಿಂದ ವಿಷಪಾನ ಮಾಡಿಸಿದ
ಕಾರಣಿದಿಂದ । ಹಾನಿತನಗೆ ಬಂತು ತ್ವರದಿಂದ।
ಅಚುತಾನಂತಾದ್ರೀಶ ಕರದಿಂದ। ೫

ಪದ್ಯ

ಬಾಲಕಾಕಿಯ ಎದಿಯಮ್ಯಾಲೆ ನಿರ್ಭಯದಿಂದ
ಲೀತಿಯನ ಮಾಡುತಿಹ ಬಾಲಿಯರು ಬ್ಯಾಗ ಆ
ಬಾಲಕನ ಕರಕೊಂಡು ಮ್ಯಾಲೆ ಗೋಮೂತ್ರದಲಿ
ಬಾಲಗ್ಯರದರು ಅವರು ಭಾಳ ಸಂಭ್ರಮದಿ।
ಮರೆಲಾದ ಗೋಪುಚ್ಛ ಲೇಸಾದ ಗೋಧೂಳಿ ಕಾಲ
ಗಳಿಯದೆ ಅವನ ಮ್ಯಾಲೆ ಎಳದರು ಬಿಡದೆ ಲಾಲಿಸುತ ಮತ್ತ
ಆ ಕಾಲಕಿಟ್ಟರು ನಂದ ಬಾಲಕರನೆನಿಸುವ ಜಗತ್ಪಾಲಕಗ ರಕ್ಷಾ॥ ೧

ಬಾಲ ನಿನ್ನನ್ನು ಜಗತ್ಪಾಲಕನು ರಕ್ಷಿಸಲಿ। ಪದಾಗಳು ಆ ಮೂರು
ಪಾದದವ ರಕ್ಷಿಸುತಾ ಜಂಘವನು ಮತ್ತ ಶ್ರೀರಂಗ ತಾ
ರಕ್ಷಿಸಲಿ ಜಾನುವನು ರಕ್ಷಿಸಿ ಜಾನ್ಹವಿಜನಕಾ । ಉರುಗಳಾ
ರಕ್ಷಿಸಲಿ ಉರ್ವೀಶ ಹರಿತಾನು ನಾಭಿಯನು ಶ್ರೀಪದ್ಮನಾಭ
ಸಂರಕ್ಷಿಸಲಿ ಹೃದಯಗತ ಶ್ರೀ ಹರಿಯು ಭುಜಗಳನು
ರಕ್ಷಿಸಲಿ ಭುಜಗಶಯನಾ॥ ೨

ಕಂಠವನು ಮತ್ತ ವೈಕುಂಠಪತಿ ರಕ್ಷಿಸಲಿ
ಮುಖವನ್ನು ರಕ್ಷಿಸಲಿ ಮುಕುಟವರ್ಧನ ಹರಿಯು।

ಶಿರವನ್ನು ರಕ್ಷಿಸಲಿ ಶಿರಿಯರಮಣನನು ತಾನು
ಅಂಗಜನ ಜನಕ ಸರ್ವಾಂಗ ರಕ್ಷಿಸಲಿ।
ಜಲಜಾಕ್ಷಿಯರು ಹೀಂಗ ಹಲವು ದೇವತಿಗಳನ
ಬಲಗೊಂಡು ಮತ್ತವರ ಬಲದಿ ರಕ್ಷೆಯ ನೀಡಲು।
ಜಲಜಮುಖಿ ಜನನಿ ತನ್ನ ಚಲುವ ಬಾಲಕಗ ತಾ
ಮೊಲಿಕೊಟ್ಟು ಮಂಚದಲಿ ಮಲಗಿಸಿದಳವನಾ।
ಖಳಕಂಸಗಾ ಕಪ್ಪುಗಳ ಕೊಟ್ಟು ನಂದ ತಾ ಇಳದ
ಮನಿಯಲಿ ಇರಲು ತಿಳದು ಆ ಸುದ್ದಿ ತನ್ನ
ಸ್ಥಳವನ್ನು ಬಿಟ್ಟು ಆ ಸ್ಥಳಕ ಬಂದನು ಪರಮ
ಗೆಳೆಯ ವಸುದೇವ ಮನದೊಳಗ ಹಿಗ್ಗುತಲೆ॥ ೩

ಆರ್ಯಾ

ಜಾಣನು ಆತನ ಕಾಣುತಲ್ಯದ್ದನು
ಪ್ರಾಣಬರಲು ದೇಹದ ಪರಿಯು। ಪ್ರಣಾಮಮಾಡಿ
ಆ ಪ್ರಾಣಯನಪ್ಪಿದ ಪಾಣಿಹಿಡಿದು ಗೋಕುಲ ಧೊರಿಯು॥ ೧

ಆಮ್ಯಾಲಿಬ್ಬರು ಪ್ರೇಮದಿ ಕುಳಿತರು ಕ್ಷೇಮವಿಚಾರ
ಮಾಡುತಲೆ। ಆಮ್ಯಾಲ ಶೌರಿಯು ಕೋಮಲ ಹೃದಯದಿ
ತಾ ಮಾತಾಡಿದ ಪ್ರೇಮದಲೆ॥ ೨

ಪದ: ರಾಗ: ಶಂಕರಾಭರಣ ತಾಳ:ಭಿಲಂದಿ ಸ್ವರ: ಪಂಚಮ

ಸಕಲ ಜನರು ನಂದಗೋಪ ಸುಖದಲಿರುವರೆ
ಸಖನೆ ನಿನ್ನ ಮನಿಗೆ ಭಾವುಕರು ಬರುವರೆ॥ ಪ

ದೃಷ್ಟ ವಿಷಯನಾದಿ ನೀ ಅದೃಷ್ಟಯೋಗದಿ।
ಕಷ್ಟಬಡುವನಲ್ಲಿ ಸುಖದ ವೃಷ್ಟಿ ಮಾಡಿದಿ॥ ೧

ನಿನಗ ಪುತ್ರನಾದ ಸುದ್ದಿ ಎನಗ ಮುಟ್ಟಿತು ।
ನನಗೆ ಕಡೆಯ ಪುತ್ರನವನೆ ನಿನಗೆ ಒಪ್ಪಿತು॥ ೨

ಸಕಲರಿಂದ ಕೂಡಿ ಅವನು ಸುಖದಲಿರುವನೆ
ಸಕಲ ಜನರಿಗ್ಯವನು ಪ್ರಾಣಸಖನು ಆದನೆ॥ ೩

ಅಲ್ಲೆ ಗೋಗಳೆಲ್ಲ ರೋಗ ಇಲ್ಲದಿರುವವೆ।
ಹುಲ್ಲು ನೀರಿನಿಂದ ಸೌಖ್ಯದಲ್ಲಿ ಇರುವವೆ॥ ೪

ನಿನ್ನ ಸೇವಕರು ಸೇವೆಯನ್ನು ಮಾಳ್ಪರೆ
ಚನ್ನಿ ಗಾನಂತಾದ್ರೀಶನ್ನ ನೆನುವರೆ ೫

ಆರ್ಯಾ

ಛಂದಾಗ್ಯವ ಹೀಗೆಂದ ಮಾತು ಆನಂದಗೋಪ
ತಾ ಕೇಳುತಲೆ। ಮುಂದಾ ಶೌರಿಯಮುಂದ ನುಡದನು
ಮಂದಹಾಸ್ಯದಲಿ ನಗುವುತಲೆ॥ ೧

ಪದ, ರಾಗ : ಮುಖರಿ **ತಾಳ :ಆದಿ**

ಎಲ್ಲ ಮಾತಿಗೆ ಸೌಖ್ಯ ಶೌರಿಯೆ । ನಮಗಿಲ್ಲ
ದುಃಖವು ಸುಖಕಾರಿಯೆ ಪ

ಕೊಂದಾ ಕಂಸನು ನಿನ್ನ ಮಕ್ಕಳನು । ಅದು ಒಂದು ದುಃಖವೆ
ಎನಗೆ ತಿಳಿನೀನು॥ ೧

ಹಿಂದಿನ ದುಃಖ ಹಿಂದೆ ಹೋಯಿತು । ತಿಳಿ
ಮುಂದ ನಿನಗೆ ಸೌಖ್ಯವಾದೀತು॥ ೨

ಚಿಂತಿಮಾಡಲಿ ಬ್ಯಾಡಾ ವಸುದೇವಾ।
ಚಲುವಾನಂತಾದ್ರೀಶನೆ ದಯ ಮಾಡಿರುವಾ॥ ೩

ಆರ್ಯಾ

ನಂದ ಗೋಪನಾನಂದ ವಚನಗಳ ಛಂದದಿ ಕೇಳುತ
ವಸುದೇವಾ । ಮುಂದ ನುಡದ ಹೀಗಂದು ಮತ್ತ ತ್ವರದಿಂದ
ತನ್ನ ಹೃದ್ಗತ ಭಾವಾ ॥ ೧

ಪದ ರಾಗ: ಸಾರಂಗ ಆದಿತಾಳ ಸ್ವರ: ಷಡ್ಜ

ನಡಿಯೋ ಗೋಕುಲಕ್ಕೆ ಬ್ಯಾಗೆ ತಡಿಯಾದೆ
ಏನಂದ ಗೋಪಾ।
ಭಿಡಯಾ ಬಿಟ್ಟ ಹೇಳುವೆ ಎನ್ನ ನುಡಿಯು ಲಾಲಿಸಿ॥ ಪ

ಉತ್ತಮ ಕೇಳಿನ್ನಾಮಗನಾ ಉತ್ಪತ್ತಿ ಕಿವಿಯಿಂದ ಕೇಳಿ।
ಉತ್ಪನ್ನವಾದಾವು ಬಹಳ ಉತ್ಪಾತಗಳು॥ ೧

ಕಂಸನ ಅಂಜಿಕೆಯಿಂದ ಸಂಶಯ ಬಿಡುವಲ್ಲದಿನ್ನು।
ಸಂಸಾರದೋಳ್ಸುಖವು ಸ್ವಲ್ಪಾ ಸಂಶಯವೆ ಭಾಳಾ॥ ೨

ಮುಟ್ಟಿತು ಕಂಸಗ ಕಪ್ಪ ಭೆಟ್ಟಿ ಆಯಿತು ನಿಮ್ಮನು।
ಘಟ್ಯಾಗಿ ಅನಂತಾದ್ರೀಶನ ಮುಟ್ಟಿ ಭಜಿಸುತ॥ ೩

ಪದ್ಯ

ಯಾದವನ ಮಾತಿಗ್ಯನು ಮೋದವನು ಬಟ್ಟು
ನಂದಾದಿಗಳು ಗೋಕುಲದ ಹಾದಿಯನು ಹಿಡಿದು
ಪರಮಾದರದಿ ನಡದರು. ಅಗಾಧವಾಗಿಹ ದೇಹ
ಹಾದಿಯಲಿ ಬಿದ್ದಿಹುದು ಹಾದಿಯನು ಕಟ್ಟಿ।
ಆ ದೇಹ ನೋಡುತ ಅಗಾಧ ಬಟ್ಟವರು ಅಲ್ಯಾದದ್ದು
ಮನದಲ್ಲಿ ಶೋಧಿಸ್ಯಂದರು ಹೀಗೆ । ಸಾಧು ವಸುದೇವ
ಬಹುಸಾಧು ನುಡದನು ನಮಗೆ ಸಾಧುಗಳ ಮಾತು
ಹುಸಿ ಆದದ್ದು ಉಂಟೇ। ೧

ನಡದು ಈ ಪರಿ ಅವರು ಕೊಡಲಿಯನು ಕೊಂಡು
ಕಡಕಡದು ಈ ದೇಹವನು ಸುಡಲು ದೂರದಲಿಟ್ಟು
ಖಡು ಸುಗಂಧದ ಹೊಗಿಯು ಹಿಡದು ಅದು ನಾಕು
ಕಡೆ ಬಿಡದೆ ಆಕಾಶಕ್ಕೆ ಅಡರಿತಾಗಿ। ಖಡುಪಾಪಿ ಪೂತನಿಯು
ಕುಡಲು ವಿಷ ಮೊಲಿಯನ್ನು ಕುಡುದು ಸದ್ಗತಿಕೊಟ್ಟ
ತಡವಿಲ್ಲದಲೆ ಹರಿಯು ದೃಢಭಕ್ತಿಯಿಂದಲೆ ಕಡಿಗೆ
ಕ್ಷೀರಾದಿಗಳು ಕೊಡಲು ಸದ್ಗತಿಯನ್ನು ಕುಡವದೇನದು॥ ೨

ಶೌರಿಸಖನಂದ ಪರಿವಾರ ಸಹಿತಾಗಿ ತಾ ಈ ರೀತಿ ಉತ್ಪಾತ
ಮೀರಿ ಮನಿಯಲಿ ಬಂದು ಪೂರ್ವದಲಿ ಆಗಿಹ ಅಪೂರ್ವ
ವೃತಾಂತವನು ಪೂರ ಕೇಳ್ಯಾಶ್ಚರ್ಯ ಪೂರಿತನು ಆಗಿ
ಆ ವೈರಿ ಪೂತನಿಯ ಸಂಹಾರಿಯಾ ಕರಕೊಂಡು।
ಚಾರುಮುಖ ನೋಡಿ ಸುಖಪೂರನಾದಾ । ಈ ರೀತಿ
ಚರಿತವನು ಆರು ಕೇಳುವರು ಅವರ ಘೋರ
ದುರ್ಷಟವೆಲ್ಲ ದೂರಾಗಿ ಹೋಗುವದು ಶುಭಚನ್ನ
ಚಾರ್ವನಂತಾದ್ರೀಶ ಮೂರುತಿಯು ಮುಗಿಸಿದಿದು
ಮೂರು ಅಧ್ಯಾಯಾ॥ ಇತಿ ಭಾಗವತ ದಶಮಸ್ಕಂಧ ೩

ಪೂತನಾದಧೋ ನಾಮ ತೃತಿಯೋಧ್ಯಾಯಃ।
॥ ಶ್ರೀ ಕೃಷ್ಣಾರ್ಪಣಮಸ್ತು॥
॥ ಮೂರನೆಯ ಅಧ್ಯಾಯವು ಸಂಪೂರ್ಣ॥

ಅಧ್ಯಾಯ ನಾಲ್ಕು

ತೃಣಾವರ್ತ ಪ್ರಾಣಾಪಹರ್ತ್ರೇ ನಮಃ
ಶ್ರೀ ಗುರುಭ್ಯೋ ನಮಃ

ಪದ ರಾಗ: ದೇಶಿ ಅಟತಾಳ ಸ್ವರ ಷಡ್ಜ

ಒಂದಾನೊಂದಿನದಲಿ ಮುಂದುತ್ಥಾಪನವೆಂದೂ
ಛಂದಾದುತ್ಸವ ಬರಲು
ಮುಂದ ಯಶೋದಿಯು ಕಂದಗ ಯರದು
ಆನಂದದಿಂದಿರುತಿಹಳು॥ ೧

ನಂದ ಮಾಡಿಸಿದ ಅನಂದದಿಂದಲಿ
ದ್ವಿಜವೃಂದಕ್ಕ ಭೋಜನವು॥
ಮುಂದ ವಸ್ತ್ರವ ಕೊಟ್ಟಛಂದದಿ
ಕೊಂಡವರಿಂದ ಆಶೀರ್ವಾದವು॥ ೨

ತೊಡಿಯ ಮ್ಯಾಲಾಡುವ ಹುಡುಗನ ಕಣ್ಣಿಗೆ
ಖಡುನಿದ್ರಿ ನೋಡಿದಳು।
ಉಡುಪ ಮುಖಿಯು ಜಗದೊಡಿಯನ
ಛಂಡಿಯ ಬುಡಕಮಲಗಿಸಿದಳು ೩

ಮತ್ತ ಬಂದವರಿಗತ್ಯಂತ ಆದರ ಮಾಡಿ
ಮತ್ತ ಪೂಜಿಸುತಿಹಳು॥
ಮುತ್ತುಗಳಿಂದಲಿ ಮುತ್ತೈದೆರಿಗೆಲ್ಲ
ಮತ್ತುಡಿತುಂಬಿದಳು॥ ೪

ಭಾಳೋತ್ಸಾಯಿತು ಆ ಬಾಲನು ಮಾಡಿದ
ಭಾಳಾಗಿ ರೋದನವು ।

ಭಾಳಾಮಂದಿಯ ಪೂಜೆಯಲ್ಲೊಡಕಿಹಳಾಕಿ
ಕೇಳಲಿಲ್ಲ ಶಬ್ದವು॥ ೫

ಬಾಲನು ಶಿಟ್ಟಲೆ ಮ್ಯಾಲಿದ್ದ ಭಂಡಿಗೆ
ಕಾಲಿಲೆ ಒದ್ದನಾಗೆ।
ಮ್ಯಾಲಿಟ್ಟ ಭಂಡಿಯು ಮ್ಯಾಲಹೋಗುತ
ಬುಡಮೇಲಾಗಿಬಿದ್ದಿತಾಗೆ॥ ೬

ದೃಢವಾದ ಭಂಡಿಯು ಒಡದು ಬಿದ್ದಿತು ಕಡ
ಕಡ ಶಬ್ದ ಮಾಡುತಲೆ॥
ಕಡಿಗೆ ಗೋರಸತುಂಬಿ ದೃಢವಾಗಿ ಇದ್ವಂಥಾ
ಕೊಡಗಳು ಒಡದವಲ್ಲೆ॥ ೭

ಮುಂದ ಭಂಡಿಯ ನೋಡಿ ಅರದು ಬಟ್ಟೆಲ್ಲರ
ನೆರೆದು ಮಾತಾಡಿದರು।
ಮುರಿದಂಥವರು ದಾರಿರದೆ ಭಂಡಿಯುತಾನೆ
ಮುರದಿತು ಹ್ಯಾಗೆಂದರು। ೮

ಬಾಲಕರಂದರಾ ಕಾಲಕ್ಕೆ ಈ ಕೂಸಿನ ಕಾಲಿಲೇ ಒದ್ದಿತ್ತೆಂದು।
ಬಾಲರನುಡಿಗೆ ಗೋಪಾಲರು ನಕ್ಕರು ಬಾಲರ ಮಾತೆನ್ಯಂದು॥ ೯

ಗಡಬಡಿಯಲಿ ಗೋಪಿ ಹಿಡದು ಆ ಕೂಸಿನ
ಬಿಡದಪ್ಪಿ ಕೂಂಡಳಾಗೆ ॥
ತೊಡಿಯ ಮ್ಯಾಲಿರಿಸಿ ಮುದ್ದಿಡುತ ಮೊಲಿಯ ಕೊಟ್ಟು
ಬಿಡದೆ ಆಡಿಸಿದಳಾಗೆ॥ ೧೦

ಧಿಟ್ಟನಂದಗೋಪ ಥಟ್ಟನೆ ಭಂಡಿಯ ಮುಟ್ಟಿ ಪೂಜಿಸುತಿಹನು।
ದಿಟ್ಟಾಗಿ ದ್ವಿಜರಿಗೆ ಕಟ್ಟ ಇಲ್ಲದಲೆ ಕೊಟ್ಟಾನು ಗೋಗಳನು॥ ೧೧

ಕಜ್ಜಲಾದಿಗಳಿಂದ ದುರ್ಜನದೃಷ್ಟಿ ವಿಸರ್ಜನ ಮಾಡಿಸುವಾ।
ಸಜ್ಜನರಿಂದ ಸುಪೂಜ್ಯ ಮಂತ್ರಿಗಳಿಂದ ಮಾರ್ಜನ ಮಾಡಿಸುವಾ॥ ೧೨

ಇಳಿಯೋಳೀಪರಿ ಬಾಲರೊಳಗೆ ಬಾಲಕನಾಗಿ
ಖಳರನ್ನು ಕೊಲುವನು।
ಚಲುವ ಚಂದ್ರಮನಂತೆ ಹೊಳುವಾ ಗೋಕುಲದಲಿ
ಬೆಳುವಾನಂತಾದ್ರೀಶನು॥ ೧೩

ಪದ್ಯ

ಮುಂದ ಮತ್ತೊಂದು ದಿನ ಮಂದ ಗಮನಿಯು ತನ್ನ ಕಂದನ
ಎತ್ತಿ ಆನಂದದಿಂದಾಡಿಸಲು ಕಂದನಾದನು ಭಾರದಿಂದ ಬೆಟ್ಟದ
ಪರಿಯು ಮುಂದಿಳಿಸಿ ಆಶ್ಚರ್ಯದಿಂದಿರುವಳಾಗೆ । ಬಂದ
ಘಾಳಿಯ ರೂಪದಿಂದಲಿ ತೃಣಾವರ್ತ ಮುಂದ ಚಕ್ರದ
ಪರಿಯು ಛಂದಾಗಿ ತಿರಗುತ ಮಂದಿಯನು ಮೋಹಿಸುತ
ಕಂದನಾ ಎತ್ತಿ ತ್ವರದಿಂದ ಬಿಡದಲೆ ವೈದ ಮುಂದ ಗಗನಕ್ಕೆ॥ ೧

ಇತ್ತ ತಾಯಿಯು ತನ್ನ ಪುತ್ರನ್ನ ಕಾಣದಲೆ ಅತ್ಯಂತ
ದುಃಖಿಸಲು॥ಮತ್ತೆಲ್ಲ ಗಗನದಲಿ ದೈತ್ಯನ ಕುತ್ತಿಗಿಯ
ಒತ್ತಿಕೊಂದನು ಹರಿಯು ದೈತ್ಯ ಬಿದ್ದನು ಭರದಿ ಪೃಥ್ವಿಯಲ್ಲಿ ।
ಮತ್ತೆಲ್ಲೆ ಆಡುತಿಹ ಪುತ್ರನಾ ಕಾಣುತಲೆ ಅತ್ಯಂತ ಪ್ರೇಮದಲಿ
ಎತ್ತಿಕೊಂಡಳು ತಾಯಿ ಸತ್ಪುಟ್ಟಿದವನೆಂದು ಚಿತ್ತದಲಿ
ತಿಳಿವುತಲೆ ಮರ್ತೆಲ್ಲ ಚಿಂತಿಗಳ ಮರ್ತಳಾಗೆ॥ ೨

ಶ್ರೀಕಾಂತನಾ ಜನನಿ ತೋಕ ಗೋವಿಂದನು ಮೊಲಿಯು ತಾ
ಕುಡುತಲಿರುತಿರಲು ಆ ಕಾಲದಲ್ಯವನು ಆಕಳಿಸಿದನು ಬಾಲ
ಆಕ್ಯವನ ಬಾಯ ಒಳಗೆ ತಾಕಂಡಳೆಲ್ಲ ಭೂಲೋಕ ಬಿಸ್ತರವು।
ಆ ಮ್ಯಾಲಕೊಂದು ದಿನ ಆ ಮಹಾತ್ಮನು ಗರ್ಗನೇಮಿಷ್ಯಲ್ಲಿಗೆ

ಬಂದು ಪ್ರೇಮದಲಿ ವಸುದೇವನಾಮಕ್ಕಳನ ಕಂಡು
ನಾಮಕರಣವ ಮಾಡಿ ನೇಮಿಸ್ಥೇಸರಿಟ್ಟ ಬಲರಾಮ ಕೃಷ್ಣೆಂದು॥ ೩

ಸಂಭ್ರಮದಿ ಮುಂದವರು ಅಂಬಿಗಾಲಿಕ್ಕಿ ಬಹಳ್ಹಬಲವತೋರಿ
ಆಯತ ತಾಯಿ ಎಂಬುವರು ತೊಡಿಯ ಅವಲಂಬಿಸಲು
ನೋಡುವರು ಸಂಭ್ರಮದಿ ಎತ್ರದ್ಯಕೊಂಬುವರು ಬ್ಯಾಗೆ।
ಅಂಬುಜೋದ್ಭವಪಿತನು ಸ್ತಂಭಾದಿಗಳನು ಅವಲಂಬಿಸುತ
ನಡಿದಾಡಿ ಹಂಬಲಿಸಿ ಮುಂದ ತನ್ನ ನಂಬಿದ್ದ ಗೆಳೆಯರನ
ನಂಬಿಗೋಕುಲದಲ್ಲಿ ತುಂಬೆ ಓಡ್ಯಾಡಿದನು ಅಂಬುಜಾಕ್ಷಾ॥ ೪

ಮುಂದ ಬಹು ಮಂದಿಗಳ ಮಂದಿರದ ಒಳಘೋಗಿ ಸಂದೇಹ
ಇಲ್ಲದಲೆ ಛಂದಾದ ಬೆಣ್ಣಿಯನು ತಿಂದಿರುವ ತಿಂದು
ಇಲ್ಲಂದಿರುವ ಮನಿಯಲ್ಲಿ ಬಂದಿರುವ ಕಲಹವನು
ತಂದಿರುವ ನಿತ್ಯಾ। ನಂದನಂದನವ ಒಂದೂಂದು
ಅಪರಾಧವನು ನಂದ ಪತ್ನಿಗೆ ತಿಳಿಯತಿಂದು ಮನದಲಿ
ಮಾಡಿ ಒಂದು ದಿನ ಎಲ್ಲಾರು ಒಂದಾಗಿ ಮನಿಮುಟ್ಟ ಬಂದು
ಗೋಪಿಯರು ಹೀಗೆಂದರಾಗೆ॥ ೫

ಪದ, ರಾಗ : ಶಂಕರಾಭರಣ ತಾಳ ತ್ರಿವಡಿ

ಎಷ್ಟು ಅಟ್ಟುಳಿ ಕುಡುವನೋಡಮ್ಮಾ। ಈ ಕೃಷ್ಣ ನಿನ್ನ ಮಗ।
ಎಷ್ಟು ಅಟ್ಟುಳಿ ಕುಡುವೆ ನಮಗಿವ ದುಷ್ಟತಾನ
ಯಥೇಷ್ಟ ಇರುವದು
ಸ್ಪಷ್ಟ ನಾನಿನಗೆಷ್ಟು ಪೇಳಿದರಷ್ಟೆ ತಾ ಮತ್ತಿಷ್ಟು ಮಾಡುವಾ॥ ಪ

ಸಿಕ್ಕ ಮನಿಮನಿ ಹೊಕ್ಕು ನೋಡುವನೆ। ತಾ ಸಿಕ್ಕದಿರುವವ
ತತ್ಕ ತುಡಗಿವ ಠಕ್ಕನಾಗಿಹನೆ ಅಕ್ಕಕೇಳ್ಹಹಳಕ್ಕರದಿ
ಕೈಯಿಕ್ಕಿ ಕಡದಿಹ ಚೊಕ್ಕ ಬೆಣ್ಣಿಯ ಚಿಕ್ಕ ಬಾಲಕರಿಗಿಕ್ಕಿ
ತಿಂಬುವ ಮಿಕ್ಕ ಬೆಣ್ಣಿಯ ಬೆಕ್ಕಿಗ್ಹಾಕುವಾ॥ ೧

ಅಡಗಿ ಮನಿಯಲಿ ಅಡಗಿ ಕೊಂಡಿರುವಾ । ಅಲ್ಲಿರುವ
ಭಾಂಡವು ಬುಡವು ಮೇಲಾಗ್ಯಾಡಕಲೇರಿಸುವಾ।
ಅಡಿಗಳನು ಅಲ್ಲಿಡುತ ನೆಲೆವಿನಲಿಡುವ ಪಾಲ್ಮಸರ್ಕುಡುವ
ಗೆಳೆಯರಿಗಿಡುವ ತೀರಲು ಬಿಡದೆ ಮತ್ತಾ ಗಡಗಿಯನು
ತಾ ಒಡಿವಾ॥
ನಿಂತು ನಗುವನಂತಾದ್ರೀಶನು ೨

ಆರ್ಯಾ

ಗೋಪಿಯರಾಡಿದ ಈ ಪರಿ ಮಾತಿಗೆ ಗೋಪಿ
ಯಶೋದಿಯು ತಾ ನಕ್ಕು॥ ಕೋಪಿಸಲಿಲ್ಲವು ವ್ಯಾಪಕನಾಗಿಹ
ಆ ಪುತ್ರನ ಸ್ನೇಹದಿ ಸಿಕ್ಕು॥ ೧

ಪದ್ಯ

ಒಂದು ದಿನದಲಿ ಸ್ನೇಹದಿಂದ ರಾಮಾದಿಗಳು
ಛಂದಾಗಿ ಕೊಡಿ ಆನಂದ ದಿಂದಾಡುತಿರೆ ಮುಂದವರು
ತಾಯಿಯ ಮುಂಧೇಳಿದರು ನಿನ್ನ ಕಂದ ಕೃಷ್ಣನು
ಮಣ್ಣು ತಿಂದನೆಂದು ಅಂದ ಮಾತನು ಕೇಳಿ ಮಂದಗಮನಿಯು
ತಾನು ಕಂದನಾ ಕೈ ಹಿಡಿದು ಮುಂದಕ್ಕೆ ಕರದು
ಭಯದಿಂದ ಇರುವವನ ಕಣ್ಣಿಂದ ನೋಡುತಲೆ
ಅಂದಳೀಪರಿಯು ಹಿತದಿಂದ ಬಣ್ಣಿಸುತಾ॥ ೧

ಪದ, ರಾಗ: ಶಂಕರಾಭರಣ ತಾಳ: ತ್ರಿವಿಡಿ

ಮಣ್ಣ್ಯಾಕ ತಿಂಬುವಿಯೋ। ಅಪ್ಪಯ್ಯಾ ಕೃಷ್ಣಾ।
ಮಣ್ಣ್ಯಾಕ ತಿಂಬುವಿ ಉಣ್ಣಂದರವಲ್ಲಿ॥ ಪ

ಅನ್ನದೊಳಗ ಸವಿ ಬೆಣ್ಣಿಯೊಳಗ ಸವಿ
ಹಣ್ಣಿನೊಳಗ ಸವಿ ಮಣ್ಣೇನು ಸವಿ ಕೃಷ್ಣ॥ ೧

ಮಣ್ಣುತಿಂದಿಹನೆಂದು ಸಣ್ಣವರ್ಧೇಳೋರು ಕಣ್ಣಾತಿ ಕಂಡು
ನಿಮ್ಮಣ್ಣ ಹೇಳುವ ಮತ್ತ॥ ೨

ಸಣ್ಣಕ್ಕಿ ಅನ್ನವು ಬೆಣ್ಣೆ ಕಾಶಿದ ತುಪ್ಪ ಉಣ್ಣೊ ಮತ್ತಿಷ್ಟು
ನಮ್ಮಣ್ಣಾನಂತಾದ್ರೀಶಾ॥ ೩

ಆರ್ಯಾ

ಜನನಿಯ ನುಡಿ ಸಜ್ಜನರೊಡಿಯನು ತಾ
ಅನುಸರಿಸುತ ಮನಸಿಗೆ ತಂದು। ಜನನ ರಹಿತ
ಆ ಜನನಿಗೆ ನುಡದನು ಅನುಮಾನವಿಲ್ಲದೆ ಹೀಗೆಂದ॥ ೧

ಪದ, ರಾಗ: ಶಂಕರಾಭರಣ

ಮಣ್ಣು ತಿಂದಿಲ್ಲವಮ್ಮ। ತಿಂದಿಲ್ಲ ಮಣ್ಣು ಎಂದ್ಯಂದಿಲ್ಲವಮ್ಮ ಪ

ಬಟ್ಟಹಚ್ಚಿಕ್ಕೈಲೆ ಮುಟ್ಟಿಲ್ಲವಮ್ಮಾ। ಧಿಟ್ಟಾಗಿ ಹೆಜ್ಜೆ
ಹೊರಗಿಟ್ಟಿಲ್ಲವಮ್ಮಾ॥ ೧

ಎಲ್ಲೆ ಹೋಗದೆ ನಾ ಇಲ್ಲಿದ್ದೇನಮ್ಮಾ। ಎಲ್ಲಾರು ಈ ಪರಿ
ಸುಳ್ಳಾಡೋರಮ್ಮ॥ ೨

ಖೂನದಿ ಇದು ಸತ್ಯವಾಣಿ ಕೇಳಮ್ಮ। ಅನಂತಾದ್ರೀಶನ
ಆಣಿ ಕಾಣಮ್ಮ॥ ೩

ಪದ್ಯ

ಕಾಯಜನಪಿತ ತನ್ನ ಬಾಯಲೀ ಪರಿಯನಲು
ತಾಯಿ ಆ ಕಾಲದಲಿ ಬಾಯಿನೋಡುವೆನೆನಲು ತಾಯಿ
ನೀ ನೋಡೆಂದು ಆ ಯಶೋದಿಯ ಮುಂದ ಆ ಎಂದು
ಬಾಯದೆಗೆದ ಆಯತಾಕ್ಷಾ। ಬಾಯವಳಗೆ ಕಂಡಳಾ ತಾಯಿ

ಲೋಕಗಳೆಲ್ಲಾ ಬಾಯಿವಳಗ ಗೋಕುಲವು ತಾಯಿಇರುವಳಲ್ಲೆ
ಮತ್ತೆ ಹಾ ಇದೇನೇನು ತಾ ಹರಿ ಯಾಮದಲೆ
ಭ್ರಮಿಸಿದಳು ಮಾಯವೊ ಇದು ಸ್ವಪ್ನ ಪ್ರಾಯವೂ
ಬುದ್ಧಿ ವ್ಯವಸಾಯವೊ ಎಂದು॥ ೧

ಲಗಬಗಿಯ ಜ್ಞಾನಚಕ್ಷುಗಳಿಂದ ನೋಡಿ ರೋಮಗಳುಬ್ಬಿ
ಗಂಟಲವು ಬಿಗಿದು ಸಂತೋಷದಲಿ ಮಗನಲ್ಲ ಇವ
ಸರ್ವ ಜಗದೊಡೆಯನೆಂತೆಂದು ಬಗಿಬಗಿಯ ಸ್ತುತಿಮಾಡಿ
ಕೈಮುಗಿದಳಾಗೆ । ಜಗದೀಶ ಮತ್ತ ಲಗಬಗಿಯ ಮೋಹಪಾಶ
ಬಿಗದು ಕಟ್ಟಿದನಾಗೆ ಮಗನೆಂದು ತಿಳಿದಾಕಿ ಬಿಗಿದಪ್ಪಿ
ಮುದ್ದಾಡಿ ಹಗಲಿರುಳು ತಾನು ಕಾಲವನು ಕಳದಳಾ
ಮಗನಾ ಸಂಭ್ರಮದಿ॥ ೨

ಖಡುನಂದಗೋಪನಾ ಮಡದಿ ಒಂದಿನದಲಿ ಬಿಡದೆ ದಾಸಿಯಕಿಲ್ಲ
ಬಿಡಿಗೆಲಸ ಮಾಡುತಿರೆ ಖಡು ಹರುಷದಲಿ ದೂಸರು ಕಡವುವಳು
ತಾನೇವ ನಡುವೆ ಕೃಷ್ಣನ ಲೀತಿ ನುಡುವುತಿಹಳು। ಧಡಿಯ
ಪೀತಾಂಬರವು ಶಡಗರದಿ ಉಟ್ಟಿಹಳು ಮಡಿಯ ಕುಪ್ಪಸವು
ಬಿಗಧಿಡದು ತೊಳ್ಳಿಹಳು ಆ ಮಡಿಯ ಕುಪ್ಪಸದೊಳಗ
ಅಡಗಿರುವ ಶುಚವೆರಡು ಬಿಡದೆ ಮಗನಲಿ ಸ್ನೇಹ ತೊಡಕಿ
ತೊರದಿವಹು॥ ೩

ನಡವಿನೊಡ್ಯಾಣ ಬಡನಡುವಿನಲಿ ಇಟ್ಟಿಹಳು ಕಡಗ
ಶಂಕಣ ಕೈಲೆ ಕಡಗೋಲಧಗ್ಗವನು ಹಿಡಿದೆಳೆದು
ಶ್ರಮದಿಂದ ಕಡುವಂಥ ಕಾಲದಲಿ ನಡುಗುತಿಹವೆರಡೂ
ಕುಚ\ ಬಡನಡವು ಬಳಕುವುದು ಬಿಡದೆ ಮುಖದಲ್ಲಿ
ಬೆವರು ಬಿಡುವುದದು ತುರಬಿನಲಿ ಮುಡಿದ ಮಲ್ಲಿಗಿ
ಹೂವು ಸಡಲುತಿಹವು। ಗಡಬಡಿಸಿ ಕೃಷ್ಣ ಮಲಿ
ಕುಡಿಯ ಬೇಕೆನುತ ಆ ಕಡುವ ಕಾಲಕ ಬಂದು
ದೃಢವಾಗಿ ಕಡಗೋಲು ಹಿಡಿದು ಮಾತಾಡಿದನು।

ಕಡುವ ಈ ಕೆಲಸ ನೀ ಬಿಡು ಅಮ್ಮ ಎನಗಮ್ಮಿ ಕೂಡು
ಬ್ಯಾಗ ಎಂದು॥ ೪

ಬಿಟ್ಟು ಆ ಕೆಲಸವನು ಥಟ್ಟನೆ ಆ ಮಗನ ಘಟ್ಟ್ಯಪ್ಪಿಕೊಂಡು
ಮುದ್ದಿಟ್ಟು ಮುಖ ನೋಡುತಲೆ ದಿಟ್ಟಾಗಿ ತೊಡೆಯ
ಮ್ಯಾಲಿಟ್ಟು ಬಹುಸಂಭ್ರಮ ಬಟ್ಟು ತೊರದಿಹ ಮೊಲಿಯ
ಕೊಟ್ಟಳಾಗ ॥ ದಿಟ್ಟಾದ ಒಲಿಯಮ್ಯಾಲಿಟ್ಟ ಹಾಲು ಉಕ್ಕೇರಿ
ಕಟ್ಟಕಡಿಗ್ಯಾಪಾತ್ರ ಬಿಡ್ಹೊರಗ ಛಲ್ಲುತಿರೆ ಅಷ್ಟಕ್ಕೆ
ಕಾಸೋಸಿ ಬಟ್ಟು ಚಿತ್ತವು ಅಲ್ಲಿ ಇಟ್ಟು ಮೊಲಿಕುಡಿಸೋದು
ಬಿಟ್ಟು ಓಡಿದಳು॥ ೫

ಖಡುಕೋಪದಲಿ ಕೃಷ್ಣ ಗಡಗಿ ವಳಗಿನ ಬೆಣ್ಣಿ ಬಿಡದೆ
ಎಲ್ಲನು ಕೂಂಡು ಗಡಗಿಯನು ಒಡದು ಆ ಶಡಗರದ
ಬೆಣ್ಣೆಯನು ಅಡಕಲದ ಸಂದಿಯೊಳಡಗಿ ತಾ ಲೆಂಬುವನು
ತುಡುಗತನದಲೆ। ಉಡುಪ ಮುಖಿ ಬಂದು ತನ್ನ ಹುಡುಗ
ಮಾಡಿರುವಂಥ ಹುಡುಗಾಟಿಕಿಯ ಕಂಡು ಹುಡುಕುವಳು
ಮತ್ತವನ ಬಿಡದೆ ತಾ ನಾಕುಕಡೆ ಹುಡುಕಿ ಕಂಡಳು
ಕಟ್ಟಕಡಿಗ್ಯುಲೂ ಕದ ಮ್ಯಾಲೆ ನಡುವೆ ಕುಳಿತಿರುವಾ॥ ೬

ಹಿಡಿದಿರುವ ಬೆಣ್ಣೆಯನು ಕುಡಿತಿಹರು ಬೆಕ್ಕಗಳಿಗ್ಯಡಗಿರುವ
ಆ ಕೃಷ್ಣ ಹೊಡಮರಳಿ ನೋಡಿದನು ದೃಢವಾಗಿ ತಾಯಿಯನು
ಬಿಡದೆ ಅಕಿಯು ಮಂದ ನಡಗಿಯಲಿ ಬರುತಿಹಳು ಕಡಗಿ
ಕಂಕಣಕ್ಯೆಲೆ ಹಿಡದು ಬಡಗಿಯನು ತನ್ನ ಬಡಿಯಬೇಕೆಂದು।
ಗಡಬಡಿಸಿ ಆ ಸ್ಥಳವು ಬಿಡವುತಲೆ ಓಡಿದನು
ಖಡುಯೋಗಿಗಳ ಮನಸು ಹಿಡಿಯಲಾರದು ಅವನ
ಹಿಡಿಯಬೇಕೆಂದೀಕಿ ಬಿಡದೆ ಬೆನ್ಹತ್ತಿದಳು ಕಡಿಗೆ
ದುಮ್ಮನೆ ದಣಿದು ಹಿಡಿಯಲಿಲ್ಲವನಾ॥ ೭

ತಾಯಿ ದಣದಿಹಳೆಂದು ಆಯತಾಕ್ಷನು ತಾನೆ ಆ
ಯಶೋದಿಗೆ ಶಿಕ್ಕು ಬಾಯತೆಗೆದು ಅಳುತಿಹನು

ಕೈಲೆ ಕಣ್ಣಗಳೊರಸಿ ತಾಯಿ ಅಂಜ್ಯಾನೆಂದು ಆ ಯಷ್ಟಿಯನೆ
ಛಲ್ಲಿ ಬಾಯಿಲೆ ಜಬರಿಸುತ ಬಾ ಎಂದಳಾಗೆ। ಕಟ್ಟಿದಳು
ಕೃಷ್ಣನ್ನ ಘಟ್ಯುಲೂಖಲದಲ್ಲಿ ದಿಟ್ಟಾಗಿ ಕಣ್ಣಿಯಲೆ ಕಟ್ಟಕಡಿಗೆದು
ಎರಡು ಬಟ್ಟು ಕಡಿಮ್ಯಾಗಿಹುದು ಎಷ್ಟು ಕಡ್ಡದರು ಮತ್ತಷ್ಟೆ
ಕಡಿಮ್ಯಾಗಿಹುದು ಬಿಟ್ಟು ಬಿಡದಲೆ ಮತ್ತೆ ಕಟ್ಟಿದಳು ಆಶ್ಚರ್ಯ
ಬಟ್ಟು ಮನಿಯಲಿ ಇದ್ದ ಅಷ್ಟು ಪಾಶಗಳು॥ ೮

ಕಟ್ಟಿ ಕಟ್ಟೀ ಪರಿಯು ರಟ್ಟಿಗಳನೂಂದು ಬೆವರ್ಹುಟ್ಟಿ
ದಮ್ಮನೆ ದಣಿದು ಕಟ್ಟುವಾ ಕಾರ್ಯವನು ಬಿಟ್ಟಳಾ ಕಾಲದಕೆ
ಕಟ್ಟದಲೆ ಬಹಳ ಶ್ರಮಬಟ್ಟಿರುವ ತಾಯಿಯನು ಥಟ್ಟನೆ
ನೋಡುತಲೆ ಕಟ್ಟ ಕಡಿಗ್ಯವನಲ್ಲೆ ಹುಡ್ಡಿತಂತಃಕರುಣ
ಘಟ್ಯಾಗಿ ಹರಿ ತನ್ನ ಕಟ್ಟುವಾ ಕಾರ್ಯದಲಿ ಧಿಟ್ಟಾಗಿ
ಬುದ್ಧಿಯನು ಕೂಟ್ಟು ಪ್ರೇರಿಸಿದಾ। ಕಟ್ಟುವಂಥಾ ಕಾರ್ಯ
ಬಿಟ್ಟರುವಳಾಗೋಪಿ ಬಿಟ್ಟು ಆಲಸ್ಯವನು ಪುಟ್ಟ ಕರುವಿನ
ಕಣ್ಣಿ ಥಟ್ಟನೆ ತಕ್ಕೊಂಡು ಕಷ್ಟ ಇಲ್ಲದೆ ಮತ್ತ ಕಟ್ಟಿದಳು
ಕೃಷ್ಣನ್ನ ಅಷ್ಟಭೂತಿಗಳಿಂದ ಪುಷ್ಟನಾದಂಥವಗ ಪುಟ್ಟ
ಕರವಿನ ಕಣ್ಣಿ ಪುಟ್ಟ ಪೂರಾಯಿತು ಕಟ್ಟ ಕಡಿಗೆ॥ ೯

ಪದ: ರಾಗ ಶಂಕರಾಭರಣ ತಾಳ ಬಿಲಂದಿ

ಕಟ್ಟದಳಾಗೋಪಿ ಅಟ್ಟುಳಿ ಕುಡುವಂಥ ಕೃಷ್ಣನಕಣ್ಣಿಲೆ ಕಟ್ಟಿದಳು।
ದಟ್ಟ ಸ್ನೇಹವೂಂಬೊ ಘಟ್ಟ ಪಾಶದಿಂದ ಕಟ್ಟಿಸಿ
ಕೂಂಡವನ ಕಟ್ಟಿದಳು। ಪ

ಸಣ್ಣ ಬಾಲಕರೆಲ್ಲ ಕಣ್ಣಿಂದನೋಡಲು ಮಣ್ಣು
ತಿಂದಿರುವನ ಕಟ್ಟಿದಳು।
ಉಣ್ಣದೆ ಮನದಣಿ ಕಣ್ಣಮೋರಿಯಲಿ ಬೆಣ್ಣೆ
ತಿಂದಿರುವನ ಕಟ್ಟಿದಳು॥ ೧

ಮನಿಮನಿಯನು ಪೊಕ್ಕು ಕೆನಿಮೊಸರವು ಬೆಣ್ಣೆಯನು
ತಿಂದಿರುವನ ಕಟ್ಟಿದಳು
ಅನುದಿನ ಮನದಲಿ ನೆನೆವ ಯೋಗಿಗಳ ಮನಸಿಗೆ
ಸಿಗದವನ ಕಟ್ಟಿದಳು ೨

ಏನೇನು ಮಾಡಿದರೇನು ಸಿಗುವನಲ್ಲ ತಾನೆ
ಸಿಕ್ಕಂಥವನ ಕಟ್ಟಿದಳು
ಶ್ರೀನಿಧಿ ಭಕ್ತಾಭಿಮಾನಿ ಆದ ಅಚ್ಚುತಾನಂತಾದ್ರೀಶನ ಕಟ್ಟಿದಳು ೩

ಪದ್ಯ

ಬೇಕಂತ ಭಕ್ತಿಯಲಿ ಈ ಕಥಯ ಕೇಳಿದವರಿಗಾ
ಕೃಷ್ಣವಶನಾಗಿ ತಾ ಕೈಗೆ ಶಿಕ್ಕುವನು ಬೇಕಂತ ತಾಯಿ
ಎಂಬಾಕಿಗವ ಸಿಕ್ಕಂತೆ ಶ್ರೀಕಾಂತ ಶಿಕ್ಕ ಮ್ಯಾಲ್ಯಾಕಿನ್ನ ಚಿಂತಿ।
ಶ್ರೀಕರಾನಂತಾದ್ರಿ ವೈಕುಂಠ ಇದು ಎಂತ ತಾ ಕೈಲೆ ತೋರಿಸುತ
ಆಕ್ರಮಿಸಿ ಇರುವುದನೆ ಶ್ರೀ ಕೃಷ್ಣ ರೂಪದಿಂದೀಶಂಠದಲಿ
ನಿಂತು ಬೇಕಂತ ಮುಗಿಸಿದನು ನಾಕು ಅಧ್ಯಾಯಾ॥ ೧

ಇತಿ ಶ್ರೀ ಕೃಷ್ಣ ಚರಿತ್ರೇ ಚತುರ್ಥೋಧ್ಯಾಯಃ ಶ್ರೀ ಕೃಷ್ಣಾರ್ಪಣಮಸ್ತು॥
ನಾಲ್ಕನೆಯ ಅಧ್ಯಾಯವು ಸಂಪೂರ್ಣ॥

ಅಧ್ಯಾಯ ಐದು

ಶ್ರೀ ಕಾಲಿಯ ಫಣಾರ್ಪಿತ ಪಾದಾಂಬುಜಾಯನಮ
ಶ್ರೀ ಗುರುಭ್ಯೋನಮಃ

ಪದ, ರಾಗ ಸೌರಾಷ್ಟ ತಾಳ ತಿವಿಡೆ ಸ್ವರ ಋಷಭ

ಬಿಡದೆ ಕೃಷ್ಣನ ಅಪ್ಪಿ ತಾಯಿಯು ನಡದಳಾ ಗೃಹಕಾರ್ಯದಲ್ಲೆ
ನಡೆದವನು ಜೋಡ್ಯರಡು ಮತ್ತೀ ಗಿಡಗಳಿದ್ದಲ್ಲೇ ನಡೆದವುಗಳ
ಮತ್ತವು ತಡದು ಅಡ್ಡಾಯಿತು ಊಲೂಬಲ ಕಡಕಡೆನುತಲಿ
ಕಡದು ಬಿದ್ದವುಗಿಡಗಳವು ಎರಡು॥ ೧

ಪತಿತ ವೃಕ್ಷಗಳಿಂದ ಹೊರಟರು ಅತಿಸುರೂಪರು ಅತಿ
ಮದೋನ್ಮತ್ತರು ಕುಬೇರನ ಸುತರು ಮಂಚೆವರು।
ಪ್ರಥಿತ ನಾರದ ಋಷಿಯ ಶಾಪದಿ
ಪೃಥಿವಿಯಲಿ ತರುಜನ್ಮಕೊಂಡರು
ಪ್ರಥಮ ನಳಕೂಬರನು ಎನಿಸುವ ದ್ವಿತಿಯ ಮಣಿಗ್ರಿವಾ॥ ೨

ವೃಕ್ಷ ಜನ್ಮದಿ ಮುಕ್ತರಾದರಧೋಕ್ಷಜನ ದಯದಿಂದ ಇಬ್ಬರು
ವೃಕ್ಷ ಶಬ್ದವ ಕೇಳಿ ನೆರೆದರು ಆ ಕ್ಷಣಕೆ ಜನರು
ಈಕ್ಷಿಸುತ ಆಶ್ಚರ್ಯಬಟ್ಟರು ವೃಕ್ಷ ಪತನದ ಮೂಲಗಾಣದೆ
ಲಕ್ಷ್ಮಿ ಇಲ್ಯಲ್ಲರಿಗೆ ಹರಿ ಪುತ್ಯಕ್ಷ ಅಲ್ಲಿರಲು॥ ೩

ತನ್ನ ಮಗನಾಟವನು ತಿಳಿಯದೆ ಚನ್ನಿಗನು ಆನಂದಗೋಪನು
ಮುನ್ನವನು ಕರಕೊಂಡು ನಡಿದನು ಕಣ್ಣಿಯನು ಬಿಟ್ಟಿ॥
ಇನ್ನಿಲ್ಲಿರಬಾರದೆಂದನು ಘನ್ನತರ ಉತ್ಪಾತಗಳು ನಮಗಿನ್ನು
ಆದಾವೆಂದು ಚಿಂತಿಸಿ ತನ್ನ ಮನದೊಳಗೆ ೪

ಹೂಡಿ ಭಂಡಿಗಳನ್ನು ಮರುದಿನ ಮಾಡಿಸಿದ್ಧವು ಎಲ್ಲರಿಂದಲಿ
ಕೂಡಿ ವೃಂದಾವನಕ ಪೋಗುತ ಮಾಡಿದಾಶ್ರಯವು ।
ನೋಡಿ ಆ ವೃಂದಾವನ ಸ್ಥಳ ಗಾಢ ಹರುಷದಲಿ ಬಾಲರೆಲ್ಲರು
ಕೂಡಿದರು ಕುಣಿದಾಡಿದರು ಜಡ್ಯಾಡಿದರು ಅಲ್ಲೆ ೫
ಸ್ವಚ್ಛ ಯಮುನಾ ತೀರದಲಿ ತನ್ನಿಚ್ಛೆಯಿಂದ ವಿಚಾರ ಮಾಡುವ
ವತ್ಸಗಳ ಕಾಯುವನು ತಾ ಶ್ರೀ ವತ್ಸಲಾಂಧನನು।
ವಂತ್ಸರೂಪದಿ ಬಂದ ಅಸುರನ ಪುಚ್ಛ ಹಿಂಗಾಲ್ಹಿಡದು ತಿರಿಗಿಸಿ
ಉತ್ಸವದಿ ಮ್ಯಾಲೊಗೆದ ಬಿದ್ದಾವತ್ಸಹತವಾಗಿ॥ ೬

ನಳಿನನಾಭನು ಮುಂದ ಆತರಗಳಿಗೆ ತಾ ನೀರಕುಡಿಸಿ ತೀರದ
ಮಳಲಿನೂಳಗಾಡುವನು ಮತ್ತಾ ಗೆಳೆಯರನ ಕೂಡಿ।
ಖಳ ಅಸುರ ಬಕಪಕ್ಷಿ ರೂಪದಿ ಸುಳದು ಮೆಲ್ಲನೆ ಬಂದು
ಬಾಲಕರೂಳಗಿರುವ ಕೃಷ್ಣನ್ನ ತಾ ಬಾಯ್ವಳಗ ನುಂಗಿದನು॥ ೭

ಕೊಂಡು ಅಸುರನು ಕಂಠದೊಳಗೆ ಕೆಂಡದಂತಲೆ
ಸುಡುವ ಕೃಷ್ಣನ
ಉಂಡು ದಕ್ಕಿಸಿಕೊಳದೆ ಘಾಬರಿಗೊಂಡು ಕಾರಿದನು।
ತುಂಡಿದಿಂದಲಿ ಚುಚ್ಚಿ ಕೃಷ್ಣನ ತುಂಡು ಮಾಡುವ ಸಮಯದಲ್ಲಿ
ಆ ತುಂಡುಗಳ ಹಿಡಿದವನ ಸೀಳ್ಯರಡು
ತುಂಡು ಮಾಡಿಯೊಗದಾ॥ ೮

ವಾಸುದೇವನು ಮೃತ್ಯುನಿಂದಲಿ ಘಾಸಿ ಆಗದೆ ಉಳದನೆಂದು
ತೀಸವಾಗ್ಯಲ್ಲಾರು ಬಹಳುಲ್ಲಾಸವನು ಬಟ್ಟು
ಏಸುಕಾಲಕೆ ಬಿಡದೆ ನಮ್ಮನ್ನು ಘಾಸಿಮಾಡದೆ ಗುರು
ಅನಂತಾದ್ರೇಶ ರಕ್ಷಿಸುವ್ರೋನು ಎಂದು ಆ ಸಮಯದಲ್ಲಿ ೯

ಪದ್ಯ

ಸಾಧು ಹಿತಕರ ಕೃಷ್ಣಯಾದವರಲ್ಯವ ತರಿಸಿ
ಐದು ವರ್ಷಾದ ಮ್ಯಾಲ್ಕಾಯ್ದನು ಆಕಳುಗಳನು
ಆದರದಿ ಮತ್ತು ರಾಮಾದಿಗಳಕೂಡಿ ಬೇಕಾದ ಆಟಗಳಾಡಿ
ಮೋದ ಬಡಿಸಿದನು ಯಾದವನು ಮತ್ತ ಮುಂಧೋದವನ
ಅನುಸರಿಸಿ ಆ ಧೇನುಕಗಳ ಕೂಡಿ ಸ್ವಾದು ಫಲಗಳು
ಕೋಮಲಾದ ತೃಣ ಇದ್ದಲ್ಲೆ ಆದಿಯಲಿ ಬಲರಾಮ ಹಾದಿಯನು
ಮಾಡಿ ಮುಂಧೋದ ಆ ಸ್ಥಳಕ್ಕೆ ॥ ೧
ನೋಡ್ಯಲ್ಲೆ ತಾಳಾಖ್ಯ ಪ್ರೌಢ ವೃಕ್ಷಗಳನ್ನು ಆ ಫಳಗಳನ್ನು
ಆಡುತಾಡುತಲೆ ಅಗಳ್ಯಾಡಿಸಿದ ಗಿಡಗಳನು
ಪ್ರೌಢಫಲಗಳು
ಎಲ್ಲಗಾಢನೆ ತೆಳಗ ಸೂರ್‍ಯಾಡಿದವು ಆಗೆ ।
ನೋಡಿ ಅಬ್ಬರದಿಂದ
ಓಡಿ ಬಂದನು ಅಸುರ ಕೂಡಿ ತನ್ನವರಿಂದ
ಕಾಡ ಖರರೂಪಿ ಅವ ಮಾಡಿ ಕ್ರೂರಧ್ವನಿಯ.
ಝೂಡಿಸ್ಥಿಂಗಾಲುಗಳ ತಾಡನವ
ಮಾಡಿದನು ಮೂಢಧೇನುಕನು ೨

ಖಡುಕೋಪದಲಿ ರಾಮ ಹಿಡಿದು ಹಿಂಗಾಲುಗಳ ತಡಿಯದಲೆ
ತಿರಿವ್ಯಾಡಿ ಗಿಡದ ಮ್ಯಾಲೊಗದ ಆ ಗಿಡಕ ಭಾರಾಗ್ಯವನು
ಗಿಡಸಹಿತ ಪ್ರಾಣ ವನು ಬಿಡುತಲೆ ಬಿದ್ದನು ತೆಳಗೆ
ತಡವು ಇಲ್ಲದಲೆ। ಬಿಡದೆ ವಸುದೇವಜರು ಬಿಡಿ
ಮೆಂದಿಗಳ ಕೊಂಡು ಖಡು ಹರುಷದಿಂದಲ್ಲೆ ಬಿಡದೆ
ಗೋಪಾಲರಿಂದೊಡಗೂಡಿ ಎಲ್ಲಾರು ಖಡು ರುಚಿಕರಾಗಿರುವ
ಗಿಡದ ಫಲಗಳ ತಿಂದು ನಡದರಾಲಯಕೆ॥ ೩

ಬಂದು ದಿನದಲಿ ದಿವಿಜವಂದಿತನು ಶ್ರೀ ಕೃಷ್ಣವಂದಿಸ್ಯಗ್ರಜಗ
ಅವನ ಮಂದಿರದಲಿಟ್ಟು ಬಹು ಛಂದವಾಗಿರುವ
ಕಾಳಿಂದಿಯಾ ತೀರದಲಿ ಬಂದ ಗೋಗೋಪಾಲ ವೃಂದವನು
ಕೂಡಿ। ಮುಂದವರು ನೀರಡಕಿಯಿಂದ ಧಾವಿಸುತ
ಕಾಲಂದಿಯಲಿ ವಿಷಜಲವು ಛಂದಾಗಿ ಕುಡದುಮರಣ
ಹೊಂದಿದರು ಎಲ್ಲಾರು ಮುಂದ ಕಾರುಣ್ಯದೃಷ್ಟಿಯಿಂದ
ಬದಿಕಿಸಿದ ಗೋವಿಂದ ಎಲ್ಲಾರನಾ॥ ೪

ಚಾರು ಕಾಲಿಂದಿಯಲಿ ನೀರು ವಿಷವಾದಕ್ಕೆ ಕಾರಣ
ಹುಡುಕುವೆನೆಂದ ಶೌರಿಸುತ ಶ್ರೀಕೃಷ್ಣಸಾರ ಕಡಹಾಲ
ಮರನೇರಿ ಆ ಮಡಿವಿನಲಿ ಹಾರಿದಾಕ್ಷಣಕ್ಕೆ ಉಕ್ಕೇರಿದಳು
ಯುಮುನಿ । ಸಾರ ಮದಗಜದಂತೆ ನೀರೊಳಗೆ ಗಡಬಡಿಸಿ
ಸಾರ ಸರ್ಪನ ಹಿಡಿದ ಕ್ರೂರನವ ಮೈಮ್ಯಾಲೇರಿ ಕಚ್ಚುತ
ತನ್ನ ಶರೀರಪಾಶದಿ ಹರಿ ಶರೀರ ಸುತ್ತಿದನು॥ ೫

ದುಷ್ಟಾಹಿಯಿಂದ ನಿಶ್ಚೇಷ್ಟನಾದನು ಕೃಷ್ಣದೃಷ್ಟಿಯಿಂದಲಿ
ನೋಡಿ ಅಷ್ಟು ಗೋಗಳು ಮತ್ತೆ ಅಷ್ಟೆಗೋಪಾಲಕರು
ಕಷ್ಟವನು ಬಟ್ಟು ಉತ್ಕೃಷ್ಟ ತಾಪದಲೆ ನಿಶ್ಚೇಷ್ಟರಾದರು ಅಲ್ಲೆ
ಕಾಷ್ಟಮೂರ್ತಿಗಳಂತೆ ಸ್ಪಷ್ಟತೋರಿದರು। ಗೋಷ್ಟದಲಿ
ಮತ್ತೆಲ್ಲ ದುಷಚಿನ್ಹವು ಕಂಡು ಶೇಷ್ಠ ನಂದಾದಿಗಳು

ಕಷ್ಟದನು ಬಟ್ಟಸಂತುಷ್ಟರಾಮನ ಕೂಡಿ ಅಷ್ಟೂರು
ನಡದರಾ ವೃಷ್ಣಿಕುಲ ತಿಲಕ ಶ್ರೀಕೃಷ್ಣ ಇದ್ದಲ್ಲೆ॥ ೬

ಮುಂದವನ ತಾಯಿ ಆಕಂದನಾ ಕಂಡು ಕಾಳಿಂದಿಯಲಿ
ಧುಮುಕಬೇಕೆಂದು ಧಾವಿಸಲಾಗಿ ಮಂದಗಮನಿಯರೆಲ್ಲ
ಹಿಂದಕ್ಕ ಸರಿಸಿದರು ನಂದಗೋಪನ ಹಿಡಿದು ಹಿಂದಕ್ಕ
ಸರಿಸಿದನು ಛಂದದಲಿ ರೋಹಿಣಿಯ ಕಂದ ಬಲರಾಮಾ।
ಮುಂದೆರಡು ಫಳಿಗಿ ಮ್ಯಾಲೆ ಛಂದಾಗಿ ಎಚ್ಚರಿಕಿಯಿಂದ
ಸರ್ಪನ ಹಿಡಿದು ಹಿಂದೊತ್ತಿ ಹೆಡಿಮೇಲೆ ಛಂದಾಗಿ
ಕಾಲಟ್ಟು ಮಂದ ಹಾಸ್ಯದಿ ನಗುತ ನಂದಸುತ ಕುಣಿದ
ಆನಂದದಿಂದಾ॥ ೭

ಪದ, ರಾಗ: ಆನಂದ ಭೈರವಿ ಆದಿತಾಳ

ರಂಗ ಕುಣಿದ ಕಾಳಿಂಗನ ಹೆಡಿಮ್ಯಾಲ ಕಂಗಳಿಂದಲಿ ನೋಡಿ
ಹಿಂಗದೆ ಸುರಕಿಲ್ಲ ಸಂಗೀತ ಸಹಿತ ಸಾರಂಗ ಮೃದಂಗ
ತಾಲಂಗಳ ನುಡಿಸಿದರು ಹಿಂಗದಲೆ॥ ಪ

ಹಿಂಗದೆ ಯಮುನಿ ತರಂಗಗಳಿಂದಲೆ ಮಂಗಳಾಂಗನ
ಪಾದಂಗಳ ತೊಳುವಳು । ಅಂಗಾಲಿಲ್ಯವನು ಕಾಳಿಂಗನ ಮರ್ದಿಸಿ
ಮಂಗಳ ಕೂಡುವ ಜಗಂಗಳಿಗೆ । ಮಂಗಳಕರ
ಪುಷ್ಪಂಗಳ ದೃಷ್ಟಿಯ ರಂಗಗ ಮಾಳ್ಪರು ಹಿಂಗದೆ ದಿವಿಜರು
ಭೃಂಗಕೋಕಿಲ ಮಯೂರಂಗಳು ಮಾಳ್ಪವು ರಂಗನ ಸಂಗಾತ
ಸಂಗೀತವು॥ ೧

ಮುನ್ನಾಗಿ ಬಹುವರ್ಷ ತನ್ನ ಸಂದರ್ಶನವನ್ನು ಬಯಸುವಂಥ
ಮಾನ್ಯಾದ ಮುನಿಗಳಿಗೆ ಚೆನ್ನಾಗಿ ಶ್ರೀಹರಿ ತನ್ನ ಕೃಷ್ಣರೂಪವನ್ನು
ತೋರಿಸುತ ಪ್ರಸನ್ನನಾಗಿ। ಉನ್ನತವಾಗಿಹ ಪನ್ನಗಾಧೀಶನ
ಉನ್ನತವಾಗಿಹ ಘನ್ನ ಹೆಡಿಗಳಲ್ಲಿ। ರನ್ನದಂಥೊಳುವಂಥಾ
ತನ್ನ ಪಾದಗಳಟ್ಟು ತನ್ನಂಗಡ ಧಿನ್ನಂ ಗಡ ಧಿಕ್ಕಡ ಥೌ ಎಂದು॥ ೨

ಎಂತು ವರ್ಣಿಸಲಿ ಅನಂತ ಮಹಿಮಿಯು ಎಂಥವರಿಗೆ
ಅವನಂತು ತಿಳಿಯದು। ಸಂತತದಲಿ
ಬಹಿರಂತರ್ವ್ಯಾಪತನಾಗ್ಯನಂತ
ಪ್ರಾಣಿಗಳಲ್ಲಿ ನಿಂತಿರುವಾ। ಅಂತ್ಹತ್ತಗುಡದೆ ತನ್ನಂತೆ
ತಾ ಕುಣಿದಾಡುವಂಥದಗನ್ಯ ದೃಷ್ಟಾಂತವೆಂಬುದಿಲ್ಲ ಇಂಥ
ಅನಂತಾದ್ರಿಕಾಂತನ ನೋಡುತ ನಿಂತರು
ಎಲ್ಲರು ಭ್ರಾಂತರಾಗಿ॥ ೩

ಆರ್ಯಾ

ಕಾಲಿಯ ಸರ್ಪನ ಕಾಲಿಕೆ ತುಳವುದ ಕಾಲಕ್ಕೆ ಆತನ
ಪತ್ನಿಯರು । ಕಾಲುಬಿದ್ದು ಗೋಪಾಕೃಷ್ಣಾಕಾಲಕ ಪ್ರಾರ್ಥನೆ
ಮಾಡಿದರು

ಪದ, ರಾಗ : ಜಾಂಗಲಾ

ಶ್ರೀ ಪತಿಯೇ ನಮ್ಮ ಪ್ರಾಣಪತಿಯ ಪಾಲಿಸು ಶ್ರೀ ಪತಿಯೆ॥ ಪ

ಪತಿತ ಪಾವನ ನಿಮ್ಮ ಪ್ರಥಿತ ಪಾದಗಳಿಂದ
ಪತಿಯು ಪಾವಿತನಾದ ಹಿತವಾಯಿತು॥ ೧

ಫಣಿಯ ಫಣಗಳಲ್ಲಿ ಪ್ರಣಯದಲಿ ಕಾಲಿಟ್ಟ
ಕುಣಿಕುಣಿ ದಾಡಿದ್ದು ಗುಣವಾಯಿತು॥ ೨

ಮುದ್ದು ಮುಖದ ಅನಂತಾದ್ರೀಶ ದುಃಖ
ಸಮುದ್ರದಿಂದ ನಮ್ಮನ್ನು ಉದ್ಧಾರ ಮಾಡು ೩

ಆರ್ಯಾ

ಕೃಷ್ಣ ವೇಣಿಯರ ಕಷ್ಟನೋಡಿ ಶ್ರೀ ಕೃಷ್ಣ ಅವನ
ಬಿಟ್ಟನುಬ್ಯಾಗೆ। ಕೃಷ್ಣನೇ ಸಾಕ್ಷಾದ್ವಿಷ್ಣುನೆಂದು ಆ ಕೃಷಸರ್ಪ
ನುಡಿದನು ಹೀಂಗೆ॥ ೩

ಪದ, ರಾಗ: ಛಾಯಾ **ರೇಗುಪ್ತಿ ತಾಳ**

ಬಿಡಬ್ಯಾಡೆನ್ನ । ಒಡೆಯನೆ ನಿನ್ನ । ಅಡಿಯಲಿ
ಭಕುತಿಯ ಕೊಡು ಮೋಹನಾ॥ ಪ

ಎನ್ನಭಿಮಾನಾ ॥ ನಿನ್ನ ಅಧೀನಾ ॥
ಚನ್ನಾಗಿಕೊಡು ನೀನಿನ್ನಲ್ಲಿ ಧ್ಯಾನಾ॥ ೧

ಸಾಕಿದರೊಳಿತು ॥ ನೂಕಿದರೊಳಿತು ।
ಲೋಕನಾಥನೆ ನಿನ್ನ ತೋಕನೆಂದರಿತು॥ ೨

ಕಿರಿಯ ನಾನೆಂದು । ಸ್ಮರಣೆಗೆ ತಂದು ।
ಹರಿಯೆ ಅನಂತಾದ್ರಿ ದೊರಿಯೆ ಎಂದೆಂದು॥ ೩

ಆರ್ಯಾ

ಕಾಳಿಯ ನುಡಿಯನು ಕೇಳುತ ಶ್ರೀ ಪತಿ
ಭಾಳ ಪ್ರೇಮದಲಿ ಹೀಗೆಂದಾ । ಹೇಳುವೆ ಕಾಳಿಯ
ಕೇಳ್ಯನ್ನಯ ವಚನಾ ಏಳು ಶೀಘ್ರದಲಿ ಇಲ್ಲಿಂದಾ॥ ೧

ಶ್ರೀ ಶಿವಪಾರಿಜಾತ

ಅಧ್ಯಾಯ ಒಂದು

ಜಯ ವಿಬುಧನುತರ ಚರಣ ಜಯತು ನಾಗಾಭರಣ
ಜಯ ಭಕ್ತ ಜನ ಶರಣ ಜಯ ದುಃಖಹರಣ ೧

ಜಯತು ಖಳಕೃತಕದನ ಜಯಜಯತು ಜಿತಮದನ
ಜಯ ಜಯತು ಸುಖಸದನ ಜಯ ಪಂಚವದನ ೨

ಜಯತು ಶ್ರೀಶಕೈಲಾಸ ಜಯ ಭಜಕವಿಶ್ವಾಸ
ಜಯ ಅನಂತಾದ್ರೀಶ ಪ್ರಿಯಪಾರ್ವತೀಶ ೩

ಪದ

ಮುಂಚೆ ನುತಿಸುವೆ ಭಕುತಿಯಿಂದಲಿ
ಪಂಚವದನನ ಪಾದಪಂಕಜ
ಚಂಚಲಾಗದಲಿರಲಿ ಮನ ಮತಿ ಮುಂಚೆ ಕೊಡುಯೆಂದು
ಹಿಂಚೆ ಕುಲ ದೇವಾದಿ ಪದಯುಗ
ವಂಚನೆಯು ಇಲ್ಲದಲೆ ನುತಿಸುವೆ
ಹಂಚಿಕಿಂದಲಿ ಕುಶಲಬುದ್ಧಿ ಪ್ರಪಂಚ ಕೊಡುಯೆಂದು ೧

ಮನಸಿಜನ ಗೆದ್ದವರು ಮೇದಿನಿಯ ಹುಡಿಕಿದರಿಲ್ಲಾ
ಮತ್ತೀಮನಸು ಗೆದ್ದವರುಂಟೆಯೆಲ್ಲರಿ ಗನುಭವಾಗಿಹುದು
ಮನಸಿಜನ ಗೆದ್ದಂಥ ರುದ್ರನು
ಮನಕೆ ತಾ ಅಭಿಮಾನಯಾಗಿಹ
ನೆನುತ ಮೊದಲಾತನನ ನುತಿಸಿದೆ ಮನಸಿನೊಳಗಿಟ್ಟು ೨

ಸಾರಲಿಂಗ ಪುರಾಣದರ್ಥದ
ಸಾರಿ ತಿಳುವುತ ಮತ್ತೆ ಗ್ರಂಥ ವಿ
ಚಾರ ಮಾಡುತ ಅದರ ಅರ್ಥವ ಪೂರ್ಣ ತಿಳಕೊಂಡು
'ಶ್ರೀರತಾನಂತಾದ್ರಿ' ರಮಣನ
ಸಾರ ಕೃಪೆಯಿಂದಲೆಯೆ ಪೇಳುವೆ
ಪಾರ್ವತೀಶಗೆ ಪ್ರೀತಿಕರ ಶಿವ ಪಾರಿಜಾತವನು ೩

ಪದ

ಪೂರ್ವದಲ್ಲಿ ಪಾರ್ವತಿಯು ಪರ್ವತಶ್ರೇಷ್ಠ ಹಿಮ
ಪರ್ವತದ ಮಧ್ಯದಲ್ಲಿ ಸರ್ವಗುರು ಕೈಲಾಸ

ಪಾರ್ವತೀಶನ ಮನ: ಪೂರ್ವಕದಿ ಬಯಸುತಲ
ಪೂರ್ವ ತಪ ಮಾಡುತಿರುವಳಲ್ಲೆ
ಪಾರ್ವತಿಯ ಕಷ್ಟ ಹಿಮಪರ್ವತನು ತಾ ನೋಡಿ
ಸರ್ವ ಕಾರ್ಯವ ಬಿಟ್ಟು ಇರುವ ಬಲು ಚಿಂತೆಯಲಿ
ಸರ್ವಸಂಪನ್ನಳಾಗಿರುವಳೆನ್ನ ಮಗಳು ಈ
ಪಾರ್ವತಿಗೆ ತಕ್ಕ ವರನಿರುವನಾರೆಂದು ೧

ಬಂದನಾಗಲ್ಲವನ ಮಂದಿರಕೆ ನಾರದನು
ಮುಂದೆ ಗಿರಿರಾಜ ಅಲ್ಲಿಂದ ಆತನಕಂಡು
ಛಂದದಲಿ ಪೂಜಿಸುತ ಇಂದು ಇಲ್ಲಿಗೆ ನೀವು
ಬಂದು ಕಾರಣವೇನುಯೆಂದು ಕೇಳಿದನು
ಅಂದ ಮಾತನ್ನು ಕೇಳಿ ಮುಂದೆ ಮುನಿರಾಜ ತಾ
ಮಂದಹಾಸದಿ ನಗುತವೊಂದೊಂದು ಕಥೆ ಪೇಳಿ
ಛಂದದಲಿ ಮನಸಿಗಾನಂದ ಬಡಿಸುತ ನುಡಿದ
ಬಂದ ಕಾರ್ಯವ ಅವನ ಮುಂದೆ ವಿಸ್ತರದಿ ೨

ಪದ

ತಿಳಿಯೋ ನೀ ಗಿರಿರಾಜ ನಾ ಬಂದ ಕಾರ್ಯವ
ತಿಳಿಯೋ ನೀ ಗಿರಿರಾಜ ಭೋರಾಜರಾಜಾ
ತಿಳಿಯೋ ನಿನಗೊಬ್ಬಳಿಯ ಬಂದಿಹ
ನಳಿಯನಾಗಿ ಮುಖಕಳೆಯು ಉಳ್ಳವ
ಇಳೆಯೊಳಿಂಥಾ ಅಳಿಯನ ಸಮ
ಅಳಿಯನಿಲ್ಲ ಕಾಲ್ಗಳೆಯುದಲೆ ಇರು ಪ

ಹರಿಯಿರುವ ಪ್ರಖ್ಯಾತಾ ಸರ್ವರಿಗೆ ಆತನೆ
ದೊರೆಯೆನಿಸಿಕೊಂಬಾತಾ
ಕರಿರಾಜ ಕೂಗುತ ಕರೆಯಲೊದಗಿದನಾತಾ
ತನ್ನ ಸ್ಮರಿಸಿದವರನು
ಮರೆಯದಲೆ ಪೊರೆವಾತಾ ಅನಾಥಾನಾಥ
ಧರೆಯೊಳಗೆ ಶ್ರೀಹರಿಯ ಮೂರ್ತಿಯ

ಸರಿಯುಯಿಲ್ಲವು ಮರೆಯದಲೆ ಆ
ಸಿರಿಯ ರಮಣನ ಕರೆಯ ಕಳಿಸುತ
ಹಿರಿಯ ಮಗಳನು ಹರಿಗೆ ಅರ್ಪಿಸು ೧

ಬಡವನಲ್ಲವು ಆತಾ ಬಹುಬಡವ ಭಕ್ತರ
ದೃಢವ ನೋಡುವನಾತಾ ತಾ
ಬಿಡದೆ ಕರವನು ಪಿಡಿವ ಸ್ನೇಹ ಸಮೇತಾ
ಬೇಡಿದ್ದು ತ್ವರದಲಿ ಕೊಡುವನವ
ಬಹು ದಾತಾ ಲಕ್ಷ್ಮಿಯಸತ್ತಾ
ದೃಢವಿರಲಿ ಮನ ಪೊಡವಿರಲಿ
ಉಂಬುಡುವ ಮಗಳನು ತಡವು ಮಾಡದೆ ೨

ಕೊಡುವದುಚಿತವು ಒಡವೆಗಳು
ಬಹಳಿಡುವುತಲೆ ಸುಖಪಡುವಳಾಕೆಯು
ಎಂಥವನು ಅವ ತಾನು ಎಂಬಂಥ ಮನಸಿನ
ಭ್ರಾಂತಿ ಬಿಡು ಎಲೋ ನೀನು ಅತ್ಯಂತವಾಗಿಹ
ಶಾಂತ ಮೂರುತಿ ತಾನು ಎಂತೆಂಥವರಿಗವ
ನಂತ ತಿಳಿಯದು ಇನ್ನು ಮತ್ತೇಳಲೇನು
ಇಂಥ ಶ್ರೀಮದನಂತಾದ್ರೀಶನು
ಕಾಂತಿಯಿಂದಿರುವಂಥ ಮಗಳಿಗೆ
ಚಿಂತೆ ಬಿಡು ಹಿಮವಂತ ನೀ
ನಿಶ್ಚಿಂತೆಯಿಂದಿರು ೩

ಪದ

ಮುನಿಯ ಮಾತನು ಕೇಳಿ ಮನಸಿನೊಳು ಹಿಗ್ಗುತಲೆ
ಮನದ ಚಿಂತೆಯ ಬಿಟ್ಟು ಮನಸಿಜಪಿತನು ಎನ್ನ
ಮನಿ ಅಳಿಯನಾದ ಎನ್ನ ಜನುಮ ಸಾರ್ಥಕವಾಯಿ
ತೆನುತ ತಿಳಿದನು

ತಾನು ಘನ ಹಿಮಾಚಲನು ಅನುದಿನವು ತನ್ನಲ್ಲಿ ಅನು
ಕೂಲವಾಗುತಲೆ ತನಗೆ ಹಿತಮಾಡುತಿಹ ಜನರೊಳಗೆ ಮ–
ತ್ತಾಪ್ತ ಜನರನ್ನು ಕೇಳದಲೆ ಅನುಮಾನ ಬಿಟ್ಟು ಹೀಗೆನುತ
ಮಾತಾಡಿದನು ಮುನಿಯ ಮುಂದೆ

ಪದ

ಕೊಡುವೆನು ಆ ವಿಷ್ಣುವಿಗೆ ಮಗಳನ್ನು ಕೊಡುವೆನು
ಕೊಡುವೆನು ಸಂತೋಷ ಬಡುವೆನಾತನ ಪಾದಾ
ಹಿಡಿವೆನು ಚಿಂತೆಯ ಬಿಡುವೆನು ಮಗಳನ್ನು ಪ

ನಾರದ ನಿನಮಾತು ಇನ್ನು ಸರಿ
ಬಾರದು ಆರಿಗೆ ಮುನ್ನ
ನೀರದ ವರ್ಣನ ತೋರಿದ ಬುದ್ಧಿ ವಿ
ಶಾರದ ನಿನ್ನ ಮಾತು ಮೀರದೆ ಮಗಳನ್ನು ಕೊ.... ೧

ನಿನ್ನ ಮಹಿಮೆ ಬಲ್ಲೆ ನಾಲ್ಕುಲೋಕ
ಮಾನ್ಯರಿಗತಿಮಾನ್ಯ ನೀನು
ನಿನ್ನ ಚಿತ್ತಕೆ ಬಂದರಿನ್ನೇಕೆ ತಡಬಹು
ಚೆನ್ನಾತ ಆತಗೆ ಮನ್ನಿಸಿ ಮಗಳನ್ನು ಕೊ....... ೨

ವಾಸುದೇವನ ಸರಿ ಇಲ್ಲಾ ಎಂಬ
ಭಾಷೆಯು ಅದು ಸುಳ್ಳಲ್ಲ
ಲೇಸಾಗಿ ನಾನಿನ್ನ ಭಾಷೆಗೆ ಮೆಚ್ಚಿ
ಉಲ್ಲಾಸದಿ 'ಅನಂತಾದ್ರೀಶಗೆ ' ಮಗಳನ್ನು ಕೊಡುವೆನು ೩

ಪದ

ಬ್ರಹ್ಮಪುತ್ರ ಕೇಳಿ ಸಂಭ್ರಮ ಬಡವುತ
ನಮ್ಮ ಕಾರ್ಯ ಆಯಿತೆಂದು ಸುಮ್ಮನಿರುವುತ ೧

ಒಮ್ಮೊಂದೊಮ್ಮೆಲೆದ್ದು ಮತ್ತೊಮ್ಮೆ ಹೇಳುತ
ರಮಿಸದಲೆ ನಡೆದ ತನ್ನ ಜಿವ್ಹೆ ತೋರುತ ೨

ಹೋಳು ತಂಬೂರಿ ತಂತಿಗಳನು ಮೀಟುತ
ಚೆಲುವ ಮುನಿಯ ನಡೆದ ಬಾಗಿಲವ ದಾಟುತ ೩

ಚೆಂದವಾಗಾನಂದ ಭಾರದಿಂದ ಮಣಿವುತ
ಮುದೆ ಪಾರ್ವತಿಯ ಬಳಿಗೆ ಬಂದು ಕುಣಿಯುತ ೪

ಮುನ್ನ ನುಡಿದ ಮದುವೆಯ ಸುದ್ದಿಯನು ನಗವುತ
ಚೆನ್ನಿಗ'ನಂತಾದ್ರೀಶ'ನನ್ನು ಸ್ಮರಿಸುತ ೫

ಪದ

ಕೇಳಮ್ಮ ಹೊಸಸುದ್ದಿ ಪಾರ್ವತಿ ನಿನಗೆ
ಹೇಳಬಂದೆನು ಎನಗಿದು ಪ್ರೀತಿ ಪ

ಪಂಕಜನಾಭ ಬರುವನಂತೆ ನಿನ್ನ
ಕಂಕಣಕಯ್ಯ ಪಿಡಿವನಂತೆ
ಪಂಕಜಮುಖಿಯೆ ನಿಶ್ಚಯವಂತೆ ನಿ
ಶ್ಯಂಕೆಯಿಂದಿರು ಯಾತಕೆ ಚಿಂತೆ ೧

ನಕ್ಕು ಆಡುವನಲ್ಲವು ನಾನು ಎ
ನ್ನಕ್ಕಯ್ಯ ನಿನಗೆ ಹಿತ ಪೇಳುವೆನು
ಮಿಕ್ಕ ಮಾತುಗಳಿಂದ ಫಲವೇನು ನಿನ್ನ
ತಕ್ಕ ಪುರುಷ ಅವ ತಿಳಿ ನೀನು ೨

ಶ್ರೀಮದನಾಂತಾದ್ರಿವಾಸಗೆ
ನಿನ್ನ ನೇಮಿಸಿದ ಹಿಮವಂತನು ಈಗ
ಕೋಮಲಾಂಗಿಯೇ ಎನ್ನ ಮನಸಿಗೆ ಬಂತು
ಈ ಮಾತು ಸತ್ಯವಾಗಲಿ ಬೇಗ ೩

ಪದ

ಪಂಟಿಸೀ ಪರಿ ಸುದ್ದಿಯುಂಟೆಂದು ಪೇಳುತಲೆ
ಟಣ್‌ಟಣನೆ ಜಿಗಿವುತು
ತ್ಕಂಠದಲ್ಲಿ ಅಲ್ಲಿಂದ ಹೊರಟು ಮುನಿಬಂದು ವೈ
ಕುಂಠದಲಿ ತಾ ನುಡಿದ
ಉಂಟಾದ ಸುದ್ದಿ ವೈಕುಂಠಪತಿಗೆ
ಎಂಟೆಂಟು ಕಳೆಯಿಂದ
ಉಂಟಾದ ಪಾರ್ವತಿಯ ಗಂಟು ಹಾಕಿದೆಯೆನಲು
ತಂಟಕನೋ ನೀ ಕಲಹಗಂಟಕನೋ ಸರಿಯಿನ್ನು
ಭಂಟನಹುದೆಂದು ವೈಕುಂಠಪತಿನಕ್ಕ ೧

ನಾರದನ ಮಾತು ಸರಿಬಾರದೆ ಪಾರ್ವತಿಯು
ತೀರದಂಥಾ ದು:ಖವಾರಿಧಿಯಲಿ ಮುಳುಗಿ
ಸಾರಿದಳು ತನ್ನೊಳಗೆ
ಘೋರಾದ ಚಿಂತೆ ಬಂತಾರಿದನು
ಬಿಡಿಸುವರು ತೋರದೆನಗೆ ತೋರದಿರಬೇಕು ನಾ
ದೂರದಲಿ ಇಲ್ಲೆ ಇರಬಾರದೆಂತೆಂದು ಸುಖ
ತೋರದಲೆ ತನ್ನ ಮಾತು ಮೀರದಲೆ ಇರುವ ಸುವಿ
ಶಾರದಳು ಸಖಿಯೊಡನೆ ಘೋರಾದರಣ್ಯವನು
ಸೇರಿದಳು ತಾನು ಮುಂದೆ ಮತ್ತಾಕೆಯ
ಮುಂದೆ ಮಾತಾಡದಲೆ ನೊಂದು ತನ್ನೊಳಗೆ ತಾ
ತಂದು ಆ ವನದಲ್ಲಿ
ಮುಂದೇನು ಮಾಡಲೆಂತೆಂದು ತಿಳಿಯದೆ ಮರುಗಿ
ಮಂದಗಮನೆಯು ಚಿಂತೆಯಿಂದ ಮಲಗಿದಳು
ಮುಂದೆ ಆ ಸಖಿ ನೋಡಿ ಸಂದೇಹ ಬಡುತ ತ್ವರ
ದಿಂದ ಬದಿಯಲಿ ತಾನು ಬಂದು ಹಾ ಇದುಯೇನು
ಇಂದು ಮುಖಿ ಹೀಗೆಯೆಂದೆಂದು ಮಲಗುವಳಲ್ಲ
ಇಂದೇನು ಬಂತು ಇಂತೆಂದು ಚಿಂತಿಸುತ ಹೀಗೆಂದಳಾಗ ೨

ಪದ

ಇಲ್ಲೇಕೆ ಮಲಗಿದೆ ಹೇಳಮ್ಮ ನೀ ಇಲ್ಲೇಕೆ
ಎಲ್ಲಾನು ಬಿಟ್ಟು ವನದಲ್ಲಿಯೆ ಪಾರ್ವತಿ ಮಂದಿರ ಪ

ಬಿಟ್ಟು ಇಲ್ಲಿ ಮಲಗುವರೆ ನಿನಗೆ
ಬಂದಿಹದೇನು ಹೇಳದಿರುವರೆ
ನಿನ್ನ ತಂದೆ ತಾಯಿಗಳೆಷ್ಟು ಮರಗುವರೆ
ಇಂದು ಮುಖಿಯಳೆ ಯಾರೇನಂದರೇನೆ ಗೆಳತಿ ನಿನಗೆ ೧

ನಿನ್ನ ಪ್ರಾಣದ ಸಖಿನಾನಲ್ಲೆ ನಿನ
ಗಿನ್ನಾರಿರುವರು ಹಿತವರು ಇಲ್ಲೆ ನಾ
ನಿನ್ನ ಕಾರ್ಯವ ಮಾಡುವಳಲ್ಲೆ
ಚಿನ್ನದಂಥವಳೆ ನೀ ಘನ್ನಾರಣ್ಯಕೆ ಬಂದು ೨

ನಿದ್ರೆ ಬಂದಿಹುದೇನೆ ನಿನಗಿಂದು ಅಥವಾ
ಬುದ್ಧಿ ಹೋಯಿತೆ ಮತ್ತೆ ನಿನ್ನದು
ಮನದ ಗದ್ದಲವೇನು ಇಂದು ತಿಳಿಯದು
ಬುದ್ಧಿವಂತಿಯೆ ಅನಂತಾದ್ರೀಶನಾಣೆ ನಿನಗೆ ೩

ಪದ

ಅಂದಮಾತನು ಕೇಳಿ ಇಂದು ಮುಖಿ ಪಾರ್ವ
ತಿಯು ಹಿತದಿಂದ ಆಡಿದ ಮಾತು
ಒಂದೊಂದು ಸ್ಮರಿಸುತಲೆ
ಛಂದಾಗಿ ಮನಸಿಗೆ ತಂದು ನೋಡಿದಳು
ಇಂದು ಯೆನ್ನ ಭಾಗ್ಯಕ್ಕೆ ತಂದೆ ತಾಯಿಗಳಿಲ್ಲ
ಬಂಧು ಬಾಂಧವರಿನ್ನು ಮುಂದೆಲ್ಲಿ
ಬರುವವರು ಸಂದೇಹವೇಕೆ ಸಖಿ ಯಿಂದಧಿಕ ಮತ್ತಿಲ್ಲ
ವೆಂದು ದು:ಖವ ಸಖಿಯ ಮುಂದ ಹೇಳಿದಳು ೧

ಪದ

ಏನು ಹೇಳಲಿಸಖಿ ಇನ್ನೇನು ಹೇಳಲಿ ನಾನು
ಖೂನದಿ ತಂದೆಯು ಹರಿಗೆಯೆನ್ನನು ನೇಮಿಸಿದಾ ಪ

ಮೃತ್ಯುಂಜಯ ಮೃಡನೆ ಎನ್ನ ಚಿತ್ತಕೊಪ್ಪುವ ಪತಿಯು
ಸತ್ಯದಿ ಆಗಲಿಯೆಂದು ಚಿತ್ತದಿ ಬಯಸುತಲೆ
ನಿತ್ಯದಿ ಬಹುದಿನ ಬಿಡದಲೆ ಅರ್ಥಿಲೆ
ಮಾಡಿರುವಂಥ ಪಾರ್ಥೇಶ್ವರನಾ
ಪೂಜೆಯು ವ್ಯರ್ಥಾಯಿತಲ್ಲೆ ೧

ನಾರದ ಮುನಿಯಿ ಮಾತು
ಸಾರಿದ ನನ್ನಲಿ ಬರಿದು ಬಾರದೆನ್ನ
ಮನಸಿಗೆ ಅದು ತಾರದೆ ನಾ ಬಂದೆ
ಮೀರಿದ ಕೆಲಸವು ತೀರಲಾರದು ಅದು ಎಂದು
ಸೇರಿದೆ ವನವನು ನಾಕಾಲೂರದೆ ಮನೆಯಲ್ಲೆ ೨

ಹೃದ್ರೋಗದಿ ಬಳಲುವಳಿಗೆ
ನಿದ್ರೆಯೆಂಬುವದೆಲ್ಲೆ ಭದ್ರಾಂಗಿಯು
ಎಂದೆಂದಿಗೂ ರುದ್ರನ ಸತಿ ನಾನು
ಉದ್ರೇಕದಿ ಮೈಮರೆತು, ಹಿಮಾದ್ರಿಯು ಎನ್ನನು ಕೈಲಾ
ಸಾದ್ರೀಶನ ಬಿಟ್ಟು ಅನಂತಾದ್ರೀಶಗೆ ಕೊಡುವ ೩

ಪದ

ಈ ಪರಿ ಮಾತುನು ಕೇಳಿ ಆ ಪ್ರಾಣದ ಸಖಿ ತಾನು
ಈ ಪರಿ ಮಾತಾಡಿದಳು ಆ ಪಾರ್ವತಿಯ ಮುಂದೆ
ಏ ಪಾರ್ವತಿಯೇ ಬಿಡುಸಂತಾಪವ ನಿನಗೊಂದು ಹೇಳುವೆ
ಆ ಪಿತಗರಿಯದೆ ನಡೆ ನೀ ತಾಪಸವನದಲ್ಲೆ ೧

ಈ ರೀತಿಯ ನುಡಿ ಕೇಳಿ ಹಾರೈಸುತ ಸಖಿಕೂಡಿ
ಪಾರ್ವತಿ ತಾ ನಡೆದಳು ಘೋರಾರಣ್ಯದಲಿ
ಇರ್ವಳು ಆಳುಕದೆಲಿಂಗಾಕಾರವು ಪೂಜಿಸುತಲ್ಲೆ
ಚಾರ್ವಾಂಗಿಯು ತಾ ನಿದ್ರಾಹಾರವು ಇಲ್ಲದಲೆ ೨

ದೀನೋದ್ಧಾರಕ ಶಿವನು ತಾನೆ ಅಲ್ಲಿಗೆ ಬಂದು
ಏನು ಬೇಡುವೆ ಪಾರ್ವತಿ ನೀನು ಬೇಡೆಂದ
ಏನು ಧೇನಿಸುವೇ ಬಿಡು ಮಾನಿನಿಯೆ ಭಕ್ತಾ
ಧೀ ನಾನಂತಾದ್ರೀಶನ ಆಣೆ ನಿನಗುಂಟು ೩

ಪದ

ಹರನ ಮಾತನು ಕೇಳಿ ಹರಿಣಾಕ್ಷಿ ಪಾರ್ವತಿಯು
ತ್ವರದಿಂದ ಎದ್ದು ಪರಮ ನಾಚಿಕೆಯಿಂದ
ಸೆರಗವನು ಹೊದೆಯುತಲೆ
ಉರಗಭೂಷಣರ ಪದಕೆರಗಿ ನಿಂತಳು ಮತ್ತೆ
ಕರಗಳ ಮುಗಿದು ಗಿರಿಜೆ ಮುಂದಾ ಮೇಲೆ
ಗಿರೀಶನೆಂಬುವ ಭವ್ಯ ಸುರತರುವ ಈಗೆನಗೆ
ದೊರಕಿತೆನ್ನುತ ಭಕ್ತಿ ಪರವಶಳು ಆಗಿಸ
ತ್ವರದಿಂದ ಈ ಪರಿಯುಹರಗೆ
ಬೇಡಿದಳಾಗ ಹರುಷದಿಂದ ೧

ಪದ

ನೀನೆ ಎನ್ನ ಪತಿಯಾಗಬೇಕು
ಭಕ್ತ ಪ್ರೀಯನೆ ಅದ ಹೊರ್ತು ಮತ್ತೇನು ಬೇಕು ಪ

ನಿನ್ನದಯವು ಇರಬೇಕು
ಕೇಳೆನ್ನ ಮನೋರಥ ಸಿದ್ಧಾನಾಗಬೇಕು
ನನ್ನ ನಿನಗೆ ಕೊಡಬೇಕು
ಇದು ಎನ್ನ ತಂದೆಯ ಮನಸಿಗೆ ಬರಬೇಕು ೧

ಮಾನ್ಯಳು ಸುರರಿಗೆ ಬೇಕು
ಮತ್ತೆನ್ನ ಮದುವೆ ಕಾರ್ಯನೋಡಲಿಬೇಕು
ನನ್ನ ವಿಷ್ಣುವಿಗೆ ಕೊಡಬೇಕು
ಎಂಬ ಘನ್ನ ಮುನಿಯ ಮಾತು ಸುಳ್ಳಾಗಬೇಕು ೨

ಸಂತತ ನಿನ್ನ ಸ್ಮೃತಿ ಬೇಕು
ಮುಂಚೆಯನಂತಾಂದ್ರಿರಮಣನ ಬಿಡಸಲಿಬೇಕು ೩

ಪದ

ಕೇಳಿ ಈ ಪರಿ ಮಾತು ನೀಲಕಂಠನು ನುಡಿದ
ಬಾಲೆ ಬಿಡು ಚಿಂತೆಯಿನ್ನು
ಮೇಲೆ ಆ ನಿನ್ನ ತಂದೆಗ್ಹೇಳಿ ನೀ ಕರೆಕಳಿಸಿ
ಮೂಲ ಬಿಡದಲೆ ಎಲ್ಲ ಸಾಲದೇವತೆಗಳನು
ಮೇಲಾದ ಸ್ವಯಂವರದ ಕಾಲವಿದುಯೆಂದು
ಬಾಲಕನು ಆಗಿ ಆಮೇಲೆ ನಾನಿನ್ನ ತೊಡೆಯ
ಮೇಲೆ ಆಡುವೆ ಬಂದು
ಬಾಲೆ ಆ ಕಾಲಕೀ ಬಾಲಕನ ಎತ್ತಿಳಿಸಿ
ಸೇಲಾದ ಪುರುಷನಿಗೆ ಮಾಲೆ ಹಾಕುವೆನೆಂದು ಹೇಳು
ಎಲ್ಲರಿಗೆ ಕುಂದರದನೆಯೆ ಕೇಳು
ಬಂದ ಬಂದವರೆಲ್ಲ ಹಿಂದೆ ಆಗುವರಾಗ
ಮುಂದೆ ನಿಜರೂಪ ನಿನಮುಂದೆ ತೋರಿಸುವೆ
ಅಲ್ಲಿಂದ ಮಾಲೆಯ ಹಾಕು ಸಂದೇಹವಿಲ್ಲೆಂದು ಗುಪ್ತನಾದ
ಛಂದಾದ ಈ ಕಥೆಯ ಒಂದೆ ಮನಸಿಲೆ ಕೇಳ್ವ
ಮಂದಿಗಾಗುವದು ಆನಂದ ವೃಷ್ಟಿಯು ಸತ್ಯ
ಮುಂದನಾಂತಾದ್ರೀಶ ಹಿಂದೆ ಶ್ರೀಶೈಲೇಶ
ನೆಂದೆನಿಸಿಕೊಂಬ ಆ
ಚಂದ್ರಶೇಖರನ ದಯೆಯಿಂದ ಮುಗಿದಿತಿಲ್ಲಿಗೊಂದು ಅಧ್ಯಾಯ

ಅಧ್ಯಾಯ ಎರಡು

ಪದ

ಪದುಮ ನಾಭನ ಸ್ಮರಿಸಿ ಮುದದಿ ಹಿಮಗಿರೀಂದ್ರನು
ಮದುವೆಯಕಾರ್ಯಕೆ ತೊಡಗಿದ ಮಗಳ ಹುಡುಕಿದ ೧

ಅಲ್ಲೆ ಮನೆಯೊಳಗಿಲ್ಲ ಎಲ್ಲಿ ಹುಡುಕಿದರಿಲ್ಲ
ಅಲ್ಲೆ ಇಲ್ಲೆಂದು ಇಲ್ಲ ಎಲ್ಲೆಲ್ಲಿ ಇಲ್ಲಾ ೨

ಘನಹಿಮ ಗಿರೀಂದ್ರ ದಮ್ಮನೆ ದಣಿದು ಮಾತಾಡಿದನು
ಮನೆಮನೆಯಲ್ಲಿ ಹುಡುಕಿ ಮನದೊಳು ಮಿಡುಕಿ ೩

ಮಾನವಂತಿ ಮಗಳೆಲ್ಲೆ ತಾನು ಹೋದಳು ನಾನಿ
ನ್ನೇನು ಪಾಯವ ಮಾಡಲಿ ಎಲ್ಲೆ ನೋಡಲಿ ೪

ಅಚ್ಯುತಾನಂತಾದ್ರೀಶ ನಿಚ್ಚೆ ತಿಳಯದು ಎಂದು
ಎಚ್ಚರಿಲ್ಲದೆ ಬಿದ್ದನು ಮೂರ್ಛಿತನಾದನು ೫

ಪದ

ಏಳೆಏಳೆಂದು ಆಕಾಲದಲಿ ಆಜನರು
ಹೇಳಿ ಎಬ್ಬಿಸಲಾಗ ಏಳಲೊಲ್ಲವನು ಆ
ಮೇಲೆ ಹಾ ಇದು ಎಂಥ
ವೇಳೆ ಬಂದಿತು ಎಂದು ಬಹಳ ಗಾಬರಿಯಿಂದ
ಗಾಳಿ ಹಾಕಿದರು ಶ್ರೀಶೈಲೇಂದ್ರ ತಾನು ಆಮೇಲೆ
ಏಳುತ ಮೈಮೇಲೆ ಎಚ್ಚರ ಹುಟ್ಟು ಆಲಯದೊಳಗಿರುವ
ಶೇಲಾದ ಮಗಳನ್ನು ಕಾಣದಲೆ ಕಣ್ಣು ಕ
ಗ್ಗಾಳಿಗೈಯುತ ಶೋಕ ಬಹಳ ಮಾಡಿದನು ೧

ಪದ

ಎಲ್ಲಿ ಪೋದಳೆಲ್ಲಿ ಹುಡುಕಲಿ
ಮಗಳಿಲ್ಲ ಮನೆಯೊಳೆಲ್ಲಿ ಇರುವಳಲ್ಲಿ ಪೋಗಲಿ
ಎಲ್ಲಿ ಪೋದಳೆಲ್ಲಿ ಹುಡುಕಲೆಲ್ಲಿ ಮಗಳು ಇಲ್ಲ ಪ್ರಾಣ
ನಿಲ್ಲ ಲೊಲ್ಲದಿಲ್ಲೆ ಮನಸು ಕಲ್ಲುಮಾಡಿಯೆಲ್ಲಾ ಬಿಟ್ಟು ಪ

ಚಾರು ಮುಖಿಯ ಯಾರು ಒಯ್ದರೋ
ವಿಚಾರ ಮಾಳ್ಪರಾರ ಇಲ್ಲ ಚೋರರೊಯಿದರೋ
ಕ್ರೂರದೈತ್ಯ ವರ್ಯರೋ ಉದಾರಗಂಧರ್ವರೋ
ಪೂರ್ವವಯದ ಪಾರ್ವತಿಯ ಯಾರು ವೈದಿದಾರು ಮತ್ತೆ ೧

ಇಂದ್ರತಾನು ಬಂದು ಒಯ್ದನೋ
ಆ ಚಂದ್ರ ಮುಖಿಯ ಚಂದ್ರ ಬೇಕೆಂದು ಒಯ್ದನೋ
ಮುಂದೆ ಯಾರು ಬಂದು ಒಯ್ದರೆಂದು ತಿಳಿಯದಿಂದು ಎನಗೆ
ಬಂದ ತಾಪದಿಂದ ಬಹಳ ಬೆಂದೆನಾರ ಮುಂದೆ ಹೇಳಲಿ ೨

ಎಂತು ನಾನು ಚಿಂತೆ ಮಾಡಲಿ ಧೀಮಂತ ಮುನಿಗೆ
ನಿಂತು ಏನಂತ ಹೇಳಲಿ
ಎಂಥ ಕಷ್ಟ ಬಂತು ಈ ಚಿಂತೆಗಿನ್ನು ಪ್ರಾಂತಗಾಣೆ
ಪ್ರಾಂತಕಾನಂತ ಗಿರಿಯ ಕಾಂತಗೇನಂತ ಹೇಳಲಿ ೩

ಪದ್ಯ

ಮುನ್ನಯೀಪರಿ ಶೋಕವನ್ನು ಮಾಡುತಲೆದ್ದು
ಘನ್ನ ಆ ಗಿರಿರಾಜ ನಿನ್ನೇನು ಗತಿಯೆಂದು
ಕಣ್ಣೀರು ಸುರಿಸುತಲೆ ಹೆಣ್ಣು ಮಗಳನು ನೆನಸಿ
ಉಣ್ಣದಲೆ ತಾನು ಅರಣ್ಯದಲಿ ನಡೆದ
ಕಣ್ಣಿಟ್ಟು ನಾಕುಕಡೆ ಚನ್ನಾಗಿ ನೋಡಿದನು

ಮುನ್ನಲ್ಲೆ ಕುಳಿತಿರುವ
ತನ್ನ ಮಗಳನು ಕಂಡು ಕನ್ನಡಿಯ ಪರಿಹೊಳೆವ
ಮುನ್ನವಳಗಲ್ಲವನು ಚೆನ್ನಾಗಿ ಪಿಡಿದು ಬಹು ಬಣ್ಣಿಸುತ ನುಡಿದ

ಪದ

ಪ್ರೀತಿ ಮಗಳೆ ನೀನು ಈ ವನದಲ್ಲಿ
ಕೂತ ಕಾರಣವೇನು ಅಮ್ಮಯ್ಯಾ
ಪ್ರೀತಿಯ ಮಗಳೆ ಇಲ್ಲೇತಕೆ ಬಂದೆ ನೀ
ಪ್ರೀತನಾದ ಶ್ರೀನಾಥ ಮನೆಗೆ ನಡಿ ಪ

ಬುಧನಾರದ ಬಂದು ಮಾಡಿದ ನಿನ್ನ
ಮದುವಿ ನಿಶ್ಚಯವಿಂದು
ಮಧುಸೂದನನಿಗೆ ನಾ ಮುದದಿ ನಿನ್ನನ್ನು ಕೊಟ್ಟು
ಮದುವೆ ಮಾಡುವೆನು ಮುದದಿ ಮನೆಗೆ ನಡಿ ೧

ಮನೆ ಮನೆ ಮನೆ ಹುಡುಕಿ ನಾ ಬಂದೆನು
ಮನಸಿನೊಳಗೆ ಮಿಡುಕೀ
ಮನೆಯ ಬಿಟ್ಟು ವನವನವ ಚರಿಸುವರೇ ೨

ಮನೆಗೆ ನಡಿಯೆ ನಿನ್ನ ಮನಸಿನಂತಾಯಿತು
ಏಸು ಜನ್ಮಕೆ ಬಂದು ಮಾಡಿದ ಪುಣ್ಯರಾಶಿ ಫಲಿಸಿತಿಂದು
ವಾಸುದೇವ ಸರ್ವೇಶ ಅನಂತಾದ್ರೀಶ ನೀನ್ನ ಕೈವಶವಾದನಡಿ ೩

ಪದ

ಪಡೆದ ತಂದೆಯ ಮಾತು ದೃಢವಾಗಿ ಕೇಳುತಲೆ
ಬಿಡದೆ ಆ ನಾರದನ
ನುಡಿ ಸ್ಮರಿಸಿ ಪಾರ್ವತಿಯು ಎಡವಿದಾ ಬಟ್ಟುಮ
ತ್ತೆಡವಿದಂತೆ ದುಃಖ ಬಡುವುತಲೆ ಮನದಲ್ಲೆ

ಮಿಡುಕಿದಳು ತಾನು ಅಡವಿಯಲಿ ನಾ ಬಂದು
ಅಡಗಿದರು ಇದು ಎನ್ನ ಬಿಡಲಿಲ್ಲ ಮತ್ತಿನ್ನ
ತುಡುಗುತನವು ಯಾಕೆ ನುಡಿಬೇಕೆಂದು ತನ್ನ
ಒಡಲೊಳಗಯಿದ್ದದ್ದು ಒಡೆದು ಆಡಿದಳಾಗ ಭಿಡೆಯಬಿಟ್ಟು

ಪದ

ಅಪ್ಪಯ್ಯ ಒಲ್ಲೆ ನಾ ವಿಷ್ಣುವ
ಒಲ್ಲೆನಾ ವಿಷ್ಣುವ ಎಲ್ಲಿ ಹುಡುಕಿ ತಂದಿ
ಬಲ್ಲಿದ ಶಿವಯೆನ್ನ ವಲ್ಲಭನಯ್ಯಾ ಪ

ಧೀರ ಕೇಳವನ ವಿಚಾರಯೆನ್ನೇಳಲಿ
ನೀರು ಮನೆಯಮಾಡಿ ಭಾರವಗೆಲುವ ಮಣ್ಣು ಮೆಲುವಾ
ಬಿಟ್ಟು ಅವದಾವ ಚೆಲುವಾ ೧

ನಿತ್ಯ ಕ್ರೂರನಾಗಿ ಮತ್ತೆ ಬಲಿಯ ತಳಕೊತ್ತಿ ತುಳಿದನವ
ಅತ್ಯಂತ ಕುಹಕ ಕುತ್ತಿಗೆ ಕೊಯಿಕಾ ಅವಗೆಲ್ಲಿ ವಿವೇಕಾ ೨

ಶುದ್ಧ ಕೋತಿಯ ಕೂಡಿ ಕದ್ದು ಬೆಣ್ಣೆಯ ಬತ್ತ
ಲಿದ್ದು ತೇಜಿಯ ಬಿಟ್ಟು
ಹದ್ದನೇರಿಹನು ವೃದ್ಧಾಗಿಹನು
ಅನಂತಾದ್ರಿಯಲ್ಲಿಹನು ೩

ಪದ

ವನದಲ್ಲೆ ಇರುವ ಆ ವನಜ ಮುಖಿ ಪಾರ್ವತಿಯು
ವಿನಯದಿಂದೀಶ್ವರನ ಮನದಲ್ಲೆ ಸ್ಮರಿಸುತ್ತಲೆ
ಜನಕನ ಮುಂದೆ ಹೀಗೆನುತ ತಿಳಿಸಿದಳಾಗ
ಮನಸಿನ ಭಾವವನ್ನು
ಅನುಮಾನ ಬಿಟ್ಟು ತನಗನುಕೂಲವಾಗಿ
ಘನ ಹಿಮಾಚಲ ಜನಾರ್ದನಗೆ ಕೊಡಬೇಕೆಂದು
ಮನದಲ್ಲೆ ಆತನ ನೆನವುತಲೆ ಭಕ್ತಿಯಲಿ
ಮುನಿದಿರುವ ಪಾರ್ವತಿಯ ಮನಸಿನ ಭಾವವನು
ಮನಸಿಗೆ ತಾರದಲೆ ಮನೆಗೆ ನಡೆಯೆಂದ ೧

ಪದ

ಮನೆಗೆ ನಡೆಯೆ ಪಾರ್ವತಿ ನೀನು
ಎನ್ನ ಮನಸಿನಂತಾದರೆ ಬರುವೆನು ೧

ನಿನ್ನ ಮನೋರಥ ವದುಯೇನು ಬಹು
ಮನ್ನಿಸಿ ಶಿವಗೆನ್ನ ಕೊಡು ನೀನು ೨

ಹರಿಗೆ ನಿಶ್ಚಯ ಮಾಡಿದೆ ನಾನು
ಬಿಡು ಹರಗೆ ನಿಶ್ಚಯ ಮಾಡೆಲೋ ನೀನು ೩

ಬಾಲೆ ಕೊಟ್ಟ್ಹೆಣ್ಣು ತಿರುಗೂದಿಲ್ಲೆ
ಶಿಶುಪಾಲನ ರುಕ್ಮಿಣಿ ಬಿಡಲಿಲ್ಲೆ ೪

ಗೆದ್ದೊಯ್ದ ಆಕೆಯ ಹರಿ ತಾನು
ನಾನು ಗೆದ್ದವರಿಗೆ ಮಾಲೆ ಹಾಕುವೆನು ೫

ಯಾವ ಪುರುಷ ನಿನ್ನ ಗೆದ್ದವನು
ಮಹದೇವನೆ ನಿಶ್ಚಯ ತಿಳಿ ನೀನು ೬

ಗೆದ್ದಿಹ ನಿನ್ನಾನಂತಾದ್ರೀಶಾ
ನಿನಗದರ ಚಿಂತೆಯಾಕೋ ಶೈಲೇಶಾ ೭

ಪದ

ಅವನು ಹಿಮವಂತನೆಂಬುವನು
ತನ್ನ ಮಗಳು ಆದವಳಿಗೀಪರಿ ನುಡಿದಾ
ಶಿವನನಾಮದುವೆ ಆಗುವೆನು ಎಂಬುವೆ ನೀನು
ಶಿವನುಯೆಂದೆನಿಸಿಕೊಂಬುವನು ಅವ ಮತ ಎಂಥವನು ಪೇಳೆ
ಅವನ ಮಾತನು ಕೇಳಿ ಯುವತಿಮಣಿ ಪಾರ್ವತಿಯು
ಶಿವನ ಸ್ಮರಿಸುತ ಮತ್ತೆ

ಶಿವನ ಸರಿಯಿಲ್ಲ ಈ ಭುವನದೊಳು ಎಂತೆಂದು
ಅವನ ಕೊಂಡಾಡುತಲೆ
ಸ್ತವನ ಮಾಡುತ ನುಡಿದಳವನ ಪತಿಯೆಂದು ೧

ಪದ

ಅವನೆ ಪತಿಯು ಶಿವನು ಎನಿಸುವಾ ಅಪ್ಪಯ್ಯ ಕೇಳೋ
ಅವನೆ ಪತಿಯು ಶಿವನು ಎನಿಸುವವನು ಸರ್ವಭುವನದೊಡೆಯ
ಅವನೆ ಯನಗೊಪ್ಪುವನು ಸತ್ಯ
ಅವನೀಶನೆ ಯೆನ್ನವಗರ್ಪಿಸು ಪ

ಭಕ್ತಪ್ರಿಯ ತ್ರೀನೇತ್ರನಾಥನು ತಾ
ನಿತ್ಯ ನದಿಯ ನೆತ್ತಿಯಲಿ ಪೊತ್ತಿಹಾತನು ಪ್ರಖ್ಯಾತನು
ಸತ್ಯಶೀಲಕೃತ್ತಿವಾಸಕ್ಲೃಪ್ತ ಅವನೆ ಚಿತ್ತದೊಡೆಯ
ಮತ್ತೆ ಅತ್ತ ಇತ್ತ ನೋಡದೆ ಸತ್ಯ
ಅವಗಗತ್ಯ ಕೊಡುನೀ ೧

ಬಂದದುರಿತ ಹಿಂದೆ ಮಾಡುವ ಭಕ್ತಿಂದ ನಡದು ನಡದು
ಬಂದವರಿಗಾನಂದ ಮಾಡುವ ದಯಮಾಡುವ
ಮುಂದೆ ಸ್ನೇಹದಿಂದ ಒಂದೊಂದು ಫಲವ
ತಂದು ಕೊಡುವ
ತಂದೆ ಕೇಳಾನಂದಮೂರುತಿ ನಂದಿವಾಹನ ಚಂದ್ರಶೇಖರ
ಅಂಥ ಇಂಥ ಕಾಂತನಲ್ಲವೋ
ಭೂಪ್ರಾಂತದೊಳವನಂಥ ದಯಾವಂತರಿಲ್ಲವೋಸುಳ್ಳಲ್ಲವೋ
ಕಂತುಪಿತ ಅನಂತಾದ್ರೀಶನಂಥ ಕಪಟವಂತರಿಲ್ಲ
ಅಂತರಂಗದ ಕಾಂತ ಶಿವನೇ ಚಿಂತೆಯಾಕ್ಹಿಮವಂತ ಇನ್ನು

ಪದ

ಇಂಥ ಮಾತನು ಕೇಳಿ ಸಂತೋಷದಲಿ
ಹಿಮವಂತ ರಾಜೇಂದ್ರ ತಾನು

ಚಿಂತೆಯಾಕಮ್ಮ ನಿನ್ನಂತೆ ಆಗಲಿ ನಡೆ ಎಂದು
ಮಾತಾಡಿದನು ೧

ಬುದ್ಧಿವಂತಿಯ ಕೂಡ ಸಿದ್ಧಾಗಿ ಅಲ್ಲಿಂದ ಎದ್ದು
ಮನೆಗೆ ಬಂದನು
ಉದ್ರೇಕದಲ್ಲಿ ಸ್ನೇಹಬದ್ಧಾಗಿ ಸ್ವಯಂವರ
ದುದ್ಯೋಗ ಮಾಡಿದನು ೨

ಲೇಸಾಗಿ ತಾ ಸರ್ವದೇಶಕ್ಕೆ ದುಂದುಭಿ
ಘೋಷವ ಮಾಡಿಸಿದಾ ತೋಷದಿ ಸರ್ವಲೋಕೇಶರನೆಲ್ಲಾ
ಕರೆ ಕಳುಹಿದಾ ೩

ಇಂದ್ರ ತಾ ಬಂದ ಅಲ್ಲಿಂದ ಅಗ್ನಿಯು ಬಂದಾ
ಮುಂದೆ ಆ ಯಮನು ಬಂದಾ ಬಂದಾ ನಿರುತಿಮತ್ತೆ
ಬಂದ ವರುಣ ವಾಯು ಬಂದ ಕುಬೇರ ತಾನು ೪

ಬಲ್ಲಿದ ಶಿವಬಂದನಲ್ಲಿ ಬ್ರಹ್ಮನು ಬಂದ
ನಿಲ್ಲದೆ ಸ್ವಯಂವರಕೆ
ಬಲ್ಲಿದನಂತಾದ್ರಿ ವಲ್ಲಭ ತಾ ಬಂದ ಎಲ್ಲರು ಬಂದರಾಗ ೫

ಪದ

ಗಿರಿರಾಜ ಮುಂದೆ ಆ
ಸುರರಲ್ಲಿ ಬಹುಸ್ನೇಹ ಸುರಿಸುತಲೆ ಆಸನವ
ತರಿಸಿ ಎಲ್ಲರನು ಕುಳ್ಳಿರಿಸಿ
ಕರಗಳ ಮುಗಿದು ಹರಿ ಮೊದಲು ಮಾಡಿಕೊಂ–
ಡ್ಹರುಷದಿಂದಲಿ ಸರ್ವ ಸುರರಿಗರ್ಚಿಸಿದ
ಸುರಸಾದ ಈ ಕಥೆಯ ಸರಸಾಗಿ ಕೇಳಿದರೆ
ಸುರರು ವೊಲಿವುವರೆಲ್ಲ
ಸರಸಿಜಾಕ್ಷಿಯ ಸ್ವಯಂವರಕೆ ಬಂದಿಹ ಸರ್ವ
ಸುರರನುಗ್ರಹದಿಂದ ಸರಸರನೆ ಮುಗಿದಿತಿಲ್ಲಿಗೆರಡು ಅಧ್ಯಾಯ

ಅಧ್ಯಾಯ ಮೂರು

ಪದ

ಸಾವಿರ ಬುಧರರನೆಲ್ಲ ಮೀರಿ ಪರಮೇಶ್ವರಗೆ
ಹಾರ ಹಾಕುವೆನೆಂದು ಪಾರಿಜಾತದ ಕುಸುಮ
ಪಾರ್ವತಿಯು ತಾತರಿಸಿ ಪೂರ್ವದಲಿ ಮಾಡಿದಳ
ಪೂರ್ವ ಮಾಲೆಯ ಭಕ್ತಿಪೂರ್ವಕವಾಗಿ
ಚಾರುತರವಾಗಿಹ ಅಲಂಕಾರಗಳ ನಿಟ್ಟು ಶೃಂಗಾರ ಭರಿತಳು ಆಗಿ
ಪಾರಿಜಾತದ ಹೂವಿನ ಹಾರಕೈಯಲಿ ಪಿಡಿದು
ನಾರಿ ನಡೆದಳು ತಾನು ಚಾರು ಸಖಿಯಲ್ಲಿ ೧

ಚಂದ್ರವದನೆಯ ಬಹಳ ಛಂದಾದ ಮುಖನೋಡಿ
ಚಂದ್ರಮನು ಇದುಕಾಂತಿ ನಂದು ಒಯ್ದಳು ಈಕೆ
ಮುಂದಿವಳನೊಯ್ಯಬೇಕೆಂದು
ಕುಚಗಳ ಕಂಡು ಇಂದ್ರ ತಾ ಯನ ನಾ
ಗೇಂದ್ರನ ಶಿರವೆಂದ ಮುಂದದರ ಸೊಂಡೆ ಇದು
ಯೆಂದು ಕರಗಳಿಗೆಂದಾ
ಮಂದಗತಿ ಮತ್ತಾದರರಿಂದ ನಡಗಿಯ ಕಂಡು
ಸುಂದರಿಯ ಆಹುಬ್ಬು ಕರಿದರ್ಪ ತಾ ಕಂಡು ೨

ಎರಳೆ ನೋಟವ ಕಂಡು ಎರಳೆವಾಹನ ನುಡಿದ
ಯರವಿಂದವಯವಕ್ಷಿಗ್ಗಿ ಹೊರಳು ವಳು ಯಂತೆಂದು
ಕೊರಳವನು ಕಂಡು ಹರಿ ಕರದಲೊಪ್ಪುವಯೆನ್ನ
ವರಪಾಂಚಜನ್ಯವಿದು ಸರಿಯೆಂದು ನುಡಿದಾ
ಗುರುಳು ಗೂದಲದವಳ ಹೆರಳವನು ನೋಡಿಹರಿ
ಇರುಳ ಮಲಗುವಯನ್ನ ಸರಳ ಹಾಸಿಗೆಯೆಂದು
ಸರಸಿಜಾಕ್ಷಿಯ ಕಂಡು ಸುರರು ಎಲ್ಲರು ಪರಿ
ಪರಿಯಿಂದ ನುಡಿದರನುಸರಿಸಿಯಿದರಂತೆ ೩

ಪದ

ಮುಂದೆ ಆ ಪಾರ್ವತಿ ಬಂದು ಕುಳಿತಳಲ್ಲೆ
ಬಂದ ಶಿವನು ತಾ ಬಾಲಕನಾಗಿ ೧

ಲೀಲೆಯಿಂದಲಿ ತೊಡೆಯ ಮೇಲೆ ಮಲಗಿದನಾಗ
ಬಾಲೆ ಹೀಗೆಂದಳು ಎಲ್ಲರಿಗೆ ೨

ಸಣ್ಣ ಈ ಬಾಲನ ಬಣ್ಣಿಸಿ ಕರೆವುತ
ಮುನ್ನೆತ್ತಿದವರಿಗ್ಹಾಕುವೆ ಮಾಲೆ ೩

ಅಂದಮಾತನು ಕೇಳಿ ಇಂದ್ರ ಬಂದನು ಆಗ
ಮುಂದೆ ಆ ಬಾಲನೆತ್ತುವೆನೆಂದು ೪

ಚನ್ನಿಗನಂತಾದ್ರೀಶನ ಹಿಂದಕೆ ಮಾಡಿ
ಸಣ್ಣ ಬಾಲನ ತಾ ಮುಂದಕೆ ಕರೆದಾ ೫

ಪದ

ಸಣ್ಣಬಾಲನೇ ಬಾರೋ
ಹಣ್ಣು ಕೊಡುವೆ ನಿನಗಿನ್ನು ಕೈತಾರೋ ಪ

ಚಂಡು ಬೊಗರಿ ಗೋಲಿಗುಂಡು ನಾ ಕೊಡುವೆ
ಬೆಂಡು ಬತ್ತಾಸವ ಕೊಂಡು ನಾ ಕೊಡುವೆ ೧

ಚಿಣಿಕೋಲು ಮತ್ತೆ ಈಕ್ಷಣ ತಂದು ಕೊಡುವೆ
ಮನಸಿಗೊಪ್ಪುವ ಚಿಂತಾಮಣಿ ತಂದು ಕೊಡುವೆ ೨

ನಡಿಯೋ ನಿನಗೆ ದೊಡ್ಡ ಗುಡಿಯ ತೋರಿಸುವೆ
ಒಡೆಯ ನಂತಾದ್ರೀಶನಡಿಯ ತೋರಿಸುವೆ ೩

ಪದ್ಯ

ಮತ್ತೇ ಮತ್ತೀಪರಿಯ ಒತ್ತಿ ಒದರಿದರೇನು
ವ್ಯರ್ಥ ಬಾಲನು ಕಣ್ಣೆತ್ತಿ ನೋಡಲುವಲ್ಲ
ಒತ್ತಿ ತೋಳುಗಳ್ಹಿಡಿದು ಎತ್ತಿನೋಡಿದನಾಗ
ಯತ್ನದಿಂದಲ್ಲಿಯೆ ತಿತ್ತಿದಮ್ಮನೆ ದಣಿದು
ಮತ್ತ ದೇವೇಂದ್ರ ಬಲು ಮೆತ್ತಗಾದ ವ್ಯರ್ಥ ಈ ಬಾಲಕನ
ಎತ್ತಿ ನಗೆಗೀಡು ಈವತ್ತು ಆಯಿತು ಎಂದು
ವೃತ್ರಾರಿ ತಾ ಮುಂದೆ ಅತ್ಯಂತ ಕೋಪದಲಿ
ಎತ್ತಿದನು ವಜ್ರವನು ಎತ್ತಿದಾ ಕೈಬರದೆ
ಮತ್ತಲ್ಲಿ ನಿಂತಿಹುದು ಚಿತ್ರದಲ್ಲಿಯ ಗೊಂಬೆ ಹಸ್ತದಂತೆ ೧

ಪದ

ಆಯಿತು ಈ ಪರಿಯು ದೇಹಕೆ ಆಯಾಸವೇ ಸರಿಯ ಪ

ಮತ್ತೆ ಅಗ್ನಿಯು ಅಲ್ಲೆ ಬಾಲನ ಎತ್ತದೆ ದಣಿವುತಲೆ
ಶಕ್ತಿ ಎತ್ತಿದ ಮೇಲೆ ಮತ್ತಾ ಶಕ್ತಿ ನಿಂತಿತು ಅಲ್ಲೆ ೧

ದಂಡಧರನು ಆಗ ಯೆತ್ತದೆ ಭಂಡಾದನು ಬೇಗ
ದಂಡ ನೆತ್ತಿದನಾಗ ಎತ್ತಿದ ದಂಡ ನಿಂತಿತುಹಾಗೆ ೨

ಮತ್ತೆ ನೈರತಿ ಅಲ್ಲೆ ಬಾಲನ ಎತ್ತದೆ ದಣಿವುತಲೆ
ಕತ್ತಿಯೆತ್ತಿದ ಮೇಲೆ ಮುಂದಾ ಕತ್ತಿನಿಂತಿತು ಅಲ್ಲೆ ೩

ಪಾಶಧರನು ಆಗ ಬಹು ಕಾಸೋಸಿ ಬಿಟ್ಟು ಬೇಗ
ಪಾಶವೆತ್ತಿದನಾಗ ಮುಂದಾ ಪಾಶನಿಂತಿತು ಹಾಗೆ ೪

ವಾಯು ಬಂದನಲ್ಲೆ ಬಳಲಿದ ಕಾಯಕ್ಲೇಶದಲ್ಲೆ
ಕಯ್ಯನೆತ್ತಿದ ಮೇಲೆ ಮತ್ತಾಕೈಯು ನಿಂತಿತು ಅಲ್ಲೆ ೫

ಸತ್ವರ ಬರವುತಲೆ ಕುಬೇರ ನಿಸ್ಸತ್ವನಾದನಲ್ಲೆ
ಶಸ್ತ್ರಯೆತ್ತಿದ ಮೇಲೆ ಮುಂದಾ ಶಸ್ತ್ರ ನಿಂತಿತು ಅಲ್ಲೆ ೬

ಶೂಲಧರನು ಅಲ್ಲೆ ಮತ್ತಾ ಬಾಲನಯೆತ್ತದಲೆ
ಶೂಲನೆತ್ತಿದ ಮೇಲೆ ಮುಂದಾಶೂಲ ನಿಂತಿತು ಅಲ್ಲೆ ೭

ಬುಧಜನಕನು ಅಲ್ಲೆಬರವುತ ಗದಗದ ನಡುಗುತಲೆ
ಗದೆಯನೆತ್ತಿದ ಮೇಲೆ ಮುಂದಾಗದೆಯು ನಿಂತಿತು ಅಲ್ಲೆ ೮

ಗೋಣನಲ್ಲಾಡುವ ತಲೆಯತ್ತಿದ ಹರಿ
ತಾನು ಚಕ್ರವು ಮೇಲೆಖೂನದಿ ಅದು ಅಲ್ಲೆ ಆಯಿತು
ಗೋಣವು ತಿರುವುತಲೆ ೯

ಅಲ್ಲೆ ಪೂಷಣ ಬೇಗ ಕರಕರ
ಹಲ್ಲು ತಿಂದನಾಗ ಹಲ್ಲು ಬಿದ್ದವಾಗ ತೋರಿದ
ಎಲ್ಲ ದೇವತೆಗಳಿಗೆ ೧೦

ಕೂಸನೆತ್ತದಾಗಿ ಎಲ್ಲರು ಮೋಸವಾದರು ಹೋಗಿ
ಆ ಸ್ವಯಂವರಕಾಗಿ ಅನಂತಾದ್ರೀಶನ ಸಹಿತಾಗಿ ೧೧

ಪದ್ಯ

ಅಂಬುಜೋದ್ಭವ ತಾನು ಸ್ತಂಭಿತಾಗಿಸುರ ಕ
ದಂಬವನು ಕಾಣುತಲೆ ಸಾಂಬನ ಮಹಿಮೆಯಿದು
ಅಂಬಿಕೆಯ ತೊಡೆಯ ತಲೆಗಿಂಬು ಮಾಡಿಹ ಬಾಲ
ಸಾಂಬನಿವನಹದೆಂದು ಸಂಭವಿಸಿದಾಗ
ನಂಬಿ ಸ್ತುತಿ ಮಾಡಿದನು ಸ್ತಂಭೀತರು ಎಂದೆನಿಸಿ
ಕೊಂಬುವರು ಎಲ್ಲಾರು ನಂಬಿ ಸ್ತುತಿಸಿದರು ಆ
ಸಾಂಬಗೀಪರಿಯು

ಪದ

ಸಾಂಬಸದಾಸಿವನೆ ರಕ್ಷಿಸು ಬಾಲಕನೇ
ಸಾಂಬಸದಾಶಿವನೆಂಬುವ ಬಾಲಕ
ನೆಂಬುವದರಿಯದೆ ಸ್ತಂಭಿತರಾದೆವು
ನಂಬಿಗೆ ತಿಳಿಯದೆ ನಂಬಿದೆವೋ ಜಗ
ದಂಬೆಯ ತೊಡೆ ತಲೆ ಗಿಂಬು ಇಟ್ಟವನೆ ಪ

ಪಟುತರನಾದಂಥವನೆ ತಿಳಿಯದೋ ನಿನ್ನ
ಘಟಿತ ಘಟನೆ ಹರನೆ
ಸ್ಫಟಿಕ ಸನ್ನಿಭ ಧೂರ್ಜಟಿಯೆ ನಿನಗೆ ಸಂ
ಘಟಿತಳಾದ ಈ ಕುಟಿಲ ಕುಂತಳೆಯು
ಹಟದಲಿ ಗೆಲವುದುವ ಹಟವೊಂದಿದು ಈ
ಸ್ಫುಟವಾಯಿತು ಸಂಕಟ ಪರಿಹರಿಸು ೧

ಸರ್ವರನೆಲ್ಲಾ ತರಿಸಿ ಸರಸ ಮಾಡಿದೆಯೊ
ಗರ್ವವ ಪರಿಹರಿಸಿ ಉರ್ವಿಯೊಳಗೆ ನಿನಗಿರ್ವರಾರು ಸರಿ
ಸರ್ವರನ್ನು ಮೀರಿರುವ ದೇವನೆ ಸರ್ವಪ್ರಕಾರದಿ ಸರ್ವರ ಅವಯವ
ಪೂರ್ವದಂತಾಗಲಿ ಪಾರ್ವತಿಪ್ರಿಯನೇ ೨

ಭೋ ಶಿಶುವರ ರೂಪ ಬೇಗನೆ ಬಿಡು
ಈ ಸಮಯಕ್ಕೆ ಕೋಪ ಈ ಶಶಿವದನೆಯ ಆಶೆಗೆ ವ್ಯರ್ಥದಿ
ಮೋಸಹೋಗಿ ಕಾಸೋಸಿ ಬಟ್ಟೆವು
ಘಾತಿ ಮಾಡಬೇಡಾಸೆಯ ಪೂರಿಸು
ಶ್ರೀ ಅನಂತಾದ್ರೀಶ ಪ್ರಿಯನೆ ೩

ಪದ್ಯ

ವಿರಳಾಟ ಈ ಸ್ತುತಿಗೆ ಮರುಳಾಗಿ ತಾನು ಗರಳ
ಗೊರಲಿಸಾ ಮೂರುತಿಯ ಸರಳ ಮಾಡೆಲ್ಲವರು

ಗುರುಳು ಗೂದಲದವ ಸರಳಾದವ ತೊಡೆಯಲ್ಲಿ
ಹೊರಳೆದ್ದು ತೋರಿಸಿದ ಸರಳ ನಿಜರೂಪ
ವಿರಳೆ ನೋಟದಲಿರುವ ತರಳೆ ಆ ಪಾರ್ವತಿಯು
ಹೊರಳಿ ನೋಡುತಲೆದ್ದು ಹರಳಿನುಂಗರ ಕೈಯ್ಯ
ಹೆರಳಿನೊಳಗಿರುವಂಥ ಅರಳಿದ್ಹೂವಿನ ದಿವ್ಯ
ಸರಳ ಮಾಲೆಯ ಅವನ ಕೊರಳಿಗ್ಹಾಕಿದಳು ೧

ಮೀರಿದ ಸಂಭ್ರಮದಿ ಭೇರಿಮೊದಲಾದ
ಗಂಭೀರ ವಾದ್ಯಗಳೇಳು
ಸಾರಿ ನುಡಿದವು ಆಗ ಸಾವಿರಬುಧರ ಎಲ್ಲ
ಚಾರು ಜಯ ಜಯ ಶಬ್ದ ಸಾರಿ ಪುಷ್ಪದ
ವೃಷ್ಟಿಸೂರಿಮಾಡಿದರು
ಚಾರ್ವನಂತಾದ್ರಿಯಲ್ಲಿರುವ ದೇವನ ಬಿಟ್ಟು
ಸಾರ ಪರಮೇಶ್ವರಗೆ ಹಾರ ಹಾಕುವೆನೆಂಬ
ಪಾರ್ವತಿಯ ಅಭಿಲಾಷೆ ಪೂರ್ಣವಾದಲ್ಲೆ ಸಂಪೂರ್ಣ
ವಾಯಿತು ಸಾಂಬ ಮೂರುತಿಯ ದಯೆಯಿಂದ
ಮೂರು ಅಧ್ಯಾಯ

ಶ್ರೀ ತುಳಜಾ ಮಹಾತ್ಮೆ

ಅಧ್ಯಾಯ ಒಂದು

ರಾಗ: ಸೌರಾಷ್ಟ್ರ ತಾಳ: ತಿವಿಡೆ

ಸಿರಿಯ ಸಹಿತಾಗಿರುವ ವೆಂಕಟಗಿರಿಯ ರಮಣನ
ಚರಣಕಮಲವ ಮರೆಯದಲೆ ಮನದಲ್ಲಿ ಸ್ಮರಿಸುತ
ಮರೆತು ಎಲ್ಲವನು॥
ಸಿರಿಯ ರಮಣನ ಹಿರಿಯ ಮಗನ ಹಿರಿಯಗುರು
ಮೊದಲವನ ಸ್ಮರಿಸುತ ಮರೆಯದಲೆ ಮಧ್ವಾದಿ ಗುರುಗಳ
ಚರಕೆರಗುವೆನು॥ ೧

ಧರೆಯೊಳಗವನ ಮೆಟ್ಟಿ ಹಾರುವ ಹಿರಿಯ ಕವಿಗಳಿಗೆಲ್ಲಾ ನಾನೇ
ಕಿರಿಯನೆಂದೆನಿಸಿ ಅವರನು ಮರೆಯದಲೆ ನೆನೆವೆ॥
ಕಿರಿಯನಾದರೇನು? ನಾ ಈ ಧರೆಯೊಳಗೆ ಎಲ್ಲಿದ್ದರೇನು?
ಮರೆಯದಲೇ ಮಾಡುವರು ಗುರುಗಳು ಮಮತೆ ಎನ ಮೇಲೆ॥ ೨

ಕೇವಲಾನಂತಾದ್ರಿ ರಮಣನ ಭಾವ ತಿಳಿಸುವ ನಮ್ಮ ಗುರುಗಳು
ಕೇವಲ ಭಾರ ಶಿರದಲಿ ನಾ ವಹಿಸಿಕೊಂಡು॥
ಧಾವರೀತಿಯಲ್ಲಾದರೂ ಗುರುಸೇವೆಯಾಗಲಿ ಎಂಬ ಮನಸನ
ಭಾವದಲ್ಲಿ ಪೇಳುವೇನು ತುಳುಜಾದೇವಿಯ ಮಹಿಮೆಯನು॥ ೩

ಪದ್ಯ

ಪೂರ್ವದಲಿ ಕೃತಯುಗ ಪೂರ್ವದಲ್ಲಿ! ದ್ವಿಜವಯ
ನೀರ್ವಕದ್ರುಮನೆಂದು ಊರ್ವಿಯಲ್ಲಿ ಪ್ರಖ್ಯಾತ ಸರ್ವದಾ
ಮಾಡುವನು ಸರ್ವರಿಗೆ ಸಮ್ಮತಪೂರ್ವಧರ್ಮವು ಭಕ್ತಿ
ಪೂರ್ವಕವಾಗಿ॥ ಸರ್ವ ಸ್ತ್ರೀಯ ರೊಳಗ ಪೂರ್ವ ಸುಂದರಿಯಾಗಿ
ಇರ್ವಳಾತನ ಮಡದಿ ಊರ್ವಶಿಯ ಪೋಲುವಳು
ಊರ್ವಿಯಲಿ ಪತಿಸೇವೆ ಸರ್ವದಾ ಮಾಡುತಲೆ
ಇರ್ವಳಾತೆಯು ಮನಃ ಪೂರ್ವಕವಾಗಿ॥ ೧

ಆ ಕಾಂತನಿಂದಲ್ಲಿ ತಾಕೂಡಿ ತನ್ನ ಮನಕೆ ಬೇಕಾದ
ಸೌಖ್ಯದನೇಕ ವರ್ಷಗಳಲ್ಲಿ ಸ್ವೀಕಾರ ಮಾಡಿದಳು
ಶ್ರೀಕಾಂತನ ದಯದಿ ಆಕೆಯ ಹೆಸರುಂಟು ಅನಭೂತಿ
ಯಂತೆಂದು॥ ಆ ಕರ್ದಮಾಖ್ಯ ದ್ವಿಜತಾಕಾಲದಿಂದ
ಭೂತೋಕವನು ಬಿಟ್ಟು ಪರಲೋಕಕೆ ಪೋಗುತಿರೆ
ಆಕೆ ಪತಿವುತೆಯು ಎಂಬಾಕೆ ಸಹಗಮನವೆಂಬ
ಸಹಗಮನೆಂಬೊ ಆಶಾರ್ಯ ಮಾಡುತಿರೆ। ಆ ಕಾಲದಲ್ಲಿ
ಆಯಿತಾಕಾಶವಾಣಿ॥

ಪದ

ಬ್ಯಾಡ ಬ್ಯಾಡಮ್ಮ ಬ್ಯಾಡದು ॥ ನೀ ಮಾಡೋಕಾರ್ಯ ಬ್ಯಾಡ॥
ಬ್ಯಾಡು ಬ್ಯಾಡುಮ್ಮ ಕೇಳು ಮಾಡತಕ್ಕ ಕಾರ್ಯದೂರ ನೋಡಿ
ಮಾಡುಬೇಕು ಇಂಥ ಮೂಢ ಬುದ್ಧಿ ಮಾಡುವದು॥ ಪ

ಪತಿಯ ಸರಿಯು ಹಿತಕರಿಲ್ಲವು ॥ ಪತಿವ್ರತೆಗೆ ತನ್ನ
ಪತಿಯ ಹೊರತು ಗತಿಯು ಇಲ್ಲವು ॥ ಸುಳ್ಳಲ್ಲವು॥
ಪತಿಯು ಇಲ್ಲದಿದ್ದರೇನು ಸುತರು ಸುಗುಣರುಂಟು ನಿನಗೆ
ಸುತರು ಇರಲು ಪತಿಯ ಕೂಡಿ ಗತಿಯುಸಮ್ಮತವು ಅಲ್ಲ॥ ೧

ಪತಿಯ ಬಿಟ್ಟು ಸ್ಥಿತಿ ಅಧರ್ಮವೇ। ಆ ಸತಿಗೆ ತನ್ನ
ಪತಿಯ ಕೂಡೆ ಗತಿಯು ಧರ್ಮವೇ॥ ಸತ್ಕರ್ಮವೇ॥
ಪತಿಯ ಮ್ಯಾಲೆ ಸತಿಯು ಊಂಟು ಸತಿಗೆ ಸಮ್ಮತವು ಸತ್ಯ
ಪತಿಯಿಂದಲೇ ಪತಿಯಲೋಕ ಗತಿಯು ಪತಿವುಲೆಯೇ ನಿನಗೆ॥ ೨

ಮುಖ್ಯಮಾತು ನೀನು ಕೇಳಿದ್ದು॥ ಗರ್ಭಿಣಿಯು ಮತ್ತು ಮಕ್ಕಳುಳ್ಳ
ಸ್ತ್ರೀಯು ಮಾಳ್ಪುದು ॥ ಧರ್ಮಲಿಲ್ಲದ್ದು॥ ಮಕ್ಕಳುಳ್ಳವಳು ನೀನು
ಮಕ್ಕಳನ್ನು ಪಾಲಿಸುವುದು ಮುಖ್ಯನಂತಾದ್ರಿ ರಮಣ ತಕ್ಕ
ಮುಕ್ತಿಕೂಡುವ ನಿನಗೆ॥ ೩

ಪದ್ಯ

ಆ ಕಾಲಕ್ಕಾಗಿರುವ ಆಕಾಶವಾಣಿಯನ್ನು ತಾ ಕೇಳಿ ಅನುಭೂತಿ॥
ಆ ಕಾಂತನುದಿಶಯದಿ ಆ ಕರ್ಮವನು ತನ್ನ ತೋಕರಿಂದಲಿ
ಮುಗಿಸಿ ಆಕೆ ಇರುತಿರಲು ಭೂಲೋಕದಲ್ಲಿ ಪತಿಯ
ಧ್ಯಾನೈಕಪರಳಾಗಿ॥ ಬಾಲರಿಂದಲೇ ಕೆಲವು ಕಾಲ ಮನೆಯಲ್ಲಿ
ಇದ್ದು ಬಾಲ ಹಿರಿಯರು ಆದ ಮೇಲೆ ವೈರಾಗ್ಯದಲ್ಲಿ ಬಾಳಿ
ನಡೆದಳು ಸಕಲ ಶೈಲಿಗಳ ಒಳಗೆ ಬಹು ಶೈಲವಾಗಿಹ
ಮೇರು ಶೈಲದಲ್ಲಿ॥ ೧

ಚಾರು ಮಂದಾಕಿನಿಯ ತೀರದಲ್ಲಿ ಪರ್ಣದ ಕುಟೀರವನ್ನು
ಮಾಡಿ ಷಡ್ವೈರಿಗಳ ಗೆಲಿದು ಆ ನಾರಿ ತನ್ನ
ಪತಿಯ ಆಕಾರವನ್ನು ಸ್ಮರಿಸುತಲೇ ಘೋರ ತಪಸವು
ಮಾಡುತೀರ್ವಳಲ್ಲೆ॥ ಈ ರೀತಿ ಬಹುವರ್ಷ ಮೀರಿ
ಹೋಗುತ್ತಿರಲು ಘೋರಮೃಗ ಬೇಟೆಯಲ್ಲಿ ಕ್ರೂರ
ಕುಕೂರನೆಂಬ ವೀರ ದನುಜೇಶ್ವರನು ಏರಿ ತಾ ಕುದುರೆಯನ್ನು
ಹಾರಿಸುತಾ ಬಂದನಾ ನಾರಿ ಇದ್ದಲ್ಲಿ॥ ೨

ಆಗ ಆಕೆಯ ಕಂಡು ಹೋಗಿ ಬದಿಯಲಿ ನಿಂತು ಹೀಗೆಂದು
ಮನಸಿನಲಿ ಯೋಗಿಯಂತಲಿ ನಿಶ್ಚಳಾಗಿಹಳು ದಾವಾಕಿ
ಬ್ಯಾಗಿ ತಿಳಿಯದು ಎನಗೆ ಈಕೆಯ ಬಿಟ್ಟು ಹೋಗದೆನ್ನ
ಮನಸು॥ ಈಗ ಈಕೆಯ ಕಣ್ಣು, ಮೂಗು ಚಲುವಿ
ದೈವಯೋಗದಲ್ಲಿ ನೋಡಿದರೆ ಯೋಗಿಗಳು ತಮ್ಮ
ಉದ್ಯೋಗಿವನ್ನು ಬಿಡುವರು ಹೀಗೆಂದು ಅನುಭೂತಿಯಾಗಿ
ಮೋಹಿಸಿ ನುಡಿದ ಭೋಗ ಬಯಸುತಲೇ॥ ೩

ಪದ ರಾಗ: ಶಂಕರಾಭರಣ

ದಾವಾಕಿ ನೀನು ಪೇಳೆ ॥ ಭಾವಕಿಯಳೇ ॥ ದಾ॥ ದಾವಾಕಿ
ನೀಪೇಳೆ ದಾವದಾವದು ನಿನ್ನ ಜೀವಕ್ಕ ಬೇಕು ಹೇಳೆ॥ ಪ

ಭೂಷಣ ಕೊಡುವೆನು ॥ ನಿನ್ನನು ನಿತ್ಯ ಭೂಷಣ
ಮಾಡುವೆನು॥ ತೋಷದಿ ಪುರುಷಗೆ ಭೂಷಣ ಇದು ದೇಹ
ಶೋಷಣ ಮಾಡುಬ್ಯಾಡೇ॥ ೧

ದೇವತೆಗಳು ಎಲ್ಲಾರು ಬಿಡದೆ ಎನ್ನ ಕೋಕರಾಗಿಹರು॥
ಸಾವಿರ ಸ್ತ್ರೀಯರು ಸೇವಿಸುವರು ಎನ್ನ ಸೇವಿಸುವರು ನಿನ್ನನ್ನು ೨

ಚಿಕ್ಕ ಪ್ರಾಯದಲ್ಲಿ ನೀನು ಇರುವಿ ನಿನ್ನ ತಕ್ಕ ಪುರುಷನು ನಾನು॥
ಮುಖ್ಯನಂತಾದ್ರೀಶ ಸಿಕ್ಕ ನಿನಗೆ ನಿನ್ನ ತಕ್ಕಂತೆ ಆಯಿತ್ತೇಳೆ॥ ೩

ಪದ್ಯ

ಇಷ್ಟು ಕೇಳುತಲೆ ಒಂದಿಷ್ಟು ಉತ್ತರ ಕೊಡದೆ ಗಟ್ಟಿ
ಧ್ಯಾನದಲ್ಲಿರಲು ದುಷ್ಟ ದನುಜೇಶ್ವರನು ತಟ್ಟನೆ ಮಾಡಿ
ದುಕೃಷ್ಟ ತಾಳ ಧ್ವನಿಯು ಕಟ್ಟು ಇಲ್ಲದೇ ಒಳ್ಳೆ ಗಟ್ಟಿ ವದರಿಸಿ
ಮತ್ತಿಷ್ಟು ಒದರಿದನು ॥ ಎಷ್ಟು ವದರಿದರೇನು ದೃಷ್ಟಿಯಿಂದ
ನೋಡಿ ಒಂದಿಷ್ಟು ನುಡಿಯದೆ ಇರಲು, ದಿಟ್ಟಾಗಿ ತನಗೆ
ಗುರಿ ಇಟ್ಟಂಥ ಮನ್ಮಥನ ಪೆಟ್ಟು ತಾಳದಲೇ ಪಾಪಿಷ್ಟ
ಧನುಜೇಶ್ವರನು ಮುಟ್ಟಿ ಆ ಪತಿವ್ರತೆಯ ಬಟ್ಟ ಕುಚಗಳ
ಒಳ್ಳೆ ಗಟ್ಟಿ ಹಿಡಿದನು ಆಗ ಮುಟ್ಟಿ ಬೆಂಕಿಯ ಬಿಡದೆ
ಮುಷ್ಟಿಲ್ಹಿಡದಂತೆ॥ ಆರ್ಯಾ ಮುಟ್ಟಲು ಬಿಡುವುತ ಭೀತಿ॥
ತಟ್ಟನೇ ಕಣ್ಣ ತೆರೆದು ನೋಡಿ ಅನುಭೂತಿ॥ ಸ್ಪಷ್ಟವಾಗಿ ಈ
ರೀತಿ॥ ಸಿಟ್ಟಲೇ ನುಡಿದಾಳು ಆ ಪತಿವ್ರತೆ॥ ೧

ದಾ ಪೇಳಲೋ ನೀ ಧಿಟ್ಟ ದಾರಿಲ್ಯಾತಕೆ ಬಂದ್ಯೋ ನೀ
ಪಾಪಿಷ್ಠ॥ ದೂರದಲ್ಲಿ ಇರೋ ನೀ ದುಷ್ಟ ॥ ಧೈರ್ಯದಿ
ನೀ ಎನ್ನ ಮುಟ್ಟಿದ್ಯೋ ಭ್ರಷ್ಟ॥ ೨

ಬಿಗಿವಿನ ಮಾತಿಗೆ ಆತ ॥ ಸೊಗಸವೇ ಸರಿಯೆಂದ ಆದ
ಸುಖಭರಿತ ॥ ಲಗುಬಗೆಯಲಿ ಮೋಹಿಸುತ ॥ ಬಗೆ
ಬಗೆಯಲ್ಲಿ ಮಾತನಾಡಿದನು ನಗುನಗುತ। ೩

ಪದ, ರಾಗ: ಶಂಕರಾಭರಣ

ಮರುಳು ಗೊಂಡೆನೇ ॥ ತರುಳೆ ನೊಂದೆನೆ॥
ಮರಳು ಗೊಂಡೆ ತರುಳೆ ನಿನ್ನ ಹೊರಳಿ ನೋಡುವ
ಯ್ಹುರಳಿನೋಟಕೆ॥ ಪ

ಮಾನ್ಯ ಮಾನಿಣಿ ॥ ರನ್ನೆ ಶಿರೋಮಣಿ ॥ ಚೆನ್ನವಾದ
ಚಿನ್ನದಂಥ ನಿನ್ನ ದೇಹವನ್ನು ಕಂಡು॥ ೧

ಮಾತುಲಾಲಿಸೆ॥ ಪ್ರೇತಿ ತೋರಿಸೆ ॥ಪ್ರೀತಿ ಎಂಬೊದ್ಯಾತಕಿನ್ನ
ಸೋತು ಕಾಮಾಪೂರದಲ್ಲಿ॥ ೨

ನಿಂತು ಮರೆತೆನಾ ॥ ಅನಂತಾದ್ರೀಶನಾ ॥ ಎಂಥಹವರಿಗೆ
ಭ್ರಾಂತಿ ಬಿಡಿಸುವಂಥ ನಿನ್ನ ಕಾಂತಿ ನೋಡಿ॥ ೩

ಆರ್ಯಾ

ಇಂಥಾ ಮಾತವು ಕೇಳಿ ॥ ಚಿಂತಾಕ್ರಾಂತಳಾದಳಾಗ ಆಗ
ಆ ಬಾಲಿ॥ ಬಂದಿತು ಇಂಥಾ ಘೋರಾ ॥ ಚಿಂತಿಸ
ಬೇಕಿನ್ನು ಇವನ ಸಂಹಾರಾ॥ ೧

ಶಾಪಿಸ ಬಾರದು ಜ್ಞನಿ ॥ ಶಾಪಿಸಿದವರ ಅಗುವುದು ತಪಹಾನಿ॥
ಈ ಪರಿ ಮನಸಿಗೆ ತಂದು ವ್ಯಾಪಾರವು ಮಾಡಿದಳು ಮತ್ತೊಂದು। ೨

ಮರಿಯದೆ ಮನದಲ್ಲಿ ಪತಿಯಾ॥ ಸ್ಮರಿಸಿದಳಾಕಾಲದಲ್ಲಿ
ಶಿವಸತಿಯಾ॥ ಸ್ಮರಿಸಲು ಬಂದಳು ಗಿರಿಜಾ ॥ ಗಿರಿಜಾ
ಎಂಬಾಕೆ ನಾಮವೇ ತುಳಜಾ॥ ೩

ಪದ ರಾಗ : ಸಾರಂಗ ತಾಳ : ತ್ರಿವಿಡಿ ಸ್ವರಷಡ್ಜ

ಬಂದಳತಿ ತ್ವರದಿಂದ ॥ ತುಳಜಾ ಭವಾನಿಯು॥ ಬಂ॥
ಕೈಲಾಸದಿಂದ॥ ಬಂದಳತಿ ತ್ವರದಿಂದ ತಾಯಿದು ಬಂದು
ಮುಂದೆ ಭಹುವಿಧ ಮಂದಿ ಭಕುತರ ವೃಂದವನುದಯದಿಂದ
ಸಲಹಬೇಕೆಂದು ನಿಲ್ಲದೆ॥ ಪ

ಅಷ್ಟ ಬಾಹುಗಳಿಂದ ಶೋಭಿಸುವ ಮೈಯೊಳಗಿಟ್ಟ
ಅಲಂಕೃತಿಯಿಂದಾ॥ ಬಹುದಿಟ್ಟ ಮೂಗಿನಲ್ಲಿದ್ದ
ಮೂಗುತಿಯಿಂದ॥ ಮುಖಸಿರಿಯಿಂದ ತೋರುವಳು ಚಂದಾ॥
ಶೇಷ್ಟ ಬಿಲ್ಲು ಯಥೇಷ್ಟ ಬಾಣ ಬಲಿಷ್ಟ॥ ಬಲ ಪರಿಷ್ಟ
ತೋಬರಗಟ್ಟಿ॥ ಚರ್ಮೋ ಕೃಷ್ಟ ಖಡ್ಗ ವಿಶಿಷ್ಟ॥
ಪಾಶಾಕೃಷ್ಟ ಧರಿಸುತಾ॥ ೧

ಬೇಡಿದವರಿಗೆ ಬಂದು ॥ ಸ್ತುತಿ ಮಾಡಿದವರಿಗೆ ಕೇಡು
ಇಲ್ಲದೆಂದು ಸ್ತುತಿಮಾಡಿದವರನು ನೋಡಿ ನನ್ನ
ವರೆಂದು ॥ ದಯಮಾಡಿ ವರಗಳ
ನೀಡುವಳು ಹಿಡಿಯಂದು॥ ಕಾರುಣ್ಯಸಿಂಧು॥
ಗಾಢನೆ ಧ್ವನಿ ಮಾಡುತಲೇ ಹಾರ್ರ್ಯಾಡುತಲೇ ತ್ವರ ಮಾಡಿಸುತಲೇ
ಓಡಿ ಬರುತಿಹ ಪ್ರೌಢಗಣಗಳ ಕೂಡಿ ಸಿಂಹಾರೂಢಳಾಗಿ॥ ೨

ಎಂತು ಪೊಗಳಲಿ ನಾನು॥ ಅತ್ಯಂತ ಬಹಳಾದಂತ ಮಹಿಮೆಗಳನು
ಎಂತೆಂಥವರು ಬೇಕಂತ ಹುಡುಕಿದರೇನು॥ ಹಿಗಂತ
ಆಕೆಯ ಅಂತೂ ತಿಳಿಯದು ಇನ್ನು॥ ಗುಣವತಿ ತಾನು॥
ಶಾಂತಿಯಿಂದ ಅನಂತಾದ್ರೇಶನ ಕಾಂತಯಳ ಪೋಲುವಂತ
ದೇವಿಯು ಚಿಂತೆಯಲಿ ತನ ಚಿಂತಿಸಿರುವಳ
ಚಿಂತೆ ಬಿಡಿಸ ಬೇಕಂತ ಧಾವಿಸಿ॥ ೩

ಆರ್ಯಾ

ಚರಿತಾಮೃತ ಇದು ಸಾರ ಪರಮಾದರದಿಂದ ಕೂತು
ಕೇಳಿದವರು ॥ ಪರಿಪೂಜಿಸುತಾ ತುಳಜಾ ತಾನಾಗುವಳು
ಪ್ರತ್ಯಕ್ಷ॥ ೧

ವರಕವಿತಾ ರಚನಕ್ಕೆ॥ ತುಳಜಾದೇವಿಯ ದಿವ್ಯ ಚರಿತಕ್ಕೆ ॥
ಚರಿಸದು ಎನ್ನ ಉಪಾಯ॥ ಗುರು ಕೃಪೆಯಿಂದಾಯಿತೊಂದಧ್ಯಾಯ
॥ ಶ್ರೀಹರೇ ಪ್ರಸೀದ॥

ಅಧ್ಯಾಯ ಎರಡು

॥ ಶ್ರೀ॥ ಪದ್ಯ॥
ಮುಂದೆ ತುಳುಜಾ ದೇವಿ ಬಂದು ನಿಂತಿರಲು ತ್ವರದಿಂದ
ನೋಡ್ಯನುಭೂತಿ ಬಂದಂಥ ದೇವಿಯ ಚಂದದ ಬಹು
ತೇಜವೆಂದು ತಿಳಿಯದೆ ಎನ್ನ ಮುಂದೆದುರಿಗೆ ಏನು
ಬಂದಿರುವುದೆಂದು ತ್ವರದಿಂದ ನಡುಗಿದಳು॥ ಮುಂದ
ಆದೇವಿ ತಾ ಮುಂದಕ್ಕೆ ಕರೆಯುತಲೇ ಕುಂದರದನಿಯೇ
ಕೇಳು ಕುಂದು ನಿನ್ನಲ್ಲಿ ಇಲ್ಲ ಎಂದು ನಿನ್ನ ಭಕ್ತಿಗೆ ಚಂದಾಗಿ
ಮೆಚ್ಚಿನಾ ಬಂದೆನಂಜಲಿ ಬೇಡವೆಂದು
ಅಭಯದ ಕೂಟ್ಟಂದಳೀಪರಿಯ॥ ೧

ಪದ ರಾಗ: ಕಾನಾಡ ಆದಿತಾಳ

ಬೇಡು ಬೇಕಾದ್ದು ಬ್ಯಾಗನೇ॥ ಅನುಭೂತಿ॥ ಬೇ॥
ಬೇಡು ಬೇಡು ಮಾತಾಡನು ಭೂತಿಯೇ ಬೇಡಿದವರಗಳ
ನೀಡುವೆ ನಾನು॥ ಪ

ಮಾನಸ ದುಃಖವ್ಯಾಕಿದು ॥ ನಿನ್ನ ಭಿಮಾನವೆಂಬುದು ನನ್ನದು॥
ಮಾನಿತರೊಳ್ಳಗತಿ ಮಾನವಂತೆಯೇ ಮಾನುನಿ ಮಣಿ
ಅನುಮಾನವ ಬಿಟ್ಟು॥ ೧

ಎಷ್ಟು ಸ್ನೇಹವ ತೋರಲಿ॥ ಬಂದೆ ಸಂತುಷ್ಟಳಾಗುತ ನಿನ್ನಲಿ॥
ಶಿಷ್ಟಳೆ ನೀ ಕೇಳಸ್ಪಷ್ಟದಿ ನಿನಗೆ ದೃಷ್ಟಿಗೆ ಬೀಳಲು
ಕಷ್ಟಗಳುಂಟೆ॥ ೨

ಚಿಂತಿಸಿದಿ ಯಾಕೆನ್ನನು॥ ಬಂದಂತಹ ಚಿಂತೆ ಎಲ್ಲಾನೂ ಕಳೆವೆನು॥
ಸಂತೋಷದಲಿ ಅನಂತಾದ್ರೀಶನ ಚಿಂತನದಿಂದಿರು
ಚಿಂತೆಯನು ಬಿಟ್ಟು॥ ೩

ಆರ್ಯಾ

ಅತಿ ಹಿತ ವಚನವನು ಕೇಳಿ ॥ ಅತಿ ಹರುಷಿತಳಾದಳಾಗ
ಆ ಬಾಲೆ ಹಿತವಾಯಿತು ಎನಗೆಂದು ॥ ನತಿಸುತ
ಮಾತಾಡಿದಳು ಹೀಗೆಂದು॥ ೧

ಪದ ರಾಗ: ಮುಖಾರಿ ಆದಿತಾಳ

ನತಿಸುವೆ ನಾನಿನಗೆ ತಾಯಿಯೇ॥ ನಿನ್ನ ಸ್ತುತಿಸ ಲಾರೆನು
ತುಳುಜಾದೇವಿಯೇ॥ ಪ

ನಮೋ ಎಂಬೆ ಮತ್ತು ಜಗದ್ಧಾತ್ರಿಯೆ ॥ ಬಹುಪ್ರಮಿತಾ
ಹಿಮಾಚಲನ ಪುತ್ರಿಯೇ ॥ ಸುಮಹಿಮ ಸುಂದರಗಾತ್ರಿಯೇ॥
ಮನದಾ ಅಮಿತಾರೋಗಕ್ಕೆ ಮಹಾಮಾತ್ರಿಯೇ॥ ೧

ತ್ವರಿತಾದಿಂದಲೇ ಬಂದಂಥಾಕಿಯೇ ॥ ಎಂದು ತ್ವರಿತಾ
ತ್ವರಿತಾದೇವಿಯು ಎನಿಸು ವಾಕೆಯೆ॥ ಮರೆತಿರಲಾರೆ ನಾ
ನಿನ್ನಕಿಯೇ ॥ ಸ್ನೇಹಾಭರಿತಾಗಿ ಭಕ್ತರನ ಸಲಹವಾಕಿಯೇ॥ ೨

ಚಿಂತಿ ಮಾಡಲು ಬಂದು ನಿಂತಿಯೇ ॥ ಎನಗೆ
ಚಿಂತಿಯು ಮಾಡಬ್ಯಾಡಂತಿಯೇ॥
ಎಂಥಾಕಿ ನೀನು ದಯಾವಂತಿಯೇ ॥ ವರದಾ
ನಂತಾದ್ರೀಶನ ಸಖನ ಕಾಂತಿಯೇ॥ ೩

ಆರ್ಯಾ

ಈ ಪರಿಯಿಂದಲಿ ಸ್ತುತಿಸಿ॥ ಆ ಪತಿವ್ರತೆ ಭಕ್ತಿಯಿಂದ
ಬಹು ನತಿಸಿ ವೇಗದಿ ಗಂಟಲ ಬಿಗಿದೂ॥ ಈ ಪರಿವರ
ಬೇಡಿದಳು ಕರ ಮುಗಿದು॥ ೧

ಪದ ರಾಗ : ಆನಂದ ಭೈರವಿ

ವರಕೊಡು ಎನಗಿದು ತ್ವರಿತದಿ ತಾಯಿ॥
ಮರೆಯ ದೆಂದೆಂದೂ ಹಗಲಿರುಳು ನೀ ಕಾಯಿ॥ ಪ

ಮಂದ ಮತಿಯು ದೈತ್ಯ ಬಂದಿಹನೋಡು॥
ಕೊಂದವನ ಎನಗಾನಂದವ ನೀಡು ೧

ಮಾಡುವ ತಪಸ್ಸಿಗೆ ಕೇಡು ತಂದಿಹನು॥
ಮಾಡಲಿನ್ನೇನು ನಿನಗೆ ಬೇಡಕೊಂಬುವೆನು॥ ೨

ಪತಿಯ ಸೇವಿಸುವಂಥ ಸತಿಯು ಬೇಡುವೆನೂ॥
ಸತತಾನಂತಾದ್ರೀಶನಾ ಸ್ತುತಿಯು ಮಾಡುವೆನು॥ ೩

ಆರ್ಯಾ

ಅನುಭೂತಿಯ ವಚನವನು ॥ ಅನುಸರಿಸುತ ಬ್ಯಾಗಕೊಟ್ಟು
ಅಭಯವನು ॥ ದನುಜನ ಕೊಲ್ಲುವೆ ವಿಳಂಬಾ ॥
ಎನಗಿಲ್ಲೆಂತ್ಯಂದಳಾಗ ಜಗದಂಬಾ॥ ೧

ಅಲ್ಯಾದನುಜನ ನೋಡಿ ॥ ಕೊಲ್ಲಲಿ ಬೇಕಿವನ
ಎಂದುತ್ವರಮಾಡಿ। ಬಿಲ್ಲಬಿಗಿದು ಟಂಕಾರಾ ॥ ನಿಲ್ಲದೆ ತಾ
ಮಾಡಿದಳು॥ ಹುಂಕಾರ॥ ೨

ಒಂದು ಬಾಣ ಅವನಲ್ಲಿ ॥ ಚಂದದಿ ಒಗೆದಳು ಮಧ್ಯ
ಎದೆಯಲ್ಲಿ ಮುಂದಾತನುಬಹುಬಾಣ ॥ ಸಂಧಿಸಿ
ಒಗೆದಾನು ಯುದ್ಧದಲ್ಲಿ ಜಾಣಾ॥ ೩

ಭೈರವಾದಿ ಗಣಗಳನಾ ವೈರದಿ ಹೊಡೆದಾನು । ಭೂತಗಣಗಳಾ
ಸಾರಶಕ್ತಿಯನು ತೆಗೆದಾ
ಶೌರ್ಯದಿ ಮತ್ತಾಕೆಯಲ್ಲೇ ಒಗೆದಾ॥ ೪

ಎದೆಗ್ಹೊಡೆದಳು ಶೂಲದಲೆ॥ಅದುರೂಪವು ಬಿಟ್ಟು॥
ತನ್ನಕ ಪಟದಲೆ ಕುದುರೆಯ ರೂಪವ ಧರಿಸಿ॥ ಒದರುತ
ನಿಂತಾಗ ಮುಂದ ಖ್ಯಾಕರಿಸಿ॥ ೫

ಗಢನೆ ಗನನಕ್ಕೆ ಹಾರಿ॥ ಮಾಡಿದ ಮಲಮೂತ್ರ
ವೃಷ್ಟಿಭಯ ತೋರಿ॥ ನೋಡಿ ಹೊಡೆದಳು ಮತ್ತಲೆ॥
ಗಾಢನೆ ಮಹಿಷಾಗಿ ಬಂದ ಬದಿಯ್ಯಲೇ ೬

ತೋರುವ ಬಹುಬೆಟ್ಟಗಳ॥ ಕೊಡಗಳಿಂದಲೇ ಕೊಡಗಳ್ಳಗಳು।
ಮಾಡುವ ವೃಷ್ಟಿಯದೆಷ್ಟು॥ ಕಾಡುವ ಕಪಟದಿಂದ ಮತ್ತಿಷ್ಟು ೭

ಹಿಂಗದೆ ಭಯದಿಂದೊದರಿ॥ ಹಿಂಗಾಲುಗಳಿಂದ
ಭೂಮಿಯನು ಕೆದರಿ॥ ಶೃಂಗಗಳಿಂದಲೇ ಹೊಡೆವಾ॥
ಶೃಂಗಗಳಿಂದ ಹಿಡಿದಳು ದೈತ್ಯಬಾಯಿಬಿಡುವಾ॥ ೮

ಬಿಟ್ಟರೂಪವೂ ಅಲ್ಲೇ॥ ಥಟ್ಟನೆ ಸಿಂಹಾಗಿ ಬಂದ
ಬದಿಯಲ್ಲೇ॥ ಸಿಟ್ಟಿಲೇ ಶೂಲವ ಎತ್ತಿ॥ ಥಟ್ಟನೇಹೊಡೆದಾಳು
ಅವನ ಮುರದೊತ್ತಿ ೯

ದೃಢ ಪುರುಷಾದನು ಅಲ್ಲೇ॥ ಹಿಡಿದಿರುವನು ಬಿಲ್ಲು
ಬಾಣ ಕೈಯಲೇ॥ ಹೊಡೆದನು ಆಕೆಯ ಮೇಲೆ ॥
ಕಡೆದಳು ಆಗವನ ಬಿಲ್ಲುಬಾಣದಲೆ॥ ೧೦

ಸಿಟ್ಟಿಲೇ ಬಹುಸೈನ್ಯವನು॥ ಸೃಷ್ಟಿಯು ತಾಮಾಡಿ
ದಾನವನು॥ ಹುಟ್ಟಿದ ಸೈನ್ಯವು ಎಲ್ಲಾ॥ ಪೆಟ್ಟು ಹಾಕುತ
ಬಂತು ಭೂತಗಳಿಗೆಲ್ಲಾ॥ ೧೧

ತಡಿಯದೇ ಅವನ ಹುಡುಕುತಲಿ ॥ ಕಡಿದಳು ಶಿರ
ಅರ್ಧಚಂದ್ರ ಬಾಣದಲೇ॥ ನಡಗ್ಹುಟ್ಟಿದ ಕಂಠದಲೇ॥
ಕಡೆದಳು ಮತ್ತವನ ಶಿರವು ಖಡ್ಗದಲೇ॥ ೧೨

ಬಿಟ್ಟನು ಪ್ರಾಣವ ದನುಜಾ॥ ಬಿಟ್ಟಳು ಅವನಲ್ಲೇ
ಸಿಟ್ಟು ತುಳಜಾ॥ ಅಷ್ಟ ಸುರರು ನೋಡ್ಯದನು ॥
ಥಟ್ಟನೆ ಕರೆದರು ಪುಷ್ಪ ದೃಷ್ಟಿಯನು॥ ೧೩

ಪದ್ಯ ರಾಗ: ದೇಶಿ ಅಟತಾಳ, ಸ್ವರ ಷಡ್ಜ

ದುಷ್ಟದೈತ್ಯನು ಪ್ರಾಣಬಿಟ್ಟ ಮ್ಯಾಲವನಿಂದ ಹುಟ್ಟಿದ
ಸೈನ್ಯವೆಲ್ಲಾ॥ ಬಿಟ್ಟೋಡುವುದ ಕಂಡು ಅಷ್ಟಭೂತರು
ಓಡಿ ಥಟ್ಟನೆ ಹಿಡಿದರಾಗ॥ ೧

ಕುಕ್ಷಿಗಿಲ್ಲದಲೆ ಬುಭೂಕ್ಷಿತರದು ಎಲ್ಲಾ ಭಕ್ಷಣ ಮಾಡುವರು॥
ಅಕ್ಷಯ ಬಲದಿಂದ ದಕ್ಷರು ಎಲ್ಲಾರು ರಾಕ್ಷಸರಾದರು॥ ೨

ಭೈರವಾದಿಗಳು ಎಲ್ಲಾರು ದೇವಿಯ ಪರಿಚಾರಕರಾದವರು
ಸೇರಿ ಸೈನ್ಯದಲ್ಲಿ ಅಪಾರ ಸಂಭ್ರಮದಲ್ಲಿ ಹಾರ್‍ಯಾಡುತಿರುವರು ೩

ಆ ತಾಳಮೊರದಂಥ ಬೇತಾಳ ಗಣಗಳು ಪ್ರೇತ ಪಿಶಾಚಿಗಳು॥
ವಾತ ವೇಗಾದಿ ಬಂದು ಘಾತಿಸುವರು
ಯಮದೂತರಸಮರವರು॥ ೪
ಆಸೆ, ಕುದುರೆ, ಒಂಟೆ ನಾನಾ ಪ್ರಾಣಿಗಳನೆಲ್ಲನು ಬಿಡದೆ
ಭಕ್ಷಿಸಿದಾ॥ ಆನೆ ಸಿಬಾಯಿಗೆ ಆನಂದದಲಿ
ರಕ್ತ ಪಾನವ ಮಾಡಿದರು॥ ೫

ದುರುಳರನೆಲ್ಲನು ಹೊರಳಿಸಿ ಹೊಟ್ಟೆಯ ಕರಳವ ಬಗಟಿದರು।
ಸರಳವಾದ ಆ ಕರಳ ಮಾಲೆಯ ಮಾಡಿ ಕೊರಳೊಗ್ಹಾಕಿದರು॥ ೬

ಮಂಡಾಗಿ ಇದ್ದವರ ರುಂಡ ಮಾಲಿಯನು ತುಂಡವ
ಮಾಡಿದರು॥ ಥಂಡ ಥಂಡದಲಿ ಆರುಂಡ ಮಾಲೆಗಳ
ಹಾಕಿಕೊಂಡು ಕುಣಿದಾಡಿದರು॥ ೭

ಕಂಕಲಾದಿಗಳು ಭಯಂಕರರವರು ಅಸಂಖ್ಯಾಕರಾಸವರು॥
ಶಾಂಕರೀ ದೇವಿಯ ಕಿಂಕರರಿಂಥ ಅಲಂಕಾರಗಳನಿಟ್ಟರು ॥ ೮

ಇಂಧಿಂಥ ಮಾತು ಅನಂತ ಪ್ರಾಣಗಳಲ್ಲಿ ನಿಂತು
ಕುಣಿದಾಡುವನು॥ ಎಂಥವನೇ ಆ ಅನಂತಾದ್ರೀಶನು
ಅವನಂತವ ಅರಿಯೇ ನಾನು॥ ೯

ಆರ್ಯಾ

ಬಲ್ಲಿದ ದೈತ್ಯದ ಕೊಂದು ॥ ನಿಲ್ಲದೆ ಅನುಭೂತಿ ಬದಿಯಲೇ
ಬಂದು ॥ ಅಲ್ಲಿಹಳು ಮಹಾಮಾಯಾ॥ ಇಲ್ಲಿ ಗೆ
ಪೂರ್ಣಾಯಿತು ಎರಡು ಅಧ್ಯಾಯಾ ॥ ಶ್ರೀ ಹರೇಪ್ರಸೀದ॥

ಅಧ್ಯಾಯ ಮೂರು

ಪದ್ಯ

ಭಕ್ತರಭಿಮಾನಿ ಶಿವಶಕ್ತಿ ಎಂಬುವ ಸೂರ್ಯದೈತ್ಯವರ್ಯನು
ಎಂಬೊ ಕತ್ತತಿಯ ಸಂಹರಿಸಿ ಮತ್ತು ದಿತನಾಗಿರಲು
ಇತ್ತ ಅನುಭೂತಿಯಾಗುತ್ತಾದ ಮುಖಕಮಲ ಮತ್ತಳಿತಾಗೆ॥
ಸತ್ಯವಂತಿಯು ದೇವಿ ಸತ್ಯದಿಂದನು ಭೂತಿಗಿತ್ತುತ ಬಾಯಂದು
ಮತ್ತೆ ಮುಂದಕೆ ಕರೆದು ಹೆತ್ತ ತಾಯಿಯಂತೆ ಅತ್ಯಂತ
ಸ್ನೇಹವ ಸುರಿಸಿ ಒತ್ತಿ ಮಾತಾಡಿದಳು ಮತ್ತೆ ಈ ಪರಿಯ॥ ೧

ಪದ ರಾಗ : ಶಂಕರಾಭರಣ ಅಟತಾಳ ಸ್ವರ ಷಡ್ಜ

ಮತ್ತೇನು ಬೇಕು ನೀಬೇಡಮ್ಮ॥ ನಿನ್ನ ಚಿತ್ತದೊಳು
ಸಂಶಯ ಬೇಡಮ್ಮ॥ ಪ

ದೈತ್ಯನ ಸಂಹಾರ ಮಾಡಿದೆ। ನಾ ಮತ್ತೆ ಬಂದು ನಿನ್ನಕೂಡಿದೆ॥
ಅಂತಃ ಕರುಣದಿಂದ ನೋಡಿದೆ ॥ ನಿನ್ನೊಳತ್ಯಂತ ಸ್ನೇಹವಮಾಡಿದೆ॥ ೧

ನಿನ್ನಿಂದ ಶೃತಸ್ತುತಿ ಕೆಲ್ವರು॥ ದಾರು ಚೆನ್ನಾಗಿ ಪಾಠವ
ಮಾಡುವರು॥ ಅನ್ನ ವಸ್ತ್ರಗಳಿಂದ ಇರುವರು॥ ಅವರು
ಧನ್ಯರೆನಿಸಿ ಲೋಕಮಾನ್ಯರು॥ ೨

ಪುತ್ರ ಪೌತ್ರಗಳಿಂದ ಇರುವರು ।ಸಕಲ ತ್ರಯರಿಂದಲಿ
ಸುಖಪಡುವವರು ಕೃತ್ರಿಮ ಭಾವವ ಬಿಡುವವರು। ಜಾಗ
ಮಿತ್ರಾನಂತಾದ್ರೀಶಪ್ಪಿಡುವವರು॥ ೩

ಆರ್ಯಾ

ಈ ಪರಿ ನುಡಿದಳು ತುಳಜಾ॥ ಈ ಪರಿ ಅನುಭೂತಿ ತಿಳಿದಳು
ವಿರಜಾ॥ ತಾಪಾತ್ಮಕ ಸಂಸಾರ ॥ ಪಾಪಾತ್ಮರು
ಎಂಬುವರು ಸುಖಸಾರ॥ ೧

ಸಂಸ್ಕೃತಿ ಬೇಕಾಗಿಲ್ಲಾ ॥ ಸಂಸಾರದ ಒಳಗೆ ಸ್ವಲ್ಪ
ಸುಖವಿಲ್ಲಾ॥ ಸಂಶಯ ಇದರೆಲ್ಲೆಂದು ॥
ಸಂಶಯ ಬಿಟ್ಟಾಡಿದಳು ಹೀಗೆಂದೂ॥ ೨

ಪದ ರಾಗ: ಕಾಪಿ ತಾಳಬಿಲಂದಿ ಸ್ವರ: ಪಂಚಮ

ಒಂದು ಒಲ್ಲೆನೆ ॥ ಇಂದು ತಾಯಿಯೆ॥
ಒಂದು ಒಲ್ಲೆ ಇಂದು ಎಂದೆಂದೂ ದಯಾ ಒಂದೆ ಸಾಕು॥ ಪ

ದಾವ ಸ್ಥಳದಲಿ ॥ ಈ ವಸುಧೆಯಲಿ ॥ ದಾವ ಜನ್ಮದಿ
ದಾವ ಕಾಲಕು ದೇವಿ ನಿನ್ನ ಸೇವೆ ಇರಲಿ॥ ೧

ನತಿಯು ಮಾಡುವೆ॥ ಮತಿಯು ಬೇಡುವೆ॥ ಮತಿಯಿಂದಲೆ
ಪತಿಯ ಸೇವಿಸಿ ಪತಿಯಿಂದಲೆ ಗತಿಯು ಆಗಲಿ॥ ೨

ಪ್ರಾತಗಾಣಿ ಸೆ ॥ ಪಂಥಗೆಲ್ಲಿಸೆ ॥ ಸಂತತಾನಂತಾ ದ್ರೀಶನ
ಅಂತರಂಗದಿ ಚಿಂತಿಸುವೆನು॥ ೩

ಆರ್ಯಾ

ಅನುಭೂತಿಯ ಅನುಸರಿಸಿ ॥ ಅನುಕೂಲ ಸ್ಥಾನ
ದೇವಿಸ್ವೀಕರಿಸಿ ॥ ಅನುದಿನ ಇರಬೇಕೆಂದು ॥ ಅನುಗನ
ಕರದ್ಹೇಳಿದಳು ಹೀಗೆಂದೂ॥

ಪದ ರಾಗ: ಕಾನಡಾ ಆದಿತಾಳ ಸ್ವರ ಪಂಚಮ

ಬಾರೋ ಬ್ಯಾಗನೆ ಭೈರವಾ॥ ನೀ ಪೋಗೀ ॥ ಬ್ಯಾ॥
ಬಾರೋಬ್ಯಾಗನಾ ಸಾರುವೆ ಮಾತವ ಮೀರದೆ
ಯಮುನಾ ತೀರಕೆಪೋಗಿ॥ ಪ

ಬಾಲಕನೆ ನೀ ಕೇಳಿದು ಅಲ್ಲೊಂದು ಶೈಲ ಇರುವುದು
ದೊಡ್ಡದು॥ ಶೈಲವಾಗಿ ಈ ಕಾಲಕ ಅಲ್ಲೊಂದಾಲಯ
ನಿರ್ಮಿಸಿಕಾಲಗಳ್ಳಿಯದೆ॥ ೧

ಇಂದು ನಾ ಇಲ್ಲೇ ಇರುವೆನು ॥ ಮುಂದ ನೀಬಂದಮ್ಯಾಲಕೆ
ಬರುವೆನು॥ ನಿಂದಿರಲೆ ತ್ವರದಿಂದಲೆ ಪೋಗುತ ಇಂದ ಈ
ಕಾರ್ಯವ ಚಂದದಿ ಮಾಡಿ॥ ೨

ಶುದ್ಧವಾದಂಥ ಸ್ಥಳವನು ॥ ಅಲ್ಲೆ ನಾ ಬುದ್ಧಿಪೂರ್ವಕಾಗಿ
ರುವುದು ಅತ್ಥದಿಜಾಗತ ಪ್ರಸಿದ್ಧವಾದ ಅನಂತಾದ್ರಿಯಂಥ
ಯಮುನಾದ್ರಿಗೆ ಪೋಗಿ॥ ೩

ಆರ್ಯಾ

ಆ ದೇವಿಯ ಆಜ್ಞಾವನೂ॥ ಆದರದಿಂದಲೇ ಧರಿಸಿ
ಭೈರವನೂ ॥ ಹೋದನು ಯಮುನಾದ್ರಿಯಲ್ಲಿ॥
ಹೋದಾತನು ಅಲ್ಲೇನಿಂತ ನಿತ್ಯದಲಿ॥ ೧

ಬರಲಿಲ್ಲಾಕೆಂತೆಂದು॥ ತುಳುಜಾ ತಾನಾಗಿ ಅಲ್ಲಿಗೆ ಬಂದು ॥
ಪರಮಾಜ್ಞಾಧಾರಕನಾ ॥ ತ್ವರದಲಿ ನೋಡ್ಯಾಡಿದಳು ಈ ವಚನಾ॥ ೨

ಪದ ರಾಗ : ಶಂಕರಾಭರಣ ಅಟತಾಳ ಸ್ವರ ಪಂಚಮ

ಬರಲಿಲ್ಯಾ ಕ್ಷೇಳಲೋಭೈರವಾ ॥ ಮೈಮರೆತು ಬಿಟ್ಟಿ
ಕಾರ್ಯಭಾರವಾ॥ ಪ

ಸಂತೋಷದಲಿ ನಿನ್ನ ಬೆಳಸಿದೆ॥ ಬುದ್ಧಿವಂತನೆಂದು
ನಿನ್ನ ಕಳಿಸಿದೆ॥ ಸಂತತದಲಿ ಸ್ನೇಹ ಬೆಳಿಸಿದೆ॥
ಕಾರ್ಯವಂತಯಂದು ನಿನ್ನ ಉಳಸಿದೆ॥ ೧

ಇಲ್ಲಿಗೆ ಬಂದ್ಯೋನಿ ಕಾರ್ಯಾರ್ಥಿ॥ ಬರದೆ ಇಲ್ಲೇ ನಿಂತಿ
ಎನ್ನನುಮರತಿ॥ ಕ್ಷುಲ್ಲಕ ಮಾಡಲಿಲ್ಲವೂ ಕೀರ್ತಿ॥ ಲೋಕದಲ್ಲಿ
ಪಡದಿ ನೀನು ಅಪಕೀರ್ತಿ॥ ೨

ಬುದ್ಧಿಲೇ ಬಿಡು ಮನಸಿನ ಗಂಟು ॥ಯಮುನಾದ್ರಿಯಲ್ಲಿ
ನಿನಗೇನುಂಟು॥ ಕ್ಷುದ್ರ ಮಾತುಗಳೇಕೆ ನೂರೆಂಟು॥
ಅನಂತಾದ್ರೀಶನ ಆಣೆ ನಿನಗುಂಟು॥ ೩

ಆರ್ಯಾ

ಈ ರೀತಿಯ ನುಡಿ ಕೇಳಿ ॥ ಹೇರಿದ ಅಪರಾಧ ಭಾರವನು
ತಾಳಿ॥ ಘೋರವು ಬಂತಿದು ಎಂದಾ॥ ಭೈರವ ಮಾತಾಡಿದನು
ಭಯದಿಂದಾ॥ ೧

ಪದ ರಾಗ: ಆನಂದ ಭೈರವಿ ಆದಿತಾಳ ಸ್ವರ ಪಂಚಮ

ಎನ್ನ ಪರಾಧಾ ಹಿಡಿಬ್ಯಾಡಮ್ಮಾ॥ ತಾಯಿಎನ್ನಾ ॥ಅಂ॥
ಬ್ಯಾಡಮ್ಮಾ ದಯಮಾಡಮ್ಮ ॥ ತಾಯಿ ಎನ್ನಾ॥ ಚನ್ನಾಗಿ
ಬಹುಕಾಲ ನಿನ್ನವನಾದ ಮ್ಯಾಲೆ॥ ಪ

ನಿನ್ನ ಆಜ್ಞಾದಿ ಇಲಿಗೆ ಬಂದೆ ॥ ದೇವಿ ನಿನ್ನ ಮರತುಬಿಟ್ಟೆ
ಮದದಿಂದೆ॥ ಈಗ ನನ್ನ ಅಪರಾಧದಿಂದ ನಾನೊಂದೆ ॥
ನಿನ್ನ ಹೊರತು ಎನಗಿನ್ಯಾರ್ರಿತಕರುಂಟು॥ ೧

ರಂಗು ಮಾಣಿಕ ಮೊದಲವು ಮಾಡಿ ॥ ಬೆಳ್ಳಿಬಂಗಾರ
ಧಾತುಗೆಳಿಂದಕೂಡಿ ಬಹುಶೃಂಗಾರವಾದ ಪರ್ವತನೋಡಿ ॥
ಮಂಗಳಾಂಗನೆ ನಾನು ಮಂಗನಂತಲಿ ನಿಂತೆ॥ ೨

ಸ್ವಚ್ಛ ಭಕುತಿಯಿಂದ ಇರವುದೆನು॥ ಬಹುಹೆಚ್ಚಿನವಳೆ
ದೇವತೆ ನೀನು॥ ನಿನಗ್ದೇಚ್ಛೆನ್ಹೇಳಲಿ ತುಚ್ಛ ನಾನು ॥
ಅಚ್ಯುತಾನಂತಾದ್ರೀಶನಿಚ್ಛೆಗೆ ಬಂತಿದೆ॥ ೩

ಪದ್ಯ

ಈ ರೀತಿ ನುಡಿಕೇಳಿ ಕಾರುಣ್ಯನಿಧಿ ದೇವಿ ತೋರಿಸ್ನೇಹವು
ನಗುತ ಭೈರವನ ಶಿರದಲ್ಲಿ ಚಾರುಹಸ್ತದಿ ಹೊಡೆದಳ್ವಾರ್ಯ
ಭಾವದಲಿ ಆ ಭೈರವನು ಆ ಹಸ್ತಭಾರದಲಿ ವಟುಕಾದ
ಉರ್ವಿಯಲಿ ತಾ ಡೋಳ್ಳಭೈರವನು ಎನಿಸಿ ॥ ಪಾರ್ವತಿಯು
ತಾನು ಅವತಾರ ಮಾಡೀಪರಿಯು ಚಾರು ಚರಿತವ ತೋರಿ
ಉರ್ವಿಯಲಿ ಜನರನುದ್ಧಾರ ಮಾಡುತ ಬಿಡದೆ ಸಾರಗಿರಿಯಲಿ
ನಿಂತು ಪೂರ್ವ ಕೃತಯುಗಕಾಲ ಪೂರ ಕಳೆದಳು ಅಲ್ಲೆ ಪೂರ
ಮುಗಿದೇತು ಇಲ್ಲೇ ಮೂರು ಅಧ್ಯಾಯ ॥ ಶ್ರೀ ಹರೇಪ್ರಸೀದ॥

ಅಧ್ಯಾಯ : ನಾಲ್ಕು

ಪದ್ಯ

ಮುಂದೆ ತ್ರೇತಾಯುಗವು ಬಂದಂಥ ಕಾಲದಲಿ ಇಂದಿರೇಶನು
ರಾಮಯೆಂದು ದಶರಥನಲ್ಲಿ ಕಂದನಾಗ್ಯವತರಿಸಿ ತಂದೆ
ಆಜ್ಞದಿ ಸೀತೆಯಿಂದ ಲಕ್ಷ್ಮಣನಿಂದ ಚಂದಾಗಿ ಬಡಗೂಡಿ
ಬಂದ ವನದಲಿ ಅಲ್ಲೆ ಬಂದು ರಾವಣ ಮಾಯಾದಿಂದ
ಸೀತೆಯ ವೈದ ಮಂದಮತಿಯು ॥ ಮುಂದಾಕೆಯ ವಿರಹದಿಂದ ವನ
ವನ ಚರಿಸಿ ಬಂದ ಯಮುನಾದ್ರಿಯಲಿ ನೊಂದು ನೀರಡಿಸಿ
ಜಲಬಿಂದು ಕಾಣದೆ ಕೋಪದಿಂದ ಆ ಭೂಮಿಯನು ಚಂದಾದ
ತನ್ನ ಬಾಣದಿಂದ ಭೇದಿಸಿದಾ॥ ೧

ತಡವು ಇಲ್ಲದೆ ಭೂಮಿ ಒಡೆದು ಬಂದಿತು ಆಗ ಕಡು
ಭೋಗವತಿ ನಾರಿಯು ಗುಡದಂಥ ಸವಿನೀರು ಕುಡಿದು
ಆ ಲಕ್ಷ್ಮಣನ ತೊಡೆಯ ಮೇಲೆ ತಲೆ ಇಟ್ಟು ಪೊಡವಿಯಲಿ
ನರನಂತೆ ದೃಢನಿದ್ರೆಗೊಂಡ ಜಗದೊಡೆಯ ರಾಘವನು॥
ದೃಢವಾಗಿ ಬಹುಕಾಲ ಬಿಡದೆ ಅಲ್ಲಿರುವ ಆ ಮೃಡನ ರಾಣಿಯು
ತಾನು ನಡೆದು ಬಂದಳು ಅಲ್ಲೇ ಶರಗರಾದಿ ಕೈಯಲ್ಲಿ
ಹಿಡಿದು, ಆರತಿಯನ್ನು ದೃಢಭಕುತ ಲಕ್ಷಣನು ದೃಢ
ನಿದ್ರಿಗೊಂಡಂಥ ಒಡಿಯಗೆಚ್ಚರ ಮಾಡಗೊಡದೆ ಆಕೆಯ
ಕಂಡು ನುಡಿದನೀಪರಿಯಾ॥

ಪದ ರಾಗ: ಭೈರವಿ ಅಟತಾಳ ಸ್ವರ ಋಷಭ

ದಾವಾಕಿ ಪೇಳಮ್ಮಾ॥ ಬಂದವಳು ನೀ ದಾವಾಕಿ॥
ದಾವಾಕಿ ಪೇಳಮ್ಮಾ ದಾವ ರಾಜನ ಸತಿ
ದಾವ ಕಾರಣದಿಂದ ಧಾವಿಸಿಲ್ಲಿಗೆ ಬಂದೆ॥ ಪ

ಸುಂದರಿ ವಾಣಿಯೋ॥ ಅಥವಾ ಮುಕುಂದನ ರಾಣಿಯೋ॥
ಇಂದ್ರನ ರಾಣಿಯೋ॥ ಚಂದ್ರನ ರಾಣಿಯೋ॥
ಚಂದ್ರಮುಖಿಯೇ ನೀನು ಚಂದಾಗಿ ಪೇಳಮ್ಮಾ॥ ೧

ಭ್ರಾತೃರಾದವರು ನಾವು॥ ಪರಸ್ಪರ ಪ್ರೀತಿಯಿಂದಿರುವೆವು॥
ಸೀತಾವಿರಹದಿಂದ ಸೋತುಬಂದೆವು ಇಲ್ಲೆ
ಮಾತೇ ಮೌನವು ಬಿಟ್ಟು ಮಾತಾಡು ಬ್ಯಾಗನೇ॥ ೨

ಬ್ರಹ್ಮಚರ್ಯವೆಂಬುದು॥ ಈ ಕಾಲಕ್ಕೆ ನಮ್ಮಲ್ಲಿ ಇರುವುದು॥
ತಮ್ಮ ಲಕ್ಷ್ಮಣ ನಾನು ನಿರ್ಮಲ ಗುಣರಾಮ
ನಮ್ಮಣ್ಣನಿವ ಪರಬ್ರಹ್ಮಾನಂತಾದ್ರೀಶಾ॥ ೩

ಆರ್ಯಾ

ಲಕ್ಷ್ಮಣ ನಾಡಿದ ಮಾತೂ॥ ಲಕ್ಷಿಗೆ ತರಲಿಲ್ಲ ದೇವಿ
ಕಿವಿಜೋತೂ ॥ ಆಕ್ಷಣ ಸಿಟ್ಟಿಗೆ ಬಂದು ಲಕ್ಷ್ಮಣ
ಮಾತಾಡಿದನೂ ಹೀಗೆಂದೂ॥

ಪದ ರಾಗ: ಧನ್ಯಾಸಿ ಆದಿತಾಳ

ನಡಿ ನಡಿ ನಡಿ ನೀನು ॥ ನುಡಿಯದ ಭಾಗಿಯೇನು॥ ನ ॥
ನಡಿ ನಡಿ ಹಿಂದಕು ಬಡಿವಾರೇನಿದು ಬಿಡು ಬ್ಯಾಗನೆ ನಿನ್ನ
ನಡತೆಯು ನೋಡುತ ಕಡು ಕೋಪವಾಯಿತು ತಡೆಯದು
ಎನಗೆ ಬಿಡದೆ ಬಾಣದಿಂದೊಡೆವೆನು ನಾನು। ಪ

ಎಕಾಂತ ಸ್ಥಳಕೆ ಕಾಲಕೆ ಒಬ್ಬಾಕೆ ಬರುವದಿದು
ತೋಕರೀತಿಯೆ ಮೂಕತಾನದಲಿ ಏಕೆ ನಿಂತಿ ಸುವಿವೇಕ
ದಿಂದ ನೀ ಬೇಕಾದಲ್ಲೆ॥ ೧

ವನವನ ಚರಿಸುಲವ ವನವಾಸಿಗಳಿಗೆ
ವನುತಿಯ ಸಂದರ್ಶನ ನಮಗ್ಯಾಕಿದು
ಅನುಸರಿಸಿ ಹೇಳುವೆ ಅನುಮಾನ್ಯಾತಕೆ
ಗುಣವಂತಿಯೆ ಅರಕ್ಷಣ ನಿಲ್ಲದಲೆ ೨

ಶುದ್ಧ ಸುಖಾತ್ಮನು ಮುದ್ದು ರಾಮ । ಅನಂತಾದ್ರೀಶಗೆ
ಸಮ ಯಮುನಾನವಿಗೆ ಬಂದು ನಿದ್ರೆಯ ಮಾಡುತಲಿದ್ದ
ಕಾಲದಲಿ ಗದ್ದಲ ಮಾಡದೆ ಬುದ್ಧಿವಂತೆಯೆ॥ ೩

ಆರ್ಯಾ

ಅನುಜನ ಈಪರಿ ಸಿಟ್ಟು ॥ ಅನುಸರಿಸುತಾ ಎದ್ದ
ನಿದ್ರೆಯನು ಬಿಟ್ಟು ॥ ವನುತಿಯ ನೋಡಿದ ರಾಮ॥
ವಿನಯದಿ ಮಾತಾಡಿವನು ಗುಣಧಾಮ ॥ ೧

ಪದ ರಾಗ: ದೇಶಿ ಅಟತಾಳ ಸ್ವರ : ಷಡ್ಜ

ದಾರ್ಥೇಳಮ್ಮಯಾ ಉದಾರ್ಥಳಗಿರುವೆ ನೀ ॥ ದಾರ್ಥೇಳಮ್ಮಯ॥
ದಾರಿಲ್ಲಿ ಸ್ಥಳದಲ್ಲಿ ದಾರನ್ನುಡುಕುವಿ ನಿ॥ ದಾ॥ ಪ

ವನದಲ್ಲೆ ಇರುವಂಥ ವನದೇವತೆಯೇ ನೀ॥ ದಾ॥
ಮನಿಯಲ್ಲೇ ಇರುವಂಥ ಮನಿದೇವತೆಯೋ ನೀ ॥ ದಾ॥ ೧

ಪ್ರಾಯಶ ಶ್ರೀಹರಿ ಮಾಯಾರೂಪಿಯೋ ನೀನು ॥ ದಾ॥
ಆಯಾದ ವಿಲ್ಲದೆ ಬಾಯಿಲೆ ಬಿಚ್ಚಾಡು ॥ ದಾ॥ ೨

ಕ್ಲೇಶ ವೋಡಿಸುವಂಥ ಈಶನ ರಾಣಿಯೋ ॥ ದಾ॥
ದೋಷರಹಿ ತಾನಂತಾದ್ರೀಶನ ರಾಣಿಯೋ॥ ೩

ಆರ್ಯಾ

ಕೋಮಲತರ ವಚನಗಳೂ ॥ ರಾಮನ ಬಾಯಿಂದ
ದೇವಿ ಕೇಳಿದಳು॥ ರಾಮಗ ನೀಕೇಳೆಂದು॥ ಪ್ರೇಮದಿ
ಮಾತಾಡಿದಳು ಹೀಗೆಂದೂ॥ ೧

ಪದ ರಾಗ: ದೇಶೀ ಆಟತಾಳ ಸ್ವರ : ಷಡ್ಜ

ಕೇಳೋ ರಾಮನೆ ನಿನಗ್ಹೇಳುವೆ ಗುರುತವ ॥ ಕೇಳೋ ರಾಮ॥
ಕೇಳುತ ನಿನ್ನ ಮಾತು ಬಾಳ್ಹಾನಂದಾಯಿತು ॥ ಕೇಳೋ॥ ಪ

ವನದೇವತೆ ಅಲ್ಲ ಮನಿಯ ದೇವತೆ ಅಲ್ಲ ॥ ಕೇ॥
ವನಜಾಕ್ಷ ತುಳಜಾಯಂದ್ಯನಿ ಕೊಂಬುವೆ ನಾನೂ ॥ ಕೇ॥ ೧

ಮಾಯಾರೂಪಿಯು ಅಲ್ಲ ಆಯಾಸಯನಗಿಲ್ಲ ॥ಕೇ॥
ಮಾಯಾರಮಣ ನಿನ್ನ ತಾಯಿ ಯಂದ್ಯನಿಸುವೆ ॥ ಕೇ॥ ೨

ಶುದ್ಧ ಚಿನ್ಮಯ ಅನಂತಾದ್ರಿರಮಣ ನೀನು ॥ ಕೇ॥
ಸಿದ್ಧಾಗಿ ನಾ ಯಮುನಾದ್ರಿಯಲ್ಲಿರುವೆನು॥ ೩

ಆರ್ಯಾ

ಕಾಯಜ ಪಿತ ಕೇಳಿದನೂ॥ ಹಾಯಿದು ಏನೆಂದೂ॥
ಮಾತನಾಡಿದನೂ ॥ ಆಯತಾಕ್ಷಿ ಆದವಳೂ ॥ ತಾಯಿಯು
ಎನಗ್ಯಾಂಗಾದಿ ನೀ ಪೇಳೆ॥ ೧

ರಾಮನ ಮಾತಿಗೆ ತುಳಜಾ ॥ ಪ್ರೇಮದಿ ಮಾತಾಡಿದಳು
ತಾವಿರಜಾ ॥ ರಾಮಗ ಕಥಿ ಆದಂತಾ॥ ನೇಮಿಸಿ ಹೇಳಿದಳು
ಪೂರ್ವ ವೃತ್ತಾಂತಾ॥ ೨

ಪದ್ಯ

ರಾಮಕೇಳು ಪೂರ್ವದಲ್ಲಿ ಜಮದಾಗ್ನಿಯು
ಪರಶುರಾಮನಾಗಿರುವಿ ನೀನಾ ಮಹಾಮುನಿ ಪತ್ನಿ ನಾಮದಲೆ
ರೇಣುಕಿಯು ನೀ ಮಗನು ಎನಗಾದಿ ಭೂಮಿಯಲಿ ಪ್ರಾಖ್ಯಾತ ನಾಮತಿ
ನಿನಗೆ ॥ ನೇಮಿಸ್ಯೋಂದಿನವು ಉದ್ಧಾಮ
ಕೃತವೀರ್ಯಜನು ಕಾಮಧೇನುವು ಬಯಸಿ ಆ ಮುನಿಯ
ಕೊಂದಿರಲು ಆಮ್ಯಾಲ ಪತಿಯಿಂದ ನೇಮದಲಿ ಸಹಗಮನ
ನಾ ಮಾಡಿದೆನು॥ ೧

ಪತಿಯ ಪ್ರೇಮದಲಿ ಸ್ಮರಿಸಿ ಪರಶುರಾಮನು ಎನ್ನಸ್ಮರಿಸಿ ಕೈಮುಗಿದು
ಈ ಪರಿಯು ಮಾತಾಡಿದನು ವರ ಮಾತೆಯನು ಕೂಡಿ
ಇರದೆ ನೀ ಹೋದಿ ಸಂದರ್ಶನವು ಎಂದಿನ್ನ ತ್ವರದಿ ನೀ ಹೇಳೆನಗೆ
ಮರಿಯಲಾರೆಂದು ॥ ಪರಶುರಾಮನ ಮಾತು ಸರಸಾಗಿ
ಕೇಳುತಲೆ ತ್ವರದಿಂದ ನಾನು ಸುಂದರ ರೂಪವ ತೋರಿ
ಈ ಪರಿಯು ಮಾತಾಡಿದೆನು ವರಪುತ್ರ ಕೇಳು
ಮುಂದಿರುವ ತ್ರೇತಾಯುಗವು ಬರುತಿರಲು ಆಗ
ಸಂದರ್ಶನವ ಕೊಡವೆ॥ ೨

ಹೀಗೆಂದು ಹೇಳಿದ್ಯಾಗ ಆತಗ ನಾನು ಈಗ ಆತನೇ ನೀನು
ರಾಘವನು ಆಗಿರುವಿ ॥ ಹಿಂಗೆನಲು ಮುಂದೆ ಆ ರಾಘವನು
ಭಕ್ತಿಯಿಂದ ಬಾಗಿ ನತಿಸುತ ಸಹಸ್ರಾಗಿರುವ ನಾಮಗಳು
ಆಗ ಪಠಿಸುತಲೇ ಚಂದಾಗಿ ಪೂಜಿಸಿದಾ॥ ರಾಘವಗೆ ವರ
ಕೊಟ್ಟಳಾಗ ತುಳಜಾದೇವಿ ಬ್ಯಾಗ ನಿನ್ನ ಕಾರ್ಯ ಚನ್ನಾಗಿ
ಆಗುವುದೆಂದು ॥ ನಾಗವೇಣಿಯು ತಾನು ಹೋಗಿಬರುವೆನೆಂದು
ಆಗ ಅಲ್ಲೇವೇ ಗುಪ್ತಾಗಿ ಇರುವುವಳು॥ ೩

ಪದ ರಾಗ:ಶಂಕರಾಭರಣ ಆದಿತಾಳ ಸ್ವರ : ಮಧ್ಯಮಾ

ದೇವಿಯ ವರದಿಂದ ದೇವದೇವನು ರಾಮ
ರಾವಣಾದಿಗಳನಕೊಂದು ಪಾವನಳಾದ ಸೀತಾದೇವಿಯ
ತಂದನು ಕೇವಳ್ವಾಗ್ನಿಯ ಸಾಕ್ಷಿಯಿಂದೆ॥ ೧

ದಿಟ್ಟವಾದಂಥಾಯೋಧ್ಯಾ ಪಟ್ಟಣದಲ್ಲಿ ಬಂದು
ಪಟ್ಟಾಭಿಷಿಕ್ತನಾದ ರಾಮಾ॥ ಪಟ್ಟಾಭಿರಾಮನ ಇಷ್ಟೇ ಕಥೆ
ಆದರೂ ಇಷ್ಟಾರ್ಥಗಳು ಕೊಡುವ್ಡೋದು॥ ೨

ವರದ ಶ್ರೀರಾಮ ವರವು ಕೊಟ್ಟಿರುವಂಥಾ ತುಳಜಾ
ದೇವಿಯ ದಿವ್ಯ ಮಹಿಮೆ ॥ ಹರುಷದಿ ಕೇಳಿದರೆ
ಹರುಷವ ಕೊಡುವುದು ಪರಿಪರಿಸೋದು ಕಷ್ಟವೆಲ್ಲಾ ೩

ಪುತ್ರರು ಆಗುವರು ಪೌತ್ರರು ಆಗುವರು ಸತ್ಯಮಾತಿದು
ಸುಳ್ಳಲ್ಲಾ॥ ಶತ್ರುಗಳೆಲ್ಲರೂಮಿತ್ರರಾಗುವರು ಕೃತ್ರಿಮಿ
ಭಾವವ ಬಿಟ್ಟು॥ ೪

ಗ್ರಂಥವೆಂಬುವದಿಂದು ॥ ಎಂಥಾದಾದರೂ ಎನೂ ಸಂತೋಷ
ನಮ್ಮ ಗುರುಗಳಿಗೆ॥ ಸಂತರೆಂಬುವರಿಗೆ ಸಂತೋಷಾಗಲಿ
ನಮ್ಮಾನಂತಾದ್ರೀಶನೆ ನುಡಿಸಿದಾ॥ ೫

ಆರ್ಯಾ

ವರ ಕವಿತಾ ರಚನಕ್ಕೆ॥ ತುಳಜಾದೇವಿಯ ದಿವ್ಯ ಚರಿತಕ್ಕೆ ॥
ಚರಿಸದೆನ್ನ ಉಪಾಯಾ ॥ ಗುರುಕೃಪೆಯಿಂದಾಯಿತು ನಾಲ್ಕು
ಅಧ್ಯಾಯಾ॥ ೧

ಪದ ರಾಗ: ಪೂರ್ವಿ ಅಟತಾಳ ಸ್ವರ: ಮಧ್ಯಮಾ

ಮಂಗಳಾರುತಿ ತುಳುಜಾದೇವಿಗೆ ॥ ನಿತ್ಯ ಮಂಗಳವನು ಕೊಟ್ಟು
ಸಲಹುವ ತಾಯಿಗೆ॥ ಪ

ಘನತರ ಕೈಲಾಸ ಮನಿಯು ಮಾಡಿದವಳಿಗೆ॥
ಅನುದಿನ ಅಲ್ಲಿರುವಂಥಾಕಿಗೆ । ಅನುಭೂತಿ ತಪಸಿಗೆ
ಅನುಕೂಲಾಗುವೆನೆಂದು ಅನುಮಾನಿಲ್ಲದೆ ಬಂದಿರುವಾಕಿಗೆ॥ ೧

ಅಷ್ಟಭುಜಗಳುಳ್ಳಂಥಾಕಿಗೆ ॥ ಅಷ್ಟೈಶ್ವರ್ಯದಿಂದಿರುವಾಕಿಗೆ॥
ಸೃಷ್ಟಿಯೊಳಗೆ ಬಹು ಶ್ರೇಷ್ಠನಾಗಿರುವಂಥಾ
ದುಷ್ಟದೈತ್ಯನ ಕೊಂದಂಥಾಕೆಗೆ॥ ೨

ಅಮಿತ ಮಹಿಮೆ ಉಳ್ಳಂಥಾಕೆಗೆ॥
ಯಮುನಾದ್ರಿಯಲಿ ಬಂದಿರುವಾಕೆಗೆ॥
ಗಮನದಿಂದಲಿ ರಾಮ ಶ್ರಮಬಟ್ಟು ಅಲ್ಲೇ
ವಿಶ್ರಾಮಿಸಲು ದರ್ಶನ ಕೊಟ್ಟಾಕೆಗೆ॥ ೩

ರಾಮಗೆ ಗುರುತು ಹೇಳಿದಂತಾಕೆಗೆ॥
ಕಾಮಿತ ಫಲವನು ಕೊಡುವಾಕೆಗೆ॥
ರಾಮನು ಸಾವಿರ ನಾಮದಿ ಸ್ತುತಿಸಲು॥
ಪ್ರೇಮದಿವರವು ಕೊಟ್ಟಂಥಾಕಿಗೆ॥ ೪

ಚಿಂತಿಸುವರ ಮುಂದ ನಿಂತಾಕೆಗೆ॥
ಸಂತೋಷವನು ಕೊಡುವಂಥಾಕಿಗೆ॥
ಅಂತರಂಗದಲ್ಲಿಹ ಚಿಂತೆಯ ಬಿಡಿಸಿ॥
ಅನಂತಾದ್ರೀಶನ ತೋರುವಂಥಾಕೆಗೆ॥ ೫

ಶ್ರೀ ಧ್ರುವಚರಿತ್ರೆ

ಪದ

ಭಜ ಭಜ ಭಜ ಶ್ರೀ ಗಣರಾಜ
ತ್ಯಜ ತ್ಯಜ ತ್ಯಜ ತಾಮಸ ಬೀಜ ಪ

ಶಂಕರ ಪುತ್ರ ಶುಭಂಕರ ವರನಿಜ
ಕಿಂಕರನ ಪಾದ ಸರೋಜ ೧

ಲಂಬೋದರ ಪೀತಾಂಬರಧರ ಕರು
ಣಾಂಬುಧಿ ವರ ದೇವ ಮಹೀಜ ೨

ಶ್ರೀಶಾನಂತಾಜದ್ರೀಶ ವರಾನ್ವಿತ
ದಾಸ ಸುವ್ರತ ಮಾನಸ ಪೂಜ ೩

ಆರ್ಯಾ

ರಾಜ ಸುಪೂಜಿತ ರಾಜ ರಾಜ ನೃಪ
ರಾಜ್ಯ ಮಾಡುತಾ ಇರುತಿಹನು
ದುರ್ಜನ ಪುರುಷರ ತರ್ಜನ ಮಾಡುವ
ಸಜ್ಜನ ಆತ್ಮಾರಿಂಗ್ಯತಿ ಪ್ರಿಯನು ೧

ದೀನ ಬಂಧು ಬಹುದಾನವಂತ ಉ
ತ್ತಾನ ಪಾದ ಎಂಬುವ ಹೆಸರು
ಮಾನಿತರೊಳಗತಿ ಮಾನಯುಕ್ತರು
ಮಾನಿನಿಯರು ಇಬ್ಬರು ಇಹರು ೨.

ಸುರಚಿ ಗಣ್ಯಳು ಪಟ್ಟದರಸಿ ಸುನೀತಿಯು
ವಿರಸದಿ ಆರಸಗ ನಿಷ್ಟಿಯಳು ೩

ಮುತ್ತಿನಂಥ ವರಪುತ್ರರಿಬ್ಬರು
ಉತ್ತಮನೆಂಬ ಸುರುಚಿಪುತ್ರಾ
ಉತ್ತಮ ಗಣ್ಯ ಗುಣೋತ್ತಮ ಧ್ರುವನು
ಮತ್ತ ಸುನೀತಿಗೆ ತಾ ಪುತ್ರಾ ೪

ಮಂದಿರದೊಳಗೆ ವಸುಂಧರೇಶನು
ಛಂದದಿ ತಾ ಸುಖದಿಂದಿರಲು
ಒಂದಿನದಲಿ ಬಹುಸುಂದರಸಭಿಯಲ್ಯಾ
ನಂದದಿ ಬಂದು ತಾ ಕುಳಿತಿರಲು ೫

ಶ್ಲೋಕ

ಸುರುಚಿನಂದನ ಬಂದನು ಅಲ್ಲಿ ಕರೆದು
ಕೂಡಿಸಿತಾ ತೊಡಿಯಲ್ಲಿ।
ಅರಸು ಕಂದನ ಸಂಭ್ರಮದಲ್ಲಿ ಭರದಿ
ಮುದ್ದಿಸಿದಾ ಸಭಿಯಲ್ಲಿ । ೧

ಛಂದ

ನೋಡಿ ಧ್ರುವನು ತಾ ಹರುಷದಿಂದಲಿ
ಓಡಿ ಬಂದನು ರಾಜ ಸಭಿಯಲಿ
ಕೂಡಬೇಕು ತಾ ಎಂದು ತೊಡಿಯಲಿ
ಮಾಡುತಿಹನು ಇಂದು ಮನದಲಿ ೧

ನಾಥ ಭೂಮಿಪಾ ನೋಡಿ ಬಾಲನ
ಪ್ರೀತಿಯಿಂದಲ್ಯೊಂದು ಮಾತನಾಡನು
ತಾತ ಸುತಗೆ ಬಾಯೆಂದು ಕರೆಯನು
ಆತ ಧ್ರುವನು ತಾ ಅನಾಥನಾದನು ೨

ಆಗ ಸುರುಚಿ ಬಾಲನ್ನ ನೋಡುತಾ
ಬ್ಯಾಗನುದರದಲ್ಲಿ ಬಹಳ ಗರ್ವಿತಾ

ಯೋಗ್ಯವಲ್ಲ ಕೂಡಲಿಕ್ಕೆ ತೊಡಿಯಲಿ
ಹೀಂಗ ದುಷ್ಟ ಮಾತುಗಳು ಬಾಯಲ್ಲಿ ೩

ಪದ

ಬಾರದೊ ಧ್ರುವಾ ನಿನಗೆ ಸಿಂಹಾಸನ ಪದವಿ
ಬಾರದೊ ಧ್ರುವಾ ನಿನಗೆ ಸಾರಸಿಂಹಾಸನವು ಪ

ಏರ ಬೇಕೆಂಬುವಂಥಾ ಘೋರತನವ ಬಿಡು ಅ.ಪ

ಅನ್ಯಳ ಮಗನೊ ನೀ ಯನ್ನಲಿ ಜನಿಸಿಲ್ಲಾ
ಚೆನ್ನಿಗ ಉತ್ತುಮಾಗಿನ್ನ ನೀ ಸರಿಯೇನೋ ೧

ಇಂದಿನಾ ಮನೋರಥಾ ಎಂದಿಗಾವುದಲ್ಲಾ
ಕಂದ ಸುನೀತಿಯಾ ಮುಂದ ಕೂಡಾಲಿ ಪೋಗೊ ೨

ಇಚ್ಛೆ ಮಾಡಾದಿರೋ ಹೆ ಚೆನ್ನಾ ಶ್ರೀ
ವತ್ಸನಾರಾಧನಿ ಮಾಡಿಲ್ಲಾ ೩

ವೀರ ಸಿಂಹಾಸನ ಏರಬೇಕಾದರೆ
ವಾರಿಜನಾಭ ನಾರಾಧನಿ ಮಾಡೊನೀ ೪

'ಚೆನ್ನಿಗಾನಂತಾದ್ರೀಶ್ನ' ನೀ ಪೂಜಿಸಿ
ಯೆನ್ನಲ್ಲಿ ಪುಟ್ಟಾದೆ ಉನ್ನತ ಪದವಿಯು ೫

ಶ್ಲೋಕ

ಅತ್ಯಂತ ಘೋರತರ ವಾಕ್ಯಗಳನ್ನು ತಾಳಿ
ಸಂತಪ್ತನಾದ ಮನದಲ್ಲಿ ಸುನೀತಿ ಬಾಲಾ
ಪುತ್ರನ್ನ ನೋಡಿ ಪಿತ ಸುಮ್ಮನೆ ಕೂತನಾಗಾ
ತಾತನ್ನು ಬಿಟ್ಟು ನಡದಾ ಧ್ರುವ ತಾನು ಬ್ಯಾಗಾ ೧

ಶ್ವಾಸೋಚ್ಛ್ವಾಸವು ಬಾಯಿಲಿಂದ ಬಿಡುತಾ
ಕಣ್ಣಿಂದ ನೀರ ಹೋಗುತಾ ಸೂಸು ಬಾಹುವ
ದು:ಖದಿಂದ ಮರಗಿತಾ ರೋದನಾ ಮಾಡುತಾ
ಬಂದಾ ತೀವ್ರದಿ ತಾಯಿ ಸನ್ನಿಧಿಯಲ್ಲಿ ಆಳುತಾಗ
ತುಟಿ ಬಿರಿಗಿಸಿ ಬಂದಾ ಕಂದನ ಮುಂದ ಕುಳ್ಳಿರಿಸಿ
ಸತಿ ಕೇಳ್ಯಾಳು ವಿಚಾರಿಸಿ ೨

ಪದ

ಕಂದ ನೀ ಬ್ಯಾಗ ಹೇಳೊ ಎಲ್ಲೊ ನಿನಗೆ
ಇಂದು ಬಡಿದವರ್‍ಯಾರು ನಿನಗೆ ಪ

ಎಂದು ಪೋಗದಲೆ ತನಯ ನೀನು
ಇಂದು ಪೋಗಿದ್ದಿಯೊ ದಾರ ಮನಿಗೆ ೧

ಘೋರತರ ದು:ಖವೇನೊ ಈ ಪರಿ
ನೀರ ತುಳಕುವ ಕಣ್ಣುಗಳಿಗೆ ೨

ಏನಂತ ಪೇಳಲಿ ಸ್ವಲ್ಪ ಇಲ್ಲಾ
'ಅನಂತಾದ್ರೀಶನ ' ದಯವು ನಮಗೆ ೩

ಪದ

ತನಯನ ಕೇಳಲು ಹೀಂಗೆ
ಪೌರಜನರು ನುಡದರಲ್ಯಾಗೆ
ಅರುಚಿನುಡಿಗಳ ಲ್ಯಾಂಗೆ ಆ
ಸುರುಚಿ ನುಡಿದಳ್ಹಾಂಗೆ ೧

ಕೇಳಿದಳೀ ಪರಿವಾಣಿ ಮನ
ತಾಳದೆ ಪನ್ನಗ ವೇಣಿ

ಸಾಗರ ಬಿದ್ದಳು ತರುಣಿ ತಾ
ಕೂಗುತ ಕೋಕಿಲವಾಣಿ ೨

ಒಡಲೊಳು ಕಿಚ್ಚುರದಂತೆ ಬಹು
ಮಿಡುಕೊಳು ತಾಮನದಂತೆ
ನಡುಗುತ ಹಿಮ ಹೊಡದಂತೆ ತಾ
ನುಡು(ಡಿ)ವಳು ಕರುಣಾದಂತೆ ೩

ಏನು ಮಾಡಲಿ ಇನ್ನಯ್ಯೋ
ಬಹು ದೀನಳಾದೆ ನಯ್ಯಯ್ಯೊ
ಮಾನದ ಪತಿಯೆನ ಕಾಯೊ ಗುರು
ಮಾನಸ ದು:ಖವ ತಿಳಿಯೋ ೪

ಶರಣು ಕೇಳು ದೇವೇಶಾಯನ್ನೊಳು
ಕರುಣಾಬಾರದೆ ಲೇಶಾ
ಚರಣಕೆರಗುವೆನು ಶ್ರೀಶಾ
ಮರಣ ಕುಡಾ'ನಂತದ್ರೀಶ' ೫

ಛಂದ

ನಾರಿ ಸುರುಚಿಯಾ ಮಾತು ಮರಿಯದೆ
ಘೊರ ದು:ಖದಾಪಾರ ತಿಳಿಯದೆ
ನೀರ ಧಾರಿಯ ಕಣ್ಣಲ್ಯುದುರುತಾ
ಧೈರ್ಯ ಭಾವ ತಾ ಬಿಟ್ಟಳು ಸರುತಾ ೧

ಸುಂದರಾಂಗಿಯು ನೊಂದು ಮನದೊಳು
ಕಂದಧ್ರುವನ ತಾ ಮುಂದ ನುಡದಳು
ಬಂದ ತಾಪವ ಸಹಿಸಬೇಕಯ್ಯಾ
ಇಂದು ಮನಸಿನಾ ಕೋಪ ತಾಳಯ್ಯಾ ೨

ಕೇಳು ಬಾಲನೆ ರಾಜಯನ್ನನು
ಭಾಳ ತುಚ್ಛವ ಮಾಡುತಿಹನು
ಭಾಳ ಲಜ್ಜದಿ ಸುನೀತಿ ಭಾರ್ಯಳೆಂದು
ಹೇಳಲಿಕ್ಕೆ ನಾಚುತಿಹನು ೩

ಯನಗ ಪುತ್ರ ನೀನಾದ ಕಾರಣಾ
ನಿನಗ ಮಾಡುವಾ ಅರಸು ನಿರ್ಘೃಣಾ
ಕನಸಿಲಿಲ್ಲವೊ ಯನಗ ಹಿತಕರು ತನಯ
ವೈಯಲಿಲ್ಲವೊ ಯನ್ನದೇವರು ೪

ಮಿಥ್ಯವಲ್ಲವೊ ಸುರುಚಿ ನುಡಿಗಳು ಸತ್ಯ
ವಾದ ಮಾತುಗಳು ನುಡಿದಳು
ಪಥ್ಯವೆ ಸರಿ ಪರಮ ನಿನಗಿವೆ
ಪೊತ್ತುಗಳಿಯದೆ ಪೋಗರಣ್ಯಕೆ ೫

ಗುರ್ವನುಗ್ರಹ ಶಿರಸಿ ಗ್ರಹಿಸೈಯ್ಯಾ
ಶರ್ವಸಖಗ ನೀ ಪೂಜಿಮಾಡಯ್ಯಾ
ಪೂರ್ವದಲ್ಲಿ ನಿನ್ನ ಮುತ್ಯ ಮಾಡಿದಾ
ಸಾರ್ವಭೌಮ ಆಧಿಪತ್ಯ ಏರಿದಾ ೬

ಇಂದಿರೇಶನಾ ಬ್ರಹ್ಮ ಪೂಜಿಸಿ
ಮುಂದ ಏರಿದಾ ಸತ್ಯಲೋಕ ನೇಮಿಸಿ
ಕಂದ ಭಜಿಸು ನೀ ಛಂದದಿ ಧ್ರುವಾ
ಮುಂದ ಕೇಶವಾನಂದ ಸುರಿಸುವಾ ೭

ಶ್ಲೋಕ

ಜನನಿಯಾಡಿದ ವಾಕ್ಯವು ಕೇಳಿ ಆಗಾ
ಮನಿ ಆಸಿಯು ಬಿಟ್ಟು ನಡದಾನು ಬ್ಯಾಗಾ
ಘನಾರಣ್ಯಕೆ ಪೋಗಲು ಶೋಕಸಿಂಧು
ಮುನಿನಾರದಾ ಬಂದ ಕಾರುಣ್ಯಾ ಸಿಂಧು ೧

ಆರ್ಯಾ

ಇಂದಿರೇಶನಾ ಸುಂದರ ಗುಣಗಳ
ನಂದದಿಗಾಯನ ಮಾಡುತಲಿ
ಬಂದಾಕ್ಷಣಹೀಗೇಂದು ನುಡದನು
ಕಂದಗ ಮುನಿ ಆ ಸಮಯದಲಿ ೧

ನಿಲ್ಲೆಲೊ ಬಾಲಕ ಬಲ್ಲಿದರಣ್ಯದಿ
ನಿಲ್ಲದೆ ಪೋಗುತಿ ಎಲ್ಲಿಗೆ ನೀ
ಯೆಲ್ಲಿಂದ ಬಂದಿ ನೀ ಫುಲ್ಲಲೋಚನ
ಯೆಲ್ಲ ಬಳಗ ಬಿಟ್ಟಿಲ್ಲಿಗೆ ನೀ ೨

ಕಂದ ಬಿಟ್ಟ ನೀ ಬಂದ ಕಾರಣಾ
ಇಂದು ತಾಯಿ ತಂದೆಗಳೆಲ್ಲ
ಸುಂದರಾನನಾ ಛಂದದಿ ನುಡಿನೀ
ಮಂದಿರ ವೃತ್ತಾಂತಗಳೆಲ್ಲಾ ೩

ಶ್ರೇಷ್ಠನಾರದ ನೀ ಅಷ್ಟಲೋಕವಾ
ದೃಷ್ಟಿಲಿ ನೋಡುವಿ ಇಷ್ಟರಿಯಾ
ಕೆಟ್ಟ ಮಾತು ಆದುಷ್ಟ ಮಳಾಯಿಯು
ಎಷ್ಟು ನುಡದಳೊ ಯನಗಯ್ಯಾ ೪

ಏನು ಪೇಳಲಿ ನಾನು ಮುನೀಶ್ವರ
ಮಾನ ಗೇಡಿ ಮಾಡಿದಳೆನ್ನಾ
ಮಾನ ಹೋಗಿ ಅಪಮಾನಿತನಾಗಿ
ಕಾನನ ಶೇರಿದೆ ನಾ ಮುನ್ನ ೫

ಮಾನಪಮಾನಗಳೆನಾದರೂ ಸರಿ
ಧ್ಯಾನಕ ತರಬಾರದು ನೀನು

ನಾನಾ ಲೀಲಿಯಾ ಮಾಡುವ
ಬಾಲಕಗೇನು ಚಿಂತೆ ಕೇಳರೆ(ಳುವೆ?) ನಾನು ೬

ಶಾಂತನಾಗು ಗುಣವಂತ ಬಾಲ ನಿ
ನ್ನಂತರಂಗ ಚಿಂತಿಯು ಬಲ್ಲೆ
ಚಿಂತಿಸಿ ಬಂದ್ಯೋ ನೀ ಸತತ ಸುಖ
ಭಗವಂತನನೆ ಬ(ರ?) ಬೇಕಂತಿಲ್ಲೆ ೭

ಎಂಥವರಿಗೆ ಭಗವಂತ ದೊರಕ ನಿ
ನ್ನಂಥ ಬಾಲನಾ ಗತಿಯೇನು
ಕಾಂತನಯನ ಶ್ರೀಕಾಂತ ದೊರಕ ಛೀ
ಭ್ರಾಂತಿ ಬಿಟ್ಟು ತ್ವರ ನಡಿ ನೀನು ೮

ಪದ

ನಡಿನಡಿ ನಡಿ ಧ್ರುವಾನೆ ತಿರುಗಿ ಮನಿಗೆ
ನಡಿ ನಡಿ ನಡಿ ದೊಡ್ಡ ಅಡವಿಯು ಸೇರಾದೆ
ಹುಡುಗ ಬುದ್ಧಿಯನು ಬಿಡು ತಡಮಾಡದೆ ಪ

ಅಂಬಕಗಳಿಗೆ ತಾನು ತೋರಾನು ಪೀ
ತಾಂಬರಧರ ದೇವಾನು
ಅಂಬುಜನಾಭನ ನಂಬಿ
ಭಜಿಸುವಂಥ ಹಂಬಲ ಬಿಟ್ಟು
ವಿಳಂಬನ ಮಾಡದೆ ೧

ಕಾಲಾವಲ್ಲವೋ ಬ್ಯಾಡಯ್ಯ
ವಿಗ(ಹಿ?)ತವಾದ ಕಾಲಕೆ ತಪ ಮಾಡಯ್ಯ
ಕಾಲಕಾಲಕೆ ಸ್ತನ ಪಾಲನುಂಬುವ ಸಣ್ಣ
ಬಾಲ ಈ ವಚನ ಬಿಟ್ಟು ಕಾಲಗಳಿಯದೆ ೨

ದೇಶದೇಶವ ತಿರುಗಿ ಬಹಳ
ಕಾಸೋಸಿ ಇಂದಲೆ ಮರುಗಿ
ಕ್ಲೇಶಾದಿ 'ಅನಂತಾದ್ರೀಶ' ದೊರಕ
ವನವಾಸ ಮಾಡಿ ಸುಳ್ಳ ಘಾಸಿ ನೀ ಆಗದೆ ೩

ಆರ್ಯಾ

ಮುನಿಯ ವಚನ ನೃಪತನಯ ಕೇಳಿ
ಬಹುವಿನಯದಿಂದಲಿ ಹೀಗೆಂದಾ
ಘನದು:ಖದಿ ಯನ್ನ ಮನಿಗೆ ಪೋಗಲಿಕ್ಕೆ
ಮನಸುವಲ್ಲದು ವಲ್ಲೆಂದಾ ೧

ಪದ

ಮನಿಗೊಲ್ಲೆ ವಲ್ಲೆ ಮುನಿರಾಯಾ ಪ

ಬಹುತಲ್ಲಣಗೊಳು ತಿಹ(ಹೆ?)ನ್ನೈಯ್ಯಾ ಅ.ಪ

ಶೋಣೀತ ವಸ್ತ್ರನೆ ಪಾಣಿವಿನಾದಿತ
ವೀಣಾಧರ ಕೇಳಯ್ಯ ೧

ದುಷ್ಟಮಳಾಯಿಯ ಕೆಟ್ಟಮಾತು
ಒಂದಿಷ್ಟು ಸಹಿಸಲಾರ್‍ಯ್ಯ ೨

ದೀನದಯಾಳುವೆ ಮಾನಗಳಿದು ಮು
ನ್ನೇನು ಉಳಸಲಿಲ್ಲೈಯ್ಯ ೩

ನಿನ್ನ ಹೊರತುಯನಗನ್ಯರಿಲ್ಲವೊ
ಯನ್ನ ಹಿತಕ ನೀನ್ನೈಯ್ಯಾ ೪

ನೀತಿ ಅರಿಯ ದಾ ಮಾತಾಪಿತರು ಇ
ದ್ಯಾತಕ ಮುನಿವರ ವರ್ಯಾ ೫

ಸಚ್ಚರಿತನೆ ನಾ ಅಚ್ಚುತ ಪಾದವ
ಇಚ್ಛಾ ಮಾಡುವೆನ್ನೈಯ್ಯಾ ೬

ಶ್ರೀಶ 'ಅನಂತಾದ್ರೀಶನ' ಧ್ಯಾನೋ
ಪಾಸನ ಪೇಳೆನಗಯ್ಯಾ ೭

ಪದ

ಯತಿವರ್ಯ ನೃಪಶ್ರೇಷ್ಠಸುತನಾ
ವಚನಗಳು ಮತಿಗೊಟ್ಟು ತಾಕೇಳಿ
ಅತಿಆಶ್ಚರ್ಯಗಳು ಅತಿ ಸಂತೋ
ಷಿತನಾಗಿ ಹಿತ ಉಪಾಯಗಳು
ಧ್ರುಡವಾಗಿ ನುಡದಾ ಶ್ರೀಪತಿಯಾ ಚರಿತವ ೧

ಪದ

ಬಾಲಕೇಳುಯನ್ನ ಮಾತು ಲೋಲನಾಗದೆ
ನೀಲಸಂಹನನನೆಂಬೊ ಕಾಲಗಳಿಯದೆ ೧

ತಾಯಿ ನಿನಗೆ ನುಡದ ವಾಕ್ಯ ಶ್ರೇಯಸಾಗೋದು
ಕಾಯದಲ್ಲಿ ದು:ಖವ್ಯಾಕುಪಾಯ ಕೇಳಿದು ೨

ಭಕ್ತವತ್ಸಲ(ನ) ಚರಣದಲ್ಯಾಸಕ್ತನಾಗಿ ನೀ
ಮುಕ್ತಿ ಪ್ರದನ ಭಜಿಸು ವಿರಕ್ತನಾಗಿ ನೀ ೩

ಗಮನಮಾಡು ದಿವ್ಯವಾದ ಯಮುನಾ ತೀರಕೆ
ಕಮಲನೇತ್ರ ಮಧುವನಾಖ್ಯ ವಿಮಲಕ್ಷೇತ್ರಕೆ ೪

ಸ್ನಾನಮಾಡಿ ತೀರ್ಥದೊಳು ವಿಧಾನದಿಂದಲಿ
ಶ್ರೀನಿವಾಸನ ಮನಸಿ ಧ್ಯಾನ ಮಾಡೊ ನೀ ೫

ಕಾಮಕ್ರೋಧಗಳ ಬಿಟ್ಟು ಪ್ರೇಮದಿಂದಲಿ
ನೇಮಮಾಡು ಮನಸು ಪ್ರಾಣಾಯಾಮದಿಂದಲಿ ೬

ದೃಢದಿ ಪಾದಖೋ(ಕ್ಕೊಂ)ಂದಿದಾರ(ದವರ)
ಬಿಡದೆ(ದ) ಭಕ್ತಿಯು
ಒಡಿಯ 'ಅನಂತಧ್ರೀಶ' ನಿನಗೆ ಕುಡನೆ ಮುಕ್ತಿಯು ೭

ಪದ

ಭಜಸಿಂಧು ವದನಾ ನಿಜ ಭಾವಾದಿಂದಾ ಶ್ರೀಶನಾ ಪ

ನಿಜ ಭಕ್ತ ನರ ನಾಗೊಲಿದು ನಿಜ ಶಕ್ತಿಗಹನಾದಿಂದ
ನಿಜ ಮುಕ್ತಿ ಪ್ರದನಾ ಸುರವರನಾ ೧

ಕಾಮಾರಿಸಖನಾ ಸರ್ವಕಾಮಿತ ಪ್ರದನಾ
ಚಂದುರಾಕಾಮಾನಾ ಪಿತನಾ ಅಚ್ಯುತನಾ ೨

ವರಶಂಖ ಚಕ್ರಧರನಾ 'ವರದಾನಂತಾದ್ರೀಶ'ನಾ
ವರವಮಾಂಕಧರನಾ ಸುಂದರನಾ ೩

ಪದ

ನತಿಸು ಬಾಲನೆ ಶ್ರೀರಂಗಗೆ ಪೂಜಿ
ಮತಿಗೊಟ್ಟು ಮಾಡಿ ಮೇಘಾಂಗಾಗೆ ಪ

ಛಂದಾದಿ ವಸುದೇವ ಕಂದಾಗೆ ಸುರ
ವಂದಿತ ಪದಾಗೋವಿಂದಾಗೆ
ಚಂದಿರ ವದನಾ ನಂದಗೆ ನಿಂತು
ಹೊಂದಿಸಿ ಕರವಾ ಮುಕುಂದಾಗೆ ೧

ಕರ್ಣಕುಂಡಲಾ ನೀಲಾ ವರ್ಣಾ ಸು
ವರ್ಣರಚಿತ ಶುಭಾಭರಣಗೆ ಕ
ರುಣಾದಿ ನತ ದು:ಖ ಹರಣಾಗೆ ರೂಪಾ
ವರ್ಣಿಸಿ ವರಗುಣ ಪೂರ್ಣಾಗೆ ೨

ಶಾಂತಾದಿ ವರಲಕ್ಷ್ಮೀ ಕಾಂತಾಗೆ ಮನ
ದಂತ ದೊಳಿರುವಾ ನಿರತಾಗೆ
ನಿಂತು ಪೂಜಿಸು ಸುಗುಣದಂತಾಗೆ 'ಅ
ನಂತಾದ್ರೀಶ' ಜಯವಂತಾಗೆ ೩

ಆರ್ಯಾ

ಈ ಪರಿಯಿಂದಲಿ ನೀ ಪರಿಚರ್ಯಿಸಿ
ಈ ಪರಿ ಮಾಡೊ ನೀ ಧ್ಯಾನಾವನು
ಶ್ರೀ ಪರಮಾತ್ಮನು ತಾ ಪರಿಪಾಲಿಸಿ
ಆ ಪರಮುಕ್ತಿಯು ಕುಡುವವನು ೧

ಉಪದೇಶಾದಿ ಆನೃಪಬಾಲನು ಬಹು
ಅಪರೂಪದ ಮಂತ್ರಗ್ರಹಿಸಿ
ಉಪರಾಂಗದಿ ಧ್ರುವ ಸುಪರಿಕ್ರಮ(ಮಿ) ಸಿ
ತಪಸಿಗೆ ನಡೆದನು ತಾ ನತಿಸಿ ೨

ಮುನಿನಾರದ ಮಧುವನಕ ಕಳುಹಿ
ಆ ತನಯಗ್ಹೇಳಿ ತಾ ರಹದಿಂದಾ
ಕನಕಗರ್ಭ ತನಯನು ಧ್ರುವ ಜನಕನ
ಕನಕ ಭೂಷಿತ ಸಭಿಯಲಿ ಬಂದಾ ೩

ಬಂದ ಮುನಿಯ ಭೂವಿಂದ ಕಂಡುತ್ವರ
ವಂದಿಸಿ ಕೊಟ್ಟಾಸನಗಳನು
ತಂದಘ್ರ್ಯಾದಿಗಳಿಂದ ಪೂಜಿಸಿ ಬಹು
ಛಂದದಿ ಮಾಡಿದ ಸ್ತುತಿಗಳನು ೪

ಚಿಂತಿಸಿ ಆ ಮ್ಯಾಲ ತರಂಗದೊಳು
ಸಂತಾಪದಿ ಮನದೊಳು ನೊಂದು
ಭ್ರಾಂತನಾಗಿ ಭೂಕಾಂತ ಇರಲು ಹೀ
ಗೆಂತ ನುಡಿದ ಮುನಿಗುಣ ಸಿಂಧು ೫

ಪದ

ಬಿಡದೆ ಧೇನಿಸುವಾ ಬಗಿಯೆನೊ ಭೂಪಾ
ನುಡಿಯದೆ ತ್ವರ ನಿನ್ನ ಮನಸಿನ ತಾಪಾ ಪ

ವಿರಿಸಿ(ಸ)ದಿಂದ ಚಿಂತಿಸುತಾಲಿ ಹೀಂಗೆ
ಅರಸ ನೀ ಯಾಕ ಕುಳತಿ ಖಿಳನ್ಹಾಂಗೆ ೧

ಧ್ಯಾನದೊಳು ಬಹು ತೊಡಕುವಿ ರಾಜಾ
ಏನು ಕಾರಣ ಇಲ್ಲವು ಮುಖ ತೇಜಾ ೨

ಸಂತಾಪ ಏನು ತಂದನು ನೃಪನಿನಗೆ 'ಅ
ನಂತಾದ್ರೀಶನು ' ಬ್ಯಾಗನೆ ನುಡಿಯು ಎನಗೆ ೩

ಪದ

ಮುನಿಯ ವಚನಕೇಳ್ದಾಕ್ಷಣದಲಿ
ಮನಸಿನೊಳು ನೊಂದಾ
ವನನೇತ್ರದಿ ತೋರ್ದಾ
ಮನಸಿನ ಘನ ದು:ಖವ ನುಡದಾ ೧

ಏನು ಪೇಳಲಿ ನಾನು ನಾರದಾ
ಜ್ಞಾನಿ ಇದ್ದಿ ನೀನು
ಮಾನಿನಿ ಬುದ್ಧಿಯನು ಮನ್ನಿಸಿ
ದೀನದನಾದೆ ನಾನು ೨

ಪಂಚಪ್ರಾಣ ಚರಿಸುತಿರಲು
ಪ್ರಪಂಚವ್ಯಾಕ ತಿಳ(ಳಿ)ಸು
ಪಂಚ ವರ್ಷದ ಕೂಸು ಚರಿಸರಿಸಲು
ಚಂಚಲಾಯಿತು ಮನಸು ೩

ಯೆನ್ನ (ಯೆಂದೆನ್ನ) ಪುತ್ರ ಇಂದು ತೊಡಿಯಲ್ಲಿ
ಮುನ್ನ ಕುಳ್ಳುವೆನೆಂದು
ಮುನ್ನ ನಿಲ್ಲಲು ಬಂದು ಕರಿಯೆ ನಾ
ಚೆನ್ನಿಗ ಬಾಯೆಂದು ೪

ಬಂದ ಸುತನ ನೋಡಿ ಕರದು ಆ
ನಂದ ದಿಂದ ಕೂಡಿ
ವಂದು ಮುದ್ದನಾಡಿ ಇರೆ ನಾ
ಮಂದ ಮತಿಯು ಖೋಡಿ ೫

ಸಣ್ಣಬಾಲ ಇಂದು ನಡದಾ–
ರಣ್ಯಕ ವದನೇಂದು
ಸಣ್ಣ ಮುಖದಲಿಂದು ಉಸುರುತ
ಕಣ್ಣಲ್ಯುದಕ ತಂದು ೬

ಬಲ್ಲಿದರಣ್ಯದೊಳು ಚರಿಸುವಾ
ಭಲ್ಲುಕ ವ್ಯಾಘ್ರಗಳು
ಕೊಳ್ಳ(ಲ್ಲ)ದೆ ಪ್ರಾಣಗಳು ಇರಲಿ
ಎಲ್ಲ ಮೃಗಾದಿಗಳು ೭

ಭೂಮಿದೇವತಿ ತಾಯಿ ತನಯನ
ಕ್ಷೇಮದಿಂದ ಕಾಯಿ
ಭೀಮಶೇನ ಕಾಯಿ
ಖೇಚರ ಸೋಮಸೂರ್ಯ ಕಾಯಿ ೮

ವಾರಿಚರನೆ ಕಾಯಿ ವರಮಂ
ದಾರಧರನೆ ಕಾಯಿ
ಚೋರಹರನೆ ಕಾಯಿ ವನದೊಳು
ನಾರಸಿಂಹ ಕಾಯಿ ೯

ವಾಮನಾಗಿ ಕಾಯಿ ಪರಶು
ರಾಮನಾಗಿ ಕಾಯಿ
ರಾಮನಾಗಿ ಕಾಯಿ ಯದುಕುಲ
ಸೋಮನಾಗಿ ಕಾಯಿ ೧೦

ಜಂತು ನಿಂದಿತ ಕಾಯಿ ಹಯಚರ
ಅಂತರಿಲ್ಲದೆ ಕಾಯಿ
ಕಂತುಪಿತನೆ ಕಾಯಿ ಪ್ರಾಂತಕ
ನಂತಾದ್ರೀಶ ಕಾಯಿ ೧೧

ಪದ

ಧರಣಿನಾಥನಾ ಶೋಕ
ಕರ್ಣದಿಂದಲಿ ಆ
ಕರ್ಣಿಸಿ ನುಡಿದಾನು
ಕರುಣದಿಂದಾ ೧

ಎಂದಿಗಾದರು ಗೋ
ವಿಂದ ಕಾಯುವಾತಾನು
ಇಂದು ಶೋಕಾವು
ಭೂವಿಂದಾ ಯಾಕೆ ೨

ತೋಕಾನಿಂದಲಿ ಬಹು
ಶೋಕಾ ಬಡಲಿ ಬ್ಯಾಡಾ
ಲೋಕಾಮೀರುವ ತಿಳಿ
ತೋಕಾ ನಿನ್ನ ೩

ಕಂತು ಪಿತಗೆ ಗುಣ
ವಂತ ಬಾಲಾನುನಿನ್ನಾ
ನಿಂತು ಪೂಜಿಸುತಿಹನು
ಶಾಂತನಾಗಿ ೪

ಛಂದಾದಿಂದಲಿ ಮು
ಕುಂದಾ ಗೊಂದಿಸಿ ನಿನ್ನಾ
ಕಂದಾ ಬಹುವ ಆ
ನಂದ ದಿಂದಾ ೫

ಬ್ಯಾಡಾ ಶೋಕಾವು ಪರಿ
ವ್ಯಥಾ ನಿನಗೆ ಎಂದು
ಕೂಡಾದೆ ಕ್ಷಣ ಮುನಿ
ಗಾಡಾ ಪೋದಾ ೬

ಅಂದಮಾತನು ಕಿವಿ
ಯಿಂದ ಕೇಳಿದ ನೃಪ
ಮುಂದ ಸುತನ
ಚಿಂತಿಯಿಂದ ಕುಳಿತಾ ೭

ಇತ್ತ ಧ್ರುವನು ತ್ವರ
ಹೊತ್ತುಗಳಿಯದೆ
ಉತ್ತುಮ ಮಧುವನ
ಕ್ಷೇತ್ರ ಕಂಡಾ ೮

ಬಂದು ತೋಷಾದಿ ಕಾ
ಲಿಂದಿ ತೀರಾಕೆ ನೃಪ
ಕಂದಾ ಮಾಡಿದಾ ವಿಧಿ
ಯಿಂದ ಸ್ನಾನಾ ೯

ಶ್ರೀ(ಸಿ)ಘ್ರಾದಿಂದಲಿ ತಾನು
ಉಗ್ರಾಸನವು ಹಾಕಿ
ವ್ಯಗ್ರನಾಗದೆ
ಏಕಾಗ್ರನಾಗಿ ೧೦

ನಿಂತಾ ಧ್ಯಾನಕೆ ಮನ
ದಂತಾದೊಳಿರುವ 'ಅ
ನಂತಾದ್ರೀಶನಾ ' ಬಹು
ಶಾಂತಾನಾಗಿ ೧೧

ಪದ

ನಿಂತಾ ನಿಂತಾ ಧ್ರುವನು ತಪಸಿಗೆ
ನಿಂತ ಧ್ರುವನು ಭಗ
ವಂತನ ರೂಪವು
ಅಂತರಂಗದೊಳು ಚಿಂತಿಸುತಲಿ ಪ

ನಾಕು ದಿವಸಕೊಮ್ಮೆ
ಏಕ ಫಲವ ತಿಂ
ದೇಕ ಮಾಸವು
ತಾ ಕಳವುತಲಿ ೧

ಪರ್ಣತಿಂದು ನಾ
ಕೆರ್ಣೆ ದಿವಸಕೆ
ಎರ್ಣೆ ಮಾಸಸಂ
ಪೂರ್ಣ ಕಳವುತ ೨

ಅಂಬುಪಾನ ಮಾ
ಡ್ಯೊಂಬದ್ದಿವಸಕೆ
ನೆಂಬಿ ತ್ರಿಮಾಸವು
ತುಂಬಿ ಕಳವುತಲೆ ೩

ನಾಕು ಮೂರು ದಿನಕೆ
ಖಗ ಭಕ್ಷಿಸಿ
ನಾಕ ಮಾಸವು
ತಾ ಕಳವುತಲೆ ೪

ಮಾಸ ಪಂಚದಲಿ
ಶ್ವಾಸ ಕಟ್ಟಿ ಲ
ಕ್ಷ್ಮೀಶ 'ಅನಂತಾ
ದ್ರೀಶ ' ಗೆ ನೆಂಬಿ ೫

ಶ್ಲೋಕ

ವಾರಿ ಜೋದ್ಭವ ತಾತನ ಪೂಜಾ
ವಾರಿಧಿಯೊಳು ಧುಮಕಿಸಿ ರಾಜಾ
ಶ್ರೀ ರಮೇಶಾನ ನೆಂಬಲು ಹೀಂಗೆ
ಮೂರು ಲೋಕವು ನಡುಗಿತು ಆಗೆ

ಪದ

ಏಕಾ ಪಾದವ ನೂರಿ
ಏಕಾಂಗುಷ್ಠನು
ಏಕೋ ಭಾವದಲಿಟ್ಟು
ಏಕಾಕಿಯು ತಾನು
ಬೇಕಲ್ಲಿ ಘರುವಂಥಾ
ನೇಕಾ ಚಿತ್ತವನು
ಏಕಕಡಿಗೆ ಮಾಡಿ
ಭೂಕಾಂತ ಸುತನು ೧

ಧ್ರುವಾನಿಂದ್ರಲು ನೋಡಿ ದೇವತೆಗಾಳು
ದಾವಲ್ಲಿಗವಧಿ ಈತನ ಭಾವಗಂಗಳು
ಭಾವಾದೃಢ ತಿಳಿಬೇಕೆಂದು ದೇವೇಶಾನೊಳು
ಧ್ರುವಾಗಂಜಿಸಿದಾರು ತೀವ್ರಾದಿ ಭಾಳು ೨

ಅರ್ಭಾಟದಿಂದಲ್ಲೆ ಅಬ್ಬರಿಸಿ ಪ್ರೌಢ
ಹೆಬ್ಬುಲಿಗಳು ಸಿಂಹಾ ಬಂದಾವುಗಾಡಾ
ಭೂರಿ ಘಾತಿಕಾ ಆಗಿ ಅಬ್ಬರನೋಡಾ
ಅರ್ಭಟಾದರು ಧ್ಯಾನ ಅರ್ಭಕ ಬಿಡಾ ೩

ಭೂದೇವತಿ ತಾ ಬಾಗಿ ಭೂಮೆಲ್ಲ ನಡಗಿ
ಭೂಲೋಕಾ ಜನರೆಲ್ಲಾ ಶ್ವಾಸ ಬಂದಾಗಿ
ಭೂಪಾಲಕರಿಂದಲ್ಲೆ ಸಹಭೂತರಾಗಿ
ಭೋಗಶಾಯನಿಗೆ ಭೊ ಶರಣೆಂದಾರು ಹೋಗಿ ೪

ಶರಣೊ ಶರಣು ದೇವಾ ಶರಣಾನೇಕಗಳು
ಶರಣಾ ಬಂದೆವು ನಿನ್ನ ಚರಣ ಪದ್ಮದೊಳು
ಹರಣಾ ಉಳಿಯದಿನ್ನ ಮರಣಾವೆ ಭಾಳು
ಕರುಣಾವಿಲ್ಲವೆ ಸ್ವಾಮಿ ಶರಣಾಗತರೊಳು ೫

ನಳಿನ ನಾಭನೆ ಪ್ರಾಣಗಳು ಶೋಧ(ಧಿ)ಸಿ ಧ್ರುವಾ
ಇಳಿಯಾದೊಳಗ ಧ್ಯಾನಗಳು ಮಾಡುತೀವಾ
ತಿಳಿಯಾದು ಮಹಿಮಿ ಮುನ್ನುಳುವೊ ಪರಿದಾವಾ
ಗೆಳಿಯನಾಗಿ ನಮ್ಮ ಉಳಿಹಿಕೊ ದೇವಾ ೬

ಲಕ್ಷ್ಮೀಇಂದಲಿ ಕೇಳಿ ಲಕ್ಷ್ಮೀಶಧೊರಿಯು
ಸುಕ್ಷೇಮ ನಿಮಗೆಂದು ರಕ್ಷಿಸೀ ಪರಿಯು
ಲಕ್ಷ ಕಾರ್ಯವ ಬಿಟ್ಟು ಧ್ರುವನೀಕ್ಷಿಸಿ ತ್ವರಿಯು
ಪ್ರತ್ಯಕ್ಷನಾಗಿ ನಿಂತ ಸಾಕ್ಷಾತ್ ಹರಿಯು ೭

ಶ್ಲೋಕ

ಫುಲ್ಲನಾಭನ ನೋಡಲು ತೂರ್ಣಾ
ಎಲ್ಲರಾದರು ಸಂಭ್ರಮ ಪೂರ್ಣಾ
ಅಲ್ಲಿ ಶ್ರೀಜಯ ಶಬ್ಧವು ಪೂರ್ಣಾ
ಇಲ್ಲಿಗೆ ಪ್ರಥಮಾಧ್ಯಾಯ ಪೂರ್ಣಾ ೧

ಇಲ್ಲಿ ಶ್ರೀ ಮತ್ಭಾಗವತೇ ಚತುರ್ಥ ಸ್ಕಂಧೆ
ಧ್ರುವಚರಿತೆ ಪ್ರಥಮೋಧ್ಯಾಯಃ
ಶ್ರೀ ಗುರ್ವಂತರ್ಗತ ಶ್ರೀ ಕೃಷ್ಣಾಯನಮ:
ಶ್ರೀ ಗುರುಭ್ಯೋನಮ:

ನಾನಾಕಿರೀಟ ಮಣಿ ಕೌಸ್ತುಭಕಾಂತಿಗಾಗಿ
ಶ್ರೀನಾಥನಾ ಧ್ರುವನು (ನ) ನೋಡಲು ಶಾಂತನಾಗಿ
ಜ್ಞಾನಾಭಿವೃದ್ಧಿಕರ ಶಂಖ ಕಪೋಲದಲ್ಲಿ
ತಾನಾಗಿ ವತ್ತಿ ಮತಿಕೊಟ್ಟನು ಬಾಲನಲ್ಲಿ ೧

ಆರ್ಯಾ

ನೋಡಿಧ್ರುವನು ತ್ವರ ಜೋಡಿಸಿ ಕರಯುಗ
ಮಾಡಿದನೇಕ ಪ್ರಣಾಮಗಳು
ಬೇಡಿದ ಫಲಗಳು ನೀಡುವಂಥ ಸ್ತುತಿ
ಮಾಡಿದ ಬಾಯಲ್ಯುಚ್ಚಾರ(ಗ)ಳು ೧

ಪದ

ಶ್ರೀಶಾ ಮುನಿ ಹೃದಿವಾಸ ದಯಾನಿಧೆ
ಭೋ ತಸ್ಮೈ ನಮಾಮಿ
ಶ್ರೀಶ ದಾಸ ಕ್ಲೇಶ ನಾಶಿಕಾರಿ ಸು
ರೇಶ ಕೇಶವ ವಾಸವಾನುಜ ಪ

ಇಂದಿರಾಧರ ವಿಧೃತ ಮಂದರಾ ಲೋಕಸದೃಶ
ಸುಂದರಾ ಪರಮೇಶ ಮಂದಹಾಸ್ಯವದನಾ ಪರಮಾ
ನಂದ ಕುಂದರದನಾ ಸುರಮುನಿ
ವೃಂದ ವಂದ್ಯ ಇಂದು ಸಿಂಧು ಶೇಖರವಂದ್ಯಾ
ನಂದ ಬಂಧು ಕುಂದಹಾರಕಾ ೧

ಶಕ್ತಿದಾ ದೈತ್ಯಸಂಹಾರ ಯುಕ್ತಿದಾ
ನಿಜಸ್ವರೂಪಾ ವ್ಯಕ್ತಿದಾ
ಮುಕ್ತೇಶ ಭಕ್ತವಂದ್ಯ ಚರಣಾ
ನಿಜಪದ ಸಕ್ತನಾಘಹರಣಾ
ತವಪದ ತ್ಯಕ್ತ ಭಕ್ತಿಯುಕ್ತಿ

ಯುಕ್ತ ಶಕ್ತಿ ಹಾರ ವಿರಕ್ತಿ
ಭಕ್ತಿ ಭುಕ್ತಿದಾಯಕಾ ೨

ಅಂತರ ವಿರಹಿತ ನಿರಂತರಾ
ಸಂರಕ್ಷಿತ ಲೋಕಾಂತರಾ ಶರ್ವೇಶಾ
ಅಂತಜ್ಞಾತ ಭಾವಾ ಶ್ರೀ ಅನಂತಾದ್ರೀಶ ದೇವಾ
ಜಯ ಜಗದಾಂತ ಕಾಂತ ಸಂತತ
ಅಂತರಹಿತ ಅನಂತ ಕಾಂತಿ ಕಾಂತ
ಶಾಂತ ಮೂರುತಿ ೩

ಪದ

ಬಾಲಾನಾ ಸ್ತುತಿ ಕಿವಿಯಲಿಟ್ಟಾನು ಆ
ಕಾಲಕ್ಕೆ ಸಂತೋಷಾ ಬಟ್ಟಾನು
ಬಾಲನ ಕರುಣದಿ ನೋಡಿದಾ
ಗೋಪಾಲನು ತಾ ಮಾತಾನಾಡಿದಾ ೧

ಏನು ಬೇಡು ಬೇಡೆಲೊ
ನಾನು ಕುಡುವೆ ಮಾತಾಡೆಲೊ
ಅನ್ಯರಿಂದಲಿ ಪ್ರಾಪಕವಾಗದಂಥ
ಉನ್ನತ ಪದ ಕುಡುವೆನು ಬ್ಯಾಗಾ ೨

ಅಕ್ಷಯವ್ರಳ್ಳಾಸ್ಥಾನಕ್ಕೆ ಗ್ರಹ
ನಕ್ಷತ್ರಗಳು ದಿನದಿನಕ್ಕೆ
ಲಕ್ಷಿತ ಸೂರ್ಯಾದಿಕರೆಲ್ಲಾ ಪ್ರ
ದಕ್ಷಿಣಿ ಮಾಡಿ ತಿರುಗುವರೆಲ್ಲಾ ೩

ಇಂಥ ಸ್ಥಾನಾವ ತೋರುವೆ ನಾನು ನಿನ
ಗಂತರಿಲ್ಲದೆ ಕುಡುವೆ ನಾನು

ಪಂಥಾದಿ ಕುಡುವೆ ಈಗಾದರು ನಿಜ
ಸಂತತಿ ರಾಜ್ಯಾ ಬೇಕಾದರು ೪

ಏರಿಕೊ ಸಿಂಹಾಸನವನು .
ಮೂವತ್ತಾರು ಸಾವಿರ ವರುಷ ನೀನು
ಮೀರಿದ ಮ್ಯಾಲ ಯನ್ನನುಧ್ಯಾನ ಮಾಡಿ
ಏರುವಿ ನಿಜ ಉತ್ತುಮ ಸ್ಥಾನ ೫

ಎನ್ನ ಭ್ರಾತನು ತಾ ಇರಲಿಕ್ಕೆ
ನಾ ಎಂದಾಗುವೆ ಅರಸು ರಾಜ್ಯಕ್ಕೆ
ಮುನ್ನ ಅಸಾಧ್ಯವೆಂದೆನ ಬ್ಯಾಡಾ
ಧ್ರುವ ನಿನ್ನ ಮನದ ಸಂಶಯ ಬ್ಯಾಡಾ ೬

ಅಧ್ಯಾಯ ಎರಡು

ಮೃಗ ಬ್ಯಾಟಯಲಿ ಹೊರಟ್ಹೋಗುವಾ
ಯಕ್ಷಾನುಗರಿಂದ ತಾ ಮೃತನಾಗುವಾ
ಮಗ ಬಾರಾನೆಂದು ತಾಯಿ ಮಿಡುಕುತಾ
ರಾಜ್ಯ ಅಗಲಿ ಹೋಗ್ವಳು ತಾ ಹುಡುಕುತಾ ೭

ಅಂತಃಕರುಣ ತಾಪದಲಿ ಕಾಡಾಕಿಚ್ಚಿ
ನಂತದೊಳಗೆ ಬೀಳೋಳು ಗಾಡಾ
ಚಿಂತೆಯಾಕೆ ನೃಪಹೋಗಿನ್ನ ನಿ
ಶ್ಚಿಂತೆಯಿಂದಲಿ ರಾಜ್ಯ ಮಾಡಿನ್ನ ೮

ಎಂದು ಹಸ್ತವ ಶಿರದಲ್ಲಿಟ್ಟು ಆ
ನಂದದಿಂದಲಿ ವರಗಳನು ಕೊಟ್ಟು
ಮುಂದನಡೆದ ಪಕ್ಷಿವಾಹನನು ಜಗ
ದ್ವಂದ್ಯ 'ಶ್ರೀ ಅನಂತದ್ರೀಶ' ನು ೯

ಪದ

ಆದಿ ಮೂರುತಿ ಶ್ರೀರಮೇಶಾ ತನ್ನ ಧಾಮಕ್ಹೋದನು
ಮೋದರಹಿತನಾಗಿ ಬಾಲದೀರ್ಘ ಉಸುರಗಳದನು
ಪೋದನೆಂದು ದುಃಖದಿಂದ ತಿರುಗಿ ಪುರಕ ನಡದನು
ಯಾದವೇಶ ಹಾ ಮುರಾರಿ ಎಂದು ಆಗ ನುಡದನು ೧

ಪೂರ್ವ ಪುಣ್ಯದಿಂದ ನಿನ್ನ ರೂಪ ಯನಗ ತೋರಿದಿ
ಶರ್ವಮಿತ್ರಯೆನ್ನಾ ವಿಷಯ ಮಡುವಿನೊಳಗ ಹಾಕಿದಿ
ಸರ್ವಕಾರ್ಯ ಬಿಟ್ಟು ಕರುಣಾದಿಂದ ಆಗ ನೋಡಿದಿ
ಗರ್ವಯುಕ್ತನಾಗಿ ಯನ್ನಬಿಟ್ಟು ಈಗವೋಡಿದಿ ೨

ಸಿಕ್ಕಿದಂಥ ದಿವ್ಯಮಾಣಿಕ್ಯ ಕಳದಂತಾಯಿತು
ಫಕ್ಕನೆದ್ದು ಕುಳಿತು ಕಂಡಾಕನಸಿನಂತಾಯಿತು
ಮಿಕ್ಕ ವಿಷಯ ಭೋಗ ಬೇಡಿ ಜನ್ಮ ವ್ಯರ್ಥವಾಯಿತು
ತಕ್ಕ ಮುಕ್ತಿ ಬೇಡಲಿಲ್ಲಾ ಯನ್ನ ಬುದ್ಧಿ ಹೋಯಿತು ೩

ಬುದ್ದಿ ಗ್ಹೊದೆನು ಕ್ಲೇಶ ಬಿಟ್ಟು ಈಗ ಬಹಳ
ತಾಪ ಯುಕ್ತ ನಾದೆನು ಬೇಡಿ ಕೊಂಡಿದೇನು
ವಿಷ್ಯ ಸೌಖಿತು"
ಏಸು ಜನ್ಮ ಪೂಜೆ ಮಾಡಿದಾರು ದೇವ ದೊರಕನು
ಮಾಸ ಪಂಚದಿಂದ ಯನ್ನ ದೃಷ್ಟಿ ವಿಷಯ ನಾದನು ೪

ಆಶಿಇಂದ ಆಗ ವಿಷಯ ಸೌಖ್ಯವನು ದೈವಕೆ
ಮಾಡಿದ್ದುಣ್ಣು ಬೇಕು ಸುಳ್ಳವ್ಯರ್ಥತಾಪ ಯಾತಕೆ
ಮಾಡಿಕೊಂಡು ಹೀಂಗ ಮನಸ್ಸಿನಲ್ಲಿ ಬಂದ ಪಟ್ಟಣಕೆ
ನೋಡಿ ಜನದ ಸುಳಿವು ನಿಂತು ಕೊಂಡ ಪುರಸಮೀಪಕೆ ೫

ಶ್ಲೋಕ

ಆಗ ನೋಡಿದ ಒಬ್ಬ ಧ್ರುವನ್ನಾ ವೇಗ
ಪುಟ್ಟಿತು ಮನಸಿಗೆ ತನ್ನ
ಬ್ಯಾಗ ಪೇಳಿದ ಅರಿಸಿನ ಮುಂದಾ
ಬಾಗಿ ಬಿನ್ನಯಿಸಿ ತಾನಯ ದಿಂದಾ ೧

ಪದ

ರಾಜಭೂಪಾನೆ ನಿನ ಕಂದ ಬಂದಾ॥
ಪೂಜಿಸಿ ದೇವೇಶನ ಛಂದದಿಂದ ॥
ಪರಿಪರಿಯಿಂದಾ ಗುರುಕೃಪೆಯಿಂದಾ ।
ತಿರುಗಿ ಇಲ್ಲಿಗೆ ಕ್ಷೇಮದಿಂದಲಿಂದಾ ೧

ಪುಣ್ಯಗಳಿಂದಾರಣ್ಯದಲಿಂದಾ
ಸಣ್ಣಬಾಲನು ಭಾಳನಂದದಿಂದಾ ೨

ಅನಂತರದಿಂದಾ ಅನಂತ ಸೇವಿಂದಾ
'ನಂತ್ರಾದೀಶನಾ' ದಯದಿಂದ ಲಿಂದಾ ೩

ಆರ್ಯಾ

ಸೊಲ್ಲ ಕೇಳಿ ಭೂವಲ್ಲಭ ಹಾ ಇನ್ನೆಲ್ಲಿ ಮಗನ
ಕಾಂಬೆನು ಯಂದಾ
ಅಲ್ಲಸ್ವಾಮಿ ಸುಳ್ಳಲ್ಲ ಯನಲು ಮನದಲ್ಲಿ
ಹುಟ್ಟಿತು ಆನಂದಾ ೧

ಪದ

ರಾಗ : ಶಂಕರಾಭರಣ ಆದಿತಾಳ

ಸುದ್ದಿ ಹೇಳಿದಾತಾಗೆ ಬೇಕಾದ್ದು ಕೊಟ್ಟು ಹರುಷದಿಂದ
ಯದ್ದು ರಥವಾನೇರಿ ತಾ ಸನ್ನದ್ಧ ನಾದನು ೧

ಇಬ್ಬರ ಹೆಂಡಿರ ಕೂಡಿ ಒಬ್ಬ ಪುತ್ರನಿಂದ ಕೂಡಿ
ಅಬ್ಬರದಿಂದಲಿ ತಾ ಉಬ್ಬುಬ್ಬಿ ನಡದಾನು ೨

ಮಂತ್ರಿಗಳು ವಿಪ್ರಾರು(ಗಳು) ಮಂತ್ರಜ್ಞಾರು ಮಾನವಾರು
ಸಂತ್ರೋಧಾರ ನಡದಾರು ಬಜಂತ್ರಿ ಘೋಷಾದಿ ೩

ಭೇರಿ ಘೋಷಾ ಶಂಖ ಘೋಷಾ ಸಾರಂಗ
ಮೃದಂಗ ಘೋಷ
ಸಾರಿಸಾರಿ ನುಡದಾವು ಅಬ್ಬಾರದಿಂದಲಿ ೪

ವೇಣು ಘೋಷಾ ವೇದಷೋಷಾ ವೀಣಾ
ತಂಬೂರಿಘೋಷಾ
ಜಾಣೆ ರಾಮಂಜುಳಗೀತಾವಾಣಿ ಘೋಷಾವು ೫

ಅಂಗಾನೇರು ಕುಂಕುಮಾದಿ ಮಂಗಲ ಭೂಷಾದಿಂದ
ಶೃಂಗಾರಿಸಿ ಕೊಂಡಾರು ಕುರಂಗ ನೇತ್ರೆರು ೬

ಧಟ್ಟಿ ಪೀತಾಂಬರನುಟ್ಟ ಬಟ್ಟಾ ಕುಚದಲ್ಯೊಪ್ಪುವಾ
ಕಠ್ಠಾಣಿ ಮೋಹನ ಮಾಲೆನಿಟ್ಟು ಕೊರಳಿಗೆ ೭

ರಂಬೇರು ವೀಳ್ಯವ ಮೆದ್ದು ತಾಂಬೂಲಗಲ್ಲಾದಲ್ಯೊತ್ತಿ
ತುಂಬಿ ಹರುಷದಿಂದ ಚಂದ್ರ ಬಿಂಬ ಮುಖಿಯರು ೮

ಮೀರಿದಾ ಸಂಭ್ರಮದಿ ಶೃಂಗಾರವನು ಮಾಡಿಕೊಂಡು
ಥೋರಾಗನ್ನಡಿಲಿ ತಮ್ಮ ಮಾರಿ ನೋಡೋರು ೯

ಕುಡಿಗಣ್ಣ ನೋಟಾದವರು ನಡಸಣ್ಣಾದಿ ಬಳಕುವರು
ಬಡಿವಾರದಿಂದಲಿ ಮಂದ ನಡಗಿ ವಂತರು ೧೦

ಪಟ್ಟಾಣದಿಂದಲಿ ವಳ್ಳೇ ಧಿಟ್ಟನಾರಿಯರು ಕಾಲಾ
ಬಟ್ಟಿನಲಿ ಕಾಲುಂಗುರ ಮೆಟ್ಟಿ ನಡದಾರು ೧೧

ಪರಿಪರಿ ವಿಲಾಸದಿಂದ ಕರದಲ್ಲಿ ಕರತಳಾನಿಕ್ಕಿ
ಕಿರಿನಗಿಯಿಂದಲ್ಲೆ ನಗುತಾ ಬರುವುತೀಹರು ೧೨

ಹಿಂಡುಜನರಾಗಳ ಕೂಡಿಕೊಡು ರಾಜಾಬಂದು
ಮಗನಾರಥವಾನಿಳುದು ಅಪ್ಪಿಕೊಂಡಾ ಹರುಷದಿ ೧೩

ಒಲಿದು ಅಂತಃಕರುಣದಿಂದ ತಲಿಯಾ
ಮೂಸಿ ನೋಡಿತನ್ನ
ಜಲಜಾ ಲೋಚನಗಳಿಂದ ಜಲವಾಧರಿಸಿದ ೧೪

ಛಂದಾದಿ ಬಾಲಾನು ತನ್ನ ತಂದಿ ಪಾದಾದೊಳು ಯರಗಿ
ಮುಂದ ತಾಯಿಪಾದಗಳು ಪಾದ ಬಂದು ಯರಗಿದ ೧೫

(ತಾಯಿಯರ ಪಾದಗಳಿಗೆ ಪೋರ ಬಂದು ಯರಗಿದ)
ಸಾಧುತಂದಿತಾಯಿ ಆಶೀರ್ವಾದ ಯುಕ್ತನಾಗಿ ತನ್ನ
ಪಾದಕ್ಕೆರಗಿರಾಲು ಸುರಚಿ ಮೋದ ಬಟ್ಟಾಳು ೧೬

ಏಳಯ್ಯಾ ಎಳಯ್ಯಾಯೆಂದು ಭಾಳಾನಂದಾದಿಂದ
ಲೃಪ್ಪಿ ಭಾಳಾಯುಷ್ಯಾವಂತನಾಗೊ ಬಾಲಾಯೆಂದಾಳು ೧೭

ಉತ್ತಮ ಧ್ರುವನು ತಾತಾ ಗುಣೋತ್ತಮ ಇಬ್ಬರು ಕೂಡಿ
ಅತ್ಯಂತ ಹರುಷಗೊಂಡಾರಂತಃಕರುಣದಿ ೧೮

ಇಂದಿಗೆ 'ಅನಂತಾದ್ರೀಶಾ' ಹೊಂದಿಸಿದಾ ನಮ್ಮಿಬ್ಬರಾ
ನೆಂದು ಮಾತನಾಡಿದರು ಕಂದರಿಬ್ಬಾರು ೧೯

ಛಂದ

ಹೆತ್ತ ತಾಯಿಗೆ ಚಿತ್ತಸಂಭ್ರಮಾ
ಮತ್ತ ಜನರಿಗೆ ಚಿತ್ತ ವಿಭ್ರಮಾ
ಪುತ್ರನಷ್ಟಿ ತಾ ಯೆತ್ತಿಕೊಂಡಳು
ಸುತ್ತ ಚಿಂತಿಯಾ ಮರ್ತುಬಿಟ್ಟಳು ೧

ಸುಂದರಾಂಗಿಯ ಆನಂದ ಬಾಷ್ಪದಾ
ಬಿಂದು ಸ್ನಾನವು ಕಂದ ಮಾಡಿದಾ
ಮುಂದ ರಥದಲ್ಲಿ ಬಂದು ಕುಳಿತನು
ಮುಂದಿರುವ ಬಾಲನ ಒಲಿದು ನೋಡುತಾ
ಮೊಲಿಯ ಪಾಲು ಚಿಮ್ಮಿ ತಲಿಯಲಿ ಹರುತಾ
ಹಲವು ರಾಜ್ಯಕೆ ಮುಂದ ಸೂಚನಾ ೨

ಕುದರಿಸೈನ್ಯದಿಂದ ನಡದನು ಭಾಳ
ಬಿರುದಿನಾ ಕಾಳಿ ಊದುತಾ ತಾಳ ವಾದ್ಯವು
ಭಾಳ ನುಡುವುತಾ ಕೇಳಿಪುರದಲ್ಲಿ ಬಾಲಪುರುಷರು
ಮಾಳಿಗಿಯಲಿ ಭಾಳ ನಿಂತರು ೩

ಉತ್ತಮಾರ್ಯರು ಮತ್ತ ಸ್ತ್ರೀಯರು
ಹತ್ತಿ ಮಾಳಿಗಿ ಸುತ್ತ ನಿಂತರು
ಯೆತ್ತ ನೋಡಲು ರತ್ನ ಭೂಷಿತಾ
ಉತ್ತುಮಾ ಪುರಿ ಭರ್ತ ಪಾಲಿತಾ ೪

ಸಾಲು ಸಾಲಕೆ ವಿಶಾಲ ಮಂಟಪಾ
ಸಾಲ ದೀಪದಿ ಭಾಳ ಶೋಭಿಪಾ
ಸೆಲ (ಚೆಲ್ವ?) ಮುತ್ತಿನ ಸಾಲಯಳಿಗಳು ಮ್ಯಾಲ
ಮಲ್ಲಗಿ ಮಾಲಕಿಗಳು ೫

ಆರ್ಯಾ

ಮಂದ ಮಾರುತಾನಿಂದ ಭಾಳಮಕರಂದ
ಪುಷ್ಪದಾ ವಾಸನವು
ಮುಂದ ಪತಾಕಿಗಳಿಂದ ಕಣ್ಣಿಗೆ
ಛಂತ ತೋರಿಪಾ ಪಟ್ಟಣವು ೧

ವೇಗದಿಂದ ರಥ ಸಾಗಿಸಿ ಧ್ರುವ ಛಂ
ದಾಗಿ ನಡೆದನು ಪುರದೊಳಗೆ
ಬ್ಯಾಗ ಗೋಪುರದ ಬಾಗಿಲದಾಟಿ
ಪೋಗಿ ಕುಳಿತನು ಸಭಿಯೊಳಗೆ ೨

ಬಾಲನ ಕಂಡು ಭೂಪಾಲನು ಹಿಗ್ಗುತಾ
ಭಾಳಪುಟ್ಟಿ ಮನದುದ್ರೇಕಾ
ಕಾಲ ಮೂಹೂರ್ತದ ವ್ಯಾಳಯವು
ಸಾಧಿಸಿ ಬಾಲಗ ಮಾಡಿದ ನಭಿಷೇಕಾ ೩

ಕೊಟ್ಟರಾಜ್ಯವನು ಪಟ್ಟಗಟ್ಟಿ ಮುಂ
ದಿಟ್ಟ ಶಿಖಾ ಮುದ್ರಿಕಿಯನ್ನು
ಅಷ್ಟ ವಿಭೂತಿಗಳಷ್ಟು ಕೊಟ್ಟು ಸಂ
ತುಷ್ಟನಾದ ಭೂಪತಿ ತಾನು ೪

ಛಂದದಿ ದೇವರಿಗೊಂದಿಸಿ ಧ್ರುವ ಆ
ನಂದದಿ ಬ್ರಾಹ್ಮರಿಗೆರಗಿದನು
ತಂದಿ ತಾಯಿಗಳಿಗೊಂದಿಸಿ ಬಹುತ್ವರ
ದಿಂದ ಏರಿದಾ ಪೀಠವನು ೫

ಸುಂದರ ಸಭಿಯಲಿ ಬಂದು ಕೂಡಲು ದೇ
ವೇಂದ್ರನಂತೆ ಬಹು ಶೋಭಿಸಿದಾ
ಬಂಧು ಜನರಿಗ್ಯಾನಂದವ ತೋರುತ
ಚಂದ್ರಮನಂತೆ ಶೋಭಿಸಿದ ೬

ಝುಗಿಝುಗಿ ತೋರುವ ಬಗಿಬಗಿ ಕುಪ್ಪುಸ
ಬಿಗಿಬಿಗಿ ಇಂದಲಿ ತೊಟ್ಟವರು
ಲಗು ಬಗೆಯಿಂದಲಿ ನಗಿನಗಿ ಮಾತಿನ
ಸೊಗಸು ಗಾರಿಕೆ ಬಲ್ಲವರು ೭

ಥೊರಮುತ್ತು ಜರತಾರ ಮಯದ ಉಡ
ಗೊರಿ ತಂದರು ಆ ಜನರು
ಸಾರ ಸಿಂಹಾಸನಯೇರಿದ ಧ್ರುವನಿಗೆ
ಆರುತಿ ತಂದರು ನಾರಿಯರು ೮

ಮುತ್ತಚ್ಚಿದ ಹೊಸ ನತ್ತುಗಳಿಂದಲಿ
ಮತ್ತಿಷ್ಟೊಪ್ಪುವ ಮುಖದವರು
ವೃತ್ತ ಸ್ತನದಲಿ ಪುತ್ಥಳಿ ಸರಘುನ
ಮುತ್ತಿನ ಸರಗಳು ಉಳ್ಳವರು ೯

ಹತ್ತೊರಷುದ ಮ್ಯಾಲ್ಮತ್ತೆರಡೊರ್ಷದ
ಉತ್ತಮ ಪ್ರಾಯದ ಬಾಲಿಯರು
ಮತ್ತ ಕಾಲುಂಗರ ವತ್ತೊತ್ತಿ ನಡುವುತ
ಗತ್ತಿನಿಂದಲೆ ನಡುವುವರು ೧೦

ಪದ

ತಂದ್ರು ಆರುತಿ ಚಂದ್ರ ಮುಖಿಯಾರು
ತಂದ್ರು ಆರುತಿ ಬಹು ಸುಂದರ ಸುಗುಣೇರು ಪ

ಚಂದುಟಿ ಕಚ್ಚುತ ನಿಂದ್ರದ ಮದದ ಗ
ಜೇಂದ್ರ ಗಮನಿಯರು ಬಂದ್ರಾಗಲೇ ದೇ
ವೇಂದ್ರನ ಸಮರಾಜೇಂದ್ರನ ಸುತಗೆ ಅ.ಪ

ಬಣ್ಣಗಾರಿಕೆಯಲಿ ಸಣ್ಣಕುಂಕುಮನಿಟ್ಟ
ಕಣ್ಣಕುಡಿ ಹುಬ್ಬು ಕುಣಿಕುಣಿಸ್ಯಾಡುತ

ಹೆಣ್ಕೋಕಿಲ ಸ್ವರ ಸಣ್ಣಂತದಿ ನುಡಿ
ಸಣ್ಣದಿ ಪಾಡುತ ೧

ಕೈ ಬೆರಳಿಗೊಪ್ಪುವ ಹರುಳಿನುಂಗುರ ಇಟ್ಟವರು
ಯರಳಿಯಂತೆ ಹೊರಹೊರಳಿ ನೋಡಿ ಮುಂ
ಗುರುಳ ಗೂದಲಾ ತೀಡುವರು ಜಾಣಕಾಂತಿಯರು ೨

ಮೇಲ್ಮಾಟದ ಬಗಿಯುಲ್ಮಾತಾಡುತ
ಬಲ್ಮೋಹದಿ ಬಹು ಮೆಲ್ಲಮೆಲ್ಲನೆ ಹೆಜ್ಜೆ
ನೆಲ್ಲ ಮ್ಯಾಲಿಕ್ಕುತ ಸೊಲ್ಮುಡಿನೇವರಿಸಿ
ಮ್ಯಾಲ್ಮಲ್ಲಿಗಿ ಸರಗಳ ಮುಡಿಯವರು ೩

ಸದ್ರಸ ಕುಂಕುಮ ಮುದ್ರಾಂಕಿತ ಕುಚ
ಘದ್ರಿಸುತಲಿ ಬಹು ಉದ್ರೇಕದಿ 'ಅನಂತಾದ್ರೀಶನ'
ಮುದ್ರಿಕಿ ಪದಗಳು ಘದ್ರಿಸಿ ನುಡಿವುತಾ
ಭದ್ರಾಂಗಿಯರು ೪

ಪದ

ಮಂಗಳ ಮೂರುತಿ ಬಾಲಾಗೆ ಶ್ರೀ ನೃಪಾಲಾಗೆ
ಮಂಗಳ ಗುಣಶೀಲಾಗೆ ಮಂಗಳಮೂರುತಿ
ರಂಗಾನ ಭಕುತಗೆ ಹೆಂಗಳೆರೆಲ್ಲಾ ಕೂಡಿ
ಛಂದಾ ಬಗಿಯಿಂದಾ ಪ

ಶುಭದಿಂದಾ ಆನಂದದಿಂದಾ
ಅಂಬೂಧಿಯೊಳಗಾಡಿ ಗಂಭೀರಾಗಿರಿಪೊತ್ತಾ
ಜಾಂಬುನದಾಕ್ಷಾರಿ ವರ ಪ್ರಿಯಾಗೆ
ಗಂಭೀರಾ ನೃಸಿಂಹಾನ ನೆಂಬಿ ರಕ್ಷಿತ ನೀಗೆ
ರಂಭೇರು ಕರುಣಾದಿ ನೋಡಿ ಒಡಗೂಡಿ
ಕೊಂಡಾಡಿ ತ್ವರಗೂಡಿ ಪಾಡಿ ೧

ಧರಿಸಿ ವಾಮನರೂಪಾ ಪರಶು ಕೈಯಲಿಪಿಡಿದಾ
ಹರಿ ಸೇವಿಯನು ಮಾಡಿ ಬಂದಾವಾನಿಗೆ
ಸಿರಸಾ ರಾಮನ ಪಾದಾಸರಸಿಜಗಳಿಗೆರಗಿ
ಅರಸು ಆದಾವಾನೀಗೆ ಧೀರನಾರೇರು
ಶುಭಕರಾ ಕರ್ಪೂರಾ ಘೋರಾ ೨

ಕಾಂತೇರಾ ವ್ರತಗೆಡಿಸಿನಿಂತಾ ಬತ್ತಲೆ ಬಲವಂತಾ
ತೇಜಿಯ ಆರೂಢನಾದಾತಾಗೆ ಶಾಂತ ಮೂರುತಿ
'ಶ್ರೀ ಅನಂತಾದ್ರೀಶನ ' ದಯವಂತಾಗಾಯಿತು ಇಂದು
ಶ್ರೀಯಾ ಧ್ರುವರಾಯಾ ಗುಬ್ಬೇಯಾ ಜಯ ಜಯ ಜಯಾ ೩

ಪದ

ಲೋಕದೊಳಗ ಕೇಳಿದವರಿಗೀ ಕಥಿಯನು
ಸಾಕುವಾನು ಫಲವಕೊಟ್ಟು ಲೋಕ ಕಾಂತನು ೧

ಲಕ್ಷಿಯಿಂದ ಕೇಳಿದಾರ ಲಕ್ಷ್ಮೀ ವಲಿವಳು
ಅಕ್ಷಿಯಿಂದ ನೋಡಿ ಸಂರಕ್ಷಿಸುವಳು ೨

ನೇಮದಿಂದ ಕೇಳಿದಾರ ಕಾಮಜನಕನು
ಕಾಮಿತಾರ್ಥ ಫಲವ ಕುಡುವಾ ತಾ ಮಹಾತ್ಮನು ೩

ಚಿತ್ತ ಶ್ರಮ ಸಾಂಧ್ಯಾಗ ಧ್ರುವ ಚರಿತ್ರ ಕೇಳಲು
ಪುತ್ರಸಂತಾನ ಕುಡುವ ಮತ್ತ ಬೇಡಲು ೪

ಬೇಡಿದಂಥ ಫಲವ ಕೊಡುವಾ (ಕುಡುವಾ) ಪಾಡಿದವರಿಗೆ
ಬೇಡದಿರಲು ಕುಡುವಾ ಕೊಂಡಾಡಿದವರಿಗೆ ೫

ಭಕ್ತಿಯಿಂದ ಕೇಳಿದವರ ಭಕ್ತಿಗೊಲಿವನು
ಮುಕ್ತಿಗೊಡೆಯಾ ಮುಂದ ದಿವ್ಯ ಮುಕ್ತಿಕುಡುವನು ೬

ಅಂತರಂಗ ನೋಡಿ ಶ್ರೀ 'ಅನಂತಾದ್ರೀಶನು'
ಚಿಂತಿಯನ್ನು ಕಳದು ತಾಪ ಶಾಂತ ಮಾಡೋನು ೭

ಶ್ಲೋಕ

ಶ್ರೇಷ್ಠ ಶ್ರೀಧ್ರುವ ಚರಿತ್ರೆಯ ವರ್ಣಾ
ಕಷ್ಟದಿಂದಲಿ ಮಾಡಿದ ಕಾರಣಾ
ವಿಷ್ಣು ಆಗಲಿ ತಾ ದಯಪೂರ್ಣಾ
ಇಷ್ಟಕೆ ದ್ವಿತೀಯಾಧ್ಯಾಯ ಪೂರ್ಣಾ ೧

ಇತಿ ಶ್ರೀಮದ್ಭಾಗವತೆ ಚತುರ್ಥಸ್ಕಂಧೆ
ಧ್ರುವಚರಿತೆ ದ್ವಿತೀಯೋಧ್ಯಾಯಃ
ಶ್ರೀಗುರ್ವಂತರ್ಗತ ಶ್ರೀ ಕೃಷ್ಣಾರ್ಪಣಮಸ್ತು

ಶ್ರೀ ಪ್ರಹ್ಲಾದ ಚರಿತ್ರೆ

ಅಧ್ಯಾಯ ಒಂದು

ಪದ

ಆದಿಯಲಿ ಲಕ್ಷ್ಮೀಸಹಿತ ಪ್ರಹ್ಲಾದವರದನ ಪಾದಕೊಂದಿಸಿ
ಬೋಧನಿಧಿ ಮಧ್ವಾದಿ ಗುರುಗಳ ಪಾದಕೊಂದಿಸುತಾ
ಮೋದದಲಿ ಪೇಳುವೆನು ನಾನದ ನಾದರದಿ
ಕೇಳುವರ ಮನಕಾ
ಲ್ಹಾದ ಕೊಡುತಿರುವಂಥ ಶ್ರೀ ಪಹ್ಲಾದ ಚರಿತವನು ೧

ಒಂದು ದಿನ ವೈಕುಂಠದಲಿ ಹರಿಯಿಂದಿರಾ
ಸಹಿತಾಗಿ ಪರಮಾ
ನಂದದಿಂದ ವಿಹಾರ ಮಾಡುತ ಚಂದದಿಂದಿರಲು
ಬಂದರಾ ಕಾಲದಲಿ ಸನಕ ಸನಂದನಾದಿಗಳಲ್ಲೆ ಬೇಡೆಂ
ತೆಂದು ಆ ಜಯವಿಜಯರವನು ಹಿಂದುಕೊತ್ತಿದರು ೨

ಅಸಹಮಾನರು ಆಗಿ ಆಗಾ ಋಷಿಗಳವರಿಗೆ
ಮೂರುಜನ್ಮದೊ
ಳಸುರರಾಗಿರಿ ನೀವು ಹೀಗೆಂತೆಂದು ಶಾಪಿಸಲು
ವಸುಧೆಯಲಿ ಮುನ್ನವರು ಬಿಡದಲೆ
ಅಸುರರಾಘ್ಯುಟ್ಟಿದರು ಶಾಪದಿ
ಹುಸಿಯದಾಗದು ದೊಡ್ಡವರು ಕೋಪಿಸುತ ನುಡಿದದ್ದು ೩

ದಿತಿಯ ಸುತರಾಗ್ಯವರು ಮುಂದಕೆ ಪ್ರಥಿತರಾದರು
ಪೃಥಿವಿಯೊಳಗೆ ಪ್ರಥಮ ಹಿರಣ್ಯಕಶಿಪುವು ತಾ ಜಯ
ದ್ವಿತೀಯ ಹಿರಣ್ಯಾಕ್ಷಾ ಪೃಥಿವಿಯನು ಮುಣುಗಿಸಿದ ಕಾರಣ
ತೃತೀಯ ರೂಪದಿ ಹರಿಯು ಆತನ
ಅತಿರಭಸದಲೆ ಕೊಂದು
ಮತ್ತಾ ಪೃಥಿವಿಯನು ತಂದಾ ೪

ಆಸಮಯದಲಿ ಹಿರಣ್ಯಕಶಿಪು ಶ್ರೀಶನಿಂದಲೆ
ತನ್ನ ಅನುಜನ
ನಾಶವನು ಕೇಳುತಲೆ ಮನದಲಿ ಕ್ಲೇಶವನು ಪಟ್ಟು
ಶ್ರೀಸುರೇಶನ ಮೇಲೆ ಬಹಳಾಕ್ರೋಶದಿಂದಲೆ ನಡೆದ ತಪಸಿಗೆ
ದೋಷ ರಹಿತಾನಂತಾದ್ರೀಶನ ದ್ವೇಷಿತಾನಾಗಿ ೫

ವಚನ

ಇಂದ್ರಾದಿ ಸುರರು ಅಸುರೇಂದ್ರ ಹೋದದ್ದು
ಆ ಸಂಧಾನ
ತಿಳಿದು ತ್ವರದಿಂದ ಅಸುರರ ಬಳಿಗೆ ಬಂದು
ಯುದ್ಧವ ಮಾಡಿ
ಹಿಂದಕೆ ಸರಿಯದಲೆ ಬಂದ ಬಂದವರನ್ನು
ಕೊಂದುಹಾಕಿದರು
ಮುಂದೆ ಅಸುರರು ತಮ್ಮ ಮುಂದೆ ಬರುತಿರುವ
ಆ ಇಂದ್ರನಾ ಕಂಡು

ಭಯದಿಂದ ಯುದ್ಧವ ಬಿಟ್ಟು ಬಂಧು ಬಳಗಗಳನ್ನು
ಒಂದು ನೋಡದೆ
ಪ್ರಾಣ ಒಂದು ಉಳಿದರೆ ಸಾಕು ಯೆಂದು ಓಡಿದರು ೧

ಗಡಬಡಿಸಿ ರಾಜನ ಮಡದಿ ಅರಮನೆಯೊಳಗೆ
ಅಡಗಿರಲು ದೇವೇಂದ್ರ
ಹಿಡಿದು ವೈತಿರುವಾಗ ನಡುವೆ ನಾರದ
ಬಂದು ನಡತೆ ಕಂಡವನ
ಕೈಪಿಡಿದು ಮಾತಾಡಿದನು ನಡತೆಯಿಂದ
ಬಿಡು ಬೇಗ ಈಕೆಯ
ಬಿಡು ಮಹಾ ಪತಿವ್ರತೆಯನ್ನು ಹಿಡಿದರೀಗಲೆ
ನಿಮಗೆ ಕೆಡಕು
ಆಗುವದೆಂದು ಬಿಡಿಸಿ ಬೇಗನೆ ಅಭಯ
ಕೊಡುತೆಲ್ಲರ ಮುಂದೆ
ನುಡಿದನಾ ರಾಜನ ಮಡದಿಗೀಪರಿಯು ೨

ರಾಗ

ಅಂಜಬೇಡಂಜ ಬೇಡಮ್ಮಾ ನಾನಿನ್ನ
ಅಂಜಿಕೆಯ ಬಿಡಿಸುವೆನಮ್ಮಾ ಪ
ಗರ್ಭನಿನ್ನಲಿ ಇರುವುದಮ್ಮಾ ನಿನ್ನಲ್ಲಿ ಅರ್ಭಕನು
ಪುಟ್ಟುವನಮ್ಮಾ
ನಿರ್ಭಯವು ನಿನಗೆ ಕಾಣಮ್ಮಾ ಭಾವೀ
ಸಂದರ್ಭವನು ತಿಳಿಸುವೆನಮ್ಮಾ ೧

ಸ್ಮರನ ಸಮರೂಪನಿವನಮ್ಮಾ ಹಗಲಿರುಳು
ಸ್ಮರಿಸುವನು ಹರಿಗುಣಗಳಮ್ಮಾ
ಸ್ಮರಣೆ ಇನ್ನೊಂದಿಲ್ಲಮ್ಮಾ ಮತ್ತಿವನ ಸ್ಮರಿಸುವವರಿ
ಗಭಯ ಕಾಣಮ್ಮಾ ೨

ಅಂಥಿಂಥ ಮಗನಲ್ಲವಮ್ಮಾ
ಅಭಯದಾನಂತಾದ್ರೀಶನ ಭಕ್ತನಮ್ಮಾ
ಚಿಂತೆ ಮಾಡಲು ಬೇಡವಮ್ಮಾ ಇನ್ನು
ನಿಶ್ಚಿಂತೆಯಿಂದಲಿ ನೀನಿರಮ್ಮಾ ೩

ರಾಗ

ಗರ್ಭಿಣಿಯಿಂದಲಿ ಮುಂದ್ಹುಟ್ಟುವ ಅರ್ಭಕನಮರರು
ಕೇಳಿ ಅರ್ಭಾಟವು
ಬಿಡುವುತ ಸುಖಗರ್ಭವು ಧರಿಸಿದರು
ಗರ್ಭಿಣಿಯುದರದಲಿರುವಾ
ಗರ್ಭಕ್ಕೆ ನಮೋಯೆಂದು ನಿರ್ಭಯದಲಿ
ನಡೆದರು ಅರ್ಭಕನಾ ಸ್ಮರಿಸಿ ೧

ಮುಂದಾಕೆಗೆ ನಾರದನು ಚಂದದಿ ಅಭಯವ
ಕೊಟ್ಟು ತಂದೆಯ ಪರಿ
ಮಾಡುತ ಕರತಂದನು ಆಶ್ರಮಕೆ
ಮುಂದಾಕೆಯು ನಾರದನ
ಚಂದದಿ ಸೇವಿಸಿ ಬಹುದಿನ ಒಂದಿನದಲಿ
ಬೇಡಿದಳು ವಂದಿಸಿ ವರಗಳನ್ನು ೨

ಕ್ಷೇಮಾಗಲಿ ಗರ್ಭಕೆ ಪ್ರೇಮದಿ ಇಚ್ಛಾಪ್ರಸವವು
ಭೋ ಮಹಾ ಮುನಿಯೇ
ನೀ ನೇಮಿಸಿ ಕೊಡು ಈಯೆರಡು ಈ
ಮಾತನು ಕೇಳುತಲೆ ಆ
ಮಹಾ ಮುನಿ ನಾರದನು ಪ್ರೇಮದಿ ನುಡಿದನು
ಕೊಟ್ಟಕಾಮಿತ ವರಗಳನ್ನು ೩

ವರಹಿಡಿ ನೀ ಬೇಕಾದ್ದು ವರ ಕೊಡುವೆನು
ನಿನಗಿನ್ನು ಪರತತ್ವವ

ಪೇಳುವೆನಾ ಪರಮಾನಂದದಲಿ ಹರುಷದಿ
ನೀ ಕೇಳಮ್ಮಾ ಹರಿಮಹಿಮೆಯ
ಮನವಿಟ್ಟು ಹರಿಭಕ್ತರಿಗೆ ಇದು ಬಹು
ಹರುಷವ ಕೊಡುತಿಹುದು ೪

ಸರಸದಿ ಈ ಪರಿ ನುಡುವುತ ಸರಸಿಜ ಮುಖಿ
ಗರ್ಭದಲಿ ಇರುವನೆ
ಪರಮ ಶ್ರೋತಾಗಿರುವನು ಯೆಂತೆಂದು
ವರದಾನಂತಾದ್ರೀಶನ ಸ್ಮರಿಸುತ
ಆಕೆಯ ಮುಂದೆ ಪರಿಪರಿ ತತ್ವವ ಹೇಳಿದ
ಪರಮೇಷ್ಠಿಯ ಸುತನು ೫

ವಚನ

ದುಷ್ಟ ಹಿರಣ್ಯದೈತ್ಯ ಧಿಟ್ಟಾಗಿ ಮುಂದೆ ಉತ್ಕೃಷ್ಟ
ತಪವನು ಮಾಡಿ
ಶ್ರೀಷ್ಠರೊಳಗೆಲ್ಲರಿಗು ಶ್ರೇಷ್ಠನೆನಿಸುವನೆಂಬ ಗುಟ್ಟನ್ನು
ಮನಸಿನೊಳಗಿಟ್ಟು
ಮಂದರವೆಂಬ ಬೆಟ್ಟದಲಿ ಬಂದಾ ಕಷ್ಟದಲಿ
ಪಾದದುಂಗುಷ್ಠವನು
ಭೂಮಿಯಲಿಟ್ಟು ಆಮೇಲೆರಡು ಪುಷ್ಟ ಬಾಹುಗಳನ್ನು
ನೆಟ್ಟನೆ ಮೇಲೆತ್ತಿ
ದೃಷ್ಟಿ ಆಕಾಶದಲ್ಲಿಟ್ಟು ತಪಸಿಗೆ ತಾನು
ಘಟ್ಯಾಗಿ ನಿಂತಾ ೧

ಅವನ ಶಿರದಲಿ ಹುಟ್ಟಿದವನಗ್ನಿ ತಾಮೆಲ್ಲಗವನಿ
ಸುಡತಲೆ ಸಕಲ
ಭುವನ ವ್ಯಾಪಿಸಿ ಮತ್ತವನ ಹೊಗೆಯಿಂದ
ಕಣವಿದು ಮುಚ್ಚಿತು

ಲೋಕವವನ ಅಂಗುಷ್ಠದಿಂದವನಿ ನಡುಗಿದಳು
ಅವನ ಭಯದಲಿ
ಬಿದ್ದವನಯಲಿ ತಾರೆಗಳು ಅವನ ಭಯದಲಿ
ತಮ್ಮ ಭವನ
ಬಿಡುತಲಿ ಸತ್ಯ ಭುವನಪನ ಮೊರೆಹೊಕ್ಕು
ಅವನ ಮುಂದು ಸುರಿದರು
ಅವನ ಕಥೆಯಾ ಸಕಲ ಭುವನ ಪಾಲಕರೂ ೨

ರಾಗ

ಮೊರೆಯ ಕೇಳೋ ನೀನು ಬ್ರಹ್ಮದೇವಾ
ಮೊರೆಯ ಕೇಳೋ ನೀನು ಪ

ಮೊರೆಯ ಕೇಳು ಬ್ರಹ್ಮನೆ ಹಿರಣ್ಯ ಕಶಿಪು
ಕೋಪವ ಧರಿಸಿ
ಮೂಜಗ ಸಂಹರಿಸುವನಯ್ಯ ಅ.ಪ

ದಿಟ್ಟ ಕೇಳವನ ವಿಶಿಷ್ಟ ಕಥೆಯ ಪಾದಾಂಗುಷ್ಟದಿಂದಲಿ
ಭೂಮಿ ಮೆಟ್ಟಿನಿಂತಿ-
ರುವಾ ಕ್ರೂರಾಗಿರುವಾ ಕ್ರೂರಾಗಿರುವಾ
ಮಂದರಾದ್ರಿಯಲ್ಲಿರುವಾ ೧

ಅಪರಾಧಿ ತಾ ಸರ್ವಾಧಿಪನಾಗಬೇಕೆಂದು
ಉಪವಾಸದಿಂದುಗ್ರ ತಪಸಿ
ನಲ್ಲಿರುವಾ ಘೋರ ಬಡುವಾ ಘೋರಬಡುವಾ
ಲೋಕಗಳನೆಲ್ಲ ಸುಡುವಾ ೨

ಘೋಷಿಸು ನಮ್ಮನು ತೋಷದಿ ನೀ ಅವ
ರೋಷದಿ ಮಾಡುವಾ
ದ್ವೇಷ ನಮ್ಮಲ್ಲೆ ನಿತ್ಯದಲ್ಲೆ ನಿತ್ಯದಲ್ಲೆ ಅನಂತಾದ್ರೀಶನಲ್ಲೆ ೩

ವಚನ

ಸತ್ಯ ಲೋಕಾಧಿಪನು ಸತ್ಯವಾಗಿರುವ ಆ ದೈತ್ಯ
ಮಾಡುವ ಚರ್ಯಾ
ಚಿತ್ತಿಟ್ಟು ಕೇಳುತಲೆ ಉತ್ತಮಾಸನ ಬಿಟ್ಟು
ಹತ್ತಿತಾ ಹಂಸವನು ಸತ್ವರದಿ
ಬಂದನಾ ದೈತ್ಯ ನಾಶ್ರಮಕೆ ದೈತ್ಯ ದೇಹವ
ಕಂಡು ನೆತ್ತಿಯಾ ಮೇಲಗ್ನಿ
ಮತ್ತು ಹೊಗೆ ಹೊರಡುವದು ಹುತ್ತು
ಬೆಳದಿಹದಲ್ಲೆ ಸುತ್ತಲೆ
ಇರುವೆಗಳು ಮುತ್ತಿಹುದು ತಾ ಕಾಣು ತೊತ್ತಿ
ನುಡಿದನು ಬ್ರಹ್ಮದೈತ್ಯ ಗೀಪರಿಯ ೧

ರಾಗ

ಏಳು ಏಳು ಏಳು ಬೇಗನೆ ಹಿರಣ್ಯಾ ಕಶಿಪು
ಏಳು ಏಳು ಏಳು ಬೇಗನೇ ಪ

ಏಳು ಏಳು ಏಳು ಬೇಗ ಕೇಳು ಎನ್ನ
ಮಾತು ನಿನ್ನ ಭಾಳ ತಪಸಿಗಾಗಿ
ನಾನು ಭಾಳ ಮೆಚ್ಚಿದೆನೋ ಇನ್ನು ಅ.ಪ

ನಿತ್ಯ ತಪದಿ ದಿವ್ಯನೂರು ವತ್ಸರಗಳು
ಹೋದುವಯ್ಯಾ ಮತ್ತು ತಪಸಿ
ನಲ್ಲಿ ನೀನು ಚಿತ್ತಮಾಡಬೇಡ ಬಿಟ್ಟು ೧

ಏನು ಬೇಕೋ ಬೇಡೋನೀನು ನಾನು
ಕೊಡುವೆನು ವರಗಳನ್ನು ದಾನವೇಶ
ಎನ್ನ ನೋಡು ಮೌನಬಿಟ್ಟು ಮಾತನಾಡು ೨

ಬಲ್ಲಿದಾನಂತಾದ್ರೀಶನಲ್ಲಿ ಸಿಟ್ಟು ಮಾಡಿ ಬಂದೆ
ಬಲ್ಲಿದವನೋ ನೀನು ಬೇಡಿ
ದ್ದೆಲ್ಲ ನಾನು ಕೊಡುವೆ ನಿನಗೆ ೩

ವಚನ

ಚೆನ್ನಾಗಿ ಹೀಗೆಂದು ಚೆನ್ನಿಗ ಚತುರ್ಮುಖನು
ಮನ್ನಿಸಿದನಾ ದೇಹವನ್ನು
ನೋಡುತ ದಯದಿ ತನ್ನ ಕಲಶದಲ್ಲಿದ್ದ
ಘನ್ನದಿವ್ಯೋದಕದಿ ಚೆನ್ನಾಗಿ
ಪ್ರೋಕ್ಷಿಸಿದ ಧನ್ಯನಾಗೆಂದು ಮುನ್ನ ತತ್ಕಾಲದಲಿ
ಘನ್ನ ದೈತ್ಯನು ಎದ್ದು
ಚಿನ್ನದಂಥಾ ದೇಹವನ್ನು ಧಾರಣಮಾಡಿ
ಮುನ್ನನತಿ ಸ್ತುತಿಮಾಡಿ
ಚೆನ್ನಾಗಿ ನುಡಿದನು ಹಿರಣ್ಯಗರ್ಭಗೆ ಆ
ಹಿರಣ್ಯ ಕಶಿಪಿಂತು ೧

ರಾಗ

ಸುರವರ ಎನಗೆ ನೀ ವರಕೊಡು ನಿನ್ನಿಂದ
ಮರಣ ಬೇಡಾ ಧರೆಯೊಳು
ನಿನ್ನಿಂದುಟ್ಟಿರುವ ಪ್ರಾಣಿಗಳಿಂದ ಮರಣಬೇಡಾ ೧

ಒಳಗೆ ಹೊರಗೆ ಮತ್ತು ಸುಳಿದಾಡುತಿರುವಾಗ
ಮರಣ ಬೇಡ ಇಳೆ
ಯೊಳೆನಗಾಕಾಶದೊಳೆನಗೆ ಮತ್ತು ಮರಣ ಬೇಡಾ ೨

ಹಗಲು ಇರಳು ಮತ್ತು ಬಗೆಬಗೆ ಜನರಿಂದ
ಮರಣ ಬೇಡಾ
ಮೃಗಗಳೊಗ್ಗೆಚ್ಚಿನ ಮೃಗಗಳಿಂದಾದದರು ಮರಣ ಬೇಡಾ ೩

ಸುರರಿಂದ ಮತ್ತು ಅಸುರರಿಂದ ಬರುವಂಥ
ಮರಣಬೇಡಾ ನರರಿಂದ
ವಿಷವುಳ್ಳ ಹರಿವ ಹಾವುಗಳಿಂದ ಮರಣ ಬೇಡಾ ೪

ಶಸ್ತ್ರಗಳಿಂದಲಿ ಅಸ್ತ್ರಗಳಿಂದಲಿ ಮರಣಬೇಡಾ
ವಿಸ್ತಾರವಾದ ದೇ
ವಾಸ್ತ್ರಗಳಿಂದಲಿ ಮರಣಬೇಡಾ ೫

ಸಂತಸದಿಂದಲಿ ನಿಶ್ಚಿಂತಿಯೆನಗೆ ಕೊಡು
ಮಗಣಬೇಡಾ ಅಂತಕ
ನಾದ ಅನಂತಾದ್ರೀಶನ ಮುಂಚೆ ಸ್ಮರಣೆ ಬೇಡಾ ೬

ರಾಗ

ಹೀಗೆಂದು ನುಡಿ ಕೇಳಿ ಆಗಲೆ ಬ್ರಹ್ಮಾ
ಹಾಗೆ ಆಗಲಿ ಎಂದು ಸಾಗಿದತಾನು
ಆಗೆದ್ದು ಮದವೇರಿದ ನಾಗೇಂದ್ರನಂತೆ ಬೇಗ ಮನೆಯಲಿ
ಬಂದಸಾಗಿ ದೈತ್ಯೇಂದ್ರಾ ೧

ಬಂದಾ ಸುದ್ದಿಯ ಕೇಳಿ ಮಂದಗಮನೆಯಳ
ತಂದು ಒಪ್ಪಿಸಿದಾತಗೆ
ಚಂದಾಗಿ ಮುನಿಯು ಹಿಂದಾದುದೆಲ್ಲಾತನ ಮುಂದೆ ತಿಳಿಸಿದನು
ಮುಂದಾ ಸ್ಥಳವನು ಬಿಟ್ಟು ಬಂದಾ ಸ್ವಸ್ಥಳಕೆ ೨

ಆ ಮೇಲಾ ದೈತ್ಯೇಂದ್ರನು ಆ ಮಾನಿನಿಯಲ್ಲಿ
ನೇಮಿಸಿ ಮಗ ಹುಟ್ಟಿದ
ತಾ ಮಹಾಮಹಿಮಾ ಆ ಮಹಾತ್ಮರಿಗೆಲ್ಲಾ ಪ್ರೇಮವಾಯಿತು
ಬಹಳಾ ನಾಮಾವಿಟ್ಟರು ಆತಗೆ ನಾಮಾಂಕಿತರೆಲ್ಲಾ ೩

ಅಲ್ಲಾತನ ಕರೆದರು ಎಲ್ಲಾರು ಕೂಡಿ
ಪ್ರಹ್ಲಾದಯೆಂತೆಂದು ಆಹ್ಲಾದ

ದಿಂದಾ ಎಲ್ಲಾರ ಮನಸಿಗೆ ಆಹ್ಲಾದ ಕೊಡುವಾ ಚೆಲ್ವಚಂದ್ರಮನಂತೆ
ಮನೆಯಲ್ಲೆ ಬೆಳೆವಾ ೪

ಅನ್ಯರಾದವರನ್ನು ತನ್ನಂತೆ ತಿಳಿವಾ ಮಾನ್ಯರಾದವರನ್ನು
ಮನ್ನಿಸುತಿರುವಾ
ಚೆನ್ನಾಗಿ ವಂದಿಸಿ ಮುನ್ನ ಹಿಗ್ಗಿರುವಾ ಧನ್ಯನಾದೆನು
ಎಂದು ತನ್ನನ್ನು ತಿಳಿವಾ ೫

ಕಂದರಾಡುವ ಲೀಲೆಯೊಂದು ನೋಡರಿಯಾ
ನಂದಕಂದನ ಲೀಲೆ-
ಯನೆಂದಿಗು ಮರೆಯಾ ಮಂದಮತಿ
ಜನರನ್ನು ಮುಂದಲ್ಲೆ
ಕರೆವಾ ತಂದೆಯಂತಲಿ ಬೋಧಿಸಿ ಸಂದೇಹ ಕಳೆವಾ ೬

ದೀನ ಜನರ ಕಂಡು ದಾನಿಯಾಗಿರುವಾ ಹೀನಜನರ ಕಂಡು
ಮೌನದಿಂದಿರುವ ನಾನಾ ವಿಷಯಗಳಲ್ಲಿ ಧ್ಯಾನಬಿಟ್ಟಿರುವಾ
ಅನಂತಾದ್ರೀಶನ ಧ್ಯಾನಿಸುತಿರುವಾ ೭

ರಾಗ

ಎಷ್ಟು ಪೊಗಳಲಿ ನಾನು ಪ್ರಹ್ಲಾದ ಚರಿತವ
ಬಹಳವಿರುದಿನ್ನು ಪ
ಎಷ್ಟು ಪೊಗಳಲಿ ಶ್ರೇಷ್ಠ ಚರಿತ ಯಥೇಷ್ಟವಿರುವದು ಸ್ಪಷ್ಟ
ವಾಗ್ಯದು ಶಿಷ್ಟ ಜನರು ಯಥೇಷ್ಟ ಕೂಗುತಲೆಷ್ಟು
ಪೇಳಿದರಷ್ಟು ತೀರದು ಅ.ಪ

ಕೆಲವುಕಾಲದಲಾತಾ ಬಿಕ್ಕಳುವ ಹರಿಗುಣ
ತಿಳಿಯದಲೆ ಪ್ರಖ್ಯಾತಾ
ಮತ್ತೆಲವು ಕಾಲಕೆ ತಿಳಿದು ನಗುತಿಹನಾತಾ
ಮತ್ತೆಲವು ಗಾಯನಗಳನು

ಮಾಡುವನಾತಾ ಬಲು ಹೆಚ್ಚಿನಾತಾ ಕೆಲವು
ಜನರಿಗೆ ಒಲೆವ ಪುಣ್ಯದಫಲ
ವ ಕೊಡುವನು ನಲಿವ ಹರುಷದಿ ಹಲವು
ಇಂದ್ರಿಯ ಗೆಲುವ ಪೌರ್ಣಮಿ
ಚಲುವ ಚಂದ್ರನ ಪೋಲುವನವನು ೧

ಆ ಮಾತುಗಳೆಲ್ಲಾ ಓಡ್ಯಾಡಿ ಮನೆಯಲಿ
ಮಾಡ್ವ ಕೆಲಸಗಳೆಲ್ಲಾ ಸವಿಮಾಡಿ
ಯೆಲ್ಲರು ಕೂಡಿ ಉಂಬುವದೆಲ್ಲಾ ತಾ ಮಾಡಿಸುವ
ಹರಿ ಮಾಡುವನು ನಾನಲ್ಲಾ
ಹೀಗಾಡಿಸೊಲ್ಲಾ ಕೂಡುವಾಗ್ಮಾತಾಡುವಾಗ್ತಿರು
ಗಾಡುವಾಗೋಡಾಡಿ ಭೋಜನ
ಮಾಡುವಾಗ ಸುಗಾಢ ಹರಿಸ್ಮೃತಿ ಮಾಡುತಲೆ
ಕೊಂಡಾಡುತಿರುವನು ೨

ಅಂಥ ಇಂಥವನಲ್ಲಾ ಅವನಂಥವರು ಬೇಕಂತ
ಹುಡುಕಿದರಿಲ್ಲಾ ಎಂಥೆಂಥ
ವಿಷಯದ ಭ್ರಾಂತಿಯಾತಗೆ ಇಲ್ಲಾ ಅನಂತಾದ್ರೀಶನ
ಚಿಂತನದ ಬಗೆ ಬಲ್ಲಾ
ಸಂಶಯನೆ ಇಲ್ಲಾ ಇಂಥ ಮತ್ತಿರುವಂಥ
ಗುಣಗಳು ಯೆಂಥ
ವರು ಹೀಗೆಂತ ಹೇಳರು ಪ್ರಾಂತದಲಿ ನಾನಂತು
ಪಾಮರ ಪಂಥ ತಿಳಿಯದೆ ಶ್ರಾಂತನಾದೆನು ೩

ವಚನ

ಒಂದಿನವು ಬಿಡದಲೆ ವಂದಿಸುತ ಬಹುಭಕ್ತಿಯಿಂದ
ಪ್ರಹ್ಲಾದನಾ ಚಂದ

ವಾದುತ್ಪತ್ತಿ ಚಂದಾಗಿ ಕೇಳಿದರೆ ಕಂದರಾಗುವರು
ಆ ಕಂದನಂಥವರಿಗೆ
ಸಂದೇಹವಿಲ್ಲಾ ಬಂದ ಭಯ ಓಡುವದು
ಬಂಧನವು ಕಡಿಯುವುದು
ಮುಂದಕಾಗುವುದು ಆನಂದ ವೃಷ್ಟಿಯು ಸತ್ಯ
ಮುಂದನಂತಾದ್ರೀಶನಿಂದಲ್ಲೆ
ನಿರ್ವಿಘ್ನದಿಂದ ಮುಗಿದಿತು ಇಲ್ಲಿಗೊಂದು ಅಧ್ಯಾಯ ೧

ಅಧ್ಯಾಯ ಎರಡು

ರಾಗ

ಮುಂದೆ ದಿತಿಜಾಧಿಪನು ತಾನು ಕ್ರಮದಿಂದ
ಭೂಲೋಕವನು ಜೈಸುತ
ಮುಂದೆ ಸ್ವರ್ಗಲೋಕವನು ಸಾಗಿದನಮಿತ
ಬಲದಿಂದಾ ಇಂದ್ರನೇ ಮೊದಲಾದ
ಸುರರನು ಚಂದದಿಂದಲೆ ಗೆದ್ದು ನಂತರ ಬಂದು ಕುಳಿತನು
ಬೇಗಾ ದೇವೇಂದ್ರ ನಾಸನಕೆ ೧

ಸ್ವರ್ಗಪುರದಲಿ ರಾಜ್ಯ ಮಾಡಿದನಗ್ರಗಣ್ಯ ಹಿರಣ್ಯಕಶಿಪು
ಉಗ್ರಶಾಸನ ಮಾಡು
ತಿರುವನು ದೀರ್ಘ ಕಾಲದಲಿ ಉಗ್ರದೈತ್ಯನು
ಮಾಡುವಂಥಾ ಉಗ್ರಶಾಶನ
ಕಂಜಿ ವಿಬುದರು ವ್ಯಗ್ರರಾಗುತ ಮೊರೆಯ ಹೊಕ್ಕರು
ಶೀಘ್ರದಿಂ ಹರಿಗೆ ೨

ಕಂತುಜನಕಾನಂತ ಮಹಿಮಾನಂತ ಜನರನು
ಬಿಡದೆ ದಯದಿ ಅನಂತ

ಕಾನಂತ ಸ್ಥಳದಿ ನೀ ನಿಂತು ಸಲಹುವಿಯೋ
ಇಂಥ ಕಾಲಕೆ ಎಲ್ಲಿ
ಇರುವಿಯೋ ಎಂತ ಪ್ರಾರ್ಥನೆ ಮಾಡುವಾಗ
'ಅನಂತಾದ್ರೀಶನೆ ' ನಿಂತು
ನುಡಿದನು ಅಂತರಿಕ್ಷದಲಿ ೩

ರಾಗ

ಅಂಜಬೇಡಿರಂಜ ಬೇಡಿರೋ ನೀವಿನ್ನು ಮೇಲೆ ಪ

ಅಂಜಬೇಡಿರಂಜ ಬೇಡಿ ರಂಜಿಕ್ಯಾಕ ನಿಮ್ಮ ಹೃದಯ
ಪಂಜರದೊಳಗಿರುವೆ
ನಿಮ್ಮನಂಜಿಸುವನ ಭಂಜಿಸುವೆನು ಅ.ಪ

ಮುಂದೆ ಹಿರಣ್ಯಕಶಿಪು ತನ್ನ ಕಂದ ಪ್ರಹ್ಲಾದನಲ್ಲಿ
ಎಂದು ದ್ವೇಷ ಮಾಡುವನೋ
ಅಂದಿಗವನ ಕೊಂದು ಬಿಡುವೆ ೧

ನನ್ನ ದ್ವೇಷ ಬ್ರಹ್ಮದೇಷ ನನ್ನ ಭಕ್ತರಲ್ಲಿ
ದ್ವೇಷವನ್ನು ಮಾಡಿದವನು
ಉಳಿಯ ಮುನ್ನ ಬಹಳ ದಿವಸ ಸತ್ಯ ೨

ಸಿದ್ಧನಾಗಿ ನಾ ಅನಂತಾದ್ರಿಯಲ್ಲಿದ್ದರೇನು ಮುದ್ದು ಮುಖದ
ಪ್ರಹ್ಲಾದ ಇದ್ದ ಸ್ಥಳದಲ್ಲಿರುವೆ ನಾನು ೩

ವಚನ

ಮೇಲಸ್ವರದಿಂದಲೆ ಮೇಲೆ ನುಡಿದಿರುವಂಥ
ಶ್ರೀ ಲಲಾಮನವಾಣಿ ಕೇಳಿ
ಅಮರರು ಹರ್ಷ ತಾಳಿ ದೈತ್ಯನು ಇನ್ನು ಮೇಲೆ
ಉಳಿದವನಲ್ಲ ಕಾಲ

ಬಂತೆಂದರಾಕಾಲದಲ್ಲಿ ಲೇಸಾಗಿ ಇರುವ ದುಶ್ಶೀಲ
ಹಿರಣ್ಯಕನಿಂದ ಬಾಲ
ಪ್ರಹ್ಲಾದನಾ ಮೇಲೆ ದ್ವೇಷವದಾವ
ಕಾಲಕಾಗುವದೆಂದು ಕಾಲವನು
ನೋಡುತಲೆ ಕಾಲಗಳೆದರು ಲೋಕಪಾಲಕರು ಎಲ್ಲಾ ೧

ರಾಗ

ಅಕ್ಕರದಿಂದಲಿ ರಾಜ ಚಿಕ್ಕ ಪ್ರಹ್ಲಾದನ ಶಂಡಾಮರ್ಕರಾ
ಕೈಯಲಿಕೊಟ್ಟು
ನಕ್ಕು ನುಡಿದಾನು ೧

ಮುದ್ದು ಪ್ರಹ್ಲಾದ ನಿಮ್ಮಿಂದ ವಿದ್ಯಾವಂತನಾಗಿ
ಇರಲಿ ಬುದ್ಧಿವಂತನಾಗಲಿ
ಪ್ರಸಿದ್ಧನಾಗಲಿ ೨

ಎಲ್ಲ ಮಾತು ಕೇಳಿ ಮನೆಯಲ್ಲಿ ಅವರು ಬಂದು
ಆಗ ಪ್ರಹ್ಲಾದನ್ನ
ಕರದ್ಹೇಳಿದರು ಆಹ್ಲಾದದಿಂದಾ ೩

ಮತ್ತು ಉಳಿದ ಬಾಲಕರಿಗೆ ಅತ್ಯಂತ
ಸಂಭ್ರಮದಿಂದ ಉತ್ತಮ ಶ್ರೀ
ಹರಿನಿಂದಾ ಶಾಸ್ತ್ರ ನುಡಿದರು ೪

ನೀತಿ ಶಾಸ್ತ್ರವನ್ನು ಚಪಲಮಾತಿನಿಂದ ಪೇಳಿದರು ಪ್ರೀತಿಯಿಂದ
ತ್ರೈವರ್ಗಿಕ ಶಾಸ್ತ್ರ ನುಡಿದರು ೫

ಕಿವಿಯಿಂದ ಕೇಳಿ ಪ್ರಹ್ಲಾದ ಸವಿದು
ಪಾಠಮಾಡಲಿಲ್ಲ ಸವಿದು ಹರಿ

ಚರಿತಾಮೃತವನ್ನು ಸವಿ ಇನ್ನೊಂದನರಿಯಾ ೬

ಅವನೆಲ್ಲನು ಮುರಿದು ಮತ್ತೆ ಅವರಿಗೆ
ನುಡಿದನು ಅವನು ನವನೀತ
ಧಾಂಗಿರುವಂಥಾದು ನವವಿಧ ಭಕ್ತಿ ೭
ಅವರೊಂದು ಮಾತಾಡಿ ತಾನೊಂದು ಮಾತಾಡುತಿಹ
ಅವರಿಗೆ ಮತ್ತಾರಿಗಾದರು ಅವನಂಜುವನಲ್ಲಾ ೮

ಕೆಲವುಕಾಲ ಹೀಗ್ಹೋಯಿತು ಹಲವು ಕಾಲದಲ್ಲಿ
ಅವನು ಚಲುವ
ನಂತಾದ್ರೀಶನಲ್ಲೆ ಛಲ ಬಿಟ್ಟನಲ್ಲಾ ೯

ವಚನ

ಒಂದಾನೊಂದು ದಿನ ತಂದೆ ಹಿರಣ್ಯಕ ದೈತ್ಯ
ಕಂದ ಪ್ರಹ್ಲಾದನಾ ಮುಂದಕ್ಕೆ
ಕರೆದು ಬಹು ಚಂದಾಗಿ ತೊಡೆಯಲಿ ಮುಂದೆ
ಕೂಡಿಸಿಕೊಂಡು ಮಂದ
ಹಾಸದಿ ನಗುತ ಅಂದನ್ಹೀಗೆ ಕಂದಯ್ಯ ನೀನೆನ್ನ
ಮುಂದ್ಹೇಳು ಇಷ್ಟುದಿನ
ಚಂದಾಗಿ ಬರೆದದ್ದು ಮುಂದೆ ಮತ್ತೋದಿದ್ದು
ಒಂದು ಬಿಡದಲೆ ಹೀಗೆ
ಅಂದ ಮಾತಿಗೆ ಮತ್ತೆ ಕಂದ ಪ್ರಹ್ಲಾದ ಹೀಗೆಂದನಾಗ ೧

ರಾಗ

ಬರೆಯಲಿಲ್ಲ ಓದಲಿಲ್ಲವೋ ಅಪ್ಪಯ್ಯ ನಾನು ಪ

ಬರೆಯಲಿಲ್ಲ ಓದಲಿಲ್ಲ ಹರಿಯ ಭಕ್ತನಾಗಿ ನಾನು
ಹರಿಯ ನಿಂದಿಸುವ
ಶಾಸ್ತ್ರ ಬರೆಯಲ್ಹ್ಯಾಗೆ ಓದಲ್ಹ್ಯಾಗೆ ಅ.ಪ

ಹರಿಯ ಗುಣಗಳನ್ನು ಕೇಳುವೆ ಮತ್ಸರುಷದಿಂದ
ಹರಿಯ ಗುಣಗಳನ್ನು
ಪೇಳುವೆ ನಾ ಬಾಳುವೆ ಹರಿಯ ಸ್ಮರಣೆ
ಮಾಡುವೆನು ಹರಿಯಪಾದ
ಸೇವಿಸುವೆನು ಹರಿಯ ಪೂಜಿಸುವೆ ಮತ್ತೆ
ಹರಿಯ ವಂದಿಸುವೆ ನಿತ್ಯಾ ೧

ಮನಸು ಮುಂಚೆ ಸ್ಥಿರವು ಅಲ್ಲವೋ
ಅಂಥಾದು ಎನ್ನ ಮನಸು
ಹರಿಯ ಬಿಟ್ಟು ಇಲ್ಲವೋ ಸುಳ್ಳಲ್ಲವೋ
ಮನಸಿಲ್ಲೆ ವಿಷಯಗಳನ್ನು
ನೆನೆಸುವರನ ನೆನೆಸಲರಿಯೆ ಕನಸಿನಲ್ಲಿ ಮನಸಿನಲ್ಲಿ
ನೆನೆಸುವೆ ಸುಹರಿಯ ರೂಪಾ ೨

ಕಂತು ಪಿತನದಾಸ ನಾನು ಅವನೆನಗೆ ಅತ್ಯಂತ
ಗೆಳೆಯನಾದ ತಾನು
ಮತ್ತೇಳೋದೇನು ಸಂತತಾನಂತದ್ರೀಶ
ಅಂತರಂಗದಲ್ಲಿ ತಾನು ನಿಂತು
ಪ್ರೇರಿಸುವ ಅಂತರಂಗದಂತೆ ಇರುವೆ ೩

ವಚನ

ಇಷ್ಟು ಮಾತಿಗೆ ದೈತ್ಯ ಶ್ರೇಷ್ಠ ಗುರುಗಳ ಮೇಲೆ
ಸಿಟ್ಟು ಮಾಡುತಲಿಂಥ
ಕೆಟ್ಟ ಬುದ್ಧಿಯವನಿಗೆ ಕೊಟ್ಟವರುದಾರಲ್ಲಿ
ಥಟ್ಟನ್ಹೇಳಿರಿಯೆನಲು ಥಟ್ಟ
ನ್ಹೇಳಿದರವನ ಸಿಟ್ಟಿಗಂಜಿ ದಿಟ್ಟರಾಜನೆ ಕೇಳು ದಿಟ್ಟಾಗಿ
ನಾವಲ್ಲ ಕೊಟ್ಟವರು

ಇವಗೆ ಇದು ಹುಟ್ಟು ಬುದ್ಧಿಯ ಹೊರತು
ಕೊಟ್ಟ ಬುದ್ಧಿಯು ಅಲ್ಲ
ಘಟ್ಯಾಗಿ ತಿಳಿಯೆನಲು ದಿಟ್ಟ ಪ್ರಹ್ಲಾದ ತಾ ಸ್ಪಷ್ಟ ನುಡಿದಾ

ರಾಗ

ಕೇಳಿರಿ ನೀವೆಲ್ಲ ಭಾಳ ಭಕುತಿಯಲಿ ಕೇಳಿರಯ್ಯಾ ಪ

ಬಾಳ ಮಾತುಗಳೇಕೆ ಹೇಳುವೆ ಸಾರಾಂಶ ಕೇಳಿರಯ್ಯಾ ಅ.ಪ

ಹುಟ್ಟು ಬುದ್ಧಿಯು ಅಲ್ಲ ಕೊಟ್ಟ ಬುದ್ಧಿಯು
ಅಲ್ಲ ಕೇಳಿರಯ್ಯಾ ದಿಟ್ಟಾಗಿ ಶ್ರೀ
ಹರಿಯು ಕೊಟ್ಟ ಬುದ್ಧಿಯು ಇದು ಕೇಳಿರಯ್ಯ ೧

ಸೂಜಿಗಲ್ಲಿನಿಂದ ಸೂಜಿ ತಿರುಗಿದಂತೆ ಕೇಳಿರಯ್ಯಾ
ಶ್ರೀ ಜಗದೀಶನಿಂದೀ
ಜಗ ತಿರಗೋದು ಕೇಳಿರಯ್ಯಾ ೨

ನಾನಾ ಮಾತುಗಳೆಲ್ಲ ನಾನೆ ಆಡುವನಲ್ಲ ಕೇಳಿರಯ್ಯಾ
ಅನಂತಾದ್ರೀಶನು ತಾನೆ ಆಡುವದು ಕೇಳಿರಯ್ಯಾ ೩

ವಚನ

ನುಡಿಯ ಕೇಳೀ ಪರಿಯ ಒಡೆಯ ಹಿರಣ್ಯಕ
ದೈತ್ಯ ಅಡಿಯಿಟ್ಟು ನೀತಿಯಲಿ
ನಡೆಯದಂಥಾ ಮಗನ ಪಡೆಯಬಾರದುಯೆಂದು
ಕಿಡಿಗಣ್ಣಿನೊಳು ನೋಡಿ
ತಡೆಯದಲೆ ನೂಕಿದನು ತೊಡೆಯ ಮೆಲಿಂದಾ
ಒಡಲೊಳಗೆ ಸಿಟ್ಟಿನಲಿ

ಮಿಡುಕುತಲೆ ಮನದಲಿ ಒಡಕ್ಹುಟ್ಟಿ ಮಗನಲ್ಲಿ
ದೃಢವಾಗಿ ಇರುವಂಥ
ಕಡು ಸ್ನೇಹ ಪಾಶವನು ಕಡು ದ್ವೇಷ ಖಡ್ಗದಲೆ ಕಡಿದು
ಭೃತ್ಯರುಗಳಿಗೆ ನುಡಿದನೀಪರಿಯ ೧

ರಾಗ

ಬಿಡಬೇಡಿರೋ ಬಡಬೇಡಿರೋ ಬಿಡದೆ ಖಡ್ಗದಿಂದ
ಕಡಿದ್ಹಾಕಿರೀತನ ॥ಪಲ್ಲ॥
ಮಗನಲ್ಲ ಇವನೆನಗೆ ಅರಿಯಾಗಿ ಇರುತಿಹ ಬಗೆ
ಬಗೆ ದುಷ್ಟಮಾತುಗ-
ಳಾಡುತಿರುವನು ಹಗಲು ಇರಳುಯೆನಗೆ ಅರಿಯಾದ
ವಿಷ್ಣುವ ಸೊಗಸಾಗಿ ಪೂಜಿಸಿ ನಗುತಿಪ್ಪನ ೧

ಸತತದಲ್ಲಿ ತನಗ್ಹಹಿತ ಮಾಡುತಿರುವನು
ಸುತನಾಗದಿದ್ದರೂ ಸುತನವನೆ
ಅತಿರಭಸದಲೆ ವಿಶ್ರುತವಾಗಿ ಹುಟ್ಟಿದ ವಿತತರೋಗ
ತನಗ್ಹಿತವಾಗಿರುವದೇನು ೨

ಮಾನಿತನೆಂದನು ಮಾನ ಮಾಡದೆ ನೀವು
ನಾನಾರೀತಿಗಳಿಂದ ಹಾನಿಯ
ಮಾಡಿರಿ ಮಾನಿತ ರಕ್ಕಸ ಹಾನಿ ಮಾಡಿರುವಂಥ
ಅನಂತಾದ್ರೀಶನ ಧ್ಯಾನದಲ್ಲಿರುವನ ೩

ರಾಗ

ಹೀಗೆಂದು ಭೃತ್ಯರನೆಲ್ಲಾ ಕರಸಿದಾ ಮತ್ತು
ಆಗೆಲ್ಲ ಮಂದಿಗಳನ ನೆರಸಿದಾ ೧

ಖಡ್ಗದಿಂದ ಪ್ರಹ್ಲಾದನ ಕಡಿಸಿದಾ ಹರಿ ತಾ ಖಡ್ಗ
ಮುರಿದು ಅವನ ಭಯ ಬಿಡಿಸಿದಾ ೨

ಆನೆಯ ಕಾಲಿಗೆ ಕಟ್ಟಿ ಎಳೆಸಿದಾ ಅವನಾ ದೀನನಾಥ
ಹರಿಯು ಬಂದು ಉಳಿಸಿದಾ ೩
ಸರ್ಪಹಿಂಡು ತರಿಸಿ ಅವನ ಕಡಿಸಿದಾ ಮತ್ತು
ಸರ್ಪಶಯನ ಬಂದು ಭಯವಾ ಬಿಡಿಸಿ ೪

ವಿಷವ ತಂದು ಯತ್ನದಿಂದ ಕುಡಿಸಿದಾ ಹರಿ ತಾ
ವಿಷವಮೃತ ಮಾ
ಡಿ ಸೌಖ್ಯ ಬಡಿಸಿದಾ ೫

ಬೆಟ್ಟದ ಮೇಲಿಂದ ಕೆಳಗೆ ನೂಕಿದಾ ಅವನ
ಘಟ್ಯಾಗ್ಹಿಡಿದು ಶ್ರೀಹರಿ ಸಾಕಿದಾ ೬

ವಾರಿಧಿಯೊಳಗ್ಹಾಕಿ ಘೋರಿಸಿದಾ ಅವನ ವಾರಿಧಿಶಯನ
ತಾನೆ ತಾರಿ ಸಿದಾ ೭

ಅಗ್ನಿಯೊಳಗೆ ಹಾಕಿ ಸುಡಸಿದಾ ಅವಗೆ ಅಗ್ನಿ
ಶೀತಾಗಿ ಸೌಖ್ಯ ಬಡಿಸದಾ ೮

ನಾನಾರೀತಿಯಿಂದಲವನನು ಸರಿಸಿದಾ ಅಚ್ಯುತನಂತಾದ್ರೀಶನು
ಸೌಖ್ಯ ಸುರಸಿದಾ ೯

ವಚನ

ದಾನವೇಂದ್ರನು ದೈತ್ಯತಾನೆ ದಣಿವುತಲಿನ್ನದೇನು
ಮಾಡಿದರಿವಗೆ
ಹಾನಿ ಇಲ್ಲವು ಮತ್ತೆ ಏನು ಮಾಡಲಿ
ಇನ್ನದೇನು ಪಾಯವುಯೆಂದು

ಧ್ಯಾನಿಸುತ ಕುಳಿತು ಬಹುದೀನವಾಗಿ
ಮಾನಿತರು ಗುರುಗಳಾ ದಾನವೇಂದ್ರ
ಗೆ ಸಮಾಧಾನ ಮಾಡಿದರು ಹೇ ದೀನನಾಥನೆ
ನೀನು ದೀನನಾಗುವದು
ಇನ್ನೇನು ಈತಗೆ ಬುದ್ಧಿ ತಾನೆ ಬರುವದು
ಮುಂದೆ ನೀನು ತಿಳಿಯೊ ೧

ಆಡುತೀಪರಿ ಮಾತ ಪ್ರೌಢ ಗುರುಗಳು ಮತ್ತೆ
ಕೂಡಿ ಬಾಲಕರಿಂದ ನೋಡಿ
ಪ್ರಹ್ಲಾದನೊಡಗೂಡಿ ಮುಂದವರಿಗೆ
ಮಾಡಿಸಿರಧ್ಯಯನ ಗಾಢನೇ
ಸ್ನೇಹಸಂರೂಢನಾಗಿ ಮಾಡಿಸುತಲಧ್ಯಯನ
ಬೇಡವಿಲ್ಲಿಗೆ ಸಾಕು ಮಾಡಿ
ರೆಂತೆಂದವರು ಕೂಡತದಲೆ ಪೋಗುತಿರೆ
ಆಡಬೇಕೆಂದು ಕುಣಿದಾಡಿ
ದರು ಬಾಲಕರು ನೋಡಿ ಪ್ರಹ್ಲಾದ
ಮಾತಾಡಿದನು ಹೀಗೆ ೨

ರಾಗ

ಬೇಡಿರೋ ಬಾಲಕರಿರಾ ಆಡುವ ಆಟಗಳೆಲ್ಲ ಪ
ಗಾಢನೆ ನೀವೆಲ್ಲ ನಾ ಮಾತಾಡುವಂಥಾದು ಕೇಳಿರೋ ಅ.ಪ

ನೋಡಿರೋ ನಿಮ್ಮಂಥವರು ಆಡಿಕೆಟ್ಟು ಹೋದರಯ್ಯಾ
ಮಾಡಿರೋ ಮುಕ್ತಿ
ಸಾಧನ ಮಾಡೆನೆಂದರ ಮುಂದಿಲ್ಲಾ
ನೋಡಿರೋ ಆಯು ಸ್ಥಿರವಲ್ಲಾ
ಓಡುತಿಹವು ದಿನಗಳು ಪ್ರೌಢ ಶಂಡಾಮರ್ಕರಿವರು
ಆಡಿದ ಮಾತುಗ

ಳಿಂದ ಗಾಢನೆ ಸಂಸಾರವೆಂಬೋ ಬೇಡಿಯು
ತಪ್ಪದು ನಿಮಗೆ ಬೇಡಿ
ಬಿದ್ದವರಿಗೆ ಸೌಖ್ಯ ಬೇಡಿದರೆ ಬರುವದುಂಟೆ
ಬೇಡದಿದ್ದರು ದುಃಖ
ವು ಗಾಢನೆ ಬರುವದು ಹೇಗೆ ಬೇಡದೆ ಅದರಂತೆ
ಸೌಖ್ಯಗಾಢನೆ ಬರುವುದು ತಾನೆ ೧

ಸಕಲ ಪ್ರಾಣಿಗಳಲ್ಲಿ ಸುಖವ ಚಿಂತಿಸಿರಿ ನೀವು
ಸಕಲರಲ್ಲಿರುವ ಹರಿ ಸುಖವ
ಕೊಡುವನು ನಿಮಗೆ ಭಕುತಿ ಮಾಡಿರೋ
ನೀವು ಭಕುತವತ್ಸಲನಲ್ಲಿ
ಭಕುತಿ ಮಾಡಿರೋ ಮತ್ತು ಸಕಲಹರಿ
ಭಕುತರಲ್ಲಿ ಭಕುತಿಯಿಂದ
ಧ್ರುವರಾಯಾ ಮುಕುತಿ ಪಡೆದನು ಮತ್ತು
ಭಕುತಿಗೆ ಸರಿಯಲ್ಲಾ ಸಕಲ
ಸಾಧನಂಗಳು ವಿಕಟ ಇಂದ್ರಿಯಗಳೆಲ್ಲಾ
ನಿಕಟದಲ್ಲಿಟ್ಟುಕೊಂಡು ಶಕಟಾ
ರಿಯ ಕಥೆಯ ಕೇಳಿ ಪ್ರಕಟ ಮಾಡಿರೋ ಮುಂದೆ ೨

ತುಚ್ಛ ವಿಷಯಂಗಳಲ್ಲೆಲ್ಲ ಇಚ್ಛೆ ಮಾಡಬೇಡಿರೋ
ಇಚ್ಛೆಯಿಂದ ಫಲವಿಲ್ಲ
ಹೆಚ್ಚು ದುಃಖವೆ ಮತ್ತು ಇಚ್ಛೆ ಬಿಟ್ಟರೆ ಸೌಖ್ಯ
ಹೆಚ್ಚು ಮತ್ತಿಷ್ಟು ನಿಮಗೆ
ಕುಚ್ಛಿತ ಅಸುರಭಾವ ತುಚ್ಛ ಮಾಡಿರೋ
ನೀವು ನಿಶ್ಚಲವಾಗಿರುವಂಥಾ
ಸ್ವಚ್ಛ ಭಕುತಿಯಿಂದಲಿ ಅಚ್ಯುತಾನಂ ತಾಪರೆ
ಸಚ್ಚಿದಾನಂದಾಯೆಂದು

ಉಚ್ಚ ಸ್ವರದಿಂದಲೆ ಉಚ್ಚಾರವ ಮಾಡಿರೋ
ಅಚ್ಯುತಾನಂತಾದ್ರೀಶಾ ಮೆಚ್ಚುವನು ಇದರಿಂದ ೩

ವಚನ

ಪ್ರಹ್ಲಾದನುಪದೇಶಕಾಹ್ಲಾದ ಬಟ್ಟವರು ಬಲ್ಲಿದವ
ನೀನು ನಾವೆಲ್ಲರು ಈ
ಗುರುಗಳಲ್ಲೆ ಓದಿದೆವು ನಮಗಿಲ್ಲವೀ ಜ್ಞಾನ
ನಿನಗೆಲ್ಲಿಂದ ಬಂತೆನಲು
ಪ್ರಹ್ಲಾದ ನುಡಿದಾ ಸುಳ್ಳಲ್ಲವಿದು ಪೂರ್ವದಲ್ಲಿ
ನಾರಾಯಣನು ಎಲ್ಲವನು
ನಾರದಗೆ ಅಲ್ಲೆ ಪೇಳಿದನು ಮತ್ತಿಲ್ಲಿ ಮಾತೆಯ
ಗರ್ಭದಲ್ಲಿ ನಾನಿರುವಾಗ
ಬಲ್ಲಿದಾ ನಾರದನದೆಲ್ಲ ಪೇಳ್ದನೆನಗೆ ೧

ಸರವಾಗಿ ಬಾಲರೀ ಪರಿಯ ಕೇಳುತ
ಮುಂದೆ ಹರಿಭಕ್ತ ಪ್ರಹ್ಲಾದ
ಗುರುವಾದ ನಮಗೆಂದು ಹರುಷದಲೆ ತತ್ವ
ಸ್ವೀಕರಿಸಿ ಶಂಡಾ ಮರ್ಕ
ಗುರುಗಳುಪದೇಶವನು ಮರೆತರಾಗ ಸರಸಾದ
ಈ ಕಥೆಯ ಸರಸಾಗಿ ಕೇಳಿದರೆ
ದುರಿತ ದುರಾಗುವದು ಪರತತ್ವ
ತಿಳಿಯುವದು ಧೊರೆಯನಂತಾ
ದ್ರೀಶ ಧರಿಸುವನು ತಾನಿವನ ತ್ವರದಿಂದ
ಮುಗಿದುದಿಲ್ಲೆರಡು ಅಧ್ಯಾಯ ೨

ಅಧ್ಯಾಯ ಮೂರು

ವಚನ

ಭಾಗವತರೊಳು ಮಹಾಭಾಗವತ
ಪ್ರಹ್ಲಾದ ಹೀಗೆ ಬಾಲಕರಿಗ್ಹೇ
ಳುವಾಗ ಕೇಳುತಲದನು ಬೇಗಶಂಡಾಮರ್ಕ–
ರ್ಹೋಳಗಿ ಹೇಳಿದರು ಚಂದಾಗಿ
ಅರಸಗೆ ಭೀತರಾಗಿ ವಿಸ್ತರಿಸಿ ಹೀಗೆ ಕೇಳುತ
ದೈತ್ಯನಾಗಲಾಕ್ಷಣದಲ್ಲಿ ಬೇ
ಗ ಹಿಡತನ್ನಿರವನೀಗ ಕೊಲ್ಲುವೆನೆಂದು
ಆಗ ಪ್ರಹ್ಲಾದನಾ ಬೇಗ
ಕರೆ ಕಳಿಸುತಲೆ ಹೀಗೆಂದ ಕ್ರೋಧ ಭರಿತನಾಗಿ ತಾನು ೧

ರಾಗ

ಆವಾತ ಬಲ ನಿನಗೆ ಏ ಪ್ರಹ್ಲಾದ
ಆವಾತ ಬಲನಿನಗೆ ಪ

ಆವಾತ ಬಲಹೇಳೊ ನನ್ಹೊರತು ದೇವಾದಿಗಳಿಗೆಲ್ಲ
ನಾನೊಬ್ಬನೆ ಬಲ ಅ.ಪ
ಕುಲಗೇಡಿಯೆನಿಸುವೆಯೋ ನೀ ಮಗನಾಗಿ
ಕುಲಭೇದ ಮಾಡುವಿಯೋ
ಕುಲದೊಳಗ್ಹೆಚ್ಚಿನ ಕುಲ ನಮ್ಮದು ಇಂಥಾ ಕುಲದಲ್ಲಿ
ಹುಟ್ಟಿ ನೀಕುಲಕಂಟನಾದ್ಯೋ ೧

ಹುಡುಗ ನೀನೊಬ್ಬನಲ್ಲಾ ನಿನ್ನಿಂದೆಲ್ಲ ಹುಡುಗರು
ಕೆಟ್ಟರಲ್ಲಾ ಕಡುದೈತ್ಯ
ಕುಲವೆಂಬೊ ದೃಢವಾದ ಚಂದನ ಗಿಡಗಳೊಳಗೆ
ಜಾಲಿಗಿಡನಾಗಿ ಹುಟ್ಟಿದ್ಯೋ ೨

ಸಡಗರದಿಂದ ನೀನು ಆ ವನದಲ್ಲಿಯೊಡಹುಟ್ಟಿ
ಇದ್ದರೇನು ಬಿಡದೆ ಆ
ಗಿಡಗಳ ಕಡಿವ ಅನಂತಾದ್ರಿಯೊಡೆಯನೆಂಬುವಂಥ
ಕೊಡಲಿಗೆ ಕಾವಾದ್ಯೋ ೩

ವಚನ

ಸುರಸಿಕನು ಪ್ರಹ್ಲಾದನರಸಿಕನು ಆದಂಥ ಆರಸ
ನಾ ಮಾತುಗಳು ವಿರಸಾದ
ಕಾಲಕ್ಕೆ ಸರಸ ವಚನಗಳಂತೆ ಸರಸಾಗಿ ಕೇಳುತನು
ಸರಿಸಿ ಅವನಲಿ ಸ್ನೇಹ
ಬೆರಸುತಲೆ ಮುಂದೆ ಸ್ಮರಪಿತನ ಮನಸಿನಲಿ
ಸ್ಮರಿಸಿ ಅವನಲಿ ಭಕ್ತಿಸುರ
ಸಿ ನಿರ್ಭಯದಿಂದ ಸರಸಾದ ವಚನಗಳ
ಹರುಷದಿಂದಲಿ ನುಡಿದ ಹರಿ
ಭಕ್ತ ಪ್ರಹ್ಲಾದ ಹಿರಿಯನಾಗಿರುವಂಥ ಹಿರಣ್ಯ ಕಶಿಪುವಿಗೆ

ರಾಗ

ಅವನೆ ಎನಗೆ ಬಲವೊ ಅಪ್ಪಯ್ಯಾ
ಅವನೆ ಎನಗೆ ಬಲವು ಪ

ಅವನೆ ಎನಗೆ ಬಲ ಅವನೆ ನಿನಗೆ ಬಲ ಅವನೆ
ಶ್ರೀ ವೈಕುಂಠ ಭುವನಕ್ಕೆ ಒಡೆಯಾ ಅ.ಪ

ಬಲವಂತರಿಗೆ ಬಲ ಹೀನರಿಗೆ ಬಲ ಕುಲವಿಲ್ಲದವನೆಲ್ಲ
ಕುಲಗಳಿಗೊಡೆಯ ೧

ಅವನೆ ಚತುರ್ದಶ ಭುವನ ಸೃಷ್ಟಿಯ ಮಾಡಿ
ಅವನೆ ಪಾಲಿಸಿ ನಾಶವನು
ಮಾಡುವಾ ಅವನ ಸರಿಯು ಇಲ್ಲ ಅವಗ್ಹೆಚ್ಚಿನವರಿಲ್ಲ
ಅವನೆ ಸರ್ವೋತ್ತಮನವನೆ ಎನ್ನೊಡೆಯಾ ೨

ಬಿಡು ಅಸುರಭಾವ ಹಿಡಿ ಆತನಪಾದ ಬಿಡದೆ
ಸರ್ವರಲ್ಲಿ ಇಡು ಸ್ನೇಹವ
ಕಡೆಗೆ ಆತನ ಪಾದ ಹಿಡದರೆ ಬೇಡಿದ ಕೊಡುವ
ಅನಂತಾದ್ರಿಗೊಡೆಯ ನಾಗಿರುವಾ ೩

ರಾಗ

ಮಗನ ಮಾತು ಕೇಳಿ ನುಡಿದನು ದೈತ್ಯ
ಮಗನಮೇಲೆ ಖಡ್ಗ ಹಿಡಿದನು ೧

ಎಂಥಾ ಮಾತಾಡಿದಿ ಎಲೋ ನೀನು ನಾನೆಂಥ
ಮಾತಾಡಿದ್ದೇಳೆಲೊ ನೀನು ೨

ಹರಿಯನ್ನೇ ಕೊಂಡಾಡುವೆಯಲ್ಲಾ ಆಹರಿಯ ಹೊರತು
ಗತಿಯೆನಗಿಲ್ಲಾ ೩

ಕಡಿದು ಬಿಡುವೆ ನಿನ್ನನ್ನು ನಾನು ಹಿಂದೆ ಕಡಿದೇನು
ಮಾಡಿದಿ ಎಲೋ ನೀನು ೪

ಕಂಡಂತೆ ಮಾತಾಡುವೆ ನೀನು ನಿನ್ನ
ಕಂಡಂಜುವನಲ್ಲವೆಲೊ ನಾನು ೫

ಜೀವದ ಭಯ ನಿನಗಿಲ್ಲವೇನೊ ಯೆನ್ನ ಜೀವ
ಸ್ಥಿರವೆಂಬುದನರಿಯೆಯೋ ೬

ಜೀವ ನಿನ್ನದು ತಾನೆಲ್ಲಿಹುದು ಎನ್ನ ಜೀವ
ಶ್ರೀಹರಿವಶವಾಗಿಹುದು ೭

ಹರಿಯು ಇರುವ ಸ್ಥಳವಾವುದು
ಅವನಿದಿರುವಾ ಸ್ಥಳವಾವುದು ೮

ಸಭೆಯೊಳಗೂ ಅವನಿರುವ ನೇನು ಇದ್ದು ಅಭಯವ
ಕೊಡುವ ನೆನಗವತಾನು ೯

ಕಂಬದೊಳಗು ಅವನಿರುನೇನು ಹೀಗೆಂಬುವ
ಮೂರ್ಖ ತಿಳಿ ನೀನು ೧೦

ಪ್ರಕಟಾಗಿ ಚೋರಬಲ್ಲನು ಲೇಶಾ ಇಲ್ಲೆ
ಪ್ರಕಟನಾಗುವ ಅನಂತಾದ್ರೀಶಾ ೧೧

ವಚನ

ನುಡಿಕೇಳಿ ಬಾಲಕನ ಕಡುಪಾಪಿ ದೈತ್ಯ ತಾ
ದೃಢವಾದ ಕಂಬವನು ದೃಢಮುಷ್ಠಿ
ಯಿಂದಲೆ ಹೊಡೆದನಾಕ್ಷಣದಿ ಖಡಖಡವೆಂದು
ಕಡುಶಬ್ಧ ತಡವಿಲ್ಲ
ದಲೆ ಕಂಬವೊಡೆದ್ದುಟ್ಟಿ ಬ್ರಹ್ಮಾಂಡ ಒಡೆದು
ಹೋಯಿತು ಒಳಗೆಹಿಡಿ
ಸಲಾರದೆಯೆ ಕಡು ಶಬ್ಧ ಕೇಳಿ ಎದೆಯೊಡೆದು
ಬ್ರಹ್ಮಾದಿಗಳು ಪೊಡ
ವಿ ಪಾಲಕರೆಲ್ಲ ಗಡಬಡಿಸಿ ಪ್ರಳಯವಿದು
ನಡುವೆ ಬಂದಿತು ಎಂದು
ನಡುಗುತಲೆ ಸ್ವಸ್ಥಾನ ಬಿಡುತೊಡನೆ
ಸಿಕ್ಕಲ್ಲೇ ಅಡಗಿದರು ಆಗ
ದಿಟನಾದ ಪ್ರಹ್ಲಾದನ್ನಟ ಗೆಲಿಸಬೇಕೆಂದು
ಪಟುತರ ಶ್ರೀಹರಿಯುಕುಟಿ
ಲದಿ ಸುತಗೆ ಸಂಕಟವ ಬಿಡಿಸುವ
ಮಹಾಕಠಿನ ನರಮೃಗನಾಗಿ
ಸ್ಫುಟಿತವಾದ ಕಂಬದಲಿ ಸ್ಫುಟನಾಗಿ ಮಹಾಮಹಾ
ಭಟರು ಇರುವಲ್ಲೆ ಆರ್ಭ

ಟಿಸುತಲೆ ಬಂದಾ ಸಿಂಹನಂತಲಿ ಮುಖವು
ಸಂಹನನ ನರನುನರ ಸಿಂಹ
ನಾಕೃತಿ ಗಿರಿಯ ಗಂಹ್ವರದ ಪರಿಬಾಯಿ
ಜಿಹ್ವೆನಲಿದಾಡುವದು
ಸಿಂಹಗರ್ಜನಕೆ ನರಸಿಂಹನೆದುರಿಗೆ
ದೈತ್ಯಸಿಂಹ ನಡುಗಿದನು

ರಾಗ

ಧೈರ್ಯಮಾಡಿ ದೈತ್ಯ ಹರಿಚರ್ಯ ನೋಡಿದಾ
ಶೌರ್ಯದಿಂದ ಯುದ್ಧವೆಂಬೋ ಕಾರ್ಯ ಮಾಡಿದಾ ೧

ಗದೆಯ ಕೈಯಲ್ಹಿಡಿದು ಹರಿಯ ಎದೆಗೆ ಹೊಡೆದನು
ಗದೆಯ ಸಹಿತ ಕೈಯ ಹರಿಯು ವದಗಿ ಹಿಡಿದನು ೨

ಬಿಡಿಸಿಕೊಂಡು ಬೇಗ ದೈತ್ಯನಡೆದ ಹಿಂದಕೆ
ಖಡಗಚರ್ಮ ಹಿಡಿದು ಬಂದ ನಡೆದು ಮುಂದಕ್ಕೆ ೩

ಸೊಕ್ಕಿನಿಂದ ಬರುವ ಅವನ ತೆಕ್ಕಿಲ್ಹಿಡಿದನು
ತಕ್ಕವಾಗಿರುವ ಹೊಸ್ತಿಲಕ್ಕೆ ನಡೆದನು ೪

ಅಲ್ಲೆ ಅವನಭಾರ ತೊಡೆಗಳಲ್ಲೆ ತಾಳಿದಾ ಎಲ್ಲ ನಖಗಳಿಂದ
ಹೃದಯದಲ್ಲಿ ಸೀಳಿದಾ ೫

ಕರುಳಬಗೆದು ಮಾಲೆಮಾಡಿ ಕೊರಳಿಗ್ಹಾಕಿದಾ ದುರುಳನನ್ನು
ಕೊಂದು ಎಲ್ಲ ಸರಳ ಮಾಡಿದಾ ೬

ಸೃಷ್ಟಿಕರ್ತ ಮೊದಲು ಮಾಡಿ ಆಷ್ಟು ವಿಭುದರು ಸ್ಪಷ್ಟವಾಗಿ
ಸ್ತುತಿಸಿ ಪುಷ್ಪವೃಷ್ಟಿಕರೆದುರು ೭

ಜಯ ಜಯವೆಂದು ಶಬ್ದಮಾಡಿ ಜಯವ ಪಡೆದರು
ಭಯನಿವಾರಣನ ದಯದಿ ಭಯವ ಕಳೆದರು ೮

ದೇವದುಂದುಭಿಗಳ್ಹರುಷ ಭಾವದಿಂದಲಿ ಕೇವಲಾಗಿ
ನುಡಿದವಾಗ ತೀವ್ರದಿಂದಲಿ ೯

ಘನತರಾದ ಗಂಧರ್ವರೆನಿಪರೆಲ್ಲರು ಮನಕೆ ಹರುಷನಾದ
ಗಾಯನವ ಮಾಳ್ಪರು ೧೦

ನೃತ್ಯಮಾಡಿದರು ಸ್ತ್ರೀಯರು ಯತ್ನದಿಂದಲಿ ಮತ್ತೆ ಸಂಗೀತ
ಸಾಹಿತ್ಯದಿಂದಲಿ ೧೧

ನಾರಸಿಂಹ ಮೂರ್ತಿ ನೋಡಲಾರೆಲ್ಲರೂ ಘೋರರೂಪ
ಕಂಡು ದೂರ ನಿಂತರು ೧೨

ಭ್ರಾಂತರಾದರೆಲ್ಲ ಎಂತೆಂಥ ಭಕ್ತರು
ಸಂತತಾನಂತದ್ರೀಶನಂತ ತಿಳಿಯರು ೧೩

ವಚನ

ಈ ರೀತಿ ಕಥೆಯನ್ನು ಆರು ಭಕ್ತಿಯಲಿ
ಸಂಪೂರ್ಣ ಕೇಳ್ವರೂ ಅವರು
ದೂರವಿದ್ದರು ದುರಿತ ದೂರ ಮಾಡುತ ಬೇಗ
ತೋರುವನು ಪ್ರತ್ಯಕ್ಷ
ಕಾರುಣ್ಯ ನಿಧಿಯು ಶ್ರೀನಾರಸಿಂಹಾ
ಚಾರ್ವನಂತಾದ್ರೀಶ ನಾರಸಿಂಹನು
ಆಗಿ ಗೀರ್ವಾಣರಭಿಲಾಷೆ ಪೂರ್ಣ
ಮಾಡಿರುವಲ್ಲಿ ಪೂರ್ಣವಾಯಿ
ತು ವಿಘ್ನ ಬಾರದಲೆ ನರಸಿಂಹ ಮೂರುತಿಯ
ದಯದಿಂದ ಮೂರು ಅಧ್ಯಾಯ ೧

ಅಧ್ಯಾಯ ನಾಲ್ಕು

ವಚನ

ಮುಂದೆ ಬ್ರಹ್ಮಾದಿಗಳು ಇಂದಿರಾದೇ
ವಿಗ್ಹೀಗೆಂದು ಮಾತಾ
ಡಿದರು ಇಂದು ಶ್ರೀಹರಿ ಸಿಟ್ಟಿನಿಂದ
ಕುಳಿತಿರುವ ನೀ ಮುಂದ್ಹೋ
ಗಿ ಶಾಂತಮಾಡೆಂದು ಪ್ರಾರ್ಥಿಸಲು ಆ
ಮಂದ ಗಮನೆಯು ತಾನು
ಮಂದರಧರನ ಮೋಹಿಸುತಲೆಂದು ಈ
ಕಾರ್ಯ ನನ್ನಿಂದ ಆಗದು
ವಲ್ಲೆನೆಂದಳಾಗ ಮುಂದೆ ಪ್ರಹ್ಲಾದಗ್ಹೋಗೆಂದು
ಕಳುಹಿಸಲವನು
ಬಂದು ಬೇಗನೆ ಭಕ್ತಿಯಿಂದ
ಹರಿಚರಣಾರವಿಂದಲಿ ಸಾಷ್ಟಾಂಗ
ವಂದನವ ಮಾಡಿದನು ಮುಂದವನ
ತಲೆಯ ಮೇಲೆ ಚಂದಾಗಿ ಕೈಯಿ
ಟ್ಟು ಇಂದಿರಾರಮಣನೇಳೆಂದು ಎಬ್ಬಿಸಿದಾಗ ಕಂದ
ಪ್ರಹ್ಲಾದ ಹೀಗೆಂದು ಪ್ರಾರ್ಥಿಸಿದಾ ೧

ರಾಗ

ದಯಮಾಡೊ ಹರಿಯೆ ದಯಮಾಡೊ ಪ

ದಯಮಾಡ್ಹರಿಯೆ ಅಭಯಕೊಟ್ಟು ನೋಡೋ ಅ.ಪ

ನಾರಸಿಂಹನೆ ನಿನ್ನ ಮೋರೆಗಂಜುವನಲ್ಲ ಕ್ರೂರವಾದ
ನಿನ್ನ ಕೋರೆಗಂಜುವ
ನಲ್ಲ ಶ್ರೀರಮಣನೆ ಸಂಸಾರ ಚಕ್ರಕ್ಷುರ ಧಾರೆಗಂಜುವೆನು
ಪಾರುಮಾಡೋ ೧

ಹುಂಕೃತಿ ನಿನ್ನ ಭಯಂಕರ ರೂಪಕೆ ಶಂಕಿತನಾಗಿ
ಭಯಾಂಕಿತನಲ್ಲವೋ
ಶಂಕಿಸಿ ನನ್ನ ಅಹಂಕೃತಿಯಿಂದ
ಭಯಾಂಕಿತನಾದೆನು ಶಂಕಿಸಬೇಡೋ ೨

ಹೃದಯ ಭೇದಿಸವ ಷಡ್ವಿಧ ವೈರಿಗಳೆನ್ನೆದುರಿಗೆ
ಬೀಳದೆ ಕದನ
ಮಾಡುವರಯ್ಯಾ ಎದೆಯಾಡೆದಂಜಿ ನಾಗದಗದ
ನಡುಗವೆ ಒದಗಿ
ಬೇಗನೆ ಬಂದು ಬದಿಯಲಿ ಕೂಡೋ ೩

ಹಿರಯರ ಬಲದಿಂದ ಮೆರೆವ ಮಕ್ಕಳು
ಮಾಳ್ಪ ಪರಮಪರಾಧವ
ಸ್ಮರಿಸುವದೇನವರು ಧರೆಯೊಳಗೆಲ್ಲರಿಗ್ಹಿರಿಯನೇ
ನಾನಿನ್ನ ಮರೆತರು
ನೀನೆನ್ನ ಮರೆಯಲು ಬೇಡವೋ ೪

ಸ್ಮರಣಿಲ್ಲದೆ ನಾಸ್ಮರಸಿ ವಿಷಯಂಗಳ ಮರೆತು
ನಿನ್ನಡಿಗಳ ಮರಗುವೆ
ಮನದೊಳು ವರದ ಅನಂತಾದ್ರಿಧೊರೆಯೆ ಎಂದೆಂದಿಗು
ಮರೆಯದಂಥ ವರತ್ವರದಲಿ ನೀಡೋ ೫

ವಚನ

ಈ ಪರಿಯ ಸ್ತುತಿಕೇಳಿ ಶ್ರೀಪತಿಯ ತನ್ನಲ್ಲಿ
ವ್ಯಾಪಿಸಿರುವಂಥ ಆಕೋಪ
ವನ್ನು ಬಿಟ್ಟುತಾ ಪಾಪಿ ಜನರನುಸರಿಸಿ
ಕೋಪವದು ಆಜಗದ್ವ್ಯಾಪ
ಕನ ಮೈಯಲ್ಲಿ ವ್ಯಾಪಿಸುವದುಂಟೇ
ಶ್ರೀಪತಿಯ ಸೇವೆಯಲಿ

ವ್ಯಾಪಕವಾಗಿರುವಂಥ ಭೂಪ ಪ್ರಹ್ಲಾದನಾ
ವ್ಯಾಪರಕ್ಷಿಗ್ಗುತ ನಿಶಾಪತಿ
ಯ ಕಿರಣಕೆ ಅಕೂಪಾರನಂತೆ ಹರಿತಾ
ಪ್ರಸನ್ನನಾಗುತಲೆ ಈ ಪರಿಯ ನುಡಿದಾ ೧

ರಾಗ

ಹಿಡಿ ನೀ ವರವಾ ಹಿಡಿ ನೀ ವರವಾ
ದೃಢವಾಗಿರುವಾ ಪ

ಕಡು ಪ್ರಹ್ಲಾದನೆ ಬಿಡುಸಂಶಯವಾ ಅ.ಪ

ಆಮಯ ಕಡಿವೆ ಪ್ರೇಮದಲ್ಲಿಡುವೆ ಕಾಮಿತಫಲಗಳು
ನೇಮಿಸಿ ಕೊಡುವೆ ೧

ನನ್ನ ಕಂಡವರು ಧನ್ಯರಾಗುವರು ಮುನ್ನ ಈ ಧರೆಯಲಿ
ಮಾನ್ಯರಾಗುವರು ೨

ಸಿಟ್ಟು ಬಿಟ್ಟಿರುವೆ ತುಷ್ಟನಾಗಿರುವೆ ದಿಟ್ಟ ಅನಂತಾದ್ರಿ
ಬಿಟ್ಟು ಬಂದಿರುವೆ ೩

ವಚನ

ಅಚ್ಯುತನು ಈ ಪರಿಯ ವತ್ಸ ಪ್ರಹ್ಲಾದನಲಿ
ಅಚ್ಚಸ್ನೇಹವ ಮಾಡಿ
ಹೆಚ್ಚಿನೊರಗಳ ಕೊಡಲು ತುಚ್ಛಮಾಡಿ ವರಗಳನು
ಇಚ್ಛೈಸದೆ ಮನ
ದಲ್ಲಿ ಇಚ್ಛೈಸಿದ ಹರಿಯಲ್ಲಿ ಸ್ವಚ್ಛ
ಭಕುತಿಯನು ಅಚ್ಯುತನ

ಭಕ್ತರೊಳಗ್ಗೆಚ್ಚಿನವ ಪ್ರಹ್ಲಾದ ವತ್ಸನಾದರೆಯೇನು
ವತ್ಸರೊಳು ಗಣನಿಲ್ಲ
ನಿಶ್ಚಯವು ವಯಸಿನಲಿ ವತ್ಸನವ
ಜ್ಞಾನದಲಿ ಹೆಚ್ಚಿನವ ತಾನು ಬೇರಿಚ್ಚೆ
ಯವನಲ್ಲ ತನ್ನಿಚ್ಛೆಯಿಂದಲಿ ನುಡಿದ ಸ್ವಚ್ಛ ನರಹರಿಗೆ ೧

ರಾಗ

ನಾವೆಲ್ಲನು ವರಗಳ ಹರಿಯೆ ನಾವಲ್ಲೆನು ಪ

ವಲ್ಲೆನು ವರ ಲಕ್ಷ್ಮೀವಲ್ಲಭನೆ ಅ.ಪ

ಮಿಂಚಿನ ಪರಿಯು ಚಂಚಲಸಿರಿಯು ಮುಂಚೆ ನೀ
ಕೊಟ್ಟೆನ್ನ ವಂಚಿಸಬೇಡಾ ೧

ಭಕ್ತಿಯು ಇರಲಿ ಭಕ್ತರವರಲಿ ಭಕ್ತವತ್ಸಲ ಕೇಳೋ
ಮುಕ್ತಿಯಾದರು ೨

ಸಂತರಸಂಗಾ ಚಿಂತಿಸಿ ರಂಗಾ ಸಂತೋಷ
ಬಡುವೆ ಅನಂತಾದ್ರೀಶನೆ ೩

ರಾಗ

ಹೀಗೆಂದು ನುಡಿದನು ಹರಿಗೆ ನೃಪಸಿಂಹಾ ಮತ್ತು
ಹೀಗೆಂದು ನುಡಿದನು ನೃಪಗೆ ನರಸಿಂಹಾ ಪ

ವಲ್ಲೆನೆಂದರೆ ಕೊಡುವೆ ವರವ ನೃಪಸಿಂಹಾ
ಇಂಥಾ ಬಲ್ಲಿದ ಆಗ್ರಹವೇಕೋ ನರಸಿಂಹಾ ೧

ಭಕ್ತನಲ್ಲವೇನೋ ನೀನು ನೃಪಸಿಂಹಾ ನಿನ್ನ ಭಕ್ತರ
ಭಕ್ತನೋ ನಾನು ನರಸಿಂಹಾ ೨

ಭಕ್ತನೆಂದು ತಿಳಿದುಕೊಡುವೆ ನೃಪಸಿಂಹಾ ಸ್ವಚ್ಛ ಭಕ್ತಿಯೊಂದೆ
ಸಾಕೊ ಎನಗೆ ನರಸಿಂಹ ೩

ಐಶ್ವರ್ಯವ ಭೋಗಿಸು ನೀನು ನೃಪಸಿಂಹಾ ಅಷ್ಟು ಐಶ್ವರ್ಯ
ಸಲ್ಲೋದು ನಿನಗೆ ನರಸಿಂಹಾ ೪

ರಾಜ್ಯಮಾಡೋಧರ್ಮದಿಂದ ನೃಪಸಿಂಹಾ ಅಂಥಾ
ರಾಜ್ಯದಿಂದ ಫಲವೇನೊ ನರಸಿಂಹಾ ೫

ಕೀರ್ತಿವಂತನಾಗುವಿಯೋ ನೃಪಸಿಂಹಾ ನಿನ್ನ ಕೀರ್ತಿಯನ್ನೇ
ಕೊಂಡಾಡುವೆ ನರಸಿಂಹಾ ೬

ಕಾಮಿತಫಲವ ಕೊಡುವೆ ನೃಪಸಿಂಹಾ ನಾ
ನಿಷ್ಕಾಮುಕನೆಂಬುದರಿಯಾ ನರಸಿಂಹಾ ೭

ಮುಕ್ತಿ ಕೊಡುವೆ ಕಡೆಯಮಾತು ನೃಪಸಿಂಹಾ ಅಂಥಾ
ಮುಕ್ತಿಯನ್ನು ತಂದೆಗೆ ಕೊಡು ನೀ ನರಸಿಂಹಾ ೮

ನಿನ್ನಿಂದೆ ನಿನ್ನ ಕುಲದುದ್ಧಾರಾ ನೃಪಸಿಂಹಾ ಎಲ್ಲಾ ನಿನ್ನಿಂದೆ
ಅನಂತಾದ್ರೀಶ ನರಸಿಂಹಾ ೯

ವಚನ

ಇಷ್ಟು ಮಾತಿಗೆ ನುಡಿದ ಇಷ್ಟದಾಯಕ ಹರಿಯು
ಕೊಟ್ಟವರ ಬಿಡಬೇಡ
ಕಟ್ಟುವೆನು ಪದರಿನಲಿ ಘಟ್ಯಾಗಿ ಸ್ವಾತಂತ್ರ್ಯ
ಬಿಟ್ಟು ನನ್ನಲಿ ಚಿತ್ತ
ವಿಟ್ಟು ನನ್ನಲಿ ಸೌಖ್ಯ ಬಟ್ಟು ರಾಜ್ಯವ ಮಾಡು
ಬಿಟ್ಟುಸಂಶಯ ಮುಂದೆ

ಕಟ್ಟಿಟ್ಟಿಹುದು ಮುಕ್ತಿ ಕಟ್ಟಕಡೆಗೆ
ಇಷ್ಟುಮಾತುಗಳಾಡಿ ತಟ್ಟನವನೊ
ಡ ಬಡಿಸಿ ಕೊಟ್ಟು ವರಗಳನ್ನೆಲ್ಲ ಕೊಟ್ಟು
ಮೇಲಭಯವನು ಸೃಷ್ಟಿಕರ್ತನೆ
ಮೊದಲು ಅಷ್ಟು ದೇವತೆಗಳನೆ ಥಟ್ಟನೆ
ಕರಕೊಂಡು ಪಟ್ಟಗಟ್ಟಿದವಗೆ
ದಿಟ್ಟ ಪ್ರಹ್ಲಾದ ತಾ ದಿಟ್ಟ ಪ್ರೇರಕನಲ್ಲಿ ದೃಷ್ಟಿಯನು ಇಟ್ಟು
ಆ ಪಟ್ಟದಾಸನದಲ್ಲಿ ಕುಳಿತಾ ೧

ತುಷ್ಟರಾಗುತ ಮುಂದೆ ಅಷ್ಟು ಜನರುಡುಗೊರೆಯ
ಕೊಟ್ಟರಾಕಾಲದಲಿ
ಪಟ್ಟಣದ ಬಾಲೆಯರು ಪಟ್ಟವಾಳಿಯನುಟ್ಟು
ಪಟ್ಟಿಯನು ನಡುವಿನಲಿ
ಇಟ್ಟು ತ್ವರ ಬಿಗಿಬಿಗಿದು ತೊಟ್ಟು ಕಂಚುಕವನ್ನು
ಇಟ್ಟು ಸಕಲಾಭರಣ
ದಿಟ್ಟಾಗಿ ಫಣೆಯಲ್ಲಿ ಇಟ್ಟಿಹರು ಕುಂಕುಮವ
ಅಷ್ಟು ಆಭರಣದಲೆ
ಶ್ರೇಷ್ಠದಾಭರಣವದು ಸ್ಪಷ್ಟತೋರುವುದು
ದಿಟ್ಟಾಗಿ ಕಸ್ತೂರಿ ಬಟ್ಟಿಟ್ಟ
ನೊಸಲಿನಲಿ ಥಟ್ಟನೆ ಆರತಿಯ ಘಟ್ಟಿಡಿದು
ಕೈಯಲ್ಲಿ ಪಟ್ಟದಾನೆಯ
ಪರಿಯಲಿಟ್ಟು ಹೆಜ್ಜೆಗಳನ್ನು ಬಟ್ಟಕುಚಭರಕೆ
ಭಯಪಟ್ಟು ಬಳಕುತ
ಬಂದ ಪಟ್ಟ ಶಾಲೆಯೊಳಗೆ ಶ್ರೇಷ್ಠ
ಪ್ರಹ್ಲಾದನ್ನ ದೃಷ್ಟಿಯಿಂದಲಿ
ನೋಡಿ ಸುಖಬಟ್ಟು ಆರತಿಯನ್ನು ದಿಟ್ಟಾಗಿ
ಬೆಳಗಿದರು ದಿಟ್ಟನಾರಿಯರು ೨

ರಾಗ

ಮಂಗಲಂ ಜಯ ಮಂಗಲಂ
ಪರಮಾಸನದಲಿ ಕುಳಿತವಗೆ ಪರಮತತ್ವವನು
ತಿಳಿದವಗೆ ಹಿರಣ್ಯ
ಪತ್ನಿಯ ಗರ್ಭದಲಿರುತಲಿ ಗುರುನಾರದನಿಂದರಿತವಗೆ ೧

ಐದು ವರ್ಷವಯವುಳ್ಳವಗೆ ಬೋಧದಿ
ವೃದ್ಧನಾದವಗೆ ಶೋಧಿಸಿ
ಮುಕ್ತಿಯ ಹಾದಿ ಬಲ್ಲವಗೆ ಕಯಾದು
ಪುತ್ರ ಪ್ರಹ್ಲಾದನಿಗೆ ೨

ಬಾಲಲೀಲೆಯನು ಬಿಟ್ಟವಗೆ ಬಾಲಕರಿಗೆ ಹಿತ
ಪೇಳ್ದವಗೆ ಭೂಲೋಕ
ದಲಿ ವಿಶಾಲ ನಾರಸಿಂಹ ಲೀಲೆಗೆ
ಮುಖ್ಯದಿ ಮೂಲನಿಗೆ ೩

ಹರಿಯ ಭಕ್ತನಾಗಿರುವವಗೆ ಹರಿಗೆ ಅಂಜದಲೆ
ಇರುವವಗೆ ಸಿರಿಯು
ಅಂಜಲು ವರಸುರರಂಜಲು ನರಹರಿಯ
ಸಿಟ್ಟು ಬಿಡಿಸಿರುವವಗೆ ೪

ಸಂತತ ನಿಸ್ಪೃಹನಾದವಗೆ ಸಂತೋಷದಿ ಕುಳಿತಿರುವ ಸತತ ಶ್ರೀ
ಮದನಾಂತಾದ್ರೀಶನ ಚಿಂತನದಿಂದಿರುವಂಥವಗೆ ೫

ವಚನ

ಮುಂದೆ ಪ್ರಹ್ಲಾದ ತಾನಿಂದಿರೇಶನ ಆಜ್ಞೆ
ಯಿಂದ ಇದು ಹರಿಸೇವೆಯೆಂದು ರಾಜ್ಯವ ಮಾಡಿ

ಬಂದ ಬಂದವರಿಗೆ ಮುಂದಕ್ಕೆ ಕರೆದು ಆ
ನಂದದಿಂದತಿ ಮನಕೆ ಬಂದದ್ದು ಕೊಟ್ಟುತ್ತರ
ದಿಂದ ಮಾಡಿದ ಪುಣ್ಯ ಅಂದಿಗರ್ಪಿಸಿ ಹರಿಗೆ
ಚಂದಾಗಿ ನಿರ್ಲಿಪ್ತನೆಂದೆನಿಸಿಕೊಂಡಾ
ಮುಂದೆ ಈ ಕಾಲದಲಿ ಹಿಂದೆ ಮಾಡಿದ ಪುಣ್ಯ
ಮುಂದೆ ಮೋಕ್ಷಕ್ಕೆ ಒಂದು ಉಪಯುಕ್ತವಲ್ಲ
ಬಂದ ಬಂದವರಿಗೊಂದೊಂದು ನಾ ಕೊಡುವೆನು
ಎಂದು ಪ್ರಹ್ಲಾದ ರಾಜೇಂದ್ರನೆ ಶ್ರೀರಾಘ
ವೇಂದ್ರ ರಾಯರು ಎನಿಸಿ ಬಂದು ಮಂತ್ರಾಲಯಕೆ ೧

ಮುಂದೆ ಅಲ್ಲಿರುವ ಬಹುಚಂದದಿಂದ
ಲೋಕದಲಿ ಪ್ರಹ್ಲಾದನೀ ಕಥೆಯ ಕೇಳ್ವವರು
ಲೋಕಮಾನಿತರವರು ಬೇಕಂತ ಭಕ್ತಿಯಲಿ
ಸ್ವೀಕರಿಸಿ ಪಠಿಸಿದರೆ ವಾಕ್ಷಪಲರಾಗುವರು
ತೂಕ ಇಲ್ಲವರಿಗೆ ಬೇಕಾದ ಸ್ಥಳದಲಿ
ಬೇಕಾದ್ದು ಬರುವದು ತೋಕರುಗಳಾಗುವರು
ಬೇಕಾದ ವರಗಳನು ಶ್ರೀಕಾಂತ ನರಸಿಂಹ
ತಾ ಕರೆದು ಕೊಡುವ
ಗೋಕೋಟಿ ದಾನವು ಅನೇಕ ಕನ್ಯಾದಾನ
ಬೇಕಾದ ಗಂಗಾದ್ಯನೇಕ ತೀರ್ಥಸ್ನಾನ
ಸಾಕಾಗದಲೆ ತಾ ಮತ್ತನೇಕ ಪುಣ್ಯಗಳೂ ಕೂ
ಡ್ಯಾಕಿ ಅವುಗಳ ಫಲವು ತಾ ಕೊಡುವದೀ ಕಥೆಯು
ಶ್ರೀಕಾಂತ ನರಸಿಂಹ ತಾ ಕಂಠದಲಿ ನಿಂತು ಬೇಕೆಂತನುಡಿಸಿದನು
ನಾಕರ್ತನಲ್ಲಿದಕೆ
ಶ್ರೀಕರಾನಂತಾದ್ರಿಯಾಕ್ರಮಿಸಿ ಇರುವವನೆ
ಶ್ರೀ ಕೃಪಾದಿಂದಲಿ ಅನೇಕ ವಿಘ್ನಗಳನ್ನು ನೂಕಿ ಮುಗಿದಿತು
ನಾಕು ಅಧ್ಯಾಯ ೨

ಶ್ರೀ ಹೆನ್ನೆರಂಗದಾಸರ ಕೀರ್ತನೆಗಳು

ಗಣೇಶ ಪ್ರಾರ್ಥನೆ

೧

ವಂದಿಸುವೆ ನಾನಿಮ್ಮ ನನುದಿನ ವಂದಿಸುವೆ ಗಣನಾಥನೆ
ವಂದಿಸುವೆ ನಿಮ್ಮ ಚರಣ ಕಮಲವ
ವಂದೆ ಮಾನಸದಿಂದಲಿ ಪ

ಭುಜಗಭೂಷಣ ಪಾರ್ವತೀಶನ ಪುತ್ರನೆನಿಸಿದ ದೇವನೆ
ಅಜ ಹರ ಹರಿ ವರವ ಪಡೆದು
ಆದಿಪೂಜೆಯ ಗೊಂಬನೆ ೧

ಕಿರಿಯಡೊಳ್ಳಿನ ತೆರಿಯ ಘಮಕವು ಕೀಲು ಕಾಲು
ಮೇಲ್ ಮಾಡಿದನೆ
ಇರುವ ಜ್ಯೋತಿಗಳಂದದಿಂದಲಿ ನೋಡುತಿಹ
ಕೋಮಲಾಂಗನೇ ೨

ಬೇಡುತಿಹ ಭಕ್ತರಿಗೆ ವಿದ್ಯಾವೃಷ್ಟಿಯನು ಕೊಡುತಿರುವನೆ
ಪಾಡುವೆನು ನಾ ಬಿಡದಲನುದಿನ
ಪಾಲಿಸೆನಗೆ ಮತಿಯನು ೩

ಅಂಗಭೇದ ವಿನೋದನಾದನೆ ಆರುಮುಖದವನಣ್ಣನೆ
ಮಂಗಳಾಭಯ ವಿತ್ತು ಸಭೆಯೊಳ್
ಮಾನದಲಿ ಕಡೆ ಹಾಯಿಸು ೪

ಕೊರಳ ಮುತ್ತಿನ ಹಾರ ಹೊಳೆವನೆ
ಗುಳಗಿ ಗಡುಬಿನಪ್ರಿಯನೆ
ಕರುಣಾನಿಧಿ 'ಹೆನ್ನೆವಿಠ್ಠಲನ' ಪದ ಕಾಣುತಲಿ
ನಲಿಯುವವನೆ ೫

ಶ್ರೀಹರಿ ಸಂಕೀರ್ತನೆ

೨

ಈಶ ಬಂದನೊ ಸರ್ವೇಶ ಬಂದನೊ
ಈಶ ಬಂದ ನೋಡಿ ಪಿಕನಾಶಿನೊಳಗೆ
ಸುಳಿದಾಡುತ ವಾಸುದೇವನಾದ ಮೂರ್ತಿ
ಶ್ರೀಶ ಭಕ್ತ ವಿಲಾಸರಾಮಾ ಪ

ಅಂಡಜವಾಹನ ಭೂಮಂಡಲೇಂದ್ರರು ನುತಿಸುವಂಥ
ಪುಂಡಲೀಕವರದ ಕೋದಂಡಧರ ದಶರಥ ನಂದನ
ಎಸೆವ ಮುತ್ತಿನ ಹಾರ ೧

ಎಸೆವ ಮುತ್ತಿನಹಾರ ಕೊರಳಾ ಹಸಿರು ಉಂಗುರಬೆರಳ
ತುದಿಬೆರಳಿನಿಂದ ತೋರಿಕರೆವ ಸುರುತಿ ಪಾಲಕನಾದ ೨

ಮುಗುಳು ನಗುವು ನಗುತ ನೀನು ಬಗೆ ಬಗೆಯ
ಭಾಗ್ಯಗಳಾ ತೋರುತ ಸರಿರಾತ್ರಿಯ ಒಳಗೆ ಒಳ್ಳೆ
ಸೊಗಸುವುಳ್ಳ ರೂಪದಿಂದಾ ೩

ತಂದೆ ತಾಯಿ ತಾನೇ ಆಗಿ ಬಂಧು ಬಳಗಾ ಭಾಗ್ಯವಾಗಿ
ಹಿಂದೆ ಮುಂದೆ ನನ್ನ ಪೊರೆವಾನಂದದಿಂದ
ಹರಿ ಗೋವಿಂದಾ ೪

ಪನ್ನಗಾರಿ ಪರ್ವತನಿಲಯಾ ಧನ್ಯ
'ಹೊನ್ನವಿಠ್ಠಲ' ರಾಯಾ
ಮನ್ನಿಸೆನ್ನ ಕರುಣದಿಂದಾ ನೀನು ಪೊರೆಯೋ
ಇಂದು ಮುಕುಂದಾ ೫

೩

ಜಗನ್ನಿವಾಸ ಜಾನಕೀರಮಣ ಪ

ನಿಗಮಗೋಚರ ಹರಿ ನಗಧರ ಭವಹರ
ಅಗಣಿತ ಚರಿತಾನಂದ ಮುಕುಂದಾ ೧

ಶಂಕ ಚಕ್ರ ಗದ ಶಾರ್ಙ್ಗಪಾಣಿ
ಪಂಕಜೋದರ ಪಾಲಕ ಪಾವನ ೨

ಗರುಡ ಗಮನ ಕರಿವರದ ಗೋವಿಂದ
ಪರಮಾತ್ಮಾ ಪರಬ್ರಹ್ಮ ಪರಮಾನಂದಾ ೩

ವಾರಿಧಿ ಬಂಧನ ನೀರಜನಯನ
ವಾರಿಜೋದ್ಭವ ಪಿತ ವಸುದೇವನಂದನ ೪

ಪ್ರೇಮ 'ಹೆನ್ನವಿಠಲಾ' ಮಹಾಮಹಿಮ
ಸ್ವಾಮಿ ಪರಂಧಾಮ ಸರ್ವ ರಕ್ಷಕ ಹರಿ ೫

೪

ಜಯ ರಘುರಾಮ ಜಾನಕಿ ಪ್ರೇಮ
ಭಯ ಭವ ಪರಿಹಾರ ಪಾವನನಾಮ ಪ

ಕಮಲಜ ಜನಕಾ ಕಾಮಿತ ಫಲದಾಯಕಾ
ಅಮಿತ ಪರಮಾನಂದ ಆದಿಮೂರುತಿ ಗೋವಿಂದಾ ೧

ಸಕಲಗುಣ ಪರಿಪೂರ್ಣ ಶಾಶ್ವತ ಸಂಪನ್ನ
ಮುಕುತಿ ರಾಮಕೃಷ್ಣ..............ರುತಿ ಮೋಹನಾ ೨

ಸುಂದರರೂಪಾ ಸುಗುಣ ಪ್ರತಾಪ
ಇಂದಿರೆ ರಮಣ ಶ್ರಿತ ಜನ ಪೋಷಣ ೩

ದಶ ಅವತಾರಾ ದೈತ್ಯ ಸಂಹಾರಾ
ಪಶುಪತಿ ಪಾಲಕಾ ಪಾವನೋದಕ ಜನಕಾ ೪

ಹರಿ 'ಹೆನ್ನ ವಿಠಲಾ' ಅಧಿಕ ಸುಶೀಲಾ
ಪರಮ ಭಕ್ತ ವಿಲಾಸಾ ಪಾಲಿತ ಜಗದೀಶಾ ೫

೫

ದಶರಥರಾಮಹರೆ ಸೀತಾಪತೆ
ದಶರಥರಾಮ ಸುಧಾಕರವದನ
ಪರಶುರಾಮ ಬಾಹುಪರಾಕ್ರಮ ಜಿತಶ್ರೀ ಪ

ಸುರಮುನಿ ಸೇವಿತ ಶುಭಕರ ಚರಿತ
ಭಾಸುರ ಕೀರ್ತಿಸಾಂದ್ರ ಕೌಸ್ತುಭ ಶೋಭಿತ
ವರ ವಿಶ್ವಾಮಿತ್ರಾಧ್ವರ ಪರಿಪಾಲನ
ಖರ ದೂಷಣ ರಾಕ್ಷಸ ಬಲ ಖಂಡನ ೧

ವಾಲಿ ಮರ್ದನ ಭಕ್ತವತ್ಸಲ ಮಾಧವ
ಫಾಲಲೋಚನ ವಿನುತ ಪಾದ ಪದ್ಮ
ನೀಲ ನೀರದ ಸನ್ನಿಭಗಾತ್ರ ಪರಮ ದಯಾಳು
ನಾರಾಯಣ ಲೀಲಾ ಮಾನುಷ ವೇಷ ೨

ಸಿಂಧು ಬಂಧನ ಪಂಕ್ತಿ ಕಂಧರಾಂತಕ
ಗೋವಿಂದ ಮುಕುಂದಾರ ವಿಂದೋದರ
ಇಂದಿರಾಧಿಪ ಶ್ರೀ ಹೆನ್ನೆಪುರ ನಿಲಯಾ
ನಂದ ವಿಗ್ರಹ ಜಗದ್ವಂದ್ಯ ಮಂದಹಾಸ ೩

೬

ದೇವಕಿ ನಂದನ ಕೃಷ್ಣಾ
ದೇವಕಿನಂದನ ಧೇನುಕ ಭಂಜನ
ಭಾವಜಪಿತ ಶ್ರೀಕೃಷ್ಣಾ ಪ

ಶುಭಕರ ಘನ ಕೌಸ್ತುಭಮಣಿ ಶೋಭಿತ
ಇಭರಾಡ್ವರದ ಶ್ರೀಕೃಷ್ಣ ೧

ಶ್ರೀಕೇಶವ ಶಶಿ ಶೇಖರನುತ ಕರುಣಾಕರ ರೂಪ ಶ್ರೀಕೃಷ್ಣ ೨

ಕುಂದರದನ ಕಾಲಿಂದೀವರ ಮನ್ಮಂದಿರೋದ್ಧಾರ ಶ್ರೀಕೃಷ್ಣಾ ೩

ಮೃಗಮದತಿಲಕ ರಮೇಶಾಚ್ಯುತ
ಶ್ರೀ ಖಗಪತಿವಾಹನ ಕೃಷ್ಣ ೪

ಚಾರುಚರಿತ ವಿಸ್ತಾರ ಮಹಿಮಾ ನೀರೇರುಹಲೋಚನ ಕೃಷ್ಣ ೫

ಕೈಟಭ ದಾನವ ಖಂಡನ ಭಾಸುರ ಹಾಟಕಾಂಬರಧರ ಕೃಷ್ಣ ೬

ಶ್ರೀಪತಿಭವ ಸಂತಾಪಹರಣ 'ಹೆನ್ನೆಪುರನಿಲಯ' ಕೃಷ್ಣಾ ೭

೭

ದೇವಾ ದೇವಾಧಿದೇವ ದೇವ ದೇವಾ ಭಾ -------
-------------ಇಂದಿರೆರಮಣ ಗೋವಿಂದ ಸುಂದರಾ ೧

ಕೃಷ್ಣಾ-------ಇಷ್ಟದಿಂದ ಶಿಷ್ಟರ ಪೊರೆವುದೆ ಕೀರುತಿ
ಇಷ್ಟು ಈ ಸೃಷ್ಟಿಯೊಳುತ್ಕಷ್ಟರಾದಂಥಾ ಶ್ರೇಷ್ಠವುಳ್ಳನಿಷ್ಟ ಜನರ
ಕಷ್ಟುವು ಕಳೆವಂಥಾ ೨

ವೀರಾವೀರಾಧಿ ವೀರ ವಿಶ್ವರೂಪನೆ ಘೋರಾಘೋರಾದಿಕ್ರೂರ
ಖಳರ ನಳಿದಾನೆ ಸಾರಾಸರ್ವದಿ ಜಗವು ಸಲಹುತಿಹನೋ
ಧೀರ --------'ಹೆನ್ನೆವಿಠ್ಠಲನೆ' ೩

೮

ನಂದನಂದನ ಗೋವಿಂದ ಮುರಾರಿ
ಸುಂದರ ಮೂರುತಿ ಸುಖವಿಲಾಸಾ ಪ

ಚಂದದಿಂದಲಿ ನಿಮ್ಮ ಸ್ತುತಿಸುವ ಭಕುತರಾ–
ನಂದದಿ ಕಾಯ್ವ ಮುಕುಂದ ಮಹಾನುಭಾವ ೧

ಸುರಮುನಿ ಪೂಜಿತಾ ಸುಗುಣ ಪ್ರಖ್ಯಾತಾ
ಅರವಿಂದ ಶಾಖಾ ಶ್ರೀ ಅಖಿಲವೈಭವ ಮೂರ್ತಿ ೨

ವೆಂಕಟಾದ್ರಿಯವಾಸಾ ವಿಜಯಶ್ರೀ ಜಗದೀಶಾ
ಶಂಕರಪ್ರಿಯ ಮೀನಾಂಕ ಜನಕಹರೆ ೩

ವೇದಗೋಚರ ವೇಣುನಾದ ವಿನೋದ ಕೃಷ್ಣಾ
ಮಾಧವ ಕೇಶವ ಯಾದವ ಕುಲಪತಿ ೪

ಚಿನ್ಮಯಾಕಾರಾ ಸಿಂಧು ಗಂಭೀರಾ
ಪನ್ನಗಶಯನ 'ಶ್ರೀ ಹೆನ್ನವಿಠ್ಠಲಾ' ೫

೯

ನರಸಿಂಹ ನರಸಿಂಹ
ಶರಣು ಧರಣಿಧರ ಪರಮ ಕೃಪಾಕರ ಪ

ಶ್ರೀಕರ ಭಕ್ತ ವಶೀಕರ ಕೋಟಿ
ಪ್ರಭಾಕರ ಸನ್ನಿಭ ಭೀಕರ ರೂಪ ೧
ಜಂಭ ಭೇದಿಸುತ ಕುಂಭಿಣಿ ಧವ ಶಶಿ
ಬಿಂಬ ಲಿಖಿತ ಮುಖ ಕಂಬು ಕಂಠಶ್ರೀ ೨

ಘೋರದುರಿತ ಸಂಹಾರ ಶರಧಿ ಗಂಭೀರ
ಮುನಿ ಮಂದಾರ ಮನೋಹರ ೩

ಗಾನಲೋಲ ಸುಮಬಾಣ ಜನಕ
ಮುನಿ ಮಾನಸ ಹಂಸ ಶ್ರೀನಿವಾಸ ಹರಿ ೪

ಗರುಡಗಮನ ಮುರನರಕಾಂತಕ
ಶ್ರೀಧರವರ 'ಹೆನ್ನೆಪುರ ನಿಲಯ'ಶ್ರೀ ೫

೧೦

ನಾನು ನಿನ್ನ ಏನು ಅಂದೆನೊ ರಂಗರಾಯಾ
ನಾನು ನಿನ್ನ ಏನು ಅಂದೆ ನಾಲ್ಕು ದಿಕ್ಕಿನೊಳಗೆ ನಿಮ್ಮ
ಧ್ಯಾನಪಥವು ದೊಡ್ಡದೆಂದು ದೃಢವು ಮಾಡಿ
ಹೇಳ್ದೆನಲ್ಲದೆ ಪ

ಕುಂಡಲೀಶ ಶಯನನಾದ ಪುಂಡಲೀಕವರದ ಬ್ರ
ಹ್ಮಾಂಡವೆಲ್ಲ ನಿಮ್ಮ ಉದರ ಅಂಡದಲ್ಲಿ ಇರುವುದೆಂದೆ
ಮಂಡಿಗೊರಳನು ಇದೆವೆಂದನೆ ಮತ್ತೆ ಮತ್ತೆ
ಕುಂಡಗೊಳರ [ಪುಂಡಗೊಲ್ಲರ] ಕುಲದೈವವೆಂದೆನೆ
ಹಿಂಡುಲೋಕಗಳಿಗೆಲ್ಲ ಹಿರಿಯ ನೀನೆಯಂದೆನಲ್ಲದೆ ೧

ಸಕಲಯೋಗಿ ಜನರ ಹೃದಯ ನಿಖರವಾಗಿ ನಿಂತು ಎಲ್ಲ
ಭಕುತರನ್ನು ರಕ್ಷಿಸುವ ಲಕುಮಿರಮಣಾನಂದೆ ನಲ್ಲದೆ

ಪ್ರಕಟದೈತ್ಯರ ಕೊಂದೆನೆಂದೆನೆ ನೀಚರಲ್ಲಿ
ಕಕುಲಾತಿಯ ಮಾಡೆನೆಂದೆನೆ
ಅಕಳಂಕ ಮಹಿಮನಾದ ಆದಿ ಮೂರುತಿ ಎಂದೆನಲ್ಲದೆ ೨

ಬೊಟ್ಟಿನಿಂದ ಧರೆಯನೆತ್ತಿ ಚೇಷ್ಟೆಜನರ ಉರಳಿಸಿದ
ಕೃಷ್ಣ ಮೂರುತಿನೀನೆಯೆಂದು ಇಷ್ಟದಿಂದ ಪಾಡುವೆನಲ್ಲದೆ
ಸೃಷ್ಟಿನೀಟಗೊಲ್ಲನೆಂದೆನೆ ನಿನ್ನ ಮಗನ ಸುಟ್ಟು ಅವನ
ಮಿತ್ರನೆಂದೆನೆ ಸೃಷ್ಟಿಗಧಿಕವಾದ 'ಹೊನ್ನವಿಠ್ಠಲ'
ರಾಯನಂದೆನಲ್ಲದೆ ೩

೧೧

ನಾರಾಯಣ ಹರಿಗೋವಿಂದ ನಾರದವರದ ಮುಕ್ಕುಂದಾ ಪ

ವೇಣುನಾದ ವಿಶೂರವಿಹಿತ ಸುಗಾನಲೋಲ
ಸುಜ್ಞಾನಿಗಳಾದವರ
ಮಾನಸಾಂತರದಿ ಮಹಿಮೆಯು ತೋರುತ ನಾನಾಪರಿಯಲಿ
ನಟನೆಯು ಮಾಡುವಾ ೧

ಸುಂದರ ವಿಗ್ರಹ ಸುಜನರ ಪೋಷಕನಂದನಂದನ
ವಂದಿತ ಮುನಿಜನಾಮಂದರಧರ ಮಾನದ ಜಗದ್ಭರಿತಾ
ನಂದನಿಲಯನಾದ ಅಮಿತ ಪರಾಕ್ರಮ ಮೂರ್ತಿ
ಆಗರ ದ್ವಾರಕ ಹರಿಪುರ ಸ್ಥಳವು ಭಾಗೀರಥಿಪಿತ ಭವ
ವಿಮೋಚನ ಕೃಷ್ಣ ನಾಗಶಯನ ಶ್ರೀನಿಲಯನ ೨

ಪುಂಡರೀಕಾಕ್ಷ ಶ್ರೀ ಪಾಂಡವ ಪಕ್ಷಕ ಪಂಡಿತ
ರಕ್ಷಕ ಪರಮಾತ್ಮನೆ
ಹಿಂಡೂ ದೈತ್ಯರ ಕುಲ ಚಂಡಾನೆ ಭೇರಿಸಿ ಭೂಮಂಡಲವನಾ
ಳ್ವಂಥ ಮಹಿಮ ಪ್ರಕಾಶ ೩

ನಿಗಮಗೋಚರ ಜಗನ್ನಾಯಕ ನರಹರಿ ಅಗಣಿತ ಚರಿತ
ಅನಂತನಿನ್ನಾ ಬಗೆಬಗೆಯಿಂದಲಿ ಭಜಿಸುವ ಭಕುತರ
ಆಘಗಳ ಖಂಡಿಸುವಾ ಹರಿ 'ಹೊನ್ನವಿಠ್ಠಲ' ೪

೧೨

ಬಂದನು ಕೃಷ್ಣ ಗೋವಿಂದ ಮುಕುಂದ
ಬಂದನು ಕೃಷ್ಣ ಭವ ಬಂಧನ ಪರಿಹಾರ
ಇಂದಿರಾ ಮುಖಾಬ್ಜ ಶರದೇಂದು ಎನಿಪ ಶೌರಿ ಪ

ಸಾರಸಪತ್ರನೇತ್ರ ಅನಘ ಘನನೀರದ ನಿಭಗಾತ್ರ
ಶಕಟಾಂತಕ ಧೀರ ಕರುಣಾ ಪಾತ್ರ
ಮುರಹರ ಜಂಭಾರಿಸನ್ನುತ ಗೋತ್ರಾ
ಧಾರಿ ಮುನಿಜನ ಮಂದಾರ ಗೋಪಾಲ ಘನ
ಸಾರ ಶೋಭಿತ ಯದುವೀರ ನಾರಾಯಣ ೧

ಪಂಡಿತ ಕುಸುಮಪಾಣೆ ಜನಕ ಶ್ರೀ
ಅಂಡಜಗಮನ ಗಾನಲೋಲನೆ
ತಂಡ ರಕ್ಷಕ ಪುರಾಣಪುರುಷ ಕೋ
ದಂಡ ಪಾಣಿ ಧುರೀಣ
ಕುಂಡಲಿಶಯನ ಭೂಮಂಡಲಾಧಿಪ ಬಲೋ-
ದ್ದಂಡ ಪರಾಕ್ರಮ ಚಂಡಮಹಿಮ ರಾಮ ೨

ವೇದವೇದ್ಯ ಸುನಾಮಾ ತ್ರಿಜಗನ್ನುತ
ಯಾದವ ಸಾರ್ವಭೌಮ
ಪರಮಾತ್ಮ ಆದಿತೇಯಾಬ್ಧಿ ಸೋಮ
ರಮೇಶಾಂಬುಜೋದರ ಸುಗುಣಧಾಮ
ಶ್ರೀಧರ ಹೆನ್ನೆಪುರ ಮಾಧವ ನರಮೃಗ ಪ್ರಹ್ಲಾದ
ವರದ ಸನಕಾದಿ ವಂದಿತ ಚರಣ ೩

೧೩

ಬರಲಾರೆ ಹರಿ ಭಜಕರು ಕರಿಯಲಿ ಪ

ಹದಿನಾರು ಸಾವಿರ ಚದುರಿಯರ ಸಂಗವು
ಪದುಮಾಕ್ಷ ಸಾಲದೆ ಭಾರ್ಗವಿಲೋಲನಾಗಿ ೧

ಗೊಲ್ಲರ ಮನೆಪೊಕ್ಕು ನೆಲವಿಗೇರಿರಲು
ಕಳ್ಳನುಯಂದು ಕೈ ಬಿಡಹೋಗೆ ೨

ವರ ಹೆನ್ನೆಪುರ ನರಹರಿ ಕರುಣಾಕರ
ಮುನಿ ಹೃತ್ಕಮಲದಲಿ ವಾಸವ ಬಿಟ್ಟು ೩

೧೪

ಬಾರೋ ರಂಗಯ್ಯ ಬಾರೋ ಕೃಷ್ಣಯ್ಯ
ಬಾರೋ ರಂಗ ನವನೀರದ ನಿಭಾಂಗ ಪ

ನಂದಗೋಪನಂದನ ಸುಂದರ ನಾರಾಯಣ
ಮಂದರಧರ ಕರುಣಾಸಿಂಧು ಇಂದು ವದನ ೧

ಉರಗವೈರಿ ಗಮನ ವರ ಶ್ರೀವತ್ಸಲಾಂಛನ
ಕರಿ ವರ ದುರಿತ ಹರಣ ನರಹರಿ ಪರಮಪಾವನ ೨

ಪಂಕಜದಲಲೋಚನ ವೆಂಕಟಾಚಲರಮಣ
ಶಂಕರನುತ ಚರಣ ಶಕಟಾಸುರ ಭಂಜನ ೩

ಅನಘ ವನಧಿಶಯನ ಮುನಿ ಹೃತ್ಕಮಲ ಪೋಷಣ
ಘನಮಣಿ ಖಚಿತಾಭರಣ ಕನಕಾಂಬರ ಭೂಷಣ ೪

ಬಲಿಬಂಧನ ವಾಮನ ಜಲಜೋದರ ಜನಾರ್ದನ
ವಿಲಸಿತ ಹೆನ್ನೆ ಪಟ್ಟಣ ನಿಲಯ ಶ್ರೀ ಮಧುಸೂದನ ೫

೧೫

ಭಜಿಸುವೆನು ನಾನಿನ್ನ ಭಕ್ತಾಧೀನ
ಭಜಿಸುವೆ ನಾನು ನಿನ್ನ ಭುಜಗಶಯನದೇವ
ಅಜಹರನುತ ಅಗಣಿತಚರಿತ ಹರಿ ಪ

ಅಂದು ಮುನಿಸತಿ ಶಾಪದಿಂದ ಶಿಲೆಯಾಗಿರೆ ಛಂದದಿ
ಚರಣಾರವಿಂದ ಸ್ಪರ್ಶವಾಗಲು
ಕುಂದು ಪರಿಹಾರವಾಗಿ ಸುಂದರ ಮಣಿಯಾದಳೆಂದು
ನಿಮ್ಮಯ ಪಾದದ್ವಂದ್ವ ಬಿಡದಲೆ ನಾ ೧

ಕಂದ ಕರೆಯಲು ಶ್ರೀ ಗೋವಿಂದ ಘನ ಸ್ತಂಭದೊಳ್
ಬಂದು ದೈತ್ಯನ ಕೊಂದ ಇಂದಿರಾರಮಣ
ಕಂದರ್ಪ ಜನಕ ಮುಚುಕುಂದ ವರ ಕೃಷ್ಣಾ
ಮಂದರಧರ ಸಲಹೆಂದು ಅನವರತ ೨

ದೃಢ ಧ್ರುವರಾಯನ ಬಿಡದೆ ಮಲತಾಯಿ ತಾ
ಅಡವಿಗೆ ನೂಕಿಸಲು ಕಡು ಮುದದಿ
ಕಡಲಶಯನ ಜಗದೊಡೆಯನೆ ಕಾಯ್ದೆ
ಗರುಡವಾಹನನೊಡನೆ ನುಡಿಯಯ್ಯ ೩

ದುರುಳ ರಾವಣನ ದಶಶಿರಗಳು ಖಂಡಿಸಿ
ಶರಣೆಂದು ವಿಭೀಷಣ ಗೇ ಸ್ಥಿರದಿ ಪಟ್ಟವನಿತ್ತು
ಪರಮಪುರುಷ ಶಿರಿವರ ನರಹರಿ ಶೌರಿ
ಮೊರೆ ಹೊಕ್ಕೆ ರಕ್ಷಿಸೋ ಮುರಹರ ಕರುಣಾಂಬುಧೆ ೪

ಕರಿಸರೋವರದಿ ಮಕರಿಯ ಬಾಧೆಗೆ ಸಿಕ್ಕು
ಹರಿನೀನೆ ಗತಿಯೆಂದು ಸ್ಮರಿಸುತಲಿರಲು
ಭರದಿಪೋಗಿ ಕಷ್ಟಪರಿಹರಿಸಿ ಪೊರೆದಿ
ಶ್ರೀಧರವರ ಹೆನ್ನೆಯಪುರ ಲಕ್ಷ್ಮೀನರಸಿಂಗ ೫

೧೬

ರಂಗ ಬಂದನೋ ಮೋಹನಾಂಗ ಬಂದನೋ
ರಂಗ ಬಂದ ನೋಡಿ ಹೆನ್ನೆರಂಗ ದೇವೋತ್ತುಂಗ ಕೃಷ್ಣ ಪ

ಭೋಗಿಶಯನ ಭವರೋಗಹರಣ ನಿಗಮಾ
ಗಮಗನುತ ಶರಣಾಗತ ಪೋಷ ೧

ಮಂದರಧರ ಮುಚುಕುಂದವರದ
ರಾಕೇಂದುವದನ ಗೋವಿಂದ ಮುಕುಂದ ೨

ತಾಪಸವಂದಿತ ಶ್ರೀಪತಿ ಘನ
ಹೆನ್ನೆಪುರ ನರಹರಿ ಭೂಪರಿಪಾಲನ ೩

೧೭

ರಾಮ ರಾಮ ರಾಮ ಹರೇ ರಘೂ ಪ

ರಾಮ ಜಾನಕಿ ಪ್ರೇಮ ಕೃಪಾಂಬುಧಿ ಸ್ವಾಮಿ
ಪರಂಧಾಮ ಸಾರುಚಿವರದಾ ಅ.ಪ

ಪತಿತಪಾವನದೇವಾ ಸದ್ಭಕ್ತರ
ಸತತ ಬಿಡದೆ ಕಾಯುವಾ ಮಹಾನುಭಾವ–
ನತಿಶಯದಲಿ ಮನಹಿತದಲಿ ಅನುದಿನ
ಸ್ತುತಿಯನು ಮಾಡುವರಿಗೆ ಗತಿ ಕಾಣಿಸುವಂಥ ೧

ಅಂಡಜವಾಹನನೆ ಅನೇಕ ಭೂ
ಮಂಡಲ ನಾಳುವನೆ ಮಣಿಯ ಮುಕುಟಧರನೆ
ಪುಂಡರೀಕಾಕ್ಷ ಕೋದಂಡ ಪಾಣಿ ಉದ್ದಂಡ ರಕ್ಕಸರಳಿದ
ಚಂಡಪರಾಕ್ರಮಿ ೨

ಪನ್ನಗಾದ್ರಿಯವಾಸಾ ಭಜಕರ ಪೋಷಾ ಶ್ರೀ
ಹೆನ್ನವಿಠ್ಠಲ ವೇಶಾ ಪರಮೋಲ್ಲಾಸಾ
ಚಿನ್ಮಯ ಮೂರುತಿ ಶ್ರೀ ಗೌರೀವರಪ್ರಿಯ
ಮನ್ನಿಸಿ ಸಲಹೊ ಎನ್ನ ಮದನ ಜನಕ ಹರೆ ೩

೧೮

ರಾಮ ರಮಣಾರಘು ಪ

ಸುಂದರವದನಾಸುರಮನಿ ಪಾಲಕ
ಮಂದರಧರ ಶ್ರೀ ಮಾಧವ ಕೃಷ್ಣ ಹರಿ ೧

ಕುಂಡಲೀಶ ಶಯನ ಕೋದಂಡಧರ ಘನ
ಮಂಡಲಾಧಿಪತಿ ಮಹಾಮಹಿಮ ರಘುಪತಿ ೨

ಶ್ರೀ ಜಗನ್ನಾಯ್ಕನೆ ಶ್ರೀತಜನಪೋಷಕ
ರಾಜಾಧಿರಾಜ ಮರ್ತ್ಯರಾಜನೆನಿಸಿಹ ೩

ವೆಂಕಟರಮಣ ಅಕಳಂಕ ಮಹಿಮ
ಪಂಕಜೋದ್ಭವನಯ್ಯಾ ಪರಮಭಕ್ತರ ಪ್ರಿಯ ೪

ಹೆನ್ನೆರಂಗ ಬಿಲವಾಸ ಹೆನ್ನ
ಚಿನ್ಮಯ ರೂಪ ಶ್ರೀ ಚಿತ್ತಜನಯ್ಯ ಭೂಪ ೫

೧೯

ವಂದೇ ಹಂ ಶ್ರೀವರ ಕರಿವರದಂ
ವೃಂದಾರಕನುತ ಸುಂದರಪಾದಂ ಪ

ಈಶ ಭಕ್ತ ಭವಪಾಶನಾಶ
ವಾಗೀಶ ಜನಕ ಲಕ್ಷ್ಮೀಶ ಪರೇಶ ೧

ರಾಮತ್ರಿಜಗದಭಿರಾಮ ನೀರದ
ಶ್ಯಾಮ ಸುರಾರಿಸ್ತೋಮ ವಿರಾಮ ೨

ಮಂಗಳ ಮಹಿಮ ವಿಹಂಗ ಗಮನಯದು
ಪುಂಗವ 'ಹೆನ್ನೆರಂಗ ' ಕೃಪಾಂಗ ೩

೨೦

ವಿಷ್ಣೋ ಭೋ ಸಂಸೇವಿತ ಜಿಷ್ಣೋ
ಉಷ್ಣಾಂಶಾಯುತ ಪುರುರೋಚಿಷ್ಣೋ ಪ

ಈಶ ಸುಜನ ಭವಪಾಶನಾಶ
ವಾಗೀಶಜನಕ ಲಕ್ಷ್ಮೀಶ ಪರೇಶ ೧

ರಾಮತ್ರಿಜಗದಭಿರಾಮ
ನೀರದ ಶ್ಯಾಮ ಸುರಾರಿಸ್ತೋಮ ವಿರಾಮ ೨

ಮಂಗಳ ಮಹಿಮ ವಿಹಂಗ ಗಮನಯದು
ಪುಂಗವ 'ಹೆನ್ನೆರಂಗ ' ಕೃಪಾಂಗ ೩

೨೧

ಶ್ರೀರಾಮ ಜಯರಾಮ ಶ್ರೀರಾಮರಾಮ
ಕಾರುಣ್ಯ ನಿಧಿರಾಮ ಕೌಸಲ್ಯ ರಾಮ ಪ

ಜಾನಕೀ ಪತಿರಾಮ ಜಯರಘುರಾಮ
ಜಾಹ್ನವೀ ಪಿತರಾಮ ಸರ್ವೇಶರಾಮ ೧

ಭಯ ನಿವಾರಣರಾಮ ಪಾವನರಾಮ
ನಯಗುಣ ಶ್ರೀರಾಮ ನರಹರೇ ರಾಮ ೨

ತ್ರಿಜಗ ಮೋಹನ ರಾಮ ದಿವಿಜೇಶರಾಮ
ಅಜಭವನುತರಾಮ ಆನಂದರಾಮ ೩

ಭುವನ ಪಾಲಕರಾಮ ಭೂಪತೆ ರಾಮ
ಸವನ ರಕ್ಷಕರಾಮ ಶತ್ರುಘ್ನ ರಾಮ ೪

ಸವನ ಶೇವಿತರಾಮ ಪರಮಾತ್ಮ ರಾಮ
ಭವ ವಿಮೋಚನ ರಾಮ ಪದ್ಮಾಕ್ಷರಾಮ ೫

ವೈದೇಹಿ ಪತಿರಾಮ ವೈಕುಂಠರಾಮ
ವೇದಗೋಚರ ರಾಮ ವೆಂಕಟೇಶರಾಮ ೬

ಮಂಗಳಾತ್ಮಕರಾಮ ಮಾಧವರಾಮ
ಶೃಂಗಾರ ಶೇಖರರಾಮ ಶ್ರೀರಾಮ ರಾಮ ೭

ದಶರಥಸುತರಾಮ ದನುಜಾರಿರಾಮ
ಕುಶಲವ ಪಿತರಾಮ ಕೋದಂಡರಾಮ ೮

ಕರುಣಸಾಗರ ರಾಮ ಕಾಕುಸ್ಥರಾಮ
ಶರಧಿಶಯನ ರಾಮ ಶಾಶ್ವತರಾಮ ೯

ಶ್ರೀಕರಾವ್ಹಯರಾಮ ಶ್ರೀಧರರಾಮ
ಪಾಕಾರಿಸುತ ರಾಮ ಪರಮೇಶರಾಮ ೧೦

ಮಧುರ ಭಾಷಣರಾಮ ಮಧುವೈರಿರಾಮ
ಮದನಾರಿನುತರಾಮ ಮೌನೀಶರಾಮ ೧೧

ಗೌತಮ ಸತಿ ಶಾಪ ಖಂಡನ ರಾಮ
ಪಾತಕ ಹರ ರಾಮ ಪ್ರಖ್ಯಾತ ರಾಮ ೧೨

ರಾಮ ಗರ್ವವಿರಾಮ ರಾಮಾಭಿರಾಮ
ಸೌಮಿತ್ರಿವರರಾಮ ಸೌಂದರ್ಯರಾಮ ೧೩

ಸುಗ್ರೀವಸಖರಾಮ ಶುಭಕರ ರಾಮ
ಅಗ್ರಜಾಧಿಪ ರಾಮ ಅಮಿತಬಲರಾಮ ೧೪

ಅನ್ಯಮಾನಸರಾಮ ರಘುರಾಮ
ಇನಕುಲೇಶ್ವರ ರಾಮ ವಿಭುದೇಂದ್ರರಾಮ ೧೫

ಚಾರು ಚರಿತ ರಾಮ ಜಯಜಯ ರಾಮ
ಮಾರುತಾತ್ಮಜ ವಂದ್ಯ ಮಾನಿತರಾಮ ೧೬

ವಾಲಿ ಮರ್ದನರಾಮ ವರದಶ್ರೀರಾಮ
ಫಾಲಾಕ್ಷ ಸಖರಾಮ ಭದ್ರಶ್ರೀರಾಮ ೧೭

ಸೇತುಬಂಧನ ರಾಮ ಚಿನ್ಮಯರಾಮ
ಸೀತಾಪತೆ ರಾಮ ಜಿತದೈತ್ಯ ರಾಮ ೧೮

ನತವಿಭೀಷಣರಾಮ ನಗಧರ ರಾಮ
ಚತುರಾಶ್ಯಪಿತ ರಾಮ ಚಂದ್ರಶ್ರೀರಾಮ ೧೯

ಮಾರೀಚ ಮದಭಂಗ ಮಹಾದೇವರಾಮ
ವೀರಾಗ್ರಣೀರಾಮ ವಿಶ್ವೇಶರಾಮ ೨೦

ರಾಮರಾಮ ರಾಮರಾಮ ಶ್ರೀರಾಮ
ಕಾಮಿತಾರ್ಥಪ್ರದ ಕಲ್ಯಾಣರಾಮ ೨೧

ಅಗಣಿತ ಮಹಿಮ ವಿಲಾಸ ಶ್ರೀರಾಮ
ನಿಗಮಗಾನ ವಿನೋದ ನಿತ್ಯ ಶ್ರೀರಾಮ ೨೨

ಕಂಬುಕಂಧರ ರಾಮ ಘನತರರಾಮ
ಕುಂಭಕರ್ಣಾಂತರ ಗೋವಿಂದರಾಮ ೨೩

ಸುಜನ ಹೃತ್ಕಮಲ ಭಾಸುರ ಸೂರ್ಯರಾಮ
ನೀಲ ನೀರದ ವರ್ಣ ನೃಪತಿ ಶ್ರೀರಾಮ ೨೪

ಲೀಲಾ ಮನುಜ ವೇಷ ರಿಪು ಜೈತ್ರರಾಮ
ಪ್ರಕಟ ಪರಾಕ್ರಮ ರಾಮರಾಮ ಶ್ರೀರಾಮ ೨೫

ಅಕಲಂಕ ನಿರುಪಮಾನ ಸಹಾಯ ರಾಮ
ಭಕ್ತವತ್ಸಲ ದೀನ ಬಂಧು ಶ್ರೀರಾಮ ೨೬

ಮುಕ್ತಿದಾಯಕ ರಾಮ ಪೂಜಿತರಾಮ
ದಶಕಂಠ ಮರ್ದನ ತಾರಕನಾಮ ೨೭

ಶಶಿಬಿಂಬ ವದನ ದಾಶರಥಿ ಶ್ರೀರಾಮ
ನಾರಾಯಣಾಚ್ಯುತಾನಂತ ಶ್ರೀರಾಮ ೨೮

ವಾರಿಜೋದರ ಶ್ರೀನಿವಾಸ ಶ್ರೀರಾಮ
ಹರಧನುರ್ಭಂಗ ದಯಾನಿಧೆ ರಾಮ ೨೯

ಪುರುಷೋತ್ತಮ ಪುರಾಣ ಪುರುಷ ಶ್ರೀರಾಮ
ಸರ್ವಲೋಕ ಶರಣ್ಯ ಸೌಭಾಗ್ಯರಾಮ ೩೦

ಶರ್ವರೀಚರ ಹರಕ್ಷ್ಮಾಪತೇರಾಮ
ಸರಶಿಜನಾಭ ದಾಶಾರ್ಹ ಶ್ರೀರಾಮ ೩೧

ಶರಣಾಗತ ತ್ರಾಣ ಶರಣು ಶ್ರೀರಾಮ
ಮುದನೂರ ಗೋಪಾಲ ಮೂರ್ತಿ ಶ್ರೀರಾಮ ೩೨

ಬುಧ ಜನಾಧಾರ ಸರ್ವೋತ್ತಮರಾಮ
ವರ ಹೆನ್ನೆಪುರನಿವಾಸ ಶ್ರೀರಾಮ ೩೩

ನರಸಿಂಹ ಭಕ್ತ ಚಿಂತಾಮಣಿ ರಾಮ
ಇಷ್ಟದಾಯಕ ಹೆನ್ನೆ ವಿಠಲರಾಮ ೩೪

ಕಷ್ಟ ರಕ್ಷಿಸುಯನ್ನ ಶ್ರೀರಾಮರಾಮ
ಕುಜನವನ ಕುಠಾರ ಕೋವಿದ ರಾಮ ೩೫

೨೨

ಶ್ರೀರಾಮ ರಾಮ ರಾಮಾ ರಘುಕುಲ
ಅಬ್ಧಿ ಸೋಮಾ ಪ

ದಶರಥನಂದನ ರಾಮಾ ಜಗದೇಕ ರಾಮಾ
ರಾಮ ಜಾನಕಿ ಪ್ರೇಮ ಸುರಕ್ಷಕ ಸುಧಾಮಾ
ಸಕಲಲೋಕ ಸ್ವಾಮಿ ಜಗನ್ನಾಥ ಅ.ಪ

ದಂಡಿ ದಾನವರ ಕುಲತರಿದೂ ದಶಶಿರನಳಿದೂ ಭೂ
ಮಂಡಲ ಮಾತೆ ಸೀತೆತಂದಾ ಅತಿ ಶರತಿನಿಂದಾ
ಹಿಂಡು ವಾನರ ಬಹು ದಂಡನೆ ಕೂಡಿಸಿ
ಪುಂಡ ರಕ್ಕಸರೆದೆ ಗುಂಡಿಗೆ ಮುರಿದಾ ೧

ವೀರಾಧಿ ವೀರರಲಿ ಗಂಭೀರಾ ಸುಂದರಾಕಾರಾ
ಧೀರಾ ವಿಜಯರಣಶೂರಾ ಪೋಷಿತಾಮರ
ಸಾರ ಜಗಗಳೊಳು ಮೀರಿದವರ ಗರ್ವ
ಕಾರಿಸಿ ಮುರಿದಾ ಹೋ ಧೀರ ಮಹಾನುಭಾವಾ ೨

ಪನ್ನಗಾದ್ರಿಯ ವಾಸಾ ಈಶಾ ಭಕ್ತರ ಪೋಷಾ
ಚಿನ್ಮಯ ರೂಪ ಜಗದೀಶಾ ಚಿದ್ವಿಲಾಸಾ–
ಪನ್ನ ಶರಣ್ಯ ಶ್ರೀ ಹೆನ್ನ ವಿಠ್ಠಲ
ಎನ್ನ ಮರೆಯದಲೆ ಇನ್ನು ರಕ್ಷಿಸೊ ೩

೨೩

ಶೇಷಗಿರಿಯವಾಸಾ ಶ್ರೀವೆಂಕಟೇಶಾ ಶಾಶ್ವತ ಜಗದೀಶಾ ಪ

ಸಾಸಿರ ನಾಮದೊಡೆಯಾ ಸಕಲ ಭಕ್ತರ ಪ್ರೀಯಾ
ವಾಸವಾರ್ಚಿತ ಕಾಯ ವಸುದೇವನಂದನ ಜೇಯಾ ಅ.ಪ

ಹಿಂಡುವಾನರ ಬಳಗಾವಾ ಬಲವನೆ
ಕಟ್ಟಿಕೊಂಡು ಲಂಕೆಯಪುರವಾ
ಕಂಡು ದೈತ್ಯರ ಬಲವಾ ನೆಲ್ಲನು ಮುರಿದು
ಪುಂಡಮಹಾನುಭಾವ
ದಂಡಿದಾನವರನ ಹಿಡದಾ ಖಂಡಗಳು ಕತ್ತರಿಸಿನಿ ದಶಶಿರ
ನಂಡ ತಪ್ಪಿಸಿ ಚಂಡನಾಡಿದ ಪುಂಡರೀಕ ವರದ ದೇವ ೧

ಯಾದವ ಪತಿ ಗೋವಿಂದಾ ಗೋಕುಲಾನಂದಾ
ಮಾಧವ ಶ್ರೀ ಮುಕುಂದಾ
ಭೇದದಿಂದಲಿ ಬಂದಾ ಪೂತಣಿ ಮೊಲೆಯಾ
ಭೇದಿಸಿ ಹರಿಕೊಂದಾ
ಶ್ರೀಧರನೆ ನಿನ್ನ ಚರಿತಗಳು ಇನ್ನೀಧರಿಯೊಳು
ಪೊಗಳಲೊಶವೆ
ಸಾಧು ಜನರಾನಂದ ಮೂರುತಿ ಸಕಲ
ವೈಭವ ದೇವ ದೇವಾ ೨

ಅಜನಾಸುತನು ಮಾಡಿದ ಅವು ಮರ್ಯಾದಿಗೆ
ತ್ಯಜಿಸಿ ವೈಕುಂಠದಿಂದಾ
ಭುಜಗಾದ್ರಿಯನೆ ಸೇರಿದಾ ಪೂರ್ಣಾನಂದ
ಭಜಕಾರ ಪೊರೆವ
ಇಂದಾ ಗಜನ ಹಿಂಬತ್ತಿ ಕಾನನದೊಳು
ನಿಜವುವುಳ್ಳ ಕನ್ನಿಕೆಯ
ಸಂಗ ಭಜನಿಯನು ಕಳಕೊಂಡು ಬಂದ
ತ್ರಿಜಗವಂದಿತ ಹೊನ್ನ ವಿಠಲಾ ೩

೨೪

--------ಹರಿ ನಾರದವರದ ಪ

ಅಗಣಿತ ಮಹಿಮನ ಆನಂದ ನಿಲಯನ
ಬಗೆ ಬಗೆಯಲಿ ಭಕ್ತರನ ಬಿಡದೆ ಪೊರೆವನಾ ೧

ಸುಜನ ವಿಲಾಸನ ಕಂದನ ಕಾಯ್ದನ
-----ವರದನಾ ಸುಂದರ ರೂಪನಾ ೨

ಜಲದೊಳಾಡುವನ ನೆಲದ ಮೇಲಾಡುವನ
ಬಲವುಳ್ಳ ಅರಸನ ಬತ್ತಲೆ ಹಯವನೇರಿದನ ೩

ಶೃಂಗಾರ ಭೂಷಣನ ಸುರಮುನಿವಂದ್ಯನ
ಗಂಗೆಯ ಪಡೆದನ ಕರುಣಾಸಾಗರನ ೪

ಮಕರಕುಂಡಲ ಕರ್ಣ ಮೌಕ್ತಿಕ ಹಾರನಾ
ಸಕಲ ಆಭರಣನ ಸರಸಿಜನಯ್ಯನ ೫

ನಿಗಮ ಗೋಚರನ ನಿತ್ಯ ಕಲ್ಯಾಣನ
ಜಗದೋದ್ಧಾರನ ಜಾನಕಿ ಪ್ರೇಮನಾ ೬

ಅಚ್ಯುತಾನಂತನ ಹರಿ 'ಹೊನ್ನ ವಿಠ್ಠಲನ'
ಸಚ್ಚಿದಾನಂದ ಸರ್ವೋತ್ತಮ ದೇವನ ೭

ದೇವ-ದೇವತೆಗಳ ಸ್ತುತಿ

೨೫

ದೇವಿ ನೀಕರುಣಿಸಮ್ಮಾ ಶಿರಿಲಕುಮಿ
ದೇವಿ ನೀಕರುಣಿಸಮ್ಮಾ
ದೇವಿ ನೀಕರುಣಿಸು ದೀನನಮರಿಯದೇ ಭಾವದಿ
ಮನದಲಿ ಭಜಿಸುವೆ ತಾಯಿ ಪ

ವಾರಿಜಮುಖಿ ನಿನ್ನ ವಂದಿಸುವೆ ನಾನು
ದಾರಿದ್ರ್ಯ ಪರಿಹರಿಸಿ ದಯಮಾಡಿ ಸಲಹಮ್ಮಾ ೧

ಸಾಗರನ ಸುತೆ ಸಕಲ ಲೋಕ ಮಾತೆ
ನಾಗಶಯನ ನುರದಲಿ ನಲಿದಾಡುವಿ ೨

ಮದಗಜಗಾಮಿನಿ ಮಹಿಮಾ ಪ್ರಕಾಶಿನಿ
ಪದುಮನಾಭನ ಪಟ್ಟದ ರಾಣಿ ೩

ಚಂದಿರಮುಖಿ ಚಲುವಕಾಂತೆ ಸೀತೇ
ಇಂದ್ರಾದಿಗಳಿಗೊಲಿದಿಷ್ಟಾರ್ಥ ವೀಯುವಿ ೪

ಅರವಿಂದಾಲಯರನ್ನೆ ಆನಂದ ಪರಿಪೂರ್ಣೆ
'ವರ ಹೆನ್ನೆ ವಿಠಲನ' ರಮಾ ನಮ್ಮಮ್ಮಾ ಕಾಯಮ್ಮಾ ೫

೨೬

ನಮೋ ನಮೋ ಹನುಮ । ನಮೋ ನಮೋ ಭೀಮ।
ನಮೋ ನಮೋ ಮಧ್ವರಾಯ ಸುಪ್ರಿಯ ॥
ಅಂಬುಧಿಯ ಪೋರ್ದು । ನಿಜ ಡಿಂಭದೊಳ್ ಬೆರೆದು ।
ಚೆರ್ಬಿಂಬಳಂ ತರಿದು । ದಶಬಿಂಬನಾಪುರ ಪೊಕ್ಕು ।

ಚೆರ್ಭರುಸಿತಂ ಗುಂಬಗಲ್ ಹುಡುಕುತಲ್
ಗಂಟುಗಳ ದಾಟಿ ।
ಮೂರ್ಜಂಬಳಂತೋರಿ ಎಲ್ಲಂಬಳಂ ನಳಿದು
ಅಂಬುಜಾಕ್ಷಿಗೆ ಮುದ್ರೆಯಿತ್ತ ಹನುಮಂತ ೧

ಸತಿಯೆ ಹಂಬತ್ತಿದ ನತಿಗಳೇದು ಕೃತಕೋಪ
ವೃತನಾಗಿ ಮಶತಂತುರದೆ ಹತಿಯೆ ಮೋಹತಿಯೆ ।
ಸಂಪತಿಯ ತೊಲಗಿ ಅಗತರಾಗಿಗತಿಯಲಿರುತಿಹ ।
ಮತಿಹೀನ ಬಕನಕೊಂದ ಭೀಮನಿಸ್ಸೀಮ ೨

ಮಧ್ಯಗೇಹನುದರದಿಂದುದ್ಭವಿಸಿ ಜಗದ್ಭಲ ಭರಿತರಾಗಿ
ಶಾಸ್ತ್ರ ಶುದ್ಧವನೆ ಕೈ ಕೊಂಡು ಮಧ್ವ ಮತದಲ್ಲಿ ಬಲು
ಶುದ್ಧನಾಗಿ ಅದ್ವೈತಗಳ ನಳಿದು ಸದ್ವೈತ ಮಾರ್ಗದೊಳ್ ।
ಹೆನ್ನೆವಿಠಲನ ಕಂಡ ಮಧ್ವಮುನಿರಾಜನೆ
ಪೂರ್ಣಗುಣತೇಜ ೩

೨೭

ಲಂಕೆ ನಿರ್ಧಾಮ ಮಾಡಲು ಇಲ್ಲದೆ ಈ ಸೀತಾ
ಲಲನೆ ಕ್ಷೇಮವು ತರಲು ಶಂಕೆಯಿಲ್ಲದ
ಬಿರುದಾಂಕನ ಸೇವಕರು ಅಂಕರಲಿ
ಪೇಳಿರಲಧಿಕ ಬಲವಂತರೆಲ್ಲಾ ಪ

ಭೇದಿಸಿ ದೈತ್ಯರ ಹಿಡಿಯಲೊ ಆಪುರಿಸೇರಿ
ಹೊಡೆದು ಮಾರಿಯ ಮಾಡಲು
ದೃಢವು ಎನ್ನಯಮಾತುಬಿಡದೆ ಆರಾವಣನಾ
ಹೊಡೆದು ಹೆಡ ಮುಡಿ ಕಟ್ಟಿ ––––ಲ್ಲಿ ತರಲು ಇಲ್ಲದೆ ೧

ವಾರಿಧಿ ಲಂಘಿಸಲು ಒಳಹೊಕ್ಕು
ದೈತ್ಯ ವಂಶವೇ ಭೇದಿಸಲೆ ಸಾರಿ

ಹೇಳುವೆ ಇನ್ನು ಸರಸಜ್ಞರೆಲ್ಲ ಕೇಳಿ ವಾರೆಲ್ಲ
ಎನ್ನ ಮಾತು ಒಂದೇ ನಿಮಿಷದಿ ಹೇಳಿನ್ನೂ ೨

ನಿಟ್ಟಾಗಿ ಒಳಹೋಗಲು ಹೋಗುತಲಿ
ನಗರಸುಟ್ಟು ಬೂದಿಯ ಮಾಡಲು
ಘಟ್ಟ್ಯಾಗಿ ಕೇಳಿರಿನ್ನು ಘನ 'ಹೊನ್ನವಿಠ್ಠಲ'ನಾದ
ಧಿಟ್ಟ ಶ್ರೀರಾಮರ ಭಂಟ ಹನುಮಂತನಾನು ೩

೨೮

ಹನುಮ ಶ್ರೀರಾಮ ದೇವರ
ಅತಿ ತ್ವರದಲಿ ಬಾ ಹನುಮ ಪ

ದಿನವೊಂದು ಯುಗವಾಗಿ ದೈತ್ಯರಬಾಧೆಗೆ
ತನುವು ಬಹಳ ಪರಿ ತಲ್ಲಣುಸುತಲಿದೆ ಅ.ಪ

ಚಂಡ ಪ್ರಚಂಡನಾದ ದೇವಾ ಸದ್ಗುಣಭಾವಾ
ಮಂಡಲಾಧಿಪ ಶೌರಿ ಹರೇ ಜಗದೋದ್ಧಾರಿ
ಹಿಂಡು ಬಲದಿ ಬಂದೀ ದೈತ್ಯರನೆಲ್ಲ
ಛಂಡಿಸಿ ಬಿಡುವಾ ಶರ್ತು ಬಿರುದು ನಿಂದ್ಹನುಮಾ ೧

ಹತ್ತು ಮಾಸವು ಆಯಿತ್ಹನುಮಾ
ಭಕ್ತರ ಪ್ರೇಮಾ ಒತ್ತಿಸೈನ್ಯದಿಂದ
ವಾರಿಧಿ ಬಂಧಿಸಿ ಮತ್ತಿನ ದೈತ್ಯರ
ಮರ್ದನ ಮಾಡೆಂದ್ಹೇಳ್ಹನುಮಾ ೨

ರಾಜಾಧಿ ರಾಜನಾದಂಥಾ ರಾಮನಂತಾ
ಭೋಜ ಮಹಿಮ ಬಲವಂತ
ವಿಜಯನಂತ ಈನಗರ ರಕ್ಷಕ
'ಹೊನ್ನವಿಠ್ಠಲ' ರಾಜೀವಾಕ್ಷಗೆ ರೋಷವು ಇದ್ದರೆ ೩

೨೯

ಸರಸ್ವತಿ ತಾಯಿ ಬಿಡದೆನ್ನ ಕಾಯಿ ॥
ಪರಮ ಮಂಗಳ ಮೂರ್ತಿ ಹರಿಯ ಸುತನಸತಿ ॥ ಪ

ಕಡಗ ಕಂಕಣ ಗೆಜ್ಜೆ ಕಾಲು ಪೆಂಡಿಗಿಯಿಂದ ॥
ಸಡಗರದಲಿ ಹೊಳೆವ ನಡುವಿನೊಡ್ಯಾಣವು ॥
ಪೊಡವಿಯೊಳಗೆ ನಿಮ್ಮ ವಡಸತಿಯರೊಳು ॥
ಕಡುಸುಂದರಿ ಜಗದಂಬೆ ಕನಕದ ಗೊಂಬೆ ೧

ಕೊರಳಿಗೆ ವೈರನ(?) ಪೋಲುವ ಮುಖದಲ್ಲಿ
ಹೊರಳೆಲಿಯಂದದಿ(?)ಫಣಿಯಲ್ಲಿ ತಿಲಕ ।
ಎರಳೆ ಕಂಗಳೆ ನಿನ್ನ ಹೆರಳಿನ ಸೊಬಗು
ಉರಗನ ಪೋಲ್ವದು ಬಾಲೆ ಸುಲೀಲೆ ೨

ಧರೆಯೊಳಧಿಕ ' ಹೆನ್ನೆಪುರ ಹೆನ್ನೆವಿಠಲನ'
ಚರಣ ಕಮಲದಲಿ ದೇವ ಭಜಿಸುವ
ಪರಮ ಭಕುತಿಯಿಂದ ಪಾಲಿಸೆ ಮಣೀಯುವೆ ।
ಸ್ಥಿರ ನಿನ್ನ ನಂಬಿದ ಜನರನು ಕಾಯುವೀ ೩

೩೦

ಭಾರತಿದೇವಿಯೆ ನಿನ್ನನು ಭಾವದಲಿ ಭಜಿಸುವೆ
ಮನದಲಿ ಪಾರಮಾರ್ಥಿಕ ಭಕುತಿಯಲಿ ಬಲು
ಪ್ರಬಲಿಸಮ್ಮಾ ಪ

ಮಂದ ಬುದ್ದಿಯಿಂದನಾ ಬಲುಮಾನ ಹೀನನಾಗಿ ಬಾಳಿದೆ
ಕುಂದು ಪರಿಹಾರ ಮಾಡಿ ಕಾಯಮ್ಮಾ
ಕೋಮಾಲಾಂಗಿಯೆ ೧

ಹತ್ತು ಎಂಟು ಅಂತರದಿ ಜಿಹ್ವದಿ ತಿಳಿವಂತೆನ್ನ ಮಾಡಮ್ಮಾ
ಸತ್ಯ ವಾಕ್ಯ ಪ್ರವೀಣೆ ನೀನು ಸಾರುವೆನು ನಾನು ೨

ಫಾಲನೇತ್ರಾದಿಗಳಿಲ್ಲಾ ಪರಮ ಮಂಗಳತೋರುವಿ
ಬಾಲರಾಮ ಪದಾಬ್ಜ ಭೃಂಗನ ಪಟ್ಟದರಸಿಯೆ ೩

ಭಕ್ತಿಯಲಿ ನೀನಿತ್ತರುಂಟು ಭಾದ್ಯರಿದಕಾರು ಕಾಣೆನು
ಮುಕ್ತಿ ಮಾರ್ಗವ ತೋರಿಸೆನ್ನನು ಮುಕ್ತನೆನಿಸಮ್ಮಾ ೪

ಭೂಮಿಗಧಿಕ ಹೆನ್ನೆಪುರ ಹೆನ್ನೆ ವಿಠಲನ ಪಾದಪದ್ಮವ
ಪ್ರೇಮದಿಂದಲಿ ಹೃದಯದಲಿ ಇಟ್ಟು ಪ್ರೀತಿ ತೋರಮ್ಮಾ ೫

೩೧

ಹದ್ದುಗಮನ ನೋಡು ಮುದ್ದು ಶ್ರೀಕೃಷ್ಣ ಪ

ಪಕ್ಕಕೆಂಪು ಬಿಳಿಕೊರಳು ನಖವುಳ್ಳ ದೊಡ್ಡಮೂಗ ೧

ಅಂಜಿಸಿ ದಿಶೆಗೇಡಿ ಮಾಡಿದಂತ ನಾಗಕುಲಾಂತಕ
ಆ ಗರುಡನ ೨

ಪನ್ನಗ ಗಿರಿಯಲೆ ಇಪ್ಪ ಯನ್ನಸ್ವಾಮಿ ವರ
'ಹೆನ್ನೆ ವಿಠ್ಠಲ' ಹರಿ ನೀನಿರುವಂಥ ೩

೩೨

ಶಿವ ಮಹದೇವಗೆ ಶರಣೆಂಬೆನಾ
ಮಾಯಾ ಶಿರ ಮಾಲಾಧರನಿಗೆ ಶರಣೆಂಬೆ ನಾ ಪ

ಪಾರ್ವತಿ ರಮಣಗೆ ಶರಣೆಂಬೆ ನಾ
ಭವತಾಪ ಸಂಹಾರಗೆ ಶರಣೆಂಬೆನಾ

ಸರ್ವಕಾಲ ಬಿಡದೆ ಶರಣೆಂಬೆನಾ
ಸಾಧು ಸಜ್ಜನರ ಪೊರೆವಗೆ ಶರಣೆಂಬೆನಾ ೧

ನಂದಿವಾಹನಗೆ ಶರಣೆಂಬೆನಾ
ನಾಗ ಭೂಷಣಗೆ ಶರಣೆಂಬೆನಾ
ಸುಂದರ ಮೂರ್ತಿಗೆ ಶರಣೆಂಬೆನಾ
ಸುರಮುನಿ ವಂದ್ಯಗೆ ಶರಣೆಂಬೆನಾ ೨

ಗಜಚರ್ಮಧಾರಿಗೆ ಶರಣೆಂಬೆನಾ
ಕೈಲಾಸ ವಾಸಿಗೆ ಶರಣೆಂಬೆನಾ
ಭಯನಾಶ ಮಾಡ್ವವಗೆ ಶರಣೆಂಬೆನಾ
ಭಕ್ತಿಭಾವ ಮಾನಸನಿಗೆ ಶರಣೆಂಬೆ ನಾ ೩

ಲಯಕರ್ತ ಮೂರ್ತಿಗೆ ಶರಣೆಂಬೆನಾ
ಕೈಲಾಸವಾಸಿಗೆ ಶರಣೆಂಬೆನಾ
ಭಯನಾಶಮಾಡ್ವವಗೆ ಶರಣೆಂಬೆನಾ
ಭಕ್ತಿಭಾವ ಮಾನಸನಿಗೆ ಶರಣೆಂಬೆ ನಾ ೪

ಆಕಾರಶೂನ್ಯ ಪರೇಶಗೆ ಶರಣೆಂಬೆನಾ
ಅಖಿಲಾಕಾರ ತಾನೆಂಬಗೆ ಶರಣೆಂಬೆನಾ
ಲೋಕದೋಳ್ ಭಕ್ತರ ಪೊರೆವಗೆ ಶರಣೆಂಬೆನಾ
ಶ್ರೀಲೋಲ ಹೆನ್ನೆವಿಠ್ಠಲ ಪ್ರಿಯಗೆ ಶರಣೆಂಬೆನಾ ೫

೩೩

ಶರಣು ಶ್ರೀ ಪಾರ್ವತಿದೇವಿಗೆ ಶರಣು ಶಾಂಭವಿಗೌರಿಗೆ ।
ಶರಣು ಭಕ್ತರ ಪೊರೆವ ಕರುಣಿಗೆ ಶರಣು
ನಮ್ಮ ಶರ್ವಾಣಿಗೆ ಪ

ಲಂಬ ಕರ್ಣನ ಬಿಂಬಭಿದ್ರನ ಸಂಭ್ರಮದಿ ಪಡೆದಮ್ಮಗೆ
ಶಂಬರಾರಿಯ ಅಂಬಿಗಾಹರ ನಂಬಿದಾ ಪಟ್ಟದರಸಿಗೆ ೧

ಅಮಿತ ಮಹಿಮಳೆ ಜ್ಯೋತಿ ಆದಿಶಕ್ತಿ ದುರ್ಗಾಂಬೆಗೆ
ಹೇಮ ಗಿರಿಸುತೆಯಾದ ನಮ್ಮ
ಹೇಮವರ್ಣ ಭವಾನಿಗೆ ೨

ತಂದು ದಕ್ಷನ ಶಿರವ ಮಹಿಷಾಸುರನ
ಹೊಡೆವ ಮೃಡಾಣಿಗೆ
ಕರುಣಾನಿಧಿ 'ಹೆನ್ನೆ ವಿಠಲನ' ಮುನ್ನ
ಸ್ಮರಿಸದವರನ ಕಾಯ್ವಳೆ ೩

ಆತ್ಮ ನಿವೇದನೆ

೩೪

ಅಂತರಂಗದಲ್ಲಿ ಮಾಯಾ ಚಿಂತನೆಮಾಡುವ ಸಾಧೂ
ಸಂತರ ಸಂಗದೊಳಿರಿಸೆನ್ನಾ ಪ

ಸಚ್ಚಿದಾನಂದಾ ನಿನ್ನ ಉದಯಾದಿ ಏಳುತಾ ಶ್ರೀ
ಪದುಮನಾಭಾನ ಭಜನಿ ಮುದದಿ ಮಾಡುತಾ ------- ೧

ಮುಖ್ಯ ಭಕ್ತಾಜನರೊಳು ಪದಸೇವೆಯಾ ಮಾಡುವಂಥ
ನಿಜಜ್ಞಾನ ನಾನು ಹೃದಯಾದೊಳು ಇನ್ನು
ಉದ್ಧರಿಸು ನೀನು ಯನ್ನ ೨

ಹರಿಸರ್ವೋತ್ತಮ ಜ್ಞಾನಾ ಅಧಿಕಾ ಸಂಪನ್ನಾರಾದ ಪರಮ
ಮಹಾನುಭಾವ ಪುಣ್ಯವಂತರ ಕೂಡಾ ಇರುವ ಹಾಗೆ ನೀ
ಬಿಡದೆ ಇರುವಂತೆ ಮಾಡೋ ಶ್ರೀ ಪರಮಾತ್ಮಾ ಪರಮಪುರುಷಾ
ಸೋಪಾನಾ ಶ್ರೀನಿವಾಸ ೩

ನಿತ್ಯಕ್ಕೆರಗೂತ ನಿನ್ನಲ್ಲೆ ನೀತಿ ತಪ್ಪಾದಂತೆ ಇರುವಾ
ಸತ್ಯ ಆತ್ಮತಾ ಅರುವು ಆದಾ
ಶರಣರೊಳಗೆಯಂಣ(ಯನ್ನ) ೪

ಭೃತ್ಯನಾಗಿ ನಡುವಂತ್ತೆ (ನಡಿಯುವಂತೆ) ಪಾಲಿಸು ಎಂದೆ
ತಂದೆ ನಿತ್ಯ 'ಹೊನ್ನ ವಿಠ್ಠಲ ಶ್ರೀ ನಾರಸಿಂಹ'
ನಾರದ ವರದ ೫

೩೫

ಅನಾಥ ನನ್ನಿಂದ ಆಗುವುದು ಏನು
ನೀನೆ ದಯಾಮಾಡಿ ಎನ್ನ ನೋಡಿದರೆ
ಸರಿಯಲ್ಲದೆ ಪ

ಸ್ನಾನ ಸಂಧ್ಯಾವನ ವೆಂಬ ಸತ್ಕರ್ಮ ವಿಧಿಹೋಗೆ
ಧ್ಯಾನಮೌನ ಜಪತಪ ನಿಧಾನ ಹೋಗೆ
ಕಾನನದೊಳಗಿನ ಕೊಂಡೆತ್ತಿ ನಂದದಿ
ಏನು ಅರಿಯದ ವ್ಯರ್ಥ ಹೀನನಾಗಿರುವಂಥ ೧

ಮಾಧವಾ ನಿಮ್ಮ ಸ್ಮರಣೆ ಮಹಾಮಹಿಮ ಸೇವೆ ಹೋಗೆ
ವೇದ ಶಾಸ್ತ್ರಗಳಲ್ಲಿ ಇರುವ ಮರ್ಮ ಹೋಗೆ
ಭೋಧ ಗುರುಕರ್ಣ ಪೂರ್ಣವು ಎಂಬದದು ಹೋಗೆ
------------ ಂದರಿಯದೆ ಹೆಡ್ಡನಾದಂಥಾ ೨

ಹರಿ ನಿಮ್ಮ ಭಕ್ತರ ಅನುಗ್ರಹಕ್ಕೆ ಪಾತ್ರಹೆಂಗೊ
ಹರಿ ನಿನ್ನ ಚರಿತಗಳು ಅರುವದ್ಹೇಗೊ
ಕರುಣಿಸು ಕೈ ಹಿಡಿದು ಕಾಯ್ದರೆ ಸರಿ ಅಲ್ಲದೆ
ವರ 'ಹೊನ್ನ ವಿಠ್ಠಲ' ನೀನೆಂದು ನಾನರಿಯದಾ ೩

೩೬

ಅಮ್ಮಾ ಗೋಪೆಮ್ಮಾ ನಿಮ್ಮ ಕೃಷ್ಣಯ್ಯನ
ಹೊಮ್ಮೆಗಳನ್ನು ಹೇಳುವೆನು
ಗುಮ್ಮ ಆಣೆಯಿಂದಾ ಅಮ್ಮಣಿಗಳ ಹಿಡಿದು
ಅಮ್ಮ ಕೈ ಹಾಕುವನೆ ಪ

ಬತ್ತಿಯೆಂದು ನಾನು ಎತ್ತಿಕೊಂಡು ಮನಿಗೆ
ಕತ್ತಲೊಳಗೆ ಬರುತಿರೆ
ಮತ್ತೇನು ಹೇಳಲಿ ಕತ್ತು ಹಿಡಿದು ಎನ್ನ
ಹತ್ತಿರ ಮಲಗೆಂದನೆ ೧

ಕೂಸೆಂದು ನಾ ಬಂದು ತುಸು ಎತ್ತಿಕೊಳ್ಳಲು
ಏಸು ಮಾತುಗಳಾಡಿದ

ಮೋಸಮಾಡಿ ಕೆಡಹಿ ಘಾಸಿಯ ಮಾಡಿ
ಕೂಸೇನೆ ನಿನ್ನ ಮಗನು ೨

ಪುಟ್ಟನೆಂದು ಶೀರಿಬಿಟ್ಟು ವಾರಿಯಲ್ಲಿಟ್ಟು
ಹುಟ್ಟು ಬತ್ತಲೊಳಿರಲು
ಪುಟ್ಟ ಪುಟ್ಟನೆ ಬಂದು ಪುಂಡತನ ಮಾಡಿದ
ಪುಟ್ಟನೆ ನಿನ್ನ ಮಗನು ೩

ಕಂದನು ಇವನೆಂದು ಎತ್ತಿಕೊಂಡು
ಸಂದಿಯೊಳಗೆ ಬರುತಿರೆ
ಸಂದಿಸಿ ಕಳೆಯುಳ್ಳ ಸಂದುಗಳ್ಬುಡುಕುವ
ನಂದನ ಕಂದನೇನೇ ೪

ಇಂತ ಪರಿಯ ಮಾಡುವ ಕಾಂತ 'ಹೆನ್ನೆವಿಠಲ'
ಎಂತವನೆ ಕೇಳಮ್ಮಾ
ಅಂತರಂಗದಿ ನಿಮ್ಮಗಂತು ತಿಳಿಯಲೆಂದು ಅಂತು
ತಿಳಿಸುವೆ ನಾನು ೫

೩೭

-------ಅರಿಯೆ ----ನಡತಿ ಮಾರ್ಗವನೂ ಹೀನಮಾನವ
ನಾನು ಯಂ ---- ಹರೇ ಪ

ನಾನಾಜಾತಿಗಳಲ್ಲಿ ನಾನಾವರ್ಣಗಳಲ್ಲಿ
ನಾನಾಯೋನಿಗಳಲ್ಲಿ ನಟಿಸಿನಟಿಸಿ
ಜ್ಞಾನವನು ಇಲ್ಲದೆ ಅಜ್ಞಾನ ಮದಾಂಧನಾಗಿ ಏನು
ಇಲ್ಲದೆ ಇರೊ ವಿಧಾನ ಒಂದಲ್ಲದೆ ೧

ಧ್ಯಾನಿಪರ ಒಳಗೂಡಿ ಧ್ಯಾನ ಮಾಡುವ
ದರಿ------ ಸರತಿ ತಿಳಿದಿನ್ನು

ಮನ್ನಿಸಾಲರಿಯೆ ಧೀನ ರಕ್ಷಕ ನಿನ್ನ ದಿನಚರ್ಯ ವರ್ಣಿಸುವರ
ಕಾಣುತಲೆ ವಂದಿಸಿ ಕಾಲುಹಿಡಿವದು ಅರಿಯೆ ೨

ವೇದಾದಿ ಸಕಲವು ವಿದ್ಯಶಾಸ್ತ್ರವನರಿಯೆ ಮೇದಿನಿಯೊಳು
ನಡೆವ ಸುಮಾರ್ಗ ನಾನರಿಯೆ ಗಾಧಿ ಬೋಧಿಗಳೀಗೆ ಒಳಗಾಗಿ
ಈ ಪರಿಯೆಗಾಧೆಯೊಳಗೆ ಬಿದ್ದನ ಕೈ ಪಿಡಿಯೊಧೊರಿಯೆ ೩

ಆಗ ಅಂತರಂಗದಾ ಭಾವನರಿಯೆ ನಾಗಶಯನ ನಿಮ್ಮ
ನಾಮವೆಂಬುದು ಅರಿಯೆ ಕೃಪೆತೋರಿ ರಕ್ಷಿಸಯ್ಯಾ
ಹರಿಯೆ ೪

ಸಕಲಾವು ನೀನೆಂದು ಸಾರುವ ಧರೆಯಾ ಭಕ್ತವತ್ಸಲನೆಂಬ
ಬಿರುದು ನಿಂದರಿಯಾ ಅಕಳಂಕ ಮಹಿಮ 'ಹೊನ್ನವಿಠ್ಠಲನೆ'
ಪ್ರೀಯಾ ಮುಕುತಿದಾಯಕ ಆಲಸ್ಯನಾದವನ ಪೊರೆಯಾ ೫

೩೮

ಅಲ್ಪದೇಹವು ಹುಟ್ಟಿ ಮಾಯ ಕಲ್ಪನೆಗೊಳಗಾಗಿ
ಸ್ವಲ್ಪವನ (ಸ್ವಲ್ಪವು) ಶ್ರೀಹರಿ ನಾಮಸ್ಮರಿಸಿ
ಸದ್ಗತಿ ಕಾಣುವ ಸಾಧನೆ ಇಲ್ಲದ್ಹೋಯಿತು ಪ

ಜನುಮ ಜನುಮದಲಿ
ಸಂಸಾರ ಜಲಧಿಯೊಳಗೆ ಮುಳುಗಿ
ಘನ ಪುರುಷನ ಮಹಿಮೆ ಕಾಣದೆ
ಗಾಢಾಂಧ ಕಾರದಲಿ ದಿನಗಳ ಕಳೆದು
ದೇವರ ಭಜಿಸದೆ ಜನುಮಗಳಳಿದೂ
ಚರಿಸುವದಾಯಿತು ೧

ಭ್ರಾಂತಿಯ ಘನವಾಗಿ ಪ್ರಪಂಚ ಬದ್ಧನಾಗಿ
ಕಾಂತೇರ ಮೋಹಕ್ಕೆ ಸಿಲುಕಿ ಕಾಲವುಕಳೆದಿನ್ನು

ಶಾಂತಮೂರ್ತಿ ಲಕ್ಷ್ಮೀಕಾಂತನ ಮನದಲಿ
ಚಿಂತನೆ ಮಾಡಪ ಮುಕ್ತಿ ಸೇರದಂತಾಯಿತು ೨

ಪನ್ನಗಶಯನನ್ನಾ ಪರಿಪರಿ ಭಕುತಿಲಿ
ಮನದಿಂದ ವರ್ಣಿಸಿ ಜಿವ್ಹದಲಿ
ಹರಿಪದವನ್ನೇ ಕಾಣದಲೆ ಇನ್ನು ಶ್ರೀ
'ಹೆನ್ನವಿಠ್ಠಲ' ಕೃಷ್ಣ ಎನ್ನದೆ ಕಾಲವೆಂಬುದು
ವ್ಯರ್ಥವು ಹೋಯಿತು ೩

೩೯

ಆದರೇನಾಯಿತು ಹರಿ ಎನ್ನ ಪೊರೆಯಾ
ಈ ಧರೆಯೊಳಾರು ಮಾಡದ ದೋಷ ನಾ ಮಾಡಲಿಲ್ಲಾ ಪ

ತಾರಾಪತಿಯಂತೆ ಗುರುದ್ರೋಹ ಮಾಡಿದವನಲ್ಲ
ವಾರಿಜೋದ್ಭವನಂತೆ ತಪ್ಪಲಿಲ್ಲಾ
ಮಾರ ಮಹಿಮನಂತೆ ನಾ ಮಹಿಮನೆಂದು ಹೇಳಲಿಲ್ಲ
ಬಾರಿಬಾರಿಗು ನಿನ್ನ ಭಜಿಸುವದೊಂದೆ ೧

ತಂದೆ ಮಾತನು ಕೇಳಿ ತಾಯಿ ದ್ರೋಹ ಮಾಡಲಿಲ್ಲ
ಬಂಧು ಬಳಗ ದ್ವೇಷ ಮಾಡಿ ಬಾಧಿಸಲಿಲ್ಲ
ಅಂಡಜಾಮಿಳನಂತೆ ಅತಿದ್ರೋಹ ಮಾಡಲಿಲ್ಲ
ಚಂದದಿಂದಲಿ ನಿಮ್ಮ ಸ್ಮರಿಸುವದೊಂದೆ ೨

ಅತಿ ಘಂಟಾಕರ್ಣನಂತೆ ಕರ್ಣಘಂಟೆ ಶಬ್ಧವಿಲ್ಲ
ಹಿತದಿ ---------ಬ್ರಹ್ಮತ್ಯನಿಲ್ಲ
ಸತತ ನೀನೆ ಎನಗೆ ಗತಿಯೆಂದು ಇರುವುದೊಂದೆ
ವಿತರಣಾ ಕೊಂಡರಿಯೆ ವೀರ 'ಹೊನ್ನವಿಠಲಾ' ೩

೪೦

ಇದ್ದಿದ್ದೊಮ್ಮೆ ಇಂಥಾ ಕಷ್ಟ ಏನು ತಂದ್ಯೋ ಹರಿಯೆ
ಬುದ್ಧಿಯ ತಿಳಿದು ಕರ್ಮಿಸಿ ನೋಡಿ
ಪೊರೆಯಬೇಕೆಂದು ನುತಿಸುವವಗೆ ಪ

ಮಧ್ಯಾಹ್ನಕ್ಕೆ ಮನೆಯ ಒಳಗೆ ಮುದ್ದಿಗೆ ಗತಿಯಿಲ್ಲಾ
ವಿದ್ಯಾರ್ಥಿಗಳು ಇಷ್ಟರು ಬಂದರೆ ಇಷ್ಟೊ ಅನ್ನವಿಲ್ಲಾ
ಎಂದು ಹೋಗುವೆನು ಎಲ್ಲಿಗೇನೆಂದರೆ ಎಲ್ಲಿ ಏನಿಲ್ಲಾ
ಬದ್ಧ ಕಂಕಣವ ಕಟ್ಟಿಕೊಂಡು ನಿನ್ನ ಪಾದವೆ ಗತಿ
ಯೆಂದಿರುವೆ ಇಷ್ಟು ೧

ಭಿಕ್ಷಕೆ ಬಂದವರಿಗೆ ನೀಡಲು ಹಿಡಿ ಭತ್ತಕೆ ನೆಲೆಯಿಲ್ಲಾ
ಕುಕ್ಷಂಬರಲಾಗಿ ಗೃಹಕೆ ಬಂದವರಿಗೆ ಕೂಳಿಗೆ ಗತಿಯಿಲ್ಲಾ
ತುಚ್ಛ ಕುಬುದ್ಧಿ ತುಂಟರ ಕೂಡ ಉಪೇಕ್ಷೆ ಮಾಡ್ವರಲ್ಲಾ
ಲಕ್ಷ್ಮೀರಮಣ ಶ್ರೀ ರಘುಕುಲ ತಿಲಕ ನೀ ರಕ್ಷಕನೆಂದಾ
ಪೇಕ್ಷೆಯಲಿರುವನಿಗೆ ೨

ಅತಿಥಿ ಅಭ್ಯಾಗತರು ಬಂದರೆ ಪೂಜಿಸೊ ಅಧಿಕಾರವು ಇಲ್ಲ
ಸುತರು ಹಿತರು ಕೂಡುಂಬುವ ಸಂತತ ಸುಖವು ಕಾಣಲಿಲ್ಲ
ಗತಿಯು ತಪ್ಪಿದ ವ್ಯಾಖ್ಯಾಕ ಈ ಯುಗದೊಳಗಂತ
ಹಿತವರುದಾರಿಲ್ಲ
ಗತಿ ನೀನೆಯಂದು ಅತಿ ಹಿತದಲಿರುವಗೆ
ಪತಿ 'ಹೊನ್ನೆ ವಿಠ್ಠಲ'
ಪರಮ ಪುರುಷ ಕೃಷ್ಣಾ ೩

೪೧

ಇದು ರಕ್ಷಿಸುವಂಥ ಕಾಲ
ಚಿಕ್ಕ ಮುದನೂರ ಗೋಪಾಲ ಮುನಿಜನಲೋಲ ಪ

ಶರಣಾಗತ ವಜ್ರಪಂಜರ । ಜಗದ್ಭರಿತ
ನಿತ್ಯಾನಂದ ಭಕ್ತಮಂದಾರ
ಮೊರೆಹೊಕ್ಕೆ ಸಲಹೆನ್ನ ಮುದದಿಂದ
ನೀ ಕರುಣಾತೋರಿ ತ್ವರ ಕಾಯೋ ಗೋವಿಂದ ೧

ಪಂಕಜದಲಲೋಚನ । ನಿಷ್ಕಲಂಕ
ಸರ್ವೋತ್ತಮ ವೆಂಕಟರಮಣ ।
ಸಂಕಟಗಳ ಬಡದಲೆ ಬಂದೆ ಭವ ಪಂಕವಿದೂರ
ನಿಃಶ್ಶಂಕ ನಿರಾಮಯ ೨

ವರಹೆನ್ನೆ ಪುರವಾಸನೆಂದು । ನರಹರಿ ಕೃಷ್ಣ
ವಿಠಲ ಹರ್ಷದಿ ಬಂದು
ಶರಣೆಂಬೆ ದೀನ ದಯಾಪರ
ಮುರಹರ ಮುರಲೀಧರ ಅಗಣಿತಾವತಾರ ೩

೪೨

ಇಂದೆನ್ನ ಸಲಹೊ ಇಂದು ವದನ
ಇಂದುವದನ ಕುಂದರದನ ಪ

ಬಂದ ದುರಿತವನ್ನಿಂದುಮಾಡಿ ಕರುಣಾ
ಸಿಂಧು ಅರವಿಂದ ಭವ ವಂದಿತ ಮುಕುಂದ ಹರಿ ೧

ನಂದನಂದನ ಗೋವಿಂದ ನಿನ್ನಯ ಪಾದ ದ್ವಂದ್ವ
ಗತಿಯೆಂದೆ ಮುದದಿಂದ ಆನಂದಮಯ ೨

ಪನ್ನಗಾದ್ರೀಶವರ ಹೆನ್ನೆಪುರ ನಿಲಯ ಆ
ಪನ್ನ ಜನರನ್ನ ಕಾಯ್ವನೆ ತ್ವರದಿನ್ನು ೩

೪೩

ಇಷ್ಟೇಕೆ ಎನ್ನ ಮೇಲೆ ಈ ಸಿಟ್ಟು ಹರಿಯೆ
ಸೃಷ್ಟಿಗೆ ನೀ ಕರ್ತನಾಗಿ ಶ್ರೀನಿವಾಸಧೊರಿಯೆ. ಪ

ಇನ್ನಾರು ಹರಿ ಎನಗಿನ್ನು ಈ ಜಗದೊಳಗೆ
ಎನ್ನ ದೂರು ಯಾರಿಗೆ ಮೊರೆಯಿಡಲಿ
ಎನಗೆ ಮನ್ನಿಸಿ ದಯಮಾಡಿ ಸುಮತಿಯ
ನೀ ತಂದು ಕೈಯನ್ನೇ ಹಿಡಿದು ಇನ್ನು ಈಗ ರಕ್ಷಿಸದಲೆ ೧

ಸಕಲ ಜೀವ ರಕ್ಷಕನು ಸಾಧುಜನ ಪೋ–
ಷಕನು ಸಕಲ ಲೋಕಗಳೆಲ್ಲ ಸಲಹುತಿಹನೊ
ಅಕಳಂಕ ಮಹಿಮ ಶ್ರೀ ಆದಿದೇವರ ದೇವ
ಭಕುತ ವತ್ಸಲನೆಂಬ ಬಿರುದು ನಿನ್ನಲ್ಲಿ ೨

ಹಿಂದೆ ಮಾಡಿದ ದೋಷಗಳು ಇಂದು
ಮಾಡಿದ ಪಾಪಗಳು
ಇಂದು ಪರಿಹಾರ ಮಾಡಿ ಎನ್ನ
ಮುಂದೆ ಧನ್ಯನ ಮಾಡಿ ಮುಕ್ತಾನಂತೆನಿಸಿ
ತಂದೆ ' ಹೊನ್ನಯ ವಿಠಲ' ದಯಮಾಡಿ ಸಲಹದಲೆ ೩

೪೪

ಈ ವೇಳೆಯಲಿ ಸಲಹದಿರುವರೆಯನ್ನ
ಶ್ರಿ ವತ್ಸಲಾಂಛನ ಶ್ರಿತಕಲ್ಪತರು ಹರಿ ಪ

ರತಿ ರಮಣಜನಕ ಭಾರತೀರಮಣ ಸನ್ನುತನೆ
ದಿತಿ ತನಯ ಸಂಹಾರಾಚ್ಯುತ ಮುಕುಂದ
ಪತಿತಪಾವನ ಭವದುರಿತ ಪಾಶ ಪರಿಹರಿಸೆ–
ನ್ನುತ ನಿನ್ನ ಸ್ತುತಿಸೆ ಸದ್ಗತಿ ತೋರಿ ಗೋವಿಂದ ೧

ಅಕಲಂಕ ಚರಿತ ತಾರಕರೂಪ ಸರ್ವೇಶ
ಸಕಲಲೋಕ ಶರಣ್ಯ ಪ್ರಕಟ ಮಹಿಮಾ
ಶುಕ ಶೌನಕಾದಿ ಮುನಿನಿಕರವಂದಿತಪಾದ
ವಿಕಸಿತಾಂಬುಜ ನೇತ್ರ ಪ್ರಕಟದಾನವ ಜೈತ್ರ ೨

ಮೊರೆ ಹೊಕ್ಕವರನು ಕಾಯ್ವ ಬಿರುದು ನಿನ್ನದು ಕೃಪಾ
ಕರ ಗರಡಗಮನ ಕರಿವರದ ಶೌರಿ
ಧರಣಿಧರ 'ವರಹೆನ್ನೆ ಪುರನಿಲಯ' ಶ್ರೀಮ
ನೃಹರಿ ಪರಮ ಪುರುಷ ಶಿರಿಯರಸ ಹರುಷದಲಿ ೩

೪೫

ಉದ್ಧರಿಸು ಅನಿರುದ್ಧ ನೀಯನ್ನ
ಮಧ್ವಾಂತರ್ಯಾಮಿ ಮಾಧವ ಕೃಷ್ಣಾ ಪ

ಪಾಂಡುತನಯ ಪರಿಪಾಲನ ಹರಿ
ವೆತಂಡ ವರದ ಶ್ರೀಕುಂಡಲಿಶಯನ ೧

ಅಂಡಜಗಮನ ಪ್ರಂಚಂಡ ಮಹಿಮಾ
ಭವ ಖಂಡನ ಮುನಿನುತ ಮಂಡನಭೀಮ ೨

ನೀಲವರ್ಣ ನವನೀತ ಚೋರ ಗೋ
ಪಾಲ ಮುರಾರಿ ದಯಾಲು ರಮೇಶ ೪

ಕಂಬುಕಂಠ ಕನ ಕಾಂಬರಧರ ಶಶಿ
ಬಿಂಬ ವಿಜಿತ ಮುಖ ಅಂಬುರುಹಾಕ್ಷ ೫

ಪಾಪರಹಿತ ನಿರ್ಲೇಪ ನಿರಂಜನ
ಶ್ರೀಪತಿ ಘನ ಹೆನ್ನೆಪುರನಿಲಯ ೫

೪೨೬

ಎಂಥ ಕೆಲಸಮಾಡಿ ಬಂದನೇ ಗೋಪ್ಯಮ್ಮ ನಿನ ಮಗ
ಎಂಥ ಕೆಲಸ ಮಾಡಿ ಬಂದ ಕಾಂತ ಮಯೊಳಿಲ್ಲದಾಗ
ಚಿಂತೆಲೇಶವಿಲ್ಲದೆ ಬಂದು ಚಿದುಗ ಬುದ್ಧಿತೋರಿ ಆಗ ಪ

ಭಂಡಾರದ ಮನಿಯ ಒಳಗೆ ಗಂಡ ನಾನು
ಮಲಗಿ ಇರಲು ।
ಕಂಡು ಆಕಳ ಕಣ್ಣಿ ತಪ್ಪಿಸಿ ಹೊರಗೆ
ಹೊಡಕೊಂಡು ಯಾರು ಹೋದರಂದನೆ
ಈ ಮಾತು ಕೇಳಿ ಗಂಡ ಆಕಳ ಹುಡುಕ ಹೋದನೆ
ಬೇಗನೆ ಬಂದು ದುಂಡು ಮಲ್ಲಗೆ ತುರುಬಿಗೆ
ಸುತ್ತಿ ಗಂಡನೆಂದು ಕೂಡೆಂದೆನ್ನ ೧

ಬಂಡು ಮಾಡಿ ಬಟ್ಟೆ ಬಿಡಿಸಿ ಭಯವಿಲ್ಲವೆಂದನಮ್ಮ
ಮಾನವುಳ್ಳ ಸ್ತ್ರೀಯರ ಸಂಗ ಸ್ನಾನಕ್ಕಾಗಿ ನದಿಗೆ ಹೋಗಿ
ನಾನು ಉಟ್ಟ ಸೀರೆ ಬಿಟ್ಟನೆ ಬಿಟ್ಟೊರಿಲಿಟ್ಟು
ಸ್ನಾನಮಾಡೊ ನೀರೊಳು ನಿಂತನೆ
ಆವೇಳೇ ಬಂದು ಕಾಣದ್ದಾಗೆ ಶೀರಿ ತೆಗೆದನೆ
ಕಡಿಗೆ ಬಂದು ತಾನು ಅಲ್ಲಿ ಕುಳಿತು ಇರುವುದು
ನಾನು ಕಾಣದೆ ಉಡಲು ಹೋದೆ
ಕಾನನದೊಳು ಕೈಯ್ಯ ಪಿಡಿದು ಏನು ಮಾನ ಕಳದನಮ್ಮಾ ೨

ಹೆಂಗಳೆರು ಎಲ್ಲ ಕೂಡಿ ಗಂಗಾಕ್ರೀಡೆನಾಡೋ ವೇಳೆ
ರಂಗ ಬಂದು ಅಲ್ಲಿ ನಿಂತನೆ ನಿಲುತವರ
ಅಂಗವಸ್ತ್ರವನೆಲ್ಲ ತೆಗೆದನೆ
ತೆಗೆದು ಮರದ ಟೊಂಗೆನೇರಿ ಕಾಡುತಿಹನೆ

ಈ ಪರಿಯಿಂದ ಭಂಗ ಪಡಿಸಿ ನಾರಿಯರ
ಅಂಗವ್ರತವೆಲ್ಲ ಕೆಡಿಸಿ
ರಂಗ ' ಹೆನ್ನೆ ವಿಠಲ' ಶ್ರೀರಂಗಧಾಮನೆನೆಯಿರೆ ೩

೪೭

ಎಂಥಾ ನಿರ್ದಯನಾದ್ಯೋ ಎಲೆ ದೇವನೆ
ಕಂತುಪಿತ ನಿನ್ನ ಅಂತಃಕರಣ ಎನ್ನ ಮೇಲೆ ಇಲ್ಲದೆ ಪ

ಅಂತರಂಗದಿ ಮನದಿ ಅನುದಿನವು ಬಿಡದೆ ನಿಮ್ಮಾ
ಚಿಂತನೆಯ ಮಾಡಿದರೆ ಚಿತ್ತಕರಗದೇಕೆ
ಅಂಥ ಮಹಾದೋಷ ದತಿಶಯನಗೇನುಂಟ–
ನಂತಗುಣ ಪರಿಪೂರ್ಣ ಆದಿನಾರಾಯಣ ೧

ವಾಸುದೇವನೆ ನಿಮ್ಮ ವರ್ಣಿಸುವೆನು ವಸುಧಿಯೊಳು
ಭೂಸುರರ ಪೋಷಿಸುವ ಪುಣ್ಯಪುರುಷಾ
ಘಾಸಿಗೊಳಗಾಗಿ ನಿಮ್ಮ ಧ್ಯಾಸವೇಗತಿಯೆಂದು
ಏಸೋ ಪರಿಯಲಿ ಭಜಿಸಿ ಈಶ ನಿನ್ನ ಕೃಪೆಯಾಗದೂ ೨

ಸಕಲಲೋಕಾಧೀಶ ಸಕಲಭಾರಕರ್ತನಾಗಿ
ಪ್ರಕಟ ಭಕುತರೊಳಗೆ ಪಾಲಿಸದೆ ಎನ್ನಾ
ಮುಕುತಿದಾಯಕ ಹೆನ್ನೆ ವಿಠ್ಠಲ ನೀನೆ ಗೋವಿಂದ
ಅಕಲಂಕ ಮಹಿಮ ನಿನ್ನರುಷವನು ತೋರದಿನ್ನಾ ೩

೪೮

ಎಂಥಾ–––––––––––––ಈಗ
ಪಿಡಿಯೊ ಎನ್ನ ಕೈಯ್ಯ ಬೇಗ
ಅನಂತಾ ಭಗವಂತಾ ಶ್ರೀಕಾಂತಾ ಜಗದಂತ .... ಪ

ಒಂದೊಂದು ದಿನವು ಎಂಬುದು
ಒಂದೊಂದು ಯುಗವು ಆಗಿ
ಬೆಂದು ಬಹಳ ಬೇಸರದಿಂದ
ತಂದೆ -----------ಬಂದೀ
ಕಂದನೆಂದು ಕರುಣದಿಂದ
----------ಗೋವಿಂದ
ನಂದ ಮುಕುಂದಾ
ಶ್ರೀ ಮಂದರಧರ ೧

ಮಕ್ಕಳು ಮರಿಗಳು ಎಲ್ಲಾ
-------ಕಾಣದ ದೇವಾ
ಶುಷ್ಕ ಭೂತರಾಗಿ ಇನ್ನು
ಸುಖವು ಕಾಣದೆ ---ನೆಗೊಂಡು
ಬಹಳಘೋರ ನಾ ಬಡುವದು ಕಂಡು
ನಿಕ್ಕಾಸಲಾರದೆ ನಿನ್ನ ಮೊರೆಯ ಹೊಕ್ಕ
ಕಾಯಯ್ಯ ನೀನೆ ----------
ಶ್ರೀ ಲೋಕನಾಯಕ ಹರಿಯೆ ೨

ಮನಸು ನಿನ್ನ ಧ್ಯಾನವು ಬಿಟ್ಟು
ತಿರಸೂ? ಚಿಂತನೆಗೊಳಗೆ ಆಗಿ
ಕನಸಿನಲ್ಲಿ ಕಾಣೋನಿಲ್ಲಾ
ಕಾಯದ ಸುಖವೆಂಬಾದಿನ್ನು
ಅನಿಮಿತ್ತ ಬಂಧು ಕೃಷ್ಣ ಹರಿ
'ಹೊನ್ನ ವಿಠ್ಠಲ' ರಾಯ ಮನಸಿಜನಯ್ಯ
ಮೋಹನ್ನ ನಿಧಾನಾ
ಸುರಧೇನು ಸದ್ಗುಣಪೂರ್ಣ ೩

೪೯

ಎಂದಿಗೆ ದಯಬಾಹುದೋ ರಾಮಾ
ಎಂದಿಗೆ ದಯಬಾಹುದೊ ಎನ್ನಯ ಮೇಲೆ
ಮಂದರಧರ ಗೋವಿಂದ ಮುಕುಂದ ಪ

ಸ್ಪಷ್ಟದಿ ನಿಮ್ಮ ಪಾದ ಸ್ಮರಿಸುತಲಿರುವನ
ಕಷ್ಟವ ಕಳೆದು ಮನೋಭೀಷ್ಟವ ತೀರಿಸು ೧

ಕಂತುಜನಕ ಶ್ರೀಕಾಂತಾ ಭಕ್ತನ
ಚಿಂತಿಯ ಬಿಡಿಸಿ ಸಂತತ ಪಾಲಿಸಲು ೨

ವರಹೆನ್ನೆಪುರ ನರಹರಿ ನಿನ್ನಯ ಮೊರೆ
ಹೊಕ್ಕವನ ಪೊರೆಯಲಿ ಹರುಷದಲಿ ೩

೫೦

ಎಂದಿಗೊ ನಿನ್ನ ಕರುಣದಯ ಎನಗೆ ಹರಿಯೆ
ಬಂದ ದುರಿತಗಳೆಲ್ಲ ಪರಿಹರಿಸಿ ಪೊರೆವದು ಪ

ಎಷ್ಟು ಪರಿಯಲಿ ನಿನ್ನ ಎಷ್ಟು ನಾ ಮೊರೆ ಇಡಲು
ಕಷ್ಟವನು ಕಳೆವ ಭರ ಕಾಣಲಿಲ್ಲ
ಸ್ಪಷ್ಟ ಭಕುತಿ ನಿಮ್ಮ ಸ್ಮರಿಸುವ ಭಕುತಾರಾ
ದೃಷ್ಟಿಲಿ ನೋಡದೆ ಹೋಗಿ ದಣಿಸುವ ೧

--------ನಿನ ವಸುದೇವನೆಂಬುದು
ಸಾರ್ಥಕವು ಏನು ಎನ್ನ ಸಲಹದಿರಲು
ಕೀರ್ತಿವಂತನು ಎನಿಸಿಕೊಂಡು ಕಾಯದಿರೆ
ಅಪಕೀರ್ತಿ ಬಾರದೆ ನಿನಗೆ ಅಧಿಕ ಜನರೊಳಗೆ ೨

ಧಾರುಣಿಯೊಳಧಿಕರಿನ್ನಾರು ನಿನಗಿನ್ನು
ತೋರು ಮಾರಜನಕನಾದ ಮಹಾಮಹಿಮನೆ
ಧೀರ 'ಹೊನ್ನಯ್ಯ ವಿಠ್ಠಲ' ದೀನ ರಕ್ಷಕನೆಂದು
ಸಾರುತದೆ ನಿಮ್ಮ ಕೀರ್ತಿ ಸಕಲ ಲೋಕದಲಿ ೩

೫೧

ಎದೆ ಒಡೆದು ಏಕೆ ನೀ ಹೆದರುತಿ ಮನವೆ
ಪದುಮನಾಭನ ಪಾದ ಭಜನೆ ಹೃದಯದಲಿರೆ ಪ

ಅಖಿಲ ಜನಗಳ ಪೊರೆವ ಹರಿಯು ಕರ್ತನಾಗಿರಲು
ಸಕಲ ಜಗಬೋಧಗುರು ಸನ್ನಿಧಿ ಇರಲೂ
ಸಕಲ ಬ್ರಹ್ಮಾದಿ ದೇವತೆ ಬಂಧು ಬಳಗಿರಲು
ನಿಖಿರವಿಲ್ಲದೆ ಚಿತ್ತ ನೀನು ಈ ಪರಿಯಿಂದಾ ೧

ಮುದದಿಂದ ಶ್ರೀ ಲಕ್ಷ್ಮೀ ಮಹಾತಾಯಿ ತಾನಿರಲು
ಸದಮಲ ಜ್ಞಾನಿಗಳ ಸಂಬಂಧ ವಿರಲೂ
ಕುದುರೆಯಂದದಿ ಮನಸು ಕ್ರೂರರಾರ್ವರಕೂಡಿ
ಒದರಿ ಪರಿಪರಿಯಲ್ಲಿ ಚಿಂತೆಯೊಳಗಾಗಿ ೨

ಪರಮಾತ್ಮ ಪರಬ್ರಹ್ಮ ಪರಲೋಕ ಬಾಂಧವನು
ಪರಿಪರಿಯ ಪೋಷಿಸುವ ಭಾರಕನು ಇರಲು
ಅರಿತು ನೀ ಚನ್ನಾಗಿ ಹರಿ ಹೊನ್ನ ವಿಠ್ಠಲನ ಸ್ಮರಣೆಯಲಿ
ನಿರುತ ಇರೆ ಸಕಲ ಸಂಭ್ರಮವು ೩

೫೨

ಎಂದೆಂದೂ ಎಂದೆಂದೂ ನಿಮ್ಮ ಪಾದದೆ ಗತಿಯೆಂದು
ಹೊಂದಿದ ಭಕ್ತರ ಪೊರೆಯಲಿಲ್ಲೆ ಅಂದು ಪ

ಇಂದ್ರದ್ಯುಮ್ನನೆಂಬ ಅರಸಗೆ ಮುನಿಶಾಪದಿಂದ
ಸರೋವರದಿ ಗ
ಜೇಂದ್ರನಾಗಿ ಬಂದು ಮಕರಿಗೆ ಸಿಲುಕಿ
ಬಾಧೆಯ ಬಡುತ ಗೋ
ವೀಂದ ನೀ ಗತಿ ಎಂದ ಕರಿಯ ಕಾಯ್ದ ಧೊರಿಯೆ ೧

ದುರುಳ ದುಶ್ಶಾಸನ ನಿಂದ ತರುಣಿಯ
ಮಾನಭಂಗವ ಕಾಯ್ದ ಹರಿಯೆ

------------------- ೨

ಪಿತನ ಬಾಧೆಗೆ ಸಿಲುಕಿ ಅತಿಕಷ್ಟ ಬಡುತಲಿ -------ದೆ
ಹಿಡಿದಂಥ ಮಗನಾದ ಪ್ರಹ್ಲಾದ ಕರಿಯೆ
ಅತಿವೇಗದಿಂದ ಬಂದು ಅವನ ತಂದೆಯ ಕೊಂದು
ಸುತನ ಕಾಯ್ದಂಥ ಸುಗಣ ಶ್ರೀನರಹರಿಯೆ ೩

೫೩

ಏಸುಬಾರಿ ಬೇಡಿದರೆ ಹೇಗಾಯಿತು ಹರೇ
ವಾಸುದೇವನೆ ನಿನ್ನ ಧ್ಯಾನಕೆ ಸರಿಬಾರದಿರೆ ಪ

ಈ ಸಮಯದೀ ಪರಿ ಘಾಸಿಗೊಳಗಾಗಿ ಬಹು
ಕ್ಲೇಶದಿಂದಲಿ ನಿನ್ನ ಆಶಿಸಿದವನಾ
ಭೂಸುರ ಧೊರಿಯೆ ಶ್ರೀನಿವಾಸ ವೇಣುಗೋಪಾಲ
ಕೂಸಿನಂದದಿ ಎತ್ತಿ ಪೋಷಿಸುವುದು ನಿನಗೆ ಹುಟ್ಟದೊ ೧

ಸಂಸಾರ ವೆಂಬಂಥ ಶರಧಿಯೊಳು ಮುಳುಗಿ ಬಹು
ಹಿಂಸೆ ಬಡುತಲಿ ಬಹಳ ಹೀನನಾಗಿ
ಕಂಸಮರ್ದನನಾದ ಘನಮಹಿಮಗೋವಿಂದ
ಸಂಶಯವಿಲ್ಲದೆ ನಿಮ್ಮ ಸ್ಮರಿಸುತಲಿ ಅನುದಿನವೂ ೨

ಅಘಹರನೆ ನಗಧರನೆ ಆದಿ ಪರಾಕ್ರಮನೆ
ನಿಗಮಗೋಚರನಾದ ಘನ 'ಹೊನ್ನ ವಿಠ್ಠಲ'ನೆ
ಜಗತ್ಕರ್ತನೆ ನಿನ್ನ ಚಿಂತನೆಯೆ ಅನುದಿನವೂ
ಬಗೆ ಬಗೆಯಿಂದಲಿ ಮಾಡಿ ಬಳಲಿದರೂ
ಕರುಣಹುಟ್ಟದೇನು ೩

೫೪

ಕಂಡೆನಾನು ಕಂಡೆ ನಾನೊಂದು ಕಮಲ------
ಕರುಣದಿಂದಲಿ
ಕಂಡೆನಾ ಶ್ರೀನಿವಾಸ ಮೂರ್ತಿಯ ಕೋಟಿಸೂರ್ಯ
ಪ್ರಕಾಶ ದೇವನ ಪ

ಮಸ್ತಕದ ಮೇಲಿರುವ ಹೇಮ ಮುಕುಟ-
ಮಾಣಿಕ್ಯಯುಕ್ತವಾಗಿರೆ
ಕಸ್ತೂರಿ ಫಣಿಯಲ್ಲಿ ತಿಲಕವು ಕರಗಳಲ್ಲಿ
ಇರುವ ಶಂಖಚಕ್ರವು
ಮುತ್ತಿನಹಾರ ಮೋಹನನೆ ಮತ್ತೆ ಅಂದಿಗೆ ಗೆಜ್ಜೆಯುಕ್ತದಿ
ವಸ್ತುಗಳು ಅಕೋ ಭೂಷಣವು ಪ್ರತಿರೂಪ-----ಭಾವನಾ ೧

ದೀನರಕ್ಷಕ ದನುಜ ಶಿಕ್ಷಕ ದಿವಿಜ ಪೋಷಕನಾದ ಶ್ರೀಹರಿ
ಜ್ಞಾನಿಗಳ ಬಿಡದಿನ್ನು ಸಲಹುವಾ----
ನ ವಾಧಿಪನೊಳಾದನು ?
ಗಾನಲೋಲನಾಗಿ ಕನಸು ಮನಸಿನಲ್ಲಿ ಕರುಣರಸದಲ್ಲಿ
ಸಾನುರಾಗದಿ ನಾಟ್ಯವಾಡುತ ಸಾರಿ ಸಾರಿಗೆ ಬಂದ ಕೃಷ್ಣನ ೨

ಅಂದದಲಿ ಪೀತಾಂಬರ ಧರಿಸಿಂದು ಕಟಿ ರತ್ನ
ಸುದರ್ಶನ----ಡುವಣಿ
ಯಿಂದ ನಲಿವುತ ಇಷ್ಟದಿಂದಲಿ
ಬಂದು ಎನ್ನ ಹೃದಯ

ಮಂದಿರದಿ ನಿಂದು ನೀರಜನಾಭ ಪರಿ
ಪರಿಯಿಂದ ತೋರುವ
ಮಹಿಮೆ ಚರ್ಯವು ತಂದೆ 'ಹೆನ್ನೆ ವಿಠ್ಠಲನ ' ಮನ
ನಿರುತ ದೃಷ್ಟಿಯಿಂದ ನಾನು ೩

೫೫

ಕನಸು ಕಂಡೆನು ನಾನು ಸಂತೋಷದಿ।
ಕನಸು ಕಂಡೆನು ನಾನು ಅರನಿಮಿಷದೊಳು ಹರಿಯ
ಮನಸಿನಲಿ ಸ್ಮರಿಸಿ ಮಹಾರೂಪವನು ಕೂಡ ಪ

ವೆಂಕಟರಮಣನ ಯಾತ್ರೆಗೆ ಹೋದ್ದಾಗೆ
ಶಂಕೆ ಇಲ್ಲದೆ ಪರಶಿಜನಕ ಕಂಡ್ಹಾಗೆ
ಬಿಂಕದಿಂದಲಿ ದೇವಸ್ಥಾನ ಪವಳಿಯ ಸುತ್ತ
ಅಂಕುರಾರ್ಪಣ ಧ್ವಜಸ್ತಂಭದಲಿ ನಿಂತ್ಹಾಗೆ ೧

ಅಡಗಿ ಶಾಲೆಯ ಅನ್ನಪೂರ್ಣೆಯನ್ನು ಕಂಡ್ಹಾಗೆ
ದೃಢದಿ ಶ್ರೀನಿವಾಸ ದೇವರ ನೋಡಿದ್ಹಾಗೆ
ಕಡು ಹರುಷದಲಿ ತೊಟ್ಲ ತೀರ್ಥ ಸೇವಿಸದ್ಹಾಗೆ
ಸಡಗರದ ಮಧ್ಯರಂಗದಲಿ ನಿಂತ್ಹಾಗೆ ೨

ಶಿರದಲ್ಲಿ ಕಿರೀಟ ಲಲಾಟ ತಿಲಕ ವಿಟ್ಹಾಗೆ
ಕೊರಳೊಳ್ ಮುತ್ತಿನಹಾರ ಪದಕ ತೋರಿದ ಹಾಗೆ
ಕರದಲ್ಲಿ ಶಂಖಚಕ್ರ ಧರಿಸಿ ಕೊಂಡಿರುವ ಹಾಗೆ
ಉರದಲ್ಲಿ ಶಿರಿಲಕುಮಿ ವಾಸವಿದ್ಹಾಗೆ ೩

ಹೊನ್ನ ಹೊಸ್ತಿಲ ದಾಟಿ ವಳಗ್ಹೋಗಿ ನಿಂತ್ಹಾಗೆ
ಚಿನ್ಮಯನ ರೂಪವನು ಚಿಂತಿಸಿದ ಹಾಗೆ
ಅನ್ನ ಪ್ರಸಾದಾತಿ ರಸದೋಶಿ ಕೊಟ್ಹಾಗೆ
ಪನ್ನ ಗಾದ್ರಿ ವಾಸನ ಕಣ್ಣಿಂದ ನೋಡಿದ್ಹಾಗೆ ೪

ನಡುವಿನಲಿ ಒಡ್ಯಾಣ ಪೀತಾಂಬರವನುಟ್ಟಾಗೆ
ಯಡಬಲದಿ ಜಯು ವಿಜಯ ನಿಂತಿರೋಹಾಗೆ
ಪೊಡವಿಯೊಳ್ 'ಹೆನ್ನೆವಿಠ್ಠಲ' ವೆಂಕಟೇಶನ್ನ
ಕಡು ಹರುಷದಲಿ ಕಂಡು ಕೈಮುಗಿದು ನಿಂತ್ಹಾಗೆ ೫

೫೬

ಕಮಲನಯನನ ಕರತಾರೆ
ಕರುಣ ಸಾಗರನ ಕರಿರಾಜ ವರದನ ಪ

-------ಪನ ಕಂಬುಕಂಧರನ
ಲೋಕನಾಯಕ ಶ್ರೀಯದು ವೀರನಾ
ರಾಕೇಂದು ಮುಖಿ ವರ ಲಕ್ಷ್ಮೀನಾಯಕನ
ನೀ ಕರುಣಿಸಿ ಬೇಗ ನೀರಜ ನಾಭನಾ ೧

ಸುಂದರ ಮೂರುತಿ ಸುಜನ ವಿಲಾಸನಾ
ಕಂದ ಪ್ರಹ್ಲಾದನಾ ಕಾಯ್ದದೇವನಾ
ಸುಂದರ ವದನ ಗೋವಿಂದ ಮುಕುಂದನಾ
ಮಂದರಧರನಾದ ಮಾಧವ ಕೃಷ್ಣನಾ ೨

ಯದುಕುಲಾಬ್ಧಿಚಂದ್ರ ವೇದಗೋಚರನಾ
ಮಧು ಸೂದನ ರೂಪ ಮಹಿಮ ಪ್ರಕಾಶನಾ
ಬುದ್ಧ ಜನರ ಸಿರಿಯ ನಾ ಪೂರ್ಣಾನಂದನ
ಚದುರೆ ನೀ ಬೇಗ ಹೋಗಿ ಚಲುವ ಸಂಪನ್ನನಾ ೩

ಆನಂದ ನಿಲಯನಾದ ಅಖಿಲವೈಭವನಾ
ಜ್ಞಾನಿಗಳ ಪೊರೆವ ಘನ ಗಂಭೀರನಾ
ಧೇನು ಪಾಲಕ ದೇವಾದಿ ದೇವನ
ಗಾನಲೋಲನಾದ ವೇಣು ಗೋಪಾಲನ ೪

ಗರುಡವಾಹನನಾ-----ಜನ ಕಾಯ್ದವನಾ
ಸ್ಥಿರ ಹೆನ್ನ ತೀರದಿ ವಾಸವಾಗಿಹನ
ದೊರೆ 'ಹೆನ್ನ ವಿಠ್ಠಲನ' ----ದೇವನಾ
ಪೊರೆವನು ನಮ್ಮ ನಿಂದು ಪರಮಹರುಷದಿಂದಾ ೪

೫೭

ಕರುಣಾ ತೋರದದೇನೊ ನರಹರಿಯೆ ನಿನ್ನ
ಕರುಣೆ ತೋರದೆ ಇರುವ ಪರಿಯೆನ್ನರಿಯೇ ನಿನ್ನಯ
ಚರಣ ಕಮಲ ಸ್ಮರಣೆಯ ಇಹಪರಕೆ ಗತಿಯಂ
ದಿರುವ ಮನಜರಿಗ್ಗರುಷದಿಂದಲಿ ಪ

ಕ್ಷೋಣಿರೂಪ ಶುಭಾಂಗ ಶ್ರೀಧರ
ಸುಸಾಮಗಾನಪ್ರಿಯ ನರಸಿಂಗ
ದೈತ್ಯಾರಿ ಭಕ್ತಾಧೀನ ಗರುಡತುಂಗ ಕರುಣಾಂತರಂಗ
ಜ್ಞಾನನಿಧೆ ಘನವೇಣುನಾದ ಪ್ರವೀಣ
ಶೌರಿ ಪುರಾಣಪುರುಷ
ಭವಾನೀ ಪ್ರಿಯನುತ ದೀನ ಬಾಂಧವ
ದಾನವಾಂತಕ ಶ್ರೀನಿವಾಸನೆ
ಕ್ಷೋಣಿಧರ ಕಲ್ಯಾಣಕರ ಸುಮ ಬಾಣಪಿತ
ಶರಪಾಣೆ ವಿಷ್ವಕ್ಸೇನವರ
ಗೀರ್ವಾಣವಂದಿತ ಜಾನಕೀಧರ ನೀನೇ ಸಲಹೆನೇ ೧

ಮಂದಹಾಸ ಮುಕುಂದ ಸನಕಾದಿ
ಸಂಯಮಿ ವೃಂದನುತ ಮುಚ–
ಕುಂದ ಪಾಲನ ಕೃಪಾಸಿಂಧು ಶ್ರೀ ಗೋವಿಂದ ಇಂದಿರಾನಂದ
ನಂದ ಗೋಪಿಯಾನಂದ ನಾಚ್ಯುತ ಮಂದರಧರ ಮಾಪತೆ
ಸಂಕ್ರಂದನಾರ್ಚಿತ ಕಂಬುಕಂಧರ ಇಂದು
ಮುಖ ಶ್ರೀ ಸುಂದರಾಂಗನೆ

ಅಂದು ಚಂದದಿ ಕಂದ ಕರಿಯಲು ದ್ವಂದ್ವ
ರೂಪದಿ ಬಂದು ಸ್ತಂಭದಿ
ಮಂದ ದನುಜನ ಕೊಂದೆ ನೀ ಮುದದಿಂದ
ರಕ್ಷಿಸೆಂದೆನಲು ಹರಿ ೨

ಶರಣಜನ ಮಂದಾರ ಶ್ರೀರಾಮ
ತ್ರಿಜಗದ್ಧರಿತ ಕೌಸ್ತುಭಹಾರ
ಶೋಭಿತ ಪೀತಾಂಬರ ಸುಮೇರುಗಂಭೀರ
ನರಮೃಗಾಕಾರ
ಗರುಡವಾಹನ ಪರಮ ಪಾವನ ಚರಿತ
ಮಂಗಳಕರ ಮಹಿಮಾ
ಕರಿರಾಜ ವರದ ದಾಶರಥಿ ದಾಮೋದರ
ಶರಣು ಭಾಸುರ ಕಿರೀಟನೆ
ದುರಿತಹರ ಶ್ರೀಧರ ಪರಾತ್ಪರ
ನಿರತದಲಿ 'ಹೆನ್ನೆಪುರ ನಿಲಯ'
ಸಿರಿಯರಸ ನಿನ್ನಯ ಮೊರೆಯ ಹೊಕ್ಕರೆ ತ್ವರದಲಿ ನೀ ೩

೫೮

ಕರುಣಿಸಬಾರದೇನು ಶರಣೆಂಬೆ ನಾನು
ಕರುಣಿಸ ಬಾರದೆ ಮೊರೆಯ ಹೊಕ್ಕವನ
ಶರಣಾಗತ ಪಂಜರನೆಂಬೊ ಬಿರುದಿರೆ ಪ

ಸ್ತಂಭದಿ ನೀ ಬಂದು ದೈತ್ಯನ ಬೇಗ
ಶೀಳಿಕೋಪದಿಂದ ಇರಲು ಆಗ
ಬ್ರಹ್ಮೇಂದ್ರ ರುದ್ರ ವೃಂದ ಬೆದರಿ ಪೋಗೆ ಪ್ರಹ್ಲಾದನಾಗ
ಇಂದಿರಾವರ ಗೋವಿಂದ ಕೃಪೆಯ ಮಾಡೆಂದು ಸ್ತುತಿಸೆ
ಆನಂದದಿ ಕಾಯ್ದತಿ ಸುಂದರಮೂರ್ತಿ
ಮುಕುಂದ ಧರಣಿಧರ ಸಿಂಧುಶಯನ ಅರವಿಂದನಯನ ಹರಿ ೧

ದಶರಥ ಸುತನೆನಸಿ ಮುನಿಯಧ್ವರ ಕುಶಲದಿನ್ನುದ್ಧರಿಸಿ
ಅಸದೃಶವರ ಪಶುಪತಿ ಧನು ಭಂಜಿಸಿ
ಸೀತೆಯ ಕೋರಿ ದಶರಥನಾಜ್ಞೆ ವಹಿಸಿ ಕಾನನದಿ ಚರಿಸಿ
ಕುಶನಿಧಿಯನು ಬಂಧಿಸಿ ರಾವಣನ
ದಶ ಶಿರಗಳ ಭರದಿಂದಲಿ ಖಂಡಿಸಿ ಅವನನುಜಗ
ನಿಶದೊಳ್ ಶಿರಿಲಾಲಿಸಿ ಪೊರೆದ ಶ್ರೀಶಶಿಧರನು ಹರಿ ೨

ಗಂಗೆಯೊಳ್ ನಕ್ರ ಭಂಗಬಡಿಸೆ ಗಜಗಳರಸ ರಂಗ
ಮುರಾರಿ ದೇವೋತ್ತುಂಗ ಶ್ರೀ ಶ್ಯಾಮಲಾಂಗ
ಭಕ್ತಾಭಿಮಾನಿ ಮಂಗಳಾರಸತ್ಸಂಗ ಜಗದಂತರಂಗ
ಹಿಂಗದೆ ಭಜಿಸೆ ವಿಹಂಗ ಸಿರಿ ನರಸಿಂಹ ಬಂದು
ಶಾಪಂಗಳ ತರಿದೆ ಭುಜಂಗತಲ್ಪ ಕಾನಂಗಪಿತ
'ಹೆನ್ನೆರಂಗ' ಶರಣು ರಣರಂಗ ಭೀಮ ಹರಿ ೩

೨೯

ಕರುಣಿಸುವ ಹರಿ ನಿರಂತರವು ಮನವೆ
ಸರಸಿಜಾಕ್ಷನ ಪಾದ ಸ್ಮರಣೆಯನು ನೆರೆನಂಬು ಪ

ಕಂದ ಪ್ರಹ್ಲಾದನ ತಂದೆ ಭಾಧಿಸಲು ಗೋ
ವಿಂದ ಘನ ಸ್ತಂಭದೊಳ್ ಬಂದು ತಾಮುದದಿ
ಮಂದ ದನುಜನ ಬಿಡದೆ ಕೊಂದ ಶ್ರೀವರ ಮುಚು
ಕುಂದ ವರದ ಯೆಂದು ನೀ ಭಜಿಸು ೧

ಛಲದಿಂದ ಮಲತಾಯಿ ಸಲೆ ಧ್ರುವನ ಕಾನನಕೆ
ಕಳುಹಲಾಕ್ಷಣವೆ ಶ್ರೀ ನಳಿನನಾಭ
ಒಲಿದು ಪೊರಿದನು ಮಹಾಒಳಿತೆಂದು ಅವಗೆ
ನಿಶ್ಚಲ ಪದವಿಯನು ಇತ್ತ ಜಲನಿಧಿಶಯನ ೨

ಅರಸು ಮುನಿಶಾಪದಲಿ ಕರಿಯಾಗಿ ಜನಿಸಿ ಮ-
ಕರ ಬಾಧೆಗೆ ಶಿಲ್ಕಿ ಮೊರೆಯನಿಡಲು
ತ್ವರದಿ ಪೊರದಂಥ ಹೆನ್ನೆಪುರ ಲಕ್ಷ್ಮೀನರಶಿಂಹ
ಗರುಡವಾಹನನಾದ ಪರಮಾತ್ಮ ಸಿರಿ ಕೃಷ್ಣಾ ೩

೬೦

ಕರುಣಿಸೆಲೊ ಮುಕುಂದ ಮಾಧವ
ಶ್ರೀರಾಮ ಧರಣಿಧರನೆನಿಸಿ ನಿಮ್ಮ ದಾಸ್ಯವ ಪ

ಅಂಬುಜಾಕ್ಷ ಕಂಬುಕಂದರ
ಶ್ರೀರಾಮ ಜಂಬಭೇದಿ ವಿನುತ ಮುರಹರ
ಶಂಬರಾರಿ ಜನಕ ಗಿರಿಧರ
ಶ್ರೀರಾಮ ಕುಂಭಿಣೀಶ ಶೌರಿ ಶುಭಕರ ೧

ಇನಕುಲೇಶ ಚಾರು ಸುಚರಿತ
ಶ್ರೀರಾಮ ವನಜನಾಭ ಮುನಿ ವಂದಿತ
ದನುಜ ಗರ್ವ ಸಂಹಾರಾಚ್ಯುತ
ಶ್ರೀರಾಮ ಅನಘ ಕನಕವಸನ ಭೂಷಿತ ೨

ಪನ್ನಗೇಂದ್ರಶಯನ ವಾಮನ
ಶ್ರೀರಾಮ ಉನ್ನತಾಂಗ ಉದಧಿ ಬಂಧನ
ಹೆನ್ನೆಪುರನಿಲಯ ಜನಾರ್ದನ
ಶ್ರೀರಾಮಯನ್ನ ಮೊರೆಯ ಕೇಳಿ ಬೇಗನೆ ೩

೬೧

ಕರುಣಿಸೋ ಬೇಗನೆ ಕರಿವರದ ಹರಿ ಪ

ತೋಯಜನಯನ ಕಾಯಜಪಿತ ದೈ
ತ್ಯೇಯ ಹರಣ ಸ್ವಶ್ರೇಯ ಸಕರಹರಿ ೧

ಶ್ರೀಯುತ ವಿಧೇಯ ನೃಹರೇ
ನಾರಾಯಣ ಯದುಕುಲನಾಯಕ ಮಾಧವ ೨

ಅಂಡಜಗಮನ ಆಖಂಡಲನುತ ಭೂ
ಮಂಡಲ ಪಾಲಕ ತಾಂಡವ ಕೃಷ್ಣಾ ೩

ನಗಧರವರ ಪನ್ನಗತಲ್ಪಕ ನರಮೃಗರೂಪಾ–
ನಘ ತ್ರಿಗುಣಾತ್ಮಕ ಹರಿ ೪

ಗೋಪತನಯ ಸಂಜೀವಿತ ತ್ರಿಜಗ–
ದ್ವ್ಯಾಪಕ ಘನ ಹೆನ್ನೆಪುರದ ಶ್ರೀಪತಿ ೫

೬೨

ಕುಂಡಲಿಶಯನನ ಕೋದಂಡಧರನಾ
ಮಂಡಲಾಧಿಪ ತ್ರಿ------- ಬಲವಂತನ ಪ

ಪುಂಡರೀಕ ವರದನ ಪುರಾಣ ಪುರುಷನ
ಪಂಡರಪುರ ನಿಲಯ ಭಕ್ತರ ಚಲನ ೧

ದಂಡಿ ದಾನವರನ ಛೇದನ ಮಾಡಿದನ
-------ಕರುಣಿಸಿ ಕಾಯ್ದನ ೨

ಪುಂಡರಾವಣನ ಶಿರಗಳ ತರಿದನ
ಅಂಡಸೇರಿ ಶರಣಂದನ ಕಾಯ್ದನ ೩

ದ್ರೌಪದಿ ಮಾನವ ದಯಮಾಡಿ ಕಾಯ್ದನ
ಕವಿಜನ ರಕ್ಷಕ ಘನ ಶ್ರೀಕೃಷ್ಣನ ೪

ಭುವಿನಾಯಕನ ಪೂರ್ಣ ಪ್ರಭಾಕರನ
ರವಿಕೋಟಿ ತೇಜನ ರಾಜೀವ ನೇತ್ರನ ೫

ಲವಕುಶ ಜನಕನ ರಘುಕುಲ ಶ್ರೇಷ್ಠನ
-------------------- ೬

ಭವಸುರ ವಂದ್ಯನ ಪರಮಾನಂದನ
ಕಲೆಯುಕ್ತ ಶಿರಸೂರನ ೭

------ನಾಭನ ಪಾಂಡವ ಪಕ್ಷನ
ಮುದನೂರ ವಾಸನ ಮುನಿಜನವಂದ್ಯನ ೮

ಯದುಕುಲ ಭೂಷಣನ --------
ವೇದಾಂತ ವೇದ್ಯನ ವಿಶ್ವರೂಪನ ೯

ಹೆನ್ನಪುರನಿಲವಾಸ 'ಹೆನ್ನೆವಿಠ್ಠಲನ'
ನಿನ್ನ ------- ಶ್ರೀತ ಜನಪೋಷಕನ ೧೦

೬೩*

ಖ್ಯಾತಿಲಿ ನಿನ್ನ ಸ್ತುತಿಸುವ ಭಕುತನ
ಪ್ರೀತಿಲಿ ರಕ್ಷಿಪ ರಾಮ ಪೂತನಿ ---
ಪಾತಕ ಭವದೂರ ಪುರ 'ಹೊನ್ನವಿಠ್ಠಲ' ರಾಮ ೩

೬೪

---------------ಗುಡಿವಾಸಾ ಪ

-------ತಾಪತ್ರಯಗಳಿಂದ -------ರದೆ ಬಂದೆ
ಭೂಪಾ ನೀ ಕರುಣದಿ ಪೊರೆಯೆನ್ನ ಅ.ಪ

---

* ಈ ಕೀರ್ತನೆಯ ಪಲ್ಲವಿ ಹಾಗೂ ಎರಡು ನುಡಿಗಳು ಇಲ್ಲ.

ಚಂದ್ರ ಸೂರ್ಯ ನೇತ್ರಾಗದಾಧರ----ಸುಂದರಗಾತ್ರಾ
ಇಂದಿರಾ ಹೃದಯಾನಂದಾ ವಿಶ್ವೇಶ ಮು–
ಕುಂದ ಮಾಧವ ಗೋವಿಂದಾ
ಸಿಂಧು ಶಯನ ಆಶ್ರಿತ ಜನ ರಕ್ಷಕ
ಮಂದರಧರ ಹರಿ ಮಂಗಳದಾಯಕ ೧

ಸುರಮುನಿ ವಂದ್ಯ ದೇವ ದೇವಾದಿ ದೇವ
ವರದಾ ಮಹಾನುಭಾವ ಕರುಣಸಾಗರನಿಲಯಾ
ಕಮಲನಾಭ ಸ್ಥಿರಹರಿ ಪುರಿಗೀಯಾ
ಪರಮಭಕ್ತನಾದ ಕರಿರಾಜನ ಕಾಯ್ದ
ಪರಮಾತ್ಮನೆಂದು ಇಂದು ಭಜಿಸುವೆ ನಿಮ್ಮ ಪಾದ ೨

ಶಂಕರನುತ ಶಾಶ್ವತ ಜಗತ್ಕರ್ತ
ಪಂಕಜೋದ್ಭವನ ಪಿತ
ಶಂಕೆಯಿಲ್ಲದೆ ದೈತ್ಯರಾ ಭೇದಿಸಿ------ನೆನಿಸಿದ ಧೀರಾ
ಕಿಂಕರನಾನು ನಿಮ್ಮ ಕೀರ್ತಿ ಕೊಂಡಾಡುವೆ
ಪುಂಕಾಲದಿ (?) ಸಲಹೊ ಹೊನ್ನಪುರ 'ಹೊನ್ನವಿಠ್ಠಲಾ' ೩

೬೫

ಜಯಶ್ರೀ ರಾಮನ ಜಾನಕಿ ಪ್ರೇಮನ
ಭಯ ಭಕ್ತಿಲಿ ಮನ ಭಜಿಸಿರು ಅನುದಿನ ಪ

ಸುಂದರ ವದನನ ಶುಭ ಕಲ್ಯಾಣನ
ಮಂದರಧರ ಮಾಧವ ಮುಕುಂದನ ೧

ಇಂದಿರೆಯರಸನ ವಿಶ್ವ ಪ್ರಕಾಶನಾ
--ನಂದದಿ ಹೃದಯ ಗೋವಿಂದನ ಬಿಡದಿನ್ನು ೨

ಕಂದರ್ಪ ಜನಕನ ಕರಿರಾಜ ವರದನ
ಸಿಂಧುಶಯನ ಹರಿ ಶ್ರೀ ಜಗನ್ನಾಥನ ೩

ಸೌಂದರ್ಯ ರೂಪನ ಪುರುಷೋತ್ತಮನ
ಕುಂದರದನ ಹರಿ ಕೋಮಲಾಂಗನ ೪

ಪರಮ ಪುರುಷನ ಪತಿತಪಾವನನ
ನರಹರಿರೂಪನ ನಾರಾಯಣನ ೫

ಗರುಡಾರೂಢನ ಕರುಣಾಸಾಗರನ
ಉರದಲಿ ಲಕ್ಷ್ಮಿಯ ಧರಿಸಿ ಕೊಂಡಿಹನ ೬

ಉರಗಾದ್ರಿ ವಾಸನ ವಸುದೇವಸುತನಾ
ಭವಪಾಪ ಸಂಹಾರನ ೭

ಶರಣರ ಕಾಯುವನ ಶ್ರೀನಿವಾಸನ
ಉರಗಶಯನನ ಹರಿವಾಸುದೇವನಾ ೮

ಮಂಗಳಮೂರುತಿ ಮಹಾನುಭಾವನ
ಗಂಗೆಯ ಪಡೆದನ ಘನ ಗಂಭೀರನ ೯

ಶೃಂಗಾರ ಭೂಷಣನ ಸುಗುಣ ಪ್ರತಾಪನ
ಅಂಗನೆಯರೆಡ ಬಲದಲಿರುವನ ೧೦

ರಂಗನಾಯಕನ ರಾಜಾಧಿರಾಜನ
ಮಂಗಾರಮಣನ ಮಧುಸೂದನನಾ ೧೧

ರಂಗವುಳ್ಳ ಪೀತಾಂಬರ ಧರನಾ
ಗಂಗಾಧರ ಪ್ರಿಯ ಕಂಬು ಕಂಧರನಾ ೧೨

೬೬

ತಂದೆ ನಿನ್ನ ಕೃಪೆಯು ಎಂದಿಗೊ ಗೋವಿಂದ ಹರೆ ಪ

ತಂದೆ ನಿನ್ನ ಕೃಪೆಯು ಎಂದಿಗೆ -------ಸಿಗುವದೆಂದೆ
ನಂದೂ ಎಂದು ಕಾಣಲಿಲ್ಲ
ಮಂದರಾಧರ ಮಾಧವಕೇಶವ ಅ.ಪ

ಸಾರೆ ಸಾರೆ ---- ಜ್ಜ ಸಂಸಾರದೊಳು ಮುಳುಗಿ ತೇಲುತಾ
ಇರುವುದು ಒಂದೆ ಧೀರ ನಿಮ್ಮಯ ಸ್ಮರಣೆಯ ತೋರದೆ
-----ಕ್ರೂರ ಬುದ್ಧಿಯಿಂದ ಮುಕ್ತಿದಾರಿ
ಕಾಣದಂತೆ ಆಯಿತು ೧

ಸಕಲವೇದ ಶಾಸ್ತ್ರ ಪುರಾಣ----ರಿತಾ ಪ್ರಕಟ
ಭಕ್ತ ಪಂಡಿತಾರ್ಯರಾ ಭಜಿಸದೆ ಮನದಿ
ವಿಕಟನಾಗಿ ನಿಮ್ಮ ಮಹಿಮೆಯನು ಕಾಣದೆ-----ತು
ಸಕಲಲೋಕ ಕರ್ತ ದೇವ ಸಾಧು ಜನರ ರಕ್ಷಿಸುವಾ ೨

ಬ್ರಹ್ಮೇಂದ್ರ ರುದ್ರಾದಿಗಳಿಗೆ ವಶವು ----
ಮಹಿಮೆಯನು ಹೇಳಾ ನೀ
ಅನೇಕ ಚರಿತ ತೋಯಜನಕನಾದ
ಪರಬ್ರಹ್ಮ 'ಹೆನ್ನವಿಠ್ಠಲಾ ' ಸಂ-----ತೋರದು ನಿಮ್ಮ
ಕರುಣ ತೋರಿದರೆ ಸರಿ ೩

೬೭

ದಶರಥನಂದನ ದೀನದಯಾಪರ ಶಶಿಮುಖಿ ಜಾನಕಿ ರಮಣ
ವಸುಧೆಯೊಳಗೆ ನಿಮ್ಮ ಭಜನೆಯ ಮಾಡುವರ
ಶಿಶುವುಯೆಂದು ತಿಳಿದು ಶೀಘ್ರದಿ ರಕ್ಷಿಸೊ ಪ

ಪಶುಪತಿ ರಕ್ಷಕ ಪಾವನ ಮೂರ್ತಿ
ಪಶುಪಾಲಕನಾದ ಪರಮಾತ್ಮ
ಕುಸುಮಜನನು ಅತಿಕರುಣದಿ ನೀನು
ಕುಶಲದಿ ಪಡೆದ ಗುಣವಂತಾ
ಹಸ ಮೀರಿನಡೆವಂತ ಅನೇಕ ದುಷ್ಟ
ಅಸುರರ ಛೇದಿಸಿದ ಬಲವಂತಾ
ದಶದಿಕ್ಕಿನೊಳಗೆ ದಾರನು ಕಾಣೆನೊ
ದಶವಂತನು ನಿನಗಾರು ಸರಿಹಾರೊ ೧

ಪಿತೃವಾಕ್ಯ ಪರಿಪಾಲನೆ ಮಾಡಿದ
ಪುತ್ರನು ಅನಿಸಿದ ಪುಣ್ಯನಿಧಿ
ಸತಿ ಪತಿ ಧರ್ಮವ ಸರ್ವದಾ ನಡೆಸುವ
ಸತ್ಯಮೂರ್ತಿ ಸೌಭಾಗ್ಯನಿಧಿ
ಶತದ್ರೋಹಿಯಾಗಿ ಸೀತೆಯ ಒಯ್ದನ
ಶತಮುಖನಯ್ಯನ ಸಂಹರಿಸಿದಿ
ಸತತ ವಿಭೀಷಣ ಭಕ್ತಿಯಿಟ್ಟ
ಸಲುವಾಗಿ ಲಂಕೆಯ ಧಾರೆಯನೆರದೀ ೨

ಯಾದವ ಕುಲಪತಿ ಯಶೋದೆನಂದನ
ವ್ಯಾಧನ ರಕ್ಷಿಸಿದಿ ವಿಶ್ವೇಶ
ಬಾಧಕ್ಕೆ ಒಳಗಾಗಿ ಕರಿಕೂಗಲು ಮಕರಿ
ಬಾಧೆಯ ತಪ್ಪಿಸಿದ ಪರಮೇಶಾ
ಸಾಧು ಸಜ್ಜನ ಸರ್ವರ ಸಲಹುವ
ಸಾಧು ಗುಣಾನಂದ ಸರ್ವೇಶಾ
ಮಾಧವ 'ಸಿರಿಹೆನ್ನೆ ವಿಠಲ' ನಿನ್ನಯ
ಮೋದವ ತೋರೋ ಜಗದೀಶಾ ೩

೬೮

ದೂರು ಯಾತಕ್ಕೆ ತರಲ್ಯಮ್ಮಾ । ಯಶೋದಮ್ಮ ॥
ವಾರಿಜ ಮುಖಿಯರು ಶೇರದೆ ಹೇಳ್ವರು ಪ

ವಂದು ದಿನ ನಾ ಮನಿಯ ಬಿಟ್ಟು ಹೋಗುವೆನೆಯಲ್ಲ್ಯೊ ।
ಬಂದು ಹೇಳುವರೆಲ್ಲ ಕೇಳು ಗೋಕುಲದೊಳು ।
ಸಂದು ಸಂದನೆ ತಿರುಗಿ ಮಂದಗಮನಿಯರು ।
ಹೊಂದಿ ಒದಗಿ ಬಾಯಂದದ್ದು ನಿಜಮಾತು ೧

ಯನ್ನ ಮಾತನ್ನು ಸುಳ್ಳಾದರೆ ।
ಗೋವಳ್ಳಾರಾ ಮನ್ನಿಸಿ ಬದಿಗೆ ಕರೆದುಕೇಳು । ಅವರಿಗೆ ಹೇಳು
ಕನ್ಯೆಯರೆಲ್ಲಾ ಬಂದು ಬೆಣ್ಣೆಗಳ್ಳನೆಂದು
ಕಣ್ಣಿಲಿ ನೋಡದೆಯನ್ನ ದಂಡಿಸುವರೇ ೨

ಪರರ ಮನೆಯೊಳಗಿರುವ ಮಡಿಕೆ ಪಾತ್ರೆ ನಿನಗ್ಯಾಕೆ ।
ಸ್ಥಿರ ಕ್ಷೀರಾಂ ಬುಧಿಶಯನನಾಗಿ । ಇರವದು ಆಗಿ ।
ಪುರದ ಸ್ತ್ರೀಯರು ಯಲ್ಲ ದೊರೆ ಹೆನ್ನೆ ವಿಠಲನೆಂದು
ಮರೆತು ಹೇಳಲಿ ಬಹು ಸ್ಥಿರವಾಗಿ ಮಾಡುವರೇನೆ ೩

೬೯

ದೇವ ದೇವ ದೇವ ದಿವಿಜರೊಡಿಯನೆ
ಭಾವ ಪೂರ್ವಕ ವಿಧದಿ ಭಜಿಸುವೆನು ನಾನು ಪ

ನಂದಗೋಪಿಯ ಕಂದನಾದ ಸುಂದರಾಂಗನೆ
ಸಿಂಧುಶಯನ ಮಂದರಧರ ಇಂದಿರೇಶನೆ
ಕಂದ ಕೂಗಲು ಬಂದು ಕಾಯ್ದ ದ್ವಂದ್ವರೂಪನೆ
ಎಂದು ನಿನ್ನ ಪೊಂದಿದವರನಂದ ಪೊರೆವನೆ ೧

ಹೆಂಗಳೆರ ಸಂಗವುಳ್ಳ ಮಂಗಳಾಂಗನೆ
ಶೃಂಗಾರಾಂಗ ರಮಾಸಂಗವುಳ್ಳ ರಂಗನೆ
ಗಂಗಾಜನಕ ನೀರಜಾಂಬಕ ಗಾನಲೋಲನೆ
ಮಂಗಳಕರದಿಂದ ಲಭಯಂಗಳೀವನೆ ೨

ರನ್ನೆ ಸೀತೆಯನ್ನು ವೈದವನ್ನ ತರಿದನೆ
ನಿನ್ನವರಿವರೆನ್ನುವವರನ್ನು ಕಾಯ್ವನೆ
ಪನ್ನಗಶಯನನಾದ ಚೆನ್ನ ನೀವನೆ
ಘನ್ನ 'ಶ್ರೀ ಹೆನ್ನೆವಿಠಲ' ನನ್ನ ಕಾರುಣಿ ೩

೭೦

ನಂಬಿದೆನೊ ನೀರೇರುಹಾಕ್ಷ ನಿನ್ನ ನಂಬಿದೆನೊ
ನಿನ್ನ ನಂಬಿದೆ ಯನ್ನ ಸಲಹುವದಿನ್ನು ಮನ್ನಿಸೊ
ಹೆನ್ನೆ ವಿಠ್ಠಲ ಪ

ಸಿಂಧು ಗಂಭೀರ ಶ್ರೀ ವೇಣುನಾದ ಮಂದರಾದ್ರಿಧರ
ನಂದನಂದನ ಕುಂದರದನ ಗೋವಿಂದ ಪರಮಾ-
ನಂದ ವಿಗ್ರಹ ೧

ಜಾನಕೀರಮಣ ಸರ್ವೇಶ ಈಶವಿನುತ ಚರಣ
ದೀನಬಾಂಧವ ದೇವರದೇವ ಪುರಾಣಪುರುಷ
ಮಹಾನುಭಾವ ಹರಿ ೨

ಬಾಲಗೋಪಾಲ ಭಾಸುರ ಗುಣಶೀಲ ಶ್ರೀಲೋಲ
ನೀಲವರ್ಣ ಹೆನ್ನೆಪುರೀಶ ಕುಚೇಲವರದ
ದಯಾಲು ಮಾಧವ ೩

೭೧

------ನ್ಯರ ಸಂಗಾ ಘಳಿಗೆ ಸಾಕಯ್ಯ ಪ

ಎಲ್ಲಾ ಇದ್ದೂ ದುರ್ಜನ ಸಂಗ ಎಂದಿಗೂ ಬೇಡಯ್ಯ -----
ಹರಿಯಾ ಮರೆಯದೆ ಇರುವಂಥಾ ------ಕೃಷ್ಣನ -----
ನಿರುವಂಥ ಸುಜನಾರ ಸಂಗ ಕೂಡದ ನಿನ್ನಿಂತಾ
ಪರಾಸು (?) ಮಕ್ಕಾಳ ಕೂಡಿ----------- ೧

ಉದಯದಾವೇಳೆ ಉಚಿತಕರ್ಮ ಮಾಡುವಾ
ಸದಯ ಹೃದಯರಾದ ಸಜ್ಜನಸಂಗ-------
ಸದಯ ಕಾಲಾದಿ ಯಿ-----ಸನ್ನಿಧಿ ಸೇರುವಾ
ಕುದಯಾ ಕುಜನಾರ ಕೂಡಿದವ -----ಸೇರುವಾ ೨

ಅನೇವಿಷಾ (ಅನಿಮಿಷಾ) ಶ್ರೀ ಕೃಷ್ಣಾನ ಅರಸುತಿರುವಂಥ
ಜನ ಮಹಾಮಹಿಮರಾದ ಶರಣಾರ -------ರದಂಥಾ
ಹೊನ್ನ ವಿಠ್ಠಲನ ಕರುಣಾವು ಪಡುವಂಥಾ ಮಾರ್ಗ-
ವನ್ನು ಸೌಖ್ಯವು ತೋರುವಂಥಾ ೩

೭೨

ನೃಹರೆ ನಿಮ್ಮ ಚರಣ ತೋರೋ ವಿಹಗಗಮನ ಕರುಣದಿ ಪ

ವಾರಿಜೋದರ ದಿವ್ಯ ಘನಸಾರ ಶೋಭಿತ ಮುನಿಮಂದಾರ
ಮಾಧವ ಮೇರುಗಂಭೀರ ಭವದುರಿತ ವಿದೂರ ೧

ಸಾರಸಾಕ್ಷ ಮಾರಜನಕ ಘೋರದನುಜ ಸಂಹಾರ
ಜಂಭಾರಿ ವಿನುತ ಮೇಘ ಫಲದ
ಶ್ರೀರಮಾರಮಣನುತ ಚರಿತ ೨

ಉರಗಶಯನ ಗರುಡಗಮನ ಧರಣೀಧರ ಮುರಾರಿ
ಹೆನ್ನೆಪುರ ನಿವಾಸ ನಾರಶಿಂಹ ತರಣಿಕೋಟಿಧಾಮ ರಾಮ ೩

೭೩

ನೀ ಕೈಯ ಬಿಡಲು ಸಾಕುವರಾರಲೋ ಪ

ಕರುಣಾಕರ ಮಂದರಗಿರಿಧರ ಶ್ರೀಹರಿನಿಮ್ಮ
ಪಾದಸ್ಮರಿಸುತಲಿರುವವನ ೧

ಕ್ಷಿತಿಪತಿ ರಕ್ಷಿಸೆನುತ ಸ್ತುತಿಸುತಿರು ವನವರತ ಧೃತಿಪಿತ
ಸಂತತ ಪಾಲಿಸಿದೆ ೨

ಶರಣಾಗತರಿಗೆ ಸುರತರುವೆನಿಪಾ ವರಹೆನ್ನೆಪುರ
ನರಹರಿಯನ್ನಯ ೩

೭೪

ನೀತಿವಂತನಾದ ನಿಗಮಗೋಚರ ದೇವ ।
ಮಾತಿಗೆ ನಿಜಶೀಲ ಮಾತುಗಳಾಡಿ ಪ

ಕೂಸಿನ ಮೊಲೆಯವಳ । ಕೊಸರಿಮುತ್ತನೆ ಇಟ್ಟು ।
ಚೂಶಿಯ ಮಾಡಿ ಬಲು ಘನವಾಗಿ ಮನಿಯೊಳು ೧

ಚದಗತನದಿಯಲ್ಲ । ಚಲುವೆಯರೂಡಗೂಡಿ
ಅಧರಾಮೃತ ಸವಿದು ಆನಂದದಲಿ ಇನ್ನು ೨

ನೀರಿಗೆ ಹೋಗುವಂಥಹ ನಿಜ ಸ್ತ್ರೀಯರನೆ ಕಂಡು
ತೋರಿವಟ್ಟಳ ಹಿಡಿದು ತುಟಿಯನೆ ಕಡಿದು ೩

ಕೆಳದೆರು ಜಲದಲ್ಲಿ ಕ್ರೀಡೆನಾಡುವ ವೇಳೆ
ಕೆಳಗಿದ್ದ ಶೀರೆಗಳ ಕೊಂಡು ಮರವನೇರಿ ೪

ಈ ಪರಿಚರ್ಯಗಳಷ್ಟು ತನ್ನಲಿದ್ದು
ಭೂಪ ಹೆನ್ನೆ ವಿಠಲ ಪೂಜಿತನಾನು ೫

೭೫

ನೀದಯಮಾಡಿ ಸಲಹೊ ಎನ್ನ ಪರಮಾತ್ಮ ಭವ
ಕಾನನವೆಂಬಾ ತೊಡರು ಬಿಡಿಸೊ ಪರಮಾತ್ಮ ಪ

-----ಸಂಖ್ಯಾನೂರು ಬಳಲುತಿರೆ ಪರಮಾತ್ಮ ಇವರ
ಸಂಚಿತವು ಏನೋ ಕಾಣೆನು ಪರಮಾತ್ಮ
ಕೋಟಿ ಉದ್ಯೋಗದವರು ---- ಪರಮಾತ್ಮ
ಪ್ರಪಂಚಕ್ಕೆ ಸರಿ ಕಾಣಲಿಲ್ಲ ಪರಮಾತ್ಮ ೧

ನಾನಾ ಪರಿಯಿಂದ ನಡೆದೆ ಕಷ್ಟದಿಂದ ಪರಮಾತ್ಮ
ನಿಮ್ಮ ಧ್ಯಾನವು ಎನ್ನ ಮನಕೆ ನಿಲಕದು ಪರಮಾತ್ಮ
-------- ಜೀವಕೆ ಇನ್ನು ಪರಮಾತ್ಮ
ಸುಜ್ಞಾನಿಗಳಿಗೆ ಜೀವನ ನೀನು ಪರಮಾತ್ಮ ೨

ಸಾರಜಗವ ರಕ್ಷಿಸುವಂಥ ಪರಮಾತ್ಮ ನಿ-
ಸ್ಸಾರ ಮಾಡುವರೆ ಎನ್ನ ಪರಮಾತ್ಮ
ವೀರ 'ಹೊನ್ನ ವಿಠ್ಠಲಾ' ಶ್ರೀ ಪರಮಾತ್ಮ ಗುಣ
ಗಂಭೀರ ಪುಣ್ಯಪುರುಷ ಕೇಳೊ ಪರಮಾತ್ಮ ೩

೭೬

ನಿನ್ನ ಕೃಪೆಯ ತೋರೆನ್ನ ರಕ್ಷಿಸೊಬೇಗಾ
ನೀರಜದಳನಯನಾ
ಅನ್ಯನಲ್ಲ ನಾ ನಿನ್ನ ದಾಸನುಯೆಂದು
ಚಿನ್ಮಯ ಮೂರುತಿ ಶ್ರೀನಿವಾಸಹರೆ ಪ

ಶಂಕರನುತ ಬಿರುದಾಂಕ ಭಕ್ತರಪೋಷ
ಪಂಕಜೋದ್ಭವನಾ ಪಡೆದಂಥಾ
ವೆಂಕಟಗಿರಿನಿಲಯ ವೇಣುನಾದಪ್ರೀಯಾ
ಬಿಂಕಾದಿ ಶರಣರ ಪೊರೆದಂಥಾ
ಶಂಖ ಚಕ್ರಧರ ಶೌರಿ ಮಹಾನುಭಾವ
ಬಿಂಕದಾನವರಳಿದ ಬಲವಂತಾ
ಶಂಕೆಯಿಲ್ಲದೆ ನಿಮ್ಮ ಸ್ಮರಿಸುವ ದಾಸರ
ಕಿಂಕರ ಕಿಂಕರ ಕಿಂಕರನೆಂದು ಇನ್ನು ೧

ವಾಸುಕಿಶಯನ ಶ್ರೀ ವಸುದೇವನಂದನ
ಭೂಸರವಂದ್ಯ ಪುರಾಣ ಪುರುಷ
ಈಶ ಜಗತ್ರಯ -----ರಾಜವರದಾ
ಭೂಸುತೋನಾಯಕ ಭೂರಮಣಾ
ಸಾಸಿರನಾಮದ ಸರ್ವೇಶನೆ ಕೃಷ್ಣಾ
ಭೂಸೂರ ಕೀರ್ತಿ ಪ್ರಕಾಶನಾದ
ಕೇಶವ ಗೋವಿಂದ ಕರುಣಿಸಿ ಕಾಯೋ ಎನ್ನ
ದಾಸರಾರ್ಚಿತ ಪಾದ ವೈಕುಂಠಾಧೀಶ ೨

ಅಂಡಜಗಮನ ಭೂಮಂಡಲ ನಾಯಕ
ಪುಂಡರೀಕಾ ವರದ ಪರಮಾತ್ಮನೆ
ಚಂಡ ಪ್ರಚಂಡ ವೇದಾಂತ ರಹಸ್ಯನಾದ
ಗಂಡರ ಗಂಡ ಉದ್ದಂಡ ದೇವಾ
ಕೊಂಡಾಡುವರ ನಿಮ್ಮ ಕರುಣಿಸಿ ಕೈಹಿಡಿದು
ಕಾಯ್ವ ಭಾರವುಳ್ಳ ಘನನು ನೀನೂ
ಪಾಂಡುನಂದನ ಪಕ್ಷ ಪತಿ ' ಹೆನ್ನ ವಿಠ್ಠಲ'
ನಿನ್ನಂದು ಸೇರಿದ ಅವರ ಹರುಷದಿ ಸಲಹೋ ಇನ್ನೂ ೩

೭೭

ನಿನ್ನ ಮೊರೆ ಹೊಕ್ಕವರನ ನೀನೆ ರಕ್ಷಿಸದೆ
ಇನ್ನಾರು ಜಗದೀಶ----
ಪನ್ನಗಾಚಲವಾಸ ಪಾಲಿಸೋ ಶ್ರೀನಿವಾಸ
ಎನ್ನ ಮೊರೆ ಕೇಳು ಶ್ರೀರಾಮ ಪ

ಪೂರ್ವ ಜನ್ಮದ ದೋಷಗಳು ಏನುಂಟೊ
ನಿರ್ವಹಿಸಲಾದೆ ಶ್ರೀರಾಮಾ
ಪೊರೆಯೊ ಎನ ಕೈ ಹಿಡಿದು ಕರುಣಾರಸವು
ತೋರಿ ಎಣಿಸುವರಾರು ರಾಮಾ ೧

ಸಕಲವೇದ ಶಾಸ್ತ್ರಗಳು ಸಾರುತವೆ ನೀನೆಂದು
ಅಕಳಂಕ ಚರಿತ ಶ್ರೀರಾಮ
ಅಕರ್ಮನ ದುಷ್ಕರ್ಮ ಅದನ್ನೆಲ್ಲ ಖಂಡ್ರಿಸೊ
ರುಕ್ಮಿಣಿಯರಸ ಶ್ರೀರಾಮ ೨

ತಂದೆ ತಾಯಿಯು ನೀನೆ ಬಂಧುಬಳಗವು
ನೀನೆ ಎಂದು ಸ್ತುತಿಸುವೆನು ಶ್ರೀರಾಮಾ
ಹಿಂದೆ ನಾ ಮಾಡಿದಾನಂತ ಅಘಗಳು ಮುಂದೆ ಕುಂದು
ಪರಿಹರಿಸಿ ಕಾಯೋ ರಾಮಾ ೩

ಪಾಂಡುನಂದನ ಪಕ್ಷ ಪರಮಾಣು ರೂಪ
ಬ್ರಾಹ್ಮಂಡನಾಯಕ ಹರೇ ರಾಮಾ
ಕುಂಡಲೀಶ ಶಯನ ಗೋಪಾಲ ಮೂರ್ತಿ
ಕೋದಂಡದರ ಶ್ರೀರಘು ರಾಮಾ ೪

ಈರೇಳು ಲೋಕಕ್ಕೆ ಹೆದ್ದೇವ ನೀನೆಂದು
ತೋರಿನಿಮ್ಮ ಸ್ಮರಿಸುವೆನು ರಾಮಾ
ಧೀರ 'ಹೊನ್ನ ವಿಠ್ಠಲ ' ದಯಮಾಡಿ ಸಲಹುವ
ಭಾರವು ನಿನ್ನದು ಶ್ರೀರಾಮ ೫

೭೮

ನಿನ್ನ ನಾ ಬಿಡುವನಲ್ಲಾ ಗೋಪಾಲಾ ನಿನ್ನ ಬಿಡುವನಲ್ಲ
ಎನ್ನ ರಕ್ಷಿಸದಿರೆ ಪನ್ನಗಾದ್ರಿಯವಾಸ ಪರಮಪುರುಷರಂಗಾ ಪ

ನಾಗಾರಿ ರೂಪನಾದ ಪರಮಾನಂದ
ಭೋಗಿಶಯನ ವಿನೋದ ಭಕ್ತವತ್ಸಲ
ಸಾಗರನಳಿಯ ಭೂಸುರಧೇನು ಪೋಷಕ
ಭಾಗವತರ ಪ್ರಿಯಾ ಯೋಗಿಗಳರಸ ೧

ಜಲಜಾಕ್ಷ ನಳಿನನಾಭ ಜಾನಕೀರಮಣ
ಜಲನಿಧಿಶಯನ ದೇವಾ ಜಗದೋದ್ಧಾರ
ಜಲಜಬಾಂಧವ ಕುಲ ಶ್ರೇಷ್ಠಾದಿ ಮೂರುತಿ
ಒಲಿದೆನ್ನ ದುಷ್ಕರ್ಮನಳಿದು ಪೋಷಿಸದಿರೆ ೨

ಶಂಬರಾರಿಯ ಪಿತನೆ ಜಗನ್ನುತ
ಕುಂಭಿನೀಧವನಾದನೇ ಗೋವಿಂದ ಶ್ರೀ
ಕಂಬುಕಂಧರ ಕೃಷ್ಣಾ ಅಂಬುಧಿ
ಬಂಧಿಸಿ ಅಂಬುಜಾಕ್ಷಿಯ ತಂದ ಹರಿ 'ಹೆನ್ನ ವಿಠ್ಠಲಾ' ೩

೭೯

ನಿನ್ನಾಧೀನ -----------
ವೆಂಕಟಾದ್ರಿವಾಸ ವೆಂಕಟ ಪರಹರಿಸೊ
ನೀ ಎನ್ನ ಸಂಕಟ ಪ

ಚಿನ್ಮಯ-----ನಾದ-----ಶ್ರೀನಿವಾಸ
ಪರಮಪುರಷ ಮುನ್ನ ನಾ ಮಾಡಿದ
ದೋಷದಿಂದ ಅಮಲನಾಗಿ
ವ್ಯರ್ಥ ಬಳಲುತಿಹೆನಾ ------

ನೋಡದೆ ಕರುಣವಿಲ್ಲದೆ
ಘನವೆ ನಿನಗೆ ಇರುವುದಿನ್ನು
ಅನಿಮಿಷವು ನಿಮ್ಮ ಧ್ಯಾನದಲ್ಲಿ
ಮಗ್ನರಾದ ಅವರಾ ೧

ಶರಣರಾದ ಅವರಾ ಪೊರೆವ
ಬಿರುದು ನಿನ್ನದಾಗಿ ಇರಲು
ಪರಮ ಪತಿತ ಪಾವನನೆ
ಭಕ್ತ ಜನರ ಬಿಡದೆ ಕಾಯ್ವ
ಧೊರಿಯು ನೀನೇ ಎಂದು ನಿನ್ನ
ಚರಣಕಮಲ ನೆಚ್ಚಿದವನಾ
ಪರಿವೆ ಮಾಡದೆ ಇರುವುದಿನ್ನು
ಭರದಿ ಮೋಚನ ಪಾಪನಾಶನ ೨

---------ದೊಳಧಿಕನಾದವನ
ವರಹೊನ್ನ ನಿ---------
ನಿಗಮಗೋಚರ 'ಹೊನ್ನವಿಠ್ಠಲಾ'
ನಿತ್ಯ ಸತ್ಯ ಜಗವಿಲಾಸ
---------ಯಿಂದ ನಿನ್ನ ಪಾಡುವಂಥ
ಭಜಕರನ್ನ-------------
ರಕ್ಷಿಸುವ ಅಭಯ ನಿನ್ನದಾಗಿ ಇರಲೂ ೩

೮೦

ನೀನೆ ದಯಮಾಡಿ ಸಲಹೊ ಎನ್ನ ಪರಮಾತ್ಮ ಭವ
ಕಾನನ------ ತೊಡರು ಬಿಡಿಸೊ ಪರಮಾತ್ಮ ಪ

ಸಂಚಮಾರು ಬಿಡಲು ತಾರೊ ಪರಮಾತ್ಮಾ ಇವರ
ಸಂಚಿತವು ಏನೊ ಕಾಣೆ ಪರಮಾತ್ಮಾ

ಕಾಂಚದ್ಭೋಗದವರು ಇಷ್ಟೊ ಪರಮಾತ್ಮಾ
ಪ್ರಪಂಚಕ್ಕೆ ಸರಿಗಾಣನಿಲ್ಲ ಪರಮಾತ್ಮಾ ೧

ನಾನಾಪರಿ ನಡೆ ಕಷ್ಟದಿಂದ ಪರಮಾತ್ಮ ನಿನ್ನ
ಧ್ಯಾನ ಎನ್ನ ಮನಕೆ ಸಿಕ್ಕಿತು ಪರಮಾತ್ಮ
ನಾ ಜೀವನ ಜೀವಕೆ ಇನ್ನು ಪರಮಾತ್ಮ
ಸುಜ್ಞಾನಿಗಳಿಗೆ ಜೀವನ ನೀನು ಪರಮಾತ್ಮ ೨

ಸಾರ ಜಗವು ರಕ್ಷಿಸುವಂಥ ಪರಮಾತ್ಮ
ನಿಸ್ಸಾರ ಮಾಡುವರೆ ಎನ್ನ ಪರಮಾತ್ಮ
ನೇರ ಹೆನ್ನ ವಿಠ್ಠಲ ಶ್ರೀ ಪರಮಾತ್ಮ ಗುಣಗಂ–
ಭೀರ ಪುಣ್ಯ ಪುರುಷ ಕೇಳೋ ಪರಮಾತ್ಮ ೩

೮೧

ನೀರೆ ಶ್ರೀಕೃಷ್ಣನಾ ತಾರೆ ಬೇಗವನ ತೋರೆ
ಮುಖವಂತೋರೆ ಪ

ಸಾರಾಲೋಕಗಳುದ್ಧಾರಾ --------ರಾ
ಸದ್ಗುಣ ಗಂಭೀರಾ
ಮಾರ ಜನಕನಾದ ಧೀರಾ ದನುಜಸಂಹಾರ
ಧಶರಥ ಕುಮಾರ ೧

ನಂದಾನಂದನ ಗೋವಿಂದಾ ಮುರಹರ
ಮುಕ್ಕುಂದಾ ಮುನಿ
ಹೃದಯಾನಂದಾ ಛಂದಾ ಪರಿಮಳದ
ಗಂಧಾ ಮೈಲೇಪನದಿಂದಾ
ವಿಪುಲ ವನ(?)ಯಿಂದಾ ೨

ದೇಶಾಜನರ ಪೋಷಕನಾ ದೇವಕಿಯ ಸುತನಾ
ಜಾಹ್ನವಿ ಪಿತನಾ ಎನ್ನಾ 'ಹೊನ್ನ ವಿಠ್ಠಲನ'
ಕರುಣಾಸಾಗರನಾ
ಕರದು ತಾ ಬೇಗನೆ ೩

೮೨

---------ನಿಲಯ ಮನೆಗೆ ಭವರೋಗ ವೈದ್ಯಾ
ತೋರಯ್ಯ -------ಕರುಣಿ ದಯಾರಸವೆಂಬ ಔಷದ ಪ

ಸಂಸಾರವೆಂಬಂಥಾ ಸಾಗರ ಬಹುದುಃಖ
-------ದೊಳಗೆ ಬಿದ್ದು ಇರುವಾರೋಗಾ
ಕಂ ಸಾಮರ್ದನನಾದ ಘನ ಹೇಮ ಮಕುಟಧರನೆ
----------ಸಲಹುವ ಕ್ರಿಯವು ನಿನ್ನದೊ ೧

ಜನ್ಮಾಜನ್ಮಾಗಳಿಂದಾ ಚಿನ್ಮನೆ--------
ಕಲ್ಮಾಷಾ ದೋಷ ಕಳೆವಾ ಘನಾಮಾತ್ರ ನಿನ್ನಲ್ಲಿ
---------ನೆ ಬಿಟ್ಟು ಕೈಯ್ಯಾನಾದೆನ್ನ ಕೈಯ್ಯ ಪಿಡಿದು
ನಿರ್ಮಲ ಜ್ಞಾನವೆಂಬ ನಿಜಾ ಔಷಧ ಕೊಡಲು ೨

ಅಖಿಲಲೋಕಾಗಳಿಗೆ ಆದಿ--------ತ್ರಿಯಾದಿ
ಸಕಲಾ ಚರಾಚರ ಸರ್ವದಾನೀ
ನಿ--------ರಾದಿ ಪುರವಂತ ನಿಜ 'ಹೆನ್ನ ವಿಠ್ಠಲನಂಥ'
ಭಕ್ತವತ್ಸಲ ಲಕ್ಷ್ಮೀಕಾಂತ ಶ್ರೀಮಂತಾ ೩

೮೩

ನೆರೆನಂಬಿದವರನ್ನ ಪರಿವೆಮಾಡದೆ ಇನ್ನು
ಪೊರೆಯದಿರುವರೆ ಪರಮಪುರುಷನೆ
ನರಹರೆ ನಿಮ್ಮ ಚರಣ ಕಮಲವ ಹಾಗೆ

ಸ್ಮರಿಸುತಿರುವಂಥ ಪರಮಪುಣ್ಯ ಭಕ್ತಜನ
ರನು ಪಾಲಿಸದೆ ಇನ್ನು ಇರುವದುಚಿತವೆ ಪ

ಅಂಡಜವಾಹನ ಅಮಿತ ಪರಾಕ್ರಮ
ಕುಂಡಲಶಯನ ಅಕ್ರೂರ ವಂದ್ಯಾ
ಪುಂಡರೀಕಾಕ್ಷನೆ ಪುಣ್ಯ ಪ್ರಭಾವನೆ
ಕುಂಡಲಾಧಿಪ ದೇವ ಮಹಾನುಭಾವ
ದಂಡಿದಾನವ ಖಂಡಗರ್ವ ಅಖಂಡಮುನಿಮನ
ಮಂಡಲ ನಿಲಯ ಕೋದಂಡಧರನೆ
ದಂಡ ವರದನೆ ಅಂಡಜ ಗಿರಿವಾಸ ಹರಿಗೋವಿಂದನೆ ೧

ಭೂಮಿಜರಮಣ ಸಂಪೂರ್ಣಾನಂದನೆ
ಸಾಮಗಾನಲೋಲ ಸರ್ವೇಶನೆ
ಕಾಮತಾರ್ಥಗಳೀವ ಕರುಣಾಸಾಗರ ದೇವಾ
ಸ್ವಾಮಿ ಜಗನ್ನಾಥ ಸರ್ವೋತ್ತಮನೆ
ಕಾಮ ಜನಕ ಸುದಾಮ ರಕ್ಷಕ
ಪ್ರೇಮ ಸೀತಾರಾಮ ಜಗತ್ಪತಿ
ಶ್ಯಾಮ ಸುಂದರ ಶೌರಿ ಶ್ರೀಹರಿ
ಕೋಮಲಾಂಗ ಕೃಷ್ಣ ಮೂರುತಿ ೨

ಅಖಿಲಾಂಡಕೋಟಿ ಬ್ರಹ್ಮಾಂಡ ನಾಯಕನಾಗಿ
ಸಕಲಭಾರಕರ್ತ ಶ್ರೇಷ್ಠನೆ
ನಿಕರದಿ ಸಲಹುವ ನಿಜನಿತ್ಯಾನಂದಾನೆ
ಪ್ರಕೃತಾದಿ ಪಾಲಿಸುವ ಪರಮಾತ್ಮನೆ
ಸಕಲ ವೈಭವ ಚಿದ್ವಿಲಾಸನೇ
ನಿಖರಾರ್ತ್ಯೆ ನಿನ್ನಲಿ ನಮೋ
ಭಕುತವತ್ಸಲ ಮುಕುತಿದಾಯಕ
ರುಕ್ಮಣಿಯವರ 'ಹೆನ್ನವಿಠ್ಠಲಾ' ೩

೮೪

--------ನೆ ಮಾಡುವೆಯಂದರೆ ಅರಸುಳ್ಳ
ದ್ವಂದ್ವಪಾದಕೆ ನಾ ವಂದನೆ ಪ

ಅಂದು ಜಲದೊಳಾಡಿ ಕೊಂದ ಸೋಮಕನ
ವೇದತಂದೂ ------ಗಿತ್ತಾಗೊಂದನೆ
ಮಂದರಗಿರಿಯ ನೆತ್ತಿ ಚಂದದಿ ---------
ಭೂಮಿ ಮೂಗಿನಿಂದ ಸೀಳಿದ ದೇವಗೆ ವಂದನೆ ೧

ತರುಳನಿ ಗೋಸ್ಕರ ಸ್ತಂಭದೊಳಗೆ ಬಂದಾ
ನರಹರಿ ರೂಪಗೆ ವಂದನೆ
ಮುರುಡನಾಗಿ ದಾನ ಮೂರು ಪಾದವು ಕೇಳಿ
ಧರುಣಿಯ ಗೆದ್ದವಗೆ ವಂದನೆ ೨

ಪ್ರೇಮಸಲ್ಲದೆ ಪಿತೃವಾಕ್ಯವು ಮನ್ನಿಸಿ
ಪಡೆದಮ್ಮನ ಹೊಡೆದಾತಗೆ ವಂದನೆ
ತಾಮಸ ದಾನವರಗಳ ಖಂಡಿಸಿದ
ಶ್ರೀರಾಮ ದೇವರಿಗೆ ವಂದನೆ ೩

ಗೊಲ್ಲರ ಸ್ತ್ರೀಯರ ಕೂಡಿ ಮೆರೆದಾಡುವಂಥ
ನಲ್ಲ ಕೃಷ್ಣಗೆ ವಂದನೆ
ಎಲ್ಲಾನೂ ತೊರೆದು ಬತ್ತಲಲ್ಲಿ ಇರುವ
ನಮ್ಮ ಬೌದ್ಧಾವತಾರಗೆ ವಂದನೆ ೪

ಚಲುವ ಅಶ್ವವನೇರಿ ಚರಿಸಿದ ಮಹಾಮಹಿಮ
ಕಲ್ಕಿ ಸ್ವರೂಪಗೆ ವಂದನೆ
ಸುಲಭದಿ ಭಕ್ತರ ಚನ್ನಾಗಿಸಲಹುವ
ಶ್ರೀ ಹೆನ್ನೆ ವಿಠ್ಠಲಗೆ ವಂದನೆ ೫

೮೫

----------ನೋಡಿದೆ ತಾಂಡವ ಕೃಷ್ಣನ ನೋಡಿದೆ
ಕೃಷ್ಣನ ನೋಡಿದೆ ಸೃಷ್ಟಿಗೆ ಕರ್ತನಾದ ವಿಠ್ಠಲಮೂರುತಿ
ಅಭೀಷ್ಟದಾ ನಾಯಕನಾ ಪ

ಅಕ್ಷಯ ತೋರುವನಾ ಸಕಲಾ ರಕ್ಷಕ ರಘುರಾಮಾನಾ
ಲಕ್ಷ್ಮಿ ಮನೋಹರನಾ ದೈವಾಧ್ಯಕ್ಷ ಮಹಾಮಹಿಮನಾ
ಪಕ್ಷಿವಾಹನ ಪರಮಪುರಷ
ಕಲ್ಪವೃಕ್ಷ ಕಾಮಧೇನು ವಿಶ್ವಕುಟುಂಬನಾ ೧

ದಶರಥನಂದನನಾ ದೇವಾ ವಸುಧಿಯನಾಳುವನಾ
ಪಶುಪತಿ ಪಾಲಕನಾ ಭಕ್ತರ ಕುಶಲದಿ ಸಲಹುವನಾ
ಬಿಸರುಹಾಕ್ಷ ಶ್ರೀ ಪೂರ್ಣ ಪ್ರಕಾಶನ
ದಶಶಿರನಳಿದ ಕೋದಂಡರಾಮನ ೨

ಶಿರಮಣಿ ಮಕುಟಧರನಾದಾ ಕೊರಳ ಪದಕಹಾರ
ಕರದೊಳು ಕಂಕಣವಾ ಕಿರಿಬೆರಳಲಿ ಉಂಗುರವಾ
ಪರಮ ಪರುಷ ನರಹರಿ ' ಹೆನ್ನೆವಿಠ್ಠಲ ' ಪರಮಾತ್ಮನ
ಸರ್ವ ಪೋಷಕ ನಾದನಾ ೩

೮೬

ಪಡೆದಲ್ಲದೆ ಮಿಗಿಲು ಬರಲರಿಯದು
ಎಡೆ ಬಿಡದೆ ಎಲೆ ಮನವೇ ಏಕೆ ಬಳಲುವಿ ವೃಥಾ ಪ

ವನನಿಧಿಯೊಳು ಪೊಕ್ಕು ಸಲಿರೆಡಿ ನೋಡಿದರೂ
ಭರದಿ ಬಲುಭಾರವನು ಹೊರಲಿ ಬೆನ್ನಿಲಿ
ಧರಗೆ ತಲೆಯನ್ನು ಬಾಗಿ ತಾನು ಯೋಚನೆ ಮಾಡಿ
ಪರಿ ಪರಿಯಲಿ ಭಯಂಕರ ೧

ಬಡವನೆಂದ್ಹೇಳ ಭರಬಾಗಿಲಲಿ ನಿಂದಿರಲು
ದೃಢದಿ ವೈರಿಗಳ ಖಂಡಿಸಲು ಮುದದಿ
ಅಡವಿ ಸಂಚರಿಸುತಲಿ ಹಾರೈಸಿ ಹುಡುಕಿದರು
ಕಡು ಕಳ್ಳತನ ಕಲೆತು ಕಂಡಕಡೆ ತಿರುಗಿದರು ೨

ಬರಿಯ ಬತ್ತಲು ನಿಂತು ನರರಿಗ್ಹೊಂನವ ತೋರಲು
ತುರಗವನ್ನೇರಿ ಧರಣಿಯನು ಪಾಲಿಸಲಿ
'ವರ ಹೆನ್ನೆಪುರನಿಲಯ ನರಹರಿಯು ಮಾಡಿದ್ದ
ಬರಿದೆ ಚಿಂತಿಸಿ ನೀನು ಭಾಗ್ಯವದರಿಂದೇನು ೩

೮೭

ಪರಾಕು ಎಂದು ಬಹು ಪರಾಕು
ಹೇಳುವನ ನಿರಾಕರಿಸುವದು
ಪರಾಕುದಾರನ-------ನಪಿತನೆಂದೂ ಶರಾಣು
ಹೊಕ್ಕ ನಿನ್ನ ಸೇವೆಯೊಳಗೆ ಬಹು ೧

ಮಲಾದು(?೦ ಇರುವಂ--------ಳಗೆ ಇರುವ
ಅಲಾದಿ ಅಂಗಗಳು ಅವತರಿಸಿದ ದೇವಾ ೨

ನೆಲಾನ ಘೂರಿಸಿದ ಛಲಾಶೆ ಮಾಡಿ
ದುರುಳಾದ ಕರುಳ ತೆಗೆದು ಕೊರಾಳಲ್ಲಿಟ್ಟ ಸ್ವಾಮಿ ೩

ಧರಾನೆ ದಾನ ಬೇಡಿ ಸರಾನ ಕೋಪದಿಂದ
ಶರ----------ಸಿದ ಶ್ರೀಹರಿ ಎಂದು ಬಹು ೪

ಬಲಾನೆ ಕುಟ್ಟಿ ಖಳನ ಬಲಾನೆಲ್ಲವ ಮುರಿದು
ಲಲಾನೆಯನು ತಂದು ರಘುರಾಮನೆಂದು ಬಹು ೫

ದುಷ್ಟ ಕಂಸಾನ ಕೊಂದಾ ಸೃಷ್ಟಿಕರ್ತಾನು ನೀನು
ಕೃಷ್ಣಾ ಕರುಣಿಸೂ ಎಂದು ಪ್ರಾಯದಲಿ ಮೊರೆಯಿಟ್ಟು ೬

ಅಂಬಾರವನು ಬಿಟ್ಟು ಸಂಚಾರದಲಿ ನೀ----
---ಂ ಬೇರಿದಂಥ ಶ್ರೀ ಮಹಾನುಭಾವನೆನುತಾ ೭

ಶರಾಣು ಎಂದು ಬಂದವರಾನ ಪೊರೆದ
ಶ್ರೀಧರಾನೆ ರಕ್ಷಿಸೆಂದು ಕರಾವು ಮುಗಿದಿಂದೂ ೮

ನಿರಾಮಯಾನಾದ ಶ್ರೀ ರಾಮದೇವರೆನ್ನ
ಪರಾಮರಿಸಿ ಕಾಯೋ ಪತಿ 'ಹೊನ್ನ ವಿಠ್ಠಲಾ' ೯

೮೮

-----------ಪರಿನಂಬಿ-------ಕೃಷ್ಣಾ ಸಂತ------ ಪ

--------ಪಾದಸ್ಮರಣೆಯ ಮಾಡು ಸಾಧು
ಸಂತರಸಂಗಾ ------ಸರ್ವಕಾಲದಲಿ ನಿಂತು ನಿನ್ನ
ಸೇವಿಸುವ ನಿಜಭಕ್ತಾ-----ಇರುವಂಥಾ ---- ವೇಮಾರಿ ೧

ಬಂದ ಭವದ ದೋಷಕಳೆದು ಪಾಲಿಸುವಂಥಾ ದೇವ
ತಂದೆ ತಾಯಿ ನೀನೆ ಎಂದೂ------ಒಂದೆ
ಭಾವಧಿರುವ ಭಕ್ತಗೀ
ಬಂದ ಬವದ ಬಂಧಕವಾ ವೇಗದಿಂದ ಪರಿಹಾರ
ಮಾಡಿಕಾಯೋ ವಿಶ್ವಮನ ---- ೨

ಚಿನ್ಮಯ ರೂಪಾ------ದಾರಯ್ಯಾ ಇನ್ನು
ನಿನ್ನವರಕಯ್ಯ ಹಿಡುವಾ ಧನ್ಯರಾದ
ರಕ್ಷಿಸುವ ಭಾರ ನಿನ್ನದೇ ಸ್ವಾಮಿ ಶ್ರೀಪನ್ನಗಾದ್ರಿವಾಸ
'ಹೊನ್ನ ವಿಠ್ಠಲ' ಪ್ರೇಮಿ ೩

೮೯

ಪಾಲಿಸು ಬೇಗನೆ ಪಂಕಜನಯನ ಪ

ಸುರಮುನಿ ಸನ್ನುತ ಶುಭಕರ ಚರಿತ
ಗಿರಿಧರ ಹರಿ ಕರಿವರದ ಮುರಾರಿ ೧

ರತಿಪತಿಪಿತ ಸದ್ಗತಿಗಾಣಿಸು ಯಂ–
ದತಿ ಮುದದಿ ನಿನ್ನ ಸ್ತುತಿಸುತಲಿರುವೆನು ೨

ಶರಣಾಗತ ರಕ್ಷ ಕರುಣಾಂಬುಧೆ
ಧರೆಯೊಳಧಿಕ 'ಹೆನ್ನೆಪುರ ಹರಿಯೆ' ೩

೯೦

ಪಾಲಿಸೋ ಗೋಪಾಲಾ । ಪಾಲಿಸೋ ವೇಣುಗೋಪಾಲ ।
ಮೊರೆಲಾಲಿಸು ಭಕ್ತವತ್ಸಲ । ರುಕ್ಮಿಣಿ ಲೋಲ
ಕರುಣಾಲೋಲ ಸದ್ಗುಣಶೀಲ ಪ

ಆ ದುಃಶ್ಯಾಸನನು ದ್ರೌಪದಿಯ । ಸೀರೆ
ಸೆರಗ್ಹಿಡಿದು ಸತ್ವರಶೆಳಿಯ ।
ಲಾಗಾ ಶ್ರೀಕೃಷ್ಣ ನೀನೇ ಸಹಾಯ ।
ನಿನಾಗದಿರೆ ಕಾಯ್ವರಾರೋ ಒಡೆಯ ।
ಹಾ ಅನ್ನಲು ಹರುಷದಲ್ಯಕ್ಷಯಾಂಬರ ವಿತ್ತು ।
ಕರುಣೆಸಲೊ ಜಗದ್ಭರಿತ ನಿತ್ಯಾನಂದ ೧

ಕಂದ ಪ್ರಲ್ಹಾದನ ತಂದೆ । ಹೇಮಕಶ್ಯಪ
ಬಾಧಿಸಲ್ ಬಂದೇ
ಛಂದದಿಂದ ಸ್ತಂಧ್ವ ರೂಪತಂದೆ ಖಲನ
ಸಂದೇಹವಿಲ್ಲದೆ ಕೊಂದೆ ।

(ಹಾ) ಯೋಗಾನಂದ ನರಸಿಂಹ ಗೋವಿಂದ ಮಹಾನುಭಾವ
ಇಂದಿರೆಯರಸ ಸುರೇಂದ್ರ ವಂದಿತ ಪಾದ
ಪುಂಡರೀಕ ಗೊಲಿದು ಬಂದು ।
ನೀ ಪಂಢರ ಪುರದಲಿನಿಂದು । ೨

ಭಕ್ತ ಮಂಡಲ ಕಾಯ್ವದೀನ ಬಂಧು ।
ವೇತಾಂಡರಕ್ಷಕ ಕೃಪಾಶಿಂಧು ।
(ಹಾ) ಅಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕ
ಪುಂಡರೀಕಾಕ್ಷ ಹೆನ್ನೆ ಪುರವಾಸ ಸರ್ವೇಶ ೩

೯೧

ಪಾಹಿಮಾಂ ಜಗದೀಶ ಭಕ್ತವಿಲಾಸ ಶ್ರೀ ಶ್ರೀನಿವಾಸನೆ
ಈ ಸೋಜಿಗದೊಳು ನಿನ್ನ ಮಹಿಮೆಯು
ಹೇಳಲೊಶವಲ್ಲ ದೇವನೆ ಪ

ಚಂಡಶಾಸಕ ಬಿರುದುವುಳ್ಳ ಪ್ರಚಂಡ ದೇವೋತ್ತುಂಗನೆ
ಮಂಡಲಾಧಿಪ ಮದನ ಜನಕ ಕೋದಂಡಧರ ಶ್ರೀರಾಮನೆ ೧

ಅಖಿಲವೈಭವ ಆದಿಮೂರುತಿ ಸಕಲಲೋಕಾಧಾರನೆ
ವಿಕಟದಾನವ ಮೂಲ ಚ್ಛೇದನ ವಿಶ್ವರೂಪ ವಿನೋದನೆ ೨

ಅಮಿತ ಮಹಿಮಾನಂದ ಹರನುತ ಕಮಲಸಂಭವ ನಯ್ಯನೆ
ಸುಮನರಾದ ಸುಜನರಾ ಹೃದಯ ಕಮಲದಲಿ ನೀ ವಾಸನೆ ೩

ಮಂಗಳಾಂಗ ವಿಹಂಗವಾಹನ ಮಾರಕೋಟಿ ಲಾವಣ್ಯನೆ
ಅಂಗನಾಮಣಿ ಲಕುಮಿಪುರದಲಿ ಅಡಗಿಸಿಪ್ಪ ಶ್ರೀ ಲೋಲನೆ ೪

ಶರಧಿಶಯನ ಸುರೇಂದ್ರವಂದಿತ ಶೌರಿ ಮಹಾಗುಣ ಶಾಂತನೆ
ಕರುಣೆಸೆನ್ನನು ಕಾಯೊ ಬೇಗನೆ ವರದ 'ಹೆನ್ನ ವಿಠ್ಠಲನೆ' ೫

೯೨

ಪೊರಿಯದಲಿರುವರೇನು ಶ್ರೀಹರಿ ನೀನು ಪ

ನಿರುತ ನಿನ್ನನಾನು ಸ್ಮರಿಸುತಲಿರುವೆನು
ವರದ ಕೌಸ್ತುಭ ಭೂಷಾ ಹರುಷದಿ ಮಂಜುಭಾಷಾ ೧

ಘೋರ ಭವಾರ್ಣವ ಪಾರಗಾಣಿಸೋ ದೇವಾ
ಸಾರಸದಲನೇತ್ರ ನೀರದನಿಭಗಾತ್ರ ೨

ದಿನಕರ ಕೋಟಿ ತೇಜ ಘನ ಗರುಡಧ್ವಜ
ಅನಘ ಮಹಾನುಭಾವ ವನಧಿ ಕನ್ಯಾಧವ ೩

ವರಗಿರಿಧರ ಕರುಣಾಕರ ಶುಭವದನ
ಶರಣರ ಕಾಯುವಂತಹ ಬಿರುದು ನಿನ್ನದೊ ಅನಂತ ೪

ಪರಮ ಪಾವನನಾದ ತರಳ ಪ್ರಹ್ಲಾದಗೊಲಿದ
ನರಹರಿ ಹೆನ್ನೆಯ ಪುರನಿಲಯಪ್ರಮೇಯ ೫

೯೩

ಬಂದ ದುರಿತ ಪರಿಹರಿಸೋ ಭಾರಕನು ನೀನು
ಎಂದೆಂದು ನಿನ್ನ ಪಾದ ಹೊಂದಿದವರಿಗೆಯಿನ್ನು ಪ

ಮಂದ ಮಾನವ ನಾನು ಮನ ಖಚಿತವಿಲ್ಲದ
ಕಂದರಕೆ ಬಿದ್ದು ಬಹುಕಷ್ಟ ಪಡುತಾ
ಸಂದೇಹವಾನು ಬಿಡದೆ ಸಂಶಯಿಸಿ ನಿನ್ನೊಮ್ಮೆ
ಎಂದು ಕೊನಿಮದ ದೋಷದಿಂದ ಅದರಿಂದಾ ೧

ಕಷ್ಟವನು ಪಡುವಾಗ ಕೃಷ್ಣ ನೀನೆ ಗತಿಯೆಂದು
ಅಷ್ಟು ಮಾತ್ರ ಸುಖಬರಲು ಅರಿತು ನಿನ್ನ

ನಿಷ್ಠುರಾದವರನಾಸಂಖ್ಯ ಅರಿಯೆನು ಮಾಡ್ದ
ದುಷ್ಟ ಬುದ್ಧಿಗಳಿಂದ ದುರುದ್ದೇಷದಿಂದಾ ೨

ನೀನೆ ಸೂತ್ರಧಾರನಾಗಿರುವೆ ಸಕಲಕ್ಕೂ
ನಾನೊಂದೂ ಅರಿಯದಜ್ಞಾನಿ ಹರಿಯೆ
ಏನಾದರಾಗಲಿ ಇನ್ನು ಎನ್ನನು ಬಿಡದೆ
ನೀ ದಯಮಾಡಿ ರಕ್ಷಿಸೋ ನಿಜ ಹೊನ್ನ ವಿಠ್ಠಲಾ ೩

೯೪

ಬರಿದೆ ಚಿಂತಿಸಿ ನೀನು ಬಳಲುವದೇಕೆ ಮನವೆ
ಹರಿನಾಮ ಸ್ಮರಣೆಯು ಹರುಷದಲಿ
ಸ್ಮರಿಸಿ ಧರ್ಮಾರ್ಥ ಕಾಮ ವರಮೋಕ್ಷ ಫಲಗಳು
ಕರುಣಾ ಕಟಾಕ್ಷದಿಂದ ಶ್ರೀಧರ ನಿರುತ ಕೊಡುವ ಪ

ಅರಿಷಡ್ವರ್ಗಕೆ ಸಿಲ್ಕಿ ಅರಿಯದೆ ಭವಸಾಗರದೊಳು
ಮುಣುಗಿ ಮೈಮರೆದು ಶ್ರೀನರಹರಿ
ಶರಣರ ಪೊರೆವ ಬಿರುದುಳ್ಳಂಥ ಗರುಡವಾಹನ
ಸಿರಿಯರಸ ಪರಮಾತ್ಮನ
ಚರಣ ಕಮಲ ಸತ್ಕರಿಸದೆ ಅನುದಿನ ೧

ಕುಂದ ಬುದ್ಧಿಲಿ ದೇಹಬಾಂಧವರೆಲ್ಲ ಸ್ಥಿರವೆಂದು
ನೆಚ್ಚಿ ನೀ ಮಂದಾಂಧನಾಗಿ
ಅಂದು ಪ್ರಹ್ಲಾದ ಪರಮಾನಂದದಿ ಕರೆಯಲು
ದ್ವಂದ್ವರೂಪತಾಳಿ ಬಂದು ಕಾಯಿದಾ
ವೃಂದಾರ ಕೇಂದ್ರನುತ ಮಂದರಧರ ಮುಚುಕುಂದ ವರದನ್ನ
ಸಲಹೆಂದು ಮೊರೆಯ ಹೋಗದೆ ೨

ನರಜನ್ಮ ತಾಳಿ ಸುಖಸ್ಥಿರ ಮಾರ್ಗ ಕಾಣದೆ
ಸತ್ಪುರುಷರ ಜರಿದು ಗರ್ವ ಭರಿತನಾಗಿ

ಮುರನರಕಾಂತಕ ಮುಕ್ತಿದಾಯಕ ಶುಭಕರ
ಸ್ಮರಜನಕ ಶ್ರೀಧರ ಮಾಧವ
ಉರಗಶಯನ ಹೆನ್ನೆಪುರ ನಿಲಯ ನರಸಿಂಹ
ತ್ವರದಿ ರಕ್ಷಿಸೋಯನ್ನ ಹರಿಸರ್ವೋತ್ತಮ ನೆನದೆ ೩

೬೫

ಬಾರೊ ನೀಯನ್ನಮನಿಗೆ ಗೋಪಾಲಕೃಷ್ಣ ಪ

ಅಂದದಿ ಚಂದದಿ ಆಡುತ ಪಾಡುತ
ಧಿ ಮಿಧಿಮಿಯನ್ನುತ ದಿನ ದಿನ ಕುಣಿಯುತ ೧

ಅಂದುಗೆ ಗೆಜ್ಜೆಗಳಿಂದ ಶೋಭಿತನಾಗಿ
ಮಂದಾರ ಕೂಡಿಕೊಂಡು ಗಜುಗ ಬೊಗರಿಯಾಡುತ ೨

ಬಾಲಕನಾಗಿ ನೀ ಲೀಲೆಯ ತೋರುತ
ಲಾಲಿಯ ನಾಡುವ ಬಾಲಕರ ಕೂಡ ೩

ಕುಡಿಯಲು ನಿನಗೆ ಕೊಡುವೆನು ನೊರೆಹಾಲ
ಹುಡುಗರ ಕೂಡಿಕೊಂಡು ಶಿಡಿಗುಡಿನಾಡುತ ೪

ನೆರೆಮನೆ ಸತಿಯಳು ಕರೆವಳು ಹರುಷದಿ
ಪರಮ ಪುರುಷನಾದ ಪತಿ ಹೆನ್ನೆ ವಿಠಲ ೫

೬೬

ಮಂದಾನ ಬಾಧೆಗೆ ಮನಿ ಮಂದಿ ನಾವು ಸಹಿತ
ಬೆಂದು ಬೇಸರ ಗೊಂಡು ಬಳಲು ತೇವು ಹರಿ
ತಂದಿ ಬೇಗದಿ ಬಂದು ದಯಮಾಡಿ ಸಲಹೋ
ಗೋವಿಂದಾ ಕೃಪಾಳು ಶ್ರೀ ಕರುಣಾಂಬುಧಿಯೆ ಪ

ಕೃಷ್ಣಾ ರೌದ್ರಾಂತಕನ ಕ್ರೂರದೃಷ್ಟಿ ಮುಖ ಹಲಾ
ತೃಷ್ಣವಾಗಿ ಎನ್ನ ಕಾಡುತಿರಲು
ನಿಷ್ಠೆ ನೇಮಗಳೆಲ್ಲ ಜರಿದು ಮತಿ ಭೃಷ್ಟನಾಗಿ
ಕಷ್ಟಕ್ಕೆ ಒಳಗಾದೆ ಕಡೆಹಾಯಿಸೊ ಧೊರಿಯೆ
ಇಷ್ಟದಾಯಕ ನಿನ್ನಲ್ಲಿನ ಮಾಯವೆ ಆಡುದು (ಅಹುದು)
ಕೃಷ್ಣಮೂರುತಿ ಬೇಗ ಕೈಹಿಡಿ ಇನ್ನಾ
ಸೃಷ್ಟಿಗೊಡೆಯ ಶ್ರೀನಿವಾಸಕೇಶವ ಎನ್ನ
ಕಷ್ಟವು ಪರಿಹರಿಸಿ ಕಾಯೋ ಸಂಪೂರ್ಣ ೧

ಸೂರ್ಯಾನ ಪುತ್ರನ ಕಾರ್ಯಾವು ಎಮ್ಮ ಮೇಲೆ
ಭಾರಿ ಕಾಣುತಲಿದೆ ಪರಮಾತ್ಮನೆ --------
ಘಟಕಳಿಗುಪದ್ರಕಾರನಾಗಿ ವ್ಯಾಧಿ ಖಂಡಿಸೋ ವೇಳೆ
ಆರು ಈ ಗ್ರಹಕರ್ತರಾಗಿರಲು ದೇವರಿನ್ನು
ಧಾರುಣಿಯೊಳು ಹರಿ ದನುಜಾಂತಕಾ
ವಾರಿಜಾನಾಭಾ ಶ್ರೀ ವೈದೇಹಿ ಪತಿರಾಮಾ
ಸಾರನೆ ಗಡ ಬಂದು ಸಲಹೋ ತಂದೆ ೨

ಗರ್ಭಾದಿ ಮುದನಿಂ ಸುಖಭ್ರೂಣ ಭಯವೆಂಬ
ದೆಬ್ಬಿಗೆ ತಾಳದೆ ತಲ್ಲಣಿಸುವೆ
ಅರ್ಭಕ ನಾನೊಂದು ಅರಿತು ಅರಿಯೆ ದೇವ
ಸಭ್ಯಾ ನೀ ನಂದ ಸರ್ವೋತ್ತುಮಾ
ನಿರ್ಭಯನನು ಮಾಡಿ ನೀನೆ ರಕ್ಷಿಸದಿರೆ
ಇನ್ನು ಬ್ಯಾರೆ ದಾರು ಮನಸು----ಳಗೆ
ದರ್ಭಶಯನ ರಾಮನ------'ಹೊನ್ನ ವಿಠ್ಠಲ'
ಸಾಕಾರ ನೀ ಎನ್ನ ತ್ವರದಿ ಪೊರೆಯೊ ೩

೯೭

ಮರದನೋ ಯನ್ನ ಶ್ರೀಹರಿಯೇ ಭಕ್ತರಿಸಿರಿಯೇ
ಸ್ಮರಿಸುವರ ಧೊರಿಯೇ

ಮರೆಯದೇ ಸಿರಿಸಂಪತ್ತು ಮಿಗಿಲಾಗಿರಲು
ಭಜಿಸವರನ ಬಿಡದಲೆ
ಕರುಣಾ ಭರದಲಿ ಕಾಯುವ (ಕಾಯುವಿ)ದತಿಘನ
ಬಿರುದು ನಿನ್ನದೆಂದು ಪೇಳುತಿರೆ ಶೃತಿ ಪ

ತಂದೆ ಕಂದನ ಭಾದಿಸಲು ಶ್ರೀಧರ ಬೇಗ
ಬಂದೆನ್ನ ಸಲಹೆನ್ನಲು ಮಂದರಧರ ವಳಿ–
ತೆಂದು ಸಂಧಿಸಿ ಕಾಲದ್ವಂದ್ವ ರೂಪವನೇ
ಮಂದ ದನುಜನ ಕೊಂದ ಬಳಿಕಾನಂದ
ಕರುಣಾಸಿಂಧು ಶ್ರೀಹರಿ ೧

ಅಂದು ಅಜಾಮಿಳನು ಅಕ್ಷರದ್ವಯದಿಂದ ಮುಕ್ತನಾದನು
ಕುಂದರದನ ದ್ರೌಪದಿ ಮಾನಕಾಯಿದಿ ಇಂದಿರೇಶನೆ ಮುದದಿ
ನಂದ ನಂದನ ನಾನು ಈ ಭವ ಬಂಧನದಿ ಬಲುನೊಂದೆನೋ
ಮುಚುಕುಂದವರದ ಪುರಂದರಾರ್ಚಿತ ಇಂದು ವದನ ೨

ವರಮುನಿಯ ಶಾಪದಲಿ ಸತಿಯು
ಘನತರ ಶಿಲೆಯಾಗಿರಲು
ಸರಸಿಜಾಸನ ವಂದೆ ತಾ ನಿಮ್ಮಯ
ಪಾದಸ್ಮರಿಸಲಾಕೆಯು ದುರಿತ
ಪರಿಹಾರಾಯಿತು ಗರುಡವಾಹನ ಧರಣಿಧರ
ಕರಿವರದ ಹೆನ್ನೆಯ
ಪುರನಿಲಯ ನರಹರಿ ಮುರಾಂತಕ
ಉರಗಶಯನಾಂಬುರುಹ ನಯನ ೩

೯೮

ಮಾಧವಾ ನಿನ್ನ ಮಹಿಮೆ ಪ್ರಕಾಶವು ಈ
ಧರೆಯೊಳು ಪೊಗಳೆಲೆನ್ನೊಶವೆ

ಸಾಧು ಸಜ್ಜನ ಸಂತರ ಸಲಹುವ
ಮಾಧವ ಪತಿ ಹರಿ ಯಶೋದ ನಂದನಾ ಪ

ಕನಕಾಂಬರಧರ ಕಮಲಸಂಭವ ಪಿತ
ಇನಕುಲ ಭೂಷಣ ವೀರಾಧಿವೀರ
ಘನಮಕುಟಧರ ಶಿರ ಕಾರುಣ್ಯಸಾಗರ
ಅನಿಮಿತ್ತ ಬಂಧು ಜಗದಾದಿ ಪ್ರಿಯ
ದಿನಕರ ಕೋಟಿ ತೇಜ ದೇವಾದಿದೇವ
ದೀನರಕ್ಷಕ ರಾಮ ಜಾನಕಿ ಪ್ರೇಮಾ
ಅನಿಮಿಷ ರೊಡೆಯ ಶ್ರೀ ಆದಿನಾರಾಯಣ
ಕನಿಕರಿಸಿ ಎನ್ನಮೇಲೆ ಕೃಪೆ ಮಾಡೋ ಗೋವಿಂದಾ ೧

ವಾಸುಕಿಶಯನ ಶ್ರೀವಸುದೇವ ತನಯಾ
ಸಾಸಿರನಾಮದ ಸರ್ವೇಶಾ ಈಶಾ
ವಾಸುದೇವಾಕೃಷ್ಣಾ ವಾರಿಜೋದರ
ಶ್ರೀನಿವಾಸ ವೇದೋದ್ಧಾರ ವೈದೇಹಿ ರಮಣ
ಭೂಸುರ ವಂದಿತ ಪೂಜಿತ ಸರ್ವತ್ರ
ಶ್ರೀಶವೇಣನಾದ ಶೀತ ಜನಪೋಷಾ
ಭಾಸುತ ಕೀರ್ತಿ ವಿಶಾಲ ಭಕ್ತವತ್ಸಲ
ದಾಸನು ನಾ ನಿನ್ನ ದಯಮಾಡಿ ರಕ್ಷಿಸೆನ್ನ ೨

ಸುಂದರ ವದನ ಸುರೇಂದ್ರ ಅರ್ಚಿತ
ಪರಮಾನಂದ ಮುಕುಂದ ಮಹಾದೇವನೆ
ಹೊಂದಿ ನಿಮ್ಮಯ ಚರಣದ್ವಂದ್ವ ಪೂಜಿಪ
ರಂದದಿ ಪುರವಂತ ಬಿರುದುಳ್ಳ ದೇವಾ
ಸಿಂಧು ಶಯನನಾದ 'ಶ್ರೀಹೆನ್ನವಿಠ್ಠಲಾ' ಕರೆದೆನ್ನ

------ ಎನ್ನನ್ನು ಕರುಣಿಸು ಕಾಯೋ

೯೯

ಮಾಯಾದೊಳಗೆ ಶಿಲ್ಕಿ ಮಗ್ನನಾಗಿ ಮರವೆಗೆ ಒಳಗಾದೆ
ಕಾಯಬೇಕಯ್ಯ ನಿನ್ನ ಕರುಣ ರಸವನ್ನು ಕಾಣದೆ ನಾ ಬರಿದೆ ಪ

ದೀನದಯಾಪರ ದನುಜಾಂತಕ ನಿಧಾನ ಸುಜನವಂದ್ಯಾ
ಮಾನವಾದಿ------ಜನಕ ಸನ್ಮಾನಿತ ಮುಚುಕುಂದ
ಗಾನಲೋಲ ಕರಿವರದ ಗೋವಿಂದ ಕನಕ ಭೂಷಿತಾಂಗಾ
ನೀನೆ ದಯಮಾಡಿ ರಕ್ಷಿಸೋ ಎನ್ನ ನಿಜ ನಿತ್ಯ ಶ್ರೀ ರಂಗಾ ೧

ಈ ದೇಹವು ಸುಖ ಸೌಖ್ಯದೊಳಗೆ ಬಿದ್ದು
ಇತರ ಜ್ಞಾನತೊರೆದು
ಮಾಧವ ನಿಮ್ಮ ನಾಮಸ್ಮರಣೆಯು ಎಂಬುದು
ಮನಬಣ್ಣ ಮರೆದು
ಸಾಧಿಸಿ ನಿಮ್ಮ ಪಾದ ಸದ್ಗತಿ ಹೊಂದುವ
ಸೌಖ್ಯವ ಕಾಣದಿನ್ನೂ
ಗಾಧಿಯೊಳಗೆ ------ ಬಡವನ ಕೈಯ್ಯ
ಪಿಡಿವರು ಇನ್ನೂ ೨

ಏಸೋ ಬಾರಿ ನಾ ಹುಟ್ಟಿದರೇನು ಇನ್ನು ನಿನ್ನ ಕಾಣದೆ
ಮೋಸ ಪ್ರಪಂಚದಿ ಮುರಾರಿ ಅನುದಿನವು
ಮನವು ನಿನ್ನಲ್ಲಿಲ್ಲದೆ
ಘಾಸಿಗೆ ಬಿದ್ದೆನು ಕರುಣಿಸೊ ಬೇಗನೆ ಘನ್ನ 'ಹೆನ್ನ ವಿಠ್ಠಲನೆ '
ವಾಸುದೇವ ಎನ್ನ ವ್ಯೆನದಿ ರಕ್ಷಿಸೋ ವಸುಧೆಯ ಪಾಲಕ ೩

೧೦೦

ಯಾಕೆ ಚಿಂತಿಯ ಮಾಡಿ ಹೆದರುತಿ ಮನವೆ
ಲೋಕ ನಾಯಕ ಲಕ್ಷ್ಮೀಲೋಲನಾ ಸ್ಮರಣೆ ಬಿಟ್ಟೊ ಪ

ವಿದಿ ಮುನ್ನೆ ಬರದಿಷ್ಟಾ ಯಡಿಯಾತಪ್ಪಾದು
ತುದಿಮೊದಲಿಂದಾ ಮಾಡಿದ ದೋಷವೆಲ್ಲಾ
ಬೆದರಿಸಿದರೆ ಅದು ಬಿಡಲು ಬಲ್ಲುದೆ ಕೇಳೂ
ಪದಮ ನಾಭನ ದಿವ್ಯ ಪಾದ ಭಜನಿಯ ಬಿಟ್ಟು ೧

ನಾನಾಪರಿಯ ಮನಸೂ ನಟಿಸುವದಲ್ಲಾದೆ
ಏನು ಎಲ್ಲವೂ ವ್ಯರ್ಥಾ ವೇದನೆ ನಿಂದೆ
ನೀನು ಮಾಡಿದಾ ಫಲ ನಿನಗುಣಿ ಸದೆ ಬಿಡದೂ
ಮಾನವಾಧೀಶನಂಘ್ರಿ ಧ್ಯಾನವೆಂಬುದು ಬಿಟ್ಟು ೨

ಸಕಲಕೆ ಕರ್ತನಾಗಿ ಸರ್ವೋತ್ತಮನಿರಲು
ಭಕುತಿ ಭಾವನೆಯಿಂದ ಭಜಿಸಾದೆ ನಿ
ವಿಕಟಯೋಚನೆಯಿಂದ ಏನುಫಲವು ಇಲ್ಲಾ
ನಿಕರ 'ಹೊನ್ನೆಯ ವಿಠ್ಠಲನ ' ನಾಮೋಪಾಸನೆ ಬಿಟ್ಟು ೩

೧೦೧

ಯಾಕೆ ದಯವುಬಾರದು ಗೋಪಾಲಕೃಷ್ಣಾ ಪ

ಯಾಕೆ ಬಾರದು ಲೋಕನಾಯಕನೆ ಶ್ರೀಕರ
ಕರುಣನಾದ ದೇವ ಅ.ಪ

ಎಂದೆಂದೂ ನಿನ್ನ ಪೊಗಳೂವಾ ಭಕ್ತರ
ಬಿಡದಾನಂದಾದಿ ಇನ್ನು
ಪೊರೆವಾ ಬಿರುದೆಲ್ಲೋ ಇಂದಿರೆ ರಮಣ ೧

ನಾನಾತಿ ಕಷ್ಟದಿಂದಲಿ ಬಳಲೂತ
ನಿನ್ನ ಧ್ಯಾನಾವೇಗತಿ ಎನ್ನುತ
ನೀ ಎಂದೆಂದಿಗಾಪ್ತನು ಛಲದಾನಿ ಇರುವದು ನಿನಗೆ ಎನ್ನ
ಬಿಡವೊ ಕಾರಣೊಂದರಿಯೆನು ಗಾನಲೋಲ
ದಿವ್ಯದಾನಿಗಳರಸ ೨

ಭುಜಗ ಶಯನ ಹರಿಯೆ ಪೂರ್ಣಾನಂದ
ತ್ರಿಜಗವಂದಿತಧೊರಿಯೆ
ಸದ್ಗುಣಶೀಲ ಸುಜನರ ಭಾಗ್ಯನಿಧಿಯೆ ಜಲದೊಳು ಯಿ -----
ಜನಕಾಳು ------'ಹೊನ್ನ ವಿಠ್ಠಲನೆ ' ಅಜಭವ
ಸುರನುತ-----ತ ಪರಾಕ್ರಮ ೩

೧೦೨

ಯಾಕೆ ನಿನಗೆ ಮನವೆ ವ್ಯಥೆಯು ಎಷ್ಟು
ಲೋಕನಾಯಕ ಶ್ರೀಲೋಲ ಲಕ್ಷ್ಮಯ್ಯಾ
ರಮಣ ಶ್ರೀಕಪರೇಯಾ ನಿನ್ನನ್ನೇ ಸ್ಮರಿಸುವುದು ಬಿಟ್ಟೊ ಪ

ಹಲವು ಹಂಬಲಿಸಿದರೇನು ಫಲಾ ವ್ಯರ್ಥಾ
ಬಳಲುವದೊಂದೇ ಅಲ್ಲದೆ ಬಾಧೆಯಿಂದಾ
ಅಜ ಬ್ರಹ್ಮಾಂಬರದ ವರ-----ಆರಾರಿಗ್ವಶನಲ್ಲಾ
ನಳಿನಾನಾಭನಾ ದಿವ್ಯನಾಮಾ ಭಜನೆಯ ತೊರೆದು ೧

ಹರಿಶ್ಚಂದ್ರಾ ನಳರಾಜಾ-------ದಶರಥ ಮೊದಲು
ಪುರಾಕೃತ ಕರ್ಮಾದಿ ಭಂಗಾ ಬಡಲಿಲ್ಲೇನೋ
ಅರಿತೂನೀ ಹೃದಯಾದಿ ಅನ್ಯಚಿಂತನೆ ಹಿಡಿದು
ಪರಮಾತ್ಮ ಪರಬ್ರಹ್ಮನ ಪಾದಧ್ಯಾನವೇ ಬಿಟ್ಟು ೨

ಧರೆಯೊಳಾಧಿಕನಾದ ಧೋರಿ 'ಹೊನ್ನವಿಠಲನ' ಚರಣವೇ
ಗತಿಯೆಂದು ಚಿತ್ತಾದಲೆ ಸ್ಥಿರವಾಗಿ ಪೂಜಿಸಿ
ಸೇವೆಯನೆ ಮಾಡಿ ಪರಮಹರುಷದಿಂದ
ಪಡೆಯಾದೆ ಹರಿಕರುಣಾ ೩

೧೦೩

ಯಾಕೋ ಕೋಪ ಕೃಷ್ಣಾ ನಿನಗೆ ಎನ್ನ ಮೇಲೆ
ಎಲ್ಲ ಸಾಕಬೇಕು ಎಂಬ ನಿಜವಾ ಪ

ಲೋಕನಾಯಕನಾದ ಲಕ್ಷ್ಮೀಲೋಲಗೋವಿಂದ
ಅನೇಕ ಅವತಾರಗಳೆತ್ತಿದ ಹರಿಯೆ ಮುಕುಂದಾ
-------ಜನರೊಳಗಿನ್ನು ಹೀನನ ಮಾಡಿ ಬಿಡಿಸಿ
ಸಾಕಲಾರದೆ ಹಿಂದಕೆ ಸರಿದರೆ
------------------------------ ೧

ತಂದೆತಾಯಿ ಬಂಧು ಬಳಗ ದೈವ ನೀನೆಂದು
ಇನ್ನು ಎಂದೆಂದು ಭಕ್ತರ ಸಲಹೊ
----- ಇಂದು ನಿನ್ನ ದ್ವಂದ್ವ ಚರಣಾನಂದದಿಂದ
ಹೊಂದಿದವನು ಕಂದನೆಂದು---------
ಅಂದದಿಂದ ಪೊರೆಯದಿರುವದು ಹೇಗೊ ೨

ಅಷ್ಟು ಜಗಕಾಧ್ಯಕ್ಷನಾದ ಆದಿಮೂರುತಿ
ನಿಷ್ಟ ನೀನು ಶಿಷ್ಟ ಜನರ ಹೃದಯದಿರುತಿ
ಇಷ್ಟು ಕಷ್ಟ ಬಡುತ ನಾನು
ಇಷ್ಟದಿಂದ ಮೊರೆಯ ಹೊಕ್ಕರೆ
ಸೃಷ್ಟಿಗೊಡೆಯನಾದ 'ಹೊನ್ನವಿಠ್ಠಲ' ನಿನ್ನ ಇಷ್ಟ ಇಲ್ಲದೆಲ್ಲಾ ೩

೧೦೪

------ಯು ಮಾಡಿದರು ಏನು ಹರಿಯೆ
ಸ್ಪಷ್ಟ ನಿಮ್ಮ ಹರುಷರನು ಮುಟ್ಟುವ ಪರಿ-----ರದೆ ಪ

ಹಗಳಿರಳು ಬಗೆ ಬಗೆಯ ಹಲವು ಯೋಚನೆಮಾಡಿ
ಸೊಗಸಾಗಿ ದೇಹವನು ಸಲುವದೊಂದೆ
ನಿಗಮಗೋಚರ ನಿಮ್ಮ ನಾಮಧ್ಯಾನವು ತೊರೆದು
ಭುಗಲಿಗೆ ಒಳಗಾಗಿ ಪರಿಪರಿ ವಿಧದಿಂದಾ ೧

ಪರರ ಸುಖವನು ಕಂಡು ಇರುಳು----ಮನದಿ
ನರಳುತ ನೀ ಎನಗೆ ಇನ್ನಿಲ್ಲವೆಂದು

ಹೊರಳಿ ಹೊರಳಿ ದುಃಖ ಹೊಂದಿ
ಬಿಡುವುದ ಒಂದೇ ಕರುಣಾ------- ೨

ಕರುಣೆ ತೋರಿ ತೋರದೆ ಇನ್ನು
ದುರುಳ ಬುದ್ಧಿಯ ಮಾಡಿ ಮೀರಿ
ಒಬ್ಬರ -------------
ಮಾಡಿಬಾಳು---------- ೩

ಫಣೆಯಲ್ಲಿ ಬರೆದಂಥ ಬರಹವು ತಪ್ಪದಿನ್ನು
ನಾನು ಅಪೇಕ್ಷೆಗೆ ಒಳಗಾಗಿ ಬಹಳ------
---ಲ್ಲದೆ ಉದರ ಧ್ಯಾಸಕ್ಕೆ ಒಳಗಾಗಿ
ಮನಸು ನಿಲ್ಲದೊ ಮರಳಿ ಮರುಳುತಲಿ ಇನ್ನೂ ೪

ಇಂಥ ಪರಿ------ಗೆ ಒಳಗಾಗಿ
ಭ್ರಾಂತನಾಗಿ ನಿಮ್ಮ ಚರಣ ಭಜನೆ ಮರೆದು
ಸಂತತಯಿರುವುದು ವಂದೇ ನಾಥ ------
ಕಂತುಪಿತನಾಥ ಶ್ರೀ ಘನಹೆನ್ನವಿಠ್ಠಲಾ ೫

೧೦೫

ರಂಗ ಬಾರೈಯ್ಯ ದೇವೋತ್ತುಂಗ ದಯಾಂತರಂಗ ।
ಅಂಗಜನಯ್ಯ ನರಶಿಂಗಾ ಸಾರಸಾಪಾಂಗ ॥
ಮಂಗಳ ಮಹಿಮಾ ವಿಹಂಗ
ಘೋರ ಭವಭಂಗರಹಿತ ರಣರಂಗ ವಿಜಯ ॥
ಮುನಿಪುಂಗವ ಸನ್ನುತ ಶೃಂಗಾರಾಂಗ ರಮಾಂಗನಾಸಂಗ ಪ

ಶತಕೋಟಿ ಭಾಸ್ಕರ ಯುತತೇಜ ಮರುತಾಂತರ್ಗತ ।
ಹರಿಮೃದು ಭಾಷಣ । ಕೌಸ್ತು ಭಾಭರಣ ।
ಜಿತದಿತಿಸುತಬಾಲ । ಶ್ರಿತಭಕ್ತ ಮಂದಾರ ।
ಪತಿತ ಪಾವನ ಶ್ರೀರಾಮ ಪಟ್ಟಾಭಿರಾಮ ।
ಅತುಲಿತ ಚರಿತ ಕಾಮಿತ ಫಲದಾಯಕ ।

ಶತ ಧೃತಿ ಜನಕಾಚ್ಯುತ ಸರ್ವೋತ್ತಮ ।
ಸತತವು ನೀನೇ ಗತಿಯೆಂದೆನುತಲಿ ।
ಹಿತದಿ ನಾನು ನಿಮ್ಮ ಸ್ತುತಿಸುತಲಿರುವೆನು ೧

ನಂದನಂದನ ವೇಣುನಾದ ವಿನೋದ
ಜಗದ್ವಂದ್ಯ ಶ್ರೀವತ್ಸಲಾಂಛನ ವಾಸುಕಿಶಯನ ।
ಮಂದಹಾಸ ಮುಚುಕುಂದವರದ ರಾಕೇಂದುವದನ ।
ಗೋವಿಂದ ಇಂದಿರಾನಂದ
ಸುಂದರ ವಿಗ್ರಹ ಸಿಂಧು ಗಂಭೀರಾ ।
ಮುಕುಂದ ಧರಣೀಧರ ಕುಂದರದನ
ಕಾಳಿಂದಿರಮಣ ಗಜೇಂದ್ರನ ಸಲಹಿದ
ಛಂದದೆನ್ನ ಮೊರೆಯಿಂದಿಗೆ ಲಾಲಿಸೊ
ಪರಮಾತ್ಮ ಸರಸಿಜೋದರ ಸಕಲಾಣುರೇಣು ಪರಿಪೂರ್ಣ ೨

ಸಾರ್ವಭೌಮ ಭಾಸುರನಾಮ
ಸ್ಥಿರ ಕೀರ್ತಿಸಾಂದ್ರ ವಿಶ್ವಂಭರ ಪಾರಿಜಾತಪಹರಣ
ನಿರುಪಮಧೀರ
ಶರಣಾಗತ ರಕ್ಷಣ ಮಧುಸೂದನ
ಸುರವರ ಪೂಜಿತ ಚರಣಾಂಭೋರುಹ
ಸುರುಚಿರ ಮುರನರಕಾಂತಕ ಹೆನ್ನೆಯ ಪುರನಿಲಯ
ಕೃಪಾಕಾರ ಹರುಷದಲಿ ೩

೧೦೬

ರಂಗಯ್ಯ ನಿನಗ್ಯಾತಕೋ ।
ಯಾತಕ್ಕೆ ಒಬ್ಬರಗೊಡವಿ ಇಂಥಾ ಮಾತುಗಳ
ಹೇಳುವದು ಥರವೆ
ಅಲ್ಲಾ ಪೂತನಿ ಮೊಲೆ ಉಂಡ ಪುಂಡಗೋವಿಂದ ಪ

ನೆರೆಹೊರೆ ಮನಿಗಳಿಗ್ಹೋಗಿ ।
ಅವರ ನೆಲವಿಗಳಿಗೆ ನೀನು ಹುದಗಿ ।

ಮೇಲಿರುವಂಥ ಪಾಲು ಬೆಣ್ಣೆಗಾಗಿ ।
ಎರಡು ಕರದಿತ್ವರದಿ ನೀನು ಬಾಗಿ ।
ಇಂಥ ಪರಿಚೇಷ್ಟಿಗಳಲ್ಲಿ ಬಡವರಾಲಯ ಪೊಕ್ಕು ।
ದುರುಳತನವ ಮಾಡಿ ದೂರುತರುವರೇನೊ ೧

ಮಂದಗಮನಿಯಳ ಕರವನ್ನು ।
ಹಿಡಿದು ಮಾನಭಂಗವ ಮಾಡುವದೇನು ।
ಇದು ಚಂದವೆ ಬುದ್ಧಿ ನಿಮಗಿನ್ನು ।
ಇಂಥಾ ಚಾಳಕತನ ಬಿಡಿಸುವೆನು ।
ಶ್ರೀ ಮಂದರೋದ್ಧರ ಮಹಾಮಹಿಮ ಪ್ರಕಾಶನೆ
ನಂದದಿ------------------ ೨

ಧರೆಯೊಳ್ವೆನ್ನೆಯ ಪುರವಾಸ ।
ಧೊರಿ ಹೆನ್ನೆ ವಿಠಲನ ಈಶ ।
ಭಕ್ತರನ್ನ ಪೊರೆವ ಜಗದೀಶ ।
ತಾರಕನಾದ ಸರ್ವೇಶ ।
ಇನ್ನು ಪರಿಯಾದದಲ್ಲಿ ಮೊರೆಯದ ಕಾರಣ
ನೀನಗೀಗ ಚನ್ನಾಗಿ ಬುದ್ಧಿಯಪೇಳ್ವೆನು ೩

೧೦೭

ರಕ್ಷೆಸೆನ್ನ ಈ ಕ್ಷಣದಲುಪೇಕ್ಷೆ ಮಾಡದೆ
ಪಕ್ಷಿವಾಹನ ಪರಮಪುರುಷ ಲಕ್ಷ್ಮಿನಾಯಕ ಪ

ಅಂದಂದಿಂದ ಕೈಯಹಿಡಿದು ಚಂದದಿಂದ ಎನ್ನಬಿಡದೆ
ಇಂದು ನಿನ್ನ ದ್ವಂದ್ವ ಚರಣಕ್ಕೊಂದಿದ ದಾಸನು ಎಂದು ೧

ಕಷ್ಟಿ ಇವನು ಎಂದು ಕರುಣ ದೃಷ್ಟಿಯನೆ ತೋರುಬೇಗ
ಸೃಷ್ಟಿಗೊಡೆಯ ನಾದ ಶ್ರೀ ಕೃಷ್ಣಮೂರುತಿ ನೀನೆ ಗತಿ ೨

ಹಿಂದು ಇಂದು ಮಾಡಿದಂಥದೆಂಥಾ ದೋಷವೊ ಹರಿಯೆ
ಇಂದು ಎನ್ನ ಬಾಧಿಸುವುದು ಏನು ಕಾರಣವೊ ಕೃಷ್ಣಾ ೩

ಸಜ್ಜನರ ರಕ್ಷಕ ದೇವ ಸರ್ವಜನರ ಪೋಷಕ ನೀನೆ
ದುರ್ಜನರ ಖಂಡಿಸಿದ ಮೂಜ್ಜಗ ಪಾಲಕ ನೀನೇ ಎಂದೂ ೪

ಪುಂಡರೀಕವರದ ಭೂಮಂಡಲಾಧಿಪತಿಯೆನಿಸಿ
ಕೊಂಡು ಜಗದಿ ಮರೆಯುತ್ತಿರುವ ಕೀರುತಿ
ಮಹಿಮವುಳ್ಳದೇವ ೫

ಭಕ್ತವತ್ಸಲ ಭಾವಜನಯ್ಯ ಭವ ವಿರಂಚಿ
ಸ್ತೋತ್ರ ಪ್ರೀಯಾ
ಮುಕ್ತಿದಾಯಕ ಮುನಿಗಳ ವಂದ್ಯಯುಕ್ತ ನೀ
ಪೊರೆಯದಲಿರುವದು ದೇವಾ ೬

ಗಂಗೆ ಜನಕ ಮಂಗಳಾಂಗ ಕರುಣಾಸಾಗರ ಘನಗಂಭೀರಾ
ರಂಗ 'ಹೆನ್ನವಿಠಲ' ಕೃಪಾಂಗ ದೇವೋತ್ತುಂಗ ಹರಿಯೆ ೭

೧೦೮

ರಕ್ಷಿಸೋಯನ್ನ ರಕ್ಷಿಸೋ
ರಕ್ಷಿಸೋ ಬೇಗ ಉಪೇಕ್ಷಿಸದಲೆ ಜಲ
ಜಾಕ್ಷ ಯನ್ನ ಮೊರೆ ಪಕ್ಷಿವಾಹನ ದೊರೆ ಪ

ವಾರಿಧಿ ಮತ್ಸ್ಯಾವತಾರದಿ ಧರಿಸಿ ಪೊಕ್ಕು
ಘೋರದೈತ್ಯನ ಕೊಂದು ಇನ್ನು
ಚಾರು ಚರಿತ ವಿಸ್ತಾರ ಶೃತಿಗಳನು
ವಾರಿಜಾಸನಗಿತ್ತ ವರದ ಜಗನ್ನಾಥ ೧

ವರಕೂರ್ಮನಾಗಿ ಮಂದರಗಿರಿ ಪೊತ್ತು
ನಿರ್ಜರರಿಗೆ ಸುಧೆಯನುಣಿಸಿ ಹರುಷದಲಿ
ಕರುಣಿಸೋಯಂದರೆ ಕಠಿಣತ್ವ ವಹಿಸುವರೇ
ಪರಮ ಪುರುಷ ನೀನು ಭಜಕರ ಕಾಮಧೇನು ೨

ಧರೆಯ ಕದ್ದು ಒಯ್ದವನ ಕೋಪದಿ
ಘನತರ ಕೋರೆಯಲಿ ಸೆಳದೆ ದನುಜಹರ
ವರಾಹನಾದ ಶ್ರೀ ವತ್ಸಲಾಂಛನ ದೇವ
ಶರಣಜನ ಮಂದಾರ ಶರನಿಧಿ ಗಂಭೀರ ೩

ಗರುಡಗಮನ ಶ್ರೀ ಹರಿ ಸರ್ವೋತ್ತಮನೆಂಬ
ತರುಳನ ತಂದೆಯ ತಾಮಸದಿ
ಪರಿಪರಿಹಿಂಸೆಯ ಪಡಿಸುತಿರಲು
ನರಹರಿ ರೂಪತೋರಿ ಪ್ರಹ್ಲಾದಗೊಲಿದ ಧೊರೆ ೪

ಬಲಿಯದಾನವು ಬೇಡಿ ಬ್ರಹ್ಮಾಂಡ ಭಾಂಡವು
ಅಳೆದು ಮೂರು ಪಾದದೊಳಗೆ ಮಾಡಿ
ತುಳಿದವನ ಪಾತಾಳಕಿಳಿಯಲು ವಾಮನ
ಬಲಭೇದಿ ಸನ್ನುತ ಪಾಲಿಸೋ ಪ್ರಖ್ಯಾತ ೫

ಪರಶುರಾಮ ಬಾಹು ಬಲದಿ ಸಕಲ
ರಾಜರನೆಲ್ಲ ಗೆದ್ದು ಸುಸ್ಥಿರ ಮೂರ್ತಿ
ಧುರದಿಂದ ಭೂಮಿ ಭೂಸುರರಿಗೇ ಧಾರೆಯ
ನೆರೆದ ಶ್ರೀಮದನಂತ ನಿರತದಿ ಭಗವಂತ ೬

ಅನಿಮಿಷರೊಡೆಯ ಶರಣು ಶರಣೆನುತ
ರಾವಣನನು ಜನು ವಿಭೀಷಣನು ಬರಲು
ಘನದಿ ಪಂಕ್ತಿ ಕಂಧರನ ಜಯಿಸಿ ಲಂ–
ಕೇಶನೆನಿಸಿದೆ ಭಕ್ತನ ಇನಕುಲ ಪಾವನ ೭

ಬಲದು:ಶಾಸನ ಸೀರಿಸೆಳೆಯೇ
ದ್ರೌಪದಿ ಮನದಲಿ ಕಾಮಿತಾರ್ಥ ಫಲದಾಯಕ
ನಳಿನಾಕ್ಷ ಈಗ ಮಾನವ ರಕ್ಷಿಸೆಂದು ಸ್ತುತಿಸಲು
ಪೊರೆದೆ ಹಲಧರಾನುಜ ಮುದದಿ ೮

ಅಂಗಜ ಪಿತ ತ್ರಿಪುರಾಂಗನೆಯರ ವ್ರತ
ಭಂಗಮಾಡಿದೆ ಹಿಂಗದಲೇ
ಮಂಗಳಮಹಿಮ ಕೃಪಾಂಗ ಗಂಗೆಯನು
ಅಂಗುಷ್ಠದಲಿ ಪಡೆದ ರಂಗ ಮುನಿನುತ ಪಾದ ೯

ಚಲುವ ಕುದುರೆಯನೇರಿ ಕಲ್ಕಿಕಯ್ಯೊಳು
ಥಳಥಳಿಪ ಖಂಡೆಯ ಪಿಡಿದು ಝಳಪಿಸುತ
ಕಲುಷಾತ್ಮರೆಲ್ಲರ ಖಂಡಿಸಿ ಧರ್ಮವು
ಪರಿಪಾಲನೆಮಾಳ್ಪ ಶ್ರೀ ಭೂದುರ್ಗಾಧಿಪಾ ೧೦

ಪಾವನಚರಿತ ಕೃಪಾವನ ರಾಶಿ
ಶ್ರೀ ದೇವಕೀಸುತ 'ಹೆನ್ನೆಪುರೀಶ'
ದೀನ ದೇವೋತ್ತಮ ದೀನ ಬಾಂಧವ
ವೃಂದಾವನ ನಿಲಯಾನಂದ ಸುಂದರಕಾಯಾ ೧೧

೧೦೯

ರಾಮ ರಾಮ ರಾಮ ಎಂದು ಸ್ಮರಿಸೊ ನೀ ಮನಾ
ಪ್ರೇಮದಿಂದ ಜಾನಕಿಪತಿಯ ಅನುದಿನಾ ಪ

ಇಂದು ಶೇಖರ ವಂದ್ಯ ಗೋವಿಂದ ದೇವನಾ
ಮಂದರಾದ್ರಿ ಗಿರಿಯನೆತ್ತಿದ ಮಹಾಮಹಿಮನ
ಕಂದ ಕೂಗಲು ಕಂಬದಿ ಬಂದ ಕರುಣಾ ಸಾಗರನ
ಚಂದದಿಂದ ಚಲನೆಯಿಲ್ಲದೆ ಚೆಲುವ ಕೃಷ್ಣನಾ ೧

ಕುಲಸತಿಯ ಕುಚದಲ್ಲಿಟ್ಟ ಕೋಮಲಾಂಗನ
ಒಲಿದು ಧ್ರುವಗೆ ಪಟ್ಟವನಿತ್ತ ವಾರಿಜನಾಭಾನಾ
ಜಲದಿ ಬಂಧಿಸಿ ದೈತ್ಯರನ ಛೇದಿಸಿದಾತನಾ
ಸುಲಭದಿಂದ ಹೃದಯದಲ್ಲಿ ಸ್ತುತಿಸೊ ನೀ ಇನ್ನಾ ೨

ಸಿಂಧುಶಯನ ಶ್ರೀನಿವಾಸ ಸಕಲಕರ್ತನಾ
ನಂದದಿಂದ ಹೆನ್ನ ವಿಠ್ಠಲ ಇಂದಿರೇಶನ
ಹೊಂದಿ ಪಾದ ದ್ವಂದ್ವ ಭಜಿಸಿ ಹರುಷದಿ ಮನಾ
ಕುಂದುಯಿಲ್ಲದೆ ಕಾಯ್ವ ಭಾನುಕೋಟಿ ತೇಜನಾ ೩

೧೧೦

ರಾಮಾ ರಕ್ಷಿಸೋ ಎನ್ನ ಪ್ರೇಮಾ ಸಂಪೂರ್ಣಕಾಮಾ ಪ

ಸ್ವಾಮಿ ಜಗನ್ನಾಥ ಸರ್ವಾಂತರ್ಯಾಮಿ ರಾಮಿಯ ರಮಣ
ಶ್ರೀ ರಘುಕುಲಭೂಷಣ ಅ.ಪ

ಅಂಗಜ ಜನಕಯ್ಯ ಮೋಹನಾಂಗ ಜಗದಂತರಂಗ
ಶೃಂಗಾರ ಪರಿಮಳ ಭೂಷಿತಾಂಗಾ ಒಪ್ಪಿರುವೊ ರಂಗಾ
ಗಂಗೆಯ ಜನಕ ತುರಂಗನೇರಿದಾ ಮಂಗಳ ಮಹಿಮ
ಕುರಂಗಲೋಚನಾ ಅಂಗನೆಯರೆಡಬಲ ಸಂಗಡದಲಿ
ಮೋಹಂಗಳ ಮಾಡುತ ಶೃಂಗಾರದಲಿ
ರಂಗ ಮಂಟಪ ಮಧ್ಯರಂಗಲಿರುವ ರಾಮಂಗಾರ ---
ಹೆನ್ನರಂಗನಾಯಕ ೧

ಚಂದದಿಂದಾದಿ ವೇಣು -----ನಂದದಿ ಮೋದ
ಮಂದಾರಧರ ಮಾಧವನಾದ ಗೋವಿಂದ ನಿ ನೋಡಾ
ಇಂದಿರೆರಮಣ ಮುಕುಂದ ಮಹಾನುಭಾವ
ಸಿಂಧು ಶಯನ ಮುನಿ
ವಂದಿತ ಚರಣಾರವಿಂದ ಭಜಿಸುವ ಕಂದನ ತೋರದಯ

ದಿಂದ ಪಾಲಿಸುವ ತಂದೆಯು ನೀನೆ ಎಂದು ತಿಳಿದು ಈ
ಅಂದದಲಿ ನೀನು ಬಂದು ನಿಮ್ಮ
ಪಾದ ಹೊಂದಿ ಭಜಿಸುವೆನು ೨

ಚಂಡಶಾಸನ ಬಿರುದಿನಾ ದೇವಾದಿದೇವ
ಮಂಡಲಾಧಿಪ ಮಹಾನುಭಾವ ಭಕ್ತರ ಕಾಯುವ
ಪುಂಡರೀಕ ವರದಂಡ-----ಕುಂಡಲಿಶಯನ ಕೋ
ದಂಡಧರ ಬಲೋದ್ದಂಡ ವಾನರದಂಡನೆ ಕೂಡಿಸಿ
ಪುಂಡ ರಕ್ಕಸರ ಹಿಂಡನೆ ಹಿಡಿದು ಮಂಡಿಗಳನು ಬಿಡದೆ
ಚಂಡಿಸಿದಂಥಾ ಗಂಡರಗಂಡ 'ಶ್ರೀ ಹೆನ್ನೆವಿಠ್ಠಲಾ ' ೩

೧೧೧

ರಾಮರಾಮ ರಾಮ ರಾಮಸೀತಾರಾಮ
ದಶರಥನಂದನ ರಾಮ ದಯಮಾಡು ಶ್ರೀರಾಮ
ಪಶುಪತಿ ಪಾಲಕರಾಮ ಪಾಲಿಸೊಯನ್ನನು ಶ್ರೀರಾಮ ಪ

ಭಕ್ತವತ್ಸಲರಾಮ ಪಾಂಡವ ಪಕ್ಷಕರಾಮ
ಮುಕ್ತಿದಾಯಕ ರಾಮ ಮುನಿಗಣ ವಂದ್ಯರಾಮ
ಯುಕ್ತ ಜಗತ್ಕರ್ತರಾಮ ಇನಕೂಲಭೂಷಣರಾಮ
ಮೌಕ್ತಿಕ ಮಣಿಗಣರಾಮ ಮಾಣಿಕ್ಯ ಮುಕುಟಧರರಾಮ ೧

ಅಹಿಪಶಯನ ಶ್ರೀರಾಮ ಅನೇಕ ಚರಿತರಾಮ
ಅಹಲ್ಯಾರಕ್ಷಕ ರಾಮ ಅಮಿತ ಪರಾಕ್ರಮ ರಾಮ
ಇಹಪರ ಬಾಂಧವ ರಾಮ ವಿಶ್ವಕುಟುಂಬ ರಾಮ
ಮಹಾಮಹಿಮ ಶ್ರೀರಾಮ ಮನುಜಾಧಿಪತಿರಾಮ ೨

ಭೂತದಯಾಪರರಾಮ ಪುಣ್ಯಪುರುಷ ಶ್ರೀರಾಮ
ಪಾತಕ ಭಯಹರರಾಮ ಪತಿತ ಪಾವನ ರಾಮ

ನಾಥ ಜಗತ್ರಯರಾಮ ಅನಾಥ ರಕ್ಷಕರಾಮ
ಸೇತುಬಂಧನ ರಾಮ ಶಾಶ್ವತ ವಿಗ್ರಹರಾಮ ೩

ಮಂಗಳ ಮೂರುತಿ ರಾಮ ಮಧುಸೂದನ ಶ್ರೀರಾಮ
ಗಂಗಾಪಿತ ಹರಿರಾಮ ಗೌರೀವಲ್ಲಭರಾಮ
ಶೃಂಗಾರಾಂಗ ರಾಮಾಶ್ರಿತಜನ ಪೋಷಿತರಾಮ
ರಂಗನಾಯಕ ರಾಮ ರಾಜೀವ ನಯನ ರಾಮ ೪

ಸತ್ಯವಾಕ್ಯ ಶ್ರೀರಾಮ ಸದಾನಂದ ರಾಮ
ನಿತ್ಯನಿರಂಜನ ರಾಮ ನಿರ್ವಿಕಲ್ಪ ಶ್ರೀರಾಮ
ಭೃತ್ಯಕೋಟಿ ಸಂಘರಾಮ ಪುಣ್ಯಪ್ರಭಾವ ಶ್ರೀರಾಮ
ದೈತ್ಯಾಂತಕ ಶ್ರೀರಾಮ ತಾಟಕಮರ್ದನ ಶ್ರೀರಾಮ ೫

ಕಪಟನಟವರರಾಮ ನವನೀತ ಹೃದಯರಾಮ
ಕೋಟಿ ಭಾನುತೇಜ ರಾಮ ಕರುಣಸಾಗರ ರಾಮ
ಹಾಟಕಾಂಬರಧರ ರಾಮ ಆದಿನಾರಾಯಣ ರಾಮ
ಕೋಟಿಕಂದರ್ಪರೂಪ ರಾಮ ಕೋಮಲಗಾತ್ರರಾಮ ೬

ಯದುಕುಲಾಬ್ಧಿಚಂದ್ರ ರಾಮ ಯಶೋದಾನಂದನ ರಾಮ
ಮೃದು ಮಧು ಭಾಷಣರಾಮ ಮೂಲರೂಪ ಶ್ರೀರಾಮ
ಗದಧರ ವಂದ್ಯರಾಮ ಘನಗಂಭೀರರಾಮ
ಪದುಮನಾಭ ಶ್ರೀರಾಮ ಪರಮಕೃಪಾಳುರಾಮ ೭

ಸರಸಿಜಭವನುತರಾಮ ಸದ್ವಿಲಾಸ ಶ್ರೀರಾಮ
ಕರಿರಾಜ ಪಾಲಕ ರಾಮ ಕಲ್ಮಷ ಪರಿಹರರಾಮ
ಸುರಪತಿ ವಂದ್ಯರಾಮ ಸುಜನಾಂತರ್ಯಾಮಿ ರಾಮ
ಶರಧಿಶಯನ ಶ್ರೀರಾಮ ಶಾರ್ಙ್ಗಪಾಣಿ ರಾಮ ೮

ಕಮಲೋದರರಾಮ ಘನಗುಣಶಾಂತ ರಾಮ
ಕಮಲಜನಕ ರಾಮ ಕಿರೀಟಿ ಸಾರಥಿ ರಾಮ

ಕಮಲಮನೋಹರ ರಾಮ ಗರುಡವಾಹನರಾಮ
ಕಮಲಾಪ್ತ ಶಶಿನೇತ್ರ ಕರ್ಮಸಾಕ್ಷಿ ಭೂತರಾಮ ೯

ಈಶ ಜಗತ್ರಯ ರಾಮ ವಿಷ್ಣುಸರ್ವೋತ್ತಮ ರಾಮ
ವಾಸುದೇವ ಕೃಷ್ಣರಾಮ ವಸುದೇವ ನಂದನ ರಾಮ
ಭೂಸುರಪ್ರಿಯ ಶ್ರೀರಾಮ ಸರ್ವಪೂಜಿತರಾಮ
ವಸುಗಿರಿ ವಾಸರಾಮ ವೈಕುಂಠನಿಲಯರಾಮ ೧೦

ನೀಲಮೇಘವರ್ಣರಾಮ ನಿಖಿಲವೈಭವರಾಮ
ಬಾಲಗೋಪಾಲ ರಾಮ ಪುಂಡರೀಕ ವರದ ರಾಮ
ಫಾಲಲೋಚನ ಪ್ರಿಯರಾಮ ಪಾಂಡುರಂಗ ಶ್ರೀರಾಮ
ಕಾಲಿಯಾಮರ್ದನರಾಮ ದ್ವಾರಕಾವಾಸರಾಮ ೧೧

ವೇಣುನಾದ ಶ್ರೀರಾಮ ವೆಂಕಟರಮಣ ರಾಮ
ಗಾನಲೋಲ ಶ್ರೀ ರಾಮ ಕಂಬುಕಂಧರರಾಮ
ಮಾನಿತ ತ್ರಿಭುವನರಾಮ ಮಂದರಧರ ಶ್ರೀರಾಮ
ಧೇನು ಪಾಲಕ ರಾಮ ದೇವಾಧಿದೇವ ರಾಮ ೧೨

ಕುಂಭಿನೀಧವ ರಾಮ ಕುಶಲವ ಜನಕರಾಮ
ನಂಬಿದೆ ನಿನ್ನ ಪಾದರಾಮ ರಕ್ಷಿಸೋಬಿಡದಲೆ ರಾಮ
ಅಂಬರ ಧ್ರುವನಂತೆ ರಾಮ ಅಜಮಿಳನಂತೆ ರಾಮ
ಸ್ತಂಭದೊಳಗೆ ಬಂದ ರಾಮ ತರುಳನ
ಪೊರೆದಂಥ ರಾಮ ೧೩

ತಾಪತ್ರಯದಲಿ ರಾಮ ನಾತಪಿಸುತಿರುವೆ ರಾಮ
ಈ ಪರಿ ತಾಪವ ರಾಮ ಹೆದರಿಸಿ ಕಳೆಯೊ ರಾಮ
ಭೂಪ ನೀನಲ್ಲದೆ ರಾಮ ಭೂವಿಯೊಳಧಿಕ ನೀನಲ್ಲವೆರಾಮ
ಕಾಪಾಡುವ ಭಾರರಾಮ ಕರ್ತನು ನೀನೆ ರಾಮ ೧೪

ನಿಗಮಗೋಚರರಾಮ ನಿತ್ಯ ಕಲ್ಯಾಣರಾಮ
ಅಘನಾಶನ ಶ್ರೀರಾಮ ಅನಂತನಾಮರಾಮ
ಜಗದೊಳಧಿಕನಾದರಾಮ ಜಯ'ಹೆನ್ನೆವಿಠಲ' ರಾಮ
ಮಗುವು ನಾನೊಂದರಿಯೆ ಶ್ರೀರಾಮ
ಮನ್ನಿಸಿ ಸಲಹೊರಾಮ ೧೫

೧೧೨

ರೂಪನ ಗುಡಿನಿಲಯಾ ವೇಂಟಕರಾಯಾ
ರೂಪನ ಗುಡಿ ನಿಲಯಾ
ವ್ಯಾಪಕ ಜಗತ್ರಯ ಕಾಪಾಡುವ ಭಾರತರ್ಕನು ದಾಸರ ಪ

ದಂಡಿ ದಾನವಮರ್ದನ ಸಕಲಜಗ ಉ–
ದ್ದಂಡ ರಕ್ಷಕ ಪಾವನಾ ಚಂಡ ಪ್ರ–
ಚಂಡ ಮಾರ್ತಾಂಡ––––ಧ್ವವ
ಕುಂಡಲಿ ಶಯನ ಕೋದಂಡ ಪಾಣಿ ಹರಿ ೧

ಗಂಗಾಜನಕ ದೇವಾ ಸಕಲಮೋಹ–
ನಾಂಗನಾ ಪಡೆದನಾ ಶೃಂಗಾರದಲಿ ಕುಜ
ರಂಗ ಮಂಟಪದಲಿ ಮಂಗ
ಳಾಂಗಿಯ ಬಿಡದೆ ಮಡಗಿಸಿ ಇರುವಂಥಾ ೨

ಮಂದರಾದ್ರಿಯ ಧರಿಸಿ ಸುಜನರಿಗೆ ಆ–
ನಂದದಿ ಸುಧೆಯನುಣಿಸಿ
ಅಂದು ಭಕ್ತರ ಆನಂದದಿ ಸಲುಹಿದ
ತಂದೆ 'ಹೊನ್ನ ವಿಠ್ಠಲ' ದಯಮಾಡಿ ಸಲಹಯ್ಯಾ ೩

೧೧೩

ವಾರಿಜನಯನ ಮುರಾರಿ
ಕೃಪೆಯನು ತೋರೋತ್ವರದಿ ಕಂಸಾರಿ ಪ

ಆಗಮ ಸನ್ನುತನೆ ನಾ ಭವಸಾಗರದೊಳು ಸಿಲ್ಕಿದೆನು
ಶ್ರೀ ಗರುಡಾಚಲ ಧಾಮ ಇದು ಪಾರಾಗುವ
ರೀತಿಕಾಣೆ ರಾಮ ೧

ಅರಿಷಡ್ವರ್ಗದಿ ಬಹಳ ನೊಂದೆನೋ
ದುರಿತವಿದೂರ ಗೋಪಾಲ
ಕರುಣಾಕರ ಮುದದಿಂದ ರಕ್ಷಿಸೊಪರಮ
ಪುರುಷ ಗೋವಿಂದ ೨

ಆಪಾದ್ಬಾಂಧವ ಇಂದು ಈಗ ಎನ್ನನು
ಕಾಪಾಡೋ ನೀನೆಂದು
ಶ್ರೀಪತಿ ನಿನ್ನಯ ಮೊರೆಯೆ ಹೊಕ್ಕೆನೊ
ಹೆನ್ನೆಪುರ ಪತಿ ಸಲಹಯ್ಯ ೩

೧೧೪

ವಾಸುದೇವಯನ್ನ ಸಲಹೋ ವಾರಿಜಾಸನ
ಈಶವಾಸವಾರ್ಚಿತ ಚರಣ ವನಜೋದರ
ಭಾಸುರಾಂಗ ಕೋಟಿ ಪ್ರಭಾಕರ ಪ್ರಕಾಶ
ಮಂದಹಾಸ ಕಮಲಾಚಲನಿವಾಸ ಶ್ರೀ ಜಗದೀಶ ಪ

ತಾಪಸೋತ್ತಮ ಸತಿಗೆ ಕೋಪದಿಂದ ಪಾಷಾಣರೂಪವಾಗಿ
ಬಿಟ್ಟೆನುತ ಶಾಪಕೊಡಲು
ಕೋಪನಾಮಣಿ ಬಲು ಪ್ರಲಾಪಿಸುತ ಮನದಿ
ನಿಷ್ಪಾಪರರ ನುಡಿಯಂತೆ ಧರಿಯಲಿಬಿದ್ದಿರಲು

ಪಾಪರಹಿತ ನಿಮ್ಮ ಪಾದ ಸ್ಪರ್ಶಿಸಲಾಕ್ಷಣ
ಸೀತಾಪತಿಯ ಸೇವೆಯಿಂದ ಸುಂದರಿಯಾದಳು ತ್ವರದಿ ೧

ಪಾಪಗಳು ಮಾಡಿದವನಂತ್ಯ ಕಾಲದಲಿ ಸುತನ
ನಾರಗೆಂದು ಕರಿಯೇ ಗತಿ ತೋರಿದಿ ಹಿತದ
ಲಾಮರಾಮರೆಂಬ ನಿನ್ನ ಹರುಷದಲಿ ಪೊರೆದೆ ಕ್ಷಿತಿ
ನಾಥ ಹರಿ ಮಹೋನ್ನತ ಚರಿತನೆ ಪತಿತ
ಪಾವನ ಬಿರುದು ಪರಮಾತ್ಮ ನಿನಗಿರಲು ಸ್ತುತಿಸುವೆನು
ಗೋವಿಂದ ಶುಭಕರ ಶ್ರೀ ಮುಕುಂದ ೨

ಶರಣುಜನ ಮಂದಾರ ಶರಧಿ ಗಂಭೀರ
ಕುಂಜರವರದ ಹಾಟಕಾಂಬರ ಶೋಭಿತ
ಪುರುಷೋತ್ತಮಾನಂತ ಮುರವೈರಿ
ಮುರಲೀರವ ವಿನೋದ ಗರುಡಗಮನ
'ವರ ಹೆನ್ನೆಪುರನಿಲಯ' ಪರಮಪಾವನ ನೃಹರೆ
ಉರಗೇಂದ್ರಶಯನ ಮಂದರಧರ ಕೃಪಾಂಬುಧೆ ೩

೧೧೫

ವಿಧ---------- ಪ

ಹದಿನಾರು ಸಾವಿರ ಹೆಂಡರು ಸಾಲು ----

ಶರಣಾರ್ಥಿಗಳ------ನಿನ್ನ ಬಿರುದ
ಪರಮ ಕೃಪಾರಸ ತೋರದೇನೋ
ಅಲ್ಲ ಸೂಳುಗಳ(?) ಕಾಯುತ ನಿಂತೇನೋ
ಸಿರಿನಿನ್ನ ಕುಚದ ----
ಡಗಿಸಿ ಎರವು ಇಲ್ಲಿದೆ---------ಮತಿಯಲಿ
ತಿರುಗುತ------ದಿ ಪರಮ ಪುರುಷನು ಸುಖಿಭವನಗಳ' ೧

ಅಷ್ಟಧರ್ಮಗಳ ಬಿಟ್ಟೆನೊ ಅಸುರರ ಬಾಧೆಗೆ ಅಂಜಿದೆನೊ
ಸೃಷ್ಟಿಗೆ ನೀ ಕರ್ತನಲ್ಲವೇನೊ ಶ್ರೀನಿಕೇತನ
ಕ್ರೋಧಗೊಂಡೆ ಏನೋ
ದುಷ್ಟನಾಗಿ ಪರೇಷ್ಟರ ಮುನಿಯಲ್ಲಿಂಬಿಟ್ಟ
ಮೊಸರು ಬೆಣ್ಣೆಯಷ್ಟಿಲ್ಲ
-----ಬರುವನ ಕೂಡಿಕೊಂಡೆಲ್ಲರು-------ಹಿಡಿದು ಕಟ್ಟಿ
ಹಾಕಿದರೇನೊ ೨

ಅಂತರಂಗಿಗಳ ಅರಸರತಿ ಅನಂತ
ಮಹಿಮನಾದ-----ತ್ತಿಗಳೆಲ್ಲ
ನೀಕ-----ಟರಲೆ ಬೆತ್ತಕೆ ಯಾಕೋನೀ
ತರವಲ್ಲೆ ಪಂಥಗಳಾಡುತ
----ಸಂತಗಳಾಡುತ ಸಂತೋಷದಲಿ
ಕಾಂತೆರಕೂಡಿ ಶ್ರೀಕಾಂತ
ಹೊನ್ನಯ್ಯ ವಿಠ್ಠಲಂತರಂಗದಲಿ ನಿಂತೂ ಬಾರದ ೩

೧೧೬

ವೆಂಕಟ ನರಸಿಂಹ ದೇವಾ ಎನ್ನ ಸಂಕಟ ಪರಿಹರಿಸುವಾ
ಶಂಕೆಯಿಲ್ಲದ ಬಿರುದಾಂಕ ಮಹಿಮನಾದ
ಪಂಕಜನಾಭ ಶ್ರೀ ಪರಮಾತ್ಮ ಪರಬ್ರಹ್ಮ ಪ

ಸಕಲಲೋಕ ಕರ್ತನಾದ ಶ್ರೀಲಕುಮಿರಮಣ ವೇಣುನಾದ
ಭಕುತವತ್ಸಲ ಬಿರುದುಳ್ಳ ಸ್ವಾಮಿ
ಮುಕುತಿದಾಯಕ ಕೃಷ್ಣ---ಲ್ಲಾ
ಅಖಿಲ ವೈಭವ ಮೂರ್ತಿ ಅಮಿತ ಪರಕ್ರಾಮ
-----ಪೋಷಕ ಸುಜನ ರಕ್ಷಕ ಹರಿ ೧

ಸಿಂಧುಶಯನ ಜಗದೀಶ ಆನಂದ ಪರಿಪೂರ್ಣ ವಿಲಾಸ
ಮಂದರಧರ ಮುಕುಂದ ಅತಿಸುಂದರ ರೂಪ ಗೋವಿಂದ
ಕುಂದದೊ ಅನುದಿನ ಕೋರಿದ ಜನಮನ
ಮಂದಿರವಾಸ ನಾ ಗಂದು ಇಂದು ಇರುವಾ ೨

ಆದಿ ಮಧ್ಯಾಂತ ರಹಿತ ಸಕಲ ವೇದಾಂತರ ಪ್ರಖ್ಯಾತ
ಸಾಧು ಸಜ್ಜನರೊಡೆಯಾನೀತಾ ಅತಿ ಮೋದದಲಿರುವಂಥ ದಾತಾ
ಮೇದಿನಿ ಪತಿಯೆನಿಸಿದ 'ಹೆನ್ನ ವಿಠಲ' ಮಾಧವ ವೈಕುಂಠ
ಮನಿಯಾಗಿ ಇರುವಂಥಾ ೩

೧೧೭

ವೆಂಕಟಪತೇಧೀರ । ಮಾಡೋಯನ್ನ ಸಂಕಟ ಪರಿಹಾರ ॥
ಶಂಕರನ ವರ ಬಿಂಕರಕ್ಕಸಂ ಕಳೆದು ನಿಃಶ್ಯಂಕನಾದ ಪ

ನಿಜಾಂಕ ಗುಣಪೂರ್ಣಾಂಕ ನಿನ್ನಯ ಕಿಂಕರರ ಕಿಂಕರನು ನಾನು ।
ವರದ ಕೋಮಲ ಶುಭಾಂಗ। ಪಾವನಗಂಗ । ಬೆರಳಲಿಪಡೆದರಂಗ
ಪರಮ ಭಕ್ತರ ಪೋಷಾ । ಶ್ರೀಜಗದೀಶಾ ।
ಉರಗಾದ್ರಿ ಸ್ಥಿರನಿವಾಸ ॥
ಸ್ಥಿರದಲಿರೋ ನಿಯಿರದೆ ನಿನ್ನಯ ಚರಣದಲಿ
ಶಿರೆಯೆರಗುತಿರುವರು
ಕರುಣೆತೋರಿ ತ್ವರದಿ ಪೊರೆಯುವ ಬಿರುದು
ಮಹಿಮ ನಿನ್ನದು ೧

ಕುಂಡಲಿಶಯನ ಹರೆ ಮುರಾರಿ ।
ಅಂಡಜವಾಹನ ಧೋರೆ ।
ಪುಂಡಲೀಕವರದನೆ । ಗೋಪಾಲನೇ । ಪಾಂಡವರಕ್ಷಕನೆ ।
ಹಿಂಡು ದೈವರ ಗಂಡ । ವೀರ ಪ್ರಚಂಡ । ಜಗದುದ್ದಂಡ

ರಿಪುಕುಲ ಖಂಡಗರ್ವ । ಅಖಂಡ ಮುನಿಜನ
ಮಂಡಲಾಧಿಪ ದೇವ ದೇವ ೨

ಪಾಲಸಾಗರ ಶಯನ । ಪಾವನ್ನ । ಪಾಲಿಸೋ ದಾಸರನ್ನ ।
ಜ್ವಾಲಾ ಹೆನ್ನೆವಿಠಲ । ಭಕ್ತವತ್ಸಲ । ಲಾಲಿತ ಗುಣಶೀಲ ।
ಪಾಲಿತಾಮರ ಲೋಲಗೋಪಿ ಬಾಲಾ ಲೀಲಾ ವಿಶಾಲನಾಯಕ ।
ಲಾಲಿಸೋ ಕರುಣಾಳೋಯನ್ನಾಲ ಮೇಲ
ಮಂಗಮನೋಹರ ೩

೧೧೮

ಶರಣಾಗತ ರಕ್ಷಕ ಕರುಣಾಂಬುಧೆ
ಪರಿಪಾಲಿಸುವ ಮೊರೆ ಪಂಕಜಾಕ್ಷ
ಪೊರೆವುದು ಲೇಸು ನಿರಾಕರಿಸದೆ ಹರಿ
ನಿನ್ನ ಚರಣಕಮಲವನು ಸ್ಮರಿಸುತಲಿರುವೆನು ಪ

ನಂದನಂದನ ಮುನಿವೃಂದ ವಂದಿತ ರಾಕೇಂದುವದನ ಗೋ
ವಿಂದ ಕೃಷ್ಣಾ ಮಂದರಧರ ಮುಚುಕುಂದವರದ ಸಂ-
ಕ್ರಂದನಾರ್ಚಿತ ಪಾದಸುರಾಂಗ ಸಿಂಧುಶಯನ
ನರಸಿಂಹತ್ರಿವಿಕ್ರಮ
ಕುಂದರದನ ಶ್ರೀ ಮುಕುಂದ ಶೌರಿ
ಇಂದಿರಾಪತೆ ಪರಮಾನಂದ ವಿಗ್ರಹಭವ
ಬಂಧನ ಮೋಚನ ಆಪದ್ಬಾಂಧವ ಶೌರೇ ೧

ವೇಣುಗೋಪಾಲ ಪುರಾಣಪುರುಷ ಸುಮ-
ಬಾಣಜನಕ ಸಾಮಗಾನ ಲೋಲ
ಚಾಣೂರಾಂತಕ ಭಕ್ತಾಧೀನ ಮಾಧವ ಚತು-
ರಾನನ ವಿನುತ ಮಹಾನುಭಾವ ಶ್ರೀನಿ-
ವಾಸಾಚ್ಯುತಾಶ್ರೀತ ಕಲ್ಪತರು ಚಕ್ರಪಾಣಿ

ಪದ್ಮೋದರ ಘೋರರೂಪ
ಧೇನುಕ ಭಂಜನ ದೇವಾದಿದೇವ ವಿಷ್ವಕ್ಸೇನ ಜನಾರ್ದನ
ಶ್ರೀ ವತ್ಸಲಾಂಛನ ೨

ಹರಿಸರ್ವೋತ್ತಮ ಮರುತಾಂತರ್ಗತ
ಪರಮಾತ್ಮ ಗರುಡವಾಹನ ಶುಭಕರಚರಿತ
ಮುರಸೂದನಾನಂತ ಮುಕ್ತಿದಾಯಕ ಜಗದ್ಭರಿತ
ಕೇಶವ ಕೌಸ್ತುಭಾಲಂಕೃತ
ವರದ ಅಹೋಬಲ ಗಿರಿವಾಸ ವಸುಧೇಶ
ಭಾಸುರ ಕೀರ್ತಿಸಾಂದ್ರ ೩

೧೧೯

ಶರಣು ನಿನಗೆ ಶರಣೆಂದೆನೊ ಹರಿಯೇ
ಕರುಣಿಸಿ ಕಾಯೋ ಎನ್ನಧೊರಿಯೆ ಪ

ಪರಮಕೃಪಾಕರ ಪಾವನ
ನರಹರಿ ಪಾಲಿಸೊ ಎನ್ನನಿ---
ಶರಣೆಂದ ವಿಭೀಷಣನ ಆದಿಭಕ್ತರ
ಶ್ರಮ ಪರಿಹರಿಸಿದಂಥ ಶ್ರೀಧರಾ ೧

ಭಕ್ತಾ ಪಾಂಡವ ಪಕ್ಷಾ ಬಲಿಯ
ಭೂಮಿಯ ಭಿಕ್ಷಾ ಯುಕ್ತಿಲಿ
ನೀ ಸಾಧಿಸಿದ ಯೋಧನೆ
ಮುಕ್ತಿದಾಯಕ ದೇವ ಮುರಹರ ಮಾಧವನೆ
ಮೌಕ್ತಿಕ ಮುಕುಟ ಧರಿಸಿದನೆ ೨

ಸುಂದರ ಮೂರುತಿ------ಜಗತ್ಪತಿ
ಇಂದಿರಾ ಹೃದಯಾನಂದನೆ

ಬಂದ ಭಕ್ತರ ಬಿಡದೆ ಅಂದಿಗೆ ನೀನೆ ಪೊರೆದೆ
----ಹೆನ್ನ ವಿಠ್ಠಲಾ ಸಲಹೋ ಎನ್ನ ೩

೧೨೦

ಶ್ರೀಕೃಷ್ಣಾ ನೀನೇಕೊ ಗತಿಯೆಂದು---ಯರು ನಿಂದು
-----ನಿನಗೆ ಹುಟ್ಟಿದೊ----ದು ಯಾಕಿಂದೂ ಪ

---ಹಾರೈಸಿಕೊಂಡೂ -----ದಯಾಸಿಂಧೂ ಅತಿಕಷ್ಟಾ-----
ನೀ ಈಗ ಬಂದೆಯಾ----ಶ್ರೀಷ್ಟನೆ----ನೀನಿಂದೂ
ಇನ್ನೂ ಸೃಷ್ಟ್ಯಾದಿ ------ನಿಂದೂ ೧
ಮಂದಾರಗಿರಿಯ ಪೊತ್ತ ಮಹಿಮನು---ಂದೂ ಇನ್ನೆಂದೂ---
ಸುಧೆಯಾನುಣಿಸಿದ ಅವನೆಂದೂ ಇನ್ನೆಂದೂ
ನಿನ್ನ ಹೊಂದಿದ----ದಿ
ಪೊರೆಯೆಂದೂ ನಾ ಬಂದು ನಿನ್ನ
ಮೊರೆಯಾ ಹೊಕ್ಕೆನಾ----- ೨

ಅನ್ಯನಾನಲ್ಲ ನಿನ್ನ ಅಡಿಯನು ಎತ್ತಿಂದೂ----ಬಡುವೆ ಇಷ್ಟು
ತಾರಿಸೊ----ಮಹಾಚಿನ್ಮಯ ರೂಪನಾದ ಶ್ರೀಹರಿ
ಗೋವಿಂದೋ ಘನ ಹೊನ್ನಯ್ಯ ತೆರಹೀಕ ವಿಠ್ಠಲನೀನೆಂದೂ ೩

೧೨೧

ಶ್ರೀ ಜಗದೀಶ ಮುರಾರಿ ಶ್ರೀತಜನ ರಕ್ಷಕನೆ
ಪೂಜಿತ ಸರ್ವತ್ರ ಪೂರ್ಣ ಪ್ರಭಾವನೆ
ಪುರುಷೋತ್ತಮಹರಿಯೆ ಪ

ರಾಜಾಧಿರಾಜ ಶ್ರೀ ರಘುಕುಲೋತ್ತಮ ನೀರಜದಳನಯನಾ
ಈ ಜಗತ್ರಯಗಳ ಇಷ್ಟದಿ ಸಲಹುವ ವೆಂಕಟಗಿರಿ ರಮಣ

ಭೋಜ ಭಾನುಕೋಟಿತೇಜ ಪ್ರಕಾಶನೆ ಪಾಂಡವ ಪಕ್ಷಕನೆ
ಸುಜನರೊಡೆಯ ಸುರೇಂದ್ರ ವಂದ್ಯ ನಿಜ
ಸದ್ಗುಣ ಭೂಷಿತನೆ ೧

ಪುಂಡರೀಕವರದ ಪುರಾಣಪುರುಷ ಕೋದಂಡಧರ ಪ್ರಿಯಾ
ಅಂಡಜವಾಹನ ಅಖಿಲಲೋಕಕರ್ತ ಆನಂದ ನಿಲಯಾ
ಮಂಡಲಾಧಿಪ ಕೃಷ್ಣ ಮುನಿಗಣ ಸೇವಿತ ಮಾಧವ ಗೋವಿಂದ
ಕೊಂಡಾಡುವ ನಿಮ್ಮ ಕೀರುತಿ ಜಗದೊಳು
ಕೃಪೆಯ ಮಾಡುಯೆಂದಾ ೨

ಮಂಗಳಮೂರುತಿ ಮಾರಜನಕ ದೇವೋತ್ತುಂಗ
ಮಹಾನುಭಾವಾ
ಗಂಗಾಪಿತ ಶ್ರೀಗೌರಿಪತಿ ಪ್ರಿಯಾ ಕರುಣಾಸಾಗರ ದೇವಾ
ಶೃಂಗಾರಾಂಗನೆ ಶ್ರೀ ಲಕುಮಿಯ ಉರಸೂಸುತಲಿರುವಂಥಾ
ರಂಗನಾಯಕ ಭೂರಮಣ 'ಹೆನ್ನವಿಠ್ಠಲ'
ರಕ್ಷಿಸೊ ಭಗವಂತಾ ೩

೧೨೨

ಶ್ರೀನಿವಾಸ ಗೋಪಾಲ ಧೀನ ಬಂಧು ।
ನೀನೇಗತಿಯಂತೆಂದು ನಿನ್ನ ನಂಬಿದೆ ಇಂದು ।
ಭವಕಮಲ ಭವವಿನುತ ಪಾದ ಪಂಕಜರಮಾ ----
ಧವ ಜಗದ್ಭರಿತ ನಿತ್ಯಾನಂದ ಮೂರ್ತಿ ।
ಕವಿಜಸ್ತುತಯನ್ನವಗುಣಗಳನ್ನೆಣಿಸದಲೆ
ಪವಮಾನನೊಡೆಯ ನೀ ಪಾಲಿಸಿದರೆ ಕೀರ್ತಿ ೧

ಅಂದು ಧೃವ ಪ್ರಹ್ಲಾದ ಗಜವಿಭೀಷಣ ರನ್ನ
ಛಂದದಿ ಅಹಲ್ಯಾ ದ್ರುಪದನಂದನಿಯರ
ಸಂದೇಹವಿಲ್ಲದೇ ಸಂತೈಸಿ ನುಡಿದೆ
ಕೃಪಾಸಿಂಧು ಅರವಿಂದಾಕ್ಷ ಸುಂದರ ಶರೀರ ೨

ಶರಣಾಗತತ್ರಾಣ ಬಿರುದು ನಿನ್ನದು ದಯಾಕರ
ಪರಮ ಪುರುಷ ಮಂದರ ಗಿರಿಧರ
ಹರುಷದಲಿ ವರ ಹೆನ್ನೆಪುರ ಲಕ್ಷ್ಮಿ ನರಸಿಂಹ
ಕರುಣಿಸೆನ್ನಘಗಳನ್ನು ಕಳೆದು ನಿರುಮಪಧೀರ ೩

೧೨೩

ಶೇಷ ಗಿರಿಯ ವಾಸಈಶ ಜಗತ್ರಯ
ಪೋಷಕ ಸರ್ವೇಶ ಭಾಸುರ ಕೀರ್ತಿ
ಶೇಷ ಎನ್ನ ನೀ ಪೋಷಿಸುವುದು ಈಶ ಪ

ವಕ್ಷಸ್ಥಳದಲಿ ವಾಸವಾಗಿಹ ಶ್ರೀ ಪರಬ್ರಹ್ಮ ನಾ
ಪಕ್ಷಿವಾಹನ ಪರಮಪರುಷ
ಅಕ್ಷಯ ಫಲದಾಯಕನಾ
ರಕ್ಷಕ ದೀನ ಜನರ ಸರ್ವೋತ್ತಮನ ರಾಜೀವದಳನಯನ
ಈಕ್ಷಣದಲೆನ್ನ ನಿನ್ನ ಕುಕ್ಷಿಯೊಳಗೆ ಇಟ್ಟು
ರಕ್ಷಿಸೊ ಸಂಪನ್ನ ೧

ವೇಣುನಾದ ವಿನೋದನಾದ
ಸುಗಾನಲೋಲ ಹರಿಯೆ
ದಾನವಾಂತಕ ದಜನುರಕ್ಷಕ
ಸುಜ್ಞಾನಿಗಳ ಧೊರಿಯೆ
ಮಾನವಾಧಿ ಪ ಮದನವಿಲಾಸ
ಮಾಧವ ಮುಕುಂದಾ
ನೀನೆ ದಯಮಾಡಿ ಸಲಹೊ
ಆನಂದಾ ನಿಜನಿತ್ಯ ಗೋವಿಂದಾ ೨

ಜಲದಲಿ ವಾರಿಧಿ ಬಂಧಿಸಿ ದೈತ್ಯರ
ಬಲವನೆಲ್ಲ ಮುರಿದಾ ಬಲವಂತಾ

ರಾವಣನ ಭಂಗವ ಬಡಿಸಿ ತಲೆಗಳ ಛೇದಿಸಿದಾ
ಸುಲಭದಿ ಅವನನುಜಗೆ ಪಟ್ಟವನಿತ್ತು
ಸತಿಯನೆ ತಂದಾ ಜಲಧಿಶಯನ
ಅಹೋಬಲ 'ಹೊನ್ನವಿಠ್ಠಲ'
ಚಲುವ ಸದಾನಂದಾ ೩

೧೨೪

ಸಂದು ಹೋಯಿತೀ ಕಾಲವು ವ್ಯರ್ಥಾ
ಸ್ಮರಿಸದೆ ಶ್ರೀಹರಿಯ
ಒಂದು ಬಾರಿ ಗೋವಿಂದ ಎನದೆ
ಮಂದನಾಗಿ ಅತಿಮಾತಿಗೆ ಒಳಗಾಗಿ ಪ

ಹುಟ್ಟಿದ ಮೊದಲು ––––ಬಹು
ಭ್ರಷ್ಟರ ಸಂಗದಿ ಬೆರೆದಾಡುತ
ಸೃಷ್ಟಿಗೊಡೆಯ ಶ್ರೀಕೃಷ್ಣನ ಪಾದವ
ಮುಟ್ಟಿ ಭಜಿಪರ ಮರದಾಡುತಾ
ಕೆಟ್ಟ ಬುದ್ಧಿಯ ಗುರುಹಿರಿಯರ ಕಂಡು
ಬೆಟ್ಟನಾಗಿ ಬಹು ಜಗಳಾಡುತಾ
ನಿಷ್ಠರ ಕಂಡರೆ ನಿಂದೆಗೆ ಒಳಗಾಗಿ
ಕಟ್ಟಕಡೆಗೆ ನರಕ ಘೋರವೇ ಸಿದ್ಧವಾಗಿ ೧

ಹರಿಶರಣರ ಕೂಡನುದಿನ ಮನದಲಿ
ದುರುಳ ಮಾತಿನಲಿ ದೂಷಿಸುತಾ
ಪರಮಾತ್ಮನ ಕೃಪೆ ಪಡೆದ ಸುಜನರಾ
ಪಾದಕೆ ಶಿರವೆರಗದೆ ಇರುತಾ
ಶರಣರ ದ್ರೋಹದೊಳಿರುಳು ಹಗಲು
ಇದು ಶಿಷ್ಟನು ನಾನೆಂದು ಹೇಳಿಕೊಳುತಾ

ಗರುವತನದಿ------ ಹೀನನು ಆಗಿ
-----------ರತನಾಗಿ ಇನ್ನೂ ೨

ಅಂಡಜವಾಹನ ಪುಂಡರಿಕಾಕ್ಷನ
ಕೊಂಡಾಡುವರನ ಕು------ಡಿ
ಕಂಡ ಕಂಡ-------ನ ಮಹಾಮಹಿಮರನ
ಪುಂಡನಾಗಿ ಇನ್ನು ಹೋಗಲಾಡಿ
ಮಂಡಲದೊಡೆಯ 'ಶ್ರೀಮಹಾಹೆನ್ನೆವಿಠ್ಠಲನ'
ಕಂಡು ಪೂಜಿಸು-----ಒಡನಾಡಿ
ಗುಂಡತನದಿ--------ಕಾಲನ
ದಂಡನೆಗೊಳಗಾಗಿ----ರಾರಿಯ ಮುಖ----ಗಿ ೩

೧೨೫

ಸಂದೇಹವಾಯಿತು ಕಾಲ ಅನೇಕಾ ಬಂದು
ಕಾಯೋನೀ ಬಹುಮುಖಾ
ವಂದಿಸಿ ನಿಮ್ಮ ಪಾದದ್ವಂದ್ವಾರ್ಚನೆ ಎಂದಿಗೆ ದೊರಕುವದು
ಈ ಪರಿ ಹರಿಯೇ ಪ

ಹುಟ್ಟಿದ ಮೊದಲು ನೆಟ್ಟಗೆ ನಡದಾ ಪುಟ್ಟನು
ನಾನಲ್ಲ ಪುರುಷೋತ್ತಮ
ಪಟ್ಟಿಗಾಳನಾಗಿ ಪಾಪದ ಒಳಗೆ ಪುಟ್ಟಿ
ಬೆಳೆದೆ ನಾ ಪರಮಾತ್ಮ
ಗುಟ್ಟಿಲಿ ನಿಮ್ಮಯ ಧ್ಯಾನವು ಜ್ಹಿಹೆಗೆ ನಟ್ಟು
ಚಿತ್ತದಿ ನಡೆವೆ ಈ ಪರಿ ೧

ಸಂಸಾರ ಸತಿಸುತರ ಮೋಹಸಂಭ್ರಮ
ಕೆಲವು ದಿವಸಾಯಿತು

ಅಂಶಫಲಗಳಿಂದ ಆಗುವ ಅನುಭವ
ಸಂಶಯವೆಂಬುದು ತಿಳಿದು
ಹೋಯಿತು ಕಂಸಾಂತಕ ಹರಿ ಕಾಮ
ಜನಕನೇ ಹಿಂಸೆಯೊಳಗೆ
ಬಿದ್ದು ಈ ಪರಿಯಿಂದ ೨

ಮಂದಮತಿಯಾಗಿ ಇಂದಿನ ಪರಿಯಲಿ ಬಂದೆನು
ನಾನು ಭಗವಂತಾ
ಕುಂದು ಇಲ್ಲದ ಹಾಗೆ ಕರುಣಿಸಿ ಎನ್ನ ಕೈಯ್ಯನೆ
ನಾಡಿಯೊಳಗಾದಂಥಾ
ಮಂದರಧರ ಶ್ರೀ ಮಧುಸೂದನ ಗೋವಿಂದ
'ಹೆನ್ನೆವಿಠ್ಠಲ' ರಾಮಾ ೩

೧೨೬

ಸಂದೇಹ ವೇತಕೆ ಸರ್ವೇಶಾ
ಇಂದೆನ್ನ ಹೃದಯಾದಿ ನಿಂದೆನ್ನ ರಕ್ಷಿಸಲು ಪ

ಹಿಂದೆ ನೀ ಸಲಹಿದವರು ಹೊಂದಿದವರೇನಾ
ನಿಂದಿನ್ನೂ ನಿನ್ನ ಪಾದ ಹೊಂದಲಲ್ಲೇ
ಬಂದೆನ್ನ ಅತಿತ್ವರದಿಂದೆನ್ನ ಕೈಯಪಿಡಿದು
ಅಂಧ ನಾ ತೋರಿಸಾ ನಂದನ ಸುತಹರಿ ೧

ಭಂಡಾರ ವುಳ್ಳವನಾಗಿ ನೀನುಯನ್ನ
ಕಂಡಾರೆ--------------
-------------- ಏನು
ಹೆಂಡಾರ ಮೇಲೆ ದೃಷ್ಟಿ ಗಂಡಾರಿಗಿಲ್ಲದಿರೆ
ದುಂಡೇರಿಗೇನುಗತಿ ಪುಂಡರೀಕ್ಷಾಕ ಹರಿ ೨

ನಿನ್ನನ್ನೇ ನಂಬಿದವ ನಾನು ಇನ್ನು
ಯನ್ನಾ ನೀಕಡೆ ದೃಷ್ಟಿ ನೋಡ್ವದೇ ನೋ

ನಿನ್ನಾಣೆ ನಿನಗೆ ಇನ್ನು ಎನ್ನ ನೀ ಸಲುಹದಿರೆ
ಮುನ್ನೀನಾ ದೋಷ ಕಳೆದು 'ಹೆನ್ನೆಯ ವಿಠಲಾ' ೩

೧೨೭

ಸಾಕಲಾರದಿರೆ ಎನ್ನ ಯಾಕೆ ಪುಟ್ಟಿಸಿದ್ಯೋ ಹರಿಯೆ ಪ

ಬೇಕು ಬೇಡದಿದ್ದರೆ ನಿನಗೆ -----ಯುಗ ಜನರೊಳೆನ್ನಾ ಅ.ಪ

ಹಿಂದಿನಿಂದ ಬಂದಾ ದೋಷಗಳಿಂದ ನಾನು ಬಹಳ
ಬೆಂದು ಬಳಲುತ ನಿನ್ನ ಪಾದವ ಹೊಂದಿ ನಿನ್ನ ಸೇರೆ
ಬಂಧು ಬಳಗ ನೀನೆ ಇನ್ನು ಎಂದು ಮೊರೆಯ ಇಡಲೂ
ತಂದೆ ತಾಯಿಗಳು ಕಂದನ ಪೊರೆದಂತೆ ಮಂದರಧರ ಶ್ರೀ
ಮಾಧವ ಕೃಷ್ಣಾ ೧

ವಸುಧೆಯೊಳಗೆ ನಿನ್ನ ಬಿಡದೆ ಮನಸಿನಲಿ ಸ್ತುತಿಸುವಾ
ಪಶುಪತಿ ಪಾಲಕನೆ ಎನ್ನ ಪಾಲಿಸೊ ಕೈ ಹಿಡಿದೂ
ಶಿಶುವಿನಂದ ನಿನ್ನ ನಿಜ ಸೇವಕ ಜನರಂತೆ
ಸೂನುವು ಎನಗೆ ಅಡಗಿಸಿ ರಕ್ಷಿಸಿದರೆ ವಸುಧೆಯೊಳಗೆ ಎನ್ನ ೨

ಎಲ್ಲ ಜನಕೆ ಇನ್ನು ಕರ್ತನಲ್ಲವೇನೊ ನೀನು
ಎಲ್ಲರಂತೆ ಎನ್ನಾ ಕರುಣಿಸಿ ಯಾಕೆ ನೋಡವಲ್ಲೆ
ಹೊಲ್ಲನೊ ನಾ ನಿಮಗೆ ನಿಮ್ಮ ಧ್ಯಾನದಲ್ಲಿರುವನಲ್ಲೊ
ಭಲೆ 'ಹೆನ್ನೆ ವಿಠ್ಠಲನೆ' ನೀನಿಷ್ಟು ಭಾಗ್ಯವಂತ ನಾಗಿ
ಬಡವನ ನೋಡಿ ೩

೧೨೮

ಸಾಕಲಾರೆಯಾ ಎನ್ನನು -----ಹಿಂದಕೆ
ಯಾಕೋ ಶ್ರೀಹರಿಯೇ ನೀನೂ

ಲೋಕನಾಯಕ ಭಕ್ತರೊಡೆಯನೆಂಬ ಬಿರುದು
ಬೇಕಿಲ್ಲವೇನು ನಿನಗೆ ಪ

ಹಿಂದಕ್ಕೆ ನೀ ಪೊರೆದ ಭಕ್ತಾರು ಎಲ್ಲಾರು
ಹಿತವೇನೋ ನಿನಗೆ
ಇಂದು ನೀನೇ ಗತಿಯೆಂದು ಇರುವವನ
ಇನ್ನು ರಕ್ಷಿಸದ ಬಗೆ
ಸಂದೇಹವಾಯಿತು ಸರ್ವರಕ್ಷಕನೆಂಬ
ಶಬ್ದಾವು ತೋರು ಇನ್ನು
ಇಂದಿರೇಯರಸ ಮುಕುಂದ ಗೋವಿಂದ
ಶ್ರೀಮಂದರಾದ್ರಿಧರ ೧

ಸಕಲ ಜಗತ್ಕರ್ತ ಸರ್ವಾಂತರ್ಯಾಮಿ
ಸಾಧುಜನರ ಪೋಷಕಾ
ಸಕಲ ಸ್ವತಂತ್ರನೇ ಸರ್ವೋತ್ತುಮನಾಗಿ
ಸಕಲರ ಪೊರೆಯದಿರೆ
ಪ್ರಕಟಉಳಿಯ-----ಹೀಗಾದೀತು
ಶುಕಮುನಿ ವಂದಿತ ಶ್ರೀ
ಅಕಲಂಕ ಚರಿತ ಶ್ರೀ ಆದಿನಾರಾಯಣ
ರುಕ್ಮಿಣೀ ಪ್ರಿಯಹರೆ ೨

ಶೃತಿಶಾಸ್ತ್ರ ಪುರಾಣ ಮತಿಯಲ್ಲಿ ಶೋಧಿಸಿ
ಗತಿನೀನೆಯಂದು ಇರಲು
ಹಿತದಲಿ ನಿಮ್ಮ ಪಾದ ಸ್ತುತಿಯಾನೆ ಮಾಡುವರ
ಅತಿ ಕಷ್ಟಕೊಡದಿರಲು
ಕ್ಷಿತಿಯೊಳು ನಿನ್ನ ಕೀರುತಿ ಪ್ರಭಾವದ ಗತಿ
ಹೀಗೆ ಕೆಡುವುದಿನ್ನು
ಪತಿತಪಾವನ ಶ್ರೀಪತಿ 'ಹೆನ್ನೆವಿಠ್ಠಲ' ಪಾಲಿಸದ ನೇಮ ೩

೧೨೯

ಸಾಕು ಸಾಕು ಇನ್ನು ಕಷ್ಟ ಅನೇಕಾ
ಬೇಕು ಬೇಕು ನಿನ್ನ ಕರುಣ ಪ

ಹಿಂದಿನಿಂದ ಎನ್ನ ಹೊಂದಿಬಂದ
ದೋಷದಿಂದ ನಾನು ಬಹು ಬಳಲುತಲಿ

ಎಂದು ಎಂದು ನಿಮ್ಮಂದ ದ್ವಯಪಾದ
ಹೊಂದುವೆ ನಾನೆಂದೆನುತಲಿ------
ಬೆಂದುನೊಂದು ಈ ಚಂದದಿ
ಈ ಪರಿಯಿಂದ ನಿನ್ನನಾ ಹೊಗಳುತಲಿ---
ಬೆಂದು ನೊಂದೆ ನಿನ್ನ ಮಂದಿರ ಸೇವಕನೆಂದು
ಬಹಳ ಗೋವಿಂದ ಕೃಪಾಳು ೧

ಘೋರ ರಾಕ್ಷಸ-----ರಿದ ಅವರ
ಸಂಹಾರವ ಮಾಡಿದ ಬಲವಂತ

ವೀರಶೂರ ಗಂಭೀರ ಕೃಪಾಕರ
ವಾರಿಜೋದ್ಭವನ ಪಡೆದಂಥಾ
ಸಾರಿಸಾರಿ ನಿಮ್ಮ ಸ್ಮರಿಸುವವರಿಗೆ
ಸರ್ವ ಸಂಭ್ರಮವು ಮಾಡುವಂಥಾ
ಕೀರುತಿ------ರನು ಯನುತಲಿ
------ನಿಮ್ಮ ಸರ್ವೋತ್ತಮನಂಥಾ ೨

ಗಾಥೆ ಬೋಧೆ ಗೊಳಗಾದೆ ಈ ಪರಿ
ವೇದಾಂತ---ದೊಂದರಿಯೆ
ಸಾಧು ಸಾಧಕರ ಬೋಧೆಗಳೆಂಬುವ
ಸದಾ ಕರ್ಣದಿ ಕೇಳರಿಯೆ----ದರೆ

ಇದರದೆಷ್ಟು ಮಾಧವ ಮಧುಸೂದನ ಧೊರಿಯೆ
ವೇದ ಆದಿ ಅಗಾಧ ಗೋಚರನೆ
ಯಾದವ ಪತಿ 'ಹೆನ್ನ ವಿಠ್ಠಲ' ಹರಿಯೆ ೩

೧೩೦

ಸಾರಿದೆ ನಿನ್ನ ಬೇಸಾರಲಾರೆನೊ ಹರಿ ತೋರಿಸಿದರೆ
ಸರಿ ತ್ವರದಿ ನೀ ಕರುಣಾವು ಪ

ಸಾರೋ ಸಾರಿಗೆ ಬಂದದೊಮೋಹನೀನಾ ಭಾರಿಪುಟ್ಟಿ ಪುಟ್ಟಿ
ಭವಣಿಯು ಬಡುತಾ ಮಾರ ಜನಕ
ಗುಣಗಂಭೀರಾ ಈ ಪರಿ
ಇರಲು ತೋರೋ ನಿನ್ನಯ ಚರಣಾರ ವಿಂದಗಳಿಂದೂ ೧

ದೇಹಕ ಹೊಂದಿಬಂದ ಕಾಮಾದಿಗಳಾರರಿಂದಾ
ಬಾಧೆಗೆ ಒಳಗಾಗಿ
ವಿಹಿತ ಮಾರ್ಗವನಳಿದು ಶ್ರೀ ಹರಿ ನಿನ್ನ
ಧ್ಯಾನಚಿತ್ತಕೆ ಬಾರದೊ
ಈ ಮಹಾ ಭಕ್ತನಕೈಯ ಹಿಡಿದು ರಕ್ಷಿಸು ಇಂದೂ ೨

ಹಿಂದು ಮುಂದು ಇಂದು ತಂದೆ ತಾಯಿ
ನೀನೆ ಬಂಧುಬಳಗ ಮುನ್ನ
ಭಾಗ್ಯ ಪುರುಷ ನೀನೆಂದು ರಾಯ ಪಾದ ಹೊಂದಿ
ಬಂದವರಾನಂದದಿ
ಕಂಡು ಮುಕುಂದ 'ಹೊನ್ನೆಯ ವಿಠ್ಠಲಾ' ೩

೧೩೧

ಹರಿಯಂದು ಸ್ಮರಿಸುವರ ದುರಿತಪರಿಹಾರವೆಂದು
ನೆರೆಪೇಳ್ವ ಶೃತಿ ತಿಳಿದು ಮನವೆ

ಕರುಣಾಸಾಗರನಾದ ಕಮಲಾದ್ರಿವಾಸ
ನರಹರಿಯಪಾದ ಭಜಿಸುವ ಮನವೆ ಪ

ಸುತನ ನಿಂದಗನೆಂದು ಹಿತದಂತ್ಯಕಾಲ ಸಂಘಾತನೆ
ಹಿತ ವೇಳ್ವೆ ಕರಿಯಲು ಮನವೆ
ಚತುರಾಸ್ಯ ಜನಕ ಮನ್ಮಥಕೋಟಿರೂಪ
ಸದ್ಗತಿ ತೋರಿಸಲಹುದೇನು ಮನವೆ ೧

ಆ ಮರರೀಮರ ಎಂಬ ಪಾಮರಗೆ ಪಟ್ಟಾಭಿರಾಮ
ಭಕ್ತರ ಪ್ರೇಮ ಮನವೆ
ಕಾಮಿತಾರ್ಥವನಿತ್ತ ಕಂಜಾಕ್ಷದಯದಿ
ಸೀತಾಮನೋಹರ ರಾಮ ಮನವೆ ೨

ಕರಿಯು ಮಕರಿಗೆ ಶಿಲ್ಕಿ ನೆರಳುತಲಿ ಪರಮಾತ್ಮ
ಪರಬ್ರಹ್ಮನೆಂದು ಸ್ತುತಿಸಿ ಮನವೆ
ಗರುಡವಾಹನ ಹೆನ್ನೆಪುರನಿಲಯ
ಮರಿಯದಲೆ ಪರಿಪಾಲಿಸಿ ಪೊರೆವ ಮನವೆ ೩

೧೩೨

--------ಹರಿಯೆನ್ನ ಕೂಡಿಸೊ ಬಿಡದಿನ್ನು
ಕೂಡಿಸು ಕೃಪಾನಿಧಿಯೆ ಕೂಡಿಸೆನ್ನ ಧೊರಿಯೆ ಪ

ಉದಯದಲಿ ಏಳುತಲಿ ಊರ್ವೀಶ ನಿಮ್ಮಸ್ಮರಣೆ
ಹೃದಯದಲಿ ಅನುಗಾಲ ಉಚಿತನಾಗಿ
ಪದುಮನಾಭ ನಿಮ್ಮ ಪಾದವನೆ ಪೂಜಿಸುವ
ಸದಮಲ ಜ್ಞಾನಿಗಳ ಸಂಗದೊಳಗೆ ಎನ್ನ ೧

ನಿತ್ಯನೇಮ ವ್ರತದಲ್ಲಿ ಬೇಕಾಗಿ ಇರುತಲಿ
ಅತ್ಯಂತ ಪುರುಷ ಆನಂದದಲ್ಲಿ

ಕರ್ತೃ ನೀನಲ್ಲದೆ ಸರ್ವೋತ್ತಮರು ದಾರೆಂದು
ನಿತ್ಯ ನೀನೆಂದು ತಿಳಿಯುವ (ತಿಳಿಸುವ) ಆತ್ಮಕರಸಂಗ ೨

ಅನುದಿನವು ನಿಮ್ಮ ಧ್ಯಾನ ಮನದಲ್ಲಿ ಮರೆಯದೆ
ದಿನಗಳನು ಕಳೆವಂಥಾ ದ್ವಿಜೋತ್ತಮರಾ
ಅನುಸರಿಸಿ ಅವರನನು ಅತಿಮೋದದಿಂದ ಬೆರೆದು
ವನಜನಾಭನೆ ನಿಮ್ಮ ಭಜನೆ ಮಾಡುವರ ಸಂಗ ೩

ವೇದಶಾಸ್ತ್ರಾದಿಗಳ ಭೇದಗಳನರಿತು ಸತ್ಯ
ಬೋಧಗುರು ಕರುಣದಲಿ ಪೂರ್ಣರಾಗಿ
ಗಾದೆಗಳ ಕಳೆದು ಸುಬೋಧೆಗಳ ಹೇಳುವಂಥ
ಸಾಧು ಸಜ್ಜನರಾದಂಥ ಸತ್ಪುರುಷರಾ ಸಂಗ ೪

ಉಪವಾಸವನೆ ಮಾಡಿ ಉಚಿತ ಕರ್ಮಗಳಿಂದ
ತಪಗಳನೆ ಮಾಡುವಂಥ ಧನ್ಯಜನರಾ
ಸುಫಲಂಗಳನೆ ಪಡೆದು ಸೂತುತಲಿ ಇರುವರಾ
ಅಪರಿಮಿತ ಮಹಿಮ ನಿನ್ನ ಹಾಡಿ ಪಾಡುವರಸಂಗ ೫

ಪರಮಾತ್ಮ ನಿನ್ನ ಮಹಿಮೆ ಭಾವದಲಿ ಶೋಧಿಸಿ
ಪರಿಪರಿಯಲಿರುವಂಥ ಭಾವಜ್ಞರಾ–
ಚರಣೆಯನು ಮಾಡಿ ನಿಮ್ಮ ಸೇವೆಯನು ಮಾಡುವಂಥ
ಪರಮ ಭಕ್ತರಾದ ಪುಣ್ಯವಂತರ ಸಂಗ ೬

ಗಂಗಾದಿ ಸಕಲ ತೀರ್ಥಂಗಳನು ಆಚರಿಸಿ
ಅಂಗಾದಿ ದೋಷವ ಕಳೆದ ಅಧಿಕ ಜನರಾ
ಸಂಗಸುಖ ಅಬ್ಧಿಯೊಳು ಸಂತತವು ಬೆರೆವಂಥ
ರಂಗ ' ಹೊನ್ನ ವಿಠ್ಠಲ' ರಾಯ ಗೋವಿಂದ ೭

೧೩೩

ಹರಿಯೆ ನಿನ್ನ ಚರ್ಯದಲ್ಲಿದೊ ಇನ್ನು ಉಗ್ರವಾದ
ಚರ್ಯಗಳಿಂದನಾ
ಮಾಡು ಪರಮಾತ್ಮ ನಿನ್ನ ದೃಷ್ಟಿ ಹರಿದರೆ ಸಕಲ
ಗ್ರಹಬಾಧನೆಯು ಎಲ್ಲಿನೋಡು ಪ

ಗುರುಕರುಣಾಪೂರ್ಣರಾಗಿರುತ ನೀನಿರುತದಲಿ
ಪರಮ ಪ್ರೀತಿ ನಿಷ್ಟ ಗರಿಷ್ಟರಾಗಿ ಪರಮ ಹರುಷದಿ
ಇರುವ ಭಾವಜ್ಞರನ ಪೊರೆವ ಭಾವಗವೇ ಗ್ರಹಗಳಾಗಿ ೧

ಗ್ರಹವೇ ನಿಮ್ಮನುಗ್ರಹವು ಇಹಪರಕ್ಕೆರಡಕ್ಕೂ ಸಹಾಜವಾಗಿ
ತೋರುವವು ಶಬ್ಧಮಾತ್ರ ಮಹಾದೇವ ನಿಮ್ಮ
ಕರುಣಮಹಿಮೆಯನ್ನು ಈ ಪರಿ
ಮಹಿಯೊಳಗೆ ಚರಿಸುವಂಥಾ ೨

ಆವನಾರನ ಗತಿಯು ಆವನಾರನ ರೀತಿಯು
ಆವನಾರನ ಸ್ಥಿತಿಯು ಅರಿತು ಇರುವಾ
ಭಾವ ಭಾವಗಳಿಂದ ಫಣಿಯ ಲಿಖಿತಗಳಂತೆ
ಯಾವ ಕಾಲ------ಇರುವಾ ೩

ಸೂತ್ರಧಾರನು ನೀನು ಸಕಲವನು ಇನ್ನು ಈ
ಗಾತ್ರಗಳಿಗೆಲ್ಲ ಕಾರಣ ಕರ್ತನಾಗಿ
ಮಾತ್ರದಲಿ ಪ್ರಾಣಿಗಳನ್ಯತಾಥ್ಯ--------
ಪಾತ್ರ ನೀನಲ್ಲವೇನ್ನೆ ೪

ದೂರು------ತ್ರವೆ ಅವರಿಗಾಧಾರ ನೀನಾಗಿ

'ಹೊನ್ನವಿಠ್ಠಲ' ದನುಜಮರ್ದನದೇವ
--------------------- ೫

೧೩೪

--------------ಹರಿಯೇ ಪ

ಮುನ್ನ ಫಣಿಯಲಿ ಬರದದಕಿನ್ನಾ ಅತಿಶಯೇನುಂಟು
ನಿನ್ನ ಚಿತ್ತಕೆ ಬಂದಂತೆ ಮಾಡುವುದೆಲ್ಲಾ ೧

ಎನ್ನ ದುಷ್ಕರ್ಮಯೋಗ ಬೆನ್ಹತ್ತಿ ಕಾಡುತಿರಲು
ಇನ್ನೀ ಅನುಭವ-----ನಾ-------ನಿರುವದೆಲ್ಲಾ ೨

ಕರ್ಮಕೆ ಸಾಕ್ಷಿ ಭೂತ ಕಾರಣ ಕರ್ತನಾಗಿ
ಧರ್ಮವೇ ಎನ್ನ ದುಷ್ಕರ್ಮ ಇದ್ದಾನಂ---ನೆಲ್ಲಾ ೩

ಎಷ್ಟು ಹೇಳಲಿ ಎನ್ನದೃಷ್ಟವ ಕಳಿಯಲಾಪೆ
ಸೃಷ್ಟಿರಕ್ಷನಾದ ಕೃಷ್ಣಾಮೂರುತಿ ದೇವಾ ೪

ಬಲ್ಲೀದ ನೀನು ಎಲ್ಲಿ ಬಡವನು ನಾನು ಎಲ್ಲಿ
ನಲ್ಲ ಹೆನ್ನವಿಠ್ಠಲ ಮಹಾನುಭಾವ ೫

೧೩೫

ಹೀಗೆ ನಿರ್ದಯ ಮಾಡುವರೆ ಶ್ರೀಮನ್ನೃಹರೇ ಪ

ಹೀಗೆ ನಿರ್ದಯ ಮಾಡುವರೆ ಕರುಣಾಂಬುಧೆ
ಭೋಗೀಶಶಯನ ಸನ್ಮುನಿಜನ ಪಾಲನ ಅ.ಪ

ವಾರಿಜಾಸನ ವಂದಿತ ತ್ರಿಜಗದಾಧಾರ ನಿರ್ಜರ ಪೋಷಿತ
ಘೋರದೈತ್ಯೇಯ ಸಂಹಾರ ಕೌಸ್ತುಭರತ್ನಹಾರ ಭೂಷಿತ
ಯದುವೀರ ಮಾರಮಣನೇ ೧

ಮದನ ಜನಕ ಸರ್ವೇಶ ಭಾಸುರ
ಶಶಿವದನ ನೀರದ ಸಂಕಾಶ
ಮಧು ಮುರಾಂತಕ ಕುಂದರದನ ಸುಂದರಗಾತ್ರ
ಸದಮಲ ತೇಜ ಕಂಜದಲ ಲೋಚನ ಹರೇ ೧

ಪರಮ ಪುರುಷ ಗೋಪಾಲ ಚಿನ್ಮಯರೂಪ
ಗರುಡವಾಹನ ಶ್ರೀಲೋಲ
ಕರಿರಾಜವರದ ಸುಸ್ಥಿರ ಕೀರ್ತಿಸಾಂದ್ರಮಂ
ದರಧರ ವರ ಹೆನ್ನೆಪುರ ಲಕ್ಷ್ಮೀನರಸಿಂಹ ೨

ಲೋಕ ನೀತಿ

೧೩೬

ಅನವರತ ಜಿಪ್ವದಿ ಆದಿನಾರಾಯಣನಾ ಕೃಷ್ಣಾ ಎನಬಾರದೆ
ಮಹಿಮನಾದ ಕರುಣಾಸಾಗರ ಹರಿಯ ಕೃಷ್ಣಾ ಎನಬಾರದೆ ಪ

ಗೋಕುಲವಾಸ ಗೋಪಿಯಕಂದನ ಕೃಷ್ಣಾ ಎನಬಾರದೆ
ಕಾಕುಸ್ಥ ತಿಲಕನ ಕನಕಾಂಬರಧರನ ಕೃಷ್ಣಾ ಎನಬಾರದೆ
ಶ್ರೀಕರ ಭಕ್ತರ ಪೊರೆವನ ಕೃಷ್ಣಾ ಎನಬಾರದೆ
ಲೋಕನಾಯಕ ಲಕ್ಷ್ಮೀಲೋಲ ಮುಕುಂದನ
ಕೃಷ್ಣಾ ಎನಬಾರದೆ ೧

ನಂದನಂದನನಾದ ನವನೀತ ಚೋರನ ಕೃಷ್ಣಾ ಎನಬಾರದೆ
ಸಿಂಧುಶಯನ ಗುಣಸಿಂಧು ಗಂಭೀರನ ಕೃಷ್ಣಾ ಎನಬಾರದೆ
ಅಂದುಗೆ ಚಂದ್ರನ ಬಂದು ಪಾಲಿಸಿದವನಾ
ಕೃಷ್ಣಾ ಎನಬಾರದೆ ೨

ಮೂರುಲೋಕದೊಡೆಯ ಮುನಿಗೋವಂದ್ಯನ
ಕೃಷ್ಣಾ ಎನಬಾರದೆ
ಮಾರಜನಕ ಕೋಟಿ ಮನ್ಮಥ ರೂಪನ ಕೃಷ್ಣಾ ಎನಬಾರದೆ
ಧೀರ 'ಹೆನ್ನೆವಿಠ್ಠಲ' ದಿವ್ಯ ಬಿಲವಾಸನ ಕೃಷ್ಣಾ ಎನಬಾರದೆ
ಘೋರ ದುರಿತ ಸಂಹಾರ ಕರ್ತನ ಒಮ್ಮೆ
ಕೃಷ್ಣಾ ಎನಬಾರದೆ ೩

೧೩೭

ಅನುದಿನ ಮನದಲಿ ನೆನಿಯೋಮನುಜ ಪ

ಮಂದರಧರ ಗೋವಿಂದನ ಪಾದದ್ವಂದ್ವ
ಯನಗೆ ಗತಿಯೆಂದು ಮುದದಿಂದನುದಿನ ೧

ಮುರಹರ ಭವಸಾಗರ ದಾಟಿಸಿ ಶ್ರೀ
ಗರುಡಾರೂಢನೆ ಕರುಣದಿ ಸಲಹೆಂದನುದಿನ ೨

ಹರಿಸರ್ವೋತ್ತಮ ಕರುಣಾಕರ ರಮಾ–
ವರ ಹೆನ್ನೆಪುರವರ ಹರಿ ಪೊರಿಯಂದನುದಿನ ೩

೧೩೮

ಎಲ ಎಲ ನೆನಿಯೊ ನೆನಿಯದೆ ಇರಬೇಡಾ
ಎಂದಿಗೆ ಶ್ರೀಹರಿಯಾ
ಮಾತಿಲಿ ಕಾಲವು ಕಳೆದಲ್ಲಿ ಘನವೇನಿಲ್ಲಯ್ಯ ಪ

ಸ್ಥಳಕುಲ ಮೋದಿಸಿ ತಾಂಡವಮೂರ್ತಿಯ
ಕುಲನೆನಿಸಿ ಮಾರ್ಗದಲಿ
ಕುಲನೆಲೆ ತಿಳಿದು ಕಾಣುತಹೋಗುವ
ನೆನೆಗಳ್ಳರ ಕೂಡೆ
ಚಲೊ ಚಲೊ ಬೋಧಿಗೆ ಒಳಗಾಗಿ ಮಧುರಸ
ಚಂಚಲ ನತಿ––––––ದು
ಭಲ ಭಲ ಎನಿಸಿಕೊ ಬೇಗನೆ ಪರಮ
ಭಕ್ತರ ಒಳಗೆಂದೂ ೧

ಸರಸರ ಮಾರ್ಗದ ಸರಳಿಯ ತಿಳಿದಾ
ಶರಣರ ನೆಲೆಗಾಣೊ
ನೆರೆಹೊರೆಲಿರುವರ ಕರಕರಿಗಳುಯೆಂಬ
ಕಲ್ಮಿಷ–––––ಕಾಣೊ
ಹರಿಗುರು ಕರುಣಾದಿ ಅಂತರಂಗದಿ
ಅರಿತಿರುವರ ಕೂಡೋ

ಪರಿ ಪರಿಯಲಿ ಆ ಭಂಡಾರದ ಗುರುಭಾರವು
ನೀನೋಡೊ ೨

ಮನಘನ ಕಾಂತಿಯ ಮಹಿಮೆಯ ತಿಳಿದಾ
ಮರ್ಮಜ್ಞರ ಬೆರಿಯೊ
ದಿನ ದಿನ ಸಂಭ್ರಮವನು ಅಘಸರಿಸಿ
ದೃಢಭವವು ಪಿಡಿಯೊ
ತನುವನು------ದ್ರಿಸಿ ತಾರಕ ಜಪಿಸಿ
ಧನ್ಯನಾಗೊ ಇನ್ನೂ ದೀನಜನ ರಕ್ಷಕ
ಧೀರ 'ಹೆನ್ನೆ ವಿಠ್ಠಲನ' ಧಿಟ್ಟದಿ ಸ್ಮರಿಸಿನ್ನು ೩

೧೩೯

ಕಂಡದ್ದು ಬಯಸಿ ಕಂಗೆಡ ಬೇಡಾ
ಪಾಂಡುರಂಗನ ಪಾದ ಬಿಡಬೇಡಾ ಪ

ಕಾಲನಿನ್ನದಲ್ಲ ಕಡುಮೂರ್ಖ ಆ
ಕಾಲ ಪುರುಷ ಮಾಡಿದನೇಕಾ ಪರಿಗಳಿಂದ
ಇನ್ನು ಯಾಲೋಕಾದಲಿ ನಡುವುದಲ್ಲಾ ಸುಖದು:ಖ
ಪಾಲಿಗೆ ಬಂದದ್ದು ಬಿಡದನಕಾ
ಪ್ರಾಪ್ತಿ ಇದ್ದಷ್ಟೇ ಇಲ್ಲಧಿಕಾ
ಶ್ರೀಲೋಲನ ನೀನಿರುವತನಕಾ
ಸ್ಮರಿಸದೆ ಇರಬೇಡ ಅವಿವೇಕಾ ೧

ಬಗಸುವದೊಂದೆ ಮನದಲ್ಲೆ
ಫಣಿಯಲ್ಲಿ ಬರದದ್ದು ತಪ್ಪದಲ್ಲೆ
ಜಗ ಭಗವಂತ ನೀ ಮಾಡಿದಲ್ಲೆ---
-------- ನಿನ್ನದಲ್ಲೆ
ಅನುಗ್ರಹ ಮಾಡುವ ಭರದಲ್ಲೆ

ನಗಧರನಾ ನಾಮ ಬಲದಲ್ಲೆ
ಅಘಗಳ ಕಳಿ ನೀ ತೀವ್ರದಲ್ಲೆ ೨

ಇಷ್ಟಾರ್ಥ ನೀ ಮಾಡಬೇಕಂದಿ
ಹಿಂದಿನ ಸಂಚಿತ ಎಲ್ಲೆಂದಿ
ಕಷ್ಟವ ಪಡಕೊಂಡು ನೀ ಬಂದಿ
ಕಾಮಕೆ ಸುಖವು ಇಲ್ಲೆಂದಿ
ಇಷ್ಟದಿ ಶ್ರೀ ಹರಿ ಪದಹೊಂದಿ
ಇರದೆ ನೀ ಇರಬೇಡಾ ಇಬ್ಬಂದಿ
ಸ್ಪಷ್ಟದಿ 'ಹೊನ್ನಯ್ಯ ವಿಠ್ಠಲಂದಿ'
ಸಾರ್ವದಿ ಮುಂದಕ ನೀ ಬಂದಿ ೩

೧೪೦

ಚಿತ್ತದೊಳಗೆ ಹರಿ ಚಿಂತನೆ ಮಾಡಿ ಚಿಂತಿಗಳನು
ಬಿಡ್ವು–ದುತ್ತ ಮವು ಪ

ಹೋದಯೋಚನೆ ಮಾಡಲು ಮನದಲ್ಲಿ ಅತಿಶಯವೇನಲ್ಲಿ
ಫಲವೇನಿಲ್ಲಾ ಬಹು ಭಾದಕ ವಂದೆ ಬುದ್ಧಿಯು ತಿಳಿಯದೆ
ಸುಲಭದಿಂದಲಿ ಮುನಿವಂದ್ಯನ ಸ್ತುತಿಯ ಮಾಡಿದಲ್ಲಿ
ಖನಿಯಂತೆ ಭಾಗ್ಯವು ಬೇಗನೆ ಕೊಡುವನು–––ಸ್ಥಿರವಲ್ಲಿ ೧

ದುಷ್ಟ ಚಿಂತನೆ ಮಾಡುತೀ ನೀ ಗೇಣು
ಹೊಟ್ಟಿಯ ದೆಸೆಯಿಂದಾ
ಎಷ್ಟು ಮಾಡಿದರೆ ಅಷ್ಟೆ ಪ್ರಾಪ್ತಿಯೊಳಿಲ್ಲದರಿಂದಾ
ಕೃಷ್ಣನ ಚರಣಾರವ ಕ್ರಿಯದಲಿ ಪೂಜಿಸಿ ನಿಷ್ಟವಾಗು––––
ಕಷ್ಟವೆಲ್ಲ ಕಳೆದು ಕರುಣಿಸಿ ಶೀಘ್ರದಿ ಕಾಯುವ ಗೋವಿಂದ ೨

ಕಷ್ಟ ಮಾರ್ಗಗಳ ಕಾಣದೆ ನಡಿಬೇಡಾ ಪುಂಡರ
ಕೂಡಿ ಪುಣ್ಯವು

ಕಳೆದು ಪಾಪಕೆ ಹೋಗಬೇಡಾ ಮಂಡಲದೊಡೆಯನ ಮಹಿಮ
ವುಳ್ಳ ದಾಸರ ಮನ್ನಿಸದಿರ ಬೇಡಾ --------
'ಹೊನ್ನವಿಠ್ಠಲನ ' ಪಾದ ಬಿಡಬೇಡಾ ೩

೧೪೧

----ದಿ ಅನುದಿನ ಹರಿಸೇವೆಯನು ಮಾಡಿ
ಆನಂದವು ಹೊಂದಿರೆ
ಕರುಣಾ ಕೃಪಾಕ್ಷನ ಕರುಣಾವು ಪಡೆದಿನ್ನು
ಕೈವಲ್ಯವು ಅಂದಿರೆ ಪ

ಪುಂಡರೀಕ ವರದ ಶ್ರೀ ಪಾಂಡುರಂಗನ
ಪಾದಾನ ಸೇರಿ ನಂಬಿರೆ
ಮಹಾಕರುಣಾಳು ಹರಿ ಮಹಿಮ ಕೊಂಡಾಡುವರ
ಕಂಡು ಅವರಕೂಡಿರೆ
ಗುಂಡು ಪೆನ್ನಾಕೆ (ಹೆಣ್ಣಾಕೆ) ಮಾಡಿಕುಲದೊಳಗೆ
ತಂದವನ ಕೀರ್ತನೆಗಳು ಮಾಡಿರೆ
ಕುಂಡಲಿಶಯನ ಗೋವಿಂದಾನ ಭಜಿಸಿನ್ನು
ಕಲ್ಮಷವನು ಕಳಿಯೀರೆ ೧

ನಾರದವರದ ಶ್ರೀ ನಾರಾಯಣನಾ
ನಾಲಗೀಯಲಿ ಸ್ಮರಿಸೀರೆ
ವಾರಿಜಾಂಬಕ ಸಿರಿವರದ ಮುಕುಂದರ
ವರ್ಣನೆಯನು ಬಿಡದರೆ
ಮೂರುಲೋಕದೊಡೆಯ ಮುನಿಗಣವಂದ್ಯ
ನೇವೇದ್ಯಾದಿ ನಿವೇದಿಸಿದರೆ
ಸಾರಾಭಕ್ತರನ್ನೆಲ್ಲ ಸಲಹುವ ದೇವನಾ
ಸರ್ವೋತ್ತಮನ ನಂಬಿರೆ ೨

ಮೇಲುಗಿರಿಯವಾಸ ಶೃಂಗಾರ ವದನನ
ಮನದಲ್ಲಿ ಕೊಂಡಾಡಿರೆ
ಘೂಳಿಮೆಲುವಾ ನರಿಯಾ ಸೇರಿ ಮೆರೆದಾಡುವ
ಘನದಲ್ಲಿ ನೀವು ಪಾಡಿರೆ
ವಾಲಾಗದಲ್ಲಿ ನಮ್ಮ 'ಹೊನ್ನವಿಠ್ಠಲನ್ನ'
ವರಿಸಿನ್ನು ಕುಣಿದಾಡಿರೆ
ಶ್ರೀಲೋಲನಂಘ್ರಿಯು ಚನ್ನಾಗಿ ಪೂಜಿಸಿ
ಸಿದ್ಧ·ಮುಕುತಿ ಎನ್ನೀರೆ ೩

೧೪೨

ದೇವದೇವನಾ ಭಜಿಸು ಜಾನಕಿ ಪ್ರೇಮನಾ
ಭಾವ ಭಕುತಿಯಿಂದ ಮನದಿ ಯಾವ ಕಾಲಕೆ
ಬಿಡದೆ ಇನ್ನು ಪ

ಇಂದಿರೇಶನಾ ಸಕಲ ವಿಶ್ವನಾಥನಾ
ಸುಂದರ ರೂಪನ ಸುಗುಣ ಸುಜನವಂದ್ಯನಾ
ಸಿಂಧು ಶಯನನಾ ಚೆಲುವ ಶ್ರೀನಿವಾಸನಾ
ಮಂದರಾದ್ರಿಯನೆ ಪೊತ್ತ ಮಹಿಮಾನಂದನ ೧

ವಾರಿಜನಾಬನಾ ಘನ ವಾಸುಕಿಶಯನನಾ
ನೀರಜ ನಯನನಾ ಕೃಷ್ಣ ನಿಗಮಗೋಚರನಾ
ನಾರದ ವರದನಾ ನವನೀತ ಚೋರನಾ
ಪಾರಮಾರ್ಥಿಕ ಜ್ಞಾನದಲ್ಲಿ ಪ್ರಬಲವಾಗಿ ಮನವು ನಿಲ್ಲಿಸಿ ೨

ಪನ್ನಗ ಭೂಷಣನಾದ ಪಾರ್ವತೀಶನಾ
ಮನ್ನಿಸಿ ಪೊರೆದನ ಮಹಾಮಹಿಮೆಯುಳ್ಳನಾ
ಚಿನ್ಮಯ ರೂಪನಾ ಪರಮ ಚಿದ್ವಿಲಾಸನಾ
ಹೆನ್ನ ತೀರನಿಲಯ ಸುಪ್ರಸನ್ನ 'ಹೆನ್ನ ವಿಠ್ಠಲ' ನಾದ ೩

೧೪೩

ನರಜನ್ಮವೇ ದೊಡ್ಡದು ಇದರಾ ಪರಿ ತಿಳಿದು
ನಡಿಯುತ ಪುಣ್ಯವಂತರಾದ ಪ

ನಿತ್ಯಕರ್ಮನೇಮ ಸತ್ಯಾನುಷ್ಠಾನವು ಅತ್ಯಂತ
ಹರುಷಾದಿ ಆಚರಿಸುತಾ
ಸತ್ಯಾತ್ಮಕರಾಗಿ ಸರ್ವೋತ್ತಮನ ಪಾದ ನಿತ್ಯದಲ್ಲಿ
ಬಿಡದೆ ನಿಜಭಕ್ತಿಯಲಿರುವಂಥ ೧

ಗುರುಹಿರಿಯಾರನುಸರಿಸಿ ಕೃತಶೃತ ಸ್ಮೃತಿಗಾಳ
ಪರಿಪರಿ ಶೋಧಿಸಿ
ಭಾವದಲಿ ಪರಮಪುರುಷನಾದ ಪರಮಾತ್ಮನ
ಮಹಿಮೆ ಸ್ಥಿರವಾಗಿ
ಮನದಲ್ಲಿ ತಿಳಿದು ಸಿದ್ಧಿಸಿದಂಥಾ ೨

ದುಷ್ಟರ ಸಂಗವು ದೂರನೀ ಮಾಡಿನ್ನು
ಇಷ್ಟದಿಂದ ಅತಿಯೋಗ್ಯರ
ಕೂಡಿ ಶ್ರೇಷ್ಠ ಜ್ಞಾನಾಧಿಕ ನಿಷ್ಠಾರು ಎನಿಸಿದ ಶಿಷ್ಟ ಮಾನವ
ಸಾಧು ಸಜ್ಜನರಾದಂಥ ೩

ಯೋನಿಯೆಂಬತ್ತು ಮೂರೆರಡು ಲಕ್ಷಾದೊಳ್
ಮಾನವನಾಗುವದೇ
ಮಹಾದೊಡ್ಡದು ಕಾಣುತ ಇದರೊಳು
ಘನಸಾರವನೆ ಗ್ರಹಿಸಿ
ಮಾನಿತರೆನಿಸೀದ ಮಹಿಮರಾದಂಥಾ ೪

ಭೂಮಿಪಾಲಕನಾದ 'ಹೆನ್ನೆವಿಠ್ಠಲನ'
ಪ್ರೇಮದಿ ಹೇದಯಾದಿ

ಪೂಜಿಸುತಾ ನೀ ಪಾಮರತ್ವವನಳಿದು
ಪ್ರಣಿತಾರ್ಥವು ಹಿಡದು
ಸ್ವಾಮಿ ನೀನೇಗತಿ ಸಕಲಾವು ನೀನೆಯೆಂಬೊ ೫

೧೪೪

ನಂಬಿಗಿಟ್ಟ ಸಂಸಾರ
ಇದು ನಂಬಿ ಹಂಬಲಿಸದಿರು ಪೂರಾ ಪ

ಕಾಯವೆಂಬುದು ಸ್ಥಿರವಲ್ಲಾ
ಅತಿ ಮಾಯಕೆ ಬಂದು ಸಿಕ್ಕಿದೆಲ್ಲಾ
ಬಾಯಿ ರುಚಿಗಳು ಬಿಡು ಎಲ್ಲಾ
ಹರಿಭಜನೆಯೆಂಬ ರುಚಿ ರುಚಿಸೆಲ್ಲಾ
ತಂದೆ ತಾಯಿಗಳು
ಇನ್ನು ಹೊಂದಿದ ಅದರಲ್ಲೆ ಬಗೆ
ಮಾಯದೊಳು ಇರುವಾಗೆ
ಆನಂದ ತೋರುವದು ನಿನ್ನೊಳಗೆ ೧

ಧೊರೆತನ ದೌಲತ್ತು ಸ್ಥಿರವೆಂದು
ಬಹು ಪರಿ ಪರಿಯಲಿ ವಿಹರಿಸು ಎಂದೂ
ಪರಮಾತ್ಮನ ಭಜನಿಲ್ಲದೆಂದೂ
ವ್ಯರ್ಥ ಪಾಪಕೆ ಒಳಗಾಗಿ ಕೆಡುವೆಂದೂ ೨

ಬದುಕು ಬಾಳುವೆ ನಂಬಿಕೊಂಡು
ಮುಂದೆ ತುದಿಗಾಣದೆ ಹೋಗ್ವದು ಕಂಡೂ

---------------------- ೩

ಅಷ್ಟೂ ಶ್ರೀಹರಿ ಮಾಯವೆಂದೂ
ಸ್ಪಷ್ಟದಿ ಮನದಲಿ ತಿಳಿಯಿಂದೂ

ಶಿಷ್ಟ ಹೆನ್ನ ವಿಠ್ಠಲನೆಂದೂ
ಉತ್ಕೃಷ್ಟದಿ ಹೃದಯದಿ ಸ್ಮರಿಸಿಂದೂ ೪

೧೪೫

ನಂಬಿಗಿಲ್ಲದ ಕಾಯ ನೆಚ್ಚಿ ಮಾಯಾ–
ಡಂಬರಕೊಳಗಾಗಿ––––––ದುರ್ಜನರು ಪ

ಎಂಬತ್ತು ನಾಲ್ಕು ಲಕ್ಷ ಜೀವರಾಶಿಗಳ
ಇಂಬಿನಲ್ಲಿ ಹುಟ್ಟಿ ವ್ಯಥೆಯ ಬಿಟ್ಟು
ಸಂಭ್ರಮದಿ ಸುಖದು:ಖ ಸಂಸಾರದೊಳು ಬಿದ್ದು
ಕುಂಭಿಣೀ ದೇಹಮರೆತು ಕಡೆಗೆ ಹೋಗ್ವದು ತಿಳಿದು ೧

ಈ ಶರೀರದ ಭೋಗ ಎನಗೆ
ಶಾಶ್ವತವೆಂದು ಏಸೊ ಪರಿಯಿಂದ
ಹಾರೈಸಿ ಇನ್ನೂ ಆಸೆಯಿಂದ ನೀ ಬಹಳ
ಅತಿಶಯದಲಿರದಿರು ಮೋಸದಲಿ ಕಾಲ ಒದಗಿ
ಮೃತರಾಗುವದು ತಿಳಿದು ೨

ನಿಶ್ಚಯವಿಲ್ಲದ ದೇಹಗಳು ನಿಜವೆಂದು ಮಂದನಾಗಿ
ಅಚ್ಯುತ 'ಹೆನ್ನೆವಿಠ್ಠಲ'ನ ಅರಿಯದಿನ್ನು
ಎಚ್ಚರಿಕೆಯನು ತಪ್ಪಿ ಇಹಲೋಕವನು ತ್ಯಜಿಸಿ
ಕೊಚ್ಚಿಕೊಳಗೆ ಬೀಳುವದು ಪ್ರಕೃತಿಯ ತಿಳಿದೂ ಇನ್ನೂ ೩

೧೪೬

ನಂಬು ನಂಬು ಶ್ರೀನರಹರಿ ಪಾದವ ನರನೇ ಪಾಮರನೆ
ಕುಂಭಿನಿ ಪಾತಕ ಘೋರವ ಕಳೆವಾ
ಕೃಷ್ಣಾ ಮೂರ್ತಿಯನ್ನೇ ಪ

ಸಾಧು ಸಜ್ಜನ ಸಂತರ ಸಲಹುವ ಸಕಲ ಲೋಕ ಕರ್ತನಾ
ಮೇದಿನಿ ಭಕ್ತರ ಮನದಲಿ ಚರಿಸುವ ಮಂಗಳ ಮಹಿಮನ
ಆದಿಮೂರುತಿ ಆನೇಕ ಚರಿತಾ ಅನಂತ ಅವತಾರನಾ
ಮೋದದಿ ಅನುದಿನ ಮನ ಹರುಷದಲಿ
ಮರೆಯದೆ ನೀ ಯಿನ್ನಾ ೧

ಶ್ರೀನಿವಾಸ ಆಶ್ರಿತ ಜನಪೋಷಕ ಶಾಶ್ವತನಾಗಿಹನಾ
ಗಾನಲೋಲ ಶ್ರೀವೇಣುನಾದನ ಕರಿರಾಜ ವರದನ
ದಾನವಾಂತಕನ ದಶರಥತನಯನ ದೇವಾದಿದೇವನ್ನ
ಮಾನಿತ ದ್ರೌಪದಿ ಮಾನವ ರಕ್ಷಿಸಿದ
ಮದನ ಜನಕನಾದನಾ ೨

ಪುಂಡರೀಕ ವರದನ ದಂಡಜ ನಾಮಾನ(?)
ಭೂಸುರ ನಾಯಕನ
ಮಂಡಲಾಧಿಪ ಮುರಹರ ಕೇಶವ
ಮಾಧವ ಗೋವಿಂದನ
ಕುಂಡಲಿ ಶಯನ ಕೋದಂಡ ಪಾಣಿ
ಮುಕ್ಕುಂದನಾದ ಅವನಾ
ಹಿಂಡು ಗೋಪಿಕಾ ಹೆಂಗಳೆರನಾಳುವ
'ಹೆನ್ನೆವಿಠ್ಠಲನಾ' ೩

೧೪೭

ನಂಬೂ ವಿಷ್ಣು ಪಾದಧ್ಯಾನಾ ನರನೆ ಪಾಮರನೆ ಇನ್ನು
ಕುಂಭಿಣಿ ಪಾತಕಗಳೆಂಬವು ಬಾಧಿಸಾವು ಜನ್ಮ ಜನ್ಮದಿ ಪ

ಅಂಬರಾದಿ ಧೃವನ ಕೂಡ ಅಕ್ರೂರ
ಅಜಾಮಿಳಾ ವ್ಯಾಸಾಂಬರೀಷ
ಮೊದಲಾದವರಾ ರಾಸನಕಾದಿಗಳಾದ ನರಾಕೂಡಾ
ಶಂಭುಶಂಕರ ರಾಣಿಗ್ಹೇಳಿದ ಶ್ರೀರಾಮಮಂತ್ರವನೇ ಕೂಡಾ ೧

ಹಿರಣ್ಯ ಕಶ್ಯಪನ ಕ್ರೂರದೂತರು ತರುಳಾನ
ಕಾಯಿದದ್ದು ನೋಡು
ದುರುಳಾ ದಾನವರ ತೊರದು ಸುರರಿಗೆ
ಸುಧೆನುಣಿಬಡಿಸಿದ ನೋಡು
ಪರಮಾ ಹರ್ಷದಿ ಧರ್ಮರಾಯಗೆ
ಭಾಗ್ಯವು ಕೊಟ್ಟದ್ದು ನೋಡು
ಅರಿಮುಖಲಿ ಚಕ್ರವರ್ತಿದಗೆ ಇತ್ತ ಐಶ್ವರ್ಯವು ನೋಡು ೨

ಚಲನೆ ಇಲ್ಲದ ಬಿದ್ದಾಶಿರಿಯಾ ಲಲನೆ
ಮೂಲ 'ಹೊನ್ನೆವಿಠ್ಠಲ'
ಭಗವಂತಾನಾ ನಂಬಿದವ ಕಲದ----ಅಕಾಲ ಸುಖ
ಸಂಭ್ರಮ ಪಡೆದು ಕಡೆಗೆ ಕಾಣೋ ನೋಡಾ ೩

೧೪೮

ನಾರಾಯಣ ಎನಬಾರದೆ
ಕಾರುಣ್ಯ ಮೂರುತಿ ಕರುಣಾಸಾಗರ ಪ

ಘೋರದುರಿತ ಸಂಹಾರ ಜಗತ್ಕರ್ತ
ಮಾರ ಜನಕ ಶ್ರೀ ಮನೋಹರನ
ವಾರಿಜಾಂಬಕ ಕೃಷ್ಣ ವಾರಧಿ ಶಯನನ
ಪಾರಿಮಾರ್ಥಿಕ ನರಿತು ಪರಮ ಹರುಷದಿಂದ ೧

ಕುಂಭಿನೀ ಪತಿರಾಮ ಕೋದಂಡಧರ ಗುಣ
ಗಂಭೀರ ಪುರುಷ ಶ್ರೀ ಘನ ಮಹಿಮನ
ಶಂಬರಾರಿಯ ಕೊಂದ ಶಿವನ ರಕ್ಷಿಸಿದಂಥ
ಕಂಬು ಕಂಧರ ಕನಕಾಂಬರ ಭೂಷಣನಾ ೨

ಅಗಣಿತ ಚರಿತ ಅನಂತ ಅವತಾರನ
ನಿಗಮಗೋಚರ ವಿಷ್ಣು ನಿಜ ನಾಮವು

ಬಗೆ ಬಗೆಯಲಿ ಅತಿ ಭಕುತಿಯಿಂದಲಿ ಜಯ
ಜಗದೊಡೆಯ ಹೆನ್ನ ವಿಠ್ಠಲನ ಜಿಹ್ವದಿ ೩

೧೪೯

ನಾರಾಯಣನೆಂಬ ನಾಮದ ಸವಿಯನೆ
ನರರೇನು ಬಲ್ಲರು ಪ

ಘೋರದುರಿತ ಸಂಹಾರ ಕೇಶವಧೀರಾ
ಮಾರಜನಕ ಸುಂದರ ಹೇ ವೀರಾ
ಸುರಾಸುರಪವಂದ್ಯ ಸುಗುಣ
ಶ್ರೀಗೋವಿಂದ ವೀರಾ
ಶ್ರೀರಾಮಾವತಾರ ಎತ್ತಿದ ಧೀರಾ ೧

ಆದಿಮೂಲ ಕರ್ತನೆಂದು ಅರಿತು ಮನದಿ
ಶೋಧಿಸೆ ಸಕಲ ಸಾರವನು
ಭೇದಾನರಿತು ಯದಾಯುಗ ಭಟಗಾಳಾರು
ಮೋದದಿ ನವಯುಗದ ಮರ್ಮವ ನರಿತು ೨

ಸಕಲ ಪ್ರಪಂಚವೆಂಬ ಸುಖವನ್ನೆ ಅತಿಗಳೆದು
ಮುಕುತಿ ದಾಯಕ 'ಹೊನ್ನ ವಿಠ್ಠಲ' ನೆಂದೆನ್ನು
ಭಕುತಿಯಿಂದಲಿ ಸದಾಭಾವನೆಯ ನೀ ಬಿಡದೆ
ಅಕಳಂಕ ಮಹಿಮನ ಅರಿತು ಸ್ತುತಿಸುವರಿಗಲ್ಲದೆ ೩

೧೫೦

ನಿನ್ನ ಮಾರ್ಗ ನೀ ಬಿಡಬೇಡಾ ಇನ್ನನ್ಯರ
ಮಾರ್ಗ ನಡಿಬೇಡಾ ಪ

------ದಿಯಾ ಬಿಡಬೇಡಾ ಇನ್ನನ್ಯರ
ಸೇವೆಯ ಮಾಡಬೇಡ

ಕುಹಕ ಜನರೊಳು ಕೂಡಬೇಡ ---ನ ಧ್ಯಾನ
ಮಾಡದಿರಬೇಡ ೧

ಶರಣರ ದ್ರೋಹವ ಮಾಡಬೇಡ ಘೋರ ನರಕದಲ್ಲಿ
ನೀ ಬೀಳಬೇಡ
-----ಮುಂದಮಾಡಬೇಡ ಅತಿ ಪಾಪಕೆ
ಒಳಗಾಗಿ ಕೆಡಬೇಡ ೨

ಜ್ಞಾನಿಗಳ ಸಂಗ ಬಿಡಬೇಡ ಅಜ್ಞಾನಿಯ----ಇರಬೇಡ
ಮಾನಹೀನನಾಗಿ ತಿರುಗಬೇಡ ಸನ್ಮಾರ್ಗವ
ಮನ್ನಿಸದಿರಬೇಡ ೩

ಒಬ್ಬರ ಮಾತಿಗೆ ಒಳಗಾಗಬೇಡ ನೀತಿಯ
ತಪ್ಪಿನಡೆ ನುಡಿಬೇಡಾ
ಇಬ್ಬರ ಝಗಳಕೆ ಹೋಗಬೇಡಾ ನೀ
ಹಿರಿಯರ ಬುದ್ಧಿ ಬಿಡಬೇಡಾ ೪

ಅನ್ಯಜಾತಿಗೊಳಗಾಗಬೇಡಾ ನಿನ್ನ ಜಾತಿಧರ್ಮ ಬಿಡಬೇಡಾ
'ಹೆನ್ನವಿಠ್ಠಲನ ' ಮರೆಯಬೇಡಾ-----ಯದಿ
ಸ್ಮರಿಸದಿನಿರು ಬೇಡಾ ೫

೧೫೧

ನೆನಿಯೊ ಮನದಲಿ ಮನದಭಿಮಾನಿಯನ ಪ

ಶಿವ ಶಿವ ಶಿವ ಎಂದನುದಿನ ಹೃದಯದಿ
ಭವಭಯ ನಾಶನಾ ಪಾರ್ವತಿ ರಮಣನ ಅ.ಪ

ಸವಿನಯ ಶರಣರ ಸಂಗದಿ ಬೆರೆತ
ಗಂಗೆಯ ಪೊತ್ತ ಘನ ಗಂಭೀರನಾ ೧

ಮಂಗಳ ಮೂರುತಿ ಮಹಾಮಹಿಮನ ಇಂದು
ಸುಜನ ರಕ್ಷಕ ಕರುಣಸಾಗರನಾ ---- ೨

'ಹೊನ್ನ ವಿಠ್ಠಲ' ಪ್ರೀಯ ಮಹಾದೇವನ ೩

೧೫೨

ನೆನಿಯೊ ಹರಿನಾಮ ನರಪಾನವರತ ಅನುದಿನ
ಮನದಲಿ -----ದೆ ಪ

ಮನಶುದ್ಧಿಯ ಮಾಡುವನು---------- ೧

ತಾದಯಾಪರ ಪೂರ್ಣವಿಲಾಸನ ನಾಥ
ಜಗತ್ರಯ ನಾರಾಯಣನ ೨

ಚಂದದಿ ಹೃದಯಾನಂದದಿ -----ದು
ಇಂದಿರೆಯರಸನ ಇಷ್ಟರ ಬೆರೆದು ೩

ಅಘ ಪರಿಹರಿಸುತ ಅಖಿಲವೈಭವನಾ ನಿಗಮಗೋಚರನಾದ
ನೀರಜ ನಯನನಾ ೪

ಧರೆಯ ಹೊತ್ತಿರುವನ ಅರಿವಾಹನನಾದ ಧೊರೆ
ಹೆನ್ನೆವಿಠ್ಠಲ ದೇವರ ಇನ್ನುಸದಾ ೫

೧೫೩

ನೆನೆಮನದಲಿ ಹರಿನಾಮವು ಸತತಾ
ದಿ-----ನ ಅನಿಮಿಷ ಅನಿಮಷ ರೊಡೆಯನಾ ಪ

ನಂದನಂದನ ಕೃಷ್ಣ ನವನೀತ ಚೋರನ
ಎಂದೆಂದೂ ಮರೆಯದೆ----ರಮಣನಾ ೧

ಭೂತನಾಥಪ್ರಿಯ ಪೂತನಿಯ ಸಂಹಾರ
ಖ್ಯಾತಿ ನೀತಿಯುಳ್ಳನಾಥ ನೀತೋರುತಲಿ ೨

ಘನ್ನ ಹೇಮ ಭೂಷಿತಾಂಗನರಂಗನ
ಜನಕನ ಸುತೆಯಾದ ಜಾನಕೀರಮಣನ ೩

ನಯ ಭಯದಲಿ ವಿಜಯ ಜಯವೆಂದು
ರಾಮದೇವರ ನಿರಂತರಾ ೪

ಥಂಢ ಥಂಡದಲವ ತಾರಗಳೆತ್ತಿ ಬ್ರ
ಹ್ಮಾಂಡ ಅಂಡದೊ------ಟ್ಟಿ ಹರಿ 'ಹೆನ್ನವಿಠ್ಠಲನಾ' ೫

೧೫೪

ನೇಮದಿಂದ ಹರಿಯಭಜಿಸಿ ಪ್ರೀತಿಯಿಂದಲಿ
ಕಾಮಿತಾರ್ಥ ಫಲಗಳೀವ ಕರುಣದಿಂದಲಿ ಪ

ಜಲದಿ ಬಂಧಿಸಿ ಲಲನೆ ತಂದ ಜಾನಕೀಪತಿ
ಜಲಧಿಶಯನನಾದ ನಮ್ಮ ವಿಷ್ಣು ಮೂರುತಿ
ನಳಿನನಾಭನಾದ ರಕ್ಷಕನಾದ ಶ್ರೀಪತಿ
ಒಲಿದು ಮನದಿ ಸ್ಮರಿಸುವರಿಗರಂದೆ ಸದ್ಗತಿ ೧

ಇಂದಿರೇಶ ವಿಬುಧ ವಂದ್ಯ ವಿಶ್ವಕುಟುಂಬಿ
ಮಂದರಾದ್ರಿ ಗಿರಿಯ ಪೊತ್ತ ಮಹಿಮನೇನೆಂಬೆ
ಕುಂದು ಇಲ್ಲದ ಹೃದಯದಲ್ಲಿ ಕೃಷ್ಣನ ನೇನೆಂಬೆ
ಒಂದೆ ಧೃಡದಿ ಇರುಲು ಕೈವಲ್ಯ ಕೈಕೊಂಬಿ ೨

ಅಖಿಲ ಲೋಗಳನೆ ಆಳುವ ಅಧಿಕ ಸಂಪನ್ನಾ
ಮುಕುತಿದಾಯಕ -----ಮೋಕ್ಷದಾತನಾ

ನಿಖರವಾಗಿ 'ಹೆನ್ನ ವಿಠ್ಠಲ' ನೆಂದು ತಿಳಿದಿನ್ನು
ಭಕುತಿಯಿಂದ ಹಾಡಿ ಪಾಡುವ ಭಕ್ತರಾಧೀನಾ ೩

೧೫೫

ಭಜಿಸೋ ಮೂಢ ಭಜಿಸದರಿಬೇಡಾ
ತ್ರಿಜಗವಂದಿತನಾದ ಶ್ರೀಹರಿ ಗಾಢಾ ಪ

ಇಂದಿರೆಯರಸಾನಂದದಿ ಮನಸಾ
ಛಂದದಿ ಧ್ಯಾನಾದಿಂದ ಉಲ್ಹಾಸಾ ೧

ಗೋಪಿಯಕಂದಾ ಗೋಕುಲಾನಂದಾ
ಭೂಪ ಗೋವಿಂದ ಯೆಂದೀಪರಿಯಿಂದಾ ೨

ಸುಂದರ ಮೂರುತಿ ಸುಗುಣಾ ಪ್ರಖ್ಯಾತಿ
ಮಂದರಗಿರಿ ಪೊತ್ತ ಪಾವನ ಕೀರುತಿ ೩

ಮಂಗಳದಾಯಕಾ ಮನ್ಮಥ ಜನಕಾ
ಗಂಗೆಯ ಪಡೆದಾ ಕರುಣಾನನೇ ಕಾ ೪

ನಿಗಮಗೋಚರನಾ ನೀರಜನಾಭನಾ
ಅಗಣಿತ ಮಹಿಮಾನಂತ ಅವತಾರನಾ ೫

ಭಕುತ ವತ್ಸಲನ ಮುಕುತಿದಾಯಕನಾ
ನಿಖರದಿ ಅನುದಿನ ನಿಜ ಮುಕ್ಕುಂದನಾ ೬

ಕಂದ ಪ್ರಹ್ಲಾದನಾ ಕಾಯ್ದ ದೇವನಾ
ಇಂದು ಬಿಡದೆ 'ಹೊನ್ನವಿಠ್ಠಲ' ಶ್ರೀ ಕೃಷ್ಣನಾ ೭

೧೫೬

ಭಾವಜ್ಞರ ಪಾದವನೇ ಪಿಡಿಯೋ
ಭಾವಜನಯ್ಯನ ಸೇವೆಯ ಪಡೆಯೋ ಪ

ಘನಗುರು ಹಿರಿಯರ ಕಾಲಿಗೆ ಎರಗೋ
ಘನ ಮಹಿಮನ ಪಾದಕೆ----ಗೋ ೧

ಪಂಡಿತ ಆರ್ಯರ ಪೂಜಿಸು ಇಲ್ಲೆ
ಪುಂಡರೀಕಾಕ್ಷನ ಭಜಿಸಿ ಪಾದವನು ಪಿಡಿಯೋ ೨

ಸುಜನರ ಸಂಗವನು ಸುಲಭದಿಕೂಡೊ
ನಿಜ 'ಹೆನ್ನವಿಠ್ಠಲನ್ನ' ನೀನಾಗ ಕೂಡೊ ೩

೧೫೭

ಮನ್ನಿಸದೆ ಇರಬೇಡ ಮಂದ ಮನುಜಾ
ಚಿನ್ಮಯ ಮೂರ್ತಿ ಶ್ರೀ ಹೆನ್ನೆಹೋಬಲವಾಸನಾ ಪ

ಮನಶುದ್ಧಿಯಾಗಿ ನಿರ್ಮಲಜ್ಞಾನದಲಿಯನ್ನು
ವನಜಸಂಭವ ಪಿತನ ವರ್ಣಿಸುತಲಿ
ದಿನಗಳನು ಕಳೆಯುತಲಿ ದೀನರಕ್ಷಕ ದೇವನ
ಅನುಮಾನಗಳ ತೊರೆದು ಆನಂದದಿಂದಲಿ ಇನ್ನು ೧

ಸಕಲಾಂತರ್ಯಾಮಿಯಾದ ಸಕಲ ದೀನರ ದೇವ
ಸಕಲ ಸಾಧು ಸಜ್ಜನರ ಸರ್ವದಲಿ
ನಿಖರವಾಗಿ ರಕ್ಷಿಸುವ ಲಕುಮಿಯರಸನ ಹೃದಯ
ಭಕುತಿಯಲಿ ಪಾಡುತಲಿ ಪರಮ ಪುರುಷನ ಇಂದು ೨

ಎಂದೆಂದು ಹರಿಪಾದ ಹೊಂದಿದ ಮಹಾಮಹಿಮ
ರಂ-------ತಿಳಿದು ನೀಯಿಂದು ಇನ್ನು

ಸಂದೇಹವನ್ನೆ ಬಿಟ್ಟು ತಂದೆ 'ಹೆನ್ನವಿಠ್ಠಲ'
ಚಂದದಿಂದಲಿ ಹೃದಯ ಮಂದಿರದಲಿನ್ನೂ ३

೧೫೮

ಮರೆಯದೆ ಶ್ರೀಹರಿಯಮನದಲಿ ಸ್ಮರಿಸೊ
ಗುರುಹಿರಿಯರ ಅನುಗ್ರಹವನು ಗಳಿಸೊ ಪ

ಚಂದದಿ ಹೃದಯದಿ ಇಂದಿರೆ ರಮಣನ
ಅಂದದಿ ಅನುದಿನ ಮಂದರ ಧರನಾ ೧

ಬಗೆ ಬಗೆಯಲಿ ಶ್ರೀ ಭಗವಂತನ ಪಾದ
ಯುಗವನು ನೆರೆನಂಬಿಯಿ-----ಎಂದೆಂದೂ ೨

ಪರಿಪರಿ ನವವಿಧ ಭಕ್ತಿಯು ಸಾಧಿಸಿ
ಪರಮಾತ್ಮ ಪರ ಬ್ರಹ್ಮ ಪರಮಾನಂದನ ೩

ಶರಧಿಶಯನನ ಶಾಂತ ನಿಧಾನನ
ಅರವಿಂದ ನಯನನ ಹರಿಗೋವಿಂದನಾ ೪

ದಿನಕರ ಕೋಟಿತೇಜ ವಿಲಾಸನ
ಮನುಜಾಧಿಪ ಮಾನವ ರಕ್ಷಕನಾ ೫

ಚಿತ್ತವು ಚಲಿಸದೆ ಚಿನ್ಮಯ ರೂಪನ
ನಿತ್ಯಾನಂದನ ನಿಗಮಗೋಚರನಾ ೬

ಭಾವಜನಯ್ಯನ -----
ಭಾವನಕೊಲಿದ ಜನ ಹೃದಯದಿ ಕುಣಿದಾಡುವ ನಾ ೭

ಜ್ಞಾನಾನಂದನ ಜ್ಞಾನಿಗಳರಸನ
ಧೇನು ಪಾಲಕ ಜಗದೀಶನ ಮುಕುಂದನ ೮

ಮುರಹರ ಮಾಧವ ಮುನಿ ಗೋವಂದ್ಯನ
ಶರಣರ ಪೊರೆವಾ ಬಿರುದಿರುವ ದೇವನಾ ೯

ಇನಕುಲ ಭೂಷಣನ ವಿಶ್ವಲೋಕೇಶನ
ದನುಜಾಂತಕ ಶ್ರೀ ದಾಮೋದರನಾ ೧೦

ಪಾಂಡವ ಪಕ್ಷಕನ ಪರಮಾಣು ರೂಪ
ಬ್ರಹ್ಮಾಂಡನಾಯಕ ಕೋದಂಡಧರನ ಇಂದೂ ೧೧

ವಾರಿಧಿ ಬಂಧನ ವೈದೇಹಿ ತಂದನ
ಮೀರಿದ ರಕ್ಕಸರ ಮದಿಸಿದವನಾ ೧೨

ಪನ್ನಗ ಶಯನ 'ಹೆನ್ನ ವಿಠ್ಠಲನ '
ಉನ್ನತ ಚರಿತನ ಇನ್ನು ಹರುಷದಲಿ ೧೩

೧೫೯

ಮಾಡು ನೀ ಹರಿಯ ಭಜನಿ ಪ

ಹರಿಯ ಭಜನಿ ಮಾಡು ಹಲವು ಯೋಚನೆಯ ಬಿಡು
ಶರಣರೊಳಗೆ ಕೂಡು ಸಿರಿಧರನ ನೋಡು ೧

ಹರಿಜನರನ್ನೇ ನೋಡಿ ಅವರ ಪಾದವು ಪಿಡಿ
ಶರೀರ ಸಾಧ್ಯನಿಕೆ ಮಾಡಿ ಶರಣ ತತ್ವವುಪಡಿ ೨

ಸಿಂಧುಶಯನ ಹರಿ ಎಂದು ಸ್ತುತಿಸೂತೇರಿ
ದಂದಗಳನೆ ಮರಿ ದೇವರೆಯೆಂದು ಇರಿ ೩

ಸುರಮುನಿ ವಂದ್ಯನಾ ಸುಗುಣ ವಿಲಾಸ ನಾ
ಸುಚಿರ ಚರಿತನ ಹರುಷದಿ ಅನುದಿನ ಭಜಿಸಿ ೪

ದೇಹ-----ವೆಂದೂ ದಿನಮಾನ ತಿಳಿದಂದೂ
ಮಹ ಹೊನ್ನ ವಿಠ್ಠಲ ಎಂದೂ ----- ೫

೧೬೦

---ಮಾಡೋ ಏ ಮೂಢಾ ಪ

ನಾಮ ಭಜನಿ ಮಾಡೋ ಪ್ರೇಮದಿ -----
ಸ್ವಾಮಿ ಜಗನ್ನಾಥಾ ರಾಮ ರಾಮಯೆಂದು ೧

ಛಂದದಿ ಮನಸಲಿ ಶ್ರೀ ಕೃಷ್ಣನಾನಂದದಿ
ನೀನೀಗೊ--------------- ೨

ಹರಿಯ ಬಿಡದೆ ಚಿತ್ತ ಹರುಷದಿಸ್ಮರಣೀಯಾ
ಚರಣ ಕಮಲದಲಿ ನಿರುತದಿ ನೀಇನ್ನೂ ಪರಿಸುತ
ಭಕುತಿಯಿಂದ ನೀ ಸದಾ ೩

ಮಂಗಳಮೂರುತಿ ತ್ರಿಜಗತ್ಕರ್ತ ರಂಗನಾಕೀರುತಿ
ಹಿಂಗದೆ ನಿಜ ಅಂತರಂಗ ಕೃಪಾಂಗನಾ ಗಂಗೆಯ
ಜನಕನಾದ ಘನ 'ಹೊನ್ನ ವಿಠ್ಠಲನಾ' ೪

೧೬೧

ಮುಕ್ತಿ ಹೇಗೆ ಬಂದೀತೊ ಪಾಮರನೆ ಕೇಳೊ ವಿ-
ರಕ್ತಿಯಾಗದೆ ಶಕ್ತಿ ಕಾಣಾದೆ ಪ

ದುರ್ಜನ ದುಷ್ಟರಾದವರಾ ದೂರಮಾಡಿ ಮನದಿ ಸಾಧು
ಸಜ್ಜನರ ಸಂಗವು ಮಾಡಿ ಸರ್ವೋತ್ತಮನಾ
ಕರುಣಾವು ಪಡುವಾ ೧

ವೇದಶಾಸ್ತ್ರ ಸಂಪನ್ನಾರು ಆದ ಪಂಡಿತಾರು ಕೂಡಿ
ಭೇದಾಭೇದಾರ್ಥಗಳು ಎಲ್ಲಾ ವಿದಿತವಾಗಿ ತಿಳುವ ಜ್ಞಾನಾ ೨

ಸಕಲಾಯೋಗಾಧ್ಯಾನಾರಾದ ಸತ್ಪುರಷಾರ ಪಾದ ಹಿಡದೂ
ನಿಖರನಾಗಿ ನಿಶ್ಚಲನಾಗಿ ನಿಂತು ಸೇವೆ ಮಾಡುವಂಥಾ ೩

ನಿತ್ಯ ಕರ್ಮಾ ನೇಮ ವ್ರತಾ ಸತ್ಯವಾಗಿ ನಡಸುವಂಥಾ
ಉತ್ತುಮಾರ ಮನೆಗಳಲ್ಲಿ ಭೃತ್ಯನಾಗಿ ನಡೆಸೆಂಬುವಾ ೪

ಸರ್ವಾಸಂಗ ತೊರದು ಹೃದಯ
ಮರ್ಮಮಂತ್ರಾಚಮನಾಗಳಲ್ಲಿ
ಸರ್ವಕಾಲ ಹರಿಯ ಭಜಿಸಿ ಸತ್ಪುರಷಾ ತಾನಾಗುವಂಥಾ ೫

ಜ್ಞಾನಭಕ್ತಿ ವಾರಿಧಿಯುಳ್ಳವನಾಗಿ ಮೆರೆದಾಡುತಲಿ
ನಾನಾ ಪರಿಯಲಿ
ಸ್ಮರಣೆಯ ಮಾಡಿ ನಾರಾಯಣನಾ ಕೃ------------- ೬

ಪನ್ನಗಶಯನನಾದ 'ಹೊನ್ನಯ್ಯ ವಿಠ್ಠಲನ್ನ '
ಚರಣವನ್ನೆ ಪೂಜಿಸಿ
ಧನ್ಯನಾ----ಸನ್ಮಾರ್ಗವು ಕಾಣುವಂಥಾ ೭

೧೬೨

ಮುದದಿ ಹರಿಯ ಧ್ಯಾನ ಮಾಡಿ ಸಾಧಿಸೊ
ಸದಯ ಹೃದಯರಾದ ಸಂಗದೊಳಗೆ
ನೀನು ಬೆರೆದು ಪ

--ಕರ್ತನಾದ ದೇವ ಸದ್ವಿಲಾಸನಾ
ನಿಖರವಾಗಿ ಹೃದಯದಲ್ಲಿ ನಿಲ್ಲಿಸುವೆನಾ
ಪ್ರಕಟಮಾಡಿ ಸ್ತುತಿಸುತಿರುವ ಬಿಡದೆ ಅನುದಿನ
ಭಕುತಿಯಿಂದ ಕ---------ಭಕ್ತ ಜನರಕೂಡಿ ೧

ಯೋಗಿಜನರ ಹೃದಯದೊಳು ನಿಖರವಾಗಿಇರುವ
ಭೋಗಿಶಯನನಾಗಿ ಇರುವ ಪುಣ್ಯ ಪುರುಷನಾ
ಸಾಗರಾನಸುತಿಯರಾಳ್ವ ಸಾರ್ವಭೌಮನ
ಬೇಗ ಭಜಿಸಿ ಗತಿಯು ಕಾಣ್ವ ಭಾಗವತರ ಸಂಗದಲ್ಲಿ ೨

ದುಷ್ಟ ಜನರ ಸಂಗವೆಂಬುದು ದೂರಮಾಡೋ ನೀ
ಶಿಷ್ಟ ಜನರ ಪಾದ-----------ಯಾಗೋ ನೀ
ಇಷ್ಟದಿಂದ ವಿಷ್ಣು ಚಿಂತನೆ ಹಿತದಿ ಮನದಿ ನೀ
ನಿಷ್ಠೆಯುಳ್ಳವನು ಆಗಿ ಕೃಷ್ಣ ಹೊನ್ನ ವಿಠ್ಠಲರಾಯನಾ ೩

೧೬೩

ಯಾರಂದರೇನು ಫಲವದೆ ನಮ್ಮ ದೃಷ್ಟ
ಈ ರೀತಿ ಕಾಡಲು ಬರಿದೆ ಪ

ಯಕ್ಷ ಕಿನ್ನರಾದಿವಂದಿತ ಪರಮಾತ್ಮ ಜಲ-
ಜಾಕ್ಷ ಕೃಷ್ಣ ಮಾಧವಾಚ್ಯುತ
ಪಕ್ಷಿವಾಹನ ಪಾಲಿಸು ಕರಿವರದ ಬೇಗನೆ ನೀನು
ಪೇಕ್ಷಿಸದೆ ರಕ್ಷಿಸೆನ್ನ ೧

ಇನ ಶಶಿ ಕುಜರಾಹು ಗುರುಬಲ ಇದರ ಮೇಲೆ
ಶನಿ ಸೌಮ್ಯ ಕೇತು ಶುಕ್ರ ಗ್ರಹಗಳ
ಘನದಿ ಸುಫಲ ಲೇಶಕಾಣದೆ ಬಳಲುವ ವೇಳೆ
ಅನಿಮಿಷರೊಡೆಯನ ಮೊರೆ ಹೋಗದೆ ೨

ಪರಮ ಪುರುಷ ಪತಿತ ಪಾವನ
ಬಿರುದುಳ್ಳ ಹೆನ್ನೆಪುರನಿಲಯ ನರಹರಿ ಚರಣ
ಸ್ಮರಣೆ ಹರುಷದಿಂದ ನಿರುತ ಮನದೊಳಾವಾಗ
ಪರರ ನಿಂದೆಗೊಳಗಾಗಿ ವೃಥಾ ೩

೧೬೪

ರಂಗನಾಯಕ––––ತ್ತುಂಗನಾದ ಧೊರಿಯೆ ಪ

ಮೂರುತಿ ಮಹಾಮಹಿಮನಾದ
ಅಂಗಜ ಜನಕ ಕೃಪಾಂಗ ದೇವೋತ್ತುಂಗ ಅ.ಪ

ಸಿಂಧು ಶಯನ ದೇವ
ಭಕುತರ ಬಂಧು ಮಹಾನುಭಾವ
ಇಂದಿರಾ ಹೃದಯ ಧೀರಾ
ಈ ಜನರಿಗಾನಂದನಾಗಿ ತೋರಾ
ಮಂದರಧರ ಮುಕುಂದ ಮಾಧವ
ಸುಂದರಾಂಗ ಸುಜನ ಪೋಷಕ
ಕಂದನ ಸಲಹಿದ ಕರುಣಸಾಗರ
ಇಂದು ನಿಮ್ಮ ಚರಣ ದ್ವಂದ್ವಗಳ ತೋರು ೧

ವೆಂಕಟಗಿರಿವಾಸ–––
ಕಿಂಕರ ನಾ ಅಣುದಾಸ
ಶಂಕೆಯಿಲ್ಲದ ದೋಷಾ
ಮಾಡಿದಂಥ––––
ಸಂಕಟಗಳೆಂಬೀ––––
ಕರಗಳೆನ್ನ
ಇರಲೂ ಕೊಂಕುಗಳ ಪರಿಹರಿಸ
––––ದರ ಪರಮಪಾವನಾ ೨

ವೇಣುಗಾನ ವಿನೋದಾ
ನೀಹಿತ--ಮೂಲನಾದ
ಶ್ರೀನಿವಾಸ ಗೋವಿಂದಾ
ಶ್ರೀತಜನ ರಕ್ಷಣಾನಂದ ನಿಲಯನಾದ
ಭಾನುಕೋಟಿ ಪ್ರಕಾಶದೇವ----
ಸೂಸುತಿರುವ ದಾನವಾಂತಕ
'ಹೆನ್ನೆ ವಿಠ್ಠಲ' ಧೇನುರಕ್ಷಕ ದೀನಪೋಷಕ ೩

೧೬೫

ರಕ್ಷಿಸುವ ತಾಯಿತಂದೆ ರಘುಕುಲೋತ್ತಮ ರಾಮಚಂದ್ರ
ಅಕ್ಷಯ ವಿತ್ತು ಭಕ್ತಜನರುಪೇಕ್ಷೆ ಮಾಡದೆ ಪ

ಕಂದನೆಂದು ಖಳರ ಅನುಜರಂದದಿ ಕಾಯ್ದದೇವ
ಸಿಂಧುಶಯನ ಶ್ರೀನಿವಾಸ ಶ್ರೀಧರಾಚ್ಯುತಾ
ಇಂದು ಮುಖಿಯ ಸೀರಿ ಸೆರಗು ಹಿಡಿದು
ಎಳಿವೊ ವ್ಯಾಳ್ಯದಲ್ಲಿ
ಬಂದು ಮಾನ ರಕ್ಷಿಸಿದಂಥಾ ಪರಮಪುರುಷ ಭಕ್ತವತ್ಸಲ ೧

ಪೊರೆಯೊಯೆಂದು ಮೊರೆಯ ಹೊಕ್ಕ ನರನ
ಮತ್ತ ಸಲಹಬೇಕಂತ
ಬಿರುದುವುಳ್ಳ ಧೀರ ಭಾನುಕೋಟಿತೇಜನಾ
ಕರಿಯು ಕರಿಯೋ ಕಾಲದಲ್ಲಿ ಗರುಡನೇರಿ ಬಂದು
ಪೊರೆದ ಕರುಣಾಸಾಗರ------ನಾಮನಯ್ಯನಾದ ದೀನಾ ೨

ಅಂದು ಇಂದು ತನ್ನ ಬಿಡದೆ ಹೊಂದಿ
ಇರುವರೆಲ್ಲಾ ಅಂದು --
ಕರುಣಾವಿಟ್ಟು ಅತಿಶಯಾದಲಿ ಕುಂದು ಇಲ್ಲದೆ ಪಾಲಿಸು

ಸ್ವಚ್ಛಂದದಿಂದ ಚ್ಯುತಿಯಿಲ್ಲದೆ ಇಂದಿರೇಶ 'ಹೊನ್ನವಿಠ್ಠಲ '
ವಿಶ್ವಕರ್ತಾ ಬುಧವಂದ್ಯಾ ೩

೧೬೬

ರಾಮ ರಾಮ ರಾಮ ರಾಮಯೆಂದು
ರಾತ್ರಿ ಹಗಲು---ಪ್ರೇಮದಿಂದ
ಇಲ್ಲಿ ಬಂದು ಪ್ರತಿಗತಿ ಪಡಿಸಿಯಿಂದೂ ಪ

ಕಾಮಿತ ಫಲದಾಯಕನೆಂದೂ ಕಮಲಗರ್ಭನ ಪಿತನೀತೆಂದೂ
ಸ್ವಾಮಿ ರಕ್ಷಕನೆಂದೂ ನೇಮ ನಿತ್ಯ ಕರ್ಮದಿಂದ ೧

ಒಂದು ನಿಮಿಷ ಮರೆಯದೆಂದು ವಾಸುದೇವಾನಂದ ನೆಂದೂ
ಬಂಧು ಬಳಗ ಭಾಗ್ಯವೆಂದೂ ಛಂದ ನಿಮ್ಮ
ನಾಮ ನರೆ ತಂದೂ ೨

ಸುಂದರಾಂಗ ಸುಜನಾ ಪೋಷ ಸಿಂಧು
ಶಯನ ಶ್ರೀನಿವಾಸ
ಕುಂದು ಇಲ್ಲದೆ ಪೊರೆವಾ ದಾಸರಿಂದು
'ಹೊನ್ನವಿಠ್ಠಲೇಶಾ' ೩

೧೬೭

ರಾಮ ರಾಮ ರಾಮ ಶ್ರೀರಾಮನೆನ್ನಿರೊ
ಪ್ರೇಮದಿಂದ ಶ್ರೀ ಜಾನಕಿ ಪ್ರೇಮನನೆನೆಯಿರೊ ಪ

ಅಂದದಿಂದ ಈ ದಶರಥನಂದನೆಂದು ----
ಚಂದದಿಂದ ಚಲನೆಯಿಲ್ಲದೆ ಚಿತ್ತಸ್ವಸ್ಥದಿ
ಒಂದು ಘಳಿಗೆ ಕಾಲ ಕಳೆಯ
ಹೊಂದಿ ದೇವರ ಚರಣ ಕಮಲಾ
ನಂದ ಅರ್ಚಿಸುವ ಮಂದಿರದಿ ಭಜಿಸಿರೊ ೧

ಕಾಮನಯ್ಯನ ಕಡಲೊಳಾಳ್ದನ
ಕೂರ್ಮರೂಪ ವರಾಹನಾದನ ಸ್ವಾಮಿ ನರಹರಿ
ವಾಮನ ಪರಶುರಾಮನಾದನಾ
ರಾಮಕೃಷ್ಣ ಬೌದ್ಧಕಲ್ಕಿ ನಾಮವುಳ್ಳ ನಾರಾಯಣನ
ನೇಮದಿಂದ ನಿತ್ಯದಲ್ಲಿ ನಾಮ ಸ್ಮರಿಸಿರೊ ೨

ಪಿತೃವಾಕ್ಯ ಪಾಲಿಸಿದವನು
ಸತತ ಭಕ್ತರ ಸಲಹುತಿಹನು
ಕ್ಷಿತಿಗೆ ಒಡೆಯನಾದ ದೇವನು 'ಶ್ರೀ ಹೊನ್ನ ವಿಠ್ಠಲಾ'
ನತಿಶಯದಿಂದಲಿ ಹೃದಯನಂಬಿ ಇರುವ ನರರಿಗೆ
--------ಸದ್ಗತಿಯ ತೋರುವನಧಿಕ ಸಂಪನ್ನ ೩

೧೬೮

ವ್ಯರ್ಥ ಹೋರಾಟವಲ್ಲದೆ ಇದು ನಿಜವಲ್ಲಾ
ಕರ್ತೃ ಶ್ರೀಹರಿ ಮಾಡಿದರ್ಥವೆ ಸರಿ ಅಲ್ಲದೆ ಪ

ಪುರಾಕೃತ ಸಂಚಿತಾರ್ಥ ಪುಣ್ಯ ಪಾಪಗಳಿಂದ
ಪರಿ ಪರಿ ಅನುಭವ ಬಡುತಾ ಇನ್ನೂ
ಇರುವೆಯಲ್ಲದೆ ಫಣಿಯಲಿ ವಿರಂಚಿ ಬರೆದ
ಬರಹ ಪರಿಮತಿ ತಿಳಿಯದೆ ಭಂಗ ಬಡುತಲಿಷ್ಟು ೧

ಎಂದೆಂದೂ ನಿನ್ನ ಹಿಂದೆ ಒಂದೂ ಬರುವುದಿಲ್ಲ
ಮುಂದುಗಾಣದೆ ಇನ್ನು ಮೋಹಕೆ ಸಿಲುಕಿ
ನಂದೆಂದು ಪರಿಯಿಂದ ಘಳಿಸಿದ ದ್ರವ್ಯದ
ಬಿಂದಿಗೆ ದಾರೋ ನೀದಾರೋ ಪಾಮರ ಮೂಢಾ ೨

ನನ್ನ ಹೆಂಡತಿ ಮಕ್ಕಳು ನನ್ನ ಮನೆ ಬಾಗಿಲು
ನನ್ನ----ಯು ವೃತ್ತಿ ನನ್ನದೆಂದೂ

ನಿನ್ನ ಗರ್ವದಿ ನೀನು ನಿತ್ಯ ಒಂದಾಡುವೆ
ಇನ್ನು ಮನೆ ಮಡದಿ ಹಿತ ಸುತರಾರೋ
ನೀದಾರೋ ಮೂಢಾ ೩

ತಂದೆ ತಾಯಿಯ ಗರ್ಭದಿಂದ ಪುಟ್ಟಿರುವಂದೇ
ತಂದೆಲ್ಲೊ ತಾಯೆಲ್ಲೊ ತಾನೆಲ್ಲೊ ಮರುಳೆ
ಹಿಂದೆ ಆದವರ ಚರ್ಯವ ವಿವರಿಸಿ ನೋಡಿನೋಡಿ
ಕುಂದು ಇಲ್ಲದೆ ಮುಕ್ಕುಂದನ ಸ್ಮರಿಸು ಗಾಢಾ ೪

ಮಾಯಾ ಪ್ರಪಂಚದೋಳ್ ಮಗ್ನನಾಗಿ ಇನ್ನು
ಕಾಯಾ ಅಸ್ಥಿರವೆಂದು ಕಾಣೋ-----
ಶ್ರೀಯರಸ 'ಹೆನ್ನ ವಿಠ್ಠಲ'ರಾಯನ
ಕಾಯ ಮನಸಾ ವಾಚಾ ಕರ್ಮ ಧ್ಯಾನವು ಬಿಟ್ಟು ೫

೧೬೯

ವಿಷ್ಣು ದ್ರೋಹಿಗಳ ಸಂಗವು ನೀ
ಇನ್ನೆಂದಿಗು ಮಾಡದಿರು ಶ್ರೀ
ಕೃಷ್ಣ ಸರ್ವೋತ್ತಮನೆಂಬುವರಾ ಸಂಗನುದಿನ ಬಿಡದಿರು ಪ

ಸಾಧು ಸಜ್ಜನ ನಂತರ ಸಂಗವು ಸೌಖ್ಯದಿ
ಕೂಡಿರು ಇನ್ನು ವೇದ ಬಾಹ್ಯರ
ದುರ್ಭೋಧಿಗಳ ಸಂಗೆಂದಿಗು ಹೋಗದಿರು
ಶ್ರೀಧರನಂಘ್ರಿಯ ಚಿತ್ತದಿ ಬಿಡದಿರೊ ಶರಣರ ಹೊಂದಿರು
ಮಾಧವನ ದ್ರೋಹ ಮಾಡುವ ಮನುಜರ
ಮಂಡಲಿಸೇರದಿರು ೧

ಅನುದಿನ ಶ್ರೀಹರಿ ಭಜನೆಯ ಮಾಡುತ ಆನಂದದಲಿರು
ದುರ್ಮನುಜರಾದ ಈ ದುಷ್ಟದುರಾತ್ಮರ ಮಾತನೆ ಕೇಳದಿರು
ಅನಿಮಿಷ ಬಿಡದಾ ಸಂತರ ಪಾದವು ಅರ್ಚಿಸುತಲಿ ಇರು
ದುರ್ಗುಣವುಳ್ಳ ಪರಮ ಪತಿತ ಜನರ ಪಥವನೆ ಬಿಟ್ಟಿರು ೨

ಸಕಲ ವೇದ ಶಾಸ್ತ್ರ ಮಂತ್ರ ಮರ್ಮಗಳ ಸರ್ವದಾ ತಿಳಿದಿರು
ಇನ್ನು ವಿಕಟ ಕುಭಕ್ತರ ಶಾಸ್ತ್ರಗಳೆಂಬುವನೆಂದಿಗು ನೋಡದಿರು
ರುಕ್ಮಿಣಿವರ ಶ್ರೀ ಹೆನ್ನೆವಿಠ್ಠಲನ ಭಕುತಿಯ ಬಿಡದಿರು
ಕೂ------ಕತರಾದ ಕುಚೇಷ್ಟರ ಕೂಡಿ ಭಂಗವ ಬಡದಿರು ೩

೧೭೦

ವಾಸುದೇವ ವಾರಿಜಾಕ್ಷನಾ ಸ್ತುತಿಸು ಮನದಿ ಪ

ಸಾಸಿರನಾಮದೊಡೆಯ ಸಕಲಲೋಕಕರ್ತನಾದ
ಈಶ ಶ್ರೀನಿವಾಸ ಸುಜನ ಪೋಷಕ ಭಕ್ತವಿಲಾಸ ಅ.ಪ

ಪಂಕಜೋದರ ಪರಮ ಪಾವನ
ಸರ್ವಜಗವ ಬಿಂಕದಿಂದ ಪೊರೆವ ದೇವನಾ
ಶಂಕೆಯಿಲ್ಲದ ದನುಜ ಮರ್ದನನಾದ ತನ್ನ
ಕಿಂಕರರನು ಬಿಡದೆ ಕಾಯುವಾ
ವೆಂಕಟಾದ್ರಿ----ದ ವೇಣುನಾದದಲಿ ಬುಧವಂದ್ಯ
ಶಂಕರಾದಿ ದೇವ ದೇವ ಶರಧಿಶಯನ ಶಾಶ್ವತನಾದ ೧

-----ಶ್ವ ರೂಪನಾ ಎಂದು ಎಂದಾನಂದ ದಿಂದ
ನಂಬಿ ಅನುದಿನ ಚಂದದಿಂದ ---ಸನಾ ।----ಭವ
ಬಂಧಕವನೆ ಪರಿಹರಿಸುವನಾ ಕಂದ ಕೂಗಲು
ಕಂಭದಿಂದಾ ಬಂದ ನಾರಸಿಂಹನ
ಮಂದರಗಿರಿಯ ಪೊತ್ತ ಮಹಾಮಹಿಮನಾದ ಮೂರ್ತಿ ೨

----------ಮಹಾನುಭಾವ
ಕಂಡ ಮುನಿಗಳಂತರ್ಭಾವನಾ
ಕುಂಡಲೀಶ ಭೂಷಣಪ್ರೀಯನಾಕರ ಘನಾ
ಕೋದಂಡಧರ ಶ್ರೀರಾಮನಾದನಾ
ಪುಂಡಲೀಕ ವರದಹರಿ------ತನಾದ ವೇದವೇದ್ಯ
ಅಂಡಜನ--------ಹರಿ 'ಹೊನ್ನಯ್ಯ ವಿಠ್ಠಲ' ನಾದ ೩

೧೭೧

ಶ್ರೀರಾಮ ರಾಮನ ಭಜಿಸೊ
ಮನದಲಿ ಶ್ರೀಕೃಷ್ಣನ ಸ್ಮರಿಸೊ
ಪರಾಭವಾರೂರ್‍ರ್ವ ಪವಾಸಗಳಿಂದ
ಪತಿತಪಾವನ ಶ್ರೀಗೋವಿಂದ ಪ

ಧರಾಧರ ಧರ ಜಗದೋದ್ಧಾರ
ತಾರಕ ರಘುವೀರಾ
ಶರಾದಿಬಂಧಿಸಿ ಸೈನ್ಯವು ನಡೆಸಿ
ತ್ವರಾ ಲಂಬಿಣಿ ಬೇಧಿಸಿ
ಸರಾಗ ದಿಂ--------ಪುರಾದಿ
--------ಸರಾಗೆಲ್ಲರನೊಯ್ದಡಿಕ್ಕಿ
ಪುರಾಧಿಪತಿ ಮಹಾ----ರಾವಣನ
ಶಿರಾಗಳ್ಹತ್ತನೆ ಛಂಡಿಸಿ ಹರೆದನಾ ೧

ಶರಾಣೆಂದು ಬಂದರು
ನಗಾನಂದ ಕರುಣಿಸು ಚಂದಾ
ಸ್ಥಿರಾ ಲಂಕೆ ಪಟ್ಟ ಹರುಷದಲಿಕೊಟ್ಟ
ಯಾರು ಎಂದ್ಹೇಳಿದಿರಾ ವೀರಾಧಿವೀರ
ಶೌರ್ಯ ಶೂರ ಪ್ರಚಂಡರು ಧೀರ
ಹನುಮದೇವರು ಆರಾಮದಲಿತ್ತ
ಆರಾಮಿಯಾರಥನೇರಿ ಶಿಕಾರ
ತಂದೆ ಕಾಂತೆ ಜಗನ್ನಾಥ ೨

ರಾಮಾಯೆಂದು ಭಯ ಭಕ್ತಿಯಿಂದಾ
ಸ್ಥಿರಚಿತ್ತದಿಂದಾ ಸ್ಮರಣೆ ಮಾಡುತ
ಶ್ರೀಹರಿಯು----------ತ

ನಿರಾಳ ಮನ ಕವಿತ
ಇರುತಲಿಪ್ಪವರಿಗೆ ಸಂಪತ್ಕರವು
ಧರೆಯೊಳ್ ಹೆನ್ನತೀರವಾಸನ
ಧೊರೆ 'ಹೆನ್ನ ವಿಠ್ಠಲ' ರಾಯನ ೩

೧೭೨

ಶ್ರೀಹರಿ ಚಿಂತನೆ ಚಿತ್ತದೊಳಗೆ ಬಿಡದೆ
ಚನ್ನಾಗಿ ಸ್ತುತಿಸುವ ರಾ
ಆಹರಿ ಕರುಣಿಸಿ ಅನುಗ್ರಹ ಮಾಡುವ
ಆಶ್ರಿತ ಜನರಾಧಾರಾ ಪ

ಭಾಗವತರ ಪ್ರಿಯ ಭಾವಜ ಜನಕ
ಪ್ರಭಾಕರ ಕೋರುತ ಜನಾ
ನಾಗಶಯನ ಶ್ರೀ ನಾರಾಯಣ ಕೃಷ್ಣ
ನಾರದವರದನ ಯೋಗಿಗಳ
ಹೃದಯ ಯೋಗವಿಲಾಸನ ಯಾದವ ಕುಲೋದ್ಭವನ
ಭಾಗೀರಥಿಯ ಪಡೆದ ಧೀರನಾ ಪಾಂಡವ ಪಕ್ಷಕನಾ ೧

ವೇದಗೋಚರನೆ ವೇಣುನಾದ ಶ್ರೀ ವೇಂಕಟ ಶ್ರೀಶನಾ
ಸಾಧು ಸಜ್ಜನರ ಸರ್ವದಿ ಸಲಹುವ ಸಕಲಲೋಕ ಕರ್ತನಾ
ಆದಿ ಮೂರುತಿ ಅನೇಕ ಚರಿತನ ಅನಂತ ಅವತಾರನಾ
ಮೋದದಿ ಮನದಲಿ ಮರೆಯದೆ ಸ್ಮರಿಸುವ
ಮನುಜರ ಪೋಷಕನಾ ೨

ಗಾನಲೋಲ ಶ್ರೀಕರುಣಕೃಪಕ್ಷಾನ ಕಾಮಿತ ಫಲವೀವನಾ
ಜ್ಞಾನಿಗಳರಸ ಶ್ರೀ ಘನ 'ಹೆನ್ನ ವಿಠ್ಠಲನ'
ಕಮಲಸಂಭವ ವಪಿತನ
ಮಾನಾಭಿಮಾನ ಮಹಾನುಭಾವ----------------

ಧ್ಯಾನದೊಳಗೆ ಅನುದಿನದಿರುವರ ಕಾಮಧೇನು
ಆದ ಅವನಾ ೩

೧೭೩

ಸ್ವಾಮಿ ಭಜನೆ ಮಾಡೊ ಮನುಜ ಪ್ರೇಮದಿಂದಲಿ
ಕಾಮಿನಿಯರ ಮೋಹವತೊರೆದು ಕಮಲನಾಭನ
ಪಾದ ಹಿಡಿದು ಪ

ಬಂಧು ಬಳಗ ಭಾಗ್ಯವೆಂಬ ಬಯಲು ವಸ್ತುವೊ
ಹಿಂದು ಮುಂದೇನು ಬರುವರು ಯಾರು ಇಲ್ಲವೊ
ಎಂದು ತಿಳಿದು ಹರಿಯ ಮನದಿ ಮರೆಯಬೇಡವೊ
ಇಂದಿರೇಶ ಸಕಲಕರ್ತ ವೆಂಕಟಾದ್ರಿ ನಿಲಯನಾದ ೧

ನಿತ್ಯನೇಮ ನಿಷ್ಠೆಯಿಂದ ನಿಜವು ತಿಳಿದು ನಿ
ಸತ್ಯವಂತರ ಸಂಗ ಬಿಡದೆ ಸರ್ವಕಾಲದಿ
ಭೃತ್ಯರಿಗೆ ಭೃತ್ಯನಾಗಿ ಪೂರ್ಣಭಾವದಿ
ಕೃತ್ಯಹರಿಯ ನಾಮಸ್ಮರಣೆ ಘಳಿಗೆ
ಮರಿಯದ್ಹೋಗಿ ಬಿಡದೆ ೨

ಗಾನಲೋಲ ಕರುಣಾಸಾಗರ ಘನವಿಲಾಸನ
ಭಾನುಕೋಟಿ ತೇಜನಾದ ಪರಮ ಪುರುಷನಾ
ಶ್ರೀನಿವಾಸ 'ಹೊನ್ನವಿಠ್ಠಲ' ಶರಧಿ ಶಯನನಾ
ಧ್ಯಾನದಲಿ ಚಿತ್ತವಿಟ್ಟು ಧೇನು ಪಾಲಕ ದಿವಿಜವಂದ್ಯನ ೩

೧೭೪

ಸಿದ್ಧವು ಮನದಲ್ಲಿ ಶ್ರೀಹರಿಯ ಅರ್ಚಿಸಿದ ಬುದ್ಧಿವಂತರಿಗೆ
ಮೋಕ್ಷ ಪುಣ್ಯ ಫಲಾ
ಮಧ್ವಾಂತರ್ಯಾಮಿ ಮದನ ಜನಕನಾದ ಮಾಧವಾ ಕೃಷ್ಣಾ
ಗೋವಿಂದನ ಕರುಣವು ಪ

ಲೋಕದೊಳಗೆ ಅನೇಕಾ ಗ್ರಂಥಗಳಲ್ಲಿ
ಆಕಾರಾಮೊದಲಾ ದಕ್ಷರದಲಿ
ನೇಕಾ ಪರಿಯಲಿ ಕರೆದು ಸುವರ್ತಡದನಿಂದಾದಾ ಆದಿಮುನಿ
ಗಣಸಹಿತಾ ಶ್ರೀ ಕರದಿಂದಾಲಾಶ್ರಿತ ಜನ ಪೋಷಕನ ನೀ
ಕಾಮನಾದಿ ಪೂಜಿಸಿ ನಿಜಭಕುತಿ ಆಕಾಲದಲ್ಲಿ ಮಾಡಿದವರಿಗೆ
ಎಲ್ಲಾ ಮುಕುತಿ ಲೋಕನಾಯಕನನುಗ್ರಹದಿಂದಲೇ ೧

ವ್ಯಾಸಾಂಬರೀಷ ಪರಾಶರಾವಂದಿತ ಭೂಸುತೇ
ನಾಯಕ ಪೂಜಿತನಾ
ಈಶ ಜಗತ್ಕರ್ತ ಇಹಪರದಾಯಕ
ಸಾಸಿರನಾಮದ ಸರ್ವೇಶನ
ನೀ ನೋಡಿ ಮನದಲ್ಲಿ ಲಕ್ಷ್ಮೀಯನೆ ಇಟ್ಟಾ
ದಾಸೋತ್ತುಮರಾದ
ವರಿಗೆಲ್ಲಾ ವಾಸುದೇವಾನು ತನ್ನವರು ಎಂದು ಪಾಲಿಸಿ
ಈಸು ಜನರಿಗಿತ್ತಾ ಇಹಪರವು ೨

ಅಂದು ಚಂದ್ರಗೆ ಬಂದ ಶಾಪವು ಕಳೆದಾ ಅಜಮಿಳನಂತ್ಯ
ಕಾಲಕೆ ಕಾಯ್ದ ಕಂದಾ ಕೂಗಲು ನೇರ ಕಂಭದೊಳಗೆ ಬಂದಾ
ಮುಂದಾ ದನುಜನ ಸೀಳಿ ಮಗನಕಾಯ್ದ ಸಿಂಧುಶಯನ
ತನ್ನ ಹೊಂದಿಧವರನೆಲ್ಲಾ ಬಂಧು ಬಳಗ ಆಗಿಪೊರೆವಂಥಾ
ಇಂದಿರೆಯರಸ ಶ್ರೀ 'ಹೆನ್ನೆವಿಠ್ಠಲನ' ಸಂದೇಹವಿಲ್ಲದೆ
ಸ್ಮರಿಸುವ ಶರಣರಿಗೆ ೩

೧೭೫

ಸುಮ್ಮನೆ ಹರಿಯ ದೂಷಿಸದಿರು ಯಮ–
ಧರ್ಮನಾಳ್ಗಳು ನಿನ್ನ ಎಳದೊಯ್ವರೊ ಪ

ಇಷ್ಟೂನು ವಿಷ್ಣು ಮಾಯವು ಎಂದು
ಈ ಸೃಷ್ಟಿ ಕರ್ತನು ಶ್ರೀಹರಿ ಎಂದು
ಸ್ಪಷ್ಟದಿ ಮನದಲ್ಲಿ ತಿಳಿಯದೆ
ಇಂಥ ದುರುಳ ಮಾತನಾಡಬಹುದೆ ೧

ಲೋಕನಾಯಕ ಲಕ್ಷ್ಮೀಲೋಲನಾ
ಜಗದೇಕ ವಿನುತರಾಮ ದೇವರನಾ
ಶ್ರೀ ಕರುಣಾಂಬುದಿ ಶಾಂತನಾ
ಇನ್ನು ನೀ ಕಾಣದೆ ಈ ಪರಿನಿಂದೆಯೆನೆ ೨

ಹರಿಶರಣರ ಕೊಂಡಾಡುತಿರು
ಘೋರ ನರಕದೊಳಗೆ ಬಿದ್ದು ನರಳದಿರು
ಪರಮಭಕ್ತರ ಬಾಯಿಲೆ ಬೊಗಳದಿರು
ಅತಿ ಪಾಪಿಯಾಗಿರುವರ ಸೇರಿ ಹೋಗದಿರು ೩

ಶೃತಿ ಶಾಸ್ತ್ರಗಳು ಸುಜ್ಞನ--------
ಇಂಥ ಕೃತಕ ಶಾಸ್ತ್ರಗಳ ನೋಡಿ ಕೂಗಬೇಡಾ
ಮತಿಗೆಟ್ಟು ಪರನಿಂದೆ ಮಾಡಬೇಡಾ
ಸದ್ಗತಿ ಮಾರ್ಗಕೆ ಹೊರಗಾಗ ಬೇಡಾ ೪

ಹರಬ್ರಹ್ಮ ಇಂದ್ರಾದಿಗಳೆಲ್ಲ
ಶ್ರೀಹರಿಯ ಸೇವಕರೆಂಬುದು ಬಲ್ಲ
ವರಹೆನ್ನ ವಿಠ್ಠಲನ ನೀನೆ ಬಲ್ಲ
ಅವರ ಚರಣಕ್ಕೆ ಎರಗುವದು ಅಲ್ಲಾ ೫

೧೭೬

ಹರಿಭಜನೆ ಮಾಡುವಗೆ ಅನಂತಫಲವೂ
ಹರಿ ಭಜನೆ ಇಲ್ಲದವಗೆ ಅತಿಘೋರ ತಮವೂ ಪ

ಪರಮಾತ್ಮನ ಧ್ಯಾನ ಭಾರದಲಿ ಇರುವಗೆ
ಭವರೋಗ ಸಂಚಿತವು
ಪರಿಹಾರವು ಪರಮಮಂಗಳಮೂರ್ತಿ
ಸ್ಮರಣೆ ಮಾಡದ ನರಗೆ
ಪರಿ ಪರಿಯ ನರಕಾದಿ ಬಂಧಕವು ಬಿಡದು ೧

ಆ ರಾಮನಂಘ್ರಿಗಳ ಅರ್ತಿಯಲಿ ಅರ್ಚಿಸುವರಿ
ಗಾರಾಮವಾದಂಥ ಸುಖಸೌಖ್ಯವು
ಹೇರಾಮ ಎನದವಗೆ ಅತಿ ದು:ಖದಾರಿದ್ರ್ಯ
ತೋರುವುದು ಅನುಗಾಲ ತಗಲಿ ಬಿಡದವೆಯಿನ್ನು ೨

ವಿತರಣಾದಿ ಶ್ರೀ ಹೆನ್ನೆವಿಠ್ಠಲನ ಹೃದಯದಲಿ
ಸತತಧ್ಯಾನವು ಮಾಡುವ ಸಾಧು ಜನರಾ
ಪತಿತ ಪಾವನನಾದ ಪರಮಾತ್ಮ ಪಾಲಿಸೆ
ಗತಿಯು ತೋರುವ ಇನ್ನು ಕರುಣದಲಿ ಹರಿಯು ೩

೧೭೭

ಹರಿಯಂದು ಮನದಲ್ಲಿ ಅರಿತು ಪೂಜಿಸುವರಿಗೆ ಪರಮ
ದಾರಿದ್ರ್ಯ ದು:ಖ ಘೋರ ನಿಹಾರವೂ ಪ

ಶ್ರೀರಾಮ ನಾಮವು ಚಿತ್ತದಲ್ಲಿ ಬಿಡದೆ
ಆರು ವರ್ಣಿಸುವರು
ಅವರಿಗೆಲ್ಲಾ ಆ ರಾಮನನೇ ತೋರಿ ಅಧಿಕ
ಭವದೋಷನಳಿದೂ
ಪಾರಗಾಣಿಸಿ ಮುಕ್ತಿಪದವಿಯ ಕೊಡುವಂಥಾ ೧

ಶ್ರೀ ಕೃಷ್ಣಾಯನುತಾ ನೀ ಶಾಶ್ವತವಾಗೀ------
ಸ್ಮರಿಸುವ ಉಚಿತಜ್ಞರಾ ಆಕಷ್ಟವನೆ ಕಳೆದು
ಅಧಿಕ ಸಾಮ್ರಾಜ್ಯ
ಪದವಿ ಬೇಕಾದಷ್ಟು ಕೊಡುವಂಥ ಭಗವಂತ ಪರಬ್ರಹ್ಮ ೨

ನಾರಾಯಣಾ ಎಂದು ನಾಲಿಗೆಯಲಿನುಡುವಂಥ
ನರಮಾನವರಿಗೆ ಇಲ್ಲಾ ಧೀರ ಹೊನ್ನಯ್ಯ ವಿಠ್ಠಲ
ದನುಜ ಮರ್ದನ
ದೇವ-----------ರೆಂದೆನಿಸಿ ೩

೧೭೮

ಹರಿನಾಮ ಭಜನೆಯೊಳಿರು ಇರೂ
ಶ್ರೀಹರಿ ಮಹಿಮೆಯ ಭುವಿ ತೋರುರೋರು ಪ

ಸಜ್ಜನರ ಸಂಗವ ಮಾಡು ಮಾಡು
ದುರ್ಜನರ ಸಂಗವ ಬಿಡೂ ಬಿಡೂ
ಮೂಜ್ಜಗದೊಡೆಯನ ಪಾಡು ಪಾಡು
ಇನ್ನು ಮುಕುತಿಯ ಬೇಕೆಂದು ಬೇಡು ಬೇಡು ೧

ಗುರುಹಿರಯರ ಪಾದ ಹಿಡಿ ಹಿಡಿ
ಮನದಿರುವ ಕಾಮ ಕ್ರೋಧ ಕಡಿ ಕಡಿ
ಶರಣರ ಕೂಟದೋಳ್ ಕೂಡಿ ಕೂಡಿ
ಬೇಗ ನರಹರಿ ಮೂರ್ತಿಯ ನೋಡಿನೋಡಿ ೨

ರಾಮನಾಮಾಮೃತ ಕುಡಿ ಕುಡಿ
ಅತಿಕಾಮುಕ ದ್ರವ್ಯವ ಬಿಡಿಬಿಡಿ
ಸ್ವಾಮಿ ನಾರಾಯಣನೆಂದು ನುಡಿನುಡಿ
ಬಹು ಪ್ರೇಮದಿ ಹರಿಕರುಣ ಪಡಿಪಡಿ ೩

ಸಕಲಶಾಸ್ತ್ರಗಳ ನೋಡು ನೋಡು
ಅದರ ಸಾರಾಂಶ ತಿಳಿದು ಆಡೂ ಆಡೂ
ಪ್ರಕಟಿತ ಭಕ್ತರಿಗನ್ನ ನೀಡು ನೀಡು
ಇನ್ನು ಪರಮಾತ್ಮನ ಕೊಂಡಾಡು ಆಡು ೪

ಹರಿಯ ಚರಿತವ ಹೇಳು ಹೇಳು
ನರಹರಿಯು ಕಥೆಯ ಕಿವಿಲಿ ಕೇಳುಕೇಳು
ಪರಮ ಭಕ್ತರ ಪಾದಕೆ ಬೀಳು ಬೀಳು
ಶ್ರೀ ಪರಬ್ರಹ್ಮನ ಸೇವೆಗೆ ಏಳು ಏಳು ೫

ಯೋಗ್ಯರ ಕಂಡರೆ ಹಿಗ್ಗೂ ಹಿಗ್ಗೂ
ಅತಿ ಭಾಗ್ಯರ ಕಂಡರೆ ತಗ್ಗೂ ತಗ್ಗೂ
ಸುಜ್ಞಾನಿಗಳಿಗೆ ಡೊಗ್ಗು ಡೊಗ್ಗು
ಇನ್ನು ಶುದ್ಧಾತ್ಮಕರೊಳು ಜಗ್ಗು ಜಗ್ಗು ೬

ಸನ್ಯಾಸಿಗಳನು ಸೇರು ಸೇರು
ದುಷ್ಟದುರ್ಮಾಗರ ಕಂಡು ದೂರು ದೂರು
ಮರ್ಮ ಬಲ್ಲವರಲ್ಲಿ ಜಾರು ಜಾರು
ಶ್ರೀ ಮಹಾ ಹೆನ್ನ ವಿಠ್ಠಲನ ಸಾರೂ ಸಾರೂ ೭

೧೭೯

ಹಲವು ಹಂಬಲಿಸಿದಲ್ಲೇನೂ ಇಲ್ಲ
ಜಲಜನಾಭನ ಕರುಣೋದಯವು
ತಪ್ಪಿದ ವೇಳ್ಯಾ ಪ

ಬರಿಗಂಟು ಅಪೇಕ್ಷೆ ಬಯಸುವುದೆಲ್ಲಾ
ಪೂರ್ವಾಕೃತ ಇದ್ದದ್ದು ಬಿಟ್ಟದ್ದೆ ಇಲ್ಲ
ಬಿರುದು ಬಾವಲಿ ದೇಹಾಭಂಗ ಬಡುವಾದೊಂದೆ
ಪರಿ ಪರಿ ವ್ಯಥೆಯಿಂದ ಫಲವೇನೊ ಇಲ್ಲ ಮುಂದಾ ೧

ಬಿತ್ತಿದ ಬೀಜ ಎಷ್ಟು ಬೆಳೆಯ----ಲಿನೂ
ಸುತ್ತಾ ದೇಶವು ತಿರುಗಿ ಸೂಸಿದರೇನೂ
ಪತ್ರ ಬರೆದ ಬ್ರಹ್ಮ ಫಣಿಯ ಲಿಖಿತವಲ್ಲದೆ
ಪ್ರತ್ಯೇಕ ನಿನಗೊಂದು ಬಾಹೋದು ಇನ್ನುಂಟೆ ೨

ಅನುಭವ ಇದ್ದವಲ್ಲಾ ------ಇಲ್ಲಾ
ಮನದಿ ತಿಳಿದು ಇನ್ನು ಮರಿಯದು ಎಲ್ಲಾ
ಘನ್ನ ಹೊನ್ನೆ ವಿಠ್ಠಲ ನಾ ಕರುಣಾವಿಲ್ಲ -----
ಮನಸಿನೊಳಗೆ ಸ್ಮರಿಸಿ ಮುಕುತನಾಗೋದು ಬಿಟ್ಟು ೩

ತಾತ್ವಿಕ ಪದಗಳು

೧೮೦

ಎಂದೆಂದೂ ಈ ಜೀವಕೆ ಸುಖವೆಂಬೋದು ಎಂದಿಗೂ
ಇಲ್ಲವಲ್ಲಾ ಏ ಹರಿಯೆ ಪ

ಗಂಧಾರದೊಳು ---ಕೊದ ಪಶುವಂತೆ ಹಿಂದೂ
ಮುಂದು ತಿರುಗಿ ತಿರುಗಿ ಬಳಲುವದೊಂದೆ ಅ.ಪ

ಕೆಲವು ದಿನವು ಮೇಘದೊಳು ಕೂಡಿ
ಅಲ್ಲಿ ಜಾರಿಬೀಳುತಾ ಪರಿಪರಿಯಲ್ಲಿ ಇನ್ನೂ
ಚಲನೆಯಿಂದ ಮೇಘ ಜಲದಾರಿಗಳಿಂದ
ನೆಲದೊಳಗೆ ಹೊಕ್ಕು ನರಳಾಡುತಾ
ಒಲಿದು ಔಷಧಿಗಳ ವಶವಾಗಿ ಧಾನ್ಯದೊಳು
ಕಲೆತು ಪಚನೆಯಿಂದ ಬಳಲುತ ನೀ
ಅಲ್ಲಿ ಪಕ್ವಾನ್ನಗಳಿಂದ ಪುರುಷನುದರ ಸೇರಿ
ನಲಿದಾಡುತಲಿ ಹೋಗೆ ಕೆಲವು ಕಾಲಾದಲ್ಲಿ ೧

ಸ್ತ್ರೀ ಪುರುಷ ಸಂಯೋಗದಿಂದ ಸ್ತ್ರೀ ಗರ್ಭದಲಿ
ವ್ಯಾಪಿಸಿ ಕೊಂಡಿಯ ರೂಪತೋರುತ ನೀ
ತಾಪವು ಬಡುತಾಲಿ ತಾಯಿ ಉದರದಲ್ಲಿ
ಈ ಪರಿ ನವಮಾಸ ಪರಿಯಂತರದಲಿ
ತಾ ಪರಿ ಮಾಡಿದ ಹಿಂದಿನ ದೋಷಗಳಿಂದ
ತನ್ನೊಳು ತನು ತಪಿಸುತಲಿ
ದೀಪವಿಲ್ಲದೆ ಗುಡಿಯೊಳಗಿನ ದೇವರಂತೆ
ಕೂಪದೊಳಗೆ ಬಿದ್ದು ಕಷ್ಟವ ಪಡುತಲಿ ೨

ಎಂದೆಂದು ಬಯಲಿಗೆ ಹೊರಡುವೆಯೆನುತಾಲಿ
ಸಂದೇಹ ಪಡುತಾಲಿ ಸರ್ವದಲಿ ಸಂಧಿಸಿಕಾಲದಿ
ತಂದೆ ತಾಯಿಗಳಿಗೆ ತನಯನಾಗಿ ಹುಟ್ಟಿ ತೋರುತಲಿ
ಕಂದನಾಗಿ ಅತಿ ಕಡುಮೋಹ ತೋರುತ
ಸಂದುಹೋಯಿತು ಕಾಲಸ----ದಿನವೂ
ಮುಂದು ಗಾಣದೆ ಬಾಲಪ್ರಾಯದ ಹಮ್ಮಿಲಿ
ಅಂದದಿ ಆಟಪಾಟಗಳಿಂದ --------ದಿನಾ ೩

ವಾರಕಾಂತೇರ ಸಂಗವುದ್ಯೋಗ ವ್ಯವ–
ಹಾರ ದೈನಂದಿನ ಕೆಲವು ಕಾಲಾಯಿತು
ಕ್ರೂರ ಚೋರ ದುಷ್ಟ ವ್ಯಾಪಾರಗಳ ಕೂಡಿ
ಕುಣಿದಾಡುವುದು ಕೆಲವು ದಿನವಾಯಿತು
ಮೀರಿ ಗರ್ವದಲಿನ್ನೂ ಮೈಯ ಸ್ಮರಣೆದಪ್ಪಿ
ಮರೆದು ಮೆರೆವ ಕಾಲ ಕೆಲವಾಯಿತು
ಪಾರಗಾಣದೆ ಪ್ರಪಂಚದೊಳಗೆ ಬಿದ್ದು
ಹೊರಟು ಬಿಡುತಾಲಿ ಹೋಯಿತು ಕೆಲವು ಕಾಲ ೪

ಸತಿಸುತರ ಸಂಪತ್ತು ಅತಿಮೋಹ ವ್ಯಾಸಂಗ
ಸತವಾಗಿ ಕೆಲವು ಕಾಲ ಸಂದು ಹೋಯಿತು
ಮತಿಗೆಟ್ಟ ಮಂದ ಬುದ್ಧಿಲಿ ವಾರ್ಧಿಕದಿ
ಹಿತಗಳು ತಪ್ಪಿ ಮಾನ ಹೀನನಾಗಿ
ಗತಿಯು ಕಾಣದೆ ಘೋರ ಕಷ್ಟಕ್ಕೊಳಗಾಗಿ
ಮತಿಯಲ್ಲಿ ಹರಿನಾಮ ಮರೆದು ಹೋಗಿ
ಪತಿ ಹೆನ್ನೆ ವಿಠ್ಠಲನ ಪ್ರೀತಿಯ ಪಡೆಯದೆ
ಅತಿ ಘೋರತಮಸಿ ಗರ್ಹಾನು ಆಗೊ ಕಾಲಾಯಿತು ೫

೧೮೧

ಜೋಗಿ ಬಂದನು ನೋಡು ಯೋಗಾಧ್ಯಾನದಿ
ಮನೋರೋಗಾವು ಕಳವೂತಾ ಪ

ಗಿಡರಸ ಕ್ರಿಯಗಳು ಘಟದಾ ಒಳಗೆ ತುಂಬಿ
ಸಡಗರಾಸಾರಾರಾದ
ಕುಂಭ ದ್ವಯವು ಬಿಡದೆ ಸುಮಾರ್ಗಕಾವಡಿಯಾ
ಕೈಗಲಾಹಿತ್ತು
ಬಡವಾರ ಕೈನೋಡಿ ಪಾಪ ಖಂಡಿಸುವಂಥ ೧

ಪೂರ್ಣಕಲಶಪೂಜೆ ಪುಣ್ಯೋಗವೆಂಬೂವಾ
ವರ್ಣಾನಾಡಿಗಳಲ್ಲಿ
ವರ್ಣನೆ ತಿಳಿದು ಸ್ವರ್ಣ ಪಾತ್ರೆಗಳಂದಾ ಸಲ್ಲಿಸುವ
ಸ್ಥಾನದೊಳು
ವರ್ಣಿಸಿ ಕೊಡುವಂಥಾ ಕ್ರಿಯೆಗಳ ಬಲ್ಲಂಥಾ ೨

ಅಲ್ಲಿ ಅಮೃತಯೆಂಬ ಔಷಧಗಳ ತಿಳಿದು
ಬಲ್ಲ ಹಿರಿಯರಿಗೆಲ್ಲ
ಬೈಗು ಬೆಳಗಾಗಿ ಪುಲ್ಲನಾಭ 'ಹೊನ್ನವಿಠ್ಠಲನ '
ಮಹಿಮೆಬಲ್ಲ
ಸುಜನರಾದ ಭವರೋಗ ಕಳಿವಂಥ ೩

೧೮೨

---------ದಾನು ಮುಕ್ತಿ ಭಕ್ತಿ --- ಪ

-----------ಭಾರತನವು ಬಿಟ್ಟು ೧

ತಾ---ಪತ್ರ ಕಮಲ ರಥದಲ್ಲಿ ಧರಿಸಿ
ಮೇಲುವಲ್ಲಿ ಹಣೆಯ ಕಟ್ಟಿ ಮೇಲೆ
ಪಟ್ಟಿ ನಾಮಗಳಿಟ್ಟೊ ೨

ನೀ ----------ದೇಹದಿಯಂಥ
ವೇಗದಿಂದ ನಡೆದು ಸಂಸಾರ ಗೃಹಧರ್ಮ
ಹಿಡಿದಾನಂತಕಾಲ----------ನೆಂದು ೩

ಭಾರಮಾರ್ಗ ಹಿಡಿದು ಅತಿಧೀರನಾಗಿ
ಗ್ರಾಮದೊಳಗೆ ಮೂರು ಎರಡು
ಮನಿಗಳ ಬಿಟ್ಟು ಮೂರು ಮೂರು ಮನಿಗಳ್ದಾದಿಲೆ ೪

ಸ್ಥಿರ ಹೊನ್ನ ವಿಠ್ಠಲನ್ನ ದಿವ್ಯ ಚರಣದಲ್ಲಿ ಚಿತ್ತವಿಟ್ಟು
ಪರಮ ಹರುಷದಿಂದ ಪಾಡುತ
ಭಕ್ತಿ ಸಿದ್ಧಿಯಲ್ಲಿ ೫

೧೮೩

ನರರು ಏನು ಬಲ್ಲರಯ್ಯ ನರಹರಿಯ ಚರ್ಯಾ ಪ

ಆರು ಮೂರರ ಹಾದಿ ಅರಿಯದಲೆ ತಾಮಸಾದಿ
ಆರು ಯರಡನು ಸರಿಸಿ ಆರರಿಂದ ಮೀರಿನಡೆವ ೧

ನಾಲ್ಕು ನಾಲ್ಕೆರಡನ್ನು ನಾಲ್ಕೆರಡು ನಡಿಯನ್ನು
ನಾಲ್ಕು ವಂದರಿಯದಲೇ ನಾಲ್ಕೈದೊಂದರನು ಕೂಡಿದ ೨

ಎರಡು ಒಂದು ಯುಕ್ತನ 'ಹೆನ್ನೆಪುರನಿವಾಸನ '
ಎರಡ್ವೊಂದ್ವಿಧಯಂದರಿಯದೇ ಎರಡು ಒಂದೇ
ಯಂಬ ಪಾಮರ ೩

೧೮೪

ನಾರಾಯಣ---------ಜಾಯನಮ: ಪ

ಸರ್ವವಾರಿಜೋದ್ಭವ ಹರಿ ನೀ ಪೊತ್ತ
ಶಿರಲೋಕ ಎರಡೇಳಾರೊಳಾನೇಕ ದ್ವಾದಶಾದಿ--

ಶಾಸನ ಆದಿದಿಕ್ಪಾಲರಾ ಬೇಕಾದ ಹಾಗೆ
ರಾಜನ ಯುಕ್ತ ಮೆರೆವಂಥ ಶ್ರೀಕರ
ವಾಣೀ ಪತಿ ಬ್ರಹ್ಮನೀನೆ ೧

ಜಗದೊಳು ಹುಟ್ಟಿದ ಪ್ರಾಣಿಗಳಿಗೆ ಎಲ್ಲ
ಬಗೆ ಬಗೆ ಸಂಹಾರ ಕರ್ತನಾಗಿ
ಅಗಣಿತ ಮಹಿಮ ತಾಮಸಯುಕ್ತನಾದಂಥ
ಮೃಗ ಚರ್ಮಾಂಬರಧರ ಮಹಾದೇವನೀನೆ ೨

ಸಕಲ ಚರಾಚರ ಸಲಹುತಲಿರುವಂಥ
ನಿಕರಾದಿ ಸಾತ್ವಿಕ ನಿಜಧರ್ಮಾದಿ
ಅಕಲಂಕ ಮಹಿಮ ಶ್ರೀಹರಿ 'ಹೊನ್ನ ವಿಠ್ಠಲ'
ಸಕಲ ಸ್ವತಂತ್ರನಾದ ಸರ್ವೋತ್ತಮ ನೀನೆ ೩

೧೮೫

ಸೆರೆಯೊಳಗೆ ಹರಿಸೆರೆಯೆ ಮುಖ್ಯಾ
ಭಾವದೊಳಗೆ ಗುರುಭಾವನೆಯೆ ಮುಖ್ಯಾ ಪ
----ದೊಳಗೆ ಪ್ರಥಮ -----ರಾರೇ ಮುಖ್ಯಾ
ಸೇವನೆಯೊಳಗೆ ಪುಣ್ಯ ಸೇವನೆ ಮುಖ್ಯಾ
ದೇವರೊಳಗೆ ವಿಷ್ಣು ದೇವಾರೆ ಮುಖ್ಯಾವು
ಯಾವ ಶಾಸ್ತ್ರಗಳಿಗೂ ವೇದವೇ ಮುಖ್ಯಾ ೧

ವನದೊಳು ಫಲವುಳ್ಳಾ -----ಮುಖ್ಯಾ
ದೀನದಾನವರೊಳಗೆ -----ದೀನನೆಂಬುವದೇ ಮುಖ್ಯ
ಜನರೊಳು ಸಾಧು ಸಜ್ಜನರಾದವರೇ ಮುಖ್ಯಾ
ಮನೆಗೆ ಹಿರಿಯನಾದ ಯಜಮಾನನೇ ಮುಖ್ಯಾ ೨

ಮಾಸಗಳೊಳು ಚೈತ್ರಮಾಸವೆ ಮುಖ್ಯವು
ವಾಸನೆಯೊಳು ಲಕ್ಷ್ಮೀವಾಸನೆ ಮುಖ್ಯ

ಭೂಸುರರೊಳಗೆಲ್ಲ ಪೂರ್ಣ ಪಂಡಿತರೆ ಮುಖ್ಯ
ವಾಸು ದೇವರಿಗೆ ----ದಾಸನೆ ಮುಖ್ಯ ೩

ಸ್ಥಾನದೊಳಗೆ ಗಂಗಾಸ್ಥಾನವೇ ಮುಖ್ಯವು
ಧೇನುಗಳೊಳು ಕಾಮಧೇನುವೇ ಮುಖ್ಯ
ಜ್ಞಾನದಲ್ಲಿ ಹರಿಸರ್ವೋತ್ತಮ ಜ್ಞಾನವೆ ಮುಖ್ಯ
ಗಾನದೊಳಗೆ ಸಾಮಗಾನವೇ ಮುಖ್ಯ ೪

ವೃಕ್ಷಗಳೊಳು ತುಲಸೀ ವೃಕ್ಷವೇ ಮುಖ್ಯವು
ಭಿಕ್ಷಗಳೊಳು ಯತಿ ಭಿಕ್ಷವೇ ಮುಖ್ಯವು
ಪಕ್ಷಿಗಳೊಳು ಗರುಡ ಪಕ್ಷಿಯೇ ಮುಖ್ಯ
ಲಕ್ಷಾಧಿಕಾರರಿಗೆ ಲಕ್ಷ್ಮೀಯೆ ಮುಖ್ಯ ೫

ಪರ್ವತಗಳೊಳು ಮೇರು ಪರ್ವತವೆ ಮುಖ್ಯ
ಉರೆಗೆ ಮಳೆ ಬೆಳೆ ಉರುವೆ (ಬರುವೆ?) ಮುಖ್ಯ
ಮರ್ಯಾದೆ ನ್ಯಾಯಗಳಿಗೆ ಹಿರಿಯರಾದವರೇ ಮುಖ್ಯ
ಸರ್ವಾಧಿಕಾರರಿಗೆ ಸರ್ವಸಮತವೆ ಮುಖ್ಯ ೬

ಕ್ಷೇತ್ರಗಳೊಳು ಕುರುಕ್ಷೇತ್ರವೆ ಮುಖ್ಯ
ಯಾತ್ರಿಗಳೊಳು ಗಂಗಾಯಾತ್ರಿಯೆ ಮುಖ್ಯ
ಸೂತ್ರಗಳೊಳು---------ಮುಖ್ಯವು
ಸ್ತೋತ್ರಗಳೊಳು ಹರಿಸ್ತೋತ್ರವೇ ಮುಖ್ಯ ೭

ಗ್ರಾಮಗಳೊಳು ಸಾಲಿಗ್ರಾಮವೇ ಮುಖ್ಯ
ಭೂಮಿಗಳೊಳು ಪುಣ್ಯ ಭೂಮಿಯೇ ಮುಖ್ಯ
ಆರು-------ಳಿಗೆಲ್ಲ ಆರೋಗ್ಯವೆ ಮುಖ್ಯ
ಕಾಮುಕ ಸ್ತ್ರೀಯರಿಗೆಲ್ಲ ಕಾಮಪುರುಷನೇ ಮುಖ್ಯ ೮

ಸನ್ಮಾರ್ಗಗಳೊಳಗೆ ಸನ್ಯಾಸಿ ಮಾರ್ಗವೆ ಮುಖ್ಯ
ಅನಿಮೇಷಾ ಜಾಗರದೊಳಗೆ ಅನಿಮೇಷರೆ ಮುಖ್ಯ

ಧನ್ಯ 'ಹೆನ್ನೆ ವಿಠ್ಠಲನ' ದಯವು ಇದ್ದರೆ ಮುಖ್ಯ ೯

೧೮೬

ಹೋತಾರ ಪರುವಾಸ ಶ್ರೀ ಲಕ್ಷ್ಮೀಶಾ ಪ

ಶ್ರವಣ ಮನನ ನಿದಿಧ್ಯಾಸನಗಳಿಂದ
ಭವ ಪರಿಹಾರ ನಿಮ್ಮ ನಾಮ ಗೋವಿಂದ ೧

ಭಕ್ತ -------------------------
-----------------ಭಜಿಸುವನೇಕ ೨

ಪನ್ನಗಶಯನ ಸುಪನ್ನಗ ವಾಹನ
ಹೆನ್ನೆವಿಠಲರಾಯ ಮೋಹನ ೩

ಸಂಪ್ರದಾಯದ ಹಾಡುಗಳು

೧೮೭

ಏಳೈಯ್ಯ ಬೆಳಗಾಯಿತು
ಏಳು ಹೆನ್ನೆಯರಂಗ ಕೃಪಾಂಗನೆ
ಏಳೈಯ್ಯ ರಾಮಾನಂತ ರಂಗ ನರಸಿಂಗ ಏಳೈಯ್ಯ ಪ

ಅರುಣೋದಯವಾಗುತಲೆ ಸುರಮುನಿ ಭಕುತರು
ಹರಿನೀನೆಗತಿಯೆಂದು ಆನಂದದಿ ನೆರೆದು ನಿಮ್ಮಯ ದಿವ್ಯ
ನಾಮಾಮೃತವ ಸವಿದು ಪರಿಪರಿ ಭಕ್ತಿಯಲಿ
ಪಾಡುತಿರಲಿನ್ನು ೧

ಸಿದ್ಧ ಗಂಧರ್ವ ಕಿನ್ನರ ಕಿಂಪುರುಷರು
ಸಿರಿಭೂದುರ್ಗಾದೇವಿಯರು
ಹರುಷದಲಿ ಅವರವರು ಸೇವೆಗಳನುಸರಿಸಿ
ಚರಣ ಕಮಲ ಬಳಿಯಲ್ಲಿ ಸ್ಥಿರವಾಗಿ ನಿಂತಿರಲು ೨

ಮೂಡಲು ಬೆಳಗಾಗಿ ಮೂಹೂರ್ತ ಒಂದಾಗಿ
ಗೂಡಿನ ಕರುಗಳು
ಗೋಗಳಿಗಾಗಿ ನೋಡುತಿರೆ ಮಾರ್ಗವನು
ಗಾಢನಿದ್ರೆಯೊಳಿರುವ ಕಾರಣವು ಏನೊ ೩

ಅಜಮಿಳ ಅಂಬರೀಷ ಅಕ್ರೂರ ವರದನೆ
ಗಜರಾಜನು ಕಾಯಿದ ಕರುಣಾವಿಲಾಸನೇ
ಭುಜಗೇಂದ್ರ ಶಯನ ಪೂರ್ಣಾನಂದನೇ ಸುಜನರನು
ಪೊರೆವ ಸಂಪನ್ನ
ಮಂದರೋದ್ಧರ ಕೃಷ್ಣ ಮಾಧವ ಗೋವಿಂದ ೪

ಸಿಂಧು ಶಯನನಾದ ಸಿರಿಹೆನ್ನೆವಿಠ್ಠಲ
ಛಂದದಿಂದಲಿ ನಿಮ್ಮ ಶೇವೆಯ ಮಾಳ್ಪರೊಳ್
ಸಂದೇಹಯಾತಕೆ ಶೀಘ್ರದಿಂದಲಿ ಇನ್ನು ೫

೧೮೮

ನಾರಾಯಣಾ ಹರಿನಾರಾಯಣಾ ಕೃಷ್ಣಾ
ನಾರಾಯಣಾ ಸ್ವಾಮಿ ನಾರಾಯಣಾ ೧

ಅಚ್ಯುತಾನಂತ ಗೋವಿಂದ ಪರಬ್ರಹ್ಮ
ಸಚ್ಚಿದಾನಂದ ಶ್ರೀ ನಾರಾಯಣಾ ೨

ಭಕ್ತವತ್ಸಲ ದೇವಾ ಪಂಡವಾಪಕ್ಷಕಾ
ಮುಕ್ತಿ ದಾಯಕ ಶ್ರೀ ನಾರಾಯಣಾ ೩

ನಂದನಂದನ ಆನಂದ ಶಂಕರ ಪ್ರೀಯಾ
ವಂದಿತಾ ಮುನಿಜನರ ನಾರಾಯಣ ೪

ಇಂದಿರಾರಮಣ ಮುಕುಂದ ಮುರಹರಿ
ಮಂದರಧರ ಹರಿನಾರಾಯಣ ೫

ದ್ರೌಪದಿ ರಕ್ಷಕಾ ದಾನವಾ
ಶಿಕ್ಷಕಾ ಕವಿಜನ ಪೋಷಕ ನಾರಾಯಣಾ ೬

ರಾವಣ ಮರ್ದನಾ ಆಜೀವಲೋಚನಾ
ಯದುಕುಲಾಬ್ದಿ ಚಂದ್ರ ನಾರಾಯಣಾ ೭

ಅಕ್ರೂರವರದಾ ನಿಜಾನಂದ ಮೂರುತಿ
ಚಕ್ರಧರ ಹರಿ ನಾರಾಯಣಾ ೮

ಭುಜಗಶಯನ ದಿವ್ಯಾ ಬುಧಜನ ಪೂಜಿತಾ
ಭವ ನಾಯಕ ವಿಷ್ಣು ನಾರಾಯಣಾ ೯

ಗಂಗಜನಕ ದೇವೋತ್ತುಂಗ ಮಹಾನುಭಾವ
ಶೃಂಗಾರ ಮೂರುತಿ ನಾರಾಯಣಾ ೧೦

ಅಂಬುಜಾದಳ ನೇತ್ರಾ ಅಜಮಿಳಾರಕ್ಷಕ
ಶಂಬರಾರಿ ಪತಿ ನಾರಾಯಣ ೧೧

ಪಕ್ಷಿವಾಹನ ಜಗದ್ರಕ್ಷಾ ಸುಲಕ್ಷಣಾ
ಲಕ್ಷ್ಮೀರಮಣ ಶ್ರೀ ನಾರಾಯಣಾ ೧೨

ಕಮಲಸಂಭವಪಿತಾ ಕರುಣಪಯೋನಿಧಿ
ಅಮಿತ ಪರಾಕ್ರಮ ನಾರಾಯಣಾ ೧೩

ಭೂತ ದಯಾ ಮೂರ್ತಿ ಪೂಜಿತ ಸರ್ವತ್ರಾ
ಪೂತನ ಸಂಹಾರ ನಾರಾಯಣಾ ೧೪

ದಿನಕರಾ ಕುಲದೀಪಾ ದೀನ ದಯಾಪರ
ಅನಿಮಿತ್ತ ಬಂಧು ದೇವಾ ನಾರಾಯಣಾ ೧೫

ಕಾಲಿಯಾ ಮರ್ದನಾ ಗಂಗಾಧರಾರ್ಚಿತ
ಕಲ್ಮಷರಹಿತ ಶ್ರೀನಾರಾಯಣಾ ೧೬

ಪಾಲಿತಾ ಸುರಮುನಿ ಪಾಪವಿನಾಶನಾ
ವಾಲಿ ಸಂಹಾರಕಾ ನಾರಾಯಣ ೧೭

ದಶರಥನಂದನ ಧರಣಿರಕ್ಷಕಾ ಲವ
ಕುಶಪಿತಾ ಶ್ರೀಹರಿನಾರಾಯಣಾ ೧೮

ವೇದಗೋಚರ ನಿಗಮಾಗಮ ವೇದ್ಯ ಸು-
ನಾದ ವಿನೋದ ಶ್ರೀನಾರಾಯಣ ೧೯

ಕೋಟಿದರ್ಪಕ ರೂಪಲಾವಣ್ಯ ಭಕ್ತ
ಸಂಕಟ ಪರಿಹಾರ ನಾರಾಯಣಾ ೨೦

ವಾರಿಧಿ ಬಂಧನಾ ವನಚರ ಪಾಲನಾ
ವೈಕುಂಠ ಶ್ರೀನಾರಾಯಣಾ ೨೧

ಗಜರಾಜ ವರದಾ ಕಾಮಿತಫಲದಾಯಕಾ
ಅಜಭವ ಪೂಜಿತಾ ನಾರಾಯಣಾ ೨೨

ಸಾಧುಜನ ಪ್ರಿಯಾ ಸಾಮಗಾನವೇಣು
ನಾದ ಲೋಲ ಕೃಷ್ಣ ನಾರಾಯಣಾ ೨೩

ಯಾದವ ಕುಲದೀಪಾ ಯಶೋದಾನಂದನಾ
ಯಜ್ಞರಕ್ಷಕಾ ಹರಿನಾರಾಯಣಾ ೨೪

ಕೇಶವಾ ಮಾಧವಾ ಕೃಷ್ಣ ದಾಮೋದರಾ
ವಾಸುದೇವ ಹರಿನಾರಾಯಣ ೨೫

ಸುಂದರ ವಿಗ್ರಹಾಸುಗುಣ ವಿಲಾಸ
ಆನಂದ ನಿಲಯಾ ಹರಿನಾರಾಯಣಾ ೨೬

ವ್ಯಾಸಾಂಬರೀಷ ವಾಲ್ಮೀಕ ನಾರದಾ
ಪಾರಾಶರ ವಂದಿತ ನಾರಾಯಣ ೨೭

ದೋಷದೂರಾ ನಿರ್ದೋಷಾ ಪರಮಪುರಷ
ಪೋಷಿತ ಜಗತ್ರಯ ನಾರಾಯಣಾ ೨೮

ಮಕರಕುಂಡಲಧರಾ ಮಹಿಮಾ ಚರಾಚರಾ
ಸಕಲಂತರ್ಯಾಮಿ ನಾರಾಯಣ ೨೯

ಲೋಕನಾಯಕಾ ವಿಲಾಸ ಮೂರುತಿ
ತ್ರೀಲೋಕ ವಂದ್ಯ ಹರಿನಾರಾಯಣಾ ೩೦

ವಿಶ್ವವ್ಯಾಪಕಾ ಘನ ವಿಶ್ವರೂಪಾ ಮಹಾ
ವಿಶ್ವೇಶ್ವರಾ ಹರಿನಾರಾಯಣಾ ೩೧

ಅಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕ ದೇವ
ಸಕಲ ಕರ್ತ ನೀನೆ ನಾರಾಯಣಾ ೩೨

ಪನ್ನಗಶಯನಾ ಆಪನ್ನ ಶರಣ್ಯಾ ಶ್ರೀ
'ಹೆನ್ನೆ ವಿಠ್ಠಲ' ನಾರಾಯಣಾ ೩೩

೧೮೯

ಆಗ ಗೊಲ್ಲರೆಲ್ಲ ತಮ್ಮ ಬಾಗಿಲಲ್ಲಿ ನಿಂತು
ಕೂಗಿದರು ಒಳಗೇ
ಓಯನ್ನ ಪ್ರಾಣಸಖೀ ಬೇಗ ಬಂದು
ಕದವ ತೆಗೆಯಂದು ಪ

ಹೀಗೆ ಕೂಗುವ ಮನಿಯೊಳು ಇರುವ
ಸತಿಯರು ತಾವು ಆಗ ಅನು–
ಮಾನದಿಂದ 'ಓಹೆನ್ನೆ ವಿಠಲ' ಚೋರ
ನಿನ್ನ ನಾವು ಬಲ್ಲೆವು ೧

ನಲ್ಲ ಕೃಷ್ಣನಲ್ಲೆ ನಾನು ಅಲ್ಲೆ ನಿನ್ನ ವಲ್ಲಭನು
ಮೆಲ್ಲನೆ ಬಾರೆ ನೀ
ಇಲ್ಲಿಗೆ ಓಯನ್ನ ಪ್ರಾಣಸಖೀ ಮಾರಿನೋಡಿ
ನಿಜವ ಮಾಡೀಗ ೨

ಮೋರೆ ನೋಡುವದು ಏನು ಮೋಹದೊಡಿಯ
ಮನೆಯೊಳಿರಲು
ಮಾರುವೇಷದಿಂದ ಬಂದ 'ಓ ಹೆನ್ನೆ ವಿಠಲ'
ಮಾರಜನಕನೆಂಬೊದು ಬಲ್ಲೆನೆ ೩

ಮಾರಜನಕನಲ್ಲೆ ನಾನು ಕೇರಿಯವರ
ಇನ್ನು ನೀರೆ ನಿನ್ನ ಗಂಡನೆ ನಾನು
ಓಯನ್ನ ಪ್ರಾಣಸಖಿ ಬೇಗ ಬಂದು ಕದವ ತೆಗೆ ಈಗ ೪

ಗಂಡ ಭವನದಲ್ಲಿ ಇರಲು ಪುಂಡನೀನು
ಎಲ್ಲಿಯವನು ಭಂಡತನ ಬಿಡುಇನ್ನು
'ಓಹೆನ್ನೆ ವಿಠಲ' ಮಾಡುವದು ಇದು ರೀತಿಯಲ್ಲವು ೫

ಗಂಡನೆಂಬುವನು ನಾನು ಗಂಡನಾರಿವುಳ್ಳವಗೆ ಇನ್ನು
ಚಂಡಿನಾಟ ಬಾ ಸಭಯದಿ
ಓಯನ್ನ ಪ್ರಾಣಸಖಿ ಚಲುವೆ ಹೊರಗೆ ಬಾರದಿರುವೇ ೬

ಯಷ್ಟು ಮಾತನಾಡಲು ನೀ ಸೃಷ್ಟಿಗೊಡೆಯನೆಂಬುವದು
ಅಷ್ಟು ಜಗದಲ್ಲಿ ಬಲ್ಲಿ
'ಓಹೆನ್ನೆ ವಿಠಲ' ಚೇಷ್ಟಿಮಾಡದಲೆ ನಡಿಯಯ್ಯಾ ೭

ಅಷ್ಟುವಾದರೆ ಸ್ಪಷ್ಟದಲ್ಲಿ ಇನ್ನು ನೀನು ಅಷ್ಟು
ದೇವರನ್ನು ಕೂಡಿತೆ
ಓಯನ್ನ ಪ್ರಾಣಸಖಿ ಈಗ ಆಣಿ ಮಾಡಿಸಿ ಕೇಳು ೮

ಅತ್ತಿಯನ್ನು ಕೂಡಿದವನೆ ಉತ್ತಮನೆ ನೀನು ಇನ್ನು
ಎತ್ತಲ ಆಣೆಯು ನಿನಗೇ 'ಓ ಹೆನ್ನೆ ವಿಠಲ'
ಸತ್ಯವಂತನಾಗಿ ಹೇಳುವಿ ೯

ಕಣ್ಣಿಲಿ ನೋಡದೆ ಕಾಕು ಮಾಡುವರೆ ಇನ್ನು
ಹೆಣ್ಣು ನಿನಗೆ ಥರವೆ
ಓಯನ್ನ ಪ್ರಾಣಸಖಿ ಕಣ್ಣಿಲೆ ನೋಡದೆ ಕರಿಯೆ ೧೦

ಪರಮ ಪರುಷನುಳ್ಳವರು ಪರಮಪುರುಷನ ಪಡೆವಂಥ
ದುರುಳ ಬುದ್ಧಿ ನಮಗಿಲ್ಲವೆ ' ಓ ಹೆನ್ನೆ ವಿಠಲ'
ದೂರನಡಿಯೆ ಇಲ್ಲಿ ಎನಯ್ಯ ೧೧

ಪುರುಷನೆಂಬುವದು ಪರಪುರಷನೆಂಬುವದು
ಇನ್ನು ಸ್ವಲ್ಪ ನಿನಗೆ ತಿಳಿಯದೆ
ಓಯನ್ನ ಪ್ರಾಣಸಖಿ ಸಾಗಿ ಬಂದು ನೋಡೆ ಬೇಗನೆ ೧೨

ಅನಂತಾವತಾರನು ಅನಂತಗುಣ ಪೂರ್ಣನು
ಏನು ಆಶ್ವರ್ಯವು ನಿನಗೆ
' ಓ ಹೆನ್ನೆ ವಿಠಲ' ಏನು ಸೋಗು ಮಾಡುವಿ
ನಡಿಯಯ್ಯಾ ೧೩

ನನ್ನ ತನುವಿನೊಳಗೆ ಇರುವ ಮುನ್ನಿನಾಪ್ತಾಲೋಚನೆ
ಇನ್ನು ನಿನಗೆ
ಗುರ್ತು ಹೇಳುವೆ ಓಯನ್ನ ಪ್ರಾಣಸಖಿ
ಇನ್ನಾದರೆ ಮನಸಿಗೆ ತಾರ ೧೪

ಹದಿನಾಲ್ಕು ಲೋಕದ ಚರ್ಯಾ ಅಷ್ಟು
ನಿನಗೆ ಅರುವು ಇರಲು
ಇದು ಹೇಳುವದರಿಯದೆ ಓ ಹೆನ್ನೆ ವಿಠಲನೆ ಈ
ಸೋಗು ಮಾಡಿನಡಿಯಯ್ಯಾ ೧೫

ಮನಸಿನೊಳಗೆ ಇರುವಂಥ ಮರ್ಮಗಳ
ತಿಳಿಸುವೆನು ಮನಸು ಇಟ್ಟು
ಮನ್ನಿಸೆನ್ನನು ಓಯನ್ನ ಪ್ರಾಣಸಖಿ ಮಾಡಬೇಡ
ಹೀಗೆಯನ್ನನು ೧೬

ಮನೆಯ ಮನೆಯ ದೈವವೆಂಬೊ ಮಹಿಮೆಯಲ್ಲ
ಬಲ್ಲರು ಮನೆಯ
ಮರ್ಮವು ತಿಳಿಯದೆ 'ಓಹೆನ್ನೆವಿಠಲ' ಮೋಸಮಾಡ
ಬಂದಿ ನಡಿಯಯ್ಯಾ ೧೭

ಅಲ್ಲಿ ಯಶೋದಾ ಬಳಿಗೆ ನಲ್ಲನ ಮೇಲೆ ದೂರು
ಹೇಳಿ ಎಲ್ಲರು ಹಿಗ್ಗುವ ವೇಳ್ಯೆದಿ
'ಓ ಯನ್ನ ಪ್ರಾಣಸಖಿಕೇಳಿದ ಮಾತನು ಹೇಳುವೆ ೧೮

ಯಶೋದೆಗೆ ದೂರು ಹೇಳಿ ಪ್ರಾಣೇಶನ್ನ ಅಗಲಿ
ಬಂದು ವಾಸವಾಗಿ
ಮನೆಯೊಳಗೆ ಹಾನೆ ' ಓ ಹೆನ್ನೆ ವಿಠಲ'
ಹೇಸದೆ ಏನೆಂದು ಬಂದೆ ೧೯

ಏನು ಹೇಳಿದರು ಉದಾಸೀನ ಮಾಡುತಲಿ
ಮಾನ ಪತಿಯೆಂಬ ಮಾರ್ಯದೆ
ಓಯನ್ನ ಪ್ರಾಣಸಖಿ ಮನಸಿನಲ್ಲಿ ಏನು ಇಲ್ಲವು ೨೦

ಮಾನಪತಿ ಮಂಚದ ಮೇಲೆ ಮಲಗಿರಲು
ಮುನಿವಳಗೇ ಮಾನಪತಿ
ಹೇಗಯ್ಯ ನೀನು 'ಓ ಹೆನ್ನೆ ವಿಠಲ' ಮಾಡಿಕೊಂಡ
ಪುರುಷನೇನಯ್ಯಾ ೨೧

ಮಾಡಿಕೊಂಡೆನು ಇದೆ ಮಾತನಾಡುವದು ಇಷ್ಟು
ಮಾಡಿಕೊಳ್ಳದವನಿಗೆ
ಇನ್ನು ಓಯನ್ನ ಪ್ರಾಣಸಖಿ ಮಾತನಾಡುವ
ಧೈರ್ಯ ವಿಲ್ಲವೆ ೨೨

ಚೋರಬುದ್ಧಿಯುಳ್ಳ ಜಾರಪುರಷರಿಗೆ ಇನ್ನು ಯಾರ
ಅಂಜಿಕೆ ಏನಯ್ಯಾ
'ಓಹೆನ್ನೆ ವಿಠಲ' ಧೈರ್ಯವು ಯಾಕೆ ನಿನಗಯ್ಯ ೨೩

ಘಟ್ಟಿಯಾಗಿಯನ್ನನು ಹೆನ್ನೆವಿಠಲನೆ ಆಗಲೆ
ಬಂದು ಇಷ್ಟು ತಡ
ಮಾಡುವರೇನೆ ಓಯನ್ನ ಪ್ರಾಣಸಖಿ ಘಟ್ಟಿಯಾಗಿ
ನಿನ್ನ ಗಂಡನೆನಾನು ೨೪

ಅನುಬಂಧಗಳು

೧. ಕಠಿಣ ಪದಗಳ ಅರ್ಥ
೨. ಪ್ರಾದೇಶಿಕ ಪದಸೂಚಿ
೩. ವಿಶೇಷ ಟಿಪ್ಪಣಿಗಳು
೪. ಕೀರ್ತನೆಗಳ ಅಕಾರಾದಿ

ಅನುಬಂಧ – ೧

ಕಠಿಣಪದಗಳ ಅರ್ಥ

ಅವನೀಶ = ದೊರೆ
ಅವನಿ = ಭೂಮಿ
ಅನಿಶ = ಪ್ರಕಾಶ, ಕತ್ತಲಿಲ್ಲದ
ಅಜ = ಬ್ರಹ್ಮ
ಅನವರತ = ನಿರಂತರ
ಅನುಜ = ತಮ್ಮ
ಅಮರರು = ದೇವತೆಗಳು
ಅನಿಮಿಷಪಜನಸುತಾ = ಇಂದ್ರನ ಮಗ ಅರ್ಜುನನ ಸುತ
ಅನುರಾಗ = ಪ್ರೀತಿ
ಅರಿ = ವೈರಿ
ಅರಿ = ಆಯುಧ
ಅರುಣವಸನ = ಕಾವಿಬಟ್ಟೆ
ಅಕೂಪಾರ = ಆಳವಲ್ಲದ
ಅಘ = ತಪ್ಪು
ಅರ್ತಿ = ದೋಷ
ಅವನಿಧರ = ಕೃಷ್ಣ
ಅರ್ಭಕ = ಬಾಲ
ಅದ್ರಿ = ಪರ್ವತ
ಅಂಬಕ = ಕಣ್ಣು
ಅಂದಣ = ಪಲ್ಲಕ್ಕಿ
ಅಂಬು = ನೀರು
ಅಂಬುಧಿ = ಸಮುದ್ರ
ಅಂಗಾರ = ಇದ್ದಿಲು
ಅಂಬುಜ = ಕಮಲ
ಅಂಬುದ = ಮೋಡ
ಅಂಗನೆ = ಸ್ತ್ರೀ
ಅಂತಕ = ಯಮ
ಅಂಘ್ರಿ = ಪಾದ
ಅಗ್ರಜ = ಅಣ್ಣ
ಅಭ್ರ = ಮೋಡ
ಅಭಯ = ಭಯವಿಲ್ಲದ
ಅವತೀರ್ಣ = ಉದ್ಭವ
ಆರೂಢ = ಏರಿದ, ಹತ್ತಿಕೂತ
ಆಮಯ = ದುಃಖ
ಆನನನಿಗೆ = ಮುಖವುಳ್ಳವನಿಗೆ
ಆಗಾರ = ಮನೆ
ಆಸನ = ಪೀಠ
ಆಲಯ = ಮನೆ
ಆಕರ್ಣಿಸಿ = ಕೇಳಿ
ಆಕ್ರೋಶ = ಸಿಟ್ಟು
ಇಳೆ = ಭೂಮಿ
ಇಂದುಧರಾತ್ಮಜ = ಚಂದ್ರನನ್ನು ಧರಿಸಿದ ಶಿವನ ಮಗ
ಇಂದು ಮೌಲಿ = ಶಿವ
ಇಳಿದೇವ = ವಿಪ್ರ
ಉದಕ = ನೀರು
ಉದಕಜಕಾರ್ಕನು = ಸೂರ್ಯನು
ಉದಧಿ = ಸಮುದ್ರ
ಉಗ್ರಾಸನಾ = ಕಠಿಣವಾದ ಯೋಗಾಸನ
ಎರ್ಡೆ = ಎರಡನೇ

ಎರಡು ಪ್ರತಿಮೆ = ಚಲ ಮತ್ತು ಅಚಲ
ಕದನ = ಯುದ್ಧ
ಕಪಿಪ = ವಾಯುದೇವರು
ಕಬರಿ = ತುರುಬು
ಕಪಿ = ಕೋತಿ
ಕಡಲತನುಜೆ = ಲಕ್ಷ್ಮೀ
ಕಂದರ್ಪ = ಶಿವ
ಕನಕಗರ್ಭತನಯ= ಬ್ರಹ್ಮತನಯ ನಾದನಾರದ
ಕಳವುತಲೆ = ಕಳೆಯುತ
ಕಾಯಜ = ಮನ್ಮಥ
ಕಾಸೋಸಿ = ಕಸಿವಿಸಿ, ಸಂಕಟ
ಕಾದಂಬಿನಿ = ಮೋಡ
ಕೋಕನದ = ಕೆಂಪುಕಮಲ
ಕರಧೃತ = ಕರದಲ್ಲಿ ಧರಿಸಿದ
ಕೇಸರಿ = ಸಿಂಹ
ಕುಜನವನ = ದುಷ್ಟಜನ ಸಮೂಹ
ಕುಠಾರ = ಶಸ್ತ್ರ
ಕೀಲಾಲಜ = ಕಮಲ
ಕುಂದರದನೆ = ಅರಳಿದ ಮಲ್ಲಿಗೆಯಂತೆ ಶುಭ್ರವಾದ ದಂತ ಪಂಕ್ತಿಯುಳ್ಳವಳು
ಕುರುಂಗ ನೇತ್ರೆಯರು =ಹರಿಣದಂತೆ ಕಣ್ಣುಳ್ಳವರು
ಕುಂದಣ = ಚಿನ್ನ
ಕಂತುಜನಕ = ವಿಷ್ಣು
ಕ್ಲೇಷ = ಕಷ್ಟ
ಖಳ = ರಕ್ಕಸ, ಕ್ರೂರ
ಖಗ = ಆಕಾಶದಲ್ಲಿ ಚರಿಸುವ
ಖೇಚರ = ಗಗನದಲ್ಲಿ ಸಂಚರಿಸುವ
ಗಡಣ = ಸಮೂಹ
ಗಂವ್ಹರ = ಗವಿ
ಗೀರ್ವಾಣರು = ದೇವತೆಗಳು
ಗೃಹ = ಮನೆ
ಚಂದ್ರಮೌಳಿ = ಈಶ್ವರ
ಚಂದನ = ಶ್ರೀಗಂಧ
ಚರ್ಯಾ = ವರ್ತನೆ
ಚೋರಹರ = ವರಾಹಾವತಾರ
ಚಾರು = ಸುಂದರ
ಚಾಮೀಕರ = ಚಿನ್ನ
ಚಾಪ = ಧನುಸ್ಸು
ಜಡಜಭವ = ಬ್ರಹ್ಮ
ಜಡಜಾಪ್ತ = ಸೂರ್ಯ
ಜವದಿ = ತೀವದಿ
ಜಡಜನಾಭ = ವಿಷ್ಣು
ಜಿತಮದನ = ಕಾಮನನ್ನು ಗೆಲಿದವ
ಜಿವ್ಹೆ = ನಾಲಿಗೆ
ಜಂತುನಿಂದಿತ = ಬೌದ್ಧಾವತಾರ
ಜರದೂರ = ಮುಪ್ಪಿಲ್ಲದ
ತಾತ = ತಂದೆ
ತೂರ್ಣಾ = ತೀವ್ರವಾದ, ಚಪಲ
ತೋಕ = ಪುತ್ರ
ತೋಷದಿ = ಸಂತೋಷದಿ
ತುರಗ ಗ್ರೀವ = ಕುದುರೆಯಂತೆ ಕುತ್ತಿಗೆಯುಳ್ಳವನು
ತೋಯಜ = ಕಮಲ
ತಾಮರಸ = ಕಮಲ
ತರಂಗ = ಅಲೆಗಳು
ತುರು = ಗೋವು
ತತಿ = ಸಮೂಹ
ತುರುಪಾಲ = ಗೋಪಾಲ

ತುರುಂಗ	= ಕುದುರೆ
ತನಯ	= ಮಗ
ತ್ವರ	= ತೀವ್ರ
ತಾರಿಸಿದಾ	= ರಕ್ಷಿಸಿದಾ
ತ್ರಾಣ	= ಶಕ್ತಿ
ತ್ರಿನೇತ್ರ	= ಮೂರು ಕಣ್ಣುಳ್ಳ ಶಿವ
ತ್ರಿಪಥಗಾಮಿನಿ	= ಗಂಗೆ
ತಿಂಗಳ	= ಚಂದ್ರ
ತರು	= ವೃಕ್ಷ
ತ್ರಿದಶರು	= ದೇವತೆಗಳು
ತಿಮಿರ	= ಕತ್ತಲು
ತೋಷ	= ಆನಂದ
ತ್ರಿದಶ	= ಮೂವತ್ತು
ದಾರ	= ಯಾರ
ಧಟ್ಟಿ	= ಚಿಕ್ಕಸೀರೆ
ಧವ	= ಪತಿ
ದಾನವೇಶ	= ಅಸುರರ ಒಡೆಯ
ಧೇನು	= ಆಕಳು
ಧರಣಿಜಾ	= ಸೀತೆ
ದಶಕಂಧರ	= ಹತ್ತು ತಲೆಯ ರಾವಣ
ದೇವತರು	= ಕಲ್ಪವೃಕ್ಷ
ದಿವಿಜರು	= ದೇವತೆಗಳು
ದಿವಾಕರ	= ಸೂರ್ಯ
ಧಾಮ	= ಮನೆ
ದಂಷ್ಟ್ರ	= ದಾಡೆ (ಕೋರೆಹಲ್ಲು)
ದಿಗ್ವಲಯ	= ದಿಕ್ಕುಗಳು
ದೃಗ್ಬಾಪವ	= ಆನಂದಾಶ್ರು
ದಿತಿಜಾಧಿಪ	= ದಿತಿಯ ಮಕ್ಕಳಾದ ದೈತ್ಯರ ದೊರೆ
ಧುರದೊಳು	= ಯುದ್ಧದೊಳು
ದೋರುಬಂಧನ	= ದಾರ ಭರಿಸುವುದು
ನೀರದವರ್ಣ	= ಮೋಡದ ಬಣ್ಣವುಳ್ಳವ, ವಿಷ್ಣು
ನಾಗಾಭರಣ	= ನಾಗನನ್ನು ಆಭರಣವಾಗುಳ್ಳ ಶಿವ
ನುತ	= ಸ್ತುತಿಸಲ್ಪಡುವ
ನತ್ತು	= ಮೂಗಿನಲ್ಲಿ ಧರಿಸುವ ಆಭರಣ
ನೆಂಬಲು	= ನಂಬಲು
ನವನೀತ	= ಬೆಣ್ಣೆ
ನಖ	= ಉಗುರು
ನರಜಗ ಮಾವಾ	= ಅಭಿಮನ್ಯುವಿನ ಮಾವ, ಕೃಷ್ಣ
ನಭ	= ಆಕಾಶ
ನೃಪ	= ದೊರೆ
ನಾರ	= ಜ್ಞಾನ
ನಾಕ	= ಸ್ವರ್ಗ
ನಾಗಾರಿವಾಹನ	= ಗರುಡ
ನಿಕಟ	= ಸಮೀಪ
ನಿಶಾಪತಿ	= ಚಂದ್ರ
ನಿರ್ಜರರು	= ದೇವತೆಗಳು
ನಿಕಾಯ	= ಸಮೂಹ
ನಿಲಯ	= ಮನೆ
ನೀರಜಾಸನ	= ಬ್ರಹ್ಮ
ನಿಷ್ಕಾಮ	= ಕಾಮನಾರಹಿತ
ನಿಕರ	= ಸಮೂಹ
ನಿಶಿ	= ಕತ್ತಲು
ನಿಕೇತನ	= ಮನೆ
ನಿಚಯ	= ಸಮೂಹ
ನಿನದ	= ಶಬ್ದ
ಪಂಕಜನಾಭ	= ವಿಷ್ಣು
ಪಂಕಜಮುಖಿ	= ಕಮಲಮುಖಿ
ಪರಿವೃಢಾ	= ಆವರಿಸಿದ

ಪರ್ಣ = ಎಲೆ
ಪರಮೇಷ್ಠಿ = ಬ್ರಹ್ಮ
ಪವನಪ = ವಿಷ್ಣು
ಪರಿಣಯ = ವಿವಾಹ
ಪದ್ಮಾನನೆ = ಕಮಲದಂತೆ ಮುಖವುಳ್ಳ
ಪಯೋನಿಧಿ = ಹಾಲಿನ ಸಮುದ್ರ
ಪಂಕಜ = ಕಮಲ
ಪರಿಯಂಕ = ಹಾಸಿಗೆ
ಪನ್ನಗಾರಿಧ್ವಜ = ಗರುಡ
ಪವಿ = ವಜ್ರ
ಪಾರ್ವತೀಶ = ಈಶ್ವರ
ಪ್ರಾಪತ = ಪ್ರಾಪ್ತ
ಪಾತಕ = ಪಾಪ
ಪಾವಮಾನಿ = ವಾಯು
ಪಾಶ = ಹಗ್ಗ
ಪ್ರಾಪ್ತಿ = ಪಡೆದುಕೊಳ್ಳುವುದು
ಪೀಯೂಷ = ಅಮೃತ
ಪಿಪ್ಪಲ = ಅಶ್ವತ್ಥವೃಕ್ಷ
ಪಿನಾಕಿ = ಈಶ್ವರ
ಪುಂಗವ = ಶ್ರೇಷ್ಠ
ಪುರುಹೂತ = ಇಂದ್ರ
ಪುನೀತ = ಪವಿತ್ರ
ಫಣಿ = ಹಾವು
ಫಾಲ = ಹಣೆ
ಬಡಿವಾರ = ವಯ್ಯಾರ
ಬುಧಜನ = ಪಂಡಿತರು
ಬಿಕ್ಕಳುವ = ಬಿಕ್ಕಿ ಬಿಕ್ಕಿ ಅಳುವ
ಬಿಸ = ಕಮಲದದೇಟು
ಬಿಡಾಜ = ಯಮಧರ್ಮ
ಭರ್ತ ಪಾಲಿಕಾ = ಸೇವಕರನ್ನು ರಕ್ಷಿಸುವವ
ಭಲ್ಲೂಕ = ಕರಡಿ

ಭೂವಿಂದಾ = ದೊರೆ
ಭಂಜಿಸು = ಸಂಹರಿಸು
ಭುವನ = ಪ್ರಪಂಚ
ಭೂಧರ = ಅರಸು
ಭಟ = ಸೇವಕ
ಭವಹರ = ಹುಟ್ಟುಸಾವುಗಳ ಜಗತ್ತಿನ ನಿವಾರಕ
ಭಾಸ್ಕರ = ಸೂರ್ಯ
ಭೂಜ = ವೃಕ್ಷ
ಭುವನ = ಜಗತ್ತು
ಭ್ರಾತ್ರರು = ಸೋದರರು
ಭೃತ್ಯ = ಸೇವಕ
ಭೀತ = ಅಂಜಿದ
ಮನಸಿಜ = ಕಾಮ
ಮನಸಿಜಪಿತನು = ವಿಷ್ಣು
ಮಂದರಧರ = ಮಂದರಗಿರಿಯನ್ನು ಎತ್ತಿದ ಕೃಷ್ಣ
ಮಂದಾರ = ಕಮಲ
ಮಹಂತ = ಪೂಜಾರಿ, ಅರ್ಚಕ
ಮಧುಪ = ಜೇನುನೊಣ
ಮರಾಳ(ಅಮರಾಳ)= ಒಂದು ಪಕ್ಷಿಯ ಹೆಸರು
ಮಹಿ = ಭೂಮಿ
ಮತ್ತೇಭ = ಆನೆ
ಮಂದಸ್ಮಿತ = ಮುಗುಳ್ನಗೆ
ಮಾಡುತೀವಾ = ಮಾಡುತಿರುವ
ಮಾಸ = ತಿಂಗಳು
ಮಾರಿ = ಮುಖ
ಮಾತುಲ = ಸೋದರಮಾವ
ಮಾರಾರಿ = ಶಿವ
ಮುದ್ರಿಕೆ = ಉಂಗುರ
ಮೇದಿನಿ = ಭೂಮಿ
ಮೇಘತತಿ =ಮೋಡಗಳ ಸಮೂಹ

ಮೋದ = ಆನಂದ
ಮ್ಯಾಳ = ಮೇಳ, ಗುಂಪು
ಮೃತ್ಯುಂಜಯ = ಶಿವ
ಮೃಡ = ಶಿವ
ಮೃತ್ತಿಕೆ = ಮಣ್ಣು
ಮೃಗಲಾಂಛನಮುಖಿ = ಚಂದ್ರಮುಖಿ
ಯವನಕುಲ = ಮುಸ್ಲಿಂಜನಾಂಗ
ಯುಗಳ = ಜೋಡಿ(ಎರಡು)
ಯೂಪ = ಸ್ತಂಭ
ರೂಢೀಶ = ಜಗದೊಡೆಯ
ರಣ = ಯುದ್ಧ
ರಿಪು = ವೈರಿ
ರುಹ = ವೃಕ್ಷ
ಲಲನೆ = ಸ್ತ್ರೀ
ವದನ = ಮುಖ
ವಲ್ಲಭ = ಪತಿ
ವನ = ನೀರು, ಅಶ್ರು
ವದನೇಂದು = ಚಂದ್ರನಂತೆ ಮುಖವುಳ್ಳವ
ವಸುಧೆ = ಭೂಮಿ
ವತ್ಸ = ಕರು
ಏಣಾಂಕಬಿಂಬವದನೆ= ಚಂದ್ರವದನೆ
ವಟು = ಬಾಲಕ
ವಂಧ್ಯೆ = ಬಂಜೆ
ವಾರಿಚರ = ನೀರಿನಲ್ಲಿ ಚಲಿಸುವ ವಿಷ್ಣುವಿನ ಮಚ್ಛರೂಪ
ವಾರಿಜೋದ್ಭವ = ಬ್ರಹ್ಮ
ವಾರಿಧಿ = ಸಮುದ್ರ
ವಾಸವಾನುಜ = ಇಂದ್ರನ ತಮ್ಮ ಉಪೇಂದ್ರ
ವಾಂಛಿತ = ಬಯಸಿದ,ಇಚ್ಛಿಸಿದ
ವಾಸವ = ಇಂದ್ರ
ವಾರಣ = ಆನೆ
ವಾರಿದ = ಮೋಡ
ವಾರಿ = ನೀರು
ವೃತ್ರಾರಿ = ವೃತ್ರನೆಂಬ ಅಸುರನ ವೈರಿ ಇಂದ್ರ
ವೃಷ್ಟಿ = ಮಳೆ
ವೃಜಿನ ವಾರಿಧಿ = ಪಾಪವೆಂಬ ಸಮುದ್ರ
ವಿಬುಧ = ಜ್ಞಾನಿ
ವಿಧುವದನೆ = ಚಂದ್ರನಂತೆ ಮುಖವುಳ್ಳವಳು
ವಿಭವ = ವೈಭವ
ವಿನತಾತ್ಮಜ = ಗರುಡ
ವಿಹಂಗ = ಪಕ್ಷಿ
ವಿಪ್ರ = ಬ್ರಾಹ್ಮಣ
ವಿಲಸಿತ = ಅರಳಿದ
ವಿರಂಚಿ = ಬ್ರಹ್ಮ
ವೀಶಗಮನ = ಗರುಡಗಮನ
ವ್ಯಾಳ = ಹಾವು
ವ್ಯಾಸಸೂತ್ರಗಳು = ಬ್ರಹ್ಮಸೂತ್ರಗಳು
ವ್ಯೋಮಕೇಶ = ಈಶ್ವರ
ವ್ಯಜನ = ಛತ್ರ, ಚಾಮರ
ವೇಣು = ಕೊಳಲು
ಶರ್ವ = ಈಶ್ವರ
ಶಶಿ = ಚಂದ್ರ
ಶರ್ವರು = ದೇವತೆಗಳು
ಶತ = ನೂರು
ಶೋಕ = ದುಃಖ
ಶೋಣಿತವಸ್ತ್ರನೆ = ನಾರದ
ಶಿಲೆ = ಕಲ್ಲು
ಶೇಷಭೂಷಣ = ಶಿವ
ಶ್ಯಂದನ = ರಥ
ಶೃಣ್ವತಾ = ಕೇಳುವ

ಶೃತಿತತಿ = ವೇದಸಮೂಹ
ಶೈಲಕುಮಾರಿ = ಪಾರ್ವತಿ
ಷಟ್ಪದ = ದುಂಬಿ
ಷಷ್ಟಿ = ಅರವತ್ತು
ಷೋಡಶ = ಹದಿನಾರು
ಸದನ = ಮನೆ
ಸಂದೇಹ = ಸಂಶಯ
ಸಂಹನನ = ದೇಹ
ಸರ್ಪತಲ್ಪನ = ಹಾವನ್ನು ಹಾಸಿಗೆಯಾಗಿವುಳ್ಳವನು, ಶ್ರೀಹರಿ
ಸವಿತ = ಬೆಳಕು
ಸಮೀರ = ವಾಯು
ಸಂಪ್ರಾಪ್ತ = ದೊರೆತ
ಸಂಸ್ಕೃತಿ = ಸಂಸ್ಕಾರ
ಸರ್ಗ = ಸೃಷ್ಟಿನೋಡಬೇಕು
ಸ್ಯಂದನ = ರಥ
ಸುರತರು = ಕಲ್ಪವೃಕ್ಷ
ಸುರವ್ರಾತ = ದೇವತೆಗಳ ಗುಂಪು
ಸುರವಿನುತ = ದೇವತೆಗಳಿಂದ ಸ್ತುತಿಸಿಕೊಳ್ಳುವ
ಸುರನದಿ = ಗಂಗಾನದಿ
ಸುತ್ರಾಮ = (ಇಂದ್ರ ?)
ಸೂರಿಗಳು = ದೇವತೆಗಳು
ಸಿಂಧು = ಸಮುದ್ರ
ಸಿಂಧೂರವದನ = ಆನೆಯ ಮುಖವುಳ್ಳವ
ಸ್ಥಿರಚರ = ಜಡ–ಚೇತನ
ಸೋಮ = ಚಂದ್ರ
ಸೊನ್ನೊಡಲಾಂಡಗ = ಬ್ರಹ್ಮ
ಸ್ತೋಮ = ಸಮೂಹ
ಸಾಯಕ = ಬಾಣ
ಹಯಚರ = ಕಲ್ಕಿ
ಹರಣ = ಪ್ರಾಣ
ಹರಿಮುಖ = ಕುದುರೆಯ ಮುಖವುಳ್ಳವ,ವಿಷ್ಣು
ಹಸ್ತ = ಕೈ
ಹಯ = ಕುದುರೆ
ಹಿಂಡು = ಗುಂಪು
ಹೇಮ = ಬಂಗಾರ
ಕ್ಷೋಣಿ = ಭೂಮಿ
ಕ್ಷಿತಿ = ಭೂಮಿ
ಕ್ಷೀರ = ಹಾಲು
ಕ್ಷಿಪ್ರ = ಬೇಗನೆ

ಅನುಬಂಧ – ೨

ಪ್ರಾದೇಶಿಕ ಪದಸೂಚಿ

ಮ್ಯಾಳ = ಗುಂಪು
ತ್ರಾಣ = ಶಕ್ತಿ
ಹಿಂಡು = ಗುಂಪು, ಹಾಲನ್ನು ಹಿಂಡುವುದು
ಜಂಗುಳಿ = ಸಮೂಹ
ಥಟ್ಟನೆ = ತಕ್ಷಣ
ಛಂದ = ಸುಂದರ
ಪಾರಣಿ = ಪ್ರಾಣಿ
ಮೀಸಲು = ತೆಗೆದಿರಿಸಿದ
ಖರೆ = ಸತ್ಯ
ಯಡರುಗಳು = ತೊಂದರೆಗಳು
ಗಡನೆ = ಬೇಗನೆ
ಹಟ್ಟಿ = ಕುರಿಗಳನ್ನು ಒಂದೆಡೆ ಸೇರಿಸುವ ಸ್ಥಳ
ಖಿನ್ನ = ಖೇದ
ಬಾಗಿಪ = ಕಸಬರಗೆ
ಬ್ಯಾಗೆ = ಬೇಗ
ಬಳಗ = ಬಂಧುಗಳು,ಸಂಬಂಧಿಗಳು
ಮ್ಯಾರೆ = ಮೇರೆ
ಮಲಗ್ಯಾರ = ಮಲಗಿದ್ದಾರೆ
ಬನ್ನ = ಕಷ್ಟ
ಪಡಿ = ಪಡೆದುಕೊ, ಹೊಂದು, ದಾಬೇಳ, ಅಕ್ಕಿ ಬೆಲ್ಲ, ತುಪ್ಪದಕ್ಷಿತಿ ಸಮೇತ ಶ್ರಾದ್ಧ ಆಚರಣೆ
ಅಟ್ಟಲೆ = ತುಂಟಾಟ
ಅಡಕಲು =ಧಾನ್ಯಗಳನ್ನು ತುಂಬಿಇಡುವ ಸಣ್ಣ ಸಣ್ಣ ಮಣ್ಣಿನ ಗಡಿಗೆಗಳು
ನೆಲವು = ಹಾಲು, ಮೊಸರಿನ ಪಾತ್ರೆ ಇಡಲು ಹಗ್ಗದಿಂದ ತಯಾರಿಸಿದ, ತೂಗು ಹಾಕುವ ಸಾಧನ
ಸಾಸಿನಾರತಿ= ಸಾಸೆಹಿಟ್ಟಿನ ಆರತಿ
ಚಬುಕ = ಬಾರುಕೋಲು
ಆಕಳ ಕಣ್ಣೆ = ಆಕಳದ ಬಾಯಿಗೆ ಕಟ್ಟುವ ಸಾಮಗ್ರಿ
ಸಿಂಬಿ = ಬಟ್ಟೆಯನ್ನು ದುಂಡಗೆಸುತ್ತಿ ತಲೆಯ ಮೇಲೆ ಇಡುವುದು
ಹರಿಹಾಯು = ಸಿಡುಕುಗೊಳ್ಳು
ಕಾಸೋಸಿ = ಕಸಿವಿಸಿ
ಚರ್ಯಾ = ವರ್ತನೆ
ದಾರ = ಯಾರ
ದಟ್ಟಿ = ಚಿಕ್ಕಸೀರೆ (ಚಿಕ್ಕ ಹುಡುಗಿಯರಿಗೆ ಉಡಿಸುವುದು)
ನೆಂಬಲು = ನಂಬಲು
ಒಡಿವಾರ = ವಯ್ಯಾರ

ಅನುಬಂಧ – ೩

ವಿಶೇಷ ಟಿಪ್ಪಣಿಗಳು

೧. ಬ್ರಹ್ಮಾಂಡ ಚಿತ್ರಣ : ಮೂಲ ಅವ್ಯಾಕೃತಾಕಾಶದ ನಾಲ್ಕು ಕಡೆ ಮೇಲೆ ಕೆಳಗೆ ಎಲ್ಲ ಕಡೆಗೂ ಬಯಲು ಇದ್ದು ಅಲ್ಲಿ ಪರಮಪುರುಷ ನಾದ ಶ್ರೀಹರಿ ಅಂತರದಲ್ಲಿ (ಆಧಾರವಿಲ್ಲದೆ) ಕುಳಿತಿರುವನು. ಶಕ್ತಿನಾಮ ಕಳೆಯೆನಿಸಿದ ಶ್ರೀ ಲಕ್ಷ್ಮಿಯನ್ನು ಸಿಂಬಿಮಾಡಿ ತಲೆಯ ಮೇಲಿಟ್ಟು ಕೊಂಡು, ಅದರ ಮೇಲೆ ಬ್ರಹ್ಮಾಂಡವನ್ನು ಹೊತ್ತಿರುವ ವಿಷಯದ ವಿವರಣೆ ಇದೆ.

೨. 'ಅದಕೆ ಸಪ್ತದರ್ಶ ಆವರಣ ಕ್ಲಪ್ತವಾಗಿ'...... ಸಪ್ತಾವರಣಗಳ ವಿವರ ಇಂತಿದೆ.

೧. ಪ್ರಥಮ ಆವರಣ – ಶ್ರೀವಾಸುದೇವ
೨. ದ್ವಿತೀಯ ಆವರಣ – ಶ್ರೀ ವಿಷ್ಣು
೩. ತೃತೀಯಾವರಣ – ಸಂಕರ್ಷಣ ದೇವ
೪. ಚತುರ್ಥ ಆವರಣ – ಪ್ರದ್ಯುಮ್ನ ದೇವ
೫. ಪಂಚಮ ಆವರಣ – ಅನಿರುದ್ಧ ದೇವ
೬. ಷಷ್ಟ ಆವರಣ – ವಿರಜಾ ನದಿ
೭. ಸಪ್ತಮ ಆವರಣ – ಶ್ರೀದೇವಿ

೩. ಮೂಲ ಪ್ರಕೃತಿಭಾವದಲಿ ಮೂರು ಆವರಣ

೧. ಮಹತ್ತತ್ತ್ವ
೨. ಅವ್ಯಕ್ತತತ್ತ್ವ
೩. ಅಹಂಕಾರಿಕತತ್ವ (ವೈಕಾರಿಕತತ್ವ)

೪. 'ಒಳಗೈದು ಪಂಚಭೂತಗಳು'

೧. ಗಾಳಿ
೨. ನೀರು
೩. ಭೂಮಿ
೪. ಅಗ್ನಿ
೫. ತೇಜ

೫. ಸಪ್ತವಿಷಯಗಳು

೧. ಸಪ್ತ ಖಂಡಗಳು
೨. ಸಪ್ತ ದ್ವೀಪಗಳು
೩. ಸಪ್ತ ಸಮುದ್ರಗಳು
೪. ಸಪ್ತ ಪರ್ವತಗಳು
೫. ಸಪ್ತ ಲೋಕಗಳು

ಅನುಬಂಧ – ೪

ಕೀರ್ತನೆಗಳ ಅಕಾರಾದಿ ಸೂಚಿ

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ
ಹರಿದಾಸ ಸಾಹಿತ್ಯ ಒಂದು ಪ್ರಮುಖ ಮಜಲು.
ಹರಿದಾಸರು ರಚಿಸಿರುವ ವಿಪುಲ ಕೀರ್ತನೆಗಳು
ಕರ್ನಾಟಕ ಸಾಂಸ್ಕೃತಿಕ ತವನಿಧಿಗಳಾಗಿವೆ.
ದಾಸ ಸಾಹಿತ್ಯದಲ್ಲಿ ಕಂಡುಬರುವ
ಭಾಷಿಕ ಹಾಗೂ ಸಾಹಿತ್ಯಕ ಸೊಬಗು,
ಆಧ್ಯಾತ್ಮಿಕ ಬೆಡಗು, ಸಂಗೀತದ ಮೆರುಗು ಅನನ್ಯ.
ದಾಸ ಸಾಹಿತ್ಯವು ಜ್ಞಾನ, ಮನೋಲ್ಲಾಸ
ಮತ್ತು ಜೀವ ಸಂಸ್ಕಾರಗಳ ತ್ರಿವೇಣಿ ಸಂಗಮ.
ಇಂಥ ದಾಸ ಸಾಹಿತ್ಯವನ್ನು
ಸಮಗ್ರವಾಗಿ ಸಂಗ್ರಹಿಸಿ, ಸಂಪಾದಿಸಿ,
ಬಹುಮಾಧ್ಯಮದಲ್ಲಿ ಹಾಗೂ ಸುಲಭ ಬೆಲೆಯಲ್ಲಿ
ಕನ್ನಡ ಜನತೆಗೆ ನೀಡುವ ಮಹತ್ವದ ಆಶಯವೇ
ಸಮಗ್ರ ದಾಸ ಸಾಹಿತ್ಯ ಯೋಜನೆ

ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು